ಪುಸ್ತಕ ಪ್ರಪಂಚ

ನವೆಂಬರ್–ಡಿಸೆಂಬರ್ ೧೯೮೭



ಜೋಸೆಫ್ ಕಾನ್ರಾಡ್: ವಿಶೇಷ ಸಂಚಿಕೆ

ಪುಸ್ತಕ ಪ್ರಪಂಚ

ಮಾಸಿಕ

ಪ್ರಧಾನ ಸಂಪಾದಕರು
ಪ್ರೊ|| ದೇ. ಜವರೇಗೌಡ
ಗೌರವ ಸಂಪಾದಕ
ಶ್ರೀಕೃಷ್ಣ ಆಲನಹಳ್ಳಿ
ಸಂಪಾದಕ
ಆರ್. ಬೋರಯ್ಯ
ಸದಸ್ಯರು
ದೇವನೂರು ಶಿವಮಲ್ಲು
ಅಧ್ಯಕ್ಷರು
ಸಿ. ಬಿ. ಮುತ್ತಣ್ಣ
ಪ್ರಧಾನ ಕಾರ್ಯದರ್ಶಿ
ಜಿ. ಟಿ. ನಾರಾಯಣರಾವ್
ಡಾ|| ಎಚ್. ಸಂಜೀವಯ್ಯ
ರಾ. ವೆಂ. ಶ್ರೀನಿವಾಸಮೂರ್ತಿ
ಸುಧಾಕರ
ಕ್ಯಾತನಹಳ್ಳಿ ರಾಮಣ್ಣ
ಪರಮಶಿವ ನಡುಬೆಟ್ಟ
ಮಲೆಯೂರು ಗುರುಸ್ವಾಮಿ
ಲಿಂಗದೇವರು ಹಳೇಮನೆ

ಪರಿವಿಡಿ

೧. ಜೋಸೆಫ್ ಕಾನ್ರಾಡ್ : ಒಂದು ಪರಿಚಯ
—ಡಾ|| ಆರ್. ರಾಮಚಂದ್ರ ... ೧
೨. 'ಹಾರ್ಟ್ ಆಫ್ ಡಾರ್ಕ್‌ನೆಸ್': ಕಪ್ಪು ಕಾಣ್ಕೆ
—ಪ್ರೊ|| ಪೋಲಂಕಿ ರಾಮಮೂರ್ತಿ ... ೧೧
೩. ಯೌವನ—ಜೋಸೆಫ್ ಕಾನ್ರಾಡ್
ಅನು : ಸುಧಾಕರ ... ೨೪
೪. ಕಾನ್ರಾಡ್‌ನ 'ಲಾರ್ಡ್ ಜಿಮ್' : ಒಂದು
ವಿಶ್ಲೇಷಣೆ—ಡಾ|| ಕೆ. ಸಿ. ಬೆಳ್ಳಿಯಪ್ಪ... ೬೪
೫. ಕತ್ತಲನ್ನು ಸೀಳುವ ಬೆಳಕು : ದ ನಿಗ್ಗರ್
ಆಫ್ ದ 'ನಾರ್ಸಿಸಸ್'
—ಡಾ|| ಆರ್. ರಾಮಚಂದ್ರ ... ೭೯
೬. ನಿಸರ್ಗದ ಸಮತೋಲ ಎಂದರೇನು ?
—ಜಿ. ಟಿ. ನಾರಾಯಣರಾವ್ ... ೮೬
೭. ಯುದ್ಧ ಮತ್ತು ಶಾಂತಿ
—ಲಿಯೋ ಟಾಲ್‌ಸ್ಟಾಯ್
ಅನು : ಪ್ರೊ|| ದೇಜಗೌ ... ೮೯
೮. ತತ್ತ್ವನಿಷ್ಠ ಪ್ರಾಧ್ಯಾಪಕ ಸ. ಸ. ಮಾಳವಾಡ
—ಡಾ|| ಹೆಚ್. ತಿಪ್ಪೇರುದ್ರಸ್ವಾಮಿ ... ೧೩೩
೯. ಮಹಿಳಾ ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ
ಹಾಜರಾತಿ ಸಮಸ್ಯೆ-ನಿವಾರಣೋಪಾಯಗಳು
—ವೆಂ. ವನಜಾಕ್ಷಮ್ಮ ... ೧೪೦
೧೦. ನಕ್ಷತ್ರ ವೀಕ್ಷಣೆಯ ಹರ್ಷೋಲ್ಲಾಸ
-ಜೆರಿ ಕೇಂಬ್ರಿಡ್ಜ್ ಮತ್ತು ಶಾನೊ ಬಿಜ್‌ಲಾನಿ
ಅನು : ಎಸ್. ಎನ್. ಲಕ್ಷ್ಮೀಪತಿ ... ೧೫೦
೧೧. ಸೇಡು ಕೇವಲ ವಿನಾಶಕಾರಿ ಭಾವನೆಯೆ ?
—ದಯಾನಂದ ವರ್ಮಾ
ಅನು : ಲಕ್ಷ್ಮೀನಾರಾಯಣ ಅರೋರಾ ೧೫೬
೧೨. ಸ್ವರ್ಣ ಸಂಪುಟದಿಂದ ಹೊರಬಂದ ಒಕ್ಕಣ್ಣಿನ
ದೊರೆ—ಮಾರಿಸ್ ಶಡ್ ಬೋಲ್ಸ್
ಅನು : ಡಾ|| ನೀಲಮ್ಮ ಮುತ್ತಣ್ಣ ... ೧೬೯
೧೩. ಆಪತ್ಕಾಲದಲ್ಲಿ ಅಪೂರ್ವ ಸಹಾಯ ಒದಗಿದ
ಒಂದು ಪ್ರಸಂಗ—ಎಸ್. ರಾಮರಾವ್ ೧೭೬
೧೪. ಶ್ರೀಸಾಮಾನ್ಯ ಉವಾಚ-ಸಂಜೆಗಣ್ಣಿನ
ಹಿನ್ನೋಟ
—ಪ್ರೊ|| ಎ. ಎನ್. ಮೂರ್ತಿರಾವ್ ... ೧೮೧

ಸಂಪುಟ : ೪೨ ಸಂಚಿಕೆ ೪-೫

PUSTAKA PRAPANCHA : Monthly

Published and printed by Karnataka State Adult Eductaion Council, Mysore-4 Pages 128. Price : Rupees five

೪. ೧೦. ೮೨

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 004

ಜೋಸೆಫ್ ಕಾನ್ರಾಡ್ : ಒಂದು ಪರಿಚಯ

ಡಾ॥ ಆರ್. ರಾಮಚಂದ್ರ

"ಜಗತ್ತಿನ ಅಷ್ಟೈಶ್ವರ್ಯಕ್ಕಿಂತಲೂ ನನಗೆ ಮಾನವೀಯತೆ ಪ್ರಿಯವಾದದ್ದು"—ಈ ಹೇಳಿಕೆ ಕಾನ್ರಾಡ್‌ನ ಜೀವನ ಮತ್ತು ಅವನ ಕೃತಿ, ಎರಡಕ್ಕೂ ಅನ್ವಯಿಸುತ್ತದೆ. (ಗ್ರಿಮ್ ಸಹೋದರರ ಕತೆಯೊಂದರ ಈ ವಾಕ್ಯವನ್ನು ಕಾನ್ರಾಡ್ ತನ್ನ 'ಯೂತ್' ಎಂಬ ಸಣ್ಣ ಕತೆಗೆ ಪೀಠಿಕೆಯಾಗಿ ಬಳಸುತ್ತಾನೆ.) ಮಹಾನ್ ಕಾದಂಬರಿಕಾರನೊಬ್ಬನ ಪರಿಚಯ ಮಾಡಿಕೊಡುವಲ್ಲಿ ಮೇಲಿನ ಹೇಳಿಕೆ ತುಂಬ ಸಾಧಾರಣವಾಗಿ ತೋರಬಹುದು. ಆದರೆ ಕಾನ್ರಾಡ್ ಬಳಸುವ ಸಂಕೀರ್ಣ ನಿರೂಪಣಾ ಶೈಲಿ, ಪ್ರತೀಕಗಳು, ಕಾಲಗಣನೆಯಲ್ಲಿನ ಏರುಪೇರು—ಒಟ್ಟಿನಲ್ಲಿ ಅವನ ತಂತ್ರಕುಶಲತೆ—ಇವುಗಳಿಗೆ ನಾವು ಅತಿಯಾದ ಗಮನ ಕೊಟ್ಟರೆ ಅವನ 'ದರ್ಶನ'ದ ಮಹತ್ವ ನಮ್ಮಿಂದ ಮರೆಯಾಗಬಹುದಾದ ಅಪಾಯವುಂಟು. ಏಕೆಂದರೆ ಕಾನ್ರಾಡ್‌ನ ಉತ್ತಮ ಕೃತಿಗಳು ಮತ್ತು ಉತ್ತಮವಲ್ಲದವು—ಎರಡರಲ್ಲೂ ಅವನ ತಾಂತ್ರಿಕ ಕೌಶಲ್ಯ ಕಾಣಸಿಗುತ್ತದೆ.

ಕಾನ್ರಾಡ್‌ನ ಕೃತಿಗಳಲ್ಲಿ ಅತ್ಯಂತ ಮಾನವೀಯವಾದ ಕೇಂದ್ರವಿರುವುದರಿಂದಲೇ ಬರ್ಟ್ರೆಂಡ್ ರಸೆಲ್‌ಗೆ ಕಾನ್ರಾಡ್‌ನಲ್ಲಿ ಅಪಾರ ಗೌರವ. ತನ್ನ ಮಗನಿಗೆ ಜಾನ್ ಕಾನ್ರಾಡ್ ಎಂದು ನಾಮಕರಣ ಮಾಡುವಷ್ಟರ ಮಟ್ಟಿಗೆ ಕಾನ್ರಾಡ್‌ಗೆ ಮಾರುಹೋಗಿದ್ದ. ರಸೆಲ್ ಒಂದೆಡೆ ಕಾನ್ರಾಡ್‌ನ ಜೀವನದರ್ಶನವನ್ನು ಸ್ವಾರಸ್ಯಕರವಾದ ಪ್ರತಿಮೆಯೊಂದರಲ್ಲಿ ಸಂಗ್ರಹಿಸುತ್ತಾನೆ: "ಮಾನವೀಯವಾಗಿ ಬದುಕುವುದು ಸಂಪೂರ್ಣವಾಗಿ ತಣ್ಣಗಾಗದ ಲಾವಾ ಕೆನೆಯ ಮೇಲೆ ನಡೆದುಹೋಗುವಷ್ಟು ಅಪಾಯಕಾರಿ. ಕಾನ್ರಾಡ್ ಈ ಪ್ರತಿಮೆಯನ್ನು ಒಪ್ಪುತ್ತಿದ್ದನೊ ಇಲ್ಲವೊ ಗೊತ್ತಿಲ್ಲ" ಈ ಪ್ರತಿಮೆಯ ಸಮರ್ಪಕತೆಯನ್ನು ಕಾನ್ರಾಡ್‌ನ ಒಂದೊಂದು ಕೃತಿಯೂ ಎತ್ತಿ ತೋರಿಸಿಕೊಡುತ್ತದೆ. ಅಲ್ಲದೆ

ಮೇಲೆ ಉದ್ಧರಿಸಿರುವ ಗ್ರಿಮ್ ಕತೆಯಲ್ಲಿನ ವಾಕ್ಯ ಕಾನ್ರಾಡ್‌ನ ಕೃತಿಗಳ ಅನ್ವಯದಲ್ಲಿ ಎಷ್ಟು ಮಹತ್ವ ಉಳ್ಳದ್ದು ಎನ್ನುವುದನ್ನು ರಸೆಲ್‌ನ ಪ್ರತಿಮೆ ತೋರಿಸಿಕೊಡುತ್ತದೆ. ಕಾನ್ರಾಡ್‌ನ ಕಾದಂಬರಿ ಜಗತ್ತಿನಲ್ಲಿ ಕೇವಲ ಮಾನವೀಯವಾಗಿ ಬದುಕುವುದಕ್ಕಿಂತಲೂ ಮಿಗಿಲಾದ ಸಾಧನೆ ಇಲ್ಲ. ಈ ಸತ್ಯವನ್ನು ತಿಳಿಸಲು ಕಾನ್ರಾಡ್ ತನ್ನ ಅನೇಕ ಕಾದಂಬರಿಗಳಲ್ಲಿ ಹಡಗಿನ ಪ್ರತೀಕವನ್ನು ಉಪಯೋಗಿಸುತ್ತಾನೆ.

ಹಡಗು ಅವನ ಕೃತಿಗಳಿಗೆ ಚೌಕಟ್ಟು ಒದಗಿಸುವುದಲ್ಲದೆ, ಕಾದಂಬರಿಯ ಸ್ವರೂಪವನ್ನು ಬಹಳ ಮಟ್ಟಿಗೆ ನಿರ್ಧರಿಸಿ, ಕೇಂದ್ರ ಪ್ರತೀಕವಾಗಿಯೂ ದುಡಿಯುತ್ತದೆ. ಆದರೆ ಮೊದಲೇ ಹೇಳಿರುವಂತೆ ಈ ತಂತ್ರಕುಶಲತೆಯೆಲ್ಲಾ ಒಂದು ಸರಳವಾಗಿ ತೋರುವ ತತ್ತ್ವನಿದರ್ಶನಕ್ಕಾಗಿ: "ಮಾನವೀಯವಾಗಿ ಬದುಕುವುದೇ ನಿಜವಾದ ಸಾಹಸಕಾರ್ಯ." ಉದಾಹರಣೆಗೆ ಅವನ "ನಿಗ್ಗರ್ ಆಫ್ ದ ನಾರ್ಸಿಸಸ್" ಅನ್ನು ತೆಗೆದುಕೊಳ್ಳೋಣ. ಬೊಂಬಾಯಿಯಿಂದ ಬ್ರಿಸ್ಟಲ್‌ಗೆಂದು ಹೊರಟ ಹಡಗೊಂದು ಬಿರುಗಾಳಿಗೆ ಸಿಲುಕಿದೆ. ನಾವಿಕರು ಹಗಲು, ರಾತ್ರಿ ಎನ್ನದೆ ದಿನಗಟ್ಟಲೆ ಬಿರುಗಾಳಿಯೊಂದಿಗೆ ಸೆಣಸುತ್ತಾರೆ. ಬಿರುಗಾಳಿ ನಿಲ್ಲುವ ವೇಳೆಗೆ ಅನೇಕ ಸಾಮಾನುಗಳು ಸಮುದ್ರದ ಪಾಲಾಗಿವೆ; ಹಡಗು ನೆಟ್ಟಗೆ ನಿಲ್ಲದೆ ಒಂದು ಕಡೆಗೆ ನೀರಿನ ಮೇಲೆ ಮಲಗಿದಂತೆ ವಾಲಿಬಿಟ್ಟಿದೆ. ಬಿರುಗಾಳಿಯೊಡನೆ ಕಾದಾಟವನ್ನು ಈಗಷ್ಟೆ ಮುಗಿಸಿರುವ ನಾವಿಕರು ಛಳಿಗೆ ಗಡಗಡ ನಡುಗುತ್ತ ಒತ್ತೊತ್ತಾಗಿ ಕುಳಿತಿದ್ದಾರೆ. ಹಡಗಿನ ಮೇಲೆ ಒದ್ದೆಯಾಗದಿರುವ ಜಾಗವೇ ಇಲ್ಲ; ಹಡಗಿನ ಅಡುಗೆ ಮನೆಯನ್ನಂತೂ ಸಮುದ್ರವು ಚೆನ್ನಾಗಿ ತೊಳೆದು, ಒಂದು ಪಾತ್ರೆಯೂ ಉಳಿಯದಂತೆ ಬರಿದುಮಾಡಿದೆ. ಇಂತಹ ಸಂದರ್ಭದಲ್ಲಿ ಅಡುಗೆಯವನು ಎಲ್ಲರಿಗೂ ಕಾಫಿ ಮಾಡಿಕೊಂಡು ಬಂದಾಗ ಎಲ್ಲರಿಗೂ ಆಶ್ಚರ್ಯ. ಹಡಗು ಬಟ್ಟೆ ಹೀರುವಂತೆ ನೀರನ್ನು ಹೀರಿರುವಾಗ ಇವನು ಕಾಫಿ ಹೇಗೆ ಮಾಡಿದ, ತಿಳಿಯುವ ಕುತೂಹಲ. ಆದರೆ ಅಡುಗೆಯವನು ಅವರ ಪ್ರಶ್ನೆಗಳಿಗೆ ಉತ್ತರವಾಗಿ, "ಹಡಗು ತೇಲುತ್ತಿರುವವರೆಗೂ ನಾನು ಅಡುಗೆ ಮಾಡುತ್ತಿರುತ್ತೇನೆ" ಎಂದಷ್ಟೆ ಹೇಳುತ್ತಾನೆ. ಅಲ್ಲಿಯವರೆಗೂ ತಮಾಷೆಯ ವ್ಯಕ್ತಿಯಾಗಿ ತೋರುತ್ತಿದ್ದ ನೀಗ್ರೊ ಅಡಿಗೆಯವನು ಆ ಕ್ಷಣದಲ್ಲಿ ಎಲ್ಲರಿಗೂ ಅಚ್ಚರಿ ಮೂಡಿಸುವ, ಎಲ್ಲರ ಮೆಚ್ಚುಗೆ ಗಳಿಸುವ ಸಾಹಸಿಯಾಗುತ್ತಾನೆ. ಅವನ ಮಾತು ವೀರಾಧಿವೀರರ ಬಾಯಲ್ಲಿ ಅಥವ ಋಷಿಗಳ ಬಾಯಲ್ಲಿ ಬರುವಂಥಾದ್ದು ಎನ್ನುತ್ತಾರೆ ನಾವಿಕರು. ಅಡುಗೆಯವನ ನುಡಿ ನಾವಿಕ ಸಮುದಾಯದಲ್ಲಿ ಒಂದು ಗಾದೆಯಾಗಿ ಪರಿಣಮಿಸಿಬಿಡುತ್ತದೆ. ಮುಂದೆ ಜೀವನದಲ್ಲಿ ಯಾವುದೇ ನಾವಿಕನು ಯಾವುದೇ ಬಗೆಯ ಸವಾಲನ್ನು ಎದುರಿಸಿದಾಗ ಅವನು ಹೇಳುವುದು: "ಹಡಗು ತೇಲುತ್ತಿರುವವರೆಗೂ ನಾನು ಅಡುಗೆ ಮಾಡುತ್ತಿರುತ್ತೇನೆ." ನಾವು ಗಮನಿಸಬೇಕಾದದ್ದು ಇಷ್ಟು: ಈ ಕಾದಂಬರಿಯಲ್ಲಿ ಬದುಕನ್ನು ಅರ್ಥವತ್ತಾಗಿ ಮಾಡುವುದು ಅಡುಗೆ ಮಾಡುವಂಥ ಸಾಮಾನ್ಯ, ದೈನಿಕ ಕೆಲಸ; ಆದರೆ ಅಷ್ಟು ಮಾಡುವುದು ಎಷ್ಟು ದೊಡ್ಡ ಸಾಹಸ!

'ಯೂತ್' ಕತೆಯನ್ನೂ ನಾವು ಈ ಸಂಬಂಧದಲ್ಲಿ ಸಂಕ್ಷಿಪ್ತವಾಗಿ ಪರಿಶೀಲಿಸಬಹುದು. 'ಯೂತ್'ನ ನಿರೂಪಕ ಮಾರ್ಲೋಗೆ ಈಗ ನಲವತ್ತು ವರ್ಷ. ಇಪ್ಪತ್ತು

ವರ್ಷಗಳ ಹಿಂದೆ ತನಗಾದ ಅನುಭವವನ್ನು ಹೇಳುತ್ತಾನೆ. ಇಂಗ್ಲೆಂಡಿನ ಬಂದರೊಂದರಿಂದ ಬ್ಯಾಂಕಾಕಿಗೆ ಇದ್ದಲು ಸಾಗಿಸುವ ಹಡಗಿನಲ್ಲಿ ಯುವಕ ಮಾರ್ಲೊಗೆ ಸೆಕೆಂಡ್ ಮೇಟ್ ಆಗಿ ಸಿಕ್ಕಿದೆ. ಮುರುಕಲಾದ ಆ ಹಳೇ ಹಡಗಿನ ಮೇಲೆ "ಮಾಡು ಇಲ್ಲವೆ ಮಡಿ" ಎಂಬ ಅಕ್ಷರಗಳಿವೆ. ಯುವಕ ಮಾರ್ಲೊನ ಸಾಹಸಪ್ರವೃತ್ತಿ ಕೆರಳುತ್ತದೆ. ಆದರೆ ಕತೆಯುದ್ದಕ್ಕೂ ಕಾನ್ರಾಡ್ ಹುಡುಗತನದ ಉತ್ಸಾಹ, ಜೀವಕಳೆಯನ್ನು ಮೆಚ್ಚುಗೆಯಿಂದ ನೋಡುವಂತೆಯೇ ಯೌವನದ ಬೇಜವಾಬ್ದಾರಿತನ, ಅಹಂಕಾರ ಇವುಗಳ ಗೇಲಿಯನ್ನೂ ಮಾಡುತ್ತಾನೆ. ಒಂದು ಘಟ್ಟದಲ್ಲಿ ಇದ್ದಲಿಗೆ ಬೆಂಕಿ ಹೊತ್ತಿಕೊಂಡು ಹಡಗೆಲ್ಲ ಕಗ್ಗಿನ ಹೊಗೆ ಕಾರತೊಡಗುತ್ತದೆ. ದಿನಗಟ್ಟಲೆ ನಾವಿಕರು ಆ ಬೆಂಕಿಯನ್ನು ಆರಿಸಲು ಸಾಗರದಿಂದ ನೀರನ್ನು ಹಡಗಿನೊಳಗೆ ಹುಯ್ಯುತ್ತಾರೆ; ಆ ಮುರುಕಲು ಹಡಗು ಮುಳುಗುವ ಅಪಾಯವಿದ್ದೇ ಇರುವುದರಿಂದ ಮತ್ತೆ ಹಡಗಿನಿಂದ ನೀರನ್ನು ಖಾಲಿ ಮಾಡುತ್ತಾರೆ. ಹೀಗೆ ಹಡಗಿನೊಳಗೆ ನೀರು ಸುರಿಯುವುದು ; ಹಡಗಿನಿಂದಾಚೆಗೆ ನೀರು ಸುರಿಯುವುದು—ಸಾವು ತುಂಬ ಆರಾಮು ಎನ್ನಿಸುವಂಥ ದುಡಿತದ ಜೀವನ ಅವರದು. ಕಡೆಗೊಮ್ಮೆ ಹೊಗೆ ಹೊಮ್ಮುವುದು ನಿಂತಾಗ ಯುವ ನಾವಿಕರೆಲ್ಲ ಅಹಂಕಾರದಿಂದ ಬೀಗುತ್ತಾರೆ—ಬೆಂಕಿಯನ್ನು ಆರಿಸಬಲ್ಲವರು ತಾವು ಮಾತ್ರ ಎಂದು. ಆದರೆ ವಾಸ್ತವದಲ್ಲಿ ಇದ್ದಿಲು ಪೂರ್ತಿ ಹೊತ್ತಿಕೊಂಡಿರುವುದು ಅವರಿಗೆ ತಿಳಿಯದು. ಬಾಂಬಿನಂತೆ ಅದು ಒಳಗಿನಿಂದ ಸಿಡಿದಾಗ ಮಾರ್ಲೊ ಆಕಾಶಕ್ಕೆ ಎಗರಿ ಬೀಳುತ್ತಾನೆ. ತನ್ನನ್ನು ಬಿಟ್ಟು ಯಾರೂ ಉಳಿದಿಲ್ಲವೆಂದು ಅವನ ಭಾವನೆ. ಆದರೆ ಕ್ಷಣಗಳಲ್ಲಿ ೬೦ ವಯಸ್ಸಿನ ಕ್ಯಾಪ್ಟನ್ ಅವನ ಮುಂದೆ ಪ್ರತ್ಯಕ್ಷನಾಗಿ ಏನೂ ಆಗಲಿಲ್ಲವೆಂಬಂತೆ ಹಡಗಿನ ಮುಂಭಾಗವನ್ನು ಸ್ವಚ್ಛಗೊಳಿಸಬೇಕೆಂದು ಅಪ್ಪಣೆ ನೀಡಿದಾಗ ಮತ್ತೂ ದೊಡ್ಡ ಆಘಾತ ಅವನಿಗಾಗುತ್ತದೆ. ಹಡಗಿನ ಒಂದು ಭಾಗ ಕಳಚಿಕೊಂಡು ಹೋಗಿದೆ; ಯಾರಾದರೂ ನಾವಿಕರು ಬದುಕಿದ್ದಾರೊ ಇಲ್ಲವೊ ತಿಳಿಯದು ; ಅಂಥಾದ್ದರಲ್ಲಿ ಈ ಮುದಿ ಮಯ್ಯ ಕಸ ಗುಡಿಸಿಸಲು ಹೇಳುತ್ತಾನೆ. ಮಾರ್ಲೊ ತನ್ನ ವೈಯಕ್ತಿಕ ಸಾಧನೆಯ ಬಗ್ಗೆ ಯೋಚಿಸಿದರೆ, ಇಡೀ ಹಡಗಿನ ಕ್ಷೇಮದ ಬಗ್ಗೆ ಕಾಳಜಿ ಇರುತ್ತದೆ ಕ್ಯಾಪ್ಟನ್‌ಗೆ. ಆದ್ದರಿಂದ ವಿಷಮ ಪರಿಸ್ಥಿತಿಯಲ್ಲೂ ದೈನಂದಿನ ಕೆಲಸ (ಸ್ವಚ್ಛ ಮಾಡುವುದು)ವೇ ಅವನಿಗೆ ಮುಖ್ಯ. ನೀರು ಪಂಪ್ ಮಾಡುವುದು, ನೆಲ ಗುಡಿಸುವುದು—ಇಂತಹ ಸಾಧಾರಣ ಕ್ರಿಯೆಗಳೇ ಮಾನವನ ಸತ್ವವನ್ನು ನಿರ್ಧರಿಸುವುದು, ಮಾನವನನ್ನು ಸತ್ವಶಾಲಿಯನ್ನಾಗಿ ಮಾಡುವುದು 'ಯೂತ್'ನ ಪ್ರಪಂಚದಲ್ಲಿ. ಹೀಗಾಗಿ ಹುಡುಗರ 'ಸಾಹಸ ಪ್ರವೃತ್ತಿ'ಯನ್ನು ಕೆರಳಿಸಬಹುದಾದ "ಮಾಡು ಇಲ್ಲವೆ ಮಡಿ" ಎನ್ನುವ ಕೂಗು "ಕಾಯಕ ಮಾಡು ಇಲ್ಲವೆ ಮಡಿ" ಎಂಬ ಮಂತ್ರವಾಗಿ ಪರಿವರ್ತನೆಗೊಳ್ಳುತ್ತದೆ. ಸಮುದ್ರಯಾನ ಮಾನವನ ಜೀವನಯಾತ್ರೆಯ ಪ್ರತೀಕವಾಗುತ್ತದೆ.

ಕಾಯಕ ಮನುಷ್ಯಪ್ರಾಣಿಯನ್ನು ಮಾನವೀಯತೆಯಲ್ಲಿ ಸ್ಥಿರಗೊಳಿಸುವಂತಹ ಲಂಗರು. ಆದ್ದರಿಂದಲೇ ಕಾಯಕವನ್ನು ಬಹಳ ಮುಖ್ಯವಾದ ಮೌಲ್ಯವಾಗಿ ಕಂಡ ಕಾನ್ರಾಡ್. ಆದರೆ ಸಮುದಾಯಪ್ರಜ್ಞೆ ಇಲ್ಲದೆ ಹೋದರೆ ಕಾಯಕ ಅರ್ಥಹೀನವಾಗು

ತ್ತದೆ ಎಂದು ಅವನಿಗೆ ಮನದಟ್ಟಾಗಿತ್ತು. ಕಾನ್ರಾಡ್ ಪ್ರಕಾರ ಸಮುದಾಯಪ್ರಜ್ಞೆ ಎನ್ನುವುದು ಮಾನವ ಭ್ರಾತೃತ್ವದ ಪ್ರಜ್ಞೆ. ಭ್ರಾತೃತ್ವದಲ್ಲಿ ನಿಷ್ಠೆ (fidelity) ಮತ್ತು ಐಕ್ಯಭಾವನೆ (solidarity) ಇವೆರಡರಲ್ಲಿ ಮಾನವನಾದವನು ನಂಬಿಕೆ ಇಡಲೇ ಬೇಕು ಕಾನ್ರಾಡ್‌ನ ಪ್ರಕಾರ. ಈ ನಶ್ವರ ಜಗತ್ತು ನಿಂತಿರುವುದು ಕೆಲವೇ ಕೆಲವು ಸರಳವಾದ, ಬೆಟ್ಟಗಳಷ್ಟು ಪುರಾತನವಾದ ವಿಚಾರಗಳ ಮೇಲೆ; ಮತ್ತು ಅವುಗಳಲ್ಲಿ ಮುಖ್ಯವಾದದ್ದು ನಿಷ್ಠೆ ಎನ್ನುವ ತನ್ನ ದೃಢನಂಬಿಕೆಯನ್ನು ತನ್ನ ಓದುಗರು ಅರ್ಥ ಮಾಡಿಕೊಳ್ಳುವರು ಎಂದು ಕಾನ್ರಾಡ್ ಒಂದೆಡೆ ನುಡಿಯುತ್ತಾನೆ. ಕಾನ್ರಾಡ್‌ನ ಹುಟ್ಟುನಾಡು ಪೋಲೆಂಡ್, ಅವನ ನೆಲೆನಾಡು ಬ್ರಿಟನ್. ಆದರೆ ಸಮುದ್ರದೊಂದಿಗಿದ್ದ ಅವನ ನಂಟು ಅವನನ್ನು ಇಡೀ ವಿಶ್ವದ ಪ್ರಜೆಯನ್ನಾಗಿ ಮಾಡುತ್ತದೆ. ಅವನ ಕಾದಂಬರಿಗಳೊಳಗಿನ ಕ್ಷೇತ್ರ ಯಾವುದೊ ಒಂದೊ, ಎರಡೊ ದೇಶಗಳಲ್ಲ. 'ಲಾರ್ಡ್ ಜಿಮ್' ಕೇಂದ್ರೀಕೃತವಾಗಿರುವುದು ಮಲಾಯಾದಲ್ಲಿ. 'ರೆಸ್ಕ್ಯೂ', 'ಅಲ್ಮೈಯರ್ಸ್ ಫಾಲಿ' ಕಾದಂಬರಿಗಳು ಸಹ ಪೂರ್ವದೇಶಗಳನ್ನು ನೆಲೆಯಾಗಿಟ್ಟುಕೊಂಡಿದ್ದರೆ, ಹಾರ್ಟ್ ಆಫ್ ಡಾರ್ಕ್‌ನೆಸ್' ಕಾದಂಬರಿಯ ರಂಗ ಆಫ್ರಿಕ; 'ಅಂಡರ್ ವೆಸ್ಟರ್ನ್ ಐಸ್'ನ ಕ್ಷೇತ್ರ ರಷ್ಯ; 'ನಾಸ್ಟ್ರೊಮೊ'ದ ಕ್ಷೇತ್ರ ನಿಕಾರಗುವಾ.

ಕಾಯಕ, ನಿಷ್ಠೆ ಅತ್ಯಂತ ಮಾನವೀಯ ಗುಣಗಳಾದಾಗ ಸಹಜವಾಗಿಯೇ 'ನಿರರ್ಥಕ ಕೆಲಸ' ಮತ್ತು 'ದ್ರೋಹ' ಅವಗುಣಗಳಾಗುತ್ತವೆ. ಕಾನ್ರಾಡ್‌ನ ಅನೇಕ ಕೃತಿಗಳಲ್ಲಿನ ತುಮುಲ—ನಿಷ್ಠೆ ಮತ್ತು ದ್ರೋಹ-ಇವುಗಳ ನಡುವಿನದಾಗಿರುತ್ತದೆ. ಕಾನ್ರಾಡ್‌ನ ಕಾದಂಬರಿಗಳಲ್ಲಿ ಸಾಧಾರಣವಾಗಿ ನಾವು ಕಾಣಬಹುದಾದ ವಿಷಯ 'ಅಪರಾಧಭಾವ ಮತ್ತು ಪ್ರಾಯಶ್ಚಿತ್ತ.' ಈ ವಸ್ತುವಿನ ಅತ್ಯಂತ ಸಮರ್ಪಕವಾದ ನಿರ್ವಹಣೆ ಸಿಗುವುದು 'ಲಾರ್ಡ್‌ಜಿಮ್' ಮತ್ತು 'ಅಂಡರ್ ವೆಸ್ಟರ್ನ್ ಐಸ್'ನಲ್ಲಿ. 'ಲಾರ್ಡ್ ಜಿಮ್'ನ ನಾಯಕ ಜಿಮ್ ಆದರ್ಶಗಳನ್ನು, ಕನಸುಗಳನ್ನು ಕಾಣುತ್ತಿರುವ ಯುವಕ. ತಾನು ಸಾಧಿಸಬಹುದಾದ ಸಾಹಸ ವಿಷಯಗಳ ಬಗ್ಗೆ ಕಲ್ಪನೆಯನ್ನು ಸಲೀಸಾಗಿ ಹರಿಯಬಿಡುತ್ತಿರುತ್ತಾನೆ. ಜೀವನದಲ್ಲಿ ತಾನು ಎದುರಿಸಲಾಗದ್ದು ಯಾವುದೂ ಇಲ್ಲ ಎಂದುಕೊಂಡಿರುತ್ತಾನೆ. ಒಂದು ಸರ್ತಿ ಎಂಟುನೂರು ಮೆಕ್ಕಾ ಯಾತ್ರಿಗಳನ್ನು ತುಂಬಿಕೊಂಡು ಹೊರಟ 'ಪಾಟ್ನ' ಎಂಬ ಹಡಗಿನ ಆಫೀಸರನಾಗುತ್ತಾನೆ. ಮಾರ್ಗದಲ್ಲಿ 'ಪಾಟ್ನ'ದಡಿಯಲ್ಲಿ ರಂಧ್ರವುಂಟಾಗುತ್ತದೆ. ಅಷ್ಟು ಜನ ಯಾತ್ರಿಕರನ್ನು ಉಳಿಸಲು ಹಡಗಿನಲ್ಲಿ ಕೋಣೆಗಳಿರುವುದಿಲ್ಲ. ರಾತ್ರಿಯ ಕತ್ತಲಿನಲ್ಲಿ ಜವಾಬ್ದಾರಿ ಹೊತ್ತ ಆಫೀಸರ್‌ಗಳು ಮೆಲ್ಲನೆ ಒಂದು ದೋಣಿಯನ್ನಿಳಿಸಿ ಪರಾರಿಯಾಗುವ ಹಂಚಿಕೆಯಲ್ಲಿರುತ್ತಾರೆ. ಜಿಮ್‌ಗೆ ಇದರಿಂದ ಆಘಾತವಾಗುತ್ತದೆ. ಆದರೆ ಕಡೆ ಘಳಿಗೆಯಲ್ಲಿ ದೋಣಿಯಿಂದ ಆ ಉಳಿದವರು 'ನೆಗಿ' ಎಂದು ಕೂಗಿದಾಗ ಜಿಮ್ ಹಡಗಿನಿಂದ ನೆಗೆದು ಬಿಡುತ್ತಾನೆ. ಮರುಕ್ಷಣವೆ ತನ್ನ ತಪ್ಪನ್ನು ತಿಳಿಯುತ್ತಾನೆ; ಆದರೆ ಹಿಂದಕ್ಕೆ ಮತ್ತೆ ಹೋಗುವಂತಿಲ್ಲ. ಹಡಗಿನ ದೀಪಗಳು ಮರೆಯಾದಂತೆ ಕಲ್ಪಿಸಿಕೊಳ್ಳುತ್ತಾನೆ. ಆದರೆ 'ಪಾಟ್ನ' ಮುಳುಗುವುದಿಲ್ಲ. ಫ್ರೆಂಚ್ ಹಡಗೊಂದು ಅದರ ನೆರವಿಗೆ ಬಂದು ದಡ ಸೇರಿಸುತ್ತದೆ. ಉಳಿದ ಆಫೀಸರುಗಳಲ್ಲಿ ಒಬ್ಬ ಹುಚ್ಚನಾಗುವ ಮೂಲಕ ತನ್ನ ದ್ರೋಹದ

ನೈತಿಕ ಜವಾಬ್ದಾರಿಗಳಿಂದ ಪಾರಾಗುತ್ತಾನೆ; ಮತ್ತೊಬ್ಬ ಯಾರಿಗೂ ಕಾಣದಂತೆ ಓಡಿ ಹೋಗುತ್ತಾನೆ. ಜಿಮ್ ಮಾತ್ರ ವಿಚಾರಣೆಯನ್ನು ಎದುರಿಸುವ ಮೂಲಕ ತನ್ನ ಪ್ರಾಯಶ್ಚಿತ್ತವನ್ನು ಶುರುಮಾಡುತ್ತಾನೆ. "ನಮ್ಮವರಲೊಬ್ಬ" ಎನ್ನಿಸಿಕೊಂಡ ಜಿಮ್ ಕುಲಗೆಡುತ್ತಾನೆ. ತನ್ನ ದ್ರೋಹದ ಜೀವನದಿಂದ ವಿಮೋಚನೆ ಹೊಂದಲು ಪಶ್ಚಿಮದಿಂದ ಪೂರ್ವಕ್ಕೆ ಹೋಗುತ್ತಾನೆ. ಆದರೆ ಅವನು ಹೋದಲೆಲ್ಲಾ ಒಂದಲ್ಲ ಒಂದು ರೀತಿ ಅವನ ಭೂತಜೀವನ ಅವನಿಗೆ ಎದುರಾಗುತ್ತಲೇ ಇರುತ್ತದೆ. ಕಡೆಗೆ ತನ್ನ ಮಾನಗೆಟ್ಟ ಗತಜೀವನ ದಿಂದ ವಿಮೋಚನೆ ಹೊಂದಲು ಜಿಮ್‌ಗೊಂದು ಅವಕಾಶ ಸಿಗುತ್ತದೆ. ಮಲಾಯಾದ ದ್ವೀಪವೊಂದರ ದೊರೆಯಾಗುತ್ತಾನೆ. ಆದರೆ ಅಲ್ಲಿಗೂ ಅವನ ಗತಜೀವನದ ದ್ರೋಹ ಬ್ರೌನ್ ಮತ್ತು ಅವನ ಗುಂಪಿನವರ ರೂಪದಲ್ಲಿ ಬರುತ್ತದೆ. ಜಿಮ್‌ನ ಅಪರಾಧಿ ಭಾವನೆ ಬ್ರೌನ್‌ನ ಅಪರಾಧಭಾವನೆಯೊಂದಿಗೆ ಸಹಭಾಗಿಯಾಗಿ ದ್ವೀಪವು ಅಪಾಯ ದಲ್ಲಿ ನಿಲುಕುತ್ತದೆ. ಕಡೆಗೆ ದ್ವೀಪದ ನಿವಾಸಿಗಳೇ ಜಿಮ್‌ನನ್ನು ಕೊಲ್ಲುತ್ತಾರೆ. ವೈಯಕ್ತಿಕ ವಿಮೋಚನೆಯ ನಿರರ್ಥಕತೆಯನ್ನು ತೋರಿಸುವುದು ಕಾದಂಬರಿಯ ಉದ್ದೇಶ. "ನಾವು ಸೈನ್ಯದ ಸಾಲುಗಳಲ್ಲೇ ಉಳಿದವರೊಂದಿಗೆ ಇದ್ದು ಕಾದಾಡ ಬೇಕು; ಇಲ್ಲದಿದ್ದರೆ ನಮ್ಮ ಜೀವನಕ್ಕೆ ಬೆಲೆಯೇ ಸಿಗದು" ಎನ್ನುತ್ತಾನೆ ಮಾರ್ಲೊ. ಆದರೆ ಜಿಮ್ ಉಳಿದವರಿಗಿಂತ ಉತ್ತಮನಾಗಿ, ಭಿನ್ನನಾಗಿ ಜೀವಿಸಬೇಕೆಂಬ ಆಸೆ ಯುಳ್ಳವನು. "ದಿನದ ಕವಳವನ್ನು ಗಳಿಸಿ ಕೊಡುವ ನಿಷ್ಠುರವಾದ, ನೀರಸವಾದ ಕಾಯಕ"ದಲ್ಲಿ ಜಿಮ್‌ನಿಗೆ ತೃಪ್ತಿಯಿಲ್ಲ. "ಅಂತಹ ಕಾಯಕಕ್ಕೆ ಸಿಗುವ ಬಹುಮಾನ ಕೇವಲ ಕಾಯಕದ ಬಗ್ಗೆ ಪ್ರೀತಿ." ಜಿಮ್‌ನಿಗೆ ಬೇಕಾಗಿರುವುದು 'ಸಾಹಸ' ತನ್ನ ಬಹಳಷ್ಟು ಕಾಲವನ್ನು ಹಡಗಿನ ಎತ್ತರದ ಸ್ಥಾನದಲ್ಲಿ ಕಳೆಯುತ್ತಾ, ಕೆಳಗಿರುವವರನ್ನು ತಿರಸ್ಕಾರದಿಂದ ನೋಡುವ ಯುವಕ ಜಿಮ್ ಕೆಳಗಿಳಿದು ಬಂದಾಗೆಲ್ಲ 'ಲಘು ಸಾಹಿತ್ಯ'ಕ್ಕೆ ಶರಣಾಗಿ 'ಪುಸ್ತಕದಲ್ಲಿನ ಹೀರೋವಿನಂತೆ' ಬದುಕುವ ಕನಸು ಕಾಣುತ್ತಿರುತ್ತಾನೆ. ಜಿಮ್, 'ಹಾರ್ಟ್ ಆಫ್ ಡಾರ್ಕ್‌ನೆಸ್'ನ ಕುರ್ಟ್ಸ್, ಮುಂತಾದವರ ಆದರ್ಶಗಳು ಸಮಯದ ಪರೀಕ್ಷೆಯನ್ನು ಎದುರಿಸಿಲ್ಲ; ಅಂತಹ ಆದರ್ಶಗಳನ್ನು ಕಾನ್ರಾಡ್ ಸಂಶಯ ದಿಂದಲೇ ನೋಡುತ್ತಾನೆ.

ಲಾರ್ಡ್‌ಜಿಮ್ ಕಾದಂಬರಿಯ ಓಟ ನೇರವಾದದ್ದಲ್ಲ. 'ನಾಸ್ಟ್ರೊಮೊ,' 'ಅಂಡರ್ ವೆಸ್ಟರ್ನ್ ಐಸ್', 'ಸೀಕ್ರೆಟ್ ಏಜೆಂಟ್', ಹಾರ್ಟ್ ಆಫ್ ಡಾರ್ಕ್‌ನೆಸ್' ಮುಂತಾದ ಕೃತಿಗಳಲ್ಲಿ ಕಾನ್ರಾಡ್ ಬಳಸುವ ದೃಷ್ಟಿಕೋನಗಳ ವೈವಿಧ್ಯತೆ 'ಲಾರ್ಡ್ ಜಿಮ್'ನಲ್ಲೂ ಕಾಣುತ್ತದೆ. ಇದಲ್ಲದೆ ಕಾನ್ರಾಡ್‌ನ ಕೃತಿಗಳಲ್ಲಿ ಕಾಲಗಣನೆ ಬೇಕೆಂತಲೆ ಏರುಪೇರಾಗಿರುತ್ತದೆ. ಕಾನ್ರಾಡ್‌ನ ಯಾವುದೇ ಪ್ರಾತಿನಿಧಿಕ ಕತೆ 'ಅ' ನಿಂದ ಶುರುವಾಗಿ 'ಅಃ' ವರೆಗೆ ನೇರವಾಗಿ ಕ್ರಮಿಸುವುದಿಲ್ಲ; ಅದು 'ಎ' ನಿಂದ ಶುರುವಾಗಿ, 'ಅ'ಗೆ ಬಂದು, 'ಅಃ'ಗೆ ತಲುಪಬಹುದು. ಅವನ ಕತೆಗಳಲ್ಲಿ ಭೂತ, ವರ್ತಮಾನ ಕಾಲಗಳು ಒಂದರೊಳಗೊಂದು ಹೆಣೆದುಕೊಂಡುಬಿಟ್ಟಿರುತ್ತವೆ. ಇಂತಹ ತಂತ್ರಗಳನ್ನು ಬಳಸುವ ಮೂಲಕ ವ್ಯಂಗ್ಯವನ್ನು ಸಾಧಿಸುವುದು ಕಾನ್ರಾಡ್‌ನ ಉದ್ದೇಶ ಎಂದು ಹಲವರ ಅಭಿಪ್ರಾಯ. ಆದರೆ ಅವನ ಉದ್ದೇಶ ವ್ಯಂಗ್ಯದ ಸಾಧನೆಗಷ್ಟೆ ಸೀಮಿತವಾದಂತೆ

ಕಾಣದು. 'ದ ನಿಗ್ಗರ್ ಆಫ್ ದ ನಾರ್ಸಿಸಸ್' ಕಾದಂಬರಿಯ ಮುನ್ನುಡಿಯಲ್ಲಿ ಕಾನ್ರಾಡ್ ಕಲೆ ಎಂದರೇನು ಎನ್ನುವ ಪ್ರಶ್ನೆಗೆ ಉತ್ತರ ನೀಡುತ್ತಾ, "ಅನೇಕ ಮುಖದ ಹಾಗೂ ಏಕಮೇವವಾದ ಸತ್ಯವನ್ನು ಬೆಳಕಿಗೆ ತರುವುದರ ಮೂಲಕ ನಮಗೆ ಪ್ರತ್ಯಕ್ಷ ಗೋಚರವಾಗಿರುವ ಜಗತ್ತಿಗೆ ಅತ್ಯುಚ್ಚವಾದ ನ್ಯಾಯವನ್ನು ಏಕಾಗ್ರಚಿತ್ತತೆಯಿಂದ ಸಲ್ಲಿಸುವ ಪ್ರಯತ್ನ"ವೇ ಕಲೆ, ಎಂದು ವಿವರಿಸುತ್ತಾನೆ. "ಅನೇಕ ಮುಖದ ಹಾಗೂ ಏಕಮೇವವಾದ ಸತ್ಯ"—ಒಗಟನಂತಿರುವ ಈ ವಿವರ ಕಾನ್ರಾಡ್ ಬಳಸುವ ತಂತ್ರಗಳ ಉದ್ದೇಶವನ್ನು ಸ್ಪಷ್ಟಗೊಳಿಸಬಹುದು. "ಸತ್ಯ ಏನು?" ಎನ್ನುವ ಪ್ರಶ್ನೆ "ಇದು ಸತ್ಯ" ಎನ್ನುವ ಯಾವುದೇ ಉತ್ತರವನ್ನು ಸಲೀಸಾಗಿ ನುಂಗುವುದೆಂದು ಕಾನ್ರಾಡ್ ಅರಿತದ್ದು. ತನ್ನ ಕೃತಿಯ ಯಾವುದೇ ಘಟ್ಟದಲ್ಲಿ ತಾನು ಹೇಳುತ್ತಿರುವುದು ಸತ್ಯದ ಅಣ್ವಾಂಶ ಮಾತ್ರ ಎನ್ನುವ ವಿನಯವಿದ್ದುದ್ದರಿಂದಲೇ ದೃಷ್ಟಿಕೋನದ ವೈವಿಧ್ಯವನ್ನು ಮತ್ತು ಸಮಯ ಪಲ್ಲಟನ ತಂತ್ರವನ್ನು ಅವನು ಬಳಸುತ್ತಾನೆ.

ಇದೇ ಬಗೆಯ ತಂತ್ರಗಳನ್ನೂ, ನಿರೂಪಣಾವಿಧಾನವನ್ನು ಬಳಸಿಕೊಳ್ಳುತ್ತಾ ಕಾನ್ರಾಡ್ ಬರೆದ ಮತ್ತೊಂದು ಮುಖ್ಯ ಕಾದಂಬರಿ 'ಅಂಡರ್ ವೆಸ್ಟರ್ನ್ ಐಸ್'. 'ಲಾರ್ಡ್ ಜಿಮ್'ನ ವಸ್ತುವಾದ 'ಅಪರಾಧಭಾವ ಮತ್ತು ಪ್ರಾಯಶ್ಚಿತ್ತ' ಮತ್ತೆ ಈ ಕಾದಂಬರಿಯ ವಸ್ತು. ಈ ಕೃತಿಯ ನಾಯಕ ರಜುಮೊವ್ ಸೇಂಟ್ ಪೀಟರ್ಸ್‌ಬರ್ಗ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ; ರಷ್ಯದ ಅರಸು ಮನೆತನದವನ ಮತ್ತು ಪಾದ್ರಿಯ ಮಗಳೊಬ್ಬಳ ಅಕ್ರಮ ಸಂಬಂಧದಿಂದ ಹುಟ್ಟಿದವನು. ಸಾಮಾನ್ಯವಾಗಿ ಕಾನ್ರಾಡ್‌ನ ನಾಯಕರಿಗೆ ತಂದೆತಾಯಿಗಳು ಇರುವುದಿಲ್ಲ. ರಜುಮೊವ್‌ನ ತಾಯಿ ಸತ್ತಿದ್ದಾಳೆ. ತನ್ನ ತಂದೆಯನ್ನು ಅವನು ನೋಡುವುದು ಒಂದು ಸರ್ತಿ ಮಾತ್ರ. ಮನೆಮಠವೇ ಇಲ್ಲದ ಅವನು ವ್ಯಾಸಂಗದ ಮೂಲಕ ಮಾತ್ರ ತಾನು ಸಮಾಜದಲ್ಲಿ ಗಮನೀಯನಾಗಬಹುದೆಂದು ನಂಬಿರುತ್ತಾನೆ. ವ್ಯಾಸಂಗದಲ್ಲೆ ಮುಳುಗಿಹೋಗುವ ಅವನು ತನ್ನ ಸಹಪಾಠಿಗಳೊಂದಿಗೆ ಬೆರೆಯುವುದಿಲ್ಲ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳ ದೃಷ್ಟಿಯಲ್ಲಿ ರಜುಮೊವ್ ಬಹಳ ಗಂಭೀರನಾದ, ಪ್ರೌಢನಾದ, ಹಾಗೂ ಕಳಂಕ ರಹಿತನಾದ ವ್ಯಕ್ತಿಯಾಗಿ ತೋರುತ್ತಾನೆ. ಅದರಲ್ಲೂ ಅರಸರ ನಿರಂಕುಶಪ್ರಭುತ್ವದ ವಿರುದ್ಧ ಗುಪ್ತ ಚಟುವಟಿಕೆಯಲ್ಲಿ ನಿರತನಾದ ಹಾಲ್ಡಿನ್ ಎಂಬ ವಿದ್ಯಾರ್ಥಿಗೆ ರಜುಮೊವ್ ಬಗ್ಗೆ ವಿಶೇಷ ಗೌರವ. ಹಾಲ್ಡಿನ್ ಒಂದು ದಿನ ಮಂತ್ರಿಯೊಬ್ಬನ ಮೇಲೆ ಬಾಂಬು ಎಸೆದು ರಜುಮೊವ್‌ನ ಕೋಣೆಯಲ್ಲಿ ಆಶ್ರಯ ಪಡೆಯುತ್ತಾನೆ; ತಾನೆಸಗಿದ ಕೃತ್ಯವನ್ನು ರಜುಮೊವ್ ಬಳಿ ಮುಚ್ಚಿಡದೆ, ರಷ್ಯದಿಂದ ತಪ್ಪಿಸಿಕೊಂಡು ಹೋಗುವ ವ್ಯವಸ್ಥೆ ಮಾಡಬೇಕೆಂದು ಬೇಡಿಕೊಳ್ಳುತ್ತಾನೆ. ಅಹಿತಕರವಾದ ಈ ಘಟನೆ ರಜುಮೊವ್‌ನನ್ನು ಗೊಂದಲಕ್ಕೆ ಸಿಕ್ಕಿಸುತ್ತದೆ. ಅವನು ಈವರೆಗೆ ತನ್ನ ಸ್ವಂತ ಭವಿಷ್ಯದ ಬಗ್ಗೆ ಮಾತ್ರ ಚಿಂತಿಸಿದವನು. ಹಾಲ್ಡಿನ್‌ನ ಜೀವನಧೋರಣೆ ತನ್ನೆಲ್ಲ ನಂಬಿಕೆಗಳಿಗೆ ತದ್ವಿರುದ್ಧವಾಗಿ ನಿಲ್ಲುವಂಥದ್ದು. ಒಂದೆಡೆ ರಜುಮೊವ್ ತನ್ನ ತತ್ತ್ವವನ್ನು ಹೀಗೆ ಸಂಗ್ರಹ ಮಾಡುತ್ತಾನೆ;

"ನಮಗೆ ಬೇಕಾಗಿರುವುದು ಇತಿಹಾಸ, ಮೀಮಾಂಸೆ ಅಲ್ಲ.
ರಾಷ್ಟ್ರಪ್ರೇಮ, ಅಂತರ್ರಾಷ್ಟ್ರೀಯತೆ ಅಲ್ಲ
ವಿಕಾಸ, ಕ್ರಾಂತಿ ಅಲ್ಲ.
ಗುರಿ, ವಿನಾಶವಲ್ಲ
ಏಕತೆ ಬೇಕು, ಒಡಕು ಅಲ್ಲ."

ಹಾಲ್ಡಿನ್ ತನ್ನ ಜೀವನವನ್ನೇ ನಿರರ್ಥಕಗೊಳಿಸಿದ ಎಂದುಕೊಳ್ಳುತ್ತಾನೆ ರಜುಮೊವ್. ತನ್ನನ್ನು ನಂಬಿ ಬಂದವನು ಸುರಕ್ಷಿತವಾಗಿ ರಷ್ಯದಿಂದ ಹೊರಗೆ ಹೋಗುವಂತೆ ವ್ಯವಸ್ಥೆ ಮಾಡಲೆಂದೇ ಹೊರಡುತ್ತಾನೆ; ಆದರೆ ಮನಸ್ಸು ಬದಲಾಯಿಸಿ ತನ್ನನ್ನು ಹುಟ್ಟಿಸಿದ ರಾಜಕುಲದವನನ್ನು ಗುಟ್ಟಾಗಿ ಹುಡುಕಿ, ಹಾಲ್ಡಿನ್‌ನ ಕೃತ್ಯವನ್ನು ತಿಳಿಸಿಬಿಡುತ್ತಾನೆ. ಹೀಗೆ ಮಾಡುವಾಗ ತಾನೇನೂ ದ್ರೋಹ ಮಾಡುತ್ತಿಲ್ಲವೆಂದು ತನಗೇ ತಾನು ಹೇಳಿಕೊಳ್ಳುತ್ತಾನೆ: "ದ್ರೋಹ. ಬಹಳ ದೊಡ್ಡ ಪದ. ದ್ರೋಹ ಅಂದರೇನು? ದೇಶಕ್ಕೆ, ಸ್ನೇಹಿತರಿಗೆ, ಪ್ರೀತಿಸುವವಳಿಗೆ ದ್ರೋಹ ಎಸಗುವುದರ ಬಗ್ಗೆ ಜನ ಮಾತಾಡುತ್ತಾರೆ. ಆದರೆ ಅದಕ್ಕೆ ಮೊದಲು ನೈತಿಕ ಬಂಧನವಿರಬೇಕು. ಮನುಷ್ಯ ದ್ರೋಹ ವೆಸಗಬಹುದಾದರೆ ತನ್ನ ಅಂತಃಸ್ಸಾಕ್ಷಿಯ ವಿರುದ್ಧ ಮಾತ್ರ. ಇಲ್ಲಿ ನನ್ನ ಅಂತಃಸ್ಸಾಕ್ಷಿ ಎಷ್ಟರಮಟ್ಟಿಗೆ ತೊಡಗಿರಲು ಸಾಧ್ಯ? ಕ್ರಾಂತಿಯ ಹುಚ್ಚು ಹಿಡಿದಿರುವ ಆ ಮುಠ್ಠಾಳನಿಗೂ ನನಗೂ ಒಂದೇ ಬಗೆಯ ಮೌಲ್ಯಗಳಲ್ಲಿ ಶ್ರದ್ಧೆ ಇರಲು ಸಾಧ್ಯವೆ?"

ತನ್ನ ಜೀವನಕ್ಕೂ, ಅನಿರೀಕ್ಷಿತವಾಗಿ ತನ್ನಲ್ಲಿ ರಕ್ಷಣೆ ಯಾಚಿಸಿ ಬಂದ ಹಾಲ್ಡಿನ್‌ಗೂ ಯಾವ ಸಂಬಂಧವೂ ಇರಲಾರದೆಂದು ತನ್ನೊಳಗೇ ರಜುಮೊವ್ ವಾದಿಸುತ್ತಾನೆ: "ಅವನ ಸಾವಿನಿಂದ ನನಗೇನಾಗಲು ಸಾಧ್ಯ? ಈಗ ಅವನು ನನ್ನ ಮುಂದೆ ನೆಲದ ಮೇಲೆ ಮಲಗಿದ್ದರೆ ಅವನ ಎದೆಯ ಮೇಲೆ ನಾನು ನಡೆದು ಹೋಗುತ್ತೇನೆ, ಬೇಕಾದರೆ....ಅವನೊಬ್ಬ ನೆರಳು, ಅಷ್ಟೆ." ಹೀಗೆ ಹಾಲ್ಡಿನ್‌ನ ಎದೆಯ ಮೇಲೆ ಕಾಲಿಟ್ಟು ದಾಟಬಲ್ಲನೆಂಬ ಜಂಬದ ಮಾತು ಜಿಮ್ ಹಡಗಿನಿಂದ ಜಿಗಿದುಬಿಡುವ ಕೃತ್ಯದಷ್ಟೆ ಅಮಾನುಷವಾದದ್ದು. ಇದು ರಜುಮೊವ್‌ಗೆ ಬಹಳ ಸಮಯದ ನಂತರ ಅರ್ಥವಾಗುವುದು. "ಹಾಲ್ಡಿನ್‌ನನ್ನು (ಅಧಿಕಾರಿಗಳಿಗೆ) ಒಪ್ಪಿಸುವುದರ ಮೂಲಕ ತನಗೆ ತಾನೆ ದ್ರೋಹ ಬಗೆದಂತಾಯಿತು" ಎಂಬ ಅರಿವು ಅವನಿಗೆ ಮೂಡುವುದು. ಆದರೆ ಅವನಿಗೆ ನೈತಿಕ ಸತ್ಯ ಗೋಚರವಾಗಿ ಮತ್ತೆ ಅವನು ಮಾನವೀಯನಾಗುವ ಮುಂಚೆ ಅವನ ಜೀವನ ಸುಳ್ಳಿನ ಕಂತೆಯಾಗಿಬಿಡುತ್ತದೆ. ಹಾಲ್ಡಿನ್‌ನನ್ನು ಹಿಡಿಸಿಕೊಟ್ಟ ರಜುಮೊವ್‌ನನ್ನು ರಷ್ಯದ ಅಧಿಕಾರಿಗಳು ಗೂಢಚಾರಿಯನ್ನಾಗಿ ಬಳಸಿಕೊಂಡು ಜಿನೀವಾಗೆ ಕಳುಹಿಸುತ್ತಾರೆ. ಜಿನೀವಾನಲ್ಲಿರುವ ಕ್ರಾಂತಿಕಾರಿ ರಷ್ಯನರಿಗೆ ರಜುಮೊವ್ ಹಾಲ್ಡಿನ್‌ನ ಪರಮಮಿತ್ರನಾಗಿದ್ದನೆಂಬ ತಪ್ಪು ಕಲ್ಪನೆ ಇರುತ್ತದೆ. ರಜುಮೊವ್ ಅವರ ಚಟುವಟಿಕೆಗಳನ್ನು ಗಮನಿಸಲು ಬಂದ ರಷ್ಯನ್ ಏಜೆಂಟ್. ಆದರೆ ಹಾಲ್ಡಿನ್ ತಾಯಿ ಮತ್ತು ತಂಗಿಯನ್ನು ಭೇಟಿ ಮಾಡಿದ ನಂತರ ಅವರ ಮುಂದೆ, ಹಾಗೂ ಕ್ರಾಂತಿಕಾರರ ಮುಂದೆ ತನ್ನ ದ್ರೋಹದ ಕತೆ ಹೇಳಿಕೊಳ್ಳುವುದರ ಮೂಲಕ ರಜುಮೊವ್ ತಾನು ಕಳೆದುಕೊಂಡ ಮಾನವೀಯತೆಯನ್ನು ಮತ್ತೆ ಪಡೆಯಲು ಪ್ರಯತ್ನಿಸುತ್ತಾನೆ.

'ಅಂಡರ್ ವೆಸ್ಟರ್ನ್ ಐಸ್'ನ ಬರವಣಿಗೆ ಕಾನ್ರಾಡ್‌ಗೆ ಒಂದು ವಿಶಿಷ್ಟವಾದ ಸವಾಲಾಗಿದ್ದಿರಲು ಸಾಧ್ಯ. ಏಕೆಂದರೆ ಕಾನ್ರಾಡ್‌ನ ತಾಯ್ನಾಡಾದ ಪೋಲೆಂಡ್ ಆಗ ರಷ್ಯದ ಅಧೀನದಲ್ಲಿತ್ತು. ಕಾನ್ರಾಡ್‌ನ ತಂದೆ ಅಪೋಲೊ ಕರ್ಜನಿಯೋವ್‌ಸ್ಕಿ ಪೋಲೆಂಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕ್ರಾಂತಿಕಾರಿ. ರಷ್ಯದ ಜಾರ್ ಸರ್ಕಾರ ಅಪೋಲೊನನ್ನು ಪೋಲೆಂಡಿನಿಂದ ಗಡೀಪಾರು ಮಾಡಿ, ಯುಕ್ರೇನಿಯಾದಲ್ಲಿ ಹೆಚ್ಚು ಕಡಿಮೆ ಬಂಧನದಲ್ಲಿ ವಾಸಿಸುವಂತೆ ಮಾಡಿತ್ತು. ಕಾನ್ರಾಡ್‌ನ ಬಾಲ್ಯ ತನ್ನ ತಂದೆ ತಾಯಿಗಳೊಂದಿಗೆ ಯುಕ್ರೇನಿಯಾದಲ್ಲೇ ಕಳೆಯಿತು. ರಷ್ಯದ ಹವೆಗೆ ಹೊಂದಿಕೊಳ್ಳ ಲಾಗದ ಅವನ ತಾಯಿ ೧೮೬೫ರಲ್ಲಿ ಕ್ಷಯರೋಗದಿಂದ ಸತ್ತಾಗ ಕಾನ್ರಾಡ್‌ಗೆ ಕೇವಲ ಏಳು ವರ್ಷ. ಅವನ ತಂದೆಯ ಆರೋಗ್ಯವೂ ಹದಗೆಟ್ಟು ಆತ ಸಾಯುವ ವೇಳೆಗೆ ಕಾನ್ರಾಡ್‌ಗೆ ಹನ್ನೊಂದು ವರ್ಷ ಮಾತ್ರ. (ಹದಿನೇಳು ವರ್ಷದವನಿದ್ದಾಗ ನಾವಿಕ ನಾಗಲು ಓಡಿಹೋದ ಕಾನ್ರಾಡ್ ಫ್ರೆಂಚ್ ನಾವೆಗಳಲ್ಲಿ ಕೆಲಸ ಮಾಡುತ್ತಿದ್ದು, ನಂತರ ಬ್ರಿಟಿಷರ ವಣಿಕ ನೌಕೆಯಲ್ಲಿ ಕೆಲಸ ಮಾಡುತ್ತಾನೆ.) ಕಡೆಯಲ್ಲಿ ಅವನು ಇಂಗ್ಲೆಂಡಿನ ಪ್ರಜೆಯಾಗಲು ಒಂದು ಪ್ರಮುಖ ಕಾರಣ: ರಷ್ಯದ ದೃಷ್ಟಿಯಲ್ಲಿ ಅಪಾಯಕಾರಿ ಕ್ರಾಂತಿಕಾರಿಯೊಬ್ಬನ ಮಗನಾದ ಕಾನ್ರಾಡ್‌ಗೆ ಮತ್ತಾವ ಐರೋಪ್ಯ ದೇಶದಲ್ಲೂ ಸುರಕ್ಷತೆ ಇಲ್ಲದಿದ್ದದ್ದು. ರಷ್ಯದ ಬಗ್ಗೆ ಕಾನ್ರಾಡ್‌ಗಿದ್ದುದ್ದು ಅಹಿತಕರವಾದ ಸ್ಮೃತಿ ಗಳೇ; ಆದರೂ ರಷ್ಯದ ಬಗ್ಗೆ ಕಾನ್ರಾಡ್‌ಗಿದ್ದ ತೀವ್ರ ಭಾವನೆಗಳು ಅವನ ವಸ್ತುನಿಷ್ಠೆಗೆ ಅಡ್ಡ ಬರಲಿಲ್ಲ. ಈ ವಸ್ತುನಿಷ್ಠತೆ ಸಾಧ್ಯವಾಗುವುದು ಕಾದಂಬರಿಯ ಪರೋಕ್ಷ ನಿರೂಪಣಾ ತಂತ್ರದಿಂದ. 'ಅಂಡರ್ ದ ವೆಸ್ಟರ್ನ್ ಐಸ್'ನ ಸಾಧನೆ ದಾಸ್ತೋವಸ್ಕಿಯ 'ಕ್ರೈಮ್ ಅಂಡ್ ಪನಿಶ್ಮೆಂಟ್'ನ ಸಾಧನೆಯನ್ನು ಸಮೀಪಿಸುವಂತಹದು ಎಂದು ಅನೇಕರು ಗುರುತಿಸಿದ್ದಾರೆ.

"ನೈತಿಕ ಸತ್ಯ ಗೋಚರಗೊಳ್ಳುವಂತೆ ಮಾಡುವುದೇ ಪ್ರತಿ ಕತೆಯ ಉದ್ದೇಶ" ಎಂದು ಕಾನ್ರಾಡ್ 'ಅಂಡರ್ ವೆಸ್ಟರ್ನ್ ಐಸ್'ನಲ್ಲಿ ನುಡಿಯುತ್ತಾನೆ. ಮೊದಲೇ ನಿಗದಿ ಯಾಗಿರುವ ನೀತಿಗೆ ಉದಾಹರಣೆ ಒದಗಿಸುವುದು ಕತೆಯ ಉದ್ದೇಶವಾಗಿರಬೇಕೆಂದು ಕಾನ್ರಾಡ್‌ನ ಅರ್ಥವಲ್ಲ. ಕಾದಂಬರಿಯನ್ನು ಸೃಷ್ಟಿ ಮಾಡುವ ಪ್ರಕ್ರಿಯೆ ಮತ್ತು ನೈತಿಕ ಸತ್ಯ ಎರಡೂ ಬೇರೆ ಬೇರೆಯಾಗದಂತಿರಬೇಕು. ಆದರೆ ಕಾನ್ರಾಡ್‌ನ ಕತೆ ಗಳಲ್ಲಿನ ನೈತಿಕ ಸತ್ಯದ ಸ್ವರೂಪವನ್ನು ಸರಳೀಕರಿಸಲಾಗುವುದಿಲ್ಲ. 'ಹಾರ್ಟ್ ಆಫ್ ಡಾರ್ಕ್‌ನೆಸ್', 'ಲಾರ್ಡ್ ಜಿಮ್' 'ಅಂಡರ್ ವೆಸ್ಟರ್ನ್ ಐಸ್' ಮುಂತಾದ ಅನೇಕ ಕೃತಿಗಳಲ್ಲಿ ವ್ಯಕ್ತಿಯ ಶುಷ್ಕ ಆದರ್ಶವಾದದ ವಿಮರ್ಶೆ ಮಾತ್ರವಲ್ಲದೆ ನೈತಿಕತೆಯ ರಾಜಕೀಯ, ಆಧ್ಯಾತ್ಮಿಕ ಸ್ವರೂಪಗಳೂ ಗೋಚರವಾಗುತ್ತವೆ. ಕಾನ್ರಾಡ್ ತನ್ನ ಮೊದಲ ಕೃತಿ 'ಅಲ್ಮೇಯರ್ಸ್ ಫಾಲಿ'ಯನ್ನು ಪ್ರಕಟಿಸಿದ್ದು ೧೮೯೫ರಲ್ಲಿ. ಸಾಮ್ರಾಜ್ಯ ವಿಸ್ತರಣೆ ಇತಿಹಾಸದ ಪ್ರಧಾನ ಲಕ್ಷಣವಾಗಿದ್ದಂಥ ಕಾಲ ಅದು. ಇತಿಹಾಸದ ಈ ಮುಖವನ್ನು ಎದುರುಬದಿರಾಗಿ ನೋಡಿದ ಇಬ್ಬರೇ ಇಂಗ್ಲಿಷ್ ಕಾದಂಬರಿಕಾರರು ರಡ್ಯರ್ಡ್ ಕಿಪ್ಲಿಂಗ್ ಮತ್ತು ಜೋಸೆಫ್ ಕಾನ್ರಾಡ್. ಆದರೆ ಕಾನ್ರಾಡ್‌ನಿಗಿರುವ ದರ್ಶನವ್ಯಾಪ್ತಿ ಕಿಪ್ಲಿಂಗ್‌ಗಿಲ್ಲ. ಆಫ್ರಿಕ, ಮಲಯಾ, ಇಂಡೋನೇಷಿಯಾಗಳ ಸುತ್ತ

ಕಾದಂಬರಿಗಳನ್ನು, ಹೆಣೆದ ಕಾನ್ರಾಡ್ ತನ್ನ ಯಾವ ಕೃತಿಯಲ್ಲೂ 'ಸಾಮ್ರಾಜ್ಯಶಾಹಿತ್ವ' (imperialism) ಎಂಬ ಪದ ಬಳಸಿದಂತೆ ಕಾಣದು. ಆದರೂ ಸಾಮ್ರಾಜ್ಯಶಾಹಿತ್ವದ ಭೀಕರ ಪರಿಣಾಮಗಳ ಅತ್ಯಂತ ಪ್ರಭಾವಯುತ ಚಿತ್ರಣ ನೋಡಬೇಕಾದರೆ ಕಾನ್ರಾಡ್‌ನ 'ಹಾರ್ಟ್ ಆಫ್ ಡಾರ್ಕ್‌ನೆಸ್' ಅನ್ನೇ ಓದಬೇಕು. ಶುಷ್ಕ ಆದರ್ಶವಾದ ಹೇಗೆ ಕೆಡಕು ಮಾಡುತ್ತದೆ ಎನ್ನುವ ರೀತಿಯನ್ನು ಈ ಕಾದಂಬರಿ ಬಹಿರಂಗಪಡಿಸುತ್ತದೆ ಮಾತ್ರವಲ್ಲ; ಸಾಮ್ರಾಜ್ಯ ವಿಸ್ತರಣೆಯಿಂದಾಗಿ ಸಾಮ್ರಾಜ್ಯಶಾಹಿಗಳು ಮತ್ತು ಸಾಮ್ರಾಜ್ಯದ ಅಧೀನರು ಇಬ್ಬರೂ ಹೇಗೆ ಅಮಾನವೀಯರಾಗುತ್ತಾರೆ ಎನ್ನುವುದನ್ನೂ ಮನವರಿಕೆ ಮಾಡಿಕೊಡುತ್ತದೆ. ಮೊದಲೇ ತಿಳಿಸಿರುವಂತೆ ಮಾನವೀಯವಾದ ಧೋರಣೆಯೇ ಕಾನ್ರಾಡ್‌ನ ಕೃತಿಗಳನ್ನು ಅರ್ಥಮಾಡಿಕೊಳ್ಳಲು ಒದಗುವ ಪ್ರಮುಖ ಅಂಶ. ಯಾವುದೆ ರಾಜಕೀಯ ವ್ಯವಸ್ಥೆಯಾಗಲಿ ಇಡೀ ಮಾನವ ಕುಲವನ್ನು ಪ್ರತಿನಿಧಿಸಲಾರದು; ಆದ್ದರಿಂದ ಮಾನವೀಯತೆಗೆ ವಿರುದ್ಧವಾದ ಶಕ್ತಿ ಯಾವುದೇ ರಾಜಕೀಯ ವ್ಯವಸ್ಥೆಯಲ್ಲಿ ಅಂತಸ್ಥವಾಗಿರುತ್ತದೆ ಎಂದು ಕಾನ್ರಾಡ್ ಗುರುತಿಸಿದ್ದ. ಅವನ 'ಹಾರ್ಟ್ ಆಫ್ ಡಾರ್ಕ್‌ನೆಸ್'ನ ಸಾಮ್ರಾಜ್ಯಶಾಹಿತ್ವ ಅಮಾನುಷ ವ್ಯವಸ್ಥೆಯಾಗಿದ್ದರೆ 'ಸೀಕ್ರೆಟ್ ಏಜೆಂಟ್' ಎನ್ನುವ ಕಾದಂಬರಿಯಲ್ಲಿನ ಅಧಿಕಾರಶಾಹಿತ್ವ; 'ಅಂಡರ್ ವೆಸ್ಟರ್ನ್ ಐಸ್'ನ ನಿರಂಕುಶಪ್ರಭುತ್ವ—ಈ ಎಲ್ಲ ಬಗೆಯ ವ್ಯವಸ್ಥೆಗಳಲ್ಲಿ ಮನುಷ್ಯಪ್ರಾಣಿಗಳು ಅಮಾನವೀಯರಾಗುವ ಅಪಾಯವನ್ನು ಕಾನ್ರಾಡ್ ಸೂಕ್ಷ್ಮವಾಗಿ ತೋರಿಸಿಕೊಡುತ್ತಾನೆ.

ಕಾನ್ರಾಡ್‌ನ ಕೃತಿಗಳಲ್ಲಿ ಅತ್ಯಂತ ಸಂಕೀರ್ಣವಾದದ್ದು 'ನಾಸ್ಟ್ರೊಮೊ.' ದಕ್ಷಿಣ ಅಮೆರಿಕ ರಾಷ್ಟ್ರವೊಂದರ ಇತಿಹಾಸ ಅದಕ್ಕೆ ಹಿನ್ನೆಲೆ ಒದಗಿಸುತ್ತದೆ. ಆ ದೇಶದಲ್ಲಿ 'ಕ್ರಾಂತಿ'ಯೊಂದು ನಡೆದು, ಲಿಬರಲ್ ಶಾಸಕರ ಆಳ್ವಿಕೆ ಬರುತ್ತದೆ. ಆದರೆ ತಾತ್ವಿಕ ನಿಯಮಗಳಿಲ್ಲದ 'ಸಾಹಸಿ'ಗಳಿಂದ 'ಪ್ರತಿಕ್ರಾಂತಿ'ಯೊಂದು ಜರುಗುತ್ತದೆ. ಮೂರನೆಯ ಕ್ರಾಂತಿ ಮತ್ತೆ ಲಿಬರಲ್‌ಗಳನ್ನು ಅಧಿಕಾರಕ್ಕೆ ತರುತ್ತದೆ. ಲಿಬರಲ್ ಶಾಸಕರಿಗೆ ಧನ ಸಹಾಯ ಬರುವುದು ಚಾರ್ಲ್ಸ್ ಗೂಲ್ಡ್ ಎನ್ನುವವ ಇಂಗ್ಲಿಷನವನಿಂದ. ಗೂಲ್ಡ್ ಬೆಳ್ಳಿ ಗಣಿಯೊಂದರ ಮಾಲೀಕ; ಅವನ ಬೆಂಬಲಕ್ಕೆ ಅಮೆರಿಕದ ಬಂಡವಾಳ. ಬೆಳ್ಳಿಯ ಗಣಿ ಇಡೀ ನಾಡಿನ ಜೀವನವನ್ನು ಅಶುದ್ಧಗೊಳಿಸುತ್ತದೆ; ಗೂಲ್ಡ್‌ನ ಮಾನವೀಯತೆಯನ್ನು ನಾಶಮಾಡಿ, ಅವನ ದಾಂಪತ್ಯಜೀವನ ನೀರಸವಾಗುವಂತೆ ಮಾಡುತ್ತದೆ; ಶಾಸಕರ ಲಿಬರಲ್ ಧ್ಯೇಯಗಳು, ಅಮೆರಿಕ ಬಂಡವಾಳಗಾರ ಹಾಲ್ರಾಯ್ಡ್‌ನ ಕ್ರಿಶ್ಚಿಯನ್ ಆದರ್ಶ—ಇವೆಲ್ಲದರ ಅಣಕ ಮಾಡುತ್ತದೆ; ದೋಷದ ಸೋಂಕೇ ಇಲ್ಲವೆಂದು ಹೆಸರು ಗಳಿಸಿದ ನಾಸ್ಟ್ರೊಮೊನನ್ನು ಭ್ರಷ್ಟನನ್ನಾಗಿ ಮಾಡುತ್ತದೆ. 'ನಾಸ್ಟ್ರೊಮೊ'ನಲ್ಲಿ ಕಾನ್ರಾಡ್ ಕಾಲಗಣನೆಯನ್ನು ಬೇಕೆಂತಲೆ ತಲೆಕೆಳಗುಮಾಡುತ್ತಾನೆ. ಉದಾಹರಣೆಗೆ, ಭಾಗ ೧ರಲ್ಲಿ ಅಧ್ಯಕ್ಷ ರಿಬೈರಾ ಅಧಿಕಾರಕ್ಕೆ ಬರುವುದು; ಹೊಸಯುಗವೊಂದರ ಉದ್ಘಾಟನೆಯನ್ನು ತಾನು ಮಾಡುತ್ತಾ, ಕಾಸ್ಟಗುವಾನಾದಲ್ಲಿ ಇನ್ನು ಮುಂದೆ ಶಾಂತಿ ನೆಲಸುವುದೆನ್ನುವ ಆಸೆ ವ್ಯಕ್ತಪಡಿಸುವುದು—ಈ ವಿವರಗಳಿಗಿಂದ ಮೊದಲು ರಿಬೈರಾ ಬೆಟ್ಟಗಳ ನಡುವೆ ತಲೆ ಮರೆಸಿಕೊಂಡು ಪಲಾಯನ ಮಾಡುವ ದೃಶ್ಯ ಬರುತ್ತದೆ. ಭಾಗ

ರಲ್ಲಿಯೂ ಇದೇ ರೀತಿ ಕಾಲಗಣನೆ ತಿರುಗುಮುರುಗಾಗುತ್ತದೆ. ತಂತ್ರದ ಮೂಲಕ ವ್ಯಂಗ್ಯವೇನೊ ಸಾಧ್ಯವಾಗುತ್ತದೆ. ಆದರೆ ಅದಕ್ಕಿಂತ ಮುಖ್ಯವಾಗಿ, ಅನೇಕ ಸ್ವಾರಸ್ಯಕರ ಘಟನೆಗಳಿಂದ ಕೂಡಿರುವ ಈ ಕಾದಂಬರಿ ಕೇವಲ ಸಾಹಸಪ್ರಧಾನವಾಗದಂತೆ ಮಾಡುತ್ತಾನೆ ಕಾನ್ರಾಡ್. ನಾಸ್ಟ್ರೊಮೊ, ಮೇಜರ್ ಸೊಟೆಲ್ಲೊ ಢಕಾಯಿತ ಹೆರ್ನಾಂಡಿಸ್ ಮುಂತಾದವರ ಸಾಹಸಗಳಲ್ಲಿ ನಾವು ತಲ್ಲೀನರಾಗದೆ, ಜನರೆಲ್ಲ ಹೇಗೆ ಬೆಳ್ಳಿಯಿಂದ ಭ್ರಷ್ಟರಾಗುತ್ತಾರೆ ಎನ್ನುವುದನ್ನು ಕಾಣುತ್ತೇವೆ; 'ಕ್ರಾಂತಿಗಳ ನಿರರ್ಥಕತೆಯನ್ನು ಮನಗಾಣುತ್ತೇವೆ.'

ನಾಸ್ಟ್ರೊಮೊವನ್ನು ಬರೆದು ಮುಗಿಸಿದ ನಂತರ ಕಾನ್ರಾಡ್ ಅನತೊಲೆ ಫ್ರಾನ್ಸ್‌ಗೆ ಬರೆಯುತ್ತಾನೆ: "ಅನೇಕರ ಅಜ್ಞಾನದಿಂದಾಗಲೀ ಹಲವರ ಜ್ಞಾನದಿಂದಲೇ ಆಗಲಿ ಕಲ್ಪಿತವಾದ ಯಾವುದೇ ರಾಜಕೀಯ ಪದ್ಧತಿಯಿಂದ ಮಾನವಕುಲಕ್ಕೆ ಸುಖ ಸಿಗದು." ಅವನ ಪ್ರಕಾರ ಇಡೀ ಮಾನವಕುಲದೊಡನೆ ಭ್ರಾತೃತ್ವದ ಪ್ರಜ್ಞೆಯನ್ನು ಮೂಡಿಸುವ ಕಾಯಕವೊಂದರಿಂದಲೇ ಮಾನವಜೀವನ ವ್ಯವಸ್ಥಿತವಾಗಬಲ್ಲುದು.' ಅವನ ಕಾದಂಬರಿಗಳಿಗೆ ಇರುವ ಸಮುದ್ರದ ಹಿನ್ನೆಲೆ ಮಹತ್ವಪೂರ್ಣವಾದದ್ದು : ಅದು ಜೀವನದ ಪ್ರತಿಯೊಂದು ಕ್ಷಣವೂ ತುರ್ತಿನ ಕ್ಷಣವೆಂದು ಮನದಟ್ಟು ಮಾಡುತ್ತದೆ. ಈ ತುರ್ತಿನ ಕ್ಷಣದಲ್ಲಿ ನಾವು ಮಾಡಬಹುದಾದ ಸಾಧಾರಣ ಕಾಯಕದಲ್ಲಿ ಜೀವನ ಅರ್ಥವೆಲ್ಲ ಅಡಗಿರುತ್ತದೆ, ಎನ್ನುತ್ತಾನೆ ಕಾನ್ರಾಡ್. ಕಾನ್ರಾಡ್‌ನ ಪ್ರಸಕ್ತತೆ ಇರುವುದು ಇದರಲ್ಲಿಯೇ. ಅವನ ಕೃತಿಗಳಲ್ಲಿ ಸಮುದ್ರ ಮಾನವನ ಆಂತರಿಕ ಪರಿಸ್ಥಿತಿಯಾಗಿ ಪರಿಣಮಿತ್ತದೆ. ಒಂದೆಡೆ ಡಾ|| ರಾಧಾಕೃಷ್ಣನ್ ಹೇಳುತ್ತಾರೆ: "ಮಾನವಕುಲ ನಿರ್ನಾಮವಾಗಬಹುದೆಂಬ ಅಪಾಯ ಪ್ರಜ್ಞೆ ನಮ್ಮ ೨೦ ನೇ ಶತಮಾನಕ್ಕೇ ವಿಶಿಷ್ಟವಾದದ್ದೇನಲ್ಲ. ಅನೇಕ ನಾಗರಿಕತೆಗಳಿಗೆ ಆ ಪ್ರಜ್ಞೆ ಇದ್ದಿರಬಹುದು. ಆದರೆ ಅಪಾಯ ಹೊರಗಿನಿಂದ ಬರಬಹುದೆಂಬ ಭೀತಿ ಹಿಂದಿನ ನಾಗರಿಕತೆಗಳಿಗಿದ್ದಿತು ; ನಮ್ಮ ಆಧುನಿಕ ಯುಗದಲ್ಲಿನ ಪ್ರಜ್ಞೆ ಈ ಅಪಾಯದ ಮೂಲ ಆಂತರಿಕವಾದದ್ದೆಂದು ಗುರುತಿಸುತ್ತದೆ." ಈ ಆಧುನಿಕ ಪ್ರಜ್ಞೆಯನ್ನು ಮೊಟ್ಟಮೊದಲ ಬಾರಿಗೆ ಇಂಗ್ಲಿಷ್ ಬರವಣಿಗೆಗೆ ತಂದವನು ಜೋಸೆಫ್ ಕಾನ್ರಾಡ್.

ಮಕ್ಕಳು, ಯುವಕರು ಮತ್ತು ಮಹಿಳೆಯರು—ಎಲ್ಲರೂ ಸರಿಸಮಾನರಾಗಿ ಬೆಳೆಸಿಕೊಳ್ಳಬಹುದಾದ ಶಕ್ತಿ ಅಂದರೆ ಅಹಿಂಸೆ.

ಗಾಂಧೀಜಿ

'ಹಾರ್ಟ್ ಆಫ್ ಡಾರ್ಕ್‌ನೆಸ್': ಕಪ್ಪು ಕಾಣ್ಕೆ

ಪ್ರೊ॥ ಪೋಲಂಕಿ ರಾಮಮೂರ್ತಿ

ಹಾರ್ಡಿ, ಲಾರೆನ್ಸರ ಸಾಲಿಗೆ ಸೇರಿದ ಮಹಾನ್ ಇಂಗ್ಲಿಷ್ ಕಾದಂಬರಿಕಾರ ಜೋಸೆಫ್ ಕಾನ್ರಾಡನು ಕತ್ತಲನ್ನು ಕಂಡವ, ನಮಗೆಲ್ಲಾ ಕಂಡುಕೊಟ್ಟವ.

ಅವನು ಕಂಡ ಕತ್ತಲಿನ ಮಹಾ ಕಾಣ್ಕೆ, 'Heart of Darkness', 'ಕತ್ತಲ ಹೃದಯ' ಅಥವಾ 'ಹೃದಯದ ಕತ್ತಲು' ಕಾದಂಬರೀ ಪ್ರಪಂಚದಲ್ಲಿ ಚಾರಿತ್ರಿಕವಾದ ಕ್ರಾಂತಿಯದು. ಈ ಕತೆಯು ಕಪ್ಪು ಕಾಣ್ಕೆಯನ್ನೇ ಆಧಾರವಾಗಿಟ್ಟುಕೊಂಡ 'Apocalypse Now', 'ಕಲ್ಕಿ ಈಗಲೇ' ಎನ್ನುವ ಅಮೆರಿಕನ್ನರ ಅಪಾರ ಹಣದ ಚಲನಚಿತ್ರ ವಿಯಟ್ನಾಂಮಿನ ಮಹಾ ದಾಳಿಯ ಪ್ರಳಯವನ್ನೇ ಹಿನ್ನೆಲೆಯಾಗಿಟ್ಟುಕೊಂಡು ತಯಾರಾಯಿತು.

ಅಂದರೆ ನಮಗೆ ಕತ್ತಲಿನ ಕಾಣ್ಕೆ ಎಷ್ಟು ಅವಶ್ಯಕ, ಅದಿಲ್ಲದ ನಮ್ಮ ಬರೀ ಬೆಳಕಿನ ಕಾಣ್ಕೆಗಳು ಒಕ್ಕಣ್ಣಿನ ಕಾಣ್ಕೆಗಳು. ಆದ್ದರಿಂದ ತಪ್ಪು ಕಾಣ್ಕೆಗಳು—ಎನ್ನುವುದನ್ನು 'ಹಾರ್ಟ್ ಆಫ್ ಡಾರ್ಕ್‌ನೆಸ್' ನಮಗೆ ಕಂಡುಕೊಡುತ್ತದೆ.

ಯೂರೋಪು ಬಿಳಿಯರ ಖಂಡ, ಬೆಳಕಿನ ಖಂಡ; ಆಫ್ರಿಕಾ ಕರಿಯರ ಖಂಡ, ಕತ್ತಲು ಖಂಡ. ಯೂರೋಪಿನ ಬೆಳಕಿನ ಬಿಳಿಯರ ಮೇಲೆ ತಮ್ಮಷ್ಟಕ್ಕೆ ತಾವೇ ಹೊತ್ತುಕೊಂಡ ಒಂದು ಜವಾಬ್ದಾರಿಯಿದೆ. ಅದೇನೆಂದರೆ 'White man's Burden', 'ಬಿಳಿಯನ ಹೊಣೆ', ಅಂದರೆ ಬೆಳಕಿನ ಬಿಳಿಯನಾದವನು ಕತ್ತಲ ಕರಿಯನಿಗೆ ಬೆಳಕು ಹರಿಸಬೇಕು; ಕರಿಯನಿಗೆ ತನ್ನ ಆದಿಮಾನವತೆಯಿಂದ ನಾಗರಿಕತೆಗೆ ಕರೆದೊಯ್ಯಬೇಕು. ಇದು ಅವನು ಬಿಳಿಯನಾಗಿ ಹುಟ್ಟಿದ್ದಕ್ಕೆ ಅವನ ಮೇಲಿರುವ ಮಾನವೀಯ ಜವಾಬ್ದಾರಿ, ಕ್ರಿಸ್ತ ಧರ್ಮದವರ ಕ್ರಿಸ್ತ ಧರ್ಮ ಬೋಧಿಸುವ "Love thy neighbour" 'ನಿನ್ನ ನೆರೆಹೊರೆಯರನ್ನು ಪ್ರೀತಿಸು' ಎನ್ನುವ ಪ್ರೇಮದ ಹೊಣೆಗಾರಿಕೆ.

ಈ ಬಿಳಿಯನ ಹೊಣೆಯೇ ಈ 'ಹಾರ್ಟ್ ಆಫ್ ಡಾರ್ಕ್‌ನೆಸ್'ನ ಪ್ರೇರಣೆ ಎನ್ನಬೇಕು. ಮಾರ್ಲೋ ಎನ್ನುವ ಇಂಗ್ಲಿಷ್ ನಾವಿಕ ಈ ಬಿಳಿಯ ಹೊಣೆಯನ್ನು ಹೊತ್ತ ಈ ಕತೆಯ ಮಾನವೀಯ ನಿರೂಪಕ. ಇವನು ತನ್ನ ಇತರ ನಾವಿಕ ಮಿತ್ರರಿಗೆ ತನ್ನ ಒಂದು ಅನುಭವದ ಕತೆಯನ್ನು ಹೇಳುತ್ತಿದ್ದಾನೆ. ಅದು ಆಫ್ರಿಕಾ ಕತ್ತಲು ಖಂಡದ ಕಾಂಗೋ ಕತ್ತಲು ಕಾಡಿನ ಕಪ್ಪು ಜನರನ್ನು ಕುರಿತ ಕಪ್ಪು ಕತೆ. ಅವರನ್ನು ಉದ್ಧಾರ ಮಾಡಬೇಕೆನ್ನುವ ಸದುದ್ದೇಶದಿಂದ ಕರ್ಟ್ಸ್ ಎನ್ನುವ ಯೂರೋಪಿನವ ಕಾಂಗೋ ಕಾಡನ್ನು ನುಗ್ಗುತ್ತಾನೆ. ಅಲ್ಲಿ ಅವನ ಕಪ್ಪು ಜನರಿಗೆ ಬೆಳಕು ಹರಿಸುವ ಸದುದ್ದೇಶದ ಜೊತೆಗೆ ತಾನು ಕಪ್ಪು ಆನೆಗಳ ಬಿಳಿಯ ದಂತವನ್ನು ಸಂಪಾದಿಸಿ ರವಾನಿಸಬೇಕೆನ್ನುವ ಲಾಭೋದ್ದೇಶವೂ ಇದೆ. ದುರಂತವೇನೆಂದರೆ ಅವನ ಕಪ್ಪು ಜನರಿಗೆ ಬೆಳಕು ಮಾಡಬೇಕೆನ್ನುವ ಬಿಳಿ ಉದ್ದೇಶ ಹಿಮ್ಮೆಟ್ಟುತ್ತದೆ; ಕಪ್ಪು ಜನರಿಂದಲೇ ಕಪ್ಪು ಆನೆಯ ಬಿಳಿ ದಂತ ಸಂಪಾದಿಸುವ ಕಪ್ಪು ಉದ್ದೇಶ ಮುಮ್ಮೆಟ್ಟುತ್ತದೆ. ಬರುತ್ತಾ ಬರುತ್ತಾ ಈ ಬೆಳಕಿನ ಸದುದ್ದೇಶ ಸಂಪೂರ್ಣ ಮಾಯವಾಗುತ್ತದೆ: ಬದಲಿಗೆ ಕತ್ತಲಿನ ಕರಾಳೋದ್ದೇಶ ತಾನೇತಾನಾಗಿ ತಾಂಡವವಾಡುತ್ತದೆ. ಅಷ್ಟೇ ಅಲ್ಲ—ಬೆಳಕಿನ ಬಿಳಿ ಕರ್ಟ್ಸ್, ತಾನೇ ಕತ್ತಲಿನ ಕರಾಳಕ್ಕೆ ಸಿಕ್ಕು, ಆ ಕಪ್ಪು ಜನರಿಗಿಂತಲೂ ಹಿಂಸಾತ್ಮಕವಾದ ಬರ್ಬರವಾದ ವರ್ತನೆಗಳನ್ನೂ, ನಿರಂಕುಶತ್ವವನ್ನೂ ಪಾಶವೀ ನಡವಳಿಕೆಗಳನ್ನೂ ಆಚರಿಸುತ್ತಾ, ತಾನೇ ಕಗ್ಗತ್ತಲಾಗಿಬಿಡುತ್ತಾನೆ.

ಇಲ್ಲಿ ಬರ್ನಾರ್ಡ್ ಷಾ ಹೇಳಿದ ಒಂದು ಕರಾಳ ಹಾಸ್ಯದ ಮಾತು ನೆನೆಯಬೇಕು. ಅವನೆನ್ನುತ್ತಾನೆ: Conversion of a savege to Christianity is conversion of Christianity to savagery. ಹಾಗೇನೇ ಈ ಕತೆಯಲ್ಲಿ, ಕಾಡುಜನರನ್ನು ಕ್ರಿಸ್ತೀಯ ಮಾನವರನ್ನಾಗಿ ಮಾಡಲು ಹೊರಟ ಬಿಳಿಯ ಕ್ರಿಸ್ತೀಯ ತಾನೇ ಕಾಡುಜನರಿಗಿಂತಲೂ ಕರಾಳನಾದ ಕಾಳನಾಗಿಬಿಡುತ್ತಾನೆ.

ಕತೆಯ ದುರಂತ ಐರನಿಯೇನೆಂದರೆ ಯಾವನು ಮೂರುಹೊತ್ತೂ ದಂತ ದಂತ ದಂತ ಎಂದು ತಲೆ ಕೆಡಿಸಿಕೊಂಡಿರುತ್ತಾನೋ, ಕನಸು ಕಾಣುತ್ತಿರುತ್ತಾನೋ ಅವನೇ ಕೊನೆಯಲ್ಲಿ ತನ್ನ ತಲೆಕೂದಲನ್ನು ಕಳೆದುಕೊಂಡು ಬೋಳನಾಗಿ, ತನ್ನ ಬೋಳು ತಲೆಯೂ ಆನೆಯ ದಂತದಂತೆ ಸಂಪೂರ್ಣ ದಂತವಾಗಿಯೇ ಅವತಾರಗೊಂಡಂತಾಗಿಬಿಡುತ್ತಾನೆ. ಇಲ್ಲಿ ನೋಡಿ ಕಾನ್ರಾಡ್ ದಾರ್ಶನಿಕ ಹೇಗೆ ಈ ಕಪ್ಪುಕಾಣ್ಕೆಯನ್ನು ನಮ್ಮ ಕಣ್ಮುಂದೆ ಒಡ್ಡುತ್ತಿದ್ದಾನೆ:

> And the lofty frontal bone of Mr. Kurtz! They say the hair goes on growing sometimes, but this—ah—specimen, was impressively bald. The wilderness had patted him on the head, and, behold, it was like a ball—an ivory ball; it had caressed him, and—lo!—

he had withered; it had taken him, loved him, embraced him, got into his veins, consumed his flesh, and sealed his soul to its own by the inconceivable ceremonies of some devilish initiation. He was its spoiled and pampered favourite. Ivory? I should think so. Heaps of it, stacks of it. The old mud shanty was bursting with it. You would think there was not a single tusk left either above or below the ground in the whole country.

ಭ್ರಮರ ಕೀಟನ್ಯಾಯದಂತೆ, ಕರ್ಟ್ಸ್ ತಾನು ಏನನ್ನು ಮೂರೂಹೊತ್ತೂ ಚಿಂತಿಸುತ್ತಿದ್ದನೋ ಅದೇ ತಾನಾಗಿಬಿಡುತ್ತಾನೆ: ಆನೆಯ ದಂತದ ಅಪಹಾರಿ ತಾನೇ ಆನೆಯ ದಂತವಾಗಿಬಿಡುತ್ತಾನೆ!

ಇನ್ನೂ ಎದೆಬಿರಿಯುವ ದಾರುಣ ಐರನಿ ಯಾವುದೆಂದರೆ ಯಾವ ಕಪ್ಪು ಜನರನ್ನು ಈ ಬಿಳಿಯ ಮಹಾನುಭಾವ ಬಗ್ಗುಬಡಿಯುತ್ತಾ ಅವರನ್ನು ಪ್ರಾಣಿಗಳ ಮಟ್ಟಕ್ಕೆ ಇಳಿಸಿಬಿಟ್ಟಿರುತ್ತಾನೋ, ಹಾಗೆಯೇ ತಾನೂ ಒಂದು ಪ್ರಾಣಿಯಾಗಿಬಿಡುವುದು; ಯಾವ ಅಮಾಯಕ ಕರಿಯರನ್ನು ಇವನು ಶೋಷಿಸಿ, ಅನ್ನನೀರಿಲ್ಲವೆ, ಖಾಯಿಲೆಯಿಂದ ಸಾಯುತ್ತಿರುವ ಅಸ್ತಿಪಂಜರಗಳನ್ನಾಗಿ, ಕೇವಲ ನೆರಳುಗಳನ್ನಾಗಿ ಮಾಡಿದ್ದನೋ, ಅವರಂತೆಯೆ ಇವನೂ ಅಸ್ತಿಪಂಜರವಾಗಿ, ನೆರಳಾಗಿ, ಅವರಂತೆ ನಪುಂಸಕವಾದ "it" 'ಅದು' ಆಗಿಬಿಡುವುದು. ಈ ಹಸಿದು ಸಾಯುತ್ತಿರುವ ಅಸ್ಥಿಪಂಜರದ, ನೆರಳುಗಳ, "ಅದು"ಗಳನ್ನು ನೋಡಿ:

"A slight clinking behind me made me turn my head. Six black men advanced in a file, toiling up the path. They walked erect and slow, balancing small baskets full of earth on their heads, and the clink kept time with their footsteps. Black rags were wound round their loins, and the short ends behind waggled to and fro like tails. I could see every rib, the joints of their limbs were like knots in a rope; each had an iron collar on his neck, and all

were eonnected together with a chain whose bights swung between them, rhythmically clinking.

ಈ "ಅವು" ಆಕಾರಗಳಷ್ಟೇ, ತೆವಳುವ, ದೇಕುವ ಜಂತುಗಳು :

"Black shapes crouched, lay, sat between the trees leaning against the trunks, clinging to the earth, half coming out, half effaced within the dim light, in all the attitudes of pain, abandonment, and despair. Another mine on the cliff went off, followed by a slight shudder of the soil under my feet. The work was going on. The work! And this was the place where some of the helpers had withdrawn to die.

ಇನ್ನೂ ಮುಂದಕ್ಕೆ ಹೋದರೆ, "ಇವು" ಈ ಆಕಾರಗಳು, "ಮೂಳೆಗಳ ಕಟ್ಟುಗಳು", "ಗೆರೆಗಳು", "ಕೋನ"ಗಳು :

"Near the same tree two more bundles of acute angles sat with their legs drawn up. One, with his chin propped on his knees, stared at nothing, in an intolerable and appalling manner: his brother phantom rested its forehead, as if overcome with a great weariness; and all about others were scattered in every pose of contorted collapse, as in some picture of a massacre or a pestilence. While I stood horror-struck, one of these creatures rose to his hands and knees, and went off on all-fours towards the river to drink. He lapped out of his hand, then sat up in the sunlight, crossing his shins in front

> of him, and after a time let his woolly head fall on his breastbone.

ಈ ಶೋಷಿತ ಕಪ್ಪು ಅಮಾಯಕರನ್ನ ಈ ಮಟ್ಟಕ್ಕಿಳಿಸಿದ ಬಿಳಿಯ ಧೂರ್ತನ ಗತಿಯೂ ಅದೇಯಾಗುತ್ತದೆ: ಅವನು ಬಂದು ತೆವಳುವ ದೇಕುವ ಮೃಗವಾಗಿ ಬಿಡುತ್ತಾನೆ.

ಕರ್ಟ್ಸ್ ವಾಸಿಯಾಗಲಾರದ ಮಹಾ ರೋಗಕ್ಕೆ ತುತ್ತಾಗುತ್ತಾನೆ. ಅವನ ಯಾವ ಆ ಕಾಂಗೋ ಕಾಡಿನ ಬೇತಾಳನಾಗಿ ಆ ಕಾಡನ್ನೇ ನಡುಗಿಸಿದ್ದನೋ, ಅವನೇ ಈಗ ಟೊಳ್ಳು ಅಸ್ಥಿಪಂಜರವಾಗಿ, ಮಗುವಿನಂತೆ ಹಗುರುವಾಗಿ ಬಿಡುತ್ತಾನೆ. ಅವನು ಬಿಳಿ ಜನರಿಂದ ಬಿಡುಗಡೆಹೊಂದಿ, ಆ ಕಪ್ಪು ಜನರನ್ನೇ ಸೇರಬೇಕೆಂದು ತಪ್ಪಿಸಿಕೊಂಡು ಹೋಗುವಾಗ ಒಂದು ಚತುಷ್ಪಾದದಂತೆ, ನಾಲ್ಕು ಕಾಲಿನ ಪ್ರಾಣಿಯಂತೆ ಅಂಬೆಗಾಲಿನಲ್ಲಿ ನಡೆಯುತ್ತಾ ಹೋಗುತ್ತಾನೆ:

> "'As soon as I got on the bank I saw a trail—a broad trail through the grass. I remember the exultaion with which I said to myself, 'He can't walk—he is crawling on all-fours—I've got him.'

ಈಗ ಅವನೊಂದು "Vapour exhaled by the earth" ಬಿರಿದ ನೆಲದ ಬಿಸಿಹಬೆ" ಅವನೊಂದು shadow, "ನೆರಳು", "ದೆವ್ವ"ವಷ್ಟೆ? :

> "'I came upon him, and, if he had not heard me coming, I would have fallen over him, too, but he got up in time. He rose, unsteady, long, pale, indistinct, like a vapour exhaled by the earth, and swayed slightly, misty and silent before me; while at my back the fires loomed between the trees, and the murmur of many voices issued from the forest. I had cut him aff cleverly; but when actually confronting him I seemed to come to my senses, I saw the danger in its right proportion. I was by no means over yet. Suppose he began to shout? Though he could hardly

stand, there was still plenty of vigour in his voice. 'Go away—hide yourself,' he said, in that profound tone. It was very awful. I glanced back. We were within thirty yards from the nearest fire. A black figure stood up, strode on long black legs, waving long black arms, across the glow. It had horns—antelope horns, I think—on its head. Some sorcerer, some witch-man, on doubt : it looked fiend-like enough. 'Do you know what you are doing?' I whispered. 'Perfectly', he answered, raising his voice for that single word: it sounded to me far off and yet loud, like a hail through a speakingtrumpet. If he makes a row we are lost, I thought to myself. This clearly was not a case for fisticuffs, even apart from the very natural aversion I had to beat that Shadow—this wandering and tormented thing.

ಆದರೆ ಈ ಮಟ್ಟಕ್ಕೆ ಇಳಿದ ಈ ಕುಬ್ಜ, ಕರ್ಟ್ಸ್ ಅಂದರೆ ಜರ್ಮನ್ ಭಾಷೆಯಲ್ಲಿ ಚಿಕ್ಕ, ಸಣ್ಣ, ಕುಳ್ಳ ಎಂದರ್ಥ. ನಿಜಕ್ಕೂ ತ್ರಿವಿಕ್ರಮನೇ ಸರಿ. ಇವನು ಹುಟ್ಟಿದ್ದು ಯೂರೋಪಿನ ಎಲ್ಲಾ ರಕ್ತಗಳೂ ಸೇರಿ–ಫ್ರೆಂಚ್, ಜರ್ಮನ್ ಮತ್ತು ಇನ್ನಿತರ ಜನಾಂಗಗಳ ರಕ್ತ ಕರ್ಟ್ಸ್‌ನ ದಮನಿಗಳಲ್ಲಿ ಹರಿಯುತ್ತಿದೆ. ಇವನು ಸಾಧಿಸದ ಕೆಲಸ, ಕಲೆ, ಸಿದ್ಧಿ ಇನ್ನೊಂದಿಲ್ಲ. ಇವನೊಬ್ಬ ಕವಿ, ಶಿಲ್ಪಿ (painter) ಸಂಗೀತಗಾರ (musician), ವಾಗ್ಮಿ (orator) ವಿದ್ವಾಂಸ, ಬರಹಗಾರ; ಇವನು ಪ್ರೀತಿ ವಿಶ್ವಾಸ ಹುಟ್ಟಿಸುವ ನಾಯಕ, ಶಿಷ್ಯತ್ವವನ್ನ ದಯಪಾಲಿಸುವ ಗುರು; ಹೆಣ್ಣಿನಲ್ಲಿ ಪ್ರೀತಿಯನ್ನ ಹೊಮ್ಮಿಸುವ ಪ್ರಿಯಕರ, ಅದಕ್ಕಾಗಿ ಅವನಿಗಾಗಿ ಯೂರೋಪಿನಲ್ಲಿ ಇವನಿಗೆ ಮಾರು ಹೋದ ಹುಡುಗಿ ಇವನಿಗಾಗಿ ಶಬರಿಯಂತೆ ಕಾಯುತ್ತಿದ್ದಾಳೆ, ಇವನವಳಾಗಿ (kurtz's intended); ಇವನ ಮಹಾನಾಯಕ ಗುಣಗಳಿಗಾಗಿ ಈ ಕಾಂಗೋ ಕಪ್ಪು ಜನರ ಧೀರೋದಾತ್ತ ಕಪ್ಪು ರಾಜ್ಞಿ, ಕಾಂಗೋ ಕಾಡಿನ ಅರಣ್ಯ ದೇವತೆ ಇವನು ಹೋಗುತ್ತಿದ್ದಾನೆಂದು ಆಕಾಶಕ್ಕೆ ಕೈ ಚಾಚಿ ಆಕಾಶವನ್ನೇ ಭೂಮಿಗಿಳಿಯುತ್ತಾ, ಭೂಮ್ಯಾಕಾಶಗಳ ಬೆಸುಗೆಯಾಗಿ ನಿಲ್ಲುತ್ತಾಳೆ. ಈ ದೃಶ್ಯವೇ ಕಾನ್ರಾಡಿನ ಅತ್ಯಂತ ಭವ್ಯವಾದ ರುದ್ರ ಮನೋಹರ ಕಾಡಿನ ಕಾಣ್ಕೆ:



ಅಪೊಲೊ ಕರ್ಜನಿಯೋವ್‌ಸ್ಕಿ
(ಕಾನ್ರಾಡ್‌ನ ತಂದೆ)



ಎವೆಲಿನಾ ಕರ್ಜನಿಯೋವ್‌ಸ್ಕ
(ಕಾನ್ರಾಡ್‌ನ ತಾಯಿ)



ಕಾನ್ರಾಡ್ : ತನ್ನ ಮಗ ಜಾನ್‌ನೊಡನೆ

“She walked with measured steps, draped in striped and fringed cloths, treading the earth proudly, with a slight jingle and flash of barbarous ornaments. She carried her head high; her hair was done in the shape of a helmet; she had brass leggings to the knee, brass wire gauntlets to the elbow, a crimson spot on her tawny cheek, innumerable neck-laces of glass beads on her neck; bizarre things, charms, gifts of witch-men, that hung about her, glittered and trembled at every step. She must have had the value of several elephant tusks upon her. She was savage and superb, wild-eyed and magnificent; there was something ominous and stately in her deliberate progress. And in the hush that had fallen suddenly upon the whole sorrowful land, the immense wilderness, the colossal body of the fecund and mysterious life seemed to look at her, pensive, as though it had been looking at the image of its own tenebrous and passionate soul.

“She came abreast of the steamer, stood still, and faced us. Her long shadow fell to the water's edge. Her face had a tragic and fierce aspect of wild sorrow and of dumb pain mingled with the fear of some struggling, half-shaped resolve. She stood looking at us without a stir, and like the wilderness itself, with an air of brooding over an inscrutable purpose. A whole minute passed, and then she made a step forward. There was a low jingle, a glint of yellow metal, a sway of fringed draperies, and she stopped as if her

heart had failed her. The young fellow by my side growled. The pilgrims murmured at my back. She looked at us all as if her life had depended upon the unswerving steadiness of her glance. Suddenly she opened her bared arms and threw them up rigid above her head, as though in an uncontrollable desire to touch the sky, and at the same time the swift shadows darted out on the earth, swept around on the river, gathering the steamer into a shadowy embrace. A formidable silence hung over the scene.

ಪಟ್ಟೆ ಪಟ್ಟೆಯ ನೂಲು ಕುಂಚದ ಬಟ್ಟೆಗಳನ್ನು ಧರಿಸಿಕೊಂಡು ಭೂಮಿಯನ್ನು ದಿಟವಾಗಿ ಮೆಟ್ಟುತ್ತಾ, ಅವಳು ಗಂಭೀರವಾಗಿ, ಸರಿ ಅಳತೆಯ ಸಮ ಹೆಜ್ಜೆಗಳನ್ನಿಕ್ಕುತ್ತಾ ನಡೆದಳು. ಅವಳು ನಡೆಯುತ್ತಿರುವಂತೆ ಅವಳ ಬರ್ಬರ ಆಭರಣಗಳು ಮಿಂಚುತ್ತಾ ಮಂದವಾದ ಕಿಂಕಿಣಿ ನಾದವನ್ನು ಗುನುಗುತ್ತಿದ್ದುವು. ಅವಳು ಹೆಮ್ಮೆಯಿಂದ ತಲೆಯೆತ್ತಿದ್ದಳು; ಅವಳ ಕೇಶ ಉಕ್ಕಿ ಶಿರಸ್ತ್ರಾಣದಂತೆ ಬಿಗಿದು ಕಟ್ಟಲಾಗಿತ್ತು; ಅವಳ ಮೊಣಕಾಲುಗಳಿಗೆ ತಾಮ್ರದ ಪಟ್ಟಿಗಳಿದ್ದವು, ಮೊಣಕೈಗೆ ತಾಮ್ರ ತಂತಿಯ ಕವಚಗಳಿದ್ದುವು; ಅವಳ ಕಂದು ಕೆನ್ನೆಯ ಮೇಲೆ ಕೆಂಪನೆಯ ಚುಕ್ಕೆ ಕಂಗೊಳಿಸುತ್ತಿತ್ತು; ಅವಳ ಕತ್ತಿನಲ್ಲಾದರೋ ನಾನಾರೀತಿಯ ಗಾಜಿನ ಮಣಿಗಳ ಹಾರಗಳಿದ್ದುವು; ಎಲ್ಲವೂ ವಿಚಿತ್ರವಾದ ವಸ್ತುವಿಶೇಷಗಳು, ತಾಯಿತಗಳು, ಮಾಟ ಮಂತ್ರದವರ ನಾನಾ ಕೊಡುಗೆ ಕಾಣಿಕೆಗಳು; ಇವೆಲ್ಲವೂ ಪಳಪಳ ಹೊಳೆಯುತ್ತಾ, ಮಿಂಚಿ ಮೆರೆಯುತ್ತಾ, ಅವಳ ಪ್ರತಿಯೊಂದು ಹೆಜ್ಜೆಗೂ ಕುಮ್ಮುತ್ತಾ ಕುಲುಕುತ್ತಾ ಗಲಿಗಲಿಸುತ್ತಿದ್ದುವು.

ಅವಳ ಮೈಮೇಲಿನ ಆಭರಣಗಳ ಬೆಲೆ ಎಷ್ಟು ಸಲಗಗಳ ದಂತರಾಶಿಯೋ! ಅವಳ ಭವ್ಯ ಬರ್ಬರ ಸೌಂದರ್ಯವೋ, ಬೊಗಸೆಗಣ್ಣ ವಿಜೃಂಬವೋ! ಅವಳ ಎಚ್ಚರದ ಪಾದಾಕ್ರಮಣದಲ್ಲಿ ಶ್ರೀಮದ್ಗಾಂಭೀರ್ಯದಷ್ಟೇ ಗೂಢ ಗಂಡಾಂತರವೂ ಸೂಸುತ್ತಿತ್ತು....

ಅವಳು ಸ್ಟೀಮರಿಗೆ ಎದೆಗೊಟ್ಟು, ನಿಶ್ಯಬ್ದವಾಗಿ ನಿಂತು, ನಮ್ಮನ್ನು ಎದುರಿಸಿದಳು. ಅವಳ ನೀಳವಾದ ನೆರಳು ನೀರಿನಂಚಿಗೆ ಬಿತ್ತು. ಅವಳ ರುದ್ರ ದುರಂತ ಚಹರೆಯಲ್ಲಿ ಅರಣ್ಯ ರೋದನದ ಮೂಕ ನೋವೂ, ಭಯ ಮಿಶ್ರಿತ ಹೋರಾಟವೂ, ಅರ್ಧ ನಿರ್ಧಾರವ ನಿರ್ಣಯಗಳೂ

> ವ್ಯಂಜಿತವಾಗಿದ್ದುವು........ಇದ್ದಕ್ಕಿದ್ದಂತೆ ಅವಳು ತನ್ನೆರಡು ಬತ್ತಲೆ ತೋಳೆತ್ತಿ ತನ್ನ ಸ್ಥಿರವಾಗಿ ನಿಂತ ತಲೆಯ ಮೇಲಕ್ಕೆ ಚೆಲ್ಲಿ ತನ್ನೊಂದು ಆಳವಾದ ಅದಮ್ಯ ಆಕಾಶಮುಟ್ಟುವ ಬಯಕೆಯನ್ನು ತೀರಿಸಿಕೊಳ್ಳುವುದಕ್ಕೆಂತಲೇ ಚಾಚಿದಳು. ಆ ಕ್ಷಣದಲ್ಲೇ ಅವಳ ಕ್ಷಿಪ್ರ ನೆರಳು ಆ ಕೆಲಕ್ಕೆ ಚೆಲ್ಲಿ, ಆ ನದಿಯಮೇಲೆ ಬೀಸಿ, ಆ ಸ್ಟೀಮರನ್ನೇ ತನ್ನ ನೆರಳ ತಬ್ಬಿನಲ್ಲಿ ಬಾಚಿಬಿಟ್ಟಿತು....
>
> ನಿಜಕ್ಕೂ ಈ ರುದ್ರ ಕಾಮನೆಯ ಬರ್ಬರ ಸುಂದರಿಯ ಚಿತ್ರಣ ಷೇಕ್ಸ್‌ಪಿಯರ್ ಮಹಾಕವಿಗೂ ಹೆಮ್ಮೆತರುವಂಥಾದ್ದು. ಷೇಕ್ಸ್‌ಪಿಯರು ಮಹಾಕವಿ ಆಫ್ರಿಕಾ ಖಂಡದ ರಾಜ್ಞಿ, ರೂಪರಂಭೆ ಕ್ಲಿಯೋಪಾತ್ರಳನ್ನು ಚಿತ್ರಿಸಿರುವ ಈ ಸಾಲನ್ನು ಈ ಸಂದರ್ಭದಲ್ಲಿ ನೆನೆಯಬೇಕು:
>
> The barge she sat in, like a burnished throne
> Burned on the water
>
> ಉಜ್ಜಿ ಝಗಿಝಗಿಸಿದ ಸಿಂಹಾಸನದಂತಿದ್ದ ಅವಳ ದೋಣಿ
> ನೀರಮೇಲೇ ಹತ್ತಿ ಉರಿಯಿತು....!

ನೀರಿಗೆ ಬೆಂಕಿ ಹತ್ತಿಸುವ ಅಗ್ನಿ ಸುಂದರಿ ಕ್ಲಿಯೋಪಾತ್ರಳಂತೆ, ಈ ಕಾಂಗೋ ಕಾಡಿನ ಕಪ್ಪುರಾಜ್ಞಿ ಆಕಾಶವನ್ನೇ ಭೂಮಿಗೆಳೆದು ಭೂಮ್ಯಾಕಾಶಗಳ ಬೆಸುಗೆಯಾಗಿ ನಿಂತ ಬರ್ಬರ ಸುಂದರಿಯಲ್ಲವೇ?

ಇದೀಗ ಕಾನ್ರಾಡಿನ ಪ್ರಕೃತಿಯ ರುದ್ರದರ್ಶನ. ಯಾವುದು ಭಯಂಕರವಾದ ರೂಕ್ಷಾರಣ್ಯವೋ ಅದು ಕಾನ್ರಾಡಿನ ಕಾಣ್ಕೆ ಕಣ್ಣಿಗೆ ಪ್ರಕೃತಿಯ ಅದ್ಭುತವಾದ ರುದ್ರ ಮನೋಹರ ಸೌಂದರ್ಯವಾಗಿ ಪ್ರತ್ಯಕ್ಷವಾಗಿದೆ. ಇಲ್ಲಿ ನೋಡಿ ಕಾಂಗೋ ಕಾಡಿನ ಆಕಾಶಕ್ಕೆ ಚಾಚಿನಿಂತ ಚಿರಂಜೀವಿ ಹೆಮ್ಮರಗಳು:

> "Going up that river was like travelling back to the earliest beginnings of the world, when vegetation rioted on the earth and the big trees were kings. An empty stream, a great silence, an impenetrable forest. The air was warm, thick, heavy, sluggish. There was no joy in the brilliance of sunshine. The long stretches of the waterway ran on, deserted, into the gloom of overshadowed distances. On silvery sandbanks hippos and alligators sunned themselves side by side.

ಅಲ್ಲಿ ಜಗತ್ತಿನ ಹುಟ್ಟಿನಿಂದಲೂ ಜೀವಂತವಾಗಿ ಬೀಗಿನಿಂತ ಹೆಮ್ಮರಗಳೇ ಅರಣ್ಯ ರಾಜರು!.... ಆ ನದಿಗಳ ಬೆಳ್ಳಿ ಮರಳ ಮೇಲೆ ನೀರಾನೆಗಳೂ ಮೊಸಳೆಗಳೂ ಬಿಸಿಲು ಕಾಯಿಸುತ್ತಿವೆ! ಇನ್ನು ಇದಕ್ಕಿಂತಲೂ ಬೇಕೆ ಸ್ವರ್ಗ, ಶಾಂತಿ! ಇಂತಹ ಕಾಡಿನ, ಅಂದರೆ ಪ್ರಕೃತಿಯ, ಅಂತರಂಗದ ಚೆಲುವನ್ನ ಕಂಡುಕೊಂಡ ಕವಿಯೇ ಋಷಿ. ಅದಕ್ಕೆಂದೇ ಕಾನ್ರಾಡ್ ತನ್ನ ಈ ಕಾಡಿನ ರುದ್ರ ಸೌಂದರ್ಯದಂತೇನೇ ಕಡಲಿನ ರುದ್ರ ಸೌಂದರ್ಯವನ್ನೂ ಕಂಡುಕೊಂಡ The Nigger of the Narcissus ಎನ್ನುವ ಕಿರುಕಾದಂಬರಿಯ ಮುನ್ನುಡಿಯಲ್ಲಿ ಕಣ್ಣಿನ ಕಾಣ್ಕೆಯ ಪರಿಪೂರ್ಣತೆಯನ್ನು ಕುರಿತು ಹೀಗೆ ಬರೆಯುತ್ತಾನೆ:

> My task which I am trying to achieve is, by the power of the word, to make you hear, to make you feel—it is above all, to make you see. That—and no more, and it is every thing.

ಅದಕ್ಕೇ ಇಂಗ್ಲೀಷಿನಲ್ಲಿ ನೋಡುವ (see) ಪರಿಪೂರ್ಣನನ್ನು ದೃಷ್ಟಾರ (seen) ಎನ್ನುತ್ತಾರೆ, ನಮ್ಮಲ್ಲಿ ದೃಷ್ಟಿ ಇದ್ದ ಪರಿಪೂರ್ಣನನ್ನು ದೃಷ್ಟಾರಎನ್ನುವಂತೆ!

ಕತೆಯ ನಿರೂಪಕನಾದ ಮಾರ್ಲೋ ಈ ಕಾಂಗೋ ಗೊಂಡಾರಣ್ಯದಲ್ಲಿ ಈ ಕಪ್ಪು ಜನರು, ಆದಿಮಾನವರು, ಒಬ್ಬರನ್ನೊಬ್ಬರು ಕೊಂದು ತಿನ್ನುವ cannibal ಅಂದರೆ ನರಭಕ್ಷಕರು, ಈ ಬೆತ್ತಲೆ ಕುಣಿಯುವ ಬರ್ಬರರು ಎಷ್ಟು ಬಿಳಿಯರಂತೆ ಮಾನವರು, ಪ್ರೀತಿ ವಿಶ್ವಾಸಗಳುಳ್ಳವರು, ಎಲ್ಲಾ ಮಾನವರಂತೆ ಅಣ್ಣ ತಮ್ಮಂದಿರು ಎನ್ನುವದನ್ನ ಸಾಕ್ಷಾತ್ತಾಗಿ ಕಂಡುಕೊಳ್ಳುತ್ತಾನೆ.

ಸ್ಟೀಮರಿನಲ್ಲಿ ತನ್ನೊಡನೆ ಕೆಲಸಮಾಡುತ್ತಿದ್ದ ಈ ಕಾಂಗೋ ಕಾಡಿನ ಕಪ್ಪು ಮನುಷ್ಯನೊಬ್ಬ ಕಾಂಗೋಕಾಡಿನ ಕಪ್ಪು ಜನರ ಬೀಸಿದ ಈಟಿಯೊಂದಕ್ಕೆ ಬಲಿಯಾಗಿ ಸತ್ತು ಬೀಳುತ್ತಾನೆ. ಆಗ ಅವನ ರಕ್ತ ಮಾರ್ಲೋವಿನ ಬೂಟಿನೊಳಕ್ಕೆ ನುಗ್ಗಿ ಅವನ ಕಾಲು ಒದ್ದೆ ಮಾಡುತ್ತದೆ. ಅವನನ್ನ ನೋಡುತ್ತಾನೆ, ಆಗ ಅವನ ಬಿಳಿ ಕಣ್ಣುಗಳ ಪ್ರೀತಿಯ ಆರ್ತ ನೋಟ ಮಾರ್ಲೋವಿನ ಕರುಳನ್ನೇ ಕುಯ್ಯುವ ಆದ್ರತೆಯದಾಗಿ ಬಿಡುತ್ತದೆ:

> "We two whites stood over him, and his lustrous and inquiring glance enveloped us both. I declare it looked as though he would presently put to us some question in an understandable language; but he died without

uttering a sound, without moving a limb, without twitching a muscle. Only in the very last moment, as though in response to some sign we could not see, some whisper we could not hear, he frowned heavily, and that frown gave to his black death-mask an inconceivably sombre, brooding, and menacing expression. The lustre of inquiring glance faded swiftly into vacant glassiness.
I missed my late helmsman awfully,—I missed him even while his body was still lying in the pilot-house. Perhaps you will think it passing strange this regret for a savage who was no more account than a grain of sand in a black Sahara. Well, don't you see, he had done something, he had steered; for months I had him at my back—a help—an instrument. It was a kind of partnership. He steered for me —I had to look after him, I worried about his deficiencses, and thus a subtle bond had been created, of which I only became aware when it was suddenly broken. And the intimate profundity of that look he gave me when he received his hurt remains to this day in my memory—like a claim of distant kinship affirmed in a supreme moment.

ಆ ಕಪ್ಪು ಮನುಷ್ಯನ ಬಗ್ಗೆ ಮಾರ್ಲೋವಿನ ಅವ್ಯಾಜ ಪ್ರೇಮ ಎಂಥಾದ್ದು ! ಎಂಥಾ ಜನಾಂಗೀಯ ಬೇಧಗಳನ್ನೇ ಬೇಧಿಸಿ ಮಾನವೀತೆಯಲ್ಲಿ ಕೈಚಾಚಿ, ಕೈತಬ್ಬಿ ಒಂದಾಗುವ ಮಹಾನುಭಾವತೆಯದು !? ಇಲ್ಲಿನ ಅತ್ಯಂತ ಅಮೂಲ್ಯವಾದ ಪದಗಳನ್ನು ಗಮನಿಸಬೇಕು—Partnersip ಸಂಗಾತಿ ಸಂಬಂಧ, bond, ಬೆಸುಗೆ, kinship ರಕ್ತಸಂಬಂಧ, ರಕ್ತಬಂಧುತ್ವ. ಈ ರಕ್ತಬಂಧುತ್ವದ ಸಂಕೇತವಾಗಿಯೇ ಮಾರ್ಲೋವಿನ ಬೂಟಿನಲ್ಲಿ ಕಪ್ಪು ನಾವಿಕನ ರಕ್ತ ಹರಿದು, ಬಿಳಿಯ ಮಾರ್ಲೋವಿಗೂ ಕಪ್ಪು ನಾವಿಕನಿಗೂ ಮಾನವೀಯತೆಯ ರಕ್ತಸಂಬಂಧವೇರ್ಪಡುತ್ತದೆ. ಈ ಸಾವಿನ ಸಂದಿಗ್ಧ ಸಮಯ

ದಲ್ಲಿ, ಈ ಪರೀಕ್ಷಾಘಳಿಗೆಯಲ್ಲಿ, ಮಾನವತೆಯ ಸತ್ಯದರ್ಶನವಾಗುತ್ತದೆ. ಹೇಗೆ ಒಲವು ಎಲ್ಲಾ ಬಣ್ಣಗಳನ್ನೂ ಜನಾಂಗಗಳನ್ನೂ ಮೀರಬಲ್ಲ ಬಾಳಿನ ಮೂಲತತ್ತ್ವ ಎನ್ನುವುದರ ಅರಿವಾಗುತ್ತದೆ.

ಕರ್ಟ್ಸ್ ಕಾಂಗೋಕಾಡಿನ ಕಪ್ಪು ಜನಾಂಗವನ್ನು ಗೆದ್ದ, ಗುಲಾಮರನ್ನಾಗಿ ಮಾಡಿಕೊಂಡ ಧೂರ್ತ. ಆದರೆ ಅವನೂ ಆ ಕಾಡಿನ ಕರಾಳ ಗರ್ಭದಲ್ಲಿ ಪ್ರೇಮವನ್ನೂ ಕಂಡುಕೊಂಡ ಮಾನವನೂ ಹೌದು, ಏಕೆಂದರೆ ಆ ಕಾಡಿನ ಕಪ್ಪು ಸುಂದರಿ ಅವನನ್ನು ಮೆಚ್ಚಿದ ರಾಣಿಯಲ್ಲವೇ? ಅವನನ್ನು ಬಿಳಿಯರು ಹೊತ್ತುಕೊಂಡು ಹೋಗುತ್ತಾರೆಂದಾಗ ಭೂಮ್ಯಾಕಾಶಗಳನ್ನು ಒಂದುಮಾಡುವಂತೆ ನಿಂತು ಅಡ್ಡವಾಗುತ್ತಾಳಲ್ಲವೇ? ಅವನು ತನ್ನ ರಾಜ, ಅವನನ್ನು ಅವಳು ಬಿಡಲಾರಳು. ಅದೇ ರೀತಿಯಾಗಿ ಅವನು ಯುರೋಪಿನ ಬಿಳಿಯ ನಾಗರಿಕರಲ್ಲೂ ಒಬ್ಬ ಬಿಳಿಯ ಅಮಾಯಕಿಯ ಹೃದಯವನ್ನು ಗೆದ್ದ ಹೃದಯೇಶ್ವರನೂ ಹೌದು. ಅವನು ಸತ್ತ ಎರಡು ವರ್ಷದ ಮೇಲೂ ಆ ಪ್ರೇಯಸಿ ಅವನನ್ನು ಮದುವೆಯಾಗದಿದ್ದರೂ ಅವನ ವಿಧವೆಯಂತೆ ಕಪ್ಪನ್ನೇ ಉಟ್ಟು ಅವನ ಸಾವಿನ ದುಃಖವನ್ನು ಉಣ್ಣುತ್ತಿರುತ್ತಾಳೆ.

ಅಂದಾಗ ಕರ್ಟ್ಸ್‌ನು ಎಷ್ಟೇ ದಂತದ ಕ್ಲೈಬ್ಯಕ್ಕೆ ಸಿಕ್ಕು ಮಾನವೀಯತೆಯನ್ನು ಮಾರಿ ಧೂರ್ತನಾಗಿ ಕೊಲ್ಲುತ್ತಾ, ಗುಲಾಮರನ್ನು ಮಾಡಿಕೊಳ್ಳುತ್ತಾ, ಆ ಕಪ್ಪು ಜನರಂತೆ ಬರ್ಬರ ನಡವಳಿಕೆಗಳನ್ನು ಆಚರಿಸುತ್ತಾ ತಾನೂ ಬರ್ಬರನಾಗಿದ್ದರೂ, ಅವನು ಮಾನವನಾಗಿ ಸಂಪೂರ್ಣ ಸತ್ತಿಲ್ಲವೆನ್ನಬೇಕು. ಅವನು ಆ ಕಪ್ಪು ಕಾಡಿನ ಕರಾಳ ಹೃದಯಕ್ಕೆ ಇಣುಕಿನೋಡಿದವನಷ್ಟೇ ಅಲ್ಲ, ಅದರಲ್ಲಿನ ಭಯಾನಕತೆಯನ್ನು "The horror! The horror!" ಎರಡು ಸಾರಿ ಗುರ್ತಿಸಿ ಕೂಗಿಕೊಂಡು, ಆ ಭಯಾನಕತೆಯಲ್ಲಿ ಧುಮುಕಿದ ಧೀರನೂ ಹೌದು. ಮಾರ್ಲೋವಿನ ಮಾತಿನಲ್ಲೇ ಕರ್ಟ್ಸ್ ಆ ಧೀರ:

> True, he had made that last stride, he had stepped over the edge, while I had been permitted to draw back my hesitating foot. And perhaps in this is the whole difference; perhaps all the wisdom, and all truth, and all sincerity, are just compressed into that inappreciable moment of time in which we step over the threshold of the invisible. Perhaps! I like to think my summing-up would not have been a word of careless contempt. Better his cry—much better. It was an affirmation, a moral victory paid for

> by innumerable defeats, by abominable terrors, by abominable satisfactions. But it was a victory! That is why I have remained loyal to Kurtz to the last, and even beyond, when a long time after I heard once more, not his own voice, but the echo of his magnificent eloquence thrown to me from a soul as translucently pure as a cliff of crystal.

ಹೀಗೆ ಕರ್ಟ್ಸ್ ಕತೆಯ ನಾಯಕ. ಈ ನಾಯಕನ ಅನ್ವೇಷಣೆಯೇ ಮಾರ್ಲೋವಿನ ಯಾತ್ರೆಯಾಗಿಬಿಡುತ್ತದೆ. ಅವನು ಸಣ್ಣವನಿದ್ದಾಗ, ಆಫ್ರಿಕಾದ ಭೂಪಟ ನೋಡಿ, ಅಲ್ಲಿನ ಹಾವಿನಂತೆ ಹರಿದಿದ್ದ, ಸಮುದ್ರಕ್ಕೆ ಬಾಯಿಹಾಕಿ ಕಾಂಗೋ ಕಾಡಿನಲ್ಲಿ ಬಾಲವನ್ನು ಹರಿಬಿಟ್ಟಿದ್ದ ಕಾಂಗೋ ನದಿಯ ಮೇಲೆ ಬೆರಳಿಟ್ಟು, "ನಾನು ದೊಡ್ಡವನಾದಾಗ ಅಲ್ಲಿ ಹೋಗುತ್ತೇನೆ" ಎಂದು ಸಂಕಲ್ಪ ಮಾಡಿದ್ದ, ಆ ಮೇಲೆ ಬೆಳೆದವನಾಗಿ ಆ ಸಂಕಲ್ಪವನ್ನು ಈಡೇರಿಸಿಕೊಂಡಿದ್ದನಾದರೂ, ಅವನು ಕಂಡ ಹಾವು, ಕತ್ತಲ ಹೃದಯ, ಅಥವಾ ಹೃದಯದ ಕತ್ತಲು, Heart of Darkness, ಕರ್ಟ್ಸ್‌ನ ಕಣ್ಣಿನಿಂದಲೇ ಸರಿಯಾಗಿ ಕಂಡದ್ದು, ಅಥವಾ ಕಂಡುಕೊಂಡದ್ದು. ಒಂದೇ ಮಾತಿನಲ್ಲಿ ಹೇಳುವುದಾದರೆ ಕತ್ತಲೆಯ ಬಸಿರಿಗೆ' Heart of Darknessಗೆ ಧುಮಿಕಿ ಅದರ ಅಂತರ್ಯವನ್ನು, ಹೃದಯವನ್ನು 'ಕಂಡವ' ಕರ್ಟ್ಸ್: ಅದನ್ನು 'ಕಂಡುಕೊಂಡವ,' ಮಾರ್ಲೋ. ಕರ್ಟ್ಸ್‌ನ ಕಾಣ್ಕೆ—The horror! The horror! ಮಾರ್ಲೋವಿನ ಕಂಡುಕೊಳ್ಳುವಿಕೆ, Heart of Darkness, 'ಕತ್ತಲ ಹೃದಯ'.

ಕಾನ್ರಾಡಿನ 'ಹಾರ್ಟ್ ಆಫ್ ಡಾರ್ಕ್‌ನೆಸ್' ನಮಗೆ ನೀಡುವ ಕಪ್ಪಿನ ಕಾಣ್ಕೆ ಇದು: ಕಪ್ಪು ಎಷ್ಟು ಭಯಾನಕವೋ ಅಷ್ಟು ರೌದ್ರವೂ ಹೌದು; ಎಷ್ಟು ರೌದ್ರವೋ ಅಷ್ಟು ಸುಂದರವೂ ಹೌದು. ಆ ಮೌಲ್ಯ ಸಂಪಾದನೆ ಕಾಣುವ ಕಣ್ಣಲ್ಲಿದೆ, ಕಂಡುಕೊಳ್ಳುವ ಕಾಣ್ಕೆಯಲ್ಲಿದೆ.

ಕಷ್ಟದ ಜೀವನವೇ ಶಿಸ್ತನ್ನೂ ಕಲಿಸುವ ಶಾಲೆ

ಗಾಂಧೀಜಿ

ಯೌವನ

ಜೋಸೆಫ್ ಕಾನ್ರಾಡ್

ಮಾನವರು ಮತ್ತು ಸಮುದ್ರ ಪರಸ್ಪರ ಒಂದರೊಳಗೊಂದು ಹೆಣೆದುಕೊಂಡಿರುವ ಇಂಗ್ಲೆಂಡಿನಲ್ಲಿ ಮಾತ್ರ ನಡೆಯುವಂಥದು ಇದು. ಅನೇಕ ಜನರ ಜೀವನದಲ್ಲಿ ಸಮುದ್ರ ಪ್ರವೇಶಿಸಿರುತ್ತದೆ ಮತ್ತು ಜನರು ಮನರಂಜನೆ, ಪ್ರವಾಸ ಅಥವಾ ಉದರ ಪೋಷಣೆಗಾಗಿ ಸಮುದ್ರದ ಬಗೆಗೆ ಸ್ವಲ್ಪ ಅಥವಾ ಸರ್ವವನ್ನು ಅರಿತಿರುತ್ತಾರೆ.

ನಾವು ಮಹಾಗನಿ ಮೇಜಿನ ಮೇಲೆ ಮೊಳಕೈಯೂರಿ ವೃತ್ತಾಕಾರವಾಗಿ ಕುಳಿತಿದ್ದುದರಿಂದ ಮೇಜಿನ ಮೇಲಿದ್ದ ಸೀಸೆ, ಫ್ರೆಂಚ್ ಮದ್ಯವಾದ ಕ್ಲಾರೆಟ್ ತುಂಬಿದ ಗಳಾಸುಗಳು ಹಾಗೂ ನಮ್ಮ ಮುಖಗಳು ಅದರಲ್ಲಿ ಪ್ರತಿಫಲಿತವಾಗುತ್ತಿದ್ದವು.

ನೌಕಾಮಂಡಲಿಯ ನಿರ್ದೇಶಕ, ಲೆಕ್ಕಿಗ, ವಕೀಲ, ಮಾರ್ಲೋ ಮತ್ತು ನಾನು ಅಲ್ಲಿದ್ದೆವು. ನಿರ್ದೇಶಕ ಹಡಗಿನ ನಡೆಯನ್ನು ನಿಯಂತ್ರಿಸುವ ಕೆಲಸಗಾರನಾಗಿ ದುಡಿದಿದ್ದ ; ಲೆಕ್ಕಿಗ ಸಮುದ್ರದಲ್ಲಿ ನಾಲ್ಕು ವರ್ಷ ಸೇವೆ ಸಲ್ಲಿಸಿದ್ದ ; ವಕೀಲ-ಒಳ್ಳೆಯ ಸಂಪ್ರದಾಯವಾದಿ ಟೋರಿ ಪಕ್ಷದವನು, ಒಳ್ಳೆಯ ಕ್ರೈಸ್ತ ಮತಾಚಾರವಾದಿ, ವಯೋವೃದ್ಧರಲ್ಲಿ ಶ್ರೇಷ್ಠನಾದವನು, ಗೌರವಕ್ಕೆ ಆತ್ಮದಂತೆ ಇದ್ದವನು—ಟಪಾಲು ದೋಣಿಗಳನ್ನು ಕೊನೆಯಪಕ್ಷ ಎರಡು ಕೂವೆ ಮರಗಳ ಮೇಲೆ ಅಡ್ಡ ದಿಮ್ಮಿಗಳಿಗೆ ಪಟಗಳನ್ನು ಲಗತ್ತಿಸಿ, ಸುಂದರ ಮಾರುತ ನೌಕಾಯಾನವನ್ನು ಕೆಳಕ್ಕೆ ಮತ್ತು ಮೇಲಕ್ಕೆ ಕೊಂಡೊಯ್ದು ವೈಮರಿಸುವ ಮುಂಚೆ ಚೀನಾ ಸಮುದ್ರಕ್ಕೆ ಬಂದು ತಲುಪುವಂತೆ ಮಾಡುತ್ತಿದ್ದ ಹಿಂದಿನ ಸುಂದರ ದಿನಗಳಲ್ಲಿ ಪಿ ಮತ್ತು ಒ ನೌಕಾಯಾನ ಸಂಸ್ಥೆಯಲ್ಲಿ ಅಧಿಕಾರಿಯಾಗಿದ್ದವನು. ವ್ಯಾಪಾರೋದ್ಯಮದ ಚಾಕರಿಯಲ್ಲೇ ನಾವೆಲ್ಲ ಬದುಕನ್ನು ಆರಂಭಿಸಿದ್ದು. ನಮ್ಮ ಐವರ ಮಧ್ಯೆ ಸಮುದ್ರದ ನಂಟುಗಂಟುಗಳಂತೆ ವೃತ್ತಿಯ ಬಗ್ಗೆ ಸಹಾಸಕ್ತಿ

ಸಹಭಾಗಿತ್ವಗಳಿದ್ದವು. ನೌಕಾವಿಹಾರ, ಕಾವಲು ನೌಕಾಯಾನಗಳ ಬಗೆಗಿನ ಎಷ್ಟೇ ಪ್ರಮಾಣದ ಉತ್ಸಾಹವೂ ಸಹ ಈ ವೃತ್ತಿಯು ಉತ್ಸಾಹ ತೃಪ್ತಿಗಳನ್ನು ನೀಡುತ್ತಿರಲಿಲ್ಲ. ಏಕೆಂದರೆ ಒಂದು ಜೀವನದ ಬರೀ ಮನರಂಜನೆ ಮತ್ತೊಂದು ತನಗೆ ತಾನೇ ಜೀವನ ಆಗಿರುವುದರಿಂದ.

ಮಾರ್ಲೊ (ಕೊನೆಯ ಪಕ್ಷ ಅವನು ತನ್ನ ಹೆಸರನ್ನು ಉಚ್ಚರಿಸುವುದು ಹೀಗೆ ಎಂದು ಭಾವಿಸಿದ್ದೇನೆ) ಸಮುದ್ರ ಪ್ರಯಾಣದ ಕಥೆಯನ್ನು, ಅಲ್ಲ ಅಲ್ಲ, ಅದರ ವೃತ್ತಾಂತವನ್ನು ಹೇಳಿದ :—

'ಹೌದು, ನನಗೆ ಪೂರ್ವ ಸಮುದ್ರಗಳ ಕೊಂಚ ಪರಿಚಯ ಮಾತ್ರ ಇದೆ; ಆದರೆ ಆ ಕಡೆಗಿನ ನನ್ನ ಮೊದಲ ಪ್ರಯಾಣ ನನಗೆ ಚೆನ್ನಾಗಿ ನೆನಪಿದೆ ; ಮತ್ತೆ ಮತ್ತೆ ನೆನಸಿಕೊಳ್ಳುತ್ತೇನೆ. ನೀವು ಆ ಪ್ರಯಾಣಗಳನ್ನು, ವ್ಯವಸ್ಥೆಗೊಳಿಸಿದ ಜೀವನದ ಚಿತ್ರಗಳೆಂದೂ, ಅಸ್ತಿತ್ವಕ್ಕೆ ಸಂಕೇತಗಳಾಗಿ ನಿಲ್ಲಬಲ್ಲಂಥವುಗಳೆಂದೂ ತಿಳಿದಿದ್ದೀರಿ. ನೀವು ಹೋರಾಡುತ್ತೀರಿ, ದುಡಿಯುತ್ತೀರಿ, ಬೆವರು ಸುರಿಸುತ್ತೀರಿ, ಹೆಚ್ಚೂಕಮ್ಮಿ ನಿಮ್ಮನ್ನು ಕೊಂದುಕೊಳ್ಳುತ್ತೀರಿ, ಯಾವುದನ್ನೋ ಸಾಧಿಸಬೇಕೆಂಬ ಪ್ರಯತ್ನದಲ್ಲಿ—ಆದರೆ ಸಾಧಿಸಲು ಆಗುವುದಿಲ್ಲ. ನಿಮ್ಮ ತಪ್ಪಿನಿಂದ ಹಾಗಾಗುವುದಿಲ್ಲ. ನೀವು ಏನನ್ನೂ ಮಾಡಲಾರಿರಿ, ದೊಡ್ಡದು ಹಾಗಿರಲಿ ಸಣ್ಣದನ್ನೂ ಸಹ–ಪ್ರಪಂಚದಲ್ಲಿ ಒಂದು ಪದಾರ್ಥ ವನ್ನೂ ಸಹ—ವಯಸ್ಸಾದ ಸೇವಕಿಯೊಬ್ಬಳನ್ನು ಮದುವೆಯಾಗಲು ಆಗುವುದಿಲ್ಲ ಅಥವಾ ಆರುನೂರು ಟನ್ ತೂಕದ ಕಲ್ಲಿದ್ದಲಿನ ಸರಕನ್ನು ಅದರ ಗಂತವ್ಯಸ್ಥಾನವಾದ ಬಂದರಿಗೆ ಮುಟ್ಟಿಸಲು ಆಗುವುದಿಲ್ಲ.

'ಅದು ಒಟ್ಟಿನಲ್ಲಿ ಸ್ಮರಣಾರ್ಹ ಸಂಗತಿ. ಪೂರ್ವಕ್ಕೆ ಅದು ನನ್ನ ಮೊಟ್ಟಮೊದಲ ಪ್ರಯಾಣ ; ಅದೂ ದ್ವಿತೀಯ ಸಹಾಯಕ ನಾಯಕನಾಗಿ. ಅದು ನನ್ನ ನಾಯಕನ ಮೊಟ್ಟಮೊದಲ ಅಧಿಕಾರ ಚಲಾವಣೆಯೂ ಆಗಿತ್ತು. ಅದು ಸಕಾಲವೆಂದು ನೀವೆಲ್ಲ ಒಪ್ಪುತ್ತೀರಿ. ಅವನಿಗೆ ಅರುವತ್ತು ವರ್ಷ–ಕುಳ್ಳ ಮನುಷ್ಯ. ಅಗಲವಾದ ಆದರೆ ಕೊಂಚ ಬಾಗಿದ ಬೆನ್ನು, ಬಾಗಿದ ಭುಜಗಳು. ಒಂದು ಕಾಲು ಇನ್ನೊಂದು ಕಾಲಿಗಿಂತ ಕೊಂಚ ಡೊಂಕು. ಜಮೀನುಗಳಲ್ಲಿ ಕೆಲಸ ಮಾಡುವ ಜನಗಳಲ್ಲಿ ಆಗಾಗ್ಗೆ ಇಂಥ ವಿಲಕ್ಷಣ ವಕ್ರರೂಪಿನವರನ್ನು ನೀವು ನೋಡಬಹುದು. ಅವನದು ಅಡಕೊತ್ತಿನಂತಹ ಮುಖ— ಒಳಕ್ಕೆ ಹೋದ ಬಾಯಿಂದಾಗಿ ಮೂಗು ಮತ್ತು ಗಲ್ಲಗಳು ಒಂದುಗೂಡಲು ಪ್ರಯತ್ನಿಸುತ್ತಿದ್ದವು—ಕಲ್ಲಿದ್ದಲ ಧೂಳನ್ನು ಸಿಂಪಡಿಸಿದ ಹತ್ತಿ–ಉಣ್ಣೆಯ ಕಟ್ಟು ಪಟ್ಟಿಯಂತೆ ಬೂದುಬಣ್ಣದ ತುಪ್ಪಟಗೂದಲು ಗಲ್ಲದ ಮೇಲೆ ಇಣುಕುತ್ತಿತ್ತು. ಅವನ ವಯಸ್ಸಾದ ಮುಖದಲ್ಲಿ ಮಕ್ಕಳಿಗಿರುವಂತಹ ನೀಲಿ ಕಣ್ಣುಗಳಿದ್ದವು. ಅಪೂರ್ವ ಆಂತರಿಕ ಕೊಡುಗೆಯಾದ ಹೃದಯದ ಸರಳತೆ ಹಾಗೂ ಆತ್ಮದ ಸಚ್ಚಾರಿತ್ರ್ಯಗಳಿಂದ ಮಾತ್ರ ಕೆಲವು ಜನ ತಮ್ಮ ಕೊನೆದಿನಗಳಲ್ಲಿ ಅಂಥ ಸರಳ ಅಭಿವ್ಯಕ್ತಿಯನ್ನು ಹೊಂದಿರು ತ್ತಾರೆ. ನನ್ನನ್ನು ಆಯ್ಕೆ ಮಾಡಿಕೊಳ್ಳಲು ಯಾವುದು ಪ್ರಚೋದಿಸಿತೋ ನನಗೆ ಆಶ್ಚರ್ಯ. ಆಸ್ಟ್ರೇಲಿಯದ ಅತ್ಯುತ್ತಮ ವೇಗವರ್ಧಕದಲ್ಲಿ ಮೂರನೆಯ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದು ಹೊರಬಂದಿದ್ದುದರಿಂದ ಹಾಗೂ ಆ ಉತ್ತಮ ವೇಗವರ್ಧಕಗಳು

ತುಂಬ ಶ್ರೀಮಂತಿಕೆಯ ಮತ್ತು ತುಂಬ ಉಜ್ವಲತೆಯ ಪ್ರತೀಕವೆಂಬ ಪಕ್ಷಪಾತವನ್ನು ಹೊಂದಿದ್ದುದರಿಂದ ನನ್ನನ್ನು ಆಯ್ಕೆಮಾಡಿಕೊಂಡನೆಂದು ಕಾಣುತ್ತದೆ. ಅವನು ನನಗೆ ಹೇಳಿದ, "ಈ ಹಡಗಿನಲ್ಲಿ ನೀನು ಕೆಲಸ ಮಾಡಬೇಕಾಗಿದೆ". ನಾನು ಹೋದ ಎಲ್ಲ ಹಡಗುಗಳಲ್ಲೂ ನಾನು ಕೆಲಸ ಮಾಡಿದ್ದೇನೆ ಎಂದು ಹೇಳಿದೆ. "ಓಹ್, ಆದರೆ ಇದು ಬೇರೆ....ದೊಡ್ಡ ಹಡಗುಗಳಿಂದ ನೀವು ಹೊರಬಂದು....ಅಲ್ಲೇ ಇರುವುದು! ನೀನು ಕೆಲಸ ಮಾಡಬಲ್ಲೆ ಎಂದು ನಂಬುತ್ತೇನೆ. ನಾಳೆಯೇ ಕೆಲಸಕ್ಕೆ ಸೇರು."

'ಆ ಬೆಳಗ್ಗೆ ನಾನು ಕೆಲಸಕ್ಕೆ ಸೇರಿದೆ. ಮೂವತ್ತಮೂರು ವರ್ಷಗಳ ಹಿಂದೆ. ನನಗಾಗ ಕೇವಲ ಇಪ್ಪತ್ತು ವರ್ಷ. ಕಾಲ ಎಷ್ಟು ಬೇಗನೆ ಜಾರಿಬಿಡುತ್ತದೆ! ನನ್ನ ಜೀವನದ ಸಂತೋಷಕರ ಕ್ಷಣಗಳಲ್ಲಿ ಅದು ಒಂದು. ಯೋಚಿಸಿ, ಮೊದಲ ಬಾರಿಗೆ ದ್ವಿತೀಯ ಸಹಾಯಕ ನಾಯಕ—ನಿಜವಾಗಿಯೂ ಜವಾಬ್ದಾರಿಯುಳ್ಳ ಅಧಿಕಾರಿ! ಪ್ರಥಮ ಸಹಾಯಕ ನಾಯಕ ನನ್ನನ್ನು ತುಂಬ ಎಚ್ಚರಿಕೆಯಿಂದ ಅಳೆದು ನೋಡಿದ. ಅವನೂ ಸಹ ವಯಸ್ಸಾದ ಆಸಾಮಿ ಆದರೆ ಬೇರೊಂದು ಮುದ್ರೆಯುಳ್ಳವನು. ಅವನಿಗೆ ರೋಮನ್ ಜನರ ಮೂಗು. ಮಂಜುಗಡ್ಡೆಯಂತೆ ಬಿಳುಪಾದ ಉದ್ದನೆಯ ಗಡ್ಡ. ಅವನ ಹೆಸರು ಮಹೋನ್. ಆದರೆ ಮನ್ ಎಂದು ಉಚ್ಚರಿಸುವಂತೆ ಒತ್ತಾಯಿಸುತ್ತಿದ್ದ. ಒಳ್ಳೆಯ ವಂಶಕ್ಕೆ ಬಂಧುತ್ವಕ್ಕೆ ಸೇರಿದವನು. ಆದರೆ ಅವನ ಅದೃಷ್ಟದಲ್ಲಿ ಏನೋ ಐಬು. ಅವನು ಮೇಲೇರಲೇ ಇಲ್ಲ.

'ಅವನು ಅನೇಕ ವರ್ಷಗಳವರೆಗೆ ಸಮುದ್ರತೀರ ವಾಸಿಯಾಗಿದ್ದು ಆಮೇಲಿ ಒಳನಾಡಿನಲ್ಲಿದ್ದು ಕೊನೆಗೆ ವೆಸ್ಟ್ ಇಂಡಿಯನ್ ವ್ಯಾಪಾರೋದ್ಯಮದಲ್ಲಿದ್ದನು. ಭೂಶಿರದ ಸುತ್ತಮುತ್ತ ಎಂದೂ ಇರಲಿಲ್ಲ. ಅವನು ಜಾಳುಜಾಳಾದ ಬರವಣಿಗೆ ಬರೆಯ ಬಲ್ಲವನಾಗಿದ್ದ ಅಥವಾ ಬರೆಯುವ ಗೊಡವೆಗೇ ಹೋಗುತ್ತಿರಲಿಲ್ಲ. ನಿಸ್ಸಂದೇಹವಾಗಿ ಅವರಿಬ್ಬರೂ ಒಳ್ಳೆಯ ನಾವಿಕರು. ಇಬ್ಬರು ತಾತಂದಿರ ಮಧ್ಯೆ ಇರುವ ಸಣ್ಣ ಹುಡುಗ ನಂತೆ ಆ ಇಬ್ಬರು ವಯಸ್ಸಾದ ಆಸಾಮಿಗಳ ಮಧ್ಯೆ ನಾನಿದ್ದೇನೆ ಎಂದು ಭಾವಿಸುತ್ತಿದ್ದೆ.

'ಹಡಗೂ ಸಹ ಹಳೆಯದು. ಅದರ ಹೆಸರು ಜುಡಿಯಾ. ವಿಲಕ್ಷಣ ಹೆಸರಲ್ಲವೆ? ಅದು ವಿಲ್ಮರ್ ಅಥವಾ ವಿಲ್‌ಕಾಕ್ಸ್–ಒಟ್ಟಿನಲ್ಲಿ ಆ ಬಗೆಯ ಏನೋ ಒಂದು ಹೆಸರು– ಎಂಬುವವನಿಗೆ ಸೇರಿದ್ದು. ಅವನು ದಿವಾಳಿಯಾಗಿ, ಸತ್ತು ಇಪ್ಪತ್ತು ವರ್ಷಗಳಾದವು. ಆದ್ದರಿಂದ ಹೆಸರು ಅಷ್ಟು ಮುಖ್ಯವಾಗುವುದಿಲ್ಲ. ಅದನ್ನು ಷೇಡ್‌ವೆಲ್ ಹಡಗುಕಟ್ಟೆ ಯಲ್ಲಿ ಬಹಳ ದಿನಗಳಿಂದ ಕೊಳೆಹಾಕಲಾಗಿತ್ತು. ಅದರ ಸ್ಥಿತಿಯನ್ನು ನೀವು ಅರ್ಥ ಮಾಡಿಕೊಳ್ಳಬಹುದು. ಎಲ್ಲವೂ ಕಿಲುಬು ಹಿಡಿದು, ಧೂಳು ತುಂಬಿ, ಇಲ್ಲಣ ಕಟ್ಟಿ ಕೂಡಿತ್ತು—ಮಸಿಗಟ್ಟಿದ ಮೇಲ್ಭಾಗ, ಧೂಳುಮಯವಾದ ಅಟ್ಟಗಳು. ಅರಮನೆ ಯಲ್ಲಿದ್ದವನು ನಾಶವಾದ ಹರುಕುಮುರುಕು ಗುಡಿಸಿಲಿಗೆ ಬಂದು ವಾಸಮಾಡುವಂಥ ಸ್ಥಿತಿ ಎನ್ನಿಸಿತು ನನಗೆ. ವೈಮೇಲೆ ಒಂದು ಚೂರೂ ಹಿತ್ತಾಳೆ ಇರದ ಆ ಹಡಗು ನಾನೂರು ಟನ್ ತೂಕವಿತ್ತು—ಒಂದು ಹಳೆಯ ಅಚ್ಚುರಾಟಣ. ಕದಗಳಿಗೆ ಮರದ ಅಗುಣಿ ಬೀಗಗಳು. ಹಾಗೂ ಚಚ್ಚೌಕವಾದ ದೊಡ್ಡ ಹಿಂಭಾಗ. ಅದರ ಮೇಲೆ ದೊಡ್ಡ ಅಕ್ಷರಗಳಲ್ಲಿ ಬರೆದಿದ್ದ ಹಡಗಿನ ಹೆಸರು. ಅದರ ಕೆಳಗೆ, ಕೋಚಿ ಕೋಚಿಗೆ ಗೀಚಿದ

ಹಾಗೂ ಗಿಲೀಟು ಹೋದ ಒಂದು ಬಗೆಯ ಲಾಂಛನ. ಅದರ ಕೆಳಗೆ ಸೂಕ್ತಿ ; "ಮಾಡು ಅಥವಾ ಮಡಿ". ಅದು ನನ್ನನ್ನು ಬಹುವಾಗಿ ಆಕರ್ಷಿಸಿತು ಎಂಬ ನೆನಪು ಇನ್ನೂ ಹಸಿರಾಗಿದೆ. ಅದರಲ್ಲಿ ಭಾವಪರವಶತೆಯ ಸ್ಪರ್ಶವಿತ್ತು. ಹಳೆಯದನ್ನು ಪ್ರೀತಿಸುವಂತೆ ಮಾಡುವ ಏನೋ ಮೋಡಿ ಇತ್ತು. ನನ್ನ ಯೌವನಕ್ಕೆ ರುಚಿಸುವ ಏನೋ ಮಾಧುರ್ಯವಿತ್ತು! ನಿಲುಭಾರ--ಮರಳಿನ ನಿಲುಭಾರ—ದೊಡನೆ ಲಂಡನ್ ಬಿಟ್ಟೆವು—ಕಲ್ಲಿದ್ದಲಿನ ಸರಕು ತುಂಬಲು ಉತ್ತರದ ಬಂದರಿಗೆ ಹೋಗುವುದಕ್ಕಾಗಿ. ಅಲ್ಲಿಂದ ಬಾಂಕಾಕಿಗೆ. ಬಾಂಕಾಕ್! ಪುಲಕಿತನಾದೆ. ಸಮುದ್ರದ ಮೇಲೆ ಆರು ವರ್ಷಗಳ ಕಾಲ ಇದ್ದೆ. ತುಂಬ ಒಳ್ಳೆಯ ಸ್ಥಳಗಳಾದ, ಸುಂದರ ಸ್ಥಳಗಳಾದ ಮೆಲ್‌ಬೋರ್ನ್ ಮತ್ತು ಸಿಡ್ನಿಗಳನ್ನು ದಾರಿ ಮಧ್ಯದಲ್ಲಿ ನೋಡಿದ್ದೆ. ಆದರೆ ಬಾಂಕಾಕ್!

'ಹಡಗಿನ ಪಟಗಳೊಡನೆ ನಾವು ಥೇಮ್ಸ್‌ನಿಂದ ಹೊರಬಂದೆವು. ಉತ್ತರ ಸಮುದ್ರದ ಪೈಲಟ್ ಹಡಗು ಹತ್ತಿ ನಡೆಸತೊಡಗಿದ. ಅವನ ಹೆಸರು ಜರ್ಮಿನ್. ಹಡಗಿನ ಅಡಿಗೆಮನೆಯ ಒಲೆಯ ಮೇಲೆ ತನ್ನ ಕರವಸ್ತ್ರವನ್ನು ಒಣಗಿಸುತ್ತಾ ಇಡೀ ದಿನ ಹಿಂದಕ್ಕೂ ಮುಂದಕ್ಕೂ ಠಳಾಯಿಸಿದ. ಸಹಜವಾಗಿಯೇ ಅವನು ನಿದ್ದೆ ಮಾಡಲಿಲ್ಲ. ಒಂದು ಬಗೆಯ ವಿಷಾದ ಪ್ರವೃತ್ತಿಯ ಮನುಷ್ಯ. ಜೀವನದುದ್ದಕ್ಕೂ ತೊಂದರೆಯಲ್ಲೇ ಬಂದದ್ದರಿಂದಲೋ, ಎಂದೋ ಒಮ್ಮೆ ತೊಂದರೆ ಅನುಭವಿಸಿದ್ದರಿಂದಲೋ ಅಥವಾ ಮುಂಬರುವ ತೊಂದರೆಯನ್ನು ನಿರೀಕ್ಷಿಸಿಯೋ ಧಾರಾಕಾರವಾದ ಕಣ್ಣೀರು ಅವನ ಮೂಗಿನ ತುದಿಯಲ್ಲಿ ಮಿಂಚುತ್ತಿತ್ತು. ಏನಾದರೂ ಕೆಟ್ಟುಹೋಗಿ ಸಂಕಟದ ಸ್ಥಿತಿ ಉಂಟಾದ ಹೊರತೂ ಆತನಿಗೆ ಸಂತೋಷವಾಗುತ್ತಿರಲಿಲ್ಲ. ನನ್ನ ಯೌವನವನ್ನು, ವ್ಯಾವಹಾರಿಕ ಜ್ಞಾನವನ್ನು ಮತ್ತು ನೌಕಾಪ್ರಾವೀಣ್ಯವನ್ನು ಅನುಮಾನದಿಂದ ನೋಡುತ್ತಿದ್ದ. ನೂರು ಕ್ಷುಲ್ಲಕ ವಿಧಾನಗಳಿಂದ ಅದನ್ನು ತೋರಿಸಲು ಪ್ರಯತ್ನಿಸುತ್ತಿದ್ದ. ಅವನ ನಿಲುವು ಸರಿ ಎಂಬುದನ್ನು ಧಿಕ್ಕರಿಸುತ್ತೇನೆ. ಆಗ ನನಗೆ ಹೆಚ್ಚಿಗೆ ತಿಳಿದಿರಲಿಲ್ಲ ಎಂದು ಭಾವಿಸುತ್ತೇನೆ— ಈಗಲೂ ಹೆಚ್ಚಿಗೇನೂ ತಿಳಿದಿಲ್ಲ. ಆದರೆ ಇವತ್ತಿಗೂ ಆ ಜರ್ಮಿನ್ ಬಗೆಗೆ ದ್ವೇಷ ಹೊಗೆಯಾಡುತ್ತಿದೆ.

'ಒಂದು ವಾರ ಕಾಲ ನಿಧನಿಧಾನವಾಗಿ ಸಂಚರಿಸಿ ಯಾರ್‌ಮೌತ್ ರೋಡ್ಸ್ ವರೆಗೂ ಬಂದಿದ್ದೆವು. ಆಗ ಬಿರುಗಾಳಿಗೆ ಸಿಕ್ಕಿಬಿದ್ದೆವು—ಇಪ್ಪತ್ತೆರಡು ವರ್ಷಗಳ ಹಿಂದಿನ ಸುಪ್ರಸಿದ್ಧ ಅಕ್ಟೋಬರ್ ಬಿರುಗಾಳಿಗೆ. ನಾವು ಚುರುಕಾಗಿ ಚಲಿಸುತ್ತಿದ್ದೆವು. ಆದರೆ ಇದ್ದಕ್ಕಿದ್ದಂತೆ ಹಡಗಿನ ಕಟಕಟೆ ಲೊಟಲೊಟನೆ ಮುರಿದುಬಿದ್ದು, ಅಟ್ಟಗಳೆಲ್ಲ ನೀರಿನಿಂದ ತುಂಬಿಕೊಂಡವು ಎಂದರೆ ನಾವೆಂಥ ಗಂಡಾಂತರದ ಸ್ಥಿತಿಯಲ್ಲಿದ್ದೆವು ಎಂಬುದನ್ನು ಊಹಿಸಿಕೊಳ್ಳಿ. ಎರಡನೆಯ ರಾತ್ರಿ ನಿಲುಭಾರ ಹಡಗಿನ ಗಾಳಿಮರೆಯ ಮೂಲೆಯಲ್ಲಿಗೆ ಸ್ಥಳಾಂತರಗೊಂಡಿತ್ತು. ಅಷ್ಟು ಹೊತ್ತಿಗೆ ನಾವು, ದೋಣಿಯನ್ನು ನೀರಿಗಿಳಿಸಲು ಬಳಸುವ ಊರೆಗಳನ್ನಿಟ್ಟದ್ದಲ್ಲಿಗೆ ಎಸೆಯಲ್ಪಟ್ಟಿದ್ದೆವು. ಅದರಿಂದ ನಮಗೇನೂ ಅಪಾಯವಾಗದಿದ್ದರೂ ನಾವು ಗೋರುಗುದ್ದಲಿಗಳೊಡನೆ ಕೆಳಗೆ ಹೋಗಿ ಸರಿಪಡಿಸಬೇಕಾಗಿತ್ತು. ನಾವೆಲ್ಲ ಆ ವಿಶಾಲವಾದ ಸಾಮಾನು ತುಂಬುವ ಕುಳಿಯಲ್ಲಿ, ಕತ್ತಲಗವಿಯಲ್ಲಿ ಕಾಲಿಟ್ಟೆವು. ತೊಲೆಗಳಿಗೆ ಅಂಟಿಕೊಂಡ ಜಿಡ್ಡು ಮಿನುಗುತ್ತಿತ್ತು. ಮೇಲೆ ಬಿರುಗಾಳಿ

ಊಳಿಡುತ್ತಿತ್ತು. ಹಡಗು ಹುಚ್ಚನಂತೆ ಎದ್ದೆದ್ದು ಬೀಳುತ್ತಿತ್ತು. ಅಲ್ಲಿದ್ದ ನಾವೆಲ್ಲ— ಜರ್ಮನ್, ನಾಯಕ, ಪ್ರತಿಯೊಬ್ಬರೂ—ಕಾಲಿಡುವುದಕ್ಕಾಗದಿದ್ದರೂ ಸಮಾಧಿ ತೋಡುವ ಕೆಲಸದಲ್ಲಿ ಅಂದರೆ ಗಾಳಿ ಬೀಸುವ ದಿಕ್ಕಿಗೆ ಗೋರುಗುದ್ದಲಿಗಳಲ್ಲಿ ಶೀವದ ಮರಳನ್ನು ತುಂಬಿ ಎಸೆಯುವ ಪ್ರಯತ್ನದಲ್ಲಿ ತೊಡಗಿದ್ದೆವು. ಹಡಗಿನ ಪ್ರತಿಯೊಂದು ಹೊಯ್ದಾಟದಲ್ಲಿ ಜನಗಳು ಕೆಳಕ್ಕೆ ಬಗ್ಗಿ ಗೋರುಗುದ್ದಲಿಗಳಿಂದ ಮರಳನ್ನು ತುಂಬಿ ಕೊಂಡು ಎಸೆಯುತ್ತಿದ್ದುದನ್ನು ಆ ಮಂದ ಬೆಳಕಿನಲ್ಲಿ ಯಾರಾದರೂ ನೋಡಬಹು ದಾಗಿತ್ತು. ಹಡಗು ಸೇವಕರಲ್ಲೊಬ್ಬ (ಇಬ್ಬರಿದ್ದರು) ಗಂಡಾಂತರ ದೃಶ್ಯದ ವಿಲಕ್ಷಣತೆ ಯಿಂದ ಪ್ರಭಾವಗೊಂಡು ಹೃದಯ ಒಡೆದುಹೋಗುವಂತೆ ಅಳತೊಡಗಿದ. ನೆರಳ ಮರೆಯಲ್ಲೆಲ್ಲೋ ನಿಂತು ಅವನು ಬಿಕ್ಕಿಬಿಕ್ಕಿ ಅಳುವುದನ್ನು ನಾವು ಕೇಳಬಹುದಿತ್ತು.

'ಮೂರನೆಯ ದಿವಸ ಬಿರುಗಾಳಿ ನಿಂತಿತು. ಅಷ್ಟರಲ್ಲೆ ಉತ್ತರ ದೇಶದ ಕರ್ಷಕ ನೌಕೆಯೊಂದು ನಮ್ಮ ಸಹಾಯಕ್ಕೆ ಬಂದು, ನಮ್ಮನ್ನು ಎತ್ತಿಕೊಂಡು ಮುಂದೆ ಸಾಗಿತು. ಲಂಡನ್ನಿನಿಂದ ಟೈನ್‌ಗೆ ಬರಲು ಒಟ್ಟು ಹದಿನಾರು ದಿನಗಳನ್ನು ತೆಗೆದುಕೊಂಡೆವು! ಹಡಗುಕಟ್ಟೆಗೆ ಬಂದಾಗ ಸರಕು ತುಂಬುವ ಸರದಿ ನಮಗೆ ತಪ್ಪಿತು. ಬದಲಿಗೆ ಅವರು ನಮ್ಮನ್ನು ಅಂತಸ್ತು ಒಂದಕ್ಕೆ ಸೆಳೆದೊಯ್ದರು. ಅಲ್ಲಿ ಒಂದು ತಿಂಗಳ ಕಾಲ ಇದ್ದೆವು. ಶ್ರೀಮತಿ ಬಿಯರ್ಡ್ (ನಾಯಕನ ಹೆಸರು ಬಿಯರ್ಡ್) ವೃದ್ಧ ಪತಿಯನ್ನು ನೋಡಲು ಕಾಲ್‌ಚೆಸ್ಟರ್‌ನಿಂದ ಬಂದಿದ್ದಳು. ಹಡಗಿನಲ್ಲಿ ಉಳಿದುಕೊಂಡಳು. ಓಡಾಳುಗಳ ತಂಡ ಜಾಗ ಬಿಟ್ಟಿತ್ತು. ಕೇವಲ ಅಧಿಕಾರಿಗಳು ಮಾತ್ರ ಉಳಿದರು—ಜೊತೆಗೆ ಒಬ್ಬ ಸೇವಕ ಹಾಗೂ ಅಡುಗೆ ಪರಿಚಾರಕ. ಶ್ರೀಮತಿ ಬಿಯರ್ಡ್ ವಯಸ್ಸಾದವಳು—ಚಳಿಗಾಲದ ಸೇಬಿನಂತೆ ಮುಖವೆಲ್ಲ ಸುಕ್ಕುಗಟ್ಟಿತ್ತು. ಆದರೆ ಆಕೃತಿಯಲ್ಲಿ ಪ್ರಾಯದ ಹುಡುಗಿಯಂತೆ ಕಾಣುತ್ತಿದ್ದಳು. ಗುಂಡಿಯನ್ನು ಹೊಲಿಯುತ್ತಾ ಅವಳು ನನ್ನನ್ನೊಮ್ಮೆ ನೋಡಿದಳು. ಮಾತ್ರವಲ್ಲದೆ ನನ್ನ ಶರ್ಟುಗಳನ್ನು ರಿಪೇರಿ ಮಾಡಿಕೊಡುತ್ತೇನೆಂದು ಒತ್ತಾಯಿಸಿದಳು. ಹಡಗಿನಲ್ಲಿ ಬಡಾಯಿ ಕೊಚ್ಚುವ, ಮಾತಿನ ಚಕಮಕಿಯಲ್ಲಿ ಮಿಂಚುವ—ನಾನು ಹಿಂದೆ ನೋಡಿದ—ನಾಯಕರ ಪತ್ನಿಯರಿಗಿಂತ ಈಕೆಯ ವರ್ತನೆ ಪೂರ್ತಿ ಬೇರೆಯಾಗಿತ್ತು. ನನ್ನ ಶರ್ಟುಗಳನ್ನು ತಂದು ಕೊಟ್ಟಾಗ ಅವಳು ಹೇಳಿದಳು; "ಕಾಲುಚೀಲಗಳು? ಖಂಡಿತವಾಗಿಯೂ ಅವುಗಳ ದುರಸ್ತಿಯಾಗಬೇಕು. ಮತ್ತೆ ಜಾನನ—ನಾಯಕ ಬಿಯರ್ಡನ—ವಸ್ತುಗಳೆಲ್ಲ ಈಗ ಕ್ರಮಬದ್ಧವಾಗಿವೆ. ಏನಾದರೂ ಮಾಡುತ್ತಿದ್ದರೇ ನನಗೆ ಸಂತೋಷ". ವಯಸ್ಸಾದ ಆಕೆಗೆ ಒಳ್ಳೆಯದಾಗಲಿ. ಆಕೆ ಎಲ್ಲವನ್ನೂ ಪರಿ ಶೋಧಿಸಿ ಸಜ್ಜುಗೊಳಿಸಿದಳು. ಈ ಮಧ್ಯೆ ಪ್ರಥಮಬಾರಿಗೆ 'ಸಾರ್ಟರ್ ರಿಸಾರ್ಟಸ್' ಮತ್ತು ಬರ್ನಬಿಯ 'ರೈಡ್ ಟು ಕಿವಾ' ಕೃತಿಗಳನ್ನು ಓದಿದೆ. ಮೊದಲನೆಯದರ ಬಹು ಭಾಗ ಆಗ ನನಗೆ ಅರ್ಥವಾಗಲಿಲ್ಲ. ಆ ಸಂದರ್ಭದಲ್ಲಿ ತತ್ತ್ವಜ್ಞಾನಿಗಿಂತ ಯೋಧ ಶ್ರೇಷ್ಠನೆಂಬ ತೀರ್ಮಾನಕ್ಕೆ ನಾನು ಬಂದದ್ದು ನೆನಪಿಗೆ ಬರುತ್ತಿದೆ. ಜೀವನವೇ ಆ ಮೆಚ್ಚುಗೆಯನ್ನು ನನ್ನಲ್ಲಿ ದೃಢಪಡಿಸಿತ್ತು. ಒಬ್ಬನನ್ನು ಗಂಡಸು ಎನ್ನಬಹುದಿತ್ತು. ಇನ್ನೊಬ್ಬನನ್ನು ಕೊಂಚ ಹೆಚ್ಚು, ಇಲ್ಲ, ಕಡಮೆ ಎನ್ನಬಹುದಿತ್ತು. ಏನೇ ಆಗಲಿ ಅವರಿಬ್ಬರೂ ಸತ್ತಿದ್ದಾರೆ. ಶ್ರೀಮತಿ ಬಿಯರ್ಡ್ ಕೂಡ ಸತ್ತಿದ್ದಾಳೆ.... ಮತ್ತೆ ಯೌವನ,

ಸಾಮರ್ಥ್ಯ, ಪ್ರತಿಭೆ, ವಿಚಾರಗಳು, ಸಾಧನೆಗಳು, ಸರಳ ಹೃದಯಗಳು—ಎಲ್ಲವೂ ಸಾಯುತ್ತವೆ....ವ್ಯಥೆ ಪಡಬೇಕಾಗಿಲ್ಲ.

'ಕೊನೆಗೆ ಅವರು ನಮ್ಮನ್ನು ತುಂಬಿದರು. ಹಡಗು ಪಡೆಯನ್ನು ಹಡಗಿಗೆ ಹತ್ತಿಸಿದೆವು. ಎಂಟು ಜನ ನಾವಿಕರು ಹಾಗೂ ಇಬ್ಬರು ಸೇವಕರು. ಒಂದು ಸಂಜೆ ಹಡಗುಕಟ್ಟೆಯ ಬಾಗಿಲುಗಳಲ್ಲಿ ತೇಲುಬುರುಡೆಯನ್ನು ಸೆಳೆದು ತೇಲಿಬಿಟ್ಟು—ನಾಳೆ ಹೊತ್ತಾರೆಯೇ ಸಮುದ್ರಯಾನವನ್ನು ಪ್ರಾರಂಭಿಸುವ ಸುಂದರ ಪ್ರತೀಕ್ಷೆಯಲ್ಲಿ—ಹೊರ ಹೋಗಲು ಸಿದ್ಧ ಮಾಡಿಕೊಂಡೆವು. ಶ್ರೀಮತಿ ಬಿಯರ್ಡ್ ಕೊನೆಯ ರೈಲನ್ನು ಹಿಡಿದು ಮನೆ ಸೇರಬೇಕಿತ್ತು. ಹಡಗು ವೇಗಗೊಂಡಾಗ ನಾವು ಉಪಾಹಾರಕ್ಕೆ ಹೋದೆವು. ಭೋಜನ ಮುಗಿಯುವ ತನಕ ಉದ್ದಕ್ಕೂ ನಾವು ಮೌನವಾಗಿ ಕುಳಿತೆವು—ಮಹೋನ್, ವೃದ್ಧ ದಂಪತಿಗಳು ಮತ್ತು ನಾನು. ಎಲ್ಲರಿಗಿಂತ ಮೊದಲು ನಾನು ಊಟ ಮುಗಿಸಿ ಧೂಮಪಾನ ಮಾಡಲು ಅಲ್ಲಿಂದ ಜಾರಿಕೊಂಡೆ. ಹಡಗಿನ ಅಟ್ಟದಲ್ಲಿ—ಹಡಗಿನ ಹಿಂಭಾಗದ ಎದುರೇ—ನನ್ನ ಕೋಣೆ ಇದ್ದದ್ದು. ಉಬ್ಬರಗೊಂಡ ಸಮುದ್ರ. ತೂರುಹನಿ ಯೊಡನೆ ಬೀಸುವ ತಾಜಾ ಗಾಳಿ. ಹಡಗುಕಟ್ಟೆಯ ಎರಡು ಬಾಗಿಲುಗಳನ್ನು ತೆರೆಯ ಲಾಯಿತು....ಆ ಕತ್ತಲೆಯಲ್ಲಿ ಉಜ್ವಲವಾಗಿ ಉರಿಯುವ ದೀಪಗಳೊಂದಿಗೆ ಒಳಕ್ಕೂ ಹೊರಕ್ಕೂ ಓಡಾಡುವ ಆವಿ ಮತ್ತು ಕಲ್ಲಿದ್ದಲ ಕೆಲಸಗಾರರು. ದೊಡ್ಡದಾಗಿ ಅಪ್ಪಳಿಸಿ ತಿರು ಗುವ ಚಾಲಕ ದಂಡಗಳು, ಎತ್ತು ಯಂತ್ರಗಳ ಕರಕರ ಗಡಗಡ ಸದ್ದು ಮತ್ತು ಹಡಗಿನ ಇಳಿದಾಣದ ತುದಿಗಳಲ್ಲಿ ಬಿರುಸು ಕೂಗುಗಳ ಕೋಲಾಹಲ. ಮೇಲಕ್ಕೆ ಜಾರಿ ಹೋಗುವ ತಲೆದೀಪಗಳ ಹಾಗೂ ಕೆಳಕ್ಕೆ ಜಾರಿ ಹೋಗುವ ಹಸಿರು ದೀಪಗಳ ಮೆರವಣಿಗೆಯನ್ನು ಕತ್ತಲಿನಲ್ಲಿ ನಾನು ನೋಡುತ್ತಾ ಇದ್ದೆ. ಆಗ ಇದ್ದಕ್ಕಿದ್ದಂತೆ ಕೆಂಪು ಪ್ರಭೆ ನನ್ನತ್ತ ಫಳಫಳಗುಟ್ಟಿತು. ಕೂಡಲೇ ಮರೆಯಾಗಿ, ಮತ್ತೆ ಕಣ್ಣಿಗೆ ಕಾಣಿಸಿಕೊಂಡು ಮಿನುಗ ತೊಡಗಿತು. ಆವಿ ಹಡಗಿನ ಮುಂಭಾಗದ ತುದಿ ಭಯಾನಕವಾಗಿ ಕಾಣಿಸಿಕೊಂಡು ಹತ್ತಿರ ಬಂದಿತು. ಕೂಡಲೇ ಕೆಳಗಿನ ಕೋಣೆಯತ್ತ ಕೂಗಿದೆ, "ಮೇಲೆ ಬನ್ನಿ, ಬೇಗ". ಆಗ ದೂರದ ಕತ್ತಲಿನಿಂದ ಬೆಚ್ಚಿ ದನಿಯೊಂದು ಕೇಳಿಸಿತು, "ನಿಲ್ಲಿಸಿ, ಸಾರ್". ಬೆಲ್ಲು ಸದ್ದು ಮಾಡಿತು. ಇನ್ನೊಂದು ದನಿ ಎಚ್ಚರಿಕೆ ನೀಡುವಂತೆ ಕೂಗಿಕೊಂಡಿತು, "ನಾವು ನೇರವಾಗಿ ಆ ಹಡಗಿಗೇ ಢಿಕ್ಕಿ ಹೊಡೆಯುವಂತೆ ಹೋಗುತ್ತಿದ್ದೇವೆ, ಸಾರ್" ಇದಕ್ಕೆ ಸಿಡುಕಿನ ಉತ್ತರ ಬಂತು. "ಆಯಿತು". ಮುಂದಿನದು ರಭಸದ ಹೊಡೆತ. ಆವಿ ಹಡಗು ತನ್ನ ಮುಂಭಾಗದ ಮೂತಿಯ ಮುಮ್ಮೈದಿಣ್ಣೆಯಿಂದ ನಮ್ಮ ಹಡಗಿನ ಮುಂಭಾಗದ ಕೂವೆಮರ ಹಗ್ಗಗಳಿಂದ ಸಜ್ಜಾದ ಭಾಗಕ್ಕೆ ಢಿಕ್ಕಿ ಹೊಡೆಯಿತು. ಒಂದು ಕ್ಷಣದವರೆಗೆ ಓಡಾಟ, ಚೀರಾಟ, ಗೊಂದಲ. ಆವಿ ಭೋರ್ಗರೆಯಿತು. ಆಗ ಯಾರೋ ಹೇಳಿದ್ದು ಕೇಳಿಸಿತು, "ಎಲ್ಲ ಸರಿಹೋಯಿತು, ಸಾರ್".... "ನೀವು ಕ್ಷೇಮವಾಗಿದ್ದೀರಾ?" —ಸಿಡುಕಿನ ಕಂಠ ಕೇಳಿತು. ಹಾನಿಯನ್ನು ಅಂದಾಜು ಮಾಡಲು ಮುಂದಕ್ಕೆ ನೆಗೆದು ಪ್ರತಿಯಾಗಿ ಕೂಗಿ ಹೇಳಿದೆ, "ಹಾಗೆಂದು ಭಾವಿಸುತ್ತೇನೆ" "ಕೊಂಚ ಹಿಂದಕ್ಕೆ"— ಸಿಡುಕಿನ ಕಂಠ ಹೇಳಿತು. ಬೆಲ್ಲು ಸದ್ದು ಮಾಡಿತು. "ಎಂಥ ಆವಿ ಹಡಗು ಅದು?" —ಮಹೋನ್ ಕಿರುಲಿದ. ಅಷ್ಟು ಹೊತ್ತಿಗೆ ನಿರ್ದಿಷ್ಟ ಚಲನೆಯಲ್ಲಿ ಕೊಂಚ ದೂರ

ಹೋಗಿದ್ದ ಅದು ನಮ್ಮ ಭಾಗಕ್ಕೆ ದೊಡ್ಡ ನೆರಳಾಗಿ ಕಂಡಿತೇ ವಿನಾ ಬೇರೇನೂ ಅನ್ನಿಸಲಿಲ್ಲ. ಅವರು ನಮ್ಮತ್ತ ಕೂಗಿ ಹೇಳಿದರು ಒಂದು ಹೆಸರನ್ನು, ಹೆಂಗಸಿನ ಹೆಸರನ್ನು–ಮಿರಾಂಡಾ ಅಂತಲೋ ಅಥವಾ ಮೆಲಿಸ್ಸಾ ಅಂತಲೋ–ಅಂತೂ ಆ ಬಗೆಯ ಯಾವುದೋ ಒಂದು ಹೆಸರು. "ಇದರ ಅರ್ಥ ಇನ್ನೊಂದು ತಿಂಗಳು ಈ ಗೂಡಿನಲ್ಲಿ ನರಳೋದು"–ಎಂದು ಮಹೋನ್ ನನಗೆ ಹೇಳಿದ, ನಾವು ದೀಪ ಹಿಡಿದುಕೊಂಡು ಪುಡಿಪುಡಿಯಾದ ಕಟಕಟೆಯ ಹಲಗೆಗಳನ್ನೂ ಕಿತ್ತು ಹೋದ ಕಟ್ಟುಗಳನ್ನೂ ಇಣುಕಿ ನೋಡುವಾಗ. "ಆದರೆ ನಾಯಕ ಇಲ್ಲವಲ್ಲ, ಎಲ್ಲಿ?"

'ಅಷ್ಟು ಹೊತ್ತು ಅವನನ್ನು ನೋಡಲೂ ಇಲ್ಲ, ದನಿಯನ್ನು ಕೇಳಲೂ ಇಲ್ಲ. ನೋಡುವುದಕ್ಕೆಂದು ಹಡಗಿನ ಹಿಂಭಾಗಕ್ಕೆ ಹೋದೆವು. ಗೋಳು ದನಿಯೊಂದು ಹಡಗು ಕಟ್ಟೆಯ ನಟ್ಟನಡುವಿನಿಂದಲೋ ಏನೋ ತೆವಳಿಕೊಂಡು ಬಂತು: "ಜುಡಿಯಾ, ಅಹೋ!"....ಆತ ಅಲ್ಲಿಗೆ ಹೇಗೆ ಹೋದ? "ಹೋಯ್"–ನಾವು ಕೂಗು ಹಾಕಿದೆವು. "ಹುಟ್ಟುಗಳಿಲ್ಲದೆ ದೋಣಿಯಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದೇನೆ"–ಗೋಳುಗರೆದ. ತಡವಾಗಿ ಬಂದ ಅಂಬಿಗ ಸಹಾಯ ಹಸ್ತ ನೀಡಿದ. ಅವನ ಜೊತೆಗೆ ಮಹೋನ್ ಕೂಡ ಅರ್ಧ ಸಹಾಯ ನೀಡಿ ಹೊರಕ್ಕೆಳೆಯಲು ಪ್ರಯತ್ನಿಸಿದ. ಆದರೆ ಏಣಿಯನ್ನು ಹತ್ತಿ ಮೊದಲು ಬಂದವರು ಶ್ರೀಮತಿ ಬಿಯರ್ಡ್. ಅವರಿಬ್ಬರೂ ಕೊರೆಯುವ ಜಡಿಮಳೆಯಲ್ಲಿ ಒಂದು ಗಂಟೆಯ ಕಾಲ ಹಡಗು ಕಟ್ಟೆಯ ಮೇಲೆ ತೇಲುತ್ತಾ ಇದ್ದರು. ನನ್ನ ಜೀವನದಲ್ಲಿ ಎಂದೂ ಅಷ್ಟು ಆಶ್ಚರ್ಯಪಟ್ಟಿರಲಿಲ್ಲ. "ಮೇಲೆ ಬನ್ನಿ" ಎಂದು ಕೂಗಿದ ನನ್ನ ಮಾತನ್ನು ಕೇಳಿಸಿಕೊಂಡನೆಂದು ಹಾಗೂ ವಾಸ್ತವ ಸಂಗತಿಯನ್ನು ಬಹುಶಃ ಅರ್ಥ ಮಾಡಿಕೊಂಡನೆಂದು ಕಾಣುತ್ತದೆ. ಕೂಡಲೇ ಹೆಂಡತಿಯನ್ನು ಬಾಚಿ ತಬ್ಬಿ ಕೊಂಡು, ಅಷ್ಟದ ಉದ್ದಕ್ಕೂ ಅಡ್ಡಕ್ಕೂ ಅಡ್ಡಾಡಿ ಕೊನೆಗೆ ಏಣಿಗೆ ಹತ್ತಿಕೊಂಡಂತಿದ್ದ ನಮ್ಮ ದೋಣಿಯ ಒಳಕ್ಕೆ ಜಿಗಿದರು. ಅರುವತ್ತು ತುಂಬಿದ ಆತನ ಸಾಹಸ ಮೆಚ್ಚು ವಂಥದು. ತಾನು ಕೈಹಿಡಿದ ತನ್ನ ಜೀವನ ಸಂಗಾತಿಯನ್ನು–ವಯಸ್ಸಾದವಳನ್ನು–ಆ ಮುದುಕ ವೀರೋಚಿತವಾಗಿ ತನ್ನ ತೋಳಿನ ಮಧ್ಯೆ ಕಾಪಾಡಿದ ಸಾಹಸವನ್ನು ಸುಮ್ಮನೆ ಊಹಿಸಿಕೊಳ್ಳಿ. ಹುಟ್ಟುಹಾಕುವವನು ಕುಳಿತುಕೊಳ್ಳುವ ಅಡ್ಡಮಣೆಯ ಮೇಲೆ ಅವಳನ್ನು ಕುಳ್ಳಿರಿಸಿ, ತಾನು ಹಡಗಿನ ಮೇಲಕ್ಕೆ ಹಸ್ತಬೇಕೆನ್ನಿಸುವಷ್ಟರಲ್ಲಿ ಹಡಗಿನ ಮುಂಭಾಗದ ಮೂತಿಗೆ ಕಟ್ಟಿದ್ದ ಹಗ್ಗ ಹೇಗೋ ತೇಲಿಕೊಂಡು ಬಂದಾಗ ಅವರಿಬ್ಬರೂ ಜೊತೆಗೂಡಿಯೇ ದೂರ ಹೋದರು. ಸಹಜವಾಗಿ ಆ ಗೊಂದಲದಲ್ಲಿ ಅವನು ಕೂಗಿಕೊಳ್ಳುವುದು ನಮಗೆ ಕೇಳಿಸಿಲ್ಲ. ಅವನು ಮುಖ ಹುಳ್ಳಗೆ ಮಾಡಿ ಕೊಂಡಿದ್ದ. ಆದರೆ ಅವಳು ಹಿಗ್ಗಿನಿಂದ ಹೇಳಿದಳು, "ನನಗೆ ರೈಲು ತಪ್ಪಿದರೂ ಪರವಾ ಇಲ್ಲ ಎನ್ನಿಸುತ್ತದೆ ಅಲ್ಲವೆ?" "ಇಲ್ಲ, ಜೆನ್ನಿ–ನೀನು ಕೆಳಗೆ ಹೋಗಿ ಮೈ ಬೆಚ್ಚಗೆ ಮಾಡಿಕೋ"–ಅವನು ಸಿಟ್ಟಿನಿಂದ ಗುರುಗುಟ್ಟಿದ. ಬಳಿಕ ನಮಗೆ ಹೇಳಿದ. "ನಾವಿಕ ಹೆಂಡತಿಯೊಡನೆ ಇರುವುದು ತಪ್ಪು ಎಂದು ನನ್ನ ಭಾವನೆ. ನಾನು ಅಲ್ಲಿದ್ದೆ, ಹಡಗಿನ ಹೊರಗೆ. ಒಳ್ಳೆಯದಾಯಿತು, ಯಾವುದೇ ಹಾನಿಯಾಗಲಿಲ್ಲ ಈ ಸಾರಿ. ಆ ಆವಿ–ಹಡಗಿನ ಮೂರ್ಖ ಏನನ್ನು ಧ್ವಂಸ ಮಾಡಿದ್ದಾನೋ, ಹೋಗಿ ನೋಡೋಣ ಬನ್ನಿ".

'ಹೆಚ್ಚಿಗೇನೂ ಹಾನಿಯಾಗಿರಲಿಲ್ಲ. ಆದರೆ ಅದರಿಂದ ಮೂರು ವಾರಗಳಷ್ಟು ಕಾಲ ತಡವಾಯಿತು. ಹೊರಡುವ ವೇಳೆಗೆ ಬಿಯರ್ಡ್ ನಿಯೋಗಿಗಳೊಡನೆ ಮಾತುಕತೆಯಲ್ಲಿ ಮುಳುಗಿದ್ದುದರಿಂದ, ಶ್ರೀಮತಿ ಬಿಯರ್ಡಳ ಸಾಮಾನು ಸರಂಜಾಮನ್ನು ನಾನೇ ರೈಲು ನಿಲ್ದಾಣಕ್ಕೆ ತೆಗೆದುಕೊಂಡು ಹೋದೆ. ಮೂರನೆಯ ದರ್ಜೆ ಡಬ್ಬಿಯಲ್ಲಿ ನಿರಾತಂಕವಾಗಿ ಸಾಗುವಂತೆ ಆಕೆಗೆ ಜಾಗ ಮಾಡಿಕೊಟ್ಟೆ. ಅವಳು ಕಿಟಕಿಯ ಕದವನ್ನು ಓರೆ ಮಾಡಿ ಹೇಳಿದಳು, "ನೀನು ತುಂಬಾ ಒಳ್ಳೆಯ ಯುವಕ. ಜಾನ್–ನಾಯಕ ಬಿಯರ್ಡ್–ರಾತ್ರಿ ಹೊತ್ತು ಕೊರಳಿಗೆ ಮಫ್ಲರನ್ನು ಸುತ್ತಿಕೊಂಡಿಲ್ಲದಿರುವುದನ್ನು ನೀನು ಕಂಡರೆ, ಕುತ್ತಿಗೆಯನ್ನು ಚೆನ್ನಾಗಿ ಮುಚ್ಚಿಕೊಳ್ಳಬೇಕೆಂದು ನಾನು ಹೇಳಿರುವುದನ್ನು ನೆನಪಿಸು. "ನಿಜವಾಗಿಯೂ ಹೇಳುತ್ತೇನೆ, ಅಮ್ಮ"–ನಾನು ಹೇಳಿದೆ. "ನೀನು ತುಂಬಾ ಒಳ್ಳೆಯ ಯುವಕ. ನೀನು ಜಾನನಿಗೆ–ನಿಮ್ಮ ನಾಯಕನಿಗೆ–ಎಷ್ಟೊಂದು ಗಮನಕೊಡುತ್ತೀಯೆ ಎಂಬುವನ್ನು ನಾನು ಗಮನಿಸಿದ್ದೇನೆ". ರೈಲು ಇದ್ದಕ್ಕಿದ್ದಂತೆ ಹೊರಟುಬಿಟ್ಟಿತು. ನಾನು ಟೋಪಿಯನ್ನು ತೆಗೆದು ಆಕೆಗೆ ಗೌರವ ಸೂಚಿಸಿದೆ. ಆಕೆಯನ್ನು ಮತ್ತೆ ನಾನು ನೋಡಲಿಲ್ಲ........ಮುಂದಕ್ಕೆ ಸೀಸೆ ಜರುಗಿಸು.

'ಮಾರನೆಯ ದಿವಸ ನಾವು ಸಮುದ್ರಕ್ಕಿಳಿದೆವು. ನಾವು ಬಾಂಕಾಕಿಗೆಂದು ಲಂಡನ್ನಿನಿಂದ ಹೊರಟು ಬಂದು ಆಗಲೇ ಮೂರು ತಿಂಗಳು ಕಳೆದುಹೋಗಿದ್ದವು. ಅಬ್ಬಬ್ಬ ಎಂದರೆ ಹದಿನೈದು ದಿನಗಳು ಆಗಬಹುದು ಎಂದು ನಿರೀಕ್ಷಿಸಿದ್ದೆವು.

'ಜನವರಿಯಾದುದರಿಂದ ಹವಾಗುಣ ತುಂಬ ಸುಂದರವಾಗಿತ್ತು. ಬೇಸಿಗೆ ಕಾಲದ ಹವಾಗುಣದ ಸೊಗಸಿಗಿಂತ ಬಿಸಿಲಿನಿಂದ ಕೂಡಿದ ಚಳಿಗಾಲದ ಸುಂದರ ಹವಾಗುಣ ಹೆಚ್ಚು ಸೊಗಸಿನದು. ಏಕೆಂದರೆ ಅದು ಅನಿರೀಕ್ಷಿತ, ಸಂಕ್ಷಿಪ್ತ. ದೀರ್ಘಕಾಲ ಇರಲು ಸಾಧ್ಯವಿಲ್ಲ, ಸಾಧ್ಯವಾಗಲಾರದು ಎಂಬುದು ನಿಮಗೆ ಗೊತ್ತು. ಅದು ಗಾಳಿಗುದುರುವ ಹಣ್ಣು ಇದ್ದ ಹಾಗೆ; ದೈವ ಸಂಕಲ್ಪ ಇದ್ದ ಹಾಗೆ; ಅನಿರೀಕ್ಷಿತ ಅದೃಷ್ಟ ಇದ್ದ ಹಾಗೆ.

'ಉತ್ತರ ಸಮುದ್ರ, ಕಡಲ್ಗಾಲುವೆಗಳನ್ನು ಹಾದು, ಲಿಜಾರ್ಡ್ಸ್ ಇನ್ನೂ ಮುನ್ನೂರು ಮೈಲಿಗಳಿರುವಾಗಲೇ ಸುಂದರ ಹವಾಗುಣ ಕೊನೆಗೊಂಡಿತು. ಆಗ ಗಾಳಿ ನೈರುತ್ಯಾಭಿಮುಖವಾಗಿ ಹೊರಟು ಹುರಿಗೊಳ್ಳತೊಡಗಿತು. ಎರಡು ದಿನಗಳಲ್ಲಿ ಅದು ಬಿರುಗಾಳಿಯೆಬ್ಬಿಸಿತು. ಜುಡಿಯಾ ಅಟ್ಲಾಂಟಿಕ್ ಸಾಗರದ ಮೇಲೆ ಮೋಂಬತ್ತಿಯ ಪೆಟ್ಟಿಗೆಯಂತೆ ಬಿದ್ದೆದ್ದು ಹೊರಳಾಡತೊಡಗಿತು. ಅದು ಪ್ರತಿದಿನವೂ ಬೀಸಿತು–ರೊಚ್ಚಿನಿಂದ, ಬಿಡುವು ಕೊಡದೆ, ಕರುಣೆಯಿಲ್ಲದೆ, ವಿರಾಮ ನೀಡದೆ. ನೊರೆತೆರೆಯ ತೊರೆ ನಮ್ಮತ್ತ ಅಪ್ಪಳಿಸುವುದನ್ನು ಬಿಟ್ಟರೆ ಪ್ರಪಂಚ ನಮ್ಮ ಪಾಲಿಗೆ ಸೊನ್ನೆಯಾಗಿತ್ತು—ನಮ್ಮ ಕೈಯಿಂದ ಮುಟ್ಟಬಹುದಂತಿರುವ ಕೊಳಕು ಹೊಗೆಯ ಸಾರಣೆಯುಳ್ಳ ಮೋಡಗಳನ್ನು, ನಮ್ಮನ್ನು ಸುತ್ತುವರಿದ ಬಿರುಗಾಳಿಯ ಬಾನಿನಲ್ಲಿ ಗಾಳಿಯಷ್ಟೇ ಎಗರಿ ಬೀಳುವ ತುಂತುರು ಹನಿಗಳನ್ನು ಬಿಟ್ಟು. ಪ್ರತಿ ದಿನ ಪ್ರತಿ ರಾತ್ರಿ ಗಾಳಿಯ ಊಳು, ಸಮುದ್ರದ ತುಮುಲ, ಅಟ್ಟದ ಮೇಲೆ ಸುರಿಯುವ ನೀರಿನ ಗದ್ದಲ—ಇವುಗಳನ್ನುಳಿದು ಹಡಗಿನ ಸುತ್ತಮುತ್ತ ಉಳಿದದ್ದೇನೂ ಇರಲಿಲ್ಲ. ಹಡಗಿಗೂ ಬಿಡುವಿರಲಿಲ್ಲ; ನಮಗೂ

ಸಹ. ಅದು ಮೇಲಕ್ಕೆ ಎಗರಿತು, ಕೆಳಕ್ಕೆ ಉರುಳಿತು, ತಲೆಯ ಮೇಲೆ ನಿಂತಿತು, ಹುಂಡಿಯಮೇಲೆ ಕುಂತಿತು, ಉರುಳಿ ಹೊರಳಾಡಿತು, ಸರಳಿ ಚೀರಾಡಿತು. ನಾವು ಹಡಗಿನ ಅಟ್ಟದ ಮೇಲಿದ್ದರೆ ಕೈಯಿಂದ ಹಿಡಿದುಕೊಂಡು, ಕೆಳಗಿದ್ದರೆ ಇರುಕಲಿಗೆ ಅಂಟಿಕೊಂಡು ಇರಬೇಕಾಯಿತು—ನಿರಂತರವಾದ ದೈಹಿಕ ಪ್ರಯತ್ನದಿಂದ ಮತ್ತು ಮಾನಸಿಕ ಗೊಂದಲದಿಂದ.

'ಒಂದು ರಾತ್ರಿ ನನ್ನ ಮಲಗು ಮಂಚದ ಬಳಿಯಿದ್ದ ಕಿಟಕಿಯ ಮೂಲಕ ಮಹೋನ್ ಮಾತನಾಡಿದ. ಅದು ನನ್ನ ಹಾಸಿಗೆಗೆ ನೇರವಾಗಿಯೇ ತೆರೆದುಕೊಂಡಿತ್ತು. ವರ್ಷಗಟ್ಟಲೆಯಿಂದ ಮಲಗಿಯೇ ಇರಲಿಲ್ಲ ಎಂಬ ಭಾವದಿಂದ, ಪ್ರಯತ್ನಿಸಿದರೂ ನಿದ್ರಿಸಲಾರೆ ಎಂಬ ಭಾವದಿಂದ ಷೂಗಳನ್ನು ಕಳಚದೆಯೇ ಕಣ್ಣು ಮುಚ್ಚದೆ ಬಿದ್ದುಕೊಂಡಿದ್ದೆ. ಅವನು ಉದ್ವೇಗದಿಂದ ಹೇಳಿದ—"ಮಾರ್ಲೊ, ಇಲ್ಲಿ ನಿನ್ನ ಬಳಿ ಆಳ ನೋಡುವ ಕೋಲು ಇದೆಯೆ? ಪಂಪುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಓ ದೇವರೇ, ಇದು ಮಕ್ಕಳಾಟವಲ್ಲ."

'ನಾನು ಅವನಿಗೆ ಆಳ ನೋಡುವ ಕೋಲು ಕೊಟ್ಟು ಮತ್ತೆ ಕಾಲುಚಾಚಿ ಮಲಗಿದೆ—ಏನೇನೋ ಯೋಚಿಸಲು ಪ್ರಯತ್ನಿಸುತ್ತಾ. ಆದರೆ ಪಂಪುಗಳನ್ನುಳಿದು ಬೇರೆ ಏನನ್ನೂ ಯೋಚಿಸಲಾಗಲಿಲ್ಲ. ನಾನು ಹಡಗಿನ ಅಟ್ಟದ ಮೇಲಕ್ಕೆ ಬಂದಾಗ ಅವರಿನ್ನೂ ಅದೇ ಕೆಲಸದಲ್ಲಿದ್ದರು. ನನ್ನ ನಿಗ ಅಲ್ಲಿದ್ದವರಿಗೆ ನೆಮ್ಮದಿ ತಂದಿತು. ಆಳ ನೋಡುವ ಕೋಲನ್ನು ಪರೀಕ್ಷಿಸಲೋಸುಗ ಅಟ್ಟದ ಮೇಲಕ್ಕೆ ತಂದ ಲಾಟೀನಿನ ಬೆಳಕಿನ ಮೂಲಕ ಅವರ ದಣಿದ, ಬಿಗಿದುಕೊಂಡ ಮುಖಗಳ ಕ್ಷಣದರ್ಶನ ನನಗಾಯಿತು. ಇಡೀ ನಾಲ್ಕು ಗಂಟೆಗಳ ಕಾಲ ಪಂಪು ಮಾಡಿದೆವು. ಇಡೀ ರಾತ್ರಿ, ಇಡೀ ದಿನ, ಇಡೀ ವಾರ ಪಂಪು ಮಾಡಿದೆವು—ತಂಡದ ಮೇಲೆ ತಂಡ. ಅದು ತಾನಾಗಿಯೇ ಶಿಥಿಲವಾಗಿ ಕೆಲಸ ಮಾಡುತ್ತಾ ಕೆಟ್ಟದಾಗಿ ಬಿರುಕುಬಿಟ್ಟು ಸೋರತೊಡಗಿತು—ಕ್ಷಣದಲ್ಲಿಯೇ ನಮ್ಮನ್ನು ಮುಳುಗಿಸುವ ಮಟ್ಟಕ್ಕಲ್ಲ, ಆದರೆ ಪಂಪು ಮಾಡುವ ಕೆಲಸದಲ್ಲಿ ನಮ್ಮನ್ನು ಸಾಯಿಸುವ ಮಟ್ಟಕ್ಕೆ. ನಾವು ಪಂಪು ಮಾಡಿದಾಗ ಹಡಗು ನಮ್ಮಿಂದ ಪಾಳ ಪಾಳವಾಗಿ ಕಿತ್ತುಕೊಂಡು ಹೋಯಿತು. ಸುತ್ತಲೂ ಪಕ್ಕದಲ್ಲಿ ಹಾಕಿರುವ ಕಟಕಟೆಯ ಹಲಗೆಗಳು ಲೊಟಲೊಟನೆ ಮುರಿದು ಬಿದ್ದವು, ಊರೆಗಂಬಗಳು ಓರೆಯಾಗಿ ಉರುಳಿದವು, ಗಾಳಿ ಕಿಂಡಿಗಳು ಧ್ವಂಸವಾದವು, ಮಲಗುವ ಕೋಣೆಯ ಕವಗಳು ಸಿಡಿದುಬಿದ್ದವು. ಹಡಗಿನಲ್ಲಿ ಚೂರಗಲ ಒಣಗಿದ ಜಾಗವಿರಲಿಲ್ಲ. ಅದು ಇಷ್ಟಿಷ್ಟೇ ನಾಶವಾಗುತ್ತಿತ್ತು : ಹಗ್ಗಗಳಿಂದ ಕಟ್ಟುಗೊಂಡು ನಿಂತಿದ್ದ ಉದ್ದನೆಯ ದೋಣಿ, ಮಾಟ ಮಾಡಿದರೆಂಬಂತೆ, ಬೆಂಕಿಕಡ್ಡಿಗಳ ಹಾಗೆ ಸೀಳು ಸೀಳಾಗಿಬಿಟ್ಟಿತು. ನಾನೇ ಅದಕ್ಕೆ ಛಡಿ ಏಟು ಕೊಟ್ಟಿದ್ದೆ. ನನ್ನ ಕೈಗೆಲಸದ ಬಗ್ಗೆ ಹೆಮ್ಮೆಪಟ್ಟೆ—ಸಮುದ್ರದ ರೊಚ್ಚನ್ನು ಅದು ಇಷ್ಟು ಕಾಲ ತಾಳಿಕೊಂಡಿದ್ದಕ್ಕಾಗಿ. ನಾವು ಪಂಪು ಮಾಡಿದೆವು. ಹವಾಗುಣದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ನೊರೆಯ ತಗಡಿನಂತೆ, ಕಡಾಯಿಯೊಳಗಿನ ಕುದಿ ಹಾಲಿನಂತೆ ಸಮುದ್ರ ಬೆಳ್ಳಗಿತ್ತು. ಕವಿದ ಮೋಡಗಳಲ್ಲಿ ಕೊಂಚವೂ ಬಿರುಕು ಕಾಣುತ್ತಿರಲಿಲ್ಲ—ಮನುಷ್ಯನ ಕೈಗಾತ್ರವಾದರೂ, ಇಲ್ಲವೇ ಹತ್ತು ಸೆಕೆಂಡುಗಳ ಮಟ್ಟಿಗಾದರೂ. ನಮಗೆ ಆಕಾಶ

ವಿರಲಿಲ್ಲ, ನಕ್ಷತ್ರಗಳಿರಲಿಲ್ಲ, ಸೂರ್ಯನಿರಲಿಲ್ಲ, ವಿಶ್ವವಿರಲಿಲ್ಲ—ಕುಪಿತ ಕಾರ್ಮೋಡಗಳನ್ನು ಮತ್ತು ಪ್ರಕ್ಷುಬ್ಧ ಸಮುದ್ರವನ್ನು ಬಿಟ್ಟು ಏನೂ ಇರಲಿಲ್ಲ. ಅಮೂಲ್ಯ ಪ್ರಾಣದ ಉಳಿವಿಗಾಗಿ ನಾವು ತಂಡತಂಡವಾಗಿ ಪಂಪು ಮಾಡಿದೆವು. ತಿಂಗಳುಗಳಾದರೂ ವರ್ಷಗಳಾದರೂ ಸರ್ವಶಾಶ್ವತವಾಗಿ ಉಳಿದೇ ಉಳಿಯುತ್ತದೆ, ಮುಗಿಯುವುದಿಲ್ಲ ಎನ್ನಿಸಿತು; ನಾವು ಸತ್ತಿದ್ದೇವೆ, ನರಕಕ್ಕೆ ಹೋಗಿದ್ದೇವೆ ಎನ್ನಿಸಿತು. ನಾವು ವಾರದಲ್ಲಿ ಇದು ಯಾವ ದಿನ ಎಂಬುದನ್ನು, ಯಾವ ತಿಂಗಳು ಎಂಬುದನ್ನು, ಯಾವ ವರ್ಷ ಎಂಬುದನ್ನು ಹಾಗೂ ನಾವು ಎಂದಾದರೂ ತೀರದ ಮೇಲಿದ್ದೆವೆ ಎಂಬುದನ್ನು ಮರೆತೆವು. ಹಾಯಿಗಳು ಹಾರಾಡಿದವು; ಹಡಗು ಹವಾಮಾನದ ಬಟ್ಟೆಯ ಮೇಲೆ ಪಾರ್ಶ್ವದ ಮುಂಭಾಗವನ್ನು ಆನಿಸಿ ಮಲಗಿತು; ಸಮುದ್ರಕ್ಕೆ ಸಮುದ್ರವೇ ಮೇಲೆದ್ದು ಅದರ ಮೇಲೆ ಸುರಿಯಿತು. ನಾವು ವೈಯಂಟು ಮಾಡಲಿಲ್ಲ. ನಾವು ಹಿಡಿಗಳನ್ನು ಹಿಡಿದು ತಿರುಗಿಸಿದೆವು. ನಮಗೆ ತಿಳಿಗೇಡಿಗಳ ಕಣ್ಣುಗಳಿದ್ದವು. ಅಟ್ಟದ ಮೇಲಕ್ಕೆ ತೆವಳಿಕೊಂಡು ಬಂದಕೂಡಲೇ ನಾನು ಹಗ್ಗವನ್ನು ಹಿಡಿದು ಒಂದು ಸುತ್ತು ನೋಡಿಬಂದೆ—ಮನುಷ್ಯರನ್ನು, ಪಂಪುಗಳನ್ನು, ಪ್ರಮುಖ ಪಟಸ್ತಂಭವನ್ನು. ನಾವು ತಿರುಗಿಸಿದೆವು, ನಿರಂತರವಾಗಿ ತಿರುಗಿಸಿದೆವು—ನೀರು ನಮ್ಮ ಸೊಂಟದೆತ್ತರಕ್ಕೆ, ಕುತ್ತಿಗೆ ಎತ್ತರಕ್ಕೆ, ನಮ್ಮ ತಲೆಯ ಮೇಲಕ್ಕೆ ಎಗರುತ್ತಿದ್ದರೂ. ಒಟ್ಟಿನಲ್ಲಿ ದ್ವೈತ ಅಳಿದು ಅದ್ವೈತವಾಗಿತ್ತು. ಒಣಗಿದಂತೆ ಇರುವುದು ಹೇಗೆಂಬುದೇ ನಮಗೆ ಮರೆತು ಹೋಗಿತ್ತು.

'ನನ್ನ ಅಂತರಾಳದಲ್ಲೆಲ್ಲೋ ಯೋಚನೆ ಸುಳಿದಿರುಗಿತು: ದೇವರಾಣೆ! ಇದು ಸಾಹಸ ಕಾರ್ಯದ ಶನಿ—ನೀವು ಏನಾದರೂ ಅರ್ಥ ಮಾಡಿಕೊಳ್ಳಿ. ದ್ವಿತೀಯ ಸಹಾಯಕ ನಾಯಕನಾಗಿ ಇದು ನನ್ನ ಮೊದಲನೆಯ ಸಮುದ್ರ ಸಂಚಾರ. ಕೇವಲ ಇಪ್ಪತ್ತು ವರ್ಷಗಳ ವಯಸ್ಸಿನವನು ನಾನು. ಇಲ್ಲಿರುವ ಎಲ್ಲರ ಹಾಗೆಯೇ ನಾನೂ ಇಲ್ಲವಾಗಿ ಬಿಡುತ್ತೇನೆ. ಆದರೆ ನಿಗದಿ ಮಟ್ಟಕ್ಕೆ ಅನುಗುಣವಾಗಿ ಕೆಲಸ ನಿರ್ವಹಿಸಿದ್ದೇನೆ. ನಾನು ಸಂತೋಷಗೊಂಡೆ. ಪ್ರಾಪಂಚಿಕ ಅನುಭವಗಳನ್ನು ನಾನು ತ್ಯಜಿಸಬಾರದಿತ್ತು. ಹಿಗ್ಗಿನ ಕ್ಷಣಗಳು ನನ್ನ ಪಾಲಿಗಿದ್ದುವು. ಯಾವಾಗ ಹಳೆಯ ಹಾಳುಗೊಂಡ ಹಡಗು ತನ್ನ ಹಿಂಭಾಗದೊಡನೆ ಜೋರಾಗಿ ಮೇಲಕ್ಕೆ ಎಗರಿತೋ, ಆಗ ಅದರ ಹಿಂಭಾಗದಲ್ಲಿ ಬರೆದಿದ್ದ "ಜುಡಿಯಾ, ಲಂಡನ್, ಮಾಡು ಅಥವಾ ಮಡಿ" ಎಂಬ ಮಾತುಗಳನ್ನು—ವಿನಂತಿಯ ಹಾಗೆ, ಪ್ರತಿಭಟನೆಯ ಹಾಗೆ, ಮೊರೆಯ ಹಾಗೆ—ಕರುಣೆಯಿಲ್ಲದ ಮುಗಿಲುಗಳ ಮುಖಕ್ಕೆ ಬೀಸಿ ಎಸೆಯುತ್ತಿದೆ ಎಂಬಂತೆ ನನಗೆ ಭಾಸವಾಯಿತು.

'ಓಹ್, ಯೌವನವೇ! ನಿನ್ನ ಶಕ್ತಿ ಎಷ್ಟು, ನಂಬಿಕೆ ಎಷ್ಟು, ಕಲ್ಪನೆ ಎಷ್ಟು! ಬಾಡಿಗೆಗೋಸ್ಕರ ಕಲ್ಲಿದ್ದಲ ರಾಶಿಯನ್ನು ಪ್ರಪಂಚದ ನಾನಾ ಕಡೆಗೆ ಸಾಗಿಸುವ ಗಡಗಡ ಸದ್ದಿನ ಬೋನು ಈ ಹಡಗು ಎನ್ನಿಸುವುದಿಲ್ಲ—ಬದಲಾಗಿ ನನ್ನ ಪಾಲಿಗೆ ಅದು ಪ್ರಯತ್ನ, ಪರೀಕ್ಷೆ, ಜೀವನದ ಪ್ರಯೋಗ. ಅದರ ಬಗ್ಗೆ ಸಂತೋಷದಿಂದ, ಮೆಚ್ಚುಗೆಯಿಂದ, ವ್ಯಥೆಯಿಂದ ಯೋಚಿಸುತ್ತೇನೆ—ನಿಮ್ಮ ಪ್ರೀತಿಪಾತ್ರರು ಯಾರಾದರೂ ಸತ್ತಾಗ ನೀವು ಯೋಚಿಸುವಂತೆ. ಅದನ್ನೆಂದು ನಾನು ಮರೆಯಲಾರೆ....ಮುಂದಕ್ಕೆ ಸೀಸೆ ಜರುಗಿಸಿ.

'ಒಂದು ರಾತ್ರಿ ಕೂವೆಮರಕ್ಕೆ ಕಟ್ಟಿದ್ದಾಗ, ನಾನು ವಿವರಿಸಿದ ಹಾಗೆ, ನಾವು ಪಂಪು ಮಾಡುತ್ತಿದ್ದೆವು. ಬಿರುಗಾಳಿಯ ಹೊಡೆತದಿಂದ ಕಿವಿ ಕಿವುಡಾಗಿ, ನಾವು ಸತ್ತಿದ್ದೇವೆ ಎಂದು ನಮ್ಮಲ್ಲಿಯೇ ಅಂದುಕೊಳ್ಳಲು ಕೂಡ ಸಾಕಷ್ಟು ಶಕ್ತಿ ಇಲ್ಲವಾಗಿ ಸೋತು ಸುಣ್ಣವಾಗಿರುವಾಗ ಬಿರುಗಡಲು ರಭಸದಿಂದ ಹಡಗಿಗೆ ಅಪ್ಪಳಿಸಿ ನಮ್ಮ ತಲೆಗಳ ಮೇಲೆ ಬಿರುಸಾಗಿ ಹಾದು ಹೋಯಿತು. ಉಸಿರುಗಟ್ಟಿದಂತಾದ ನಾನು ಮತ್ತೆ ಉಸಿರಾಡ ತೊಡಗಿದ ಕೂಡಲೇ ಕರ್ತವ್ಯಬಂಧಿತನಾಗಿ ಕೂಗಿಕೊಂಡೆ: "ಗೆಳೆಯರೆ, ನಿಲ್ಲಿಸದ ಕೆಲಸ ಸಾಗಿಸಿ." ಆಗ ಇದ್ದಕ್ಕಿದ್ದ ಹಾಗೆ ಅಟ್ಟದ ಮೇಲೆ ಬಲವಾಗಿ ತೇಲುತ್ತಿದ್ದ ಏನೋ ಒಂದು ನನ್ನ ಕಣಕಾಲಿನ ಮೀನುಖಂಡಕ್ಕೆ ಬಂದು ಅಪ್ಪಳಿಸಿದಂತಾಯ್ತು. ನಾನು ಥಟ್ಟನೆ ಹಿಡಿಯಲು ಕೈ ಹಾಕಿ ವಿಫಲನಾದೆ. ಒಂದಡಿಯ ಅಂತರದಲ್ಲಿರುವ ನಮಗೆ ಒಬ್ಬರ ಮುಖ ಮತ್ತೊಬ್ಬರಿಗೆ ಕಾಣಿಸಲಾರದಂಥ ದಟ್ಟ ಕತ್ತಲೆ ಇತ್ತು—ನೀವು ಅರ್ಥ ಮಾಡಿಕೊಳ್ಳಿ.

'ಆ ಬಡಿತದ ತರುವಾಯ ಕ್ಷಣಕಾಲ ಹಡಗು ನಿಶ್ಚಲವಾಗಿತ್ತು. ಆದರೆ ಆ ವಸ್ತು, ಅದು ಏನೇ ಆಗಿರಲಿ, ಮತ್ತೆ ನನ್ನ ಕಾಲಿಗೆ ಬಡಿಯಿತು. ಈ ಸಾರಿ ಅದನ್ನು ಹಿಡಿದೆ. ಅದು ಬೇರೇನೂ ಆಗಿರದೆ, ಉದ್ದ ಹಿಡಿಯುಳ್ಳ ಸಟ್ಟುಗವಾಗಿತ್ತು. ಮೊದಲಿಗೆ, ದಣಿವಿನಿಂದ ಮಂಕು ಕವಿದಂತಾಗಿ ಮತ್ತು ಪಂಪುಗಳನ್ನುಳಿದು ಬೇರೆ ಯಾವ ಯೋಚನೆಯೂ ತಲೆಯಲ್ಲಿ ಇರಲಿಲ್ಲವಾಗಿ, ನನ್ನ ಕೈಯಲ್ಲಿ ಏನಿತ್ತು ಎಂಬುದನ್ನು ಗ್ರಹಿಸಲಿಲ್ಲ. ಕೂಡಲೇ ಅದು ಏನೆಂಬುದು ಭಾಸವಾಗಿ ಕೂಗಿಕೊಂಡೆ, "ಮಿತ್ರರೆ, ಅಟ್ಟದ ಮೇಲಿನ ಮನೆ ಹಾಳಾಗಿದೆ. ಇದನ್ನು ಬಿಡಿ. ಅಡುಗೆಯವನನ್ನು ಹುಡುಕೋಣ ಬನ್ನಿ"

'ಎದುರುಗಡೆ ಮೇಲಟ್ಟದ ಮನೆ. ಅದರೊಳಗೆ ಅಡುಗೆಮನೆ, ಅಡಿಗೆಯವನ ಮಲಗುಕೋಣೆ ಮತ್ತು ಹಡಗಿನ ನೌಕರರ ವಾಸದ ಕೋಣೆಗಳು. ಇದು ಕೊಚ್ಚಿ ಹೋಗುತ್ತದೆ ಎಂದು ಬಹಳ ದಿನಗಳ ಹಿಂದೆಯೇ ನಾವು ನಿರೀಕ್ಷಿಸಿದ್ದುದರಿಂದ ಎಲ್ಲ ನೌಕರರಿಗೂ ಕ್ಯಾಬಿನ್ನಿನಲ್ಲಿ ಮಲಗುವಂತೆ ಆದೇಶ ನೀಡಲಾಗಿತ್ತು—ಹಡಗಿನಲ್ಲಿ ಇರುವುದು ಅದೊಂದೇ ಸುರಕ್ಷಿತ ಸ್ಥಳವೆಂದು. ಅಡುಗೆಯ ವ್ಯವಸ್ಥಾಪಕನಾದ ಅಬ್ರಹಾಮ್ ಏನೇ ಆದರೂ ತನ್ನ ಮಲಗುಕೋಣೆಗೆ ಅಂಟಿಕೊಳ್ಳಲು ಪಟ್ಟು ಹಿಡಿದು ಕೂತ, ಹೇಸರುಗತ್ತೆಯಂತೆ—ಕೇವಲ ಭಯದಿಂದ ಎಂದು ನಾನು ನಂಬಿದ್ದೇನೆ, ಭೂಕಂಪದಲ್ಲಿ ನೆಲಸಮವಾದ ಕೊಟ್ಟಿಗೆಯನ್ನು ಬಿಡಲು ಇಚ್ಛಿಸದ ಪ್ರಾಣಿಯ ಹಾಗೆ. ಆದ್ದರಿಂದ ಅವನನ್ನು ನೋಡಲು ಅಲ್ಲಿಗೆ ಹೋದೆವು. ಅದು ಸಂಭವನೀಯ ಸಾವು. ಏಕೆಂದರೆ ಒಮ್ಮೆ ಗಂಡಾಂತರದಿಂದ ಪಾರಾಗಿದ್ದರೂ ನಾವೀಗ ತೇಲುತೆಪ್ಪದ ಮೇಲೆ ಇದ್ದಂತೆ ತೆರೆದ ವಸ್ತುಗಳಾಗಿದ್ದೆವು. ಆದರೂ ನಾವು ಹೋದೆವು. ಚಿಪ್ಪು ಒಳಗೆ ಸ್ಫೋಟಗೊಂಡಂತೆ ಮನೆ ಚೂಪ್ಪಾನುಚೂರಾಗಿತ್ತು. ಬಹುತೇಕ ಹಡಗಿನಿಂದ ಹೊರಕ್ಕೆ ಹೋಗಿತ್ತು—ಒಲೆ, ನೌಕರರ ವಾಸದ ಕೋಣೆಗಳು, ಅವರ ಸಾಮಾನುಗಳು ಎಲ್ಲ ಹೋಗಿಯಾಗಿತ್ತು. ಆದರೆ ತಡಿಕೆಗೋಡೆಗೆ ಆಧಾರವಾಗಿರುವ ಎರಡು ಮರದ ಕಂಬಗಳಿಗೆ ಅಂಟಿಕೊಂಡಂತಿರುವ ಅಬ್ರಹಾಮನು ಮಲಗುವ ಇರುಕಲು ಜಾಗ ಏನೂ ಆಗದೆ ಹಾಗೇ ಇತ್ತು—ಪವಾಡವೆಂಬಂತೆ. ನಾವು ಹಾಸಿಗೊಂಡ ಅವಶೇಷಗಳ ಮಧ್ಯೆ ತಡಕಾಡುತ್ತಾ ಅಲ್ಲಿಗೆ ಬಂದಾಗ ಅಬ್ರಹಾಮ್ ಅಲ್ಲಿದ್ದ—ತನ್ನ ಮಲಗುವ ಇರುಕಲು ಜಾಗದಲ್ಲಿ ಕುಳಿತು; ನೊರೆ

ಮತ್ತು ಭಗ್ನಾವಶೇಷಗಳಿಂದ ಸುತ್ತುವರಿಯಲ್ಪಟ್ಟು. ತನ್ನಷ್ಟಕ್ಕೆ ತಾನೇ ನಗುಮುಖದಿಂದ ವಟವಟ ಮಾತಾಡಿಕೊಳ್ಳುತ್ತಾ ಅನ್ಯಮನಸ್ಕನಾಗಿದ್ದ, ಅವನ ತಾಳ್ಮೆಯ ದಣಿವಿನ ಕೊನೆಯಲ್ಲಿ ಅನಿರೀಕ್ಷಿತವಾಗಿ ಬಂದೆರಗಿದ ಆಘಾತದಿಂದ ಸಂಪೂರ್ಣವಾಗಿ ಮತ್ತು ಶಾಶ್ವತವಾಗಿ ಹುಚ್ಚನಾಗಿದ್ದ. ಅವನನ್ನು ತಟಕ್ಕನೆ ಮೇಲಕ್ಕೆ ಸೆಳೆದು, ಹಡಗಿನ ಹಿಂಭಾಗಕ್ಕೆ ಎಳೆದುಕೊಂಡು ಹೋಗಿ ಕ್ಯಾಬನ್ನಿನೊಳಕ್ಕೆ ತಲೆಕೆಳಗಾಗಿ ಎಸೆದೆವು. ಅತಿ ಎಚ್ಚರಿಕೆಯಿಂದ ಅವನನ್ನು ಕೆಳಕ್ಕೆ ಸಾಗಿಸಿ ಅವನು ಹೇಗೆ ಚೇತರಿಸಿಕೊಳ್ಳುತ್ತಾನೆಂದು ಕಾದು ನೋಡಲು ನಮಗೆ ವೇಳೆಯಿರಲಿಲ್ಲ ಎಂಬುದನ್ನು ನೀವು ಅರ್ಥ ಮಾಡಿಕೊಳ್ಳಬಲ್ಲಿರಿ. ಕೆಳಗೆ ಇರುವವರು ಮೆಟ್ಟಿಲುಗಳ ತಳಭಾಗದಲ್ಲಿ ಅವನನ್ನು ಸರಿಯಾಗಿ ಆತುಕೊಳ್ಳುತ್ತಾರೆ ಎಂದು ಗೊತ್ತು. ನಾವು ಪಂಪುಗಳ ಬಳಿಗೆ ಹೋಗುವ ತರಾತುರಿಯಲ್ಲಿದ್ದೆವು. ಆ ಕೆಲಸ ನಿಲ್ಲುವ ಹಾಗಿಲ್ಲ. ಒಂದು ಕೆಟ್ಟ ಸೋರು ಬಿರುಕು ನಿಜವಾಗಿಯೂ ಕ್ರೂರ, ರಾಕ್ಷಸೀಯ.

'ಐರೋಪ್ಯನಿಗೂ ನೀಗ್ರೋವಿಗೂ ಹುಟ್ಟಿದ ಬಡಪ್ರಾಣಿ ಅಬ್ರಹಾಮನನ್ನು ಐಲನನ್ನಾಗಿ ಮಾಡುವುದೇ ಆ ಪೈಶಾಚಿಕ ಚಂಡಮಾರುತದ ಏಕೈಕ ಉದ್ದೇಶವಾಗಿತ್ತೆಂದು ಯಾರಾದರೂ ಯೋಚಿಸಬಹುದು. ಬೆಳಗಾಗುವುದಕ್ಕಿಂತ ಮುಂಚೆ ಸಮಾಧಾನ ಸ್ಥಿತಿಗೆ ಬಂತು. ಮರುದಿನ ಆಕಾಶ ನಿರ್ಮಲವಾಯಿತು. ಸಮುದ್ರದ ಉಬ್ಬರ ಇಳಿದದ್ದರಿಂದ ಬಿರುಕು ಹಿಡಿತಕ್ಕೆ ಬಂತು. ಹೊಸ ಧ್ವಜಪಟಗಳನ್ನು ನೆಲೆಗೆ ಬಿಗಿಸುವಾಗ ನೌಕರರನ್ನು ಕೆಲಸಕ್ಕೆ ಹಚ್ಚಲಾಯಿತು. ನಿಜವಾಗಿ ಬೇರೇನೂ ಕೆಲಸವಿರಲಿಲ್ಲ. ದೋಣಿಗಳು ಸ್ವಾಮಿಪಾದ ಸೇರಿದವು ; ಅಟ್ಟಗಳು ಚಟ್ಟಾದವು ; ಕ್ಯಾಬಿನ್ ಗೋವಿಂದ ಆಯಿತು ; ಉಗ್ರಾಣಗಳು ರಣಾಂಗಣವಾದವು ; ಹಡಗು ಬಳಲಿ ಬೆಂಡಾಯಿತು. ಆದರೆ ಅದನ್ನು ನಾವು ನಮ್ಮ ಗುರಿಯ ಕಡೆಗೆ ತಿರುಗಿಸಿದೆವು—ನೀವು ನಂಬುತ್ತೀರಾ? ಗಾಳಿ ಪೂರ್ವದಿಂದ ಬೀಸತೊಡಗಿತು. ಹೊಸಗಾಳಿ ನಿರಂತರವಾಗಿ ಬೀಸಿತು. ನಾವು ನಮ್ಮ ದಾರಿಯ ಪ್ರತಿಯೊಂದು ಅಂಗುಲವನ್ನು ಸವೆಸಬೇಕಾಗಿತ್ತು. ನಮ್ಮ ಅದೃಷ್ಟದಿಂದ ಹಡಗು ಮೊದಲಿನ ಹಾಗ ಕೆಟ್ಟದ್ದಾಗಿ ಸೋರುತ್ತಿರಲಿಲ್ಲ. ನೀರಿನ ಮಟ್ಟ ಸರಿಯಾಗಿತ್ತು. ನಾಲ್ಕು ಗಂಟೆಗಳಲ್ಲಿ ಎರಡು ಗಂಟೆ ಪಂಪು ಮಾಡುವುದು ಅಷ್ಟು ತಮಾಷೆಯ ವಿಚಾರವಲ್ಲ. ಆದರೆ ಆ ನಮ್ಮ ಶ್ರಮ ಹಡಗು ಫಾಲ್‌ಮೌತ್‌ವರೆಗೂ ಸಂಚಾರ ಮಾಡುವಂತಾಯಿತು.

'ಸಮುದ್ರದ ದುರ್ಘಟನೆಗಳಿಂದ ಜೀವಿಸುವ ಅಲ್ಲಿಯ ಒಳ್ಳೆಯ ಜನ ನಮ್ಮನ್ನು ಎದುರುಗೊಳ್ಳಲು ಸಂತೋಷದಿಂದಿದ್ದರು. ನಮ್ಮ ಹಡಗಿನ ಅಸ್ಥಿಪಂಜರವನ್ನು ಕಂಡು ಅಲ್ಲಿಯ ಹಡಗು ಕಟ್ಟಡಗಾರರ ಗುಂಪು ತಮ್ಮ ಹತಾರಗಳನ್ನು ಹರಿತಗೊಳಿಸಿಕೊಂಡಿತು. ದೇವರಾಣೆ! ಅವುಗಳನ್ನು ಸರಿಮಾಡುವಷ್ಟರಲ್ಲಿ ನಮ್ಮನ್ನು ಕಿತ್ತು ತಿಂದರು. ಯಜಮಾನ ಮೊದಲೇ ಬಿಗಿಯಾಗಿ ಕುಳಿತಿದ್ದ. ಬೇಕಾಗಿಯೇ ತಡಮಾಡಿದರು. ಹಡಗಿನ ಸರಕನ್ನು ಹೊರದೆಗೆದು ಸೋರುವ ಸಂದುಗಳನ್ನು ಮುಚ್ಚಬೇಕೆಂದು ತೀರ್ಮಾನಿಸಲಾಯಿತು. ರಿಪೇರಿ ಮುಗಿದ ಮೇಲೆ ಸರಕನ್ನು ಮತ್ತೆ ತುಂಬಲಾಯಿತು. ಹೊಸ ನೌಕಾಪಡೆ ಹಡಗು ಹತ್ತಿತು. ನಾವು ಬಾಂಕಾಕಿಗೆ ಹೊರಟೆವು. ವಾರದ ಕೊನೆಯಲ್ಲಿ ನಾವು ಮತ್ತೆ ಹಿಂದಿರುಗಿದೆವು. ಏಕೆಂದರೆ ಹಡಗಿನ ನೌಕರರು ನಾವು ಬಾಂಕಾಕಿಗೆ ಬರುವುದಿಲ್ಲವೆಂದೂ, ನೂರೈ

ವತ್ತು ದಿನಗಳ ಸಮುದ್ರ ಪ್ರಯಾಣವಾಗುವುದೆಂದೂ, ಅದರಲ್ಲೂ ಇಪ್ಪತ್ತುನಾಲ್ಕು ಗಂಟೆಗಳಲ್ಲಿ ಎಂಟುಗಂಟೆ ಪಂಪು ಮಾಡಬೇಕಾದ ಸಣ್ಣ ಹಡಗಿನಲ್ಲಿ ಹೋಗುವುದು ದುಸ್ತರವೆಂದೂ ನೌಕಾ ಪಂಚಾಂಗವನ್ನು ಮುಂದಿಟ್ಟು ಈ ಸಾಲುಗಳನ್ನು ಅಂಟಿಸಲಾಯಿತು: "ಜುಡಿಯಾ ಹಡಗು–ಬಾಂಕಾಕಿಗೆ ಪ್ರಯಾಣ–ಕಲ್ಲಿದ್ದಲ ಸರಕು–ಸೋರುತ್ತಿರುವುದರಿಂದ ಮತ್ತೆ ಪಾಲ್‌ಮೌತಿಗೆ ಹಿಂದಿರುಗಿಸಿ–ಹಡಗಿನ ನೌಕರರು ಕೆಲಸ ಮಾಡಲು ತಿರಸ್ಕರಿಸಿದ್ದಾರೆ"

'ಹಲವಾರು ಅಡಚಣೆಗಳು–ಅಧಿಕ ರಿಪೇರಿ. ಯಜಮಾನ ಮತ್ತೆ ಬಂದು, ಹಡಗು ಒಳ್ಳೆಯ ಪೆಟ್ಟಿಗೆಯಂತೆ ಅಚ್ಚುಕಟ್ಟಾಗಿದೆಯೆಂದು ಹೇಳಿದ. ಪಾಪ, ವೃದ್ಧ ನಾಯಕ ಬಿಯರ್ಡ್ ಕಲ್ಲಿದ್ದಲ್ಲ ಗಣಿಯ ಕೆಲಸಗಾರನ ಹೆಣದಂತೆ ಕಂಡು ಬಂದ–ವ್ಯಥೆ ಮತ್ತು ಅವಮಾನಗಳಿಂದ. ನೆನಪಿಡಿ ಅವನಿಗೆ ಅರುವತ್ತು ವರ್ಷ ಮತ್ತು ನಾಯಕನಾಗಿ ಮೊದಲ ಸಲ ಅಧಿಕಾರ ಚಲಾವಣೆಯ ಅವಕಾಶ. ಅದು ಮೂರ್ಖ ಕೆಲಸವೆಂದೂ ಪರಿಣಾಮ ನೆಟ್ಟಗಾಗುವುದಿಲ್ಲವೆಂದೂ ಮಹೋನ್ ಹೇಳಿದ. ನಾನು ಮಾತ್ರ ಎಂದಿಗಿಂತಲೂ ಹೆಚ್ಚಾಗಿ ಹಡಗನ್ನು ಮೆಚ್ಚಿದೆ ಮತ್ತು ಬಾಂಕಾಕಿಗೆ ಹೋಗಲು ತೀವ್ರವಾಗಿ ಬಯಸಿದೆ. ಬಾಂಕಾಕಿಗೆ! ಮಾಂತ್ರಿಕ ಹೆಸರು, ಪಾವನ ಹೆಸರು. ಅದರ ಮೇಲಿನ ತೇಪೆಗೂ ಕೀಳು ಮೆಸಪೊಟಾಮಿಯಾ. ನೆನಪಿಡಿ ನನಗೆ ಇಪ್ಪತ್ತು ವರ್ಷ. ಮೇಲಾಗಿ ದ್ವಿತೀಯ ಸಹಾಯಕ ನಾಯಕನ ಉದ್ಯೋಗ. ನನಗಾಗಿ ಪೂರ್ವ ಕಾದು ನಿಂತಿದೆ.

'ಹೊರಭಾಗದಲ್ಲಿ ಹಡಗಿಗೆ ಲಂಗರು ಹಾಕಿ, ಮೂರನೆಯ ಹೊಸ ನೌಕಾಪಡೆಯೊಡನೆ ನಾವು ಹೊರಹೋದೆವು. ಎಂದಿಗಿಂತಲೂ ಕೆಟ್ಟದಾಗಿ ಹಡಗು ಸೋರತೊಡಗಿತು. ಉದ್ದೇಶ ಭಂಗ ಮಾಡುವ ನೌಕಾಶಿಲ್ಪಗಳೇ ಅದರೊಳಗೆ ರಂಧ್ರ ಮಾಡಿದ್ದಾರೇನೋ ಎನ್ನಿಸುವಂತಿತ್ತು. ಈ ಸಾರಿ ನಾವು ಹೊರಕ್ಕೆ ಕಾಲಿಡಲಿಲ್ಲ. ಹಡಗಿನ ನೌಕರರು ಎತ್ತು ಯಂತ್ರವನ್ನು ಮುಟ್ಟಲು ನಿರಾಕರಿಸಿದರು.

'ಅವರು ನಮ್ಮನ್ನು ಹಿಂದಕ್ಕೆ ಒಳಬಂದರಿಗೆ ಎಳೆದೊಯ್ದರು. ನಾವು ನೆಲೆಗೊಳಿಸಿದ ವಸ್ತುವಾದೆವು. ಪ್ರದರ್ಶನ ವಸ್ತುವಾದೆವು. ಆ ಸ್ಥಳದ ಅವಿಭಾಜ್ಯ ಭಾಗವಾದೆವು. ಜನಗಳು ನಮ್ಮನ್ನು ತೋರಿಸಿ ಭೇಟಿಕಾರರಿಗೆ ಹೇಳುತ್ತಿದ್ದರು–"ಆ ಹಡಗು ಬಾಂಕಾಕಿಗೆ ಹೋಗಬೇಕಾಗಿರುವಂಥದು– ಆರು ತಿಂಗಳುಗಳಿಂದಲೂ ಇಲ್ಲಿದೆ–ಮೂರು ಸಾರಿ ಹಿಂದಕ್ಕೆ ಬಂದಿದೆ". ರಜಾ ದಿನಗಳಲ್ಲಿ ಚಿಕ್ಕ ಹುಡುಗರು ದೋಣಿಗಳಲ್ಲಿ ವಿಹಾರಕ್ಕೆ ಬಂದು ಘೋಷಣೆ ಕೂಗುತ್ತಿದ್ದರು, "ಜುಡಿಯಾ, ಹೋಯ್" ಮತ್ತು ಹಡಗಿನ ಕಟಕಟೆಯ ಕಂಬಿಯ ಮೇಲೆ ಯಾರದಾದರೂ ತಲೆ ಕಂಡರೆ "ನೀವು ಹೋಗುವುದು ಬಾಂಕಾಕಿಗೊ ?" ಎಂದು ಜೋರಾಗಿ ಕೂಗಿ ಗೇಲಿ ಮಾಡುತ್ತಿದ್ದರು. ಹಡಗಿನ ಮೇಲೆ ನಾವು ಮೂವರೇ ಇದ್ದವರು. ಆ ಬಡಪ್ರಾಣಿ ವೃದ್ಧ ನಾಯಕ ಕ್ಯಾಬಿನ್ನಿನಲ್ಲಿ ಬೆಪ್ಪಾಗಿ ಕುಳಿತುಕೊಳೆಯುತ್ತಿದ್ದ. ಮಹೋನ್ ಅಡಿಗೆಯ ಕೆಲಸವನ್ನು ವಹಿಸಿಕೊಂಡ. ಅನಿರೀಕ್ಷಿತವಾಗಿ ಚಿಕ್ಕ ಚಿಕ್ಕ ಊಟದ ತಂಡಗಳನ್ನು ಮಾಡಿ ಫ್ರೆಂಚ್ ದೇಶದ ಪ್ರತಿಭೆಯನ್ನು ಮೆರೆದ. ಹೊಸ ಮರ ಹಗ್ಗಗಳಿಂದ ಹಡಗನ್ನು ಸಜ್ಜುಗೊಳಿಸುವುದರತ್ತ ನಾನು ನಿರುತ್ಸಾಹನಾಗಿ ನೋಡಿದೆ. ನಾವು ಪಾಲ್‌ಮೌತಿನ ಪ್ರಜೆಗಳಾಗಿದ್ದೆವು. ಪ್ರತಿ ಅಂಗಡಿ ಮುಂಗಟ್ಟಿನವರಿಗೆ

ನಮ್ಮ ಪರಿಚಯ ಗಾಢವಾಗಿತ್ತು. ಕ್ಷೌರಿಕರು ಮತ್ತು ತಂಬಾಕು ವ್ಯಾಪಾರಿಗಳು ಸಲುಗೆಯಿಂದ ಕೇಳುತ್ತಿದ್ದರು–"ನೀವು ಎಂದಾದರೂ ಬಾಂಕಾಕಿಗೆ ಹೋಗುತ್ತೀರೆಂದು ಭಾವಿಸಿದ್ದೀರಾ?" ಈ ಮಧ್ಯೆ ಮಾಲಿಕ, ಸಮುದ್ರ ವಿಮಾ ವ್ಯಾಪಾರಿಗಳು ಮತ್ತು ಹಕ್ಕು ಬಾಧ್ಯತೆಗಳ ಶಾಸನಾಧಿಕಾರಿಗಳು ಲಂಡನ್ನಿನಲ್ಲಿ ತಮ್ಮ ತಮ್ಮಲ್ಲೆ ಕಚ್ಚಾಡಿ ನಮ್ಮ ಸಂಬಳವನ್ನು ಏರಿಸಿದ್ದರು....ಮುಂದಿನವರತ್ತ ಸೀಸೆ ಜರುಗಿಸಿ.

'ಅದು ನಿಜಕ್ಕೂ ಘೋರ. ನೈತಿಕವಾಗಿ ಜೀವರಕ್ಷಣೆಗೆ ಪಂಪುಮಾಡುವುದಕ್ಕಿಂತಲೂ ಹೆಚ್ಚು ಕೆಟ್ಟದ್ದು. ನಮ್ಮನ್ನು ಪ್ರಪಂಚ ಮರೆತುಬಿಟ್ಟದೆ, ನಾವು ಯಾರಿಗೂ ಸೇರಿದವರಲ್ಲ, ಎಲ್ಲಿಯೂ ಸಲ್ಲುವವರಲ್ಲ ಎಂದು ಅನ್ನಿಸುವಂತಾಯ್ತು. ಮುಂದಿನ ಪೀಳಿಗೆಯ ದೀರ್ಘಸಮುದ್ರಯಾನದ ಅಲೆಮಾರಿಗಳಿಗೆ ಹಾಗೂ ಅಪ್ರಾಮಾಣಿಕ ಅಂಬಿಗರಿಗೆ ಅಪಹಾಸ್ಯವಾಗಿ ಕಾಣುವಂತೆ ನಾವು ಎಂದೆಂದಿಗೂ ಆ ಒಳಬಂದರಿನಲ್ಲಿ ಬಾಳುವಂತೆ ಯಾರಾದರೂ ಮಾಟ ಮಾಡಿದರೇನೋ ಎಂದು ತೋರುತ್ತಿತ್ತು. ನಾನು ಮೂರು ತಿಂಗಳ ಸಂಬಳ ಹಾಗೂ ಐದು ದಿನಗಳ ರಜೆ ಪಡೆದು ಲಂಡನ್ನಿಗೆ ಫೇರಿ ಕಿತ್ತೆ. ಹೋಗಲು ಒಂದು ದಿನ ಬರಲು ಒಂದು ದಿನ ಹಿಡಿಯಿತು. ಆದರೆ ಮೂರು ತಿಂಗಳ ಸಂಬಳ ಗೋವಿಂದ ಆಯಿತು. ಯಾವುದಕ್ಕೆ ಖರ್ಚು ಮಾಡಿದೆನೋ ಗೊತ್ತಿಲ್ಲ. ನಾನು ಸಂಗೀತಗೋಷ್ಠಿಗೆ ಹೋದೆನೆಂದು ಕಾಣುತ್ತದೆ. ರೀಜೆಂಟ್ ರಸ್ತೆಯ ಪ್ರತಿಷ್ಠಿತ ಸ್ಥಳದಲ್ಲಿ ಉಪಾಹಾರ, ಊಟ ಮತ್ತು ಕುಡಿತ ಮುಗಿಸಿದೆನೆಂದು ನೆನಪು. ಆಮೇಲೆ ಬೈರನ್ನನ ಸಮಗ್ರ ಕೃತಿಗಳನ್ನು ಹಾಗೂ ಒಂದು ರೈಲ್ವೆ ರಗ್ಗನ್ನು ಕೊಂಡುಕೊಂಡು ಕ್ಲುಪ್ತಕಾಲಕ್ಕೆ ಹಿಂದಿರುಗಿದೆ. ನನ್ನನ್ನು ಹಡಗಿಗೆ ತಲುಪಿಸಿದ ಅಂಬಿಗ ಹೇಳಿದ—"ನೀನು ಈ ಹಳೆಯ ಸಂಬಂಧವನ್ನು ಬಿಟ್ಟೆ ಎಂದು ತಿಳಿದುಕೊಂಡಿದ್ದೆ. ಅದು ಬಾಂಕಾಕಿಗೆ ಎಂದೂ ಹೋಗುವುದಿಲ್ಲ" "ನಿನಗೆ ಗೊತ್ತಿರುವುದು ಅಷ್ಟೆ" ಎಂದು ವ್ಯಂಗ್ಯದಿಂದ ಹೇಳಿದೆ. ಅವನ ಭವಿಷ್ಯ ನನಗೆ ಹಿಡಿಸಲಿಲ್ಲ.

'ತಟಕ್ಕನೆ ಒಬ್ಬ ಮನುಷ್ಯ, ಯಾರಿಗೋ ಯಾವುದೋ ರೀತಿಯ ಏಜೆಂಟಾಗಿದ್ದವನು, ಪೂರ್ಣ ಅಧಿಕಾರದೊಂದಿಗೆ ಹಾಜರಾದ. ಮುಖದ ತುಂಬ ಅತಿ ಕುಡಿತದಿಂದ ಉಂಟಾದ ಕೆಂಪುರಂಗು ಹಾಗೂ ಮೊಡವೆಗಳಿದ್ದ ಅವನು ಅದಮ್ಯ ಚೇತನದ ಖುಷಿಗಾರ. ನಮಗೆ ಮತ್ತೆ ಜೀವ ಬಂತು. ದೊಡ್ಡ ಹಡಗೊಂದು ಪಕ್ಕಕ್ಕೆ ಬಂದು, ನಮ್ಮದರ ಸರಕನ್ನು ತುಂಬಿಕೊಂಡಿತು. ನಾವು ಒಣ ಹಡಗುಕಟ್ಟೆಗೆ ಹೋದೆವು—ತಾಮ್ರದ ಕುದಿಪಾತ್ರೆ ಬರಿದಾಗಲೆಂದು. ಸೋಜಿಗವೇಕೆ? ಅದು ಸೋರಿತು. ಆ ಬಡ ಹಡಗು ಬಿರುಗಾಳಿಯಲ್ಲಿ ಸಹನೆ ಮೀರಿ ಬಳಲಿದ್ದರಿಂದ, ಜಗುಪ್ಸೆಯಿಂದಲೋ ಏನೋ ಎಂಬಂತೆ, ಕೆಳಗಿನ ಹಲಗೆ ಸೇರುವೆಯ ಸಂದುಗಳಿಗೆ ಗಿಡಿದಿದ್ದ ಸಣಬಿನ ನಾರನ್ನೆಲ್ಲ ಹೊರಕ್ಕೆ ಕಕ್ಕಿಬಿಟ್ಟಿತು. ಆಗ ಮತ್ತೆ ಹಲಗೆಸೇರುವೆಯ ಸಂದುಗಳಿಗೆ ನಾರುಗಳನ್ನು ತುರುಕಿ, ತಳಕ್ಕೆ ಹೊಸದಾಗಿ ತಾಮ್ರ ಹಚ್ಚಿ ಹಡಗನ್ನು ಮೂಡೆಯಂತೆ ಬಿಗಿ ಮಾಡಲಾಯಿತು. ನಾವು ದೊಡ್ಡ ಹಡಗಿನಲ್ಲಿಗೆ ಹೋಗಿ, ಅದರಲ್ಲಿದ್ದ ನಮ್ಮ ಸರಕನ್ನು ನಮ್ಮ ಹಡಗಿಗೆ ತುಂಬಿದೆವು.

'ಒಂದು ಸುಂದರ ಬೆಳದಿಂಗಳಿನ ರಾತ್ರಿ, ಎಲ್ಲ ಇಲಿಗಳೂ ಹಡಗನ್ನು ಬಿಟ್ಟು ಹೋದವು.'

'ಇಲ್ಲಿಯವರೆಗೆ ಅವು ನಮ್ಮನ್ನು ಮುಸುರಿಕೊಂಡಿದ್ದವು. ಹಾಯಿಗಳನ್ನು ಹಾಳು ಮಾಡಿದವು. ಹಡಗಿನ ನೌಕರರಿಗಿಂತ ಹೆಚ್ಚಾಗಿ ಉಗ್ರಾಣಗಳನ್ನು ತಿಂದು ಮುಕ್ಕಿದವು. ಸೌಜನ್ಯದಿಂದ ನಮ್ಮ ಹಾಸಿಗೆಗಳಲ್ಲಿ ಹಾಗೂ ಅಪಾಯಗಳಲ್ಲಿ ಪಾಲು ಪಡೆದವು. ಈಗ ಹಡಗು ಸಂಚಾರಾಭಿಮುಖವಾದಾಗ ಹೊರಗೆ ಹೋಗಲು ನಿರ್ಧರಿಸಿದವು. ಕೌತುಕ ದೃಶ್ಯವನ್ನು ನೋಡಲು ನಾನು ಮಹೋನನನ್ನು ಕರೆದೆ. ಮರದ ಪಟ್ಟಿಯ ಮೇಲೆ ಇಲಿಯ ಹಿಂದೆ ಇಲಿ ಕಾಣಿಸಿಕೊಂಡು, ಅವನ ಹೆಗಲ [illegible] ನೆಯ ನೋಟ ಹರಿಸಿ, ಕಂಡಿಯಿಂದ ದಡ್ಡನೆ ದೊಡ್ಡ ಹಡಗಿನ ಒಡಲಿಗೆ ನೆಗೆದವು. ನಾವು ಅವುಗಳನ್ನು ಎಣಿಸಲು ಪ್ರಯತ್ನ ಪಟ್ಟೆವು. ಆದರೆ ಕೂಡಲೇ ಲೆಕ್ಕ ಮರೆತೆವು. ಮಹೋನ್ ಹೇಳಿದ, "ಸರಿ ಸರಿ, ಇಲಿಗಳ ಬುದ್ಧಿವಂತಿಕೆ ಕುರಿತು ನನಗೆ ಏನೂ ಹೇಳಬೇಡ. ಹಡಗಿನ ಕುಸಿತದಿಂದುಂಟಾದ ಕೀಚು ಸದ್ದನ್ನು ಕೇಳಿದಾಗಲೇ ಇವು ಬಿಟ್ಟುಹೋಗಬೇಕಾಗಿತ್ತು. ಅವುಗಳ ಬಗೆಗಿನ ಮೂಢನಂಬಿಕೆ ಎಷ್ಟು ದಡ್ಡತನದ್ದು ಎಂಬುದಕ್ಕೆ ನಿನ್ನೆದುರೇ ದಾಖಲೆ ಸಿಕ್ಕಿದೆ. ಅವು ಒಳ್ಳೆಯ ಹಡಗನ್ನು ತೊರೆದು ತಿನ್ನಲು ಏನೂ ಸಿಗದ ಹಳೆಯ ಅಡಾಸು ಹಡಗಿನ ಒಡಲಿಗೆ ಜಿಗಿದವು, ದಡ್ಡಗಳು! ಯಾವುದು ಕ್ಷೇಮ, ಯಾವುದರಿಂದ ಒಳ್ಳೆಯ ದಾಗುತ್ತದೆ ಎಂಬುದರ ಬಗ್ಗೆ ನಮಗಿಂತ ಮಿಗಿಲಾಗಿ ತಿಳಿದುಕೊಂಡಿವೆ ಎಂಬುದನ್ನು ನಾನು ನಂಬುವುದಿಲ್ಲ.

'ಇನ್ನೂ ಕೊಂಚ ಮಾತುಕತೆ ಮುಂದುವರಿದ ಮೇಲೆ ಒಂದು ತೀರ್ಮಾನಕ್ಕೆ ಬಂದೆವು—ನಿಜವಾಗಿ ಮನುಷ್ಯನ ಬುದ್ಧಿಶಕ್ತಿಗಿಂತ ಮಿಗಿಲಾದದ್ದು ಯಾವುದೂ ಇಲ್ಲ; ಆದರೆ ಇಲಿಗಳ ಬುದ್ಧಿಶಕ್ತಿಯನ್ನು ಬರಿದೇ ಎರ್ರಾಬಿರ್ರಿಯಾಗಿ ದುಬಾರಿಗೊಳಿಸಲಾಗಿದೆ ಎಂದು.

'ಇಂಗ್ಲೆಂಡಿನ ಕೊಟ್ಟಕೊನೆಯಿಂದ ಹಿಡಿದು ಭೂಶಿರದವರೆಗಿನ ನಮ್ಮ ಹಡಗು ಸಂಚಾರದ ಕಥೆ ನಿಮಗೆ ಗೊತ್ತಿದೆ. ದಕ್ಷಿಣ ತೀರದಲ್ಲಿ ನಮಗೆ ಹಡಗಿನ ನೌಕರರು ಸಿಕ್ಕಲಿಲ್ಲ. ಲಿವರ್‌ಪೂಲಿನಿಂದ ನಮಗೆ ಒಂದು ತಂಡವನ್ನು ಕಳಿಸಿದರು. ನಾವು ಮತ್ತೊಮ್ಮೆ ಬಾಂಕಾಕಿಗೆ ಹೊರಟೆವು.

'ಮುಂದಮಾರುತ ಬೀಸುತ್ತಿತ್ತು. ಹಳೆಯ ಜುಡಿಯಾ ಬಿಸಿಲಿನಲ್ಲಿ ಗಡಗಡ ಸದ್ದು ಮಾಡಿಕೊಂಡು ಅಡ್ಡಾದಿಡ್ಡಿಯಾಗಿ ತಡವರಿಸುತ್ತಾ ನಡೆಯಿತು. ಅದು ಎಂಟು ನಾಕಾ ಮೈಲಿಗಳ ವೇಗದಲ್ಲಿ ಹೊರಟರೆ ಎಲ್ಲವೂ ಮೇಲಕ್ಕೆ ಕುಪ್ಪಳಿಸುತ್ತಿತ್ತು. ತಲೆಯಿಂದ ಎಗರುವ ಟೋಪಿಗಳನ್ನು ಕೂಡಲೇ ಕೈ ಹಾಕಿ ಒತ್ತಿ ಹಿಡಿದುಕೊಳ್ಳಬೇಕಾಗುತ್ತಿತ್ತು. ಸಾಮಾನ್ಯವಾಗಿ ಅದು ಗಂಟೆಗೆ ಮೂರು ಮೈಲಿಗಳಂತೆ ಸಾಗತೊಡಗಿತು. ಅದರಿಂದ ಏನನ್ನು ತಾನೇ ನಿರೀಕ್ಷಿಸಲು ಸಾಧ್ಯ? ಆ ಹಳೆಯ ಹಡಗು ತುಂಬ ದಣಿದಿತ್ತು. ನನ್ನ ಯೌವನದಲ್ಲಿ, ಈ ಕಥೆಗೆ ಕಿವಿಗೊಟ್ಟಿರುವ ನಿಮ್ಮ ಯೌವನದಲ್ಲಿ ಅದರ ಯೌವನ ನಿಂತಿತ್ತು. ನಿಮ್ಮ ಮುಖಗಳಿಗೆ ವರುಷಗಳನ್ನು ದಣಿವನ್ನು ತಂದು ಅಡುಕಿದ ಮಿತ್ರ ನಾರು? ಹಡಗಿನ ಬಗೆಗೆ ನಾವು ಗೊಣಗುಟ್ಟಲಿಲ್ಲ. ಹಡಗಿನಲ್ಲಿದ್ದ ನಮಗೆ ಅನ್ನಿಸುತ್ತಿತ್ತು— ಅದರಲ್ಲೇ ಹುಟ್ಟಿ, ಅದರಲ್ಲೇ ಬೆಳೆದು, ಅದರಲ್ಲೇ ಯುಗಯುಗಗಳಿಂದ ಜೀವಿಸುತ್ತಿದ್ದೇವೆಯೋ ಏನೋ ಎಂದು; ಇದನ್ನುಳಿದು ಬೇರೆ ಯಾವ ಹಡಗುಗಳೂ ಗೊತ್ತೇ ಇಲ್ಲ

ವೇನೋ ಎಂದು. ಹಳ್ಳಿಯ ಸಾಮಾನ್ಯ ಚರ್ಚ್, ಬಿಷಪ್ಪಿನ ಅಧಿಕಾರ ಪ್ರಾಂತದ ಮಹತ್ವದ ಚರ್ಚಾಗಿ ಪರಿವರ್ತಿತವಾಗಲಿಲ್ಲ ಎಂದು ಬೈದರೆ ಹೇಗೋ, ಹಾಗಾಗುತ್ತದೆ ಆ ಹಳೆಯ ಹಡಗಿನ ಬಗೆಗೆ ತಕರಾರು ಎತ್ತಿದರೆ.

'ನನ್ನನ್ನು ಸಹನಾಶೀಲನನ್ನಾಗಿ ಮಾಡಿರುವುದು ನನ್ನ ಯೌವನ ಎಂದು ನನಗನ್ನಿಸುತ್ತದೆ. ಸಮಗ್ರ ಪೂರ್ವವೇ ನನ್ನ ಮುಂದಿತ್ತು; ಪೂರ್ಣ ಜೀವನವಿತ್ತು. ನಾನು ಆ ಹಡಗಿನಲ್ಲಿ ಕೆಲಸ ಮಾಡಿದೆ, ಜಯಶಾಲಿಯಾಗಿ ಹೊರಬಂದೆ. ನಮ್ಮ ಪೂರ್ವಿಕರು, ಶತಮಾನಗಳ ಹಿಂದೆ, ಇದೇ ಮಾರ್ಗದಲ್ಲಿ, ಇದಕ್ಕಿಂತ ಚೆನ್ನಾಗಿರದ ಹಡಗುಗಳಲ್ಲಿ ಖರ್ಜೂರ ಮತ್ತು ಸಂಬಾರ ಪದಾರ್ಥಗಳ, ರೋಮನರ ನೀರೋಗಿಂತ ಕ್ರೂರಿಗಳಾದ ಮತ್ತು ಯಹೂದ್ಯರ ಸಾಲೋಮನ್ನನಿಗಿಂತ ಉದಾರಿಗಳಾದ ರಾಜರು ಆಳುತ್ತಿದ್ದ ಹಳದಿ ಮರಳಿನ ಕಂದು ಬಣ್ಣದ ದೇಶಗಳನ್ನು ಸುತ್ತಿ ಬಂದರಲ್ಲ ಎಂದು ಯೋಚಿಸಿದೆ. ಹಳೆಯ ಹಡಗು ಮುಪ್ಪಿನ ಭಾರದಿಂದ ಮತ್ತು ತುಂಬಿದ ಸರಕಿನ ತೂಕದಿಂದ ಗಡಗಡ ಸದ್ದು ಮಾಡಿಕೊಂಡು ಅಡ್ಡಾದಿಡ್ಡಿಯಾಗಿ ಸಾಗುತ್ತಿದ್ದಾಗ ನಾನು ಯೌವನದ ಜೀವನವನ್ನು ಅಜ್ಞಾನ ಮತ್ತು ಭರವಸೆಗಳಲ್ಲಿ ಕಳೆಯುತ್ತಿದ್ದೆ. ಅದು ಎಂದಿಗೂ ಮುಗಿಯದ ದೀರ್ಘ ಮೆರವಣಿಗೆಯಲ್ಲಿ ಸಾಗುತ್ತಿತ್ತು. ಮುಳುಗುವ ಸೂರ್ಯನ ಹಿಂದೆ ಹೊಸ ಮಿನುಗೊಂದು 'ಫಳಾರ್' ಎಂದು ಹೊಳೆಯಿತು. ಬಹುಶಃ ಹಡಗಿನ ಮೇಲೆ ಬರೆದಿರುವ "ಜುಡಿಯಾ, ಲಂಡನ್, ಮಾಡು ಅಥವಾ ಮಡಿ" ಎಂಬ ಮಾತುಗಳನ್ನು–ಕತ್ತಲ ಸಮುದ್ರದ ಮೇಲೆ–ಕೂಗಿ ತೋರಿಸುವಂತಿತ್ತು.

'ಮುಂದೆ ನಾವು ಹಿಂದೂ ಮಹಾಸಾಗರವನ್ನು ಪ್ರವೇಶಿಸಿ ಉತ್ತರದ ಮುಖವಾಗಿ ಜಾವಾ ದ್ವೀಪದ ಕಡೆಗೆ ಚುಕ್ಕಾಣಿ ಹಿಡಿದು ತಿರುಗಿಸಿದೆವು. ಹಗುರವಾಗಿ ಬೀಸುವ ಗಾಳಿಯಲ್ಲಿ ವಾರಗಳು ಜಾರಿಹೋದವು. ಮಾಡು ಅಥವಾ ಮಡಿ ನಿಧಾನವಾಗಿ ತೆವಳತೊಡಗಿತು. ಬರುವ ಕಾಲ ಮೀರಿಹೋಯಿತೆಂದೂ ಪತ್ತೆಯಿಲ್ಲವೆಂದೂ ಪ್ರಕಟಿಸಲು ಮನೆಯವರು ಯೋಚಿಸತೊಡಗಿದರು.

"ಒಂದು ಶನಿವಾರ ಸಂಜೆ. ನಾನು ಕೆಲಸದ ಮೇಲೆ ಇರಲಿಲ್ಲ. ಜನಗಳು ಬಟ್ಟೆ ಒಗೆಯಲು ಹೆಚ್ಚಿಗೆ ಒಂದು ಬಕೆಟ್ ನೀರನ್ನು ಕೇಳಿದರು. ಇಷ್ಟು ತಡವಾಗಿ ಹೊಸ ನೀರಿನ ಪಂಪನ್ನು ತಿರುಗಿಸಲು ಇಚ್ಛೆ ಪಡದ ನಾನು ಕೈಯಲ್ಲಿ ಬೀಗದ ಕೈ ಹಿಡಿದು ಸಿಳ್ಳೆ ಹಾಕುತ್ತಾ ಹಡಗಿನ ಮೂತಿ ಹತ್ತಿರದ ಮುಚ್ಚಳಗಂಡಿಯನ್ನು ತೆಗೆಯಲು ಹೋದೆ—ಆದರೊಳಗಡೆ ಇಟ್ಟಿದ್ದ ಉಳಿಕೆತೊಟ್ಟಿಯೊಂದರ ನೀರನ್ನು ಜನಗಳಿಗೆ ಕೊಟ್ಟರಾಯಿತು ಎಂದು.

'ಕೆಳಗೆ ತಳದಿಂದ ಬಂದ ವಾಸನೆ ಎಷ್ಟು ಅನಿರೀಕ್ಷಿತವೋ ಅಷ್ಟೇ ಭಯಂಕರವಾಗಿತ್ತು. ಆ ಮುಚ್ಚಳಗಂಡಿಯಲ್ಲಿ ನೂರಾರು ಪ್ಯಾರಾಫಿನ್ ದೀಪಗಳು ಲೆಕ್ಕವಿಲ್ಲದಷ್ಟು ದಿನ ಉರಿದು ಹೊಗೆ ಕಾರಿರಬೇಕು ಎಂದು ಯಾರಾದರೂ ಯೋಚಿಸಲು ಅವಕಾಶವಿತ್ತು. ನಾನು ಹೊರಗೆ ಹೋಗಲು ಸಂತೋಷಪಟ್ಟೆ. ನನ್ನ ಜೊತೆಗಿದ್ದ ಮನುಷ್ಯ ಕೆಮ್ಮಿ ಹೇಳಿದ, "ವಿಚಿತ್ರ ವಾಸನೆ ಸಾರ್" "ಆರೋಗ್ಯಕ್ಕೆ ಒಳ್ಳೆಯದು ಎಂದು ಹೇಳುತ್ತಾರೆ" ಎಂದು ಅಲಕ್ಷ್ಯದಿಂದ ಹೇಳಿ ನಡೆದುಬಿಟ್ಟೆ.

'ನಾನು ಮಾಡಿದ ಮೊದಲ ಕೆಲಸವೆಂದರೆ ಹಡಗಿನ ನಡುವೆ ಇರುವ ಗಾಳಿಕಿಂಡಿಯಲ್ಲಿ ನನ್ನ ತಲೆಯನ್ನು ತೂರಿಸಿ ಬಗ್ಗಿಸಿದ್ದು. ನಾನು ಮುಚ್ಚಳವನ್ನು ತೆಗೆದಾಗ ದೃಶ್ಯಧೂಮ—ಯಾವುದೋ ಒಂದು ಬಗೆಯ ತೆಳುವಾದ ಹಿಮದಂಥದು, ಉಫ್ ಎಂದು ಊದಿಬಿಟ್ಟ ದುರ್ಬಲ ಕಾವಳದಂಥದು—ತೆರೆದುಕೊಂಡ ಅದರ ಬಾಯಿಂದ ಈಚೆಗೆ ಬಂತು. ಮೇಲೇರುವ ಗಾಳಿ ಬಿಸಿಯಾಗಿದ್ದುದೇ ಅಲ್ಲದೆ ಭಾರವಾಗಿತ್ತು, ಕಪ್ಪು ಮಸಿಯಾಗಿತ್ತು, ಪ್ಯಾರಾಫಿನ್ನಿನ ವಾಸನೆ ಹೊಂದಿತ್ತು. ನಾನು ಒಂದು ಸಾರಿ ಸೊರ್‍ರೆಂದು ಮೂಸಿ ನೋಡಿ ಕೂಡಲೇ ಮುಚ್ಚಳವನ್ನು ಮೃದುವಾಗಿ ಮುಚ್ಚಿಬಿಟ್ಟೆ. ನಾನಾಗಿಯೇ ಉಸಿರುಗಟ್ಟಿ ಸಾಯುವುದರಿಂದ ಏನೂ ಪ್ರಯೋಜನವಿರಲಿಲ್ಲ. ಸರಕಿಗೆ ಬೆಂಕಿ ತಗುಲಿತ್ತು.

'ಮೂರನೆಯ ದಿನ ಅದು ಪ್ರಾಮಾಣಿಕವಾಗಿ ಹೊಗೆ ಕಾರಲಾರಂಭಿಸಿತು. ಕಲ್ಲಿದ್ದಲು ಸುರಕ್ಷಿತವರ್ಗದ್ದಾಗಿದ್ದರೂ, ಒರಟು ನಿರ್ವಹಣೆಯಿಂದ ಚೂರುಚೂರಾಗಿ ಅದು ಬೇರೆಯದಕ್ಕಿಂತ ಮಿಗಿಲಾಗಿ ಕುಲುಮೆಮನೆಯ ಇದ್ದಲಿನಂತೆ ಕಾಣುತ್ತಿತ್ತು. ಅದು ನಿರೀಕ್ಷಿಸುವಂಥದೇ. ಒಂದಕ್ಕಿಂತ ಹೆಚ್ಚು ಬಾರಿ ಅದನ್ನು ತೇವಗೊಳಿಸಲಾಯಿತು. ದೊಡ್ಡ ಹಡಗಿನಿಂದ ನಮ್ಮ ಹಡಗಿಗೆ ಇಳಿಸಿಕೊಳ್ಳುವಾಗ ಒಂದೇ ಸಮನೆ ಮಳೆ ಸುರಿದಿತ್ತು. ಆದರೆ ನಮ್ಮ ದೀರ್ಘ ಸಂಚಾರದಿಂದ ಅದು ಬಿಸಿಗೊಂಡಿತು. ಅನೈಚ್ಛಿಕವೂ ಅಪ್ರಯತ್ನಪೂರ್ವಕವೂ ಆದ ದಹನಕ್ರಿಯೆ ಘಟಿಸಿತು.

'ನಾಯಕ ನಮ್ಮನ್ನು ಕ್ಯಾಬಿನ್ನಿಗೆ ಕರೆದ. ಮೇಜಿನ ಮೇಲೆ ನಕ್ಷೆ ಒಂದನ್ನು ಹರಡಿಕೊಂಡು ಮ್ಲಾನವದನನಾಗಿ ಕಂಡ. ಅವನು ಹೇಳಿದ—"ಪಶ್ಚಿಮ ಆಸ್ಟ್ರೇಲಿಯಾದ ತೀರ ಸಮೀಪಿಸುತ್ತಿದೆ. ಅಂದರೆ ನಮ್ಮ ಗುರಿಯತ್ತ ಮುನ್ನುಗ್ಗಬೇಕಾಗಿದೆ. ಇದು ಚಂಡಮಾರುತ ಏಳುವ ತಿಂಗಳು. ನಾವು ಹಡಗಿನ ಮುಖವನ್ನು ಬಾಂಕಾಕಿನತ್ತ ತಿರುಗಿಸಿ ಬೆಂಕಿಯೊಡನೆ ಯುದ್ಧಕ್ಕಿಳಿಯಬೇಕು. ನಾವೆಲ್ಲ ಹುರಿದ ಬಾಡಾಗಿ ಹೋದರೂ ಸಹ ನಾವು ಹಿಂದಕ್ಕೆ ಯಾವ ಬಂದರಿಗೂ ಹೋಗಕೂಡದು. ಗಾಳಿಯ ಅಭಾವದ ಮೂಲಕ ಈ ದರಿದ್ರ ದಹನದ ಉಸಿರು ಕಟ್ಟಿಸಲು ಮೊದಲು ಪ್ರಯತ್ನಿಸೋಣ."

'ನಾವು ಪ್ರಯತ್ನಿಸಿದೆವು. ನೆಲಕ್ಕೆ ಹಾಸುವ ಹಲಗೆಗಳಂತೆ ಎಲ್ಲವನ್ನೂ ಕೆಳಕ್ಕಿಳಿದೆವು. ಆದರೂ ಅದು ಹೊಗೆ ನಿಲ್ಲಿಸಲಿಲ್ಲ. ಅಗೋಚರವಾದ ಅತಿ ಸೂಕ್ಷ್ಮ ರಂಧ್ರಗಳಿಂದ ಹೊಗೆ ಹೊರಗೆ ಬರುತ್ತಿತ್ತು. ಹಲಗೆಗಳ ತಡಿಕೆ ಹಾಗೂ ಹೊದಿಕೆಗಳ ಮೂಲಕ ಅದು ತೀವ್ರಗೊಳ್ಳುತ್ತಿತ್ತು. ಅದು ಇಲ್ಲಿ, ಅಲ್ಲಿ, ಎಲ್ಲ ಕಡೆಯೂ—ತೆಳುವಾದ ದಾರಗಳಲ್ಲಿ, ಕಣ್ಣಿಗೆ ಕಾಣಿಸದಂಥ ಪೊರೆಗಳಲ್ಲಿ—ಅರ್ಥ ಮಾಡಿಕೊಳ್ಳಲಾಗದ ರೀತಿಯಲ್ಲಿ ಜಿನುಗತೊಡಗಿತು. ಕ್ರಮೇಣ ಕ್ಯಾಬಿನ್ನಿಗೂ ಕಾಲಿಕ್ಕಿತು; ಹಡಗಿನ ಮುಂಭಾಗದ ಸಣ್ಣ ಅಟ್ಟಕ್ಕೂ ಲಗ್ಗೆ ಹಾಕಿತು. ಹಡಗಿನ ಅಟ್ಟದ ಮೇಲಿನ ಆಶ್ರಯ ಸ್ಥಳಗಳನ್ನು ಕುಲಗೆಡಿಸಿತು. ಹಡಗಿನ ಪ್ರಮುಖ ಪ್ರಾಂಗಣದಲ್ಲೂ ಅದನ್ನು ಮೂಸಿನೋಡಬಹುದಿತ್ತು. ಹೊಗೆ ಹೊರಕ್ಕೆ ಬಂದರೆ ಗಾಳಿ ಒಳಕ್ಕೆ ಹೋಗುತ್ತದೆ ಎಂಬುದು ಸ್ಫಟಿಕಸ್ಪಷ್ಟ ಸಂಗತಿಯಾಗಿತ್ತು. ಅದು ನಿಜಕ್ಕೂ ಎದೆಗುಂದಿಸುವಂಥದಾಗಿತ್ತು. ಆ ದಹನ ಉಸಿರುಗಟ್ಟಿ ಸಾಯಲು ಸಿದ್ಧವಿರಲಿಲ್ಲ.

'ನೀರ ಮೂಲಕ ಪ್ರಯತ್ನಿಸುವುದೆಂದು ತೀರ್ಮಾನಿಸಿ ನಾವು ಕಿಂಡಿಗಳನ್ನು ತೆಗೆದುಬಿಟ್ಟೆವು. ಬಿಳಿಯ, ಹಳದಿಯ, ಸಾಂದ್ರವಾದ, ಜಿಡ್ಡನ್ನುಳ್ಳ, ಮಂಜಿನಂತಹ, ಉಸಿರುಕಟ್ಟಿಸುವಂತಹ ಹೊಗೆಯ ವಿಪುಲರಾಶಿ ಕೂವೆ ಮರದ ನೆತ್ತಿಯ ಮೇಲಿರುವ ಹಲಗೆಯ ಎತ್ತರಕ್ಕೆ ಏರತೊಡಗಿತು. ಎಲ್ಲ ನೌಕರರು ಹಡಗಿನ ಹಿಂಭಾಗವನ್ನೆಲ್ಲ ಬರಿದು ಮಾಡಿದರು. ಆಗ ವಿಷಪೂರಿತ ಹೊಗೆ ಮೋಡ ಕರಗಿತು. ಸಾಮಾನ್ಯ ಕಾರ್ಖಾನೆಯ ಹೊಗೆಗೊಳವಿಯ ಹೊಗೆಗಿಂತ ಮಂದವಾದ ಹೊಗೆಯೊಳಗೆ ಕೆಲಸ ಮಾಡಲು ಹಿಂದಕ್ಕೆ ಹೊರಟೆವು.

'ದ್ರವವನ್ನು ಮೇಲಕ್ಕೆ ಕಳಿಸುವ ಒತ್ತಡದ ಪಂಪನ್ನು ಸರಿಪಡಿಸಿದೆವು. ಮೊದಲು ನೀರ್ಗೊಳವೆಯನ್ನು ನೀಟಾಗಿಸಿದೆವು. ಇಷ್ಟರಲ್ಲೇ ಅದು ಸಿಡಿಯುವುದು ಖಾತ್ರಿ. ಏಕೆಂದರೆ ಅದು ಹಡಗಿನಷ್ಟೇ ಹಳೆಯದು—ಪ್ರಪ್ರಾಚೀನ ನೀರ್ಕೊಳವಿ, ರಿಪೇರಿಯ ಹಂತ ಮೀರಿದ್ದು. ಆಗ ನಾವು ದುರ್ಬಲ ಹೆಡ್‌ಪಂಪ್ ಒಂದರಿಂದ ಪಂಪು ಮಾಡಿ, ಬಕೆಟ್ಟುಗಳಿಗೆ ನೀರು ತುಂಬಿಕೊಂಡು, ಹಿಂದೂ ಮಹಾಸಾಗರದ ಬಹುಭಾಗ ನೀರನ್ನು ಮುಖ್ಯ ಕಂಡಿಯೊಳಕ್ಕೆ ಸಕಾಲದಲ್ಲಿ ಹುಯ್ದು ಹೇಗೋ ನಿರ್ವಹಿಸಿದೆವು. ಬಿಸಿಲಿನಲ್ಲಿ ಹೊಳೆಯುತ್ತಿದ್ದ ಉಜ್ವಲ ಪ್ರವಾಹ, ತೆವಳುವ ಬಿಳಿ ಹೊಗೆಯ ಪದರದ ಮೇಲೆ ಬಿದ್ದು, ಕಲ್ಲಿದ್ದಲ ಕಪ್ಪು ಮೈಮೇಲೆ ಕಣ್ಮರೆಯಾಗುತ್ತಿತ್ತು. ಮೇಲೆದ್ದ ಆವಿ ಹೊಗೆಯೊಡನೆ ಕಲಸಿಕೊಂಡಿತು. ತಳವಿರದ ಪೀಪಾಯಿಯೊಳಕ್ಕೆ ಸುರಿದಂತೆ ನಾವು ಉಪ್ಪು ನೀರನ್ನು ಸುರಿದೆವು. ಆ ಹಡಗಿನಲ್ಲಿ ಪಂಪು ಮಾಡಬೇಕಾದದ್ದು ನಮ್ಮ ಹಣೆಬರಹ—ಅದರಿಂದ ಹೊರಕ್ಕೆ ಹಾಗೂ ಅದರೊಳಕ್ಕೆ. ನಾವು ಮುಳುಗಿ ಹೋಗದಂತೆ ರಕ್ಷಿಸಿಕೊಳ್ಳಲೋಸ್ಕರ ನೀರನ್ನು ಹೊರಕ್ಕೆ ಸಾಗಿಸಿದೆವು; ಸುಟ್ಟು ಹೋಗದಂತೆ ನಮ್ಮನ್ನು ನಾವು ರಕ್ಷಿಸಿಕೊಳ್ಳ ಲೋಸ್ಕರ ಅದರೊಳಕ್ಕೆ ನೀರನ್ನು ಸುರಿದೆವು.

'ಮಾಡು ಅಥವಾ ಮಡಿ ಶಾಂತ ವಾತಾವರಣದಲ್ಲಿ ಮೆಲ್ಲಗೆ ತೆವಳ ತೊಡಗಿತು. ಆಕಾಶ ಶುಭ್ರತೆಯ ಪವಾಡದಂತಿತ್ತು; ನಿಡು ನೀಲಿಯ ವಿಸ್ಮಯದಂತಿತ್ತು. ಸಮುದ್ರ ಮಿರುಗುತ್ತಿತ್ತು; ನೀಲಿಯಾಗಿತ್ತು; ಪಾರದರ್ಶಕವಾಗಿತ್ತು; ಎಲ್ಲ ಕಡೆಗೂ ವಿಸ್ತರಿಸಿ ದಿಗಂತದವರೆಗೂ ವ್ಯಾಪಿಸಿ ಅಮೂಲ್ಯ ರತ್ನದಂತೆ ಹೊಳೆಯುತ್ತಿತ್ತು—ಅಖಂಡ ಭೂಮಂಡಲವೇ ಒಂದು ರತ್ನಾಭರಣವೇನೋ, ಬೃಹದಾಕಾರದ ಇಂದ್ರ ನೀಲವೇನೊ, ಒಂಟಿ ರತ್ನ ಗ್ರಹವಾಗಿ ರೂಪುಗೊಂಡಿತೇನೋ ಎನ್ನುವ ಹಾಗೆ. ಮಹಾ ಶಾಂತ ಸಮುದ್ರದ ಹೊಳಪಿನ ಮೇಲೆ ಜುಡಿಯಾ ಅಗೋಚರವಾಗಿ ಜಾರಿತು—ನಿಸ್ತೇಜ ಕೊಳಕು ಆವಿಯಿಂದ ಸುತ್ತುವರಿದು, ಸೋಮಾರಿ ಹೊಗೆ ಮೋಡದೊಳಗೆ ದಾರಿ ತಪ್ಪಿ ಗಾಳಿ ಮರೆಯ ದಿಕ್ಕಿಗೆ ನಿಧಾನವಾಗಿ ಹಗುರವಾಗಿ ಸಾಗುತ್ತಾ. ಮಾರಕ ಹೊಗೆ ಮೋಡ ಉಜ್ವಲ ಸಮುದ್ರ ಮತ್ತು ಆಕಾಶಗಳನ್ನು ಮಲಿನಗೊಳಿಸಿತು.

'ಇಷ್ಟು ಕಾಲ ನಾವು ಬೆಂಕಿಯನ್ನು ಕಾಣಲಿಲ್ಲ. ತಳದಲ್ಲೆಲ್ಲೊ ಸರಕು ಕುಮುಲಿ ಹೋಗುತ್ತಿರಬೇಕು. ಒಂದು ಸಾರಿ ಮಹೋನ್—ಪಕ್ಕಪಕ್ಕದಲ್ಲಿಯೇ ನಾವಿಬ್ಬರೂ ಕೆಲಸಮಾಡುತ್ತಿದ್ದುದರಿಂದ—ವಿಲಕ್ಷಣ ನಗೆಯಿಂದ ನನಗೆ ಹೇಳಿದ—"ಈಗ ಇದರಲ್ಲಿ ಭಾರಿ ಬಿರುಕುಂಟಾದರೆ—ನಾವು ಕಡಲುಗಾಲುವೆಯನ್ನು ಬಿಟ್ಟಾಗ ಆಯಿತಲ್ಲ ಹಾಗೆ—

ಈ ಬೆಂಕಿಗೆ ಪೂರ್ಣ ವಿರಾಮ ಹಾಕಿದಂತಾಗುತ್ತದೆಯಲ್ಲವೆ?" ನಾನು ಅಪ್ರಸ್ತುತವಾಗಿ ಟೀಕಿಸಿದೆ "ಇಲಿಗಳನ್ನು ಮರೆತಿಲ್ಲವಲ್ಲವೆ?"

'ಬೆಂಕಿಯೊಡನೆ ಯುದ್ಧ ಮಾಡಿ ಶರಣುಗೊಳಿಸಿ, ಏನೂ ಆಗಿಯೇ ಇರಲಿಲ್ಲ ವೇನೋ ಎನ್ನುವ ಹಾಗೆ ಹಡಗನ್ನು ತುಂಬ ಎಚ್ಚರಿಕೆಯಿಂದ ಮುನ್ನಡೆಸಿಕೊಂಡು ಹೋದೆವು. ಅಡಿಗೆಯ ಮೇಲ್ವಿಚಾರಕ ಅಡುಗೆ ಮಾಡಿ ನಮಗೆಲ್ಲ ಬಡಿಸಿದ. ಇನ್ನುಳಿದ ಹನ್ನೆರಡು ಜನಗಳಲ್ಲಿ ನಾಲ್ಕು ಜನ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರೆ, ಇನ್ನೆಂಟು ಜನ ಕೆಲಸದ ಮೇಲೆ ಇರುತ್ತಿದ್ದರು. ನಾಯಕನ ಸಮೇತ ಪ್ರತಿಯೊಬ್ಬರಿಗೂ ಸರದಿ ಬರುತ್ತಿತ್ತು. ಥೇಟು ಸಹೋದರತ್ವ ಇಲ್ಲದಿದ್ದರೂ ಸಮಾನತೆ ಇತ್ತು; ಸದ್ಭಾವ ಇತ್ತು. ಕೆಲವು ಸಾರಿ ಕಂಡಿಯೊಳಕ್ಕೆ ಬಕೆಟ್ಟಿನ ನೀರನ್ನು ಕುಮ್ಮರಿಸುವ ಮನುಷ್ಯ "ಉಫೇ, ಬಾಂಕಾಕಿಗೆ" ಎಂದು ಚೀರಿದರೆ, ಉಳಿದವರು ನಗುತ್ತಿದ್ದರು. ಆದರೆ ಸಾಮಾನ್ಯವಾಗಿ ನಾವು ಶಾಂತ, ಗಂಭೀರ ಮತ್ತು ದಾಹದವರು. ಓಹ್! ಎಂಥ ಮಹದಾಶೆಯ ದಾಹ! ಮತ್ತೆ ನಾವು ಸಮುದ್ರದೊಡನೆ ತುಂಬ ಎಚ್ಚರಿಕೆಯಿಂದ ಇರಬೇಕಾಗಿತ್ತು. ಕಟ್ಟುನಿಟ್ಟಿನ ಅಪ್ಪಣೆ. ಹಡಗು ಹೊಗೆಗರೆಯಿತು. ಸೂರ್ಯ ಧಗಧಗಿಸಿದ ....ಮುಂದಿನವರಿಗೆ ಸೀಸೆ ಜರುಗಿಸಿ.

'ನಾವು ಸರ್ವವಿಧದಲ್ಲೂ ಪ್ರಯತ್ನಿಸಿದೆವು. ಬೆಂಕಿಮುಟ್ಟಿ ಆಗೆಮುಬಿಡಬೇಕೆಂಬ ಪ್ರಯತ್ನವನ್ನೂ ಮಾಡಿದೆವು. ಫಲಕಾರಿಯಾಗಲಿಲ್ಲ. ಯಾವ ಮನುಷ್ಯನೂ ಕೆಳಗೆ ಒಂದು ನಿಮಿಷದ ಮೇಲೆ ನಿಲ್ಲಲಾರ. ಮೊದಲು ಹೋದ ಮಹೋನ್ ಅಲ್ಲಿಯೇ ಮೂರ್ಛೆ ಹೋದ. ಅವನನ್ನು ಎತ್ತರಲು ಹೋದ ಮನುಷ್ಯ ಅವನಂತೆಯೇ ಆದ. ಅವರಿಬ್ಬರನ್ನೂ ಅಟ್ಟದ ಮೇಲಕ್ಕೆ ಎಳೆತಂದೆವು. ಎಷ್ಟು ಸುಲಭವಾಗಿ ಅದನ್ನು ಮಾಡ ಬಹುದೆಂದು ತೋರಿಸಲು ನಾನು ಕೆಳಗಿಳಿದೆ. ಅಷ್ಟು ಹೊತ್ತಿಗೆ ಅವರಿಗೆ ಬುದ್ಧಿ ಬಂದಿತ್ತಾದ್ದರಿಂದ ಪೊರಕೆ ಹಿಡಿಗೆ ಕೊಕ್ಕೆಯ ಗಾಳ ಹಾಕಿ ನನ್ನನ್ನು ಹಿಡಿಯುವುದರಲ್ಲಿ ಸಂತೃಪ್ತಗೊಂಡರೆಂದು ಕಾಣುತ್ತದೆ. ಕೆಳಗೆ ಬಿಟ್ಟಿದ್ದ ನನ್ನ ಗೋರುಗುದ್ದಲಿಯನ್ನು ತರಲು ನಾನು ಹೋಗಲಿಲ್ಲ.

ಪರಿಸ್ಥಿತಿ ಹದಗೆಡುವಂತೆ ಕಂಡಿತು. ದೊಡ್ಡ ದೋಣಿಯನ್ನು ನೀರಿನೊಳಕ್ಕೆ ಇಟ್ಟೆವು. ಎರಡನೆಯ ದೋಣಿ ತೂಗಾಡಲು ಸಿದ್ಧವಾಗಿತ್ತು. ಹಡಗಿನ ಹಿಂಭಾಗದಲ್ಲಿರುವ ಭಾರವೆತ್ತುವ ಯಂತ್ರದ ಮೇಲೆ ಇನ್ನೊಂದು ಹದಿನಾಲ್ಕು ಅಡಿಯ ದೋಣಿ ಇತ್ತು. ಆದರೆ ಅದು ಸುಕ್ಷೇಮವಾಗಿತ್ತು.

'ಆಗ ನೋಡಿ ಇದ್ದಕ್ಕಿದ್ದಂತೆ ಹೊಗೆ ಕಮ್ಮಿಯಾಯಿತು. ಹಡಗಿನ ತಳಕ್ಕೆ ನೀರನ್ನು ಹಾಯಿಸಲು ನಮ್ಮ ಪ್ರಯತ್ನವನ್ನು ಇಮ್ಮಡಿಗೊಳಿಸಿದೆವು. ಎರಡು ದಿನಗಳಲ್ಲಿ ಹೊಗೆಯ ಹೆಸರೇ ಇಲ್ಲದಂತಾಯ್ತು. ಪ್ರತಿಯೊಬ್ಬರೂ ದೊಡ್ಡದಾಗಿ ಹಲ್ಲುಕಿರಿದರು. ಇದು ನಡೆದದ್ದು ಶುಕ್ರವಾರ. ಶನಿವಾರ ಕೆಲಸವೇ ಇರಲಿಲ್ಲ—ಹಡಗು ನಡೆಸುವು ದೊಂದನ್ನು ಬಿಟ್ಟು. ಹದಿನೈದು ದಿನಗಳಲ್ಲಿ ಮೊಟ್ಟಮೊದಲ ಬಾರಿಗೆ ಜನ ತಮ್ಮ ಬಟ್ಟೆಗಳನ್ನು ಹಾಗೂ ಮುಖಗಳನ್ನು ಉಜ್ಜಿ ತೊಳೆದರು. ಅವರಿಗೆಲ್ಲ ವಿಶೇಷ ಔತಣ ವನ್ನು ನೀಡಲಾಯಿತು. ತನ್ನಷ್ಟಕ್ಕೆ ತಾನೇ, ಕಾರಣವಿಲ್ಲದೆ, ಕಾಣಿಸಿಕೊಂಡ ದಹನದ

ಬಗ್ಗೆ ತಿರಸ್ಕಾರದಿಂದ ಮಾತಾಡಿದ್ದೆ ಅಲ್ಲದೆ, ಆ ದಹನವನ್ನು ಆರಿಸಿದವರು ನಾವು ಎಂಬ ಹೆಮ್ಮೆ ಧ್ವನಿತವಾಗುತ್ತಿತ್ತು. ಹೇಗೋ ನಾವು ಪ್ರತಿಯೊಬ್ಬರೂ ವಂಶಪಾರಂಪರ್ಯವಾಗಿ ದೊಡ್ಡ ಸಿಧಿಯೊಂದನ್ನು ಪಡೆದವರಂತೆ ಸಂತೃಪ್ತ ಭಾವದಿಂದಿದ್ದೆವು. ಆದರೆ ಹಡಗಿನಮೇಲೆ ಸುಟ್ಟಿದ್ದರ ಕೆಟ್ಟ ವಾಸನೆ ಜೋತುಬಿದ್ದಿತ್ತು. ನಾಯಕ ಬಿಯರ್ಡನ ಕಣ್ಣುಗಳು ಗುಳಿ ಬಿದ್ದಿದ್ದವು; ಕೆನ್ನೆಗಳು ಒಳಹೋಗಿದ್ದವು; ಈ ಮೊದಲು ಇಷ್ಟು ಮಟ್ಟಿಗೆ ಹಿಂಡಿ ಹೋಗಿರುವುದನ್ನೂ ಬಾಗಿ ಹೋಗಿರುವುದನ್ನೂ ನಾನೆಂದೂ ಗಮನಿಸಿರಲಿಲ್ಲ. ಅವನು ಮತ್ತು ಮಹೋನ್ ಸರಕು ಕಿಂಡಿಗಳನ್ನು ಗಾಳಿ ಕಿಂಡಿಗಳನ್ನು ಮೂಸುತ್ತಾ ಸಂಯಮದಿಂದ ಹುಡುಕಾಡುತ್ತಿದ್ದರು. ಬಡಪ್ರಾಣಿ ಮಹೋನ್ ತುಂಬಾ ಮುದುಕ ಎಂಬುದು ನನಗೆ ತಟ್ಟನೆ ಹೊಳೆಯಿತು. ನೌಕಾಯುದ್ಧವನ್ನು ಗೆಲ್ಲಲು ನಾನು ಸಹಾಯ ಮಾಡಿದ್ದೆ ಎಂಬ ಭಾವ ಎಂಥ ಸಂತೋಷ ಹಾಗೂ ಹೆಮ್ಮೆ ನೀಡಬಲ್ಲುದೋ ಅಂಥದೇ ಸಂತೋಷ ಹಾಗೂ ಹೆಮ್ಮೆಯಿಂದ ನಾನಿದ್ದೆ, ಓಹ್ ! ಯೌವನವೇ !

'ರಾತ್ರಿ ತುಂಬ ಸುಂದರವಾಗಿತ್ತು. ಜೆಳಗ್ಗೆ ಮನೆ ಕಡೆ ಮುಖ ಮಾಡಿದ್ದ ಹಡಗೊಂದು ನಮ್ಮನ್ನು ದಾಟಿ ಬಹುದೂರ ಹೋಗಿತ್ತು. ತಿಂಗಳುಗಟ್ಟಲೆಯಿಂದ ನಾವು ನೋಡಿದ ಮೊದಲನೆಯ ಹಡಗು ಅದು. ಉತ್ತರಕ್ಕೆ ನೂರತೊಂಬತ್ತು ಮೈಲಿಗಳ ದೂರದಲ್ಲಿ ಜಾವಾದ್ವೀಪ ಇದ್ದುದರಿಂದ ನಾವು ಕಟ್ಟಕಡೆಗೆ ಭೂಮಿಗೆ ಹತ್ತಿರವಾಗುತ್ತಿದ್ದೆವು.

'ಮಾರನೆಯ ದಿವಸ ಎಂಟರಿಂದ ಹನ್ನೆರಡು ಗಂಟೆಗಳ ತನಕ ಅಟ್ಟದ ಮೇಲೆ ಕಾವಲು ಕಾಯುವ ಸರದಿ ನನ್ನದಾಗಿತ್ತು. ಉಪಾಹಾರದ ಸಮಯದಲ್ಲಿ ನಾಯಕ ಲಕ್ಷ್ಯವಿಟ್ಟು ಹೇಳಿದ "ಕ್ಯಾಬಿನ್ನಿನ ಮೇಲೆ ಆ ವಾಸನೆ ಹೇಗೆ ಜೋತುಬಿದ್ದಿದೆ ಎಂಬುದೇ ವಿಚಿತ್ರ". ಹತ್ತು ಗಂಟೆಯ ಸಮಯದಲ್ಲಿ ಹಡಗಿನ ಹಿಂಭಾಗದ ಮೇಲಟ್ಟದಲ್ಲಿ ನನ್ನ ಸಹೋದ್ಯೋಗಿ ಇದ್ದುದರಿಂದ, ಒಂದು ಕ್ಷಣ ನಾನು ಮುಖ್ಯ ಅಟ್ಟದ ಮೇಲಕ್ಕೆ ಕಾಲಿಟ್ಟೆ. ಬಡಗಿಯ ಬೆಂಚು ಮುಖ್ಯ ಕೂವೆ ಮರದ ಹಿಂಭಾಗದಲ್ಲಿ ನಿಂತುಕೊಂಡಿತ್ತು. ನಾನು ಅದನ್ನು ಒರಗಿಕೊಂಡು ಪೈಪನ್ನು ಬಾಯಿಗಿಟ್ಟುಕೊಂಡು ಸೇದುತ್ತಿದ್ದೆ. ತರುಣ ಬಡಗಿ ನನ್ನೊಡನೆ ಮಾತಾಡಲು ಬಂದ. ಅವನು ಹೇಳಿದ "ನಾವು ಚೆನ್ನಾಗಿ ಕೆಲಸ ಮಾಡಿದೆವು ಅನ್ನಿಸುತ್ತದೆ—ಅಲ್ಲವೆ ?" ಆ ಮೂರ್ಖ ಬೆಂಚನ್ನು ವಾಲಿಸಲು ಪ್ರಯತ್ನಿಸುತ್ತಿರುವುದನ್ನು ಗಾಬರಿಯಿಂದ ಗ್ರಹಿಸಿದೆ. ನಾನು ಒರಟಾಗಿ ಹೇಳಿದೆ "ವರಸೆ ಬೇಡ" ಕೂಡಲೇ ವಿಲಕ್ಷಣ ಸಂವೇದನೆಯ ಅಸಂಗತ ಭ್ರಾಂತಿಯ ಅರಿವುಂಟಾಯಿತು. ಹೇಗೋ ನಾನು ಗಾಳಿಯಲ್ಲಿ ತೇಲುತ್ತಿರುವಂತೆ ತೋರಿತು. ನನ್ನ ಸುತ್ತಲೂ ಅದುಮಿಟ್ಟ ಉಸಿರನ್ನು ಬಿಟ್ಟಂತೆ ಕೇಳಿಸತೊಡಗಿತು—ಸಾವಿರಾರು ಜನ ರಾಕ್ಷಸರು ಏಕಕಾಲದಲ್ಲಿ ಫೂ ಫೂ ಎಂದಂತೆ—ತಟಕ್ಕನೆ ಪಕ್ಕೆಮೂಳೆಗಳು ನೋಯುವ ಹಾಗೆ ತೀವ್ರವಲ್ಲದ ಸಂಘಟ್ಟನೆ ಜರುಗಿದಂತೆ ಭಾಸವಾಯಿತು. ಅದರಲ್ಲಿ ಸಂಶಯವೇ ಇರಲಿಲ್ಲ—ನಾನು ಗಾಳಿಯಲ್ಲಿ ತೇಲುತ್ತಿದ್ದೆ ; ನನ್ನ ದೇಹ ಒಂದು ಪರವಲಯದಂತಿತ್ತು. ಆ ಸ್ಥಿತಿ ಹ್ರಸ್ವವಾಗಿದ್ದುದರಿಂದ ನನ್ನೊಳಗೆ ಅನೇಕ ಬಗೆಯ ಚಿಂತನೆಗಳನ್ನು ಮಾಡಲು ವೇಳೆಯಿತ್ತು. ನನಗೆ

ನೆನಪಿರುವ ಮಟ್ಟಿಗೆ ಕೆಳಗಿನ ಕ್ರಮದಲ್ಲಿ ಯೋಚನೆ ಹರಿಯಿತು. "ಇವನು ಬಡಗಿಯಾಗಿರಲಾರ. ಹಾಗಾದರೆ ಯಾರು? ಯಾವುದಾದರೂ ಆಘಾತ–ಸಮುದ್ರಾಂತರ್ಗಾಮಿ ನೌಕೆ?—ಕಲ್ಲಿದ್ದಲು, ಅನಿಲ—ದೇವರಾಣೆ! ನಾವು ಸ್ಫೋಟನಕ್ಕೊಳಗಾಗಿದ್ದೇವೆ—ಪ್ರತಿಯೊಬ್ಬರೂ ಸತ್ತಿದ್ದಾರೆ—ನಾನು ಹಿಂಭಾಗದ ಸರಕುಕಂಡಿಗೆ ಬೀಳುತ್ತಿದ್ದೇನೆ–ಅದರೊಳಗೆ ಬೆಂಕಿ ಇರುವುದು ಕಾಣುತ್ತಿದೆ". ಹಡಗಿನ ಸಾಮಾನು ಕುಳಿಯ ಗಾಳಿಯಲ್ಲಿ ನೇತು ಬಿದ್ದಿದ್ದ ಕಲ್ಲಿದ್ದಲ ಧೂಳು ಸ್ಫೋಟನದ ಸಂದರ್ಭದಲ್ಲಿ ಮಂದ ಕೆಂಪಿನಲ್ಲಿ ನಿಗಿ ನಿಗಿ ಹೊಳೆಯುತ್ತಿತ್ತು. ಬೆಂಚು ವಾಲಿದ ಕ್ಷಣವೇ, ಕಣ್ಣು ಮಿಟುಕಿಸುವುದರೊಳಗಾಗಿ, ಸೆಕೆಂಡಿನ ಸೂಕ್ಷ್ಮಾತಿ ಸೂಕ್ಷ್ಮ ಅಂಶದಂತರದಲ್ಲಿ, ಹಡಗಿನ ಸರಕಿನ ಮೇಲೆ ಉದ್ದಕ್ಕೂ ಕೋಚಿ ಕೋಚಿಯಾಗಿ ಕಾಲು ಚಾಚಿ ದೇಕುತ್ತಿದ್ದೆ. ನಾನು ಚೇತರಿಸಿಕೊಂಡು ತೆವಳುತ್ತಾ ಮೇಲೆ ಬಂದೆ. ಅದು ಹಿಂದಕ್ಕೆ ಚಿಮ್ಮಿ ಬರುವ ಚೆಂಡಿನ ವೇಗದಂತೆ ಕ್ಷಣಾರ್ಧದಲ್ಲಿ ಘಟಿಸಿತು. ಧ್ವಂಸಗೊಂಡ ಮರಮುಟ್ಟುಗಳಿಂದ ಹಡಗಿನ ಅಟ್ಟ ಭೀಕರವಾಗಿತ್ತು—ಬಿರುಗಾಳಿಯ ದೆಸೆಯಿಂದಾಗಿ ಕಾಡಿನ ಮರಗಳು ಅಡ್ಡಾದಿಡ್ಡಿಯಾಗಿ ಮುರಿದು ಬಿದ್ದಿರುವಂತೆ. ಹರಿದು ಜೂಲು ಜೂಲಾದ ಕೊಳಕು ಬಟ್ಟೆಯ ದೊಡ್ಡ ಪರದೆ ನನ್ನ ಮುಂದೆ ನಿಧಾನವಾಗಿ ತೂಗಾಡುತ್ತಿತ್ತು. ಸಿಡಿದು ಚೂರುಚೂರಾದ ಹಡಗಿನ ಮುಖ್ಯ ಹಾಯಿ ಅದು. ಕೂವೆಮರಗಳು ನೇರವಾಗಿ ತಲೆಕೆಳಗಾಗಿ ಉರುಳುತ್ತಿವೆ ಎಂದು ಯೋಚಿಸಿದೆ. ಹಡಗಿನ ಹಿಂಭಾಗದ ಮೇಲಟ್ಟದ ಏಣಿಯತ್ತ ಸದೃಶವಾಗಿ ಎಲ್ಲವೂ ದಾರಿಬಿಟ್ಟು ಕಂಬಿಕೀಳುತ್ತಿವೆ ಎನ್ನಿಸಿತು. ಬಟ್ಟಲುಗಣ್ಣಿನ, ತೆರೆದ ಬಾಯಿಯ, ರಜತ ಪರಿವೇಷದಂತೆ ತಲೆಯ ತುಂಬ ನೆಟ್ಟಗೆ ನಿಗುರಿ ನಿಂತಿದ್ದ ಬಿಳಿಗೂದಲಿನ ಮಹೋನನೇ ನಾನು ಮೊಟ್ಟಮೊದಲು ನೋಡಿದ ವ್ಯಕ್ತಿ. ಅವನು ಕೆಳಕ್ಕೆ ಹೋಗುವುದರಲ್ಲಿದ್ದ. ಪ್ರಧಾನ ಅಟ್ಟ ಅಲುಗಾಡಿ, ಬುಸುಗರೆಯುತ್ತ ಎತ್ತಿ ಕುಕ್ಕಿ, ಕಣ್ಣ ಮುಂದೆಯೇ ಚೂರು ಚೂರಾಗುವ ದೃಶ್ಯ ಕಣ್ಣಿಗೆ ಬಿದ್ದ ಕೂಡಲೆ ಮೇಲುಗಡೆಯೇ ಹೆಜ್ಜೆ ಕೀಲಿಸಿ ಕಲ್ಲಾಗಿ ನಿಂತುಬಿಟ್ಟ. ಅಪನಂಬುಗೆಯಿಂದ ಅವನನ್ನು ಕಣ್ಣು ಮಿಟುಕಿಸದೆ ನೋಡಿದೆ. ವಿಲಕ್ಷಣ ರೀತಿಯ ಆಘಾತಕುತೂಹಲದಿಂದ ಅವನೂ ನನ್ನನ್ನು ಕಣ್ಣು ಮಿಟುಕಿಸದೆ ನೋಡಿದ. ನನಗೆ ಕೂದಲಿರಲಿಲ್ಲ; ಕಣ್ಣಿನ ಹುಬ್ಬುಗಳಿರಲಿಲ್ಲ; ಕಣ್ಣಿನ ರೆಪ್ಪೆಗೂದಲಿರಲಿಲ್ಲ; ನನ್ನ ಯೌವನದ ಚಿಗರು ಮೀಸೆ ಸುಟ್ಟು ಹೋಗಿದೆ; ಮುಖ ಕಪ್ಪಾಗಿದೆ; ಒಂದು ಕೆನ್ನೆ ಬಾಯಿ ಬಿಟ್ಟುಕೊಂಡಿದೆ; ಮೂಗು ಮುಕ್ಕಾಗಿದೆ; ಗದ್ದದಿಂದ ರಕ್ತ ಸೋರುತ್ತಿದೆ ಎಂಬುದೊಂದೂ ನನಗೆ ತಿಳಿದಿರಲಿಲ್ಲ. ನನ್ನ ಟೋಪಿಯನ್ನು ಹಾಗೂ ಒಂದು ಚಪ್ಪಲಿಯನ್ನು ಕಳೆದುಕೊಂಡಿದ್ದೆ. ಶರಟು ಹರಿದು ಬಗಾಲಾಗಿತ್ತು. ಇದು ಯಾವುದೂ ನನ್ನ ಅರಿವಿಗೇ ಬಂದಿರಲಿಲ್ಲ. ಹಡಗು ಇನ್ನೂ ತೇಲುತ್ತಾ ಹೋಗುತ್ತಿರುವುದನ್ನು ಕಂಡು, ಸಮಗ್ರ ಹಿಂಭಾಗದ ಅಟ್ಟ, ಎಲ್ಲಕ್ಕಿಂತ ಹೆಚ್ಚಾಗಿ ಯಾರಾದರೂ ಜೀವಂತವಾಗಿರುವುದನ್ನು ಕಂಡು ಆಶ್ಚರ್ಯವಾಯಿತು. ಹಾಗೆಯೇ ಆಕಾಶದ ಶಾಂತತೆ ಮತ್ತು ಸಮುದ್ರದ ಗಂಭೀರತೆಗಳು ವಿಶಿಷ್ಟ ವಿಸ್ಮಯಕ್ಕೆ ಕಾರಣವಾದವು. ಅವು ಭಯಂಕರ ಸಂಕ್ಷೋಭೆಗೆ ಈಡಾಗುವುದನ್ನು ನಿರೀಕ್ಷಿಸಿದ್ದೆನೆಂದು ತೋರುತ್ತದೆ....ಪಕ್ಕದ ಮರತ್ತ ಸೀಸೆಯನ್ನು ಜರುಗಿಸಿ.

'ಎಲ್ಲಿಂದಲೋ ಹಡಗಿಗೆ ಜಯಕಾರ ಹಾಕುವ ಧ್ವನಿಯೊಂದು ಕೇಳಿಸಿತು—ಗಾಳಿಯಲ್ಲೊ, ಆಕಾಶದಲ್ಲೊ—ಅದನ್ನು ಹೇಳಲಾರೆ. ಪ್ರಸ್ತುತದಲ್ಲಿ ನಾಯಕನನ್ನು ಕಂಡೆ. ಅವನು ಹುಚ್ಚನಾಗಿದ್ದ. ಕುತೂಹಲದಿಂದ ಕೇಳಿದ—"ಕ್ಯಾಬಿನ್ನಿನ ಮೇಜು ಎಲ್ಲಿ?" ಅಂಥ ಪ್ರಶ್ನೆಯನ್ನು ಕಿವಿಯಿಂದ ಕೇಳಿಸಿಕೊಳ್ಳುವುದೇ ಒಂದು ಭಯಂಕರ ಆಘಾತ. ನಾನು ಸ್ಫೋಟಕ್ಕೊಳಗಾಗಿದ್ದೆ, ಚೆನ್ನಾಗಿ ತಿಳಿದುಕೊಳ್ಳಿ, ಆ ಅನುಭವದಿಂದೆ ಕಂಪಿಸುತ್ತಿದ್ದೆ. ನಾನು ಜೀವದಿಂದ ಇದ್ದೇನೆಯೋ ಅಥವಾ ಇಲ್ಲವೇ ಎಂಬುದೇ ನನಗೆ ಖಾತ್ರಿಯಾಗಿರಲಿಲ್ಲ. ಮಹೋನ್ ಕಾಲುಗಳಿಂದ ಕುಟ್ಟುತ್ತಾ ಅವನತ್ತ ಚೀರಿದ "ಅಯ್ಯೋ ದೇವರೆ, ಹಡಗಿನಿಂದ ಅಟ್ಟ ಸಿಡಿದು ಹೋಯಿತು ಎಂಬುದು ಗೊತ್ತಿಲ್ಲವೆ?" ನನಗೆ ಧ್ವನಿ ಬಂತು. ಕರ್ತವ್ಯಲೋಪ ಮಾಡಿದ ತಪ್ಪಿನ ಅರಿವಾದವನಂತೆ ತೊದಲಿದೆ—"ಕ್ಯಾಬಿನ್ನಿನ ಮೇಜು ಎಲ್ಲಿದೆಯೋ ನನಗೆ ಗೊತ್ತಿಲ್ಲ". ಅಸಂಗತ ಸ್ವಪ್ನದಂತೆ ಇತ್ತು ಅದು.

'ಮುಂದೆ ಏನು ಅಪೇಕ್ಷಿಸಿದ ನಿಮಗೆ ಗೊತ್ತೆ? ಅಡ್ಡದಿಮ್ಮಿಗಳನ್ನು ಕತ್ತರಿಸಲು ಬಯಸಿದ. ಪ್ರಸನ್ನನಾಗಿ, ಯೋಚನೆಯಲ್ಲಿ ಮುಳುಗಿ ಹೋದ ಹಾಗೆ, ಮುಂದಿನ ಅಡ್ಡದಿಮ್ಮಿಯನ್ನು ಸರಿಗೊಳಿಸಲು ಒತ್ತಾಯಿಸಿದ. "ಯಾರಾದರೂ ಜೀವದಿಂದಿದ್ದಾರೆಯೇ ಎಂಬುದೇ ಗೊತ್ತಿಲ್ಲ"—ಮಹೋನ್ ಕಳವಳಗೊಂಡ ಕಣ್ಣಲ್ಲಿ ಗದಗದಿಸಿದ. "ನಿಜವಾಗಿ", ಬಿಯರ್ಡ್ ಮೃದುವಾಗಿ ಹೇಳಿದ "ಮುಂದಿನ ಅಡ್ಡದಿಮ್ಮಿಯನ್ನು ಸರಿಯಾಗಿ ಅಳವಡಿಸಲು ಸಾಕಷ್ಟು ಜನ ಉಳಿದ್ದಾರೆ."

'ಆ ಮುದಿಯ ತನ್ನ ಮಲಗು ಮಂಚದಲ್ಲಿ ಕಾಲ ಮಾಪಕಕ್ಕೆ ಕೀ ಕೊಡುತ್ತಿದ್ದ. ಆಘಾತ ಅವನನ್ನು ಗಿರಕಿ ಹೊಡೆಸಿದ ಸಂದರ್ಭದಲ್ಲಿ. ಅದು ತಕ್ಷಣವೇ ಸಂಭವಿಸಿತು. ಆ ಮೇಲೆ ಅವನೇ ಹೇಳಿದ. ಹಡಗು ಯಾವುದಕ್ಕೋ ಅಪ್ಪಳಿಸಿತು. ಅವನು ಕ್ಯಾಬಿನ್ನಿನೊಳಕ್ಕೆ ಓಡಿದ. ಅಲ್ಲಿದ್ದ ಮೇಜು ಮಂಗಮಾಯವಾಗಿರುವುದನ್ನು ನೋಡಿದ. ಹಡಗಿನ ಅಟ್ಟ ಸಿಡಿತಕ್ಕೊಳಗಾಗಿ ಬಹುಶಃ ಹಿಂಭಾಗದಲ್ಲಿರುವ ಉಗ್ರಾಣದೊಳಕ್ಕೆ ಬಿದ್ದಿರಬೇಕು. ಆ ಬೆಳಗ್ಗೆ ನಾವು ಎಲ್ಲಿ ಉಪಹಾರ ಸ್ವೀಕರಿಸಿದೆವೋ ಅಲ್ಲಿ ಅವನು ನೆಲದೊಳಗೆ ದೊಡ್ಡ ರಂಧ್ರವನ್ನು ನೋಡಿದ. ಅದು ಅವನಿಗೆ ಭೀಕರ ರಹಸ್ಯವಾಗಿ ಕಂಡಿತು. ಅಟ್ಟವನ್ನೇರಿದ ಮೇಲೆ ಕಂಡದ್ದು ಮತ್ತು ಕೇಳಿದ್ದು ಇದಕ್ಕೆ ಹೋಲಿಸಿದಾಗ ಕ್ಷುದ್ರ ಸಂಗತಿಗಳೆಂದೆನಿಸಿ ಮನಸ್ಸಿನ ಮೇಲೆ ಹೆಚ್ಚು ಪರಿಣಾಮ ಬೀರಿತು. ಅವನು ಸ್ಪಷ್ಟವಾಗಿ, ಪ್ರತ್ಯಕ್ಷವಾಗಿ ಗಮನಿಸಿದ—ಚುಕ್ಕಾಣಿ ಚಕ್ರ ಅನಾಯಕವಾಯಿತು ಮತ್ತು ಹಡಗು ಅಡ್ಡದಾರಿ ಹಿಡಿದು ಹೊರಟಿತು ಎಂಬುದನ್ನು. ಅವನ ಒಂದೇ ಒಂದು ಯೋಚನೆಯೆಂದರೆ ಚಿಂತಾಜನಕವಾದ, ಹಲ್ಲಂಡೆಯಾದ, ಅಟ್ಟವಿಲ್ಲದ, ಒಳಗೇ ಕುಮುಲಿ ಹೋಗುತ್ತಿರುವ ಹಡಗಿನ ಒಡಲನ್ನು ಮತ್ತೆ ಯಥಾಸ್ಥಿತಿಗೆ ತಂದು ತನ್ನ ಅಂತಿಮ ಗಂತವ್ಯವಾದ ಬಾಂಕಾಕಿನತ್ತ ಅದರ ಮುಖ ತಿರುಗಿಸಬೇಕು ಎಂಬುದು. ಅದೇ ಅವನ ಹೆಬ್ಬಯಕೆ. ಶಾಂತ, ಶರಣಾಗತ, ಕಿಸುಗಾಲಿನ, ಪೂರ್ತಿ ಅಂದಗೆಟ್ಟ ಚಿಕ್ಕ ಮನುಷ್ಯ ತನ್ನ ಹಂಚಿಕೆಯ ಏಕಾಕಿತನದಲ್ಲಿ ಸಮೃದ್ಧವಾಗಿರುವುದನ್ನೂ ಮತ್ತು ನಮ್ಮ ಅತೃಪ್ತಿಯ ಬಗೆಗೆ ಪ್ರಸನ್ನ ಅಜ್ಞಾನದಲ್ಲಿರುವುದನ್ನೂ ನಾನು ಹೇಳುತ್ತಿದ್ದೇನೆ. ಅಧಿಕಾರ

ಚಲಾವಣೆಯ ಸಂಜ್ಞೆಯಿಂದ ನಮ್ಮನ್ನು ಮುಂದಕ್ಕೆ ದೂಡಿ ತಾನೇ ಚುಕ್ಕಾಣಿ ಚಕ್ರವನ್ನು ಹಿಡಿಯಲು ಹೋದ.

'ಆಘಾತದಿಂದ ಹಾಳಾದ ಅಡ್ಡದಿಮ್ಮಿಗಳನ್ನು ಸರಿಪಡಿಸುವುದೇ ನಮ್ಮ ಮೊದಲನೆಯ ಕೆಲಸವಾಯಿತು. ಯಾರೂ ಸಾಯಲಿಲ್ಲ ಅಥವಾ ಅಂಗ ಊನರಾಗಲಿಲ್ಲ. ಆದರೆ ಪ್ರತಿಯೊಬ್ಬರೂ ಹೆಚ್ಚುಕಮ್ಮಿ ಗಾಯಗೊಂಡರು. ಅವರನ್ನು ನೀವು ನೋಡಬೇಕಿತ್ತು! ಕೆಲವರು ಜೂಲುಬಟ್ಟೆಗಳಲ್ಲಿ, ಕಪ್ಪು ಮುಖಗಳಲ್ಲಿ, ಕಲ್ಲಿದ್ದಲನ್ನು ಸಾಗಿಸುವ ಕೂಲಿಯಾಳುಗಳಂತೆ, ಹೊಗೆಕೊಳವೆಯನ್ನು ಗುಡಿಸಿ ಒರೆಸುವ ಝಾಡಮಾಲಿಗಳಂತೆ ಇದ್ದರು. ಕೂದಲನ್ನು ಮೊಟಕಾಗಿ ಕ್ಷೌರ ಮಾಡಿಸಿಕೊಂಡ ಗುಂಡುದಲೆಗಳು ಅವರವು. ಮೇಲಾಗಿ ಮೈಮೇಲಿನ ಕೂದಲನ್ನು ಚರ್ಮದವರೆಗೂ ಸೀದುಬಿಡುವುದು ಅವರಿಗೆ ರೂಢಿ. ಕೆಳಗೆ ಕಾವಲು ಕಾಯುತ್ತಿದ್ದ ಬೇರೆಯವರು, ಕುಸಿದು ಬೀಳುತ್ತಿರುವ ಇರುಕಲು ಜಾಗಗಳಿಂದ ರಭಸವಾಗಿ ಚಿಮ್ಮಿದಾಗ ಎಚ್ಚರಗೊಂಡು, ಗಡಗಡ ನಡುಗುತ್ತಾ ನರಳುತ್ತಲೇ ಇದ್ದರು —ನಮ್ಮ ಕೆಲಸದ ಮೇಲೆ ನಾವು ಹೋದರೂ. ಆದರೆ ಅವರೆಲ್ಲರೂ ದುಡಿದರು. ಲಿವರ್‌ಪೂಲಿನ ನೌಕರರು ಸ್ವತ್ವಶಾಲಿಗಳಾಗಿದ್ದು ಗಡುಸಾದ ಮೇಲ್ಮೈ ಆವರಣ ಹೊಂದಿರುತ್ತಾರೆ. ಅವರಿಗೆ ಯಾವಾಗಲೂ ಈ ಶಕ್ತಿ ಇರುತ್ತದೆ ಎಂಬುದು ಅನುಭವದಿಂದ ನನಗೆ ಗೊತ್ತು. ಅದನ್ನು ಅವರಿಗೆ ಕೊಟ್ಟಿರುವುದು ಸಮುದ್ರ—ಅದರ ವೈಶಾಲ್ಯ ಅದರ ಏಕಾಂತತೆ ಅವರ ಕಪ್ಪಾದ ನಿರುದ್ವೇಗ ಆತ್ಮಗಳನ್ನು ಆವರಿಸಿರುವುದರಿಂದ. ಸರಿ, ನಾವು ಮುಗ್ಗರಿಸಿದೆವು, ತೆವಳಿದೆವು, ಬಿದ್ದೆವು, ನಮ್ಮ ಕಣಕಾಲುಗಳ ಚರ್ಮವನ್ನು ಹೆರೆದು ಹಡಗನ್ನು ಮುಂದಕ್ಕೆ ನಡೆಸಿದೆವು. ಕೂವೆ ಮರಗಳು ನಿಂತವು. ಆದರೆ ಕೆಳಗೆ ಅವುಗಳು ಎಷ್ಟು ಸುಟ್ಟು ಕರಿಕಾಗಿದ್ದಿರಬಹುದು ಎಂಬುದು ನಮಗೆ ಗೊತ್ತಿಲ್ಲ. ಪರಿಸ್ಥಿತಿ ಶಾಂತವಾಗಿತ್ತು ಆದರೆ ಪಶ್ಚಿಮದಿಂದ ದೀರ್ಘ ಉಬ್ಬರ ಬಂದು ಹಡಗನ್ನು ಮುಂದೂಡಿತು. ಅವು ಯಾವ ಗಳಿಗೆಯಲ್ಲಾದರೂ ಮುರಿದು ಬೀಳಬಹುದು. ಭೀತಿಯಿಂದ ಅವುಗಳತ್ತ ನೋಡಿದೆವು. ಅವು ಯಾವ ಕಡೆಗೆ ಬೀಳುತ್ತವೆ ಎಂಬುದನ್ನು ಮುಂದಾಗಿ ಯಾರೂ ಗ್ರಹಿಸಲು ಸಾಧ್ಯವಿಲ್ಲ.

'ನಾವು ಹಡಗನ್ನು ಹಿಂದಕ್ಕೆ ಸರಿಸಿ ನಮ್ಮ ರಕ್ಷಣೆಯನ್ನು ನೋಡಿಕೊಂಡೆವು. ತುದಿಯಲ್ಲಿ ಹಲಗೆಗಳು, ಅಂಚಿನಲ್ಲಿ ಹಲಗೆಗಳು, ಸಿಬುರು ಚಕ್ಕೆಗಳು, ಧ್ವಂಸಗೊಂಡ ಮರಮುಟ್ಟುಗಳಿಂದ ಹಡಗಿನ ಅಟ್ಟ ಗೋಜಲುಗೋಜಲಾಗಿ ಜಡೆಗಟ್ಟಿತ್ತು. ಆ ಅವ್ಯವಸ್ಥೆಯೊಳಗಿನಿಂದ ಎದ್ದು ನಿಂತ ಕೂವೆ ಮರಗಳು, ತರಕಲು ತರಕಲಾದ ನೆಲದಲ್ಲಿ ಬೆಳೆದ ಕುರುಚಲು ಗಿಡಗಳ ಮೇಲೆ ಎತ್ತರಕ್ಕೆ ಬೆಳೆದುನಿಂತ ದೊಡ್ಡ ಮರಗಳಂತೆ ಕಾಣುತ್ತಿದ್ದವು. ಭಗ್ನಾವಶೇಷ ಮೊತ್ತದ ನಡುವೆ ಇರುವ ಕಿಂಡಿಗಳಲ್ಲಿ ಒಂದು ಬಗೆಯ ಬಿಳಿಯ, ತಾಮಸದ, ಚಲನೆಯ—ಒಂದು ರೀತಿಯಲ್ಲಿ ಕೈಗಂಟುವ ಮಂಜಿನಂಥದು ತುಂಬಿತ್ತು. ಕಣ್ಣಿಗೆ ಕಾಣದ ಬೆಂಕಿಯ ಹೊಗೆ ಮತ್ತೆ ಮೇಲೆ ಬರುತ್ತಾ ಜೋಲುತ್ತಿತ್ತು —ಉಸಿರುಕಟ್ಟಿ ನಿಂತ ಕಾಡಿನ ಕಣಿವೆಯಲ್ಲಿ ಸಾಂದ್ರ ಹಿಮ ನೇಲುವಂತೆ. ಆಗಲೇ ಹುಲ್ಲಿನ ಕಂತೆಗಳು ಸಿಬುರು ಸೀಳುಗಳ ಮಧ್ಯೆ ಸುರುಳಿ ಸುತ್ತಿಕೊಂಡು ಮೇಲೆ ಹೋಗುತ್ತಿದ್ದವು. ಅಲ್ಲಲ್ಲಿ ಯಾವುದಕ್ಕೋ ಗೋಡಿಮುಖವಾಗಿ ನೆಟ್ಟುಕೊಂಡಿರುವ ತೊಲೆಯ

ತುಂಡು ಕಂಬದಂತೆ ಕಾಣುತ್ತಿತ್ತು. ಪ್ರಮುಖ ಕೂವೆ ಮರದ ಸುತ್ತಲೂ ಇರುವ, ಹಗ್ಗ ಸುತ್ತಲು ಗೂಟಗಳಿರುವ ಕಟಕಟೆಯ ಅರ್ಧ ಭಾಗ ಮುನ್‌ಕೂವೆಯ ಪಟದೊಡನೆ ಚೂರುಚೂರಾಗಿತ್ತು. ದುಸ್ಥಿತಿಯ ಮಾಸಿದ ಹಡಗುಪಟಗಳ ಸಂಧಿಯಲ್ಲಿ ಆಕಾಶದ ಸುಂದರ ನೀಲಿಯ ತೇಪೆ ಕಾಣುತ್ತಿತ್ತು. ಅಡಕಲೊಟ್ಟಿಂತಿದ್ದ ಹಲವಾರು ಹಲಗೆಗಳ ಒಟ್ಟಿಲೊಂದು ಕಟಕಟೆಯ ಕಂಬಿಯ ಮೇಲೆ ಬಿದ್ದಿತು. ಒಂದು ತುದಿ ಹಡಗಿನ ಮೇಲಿನಿಂದ ಚಾಚಿಕೊಂಡಿತ್ತು—ಎಲ್ಲಿಗೂ ಕರೆದೊಯ್ಯದ, ಪೀಠಗಳ ಮಧ್ಯೆ ತಿರುಗಾಡಲು ಬಿಟ್ಟಿರುವ ದಾರಿಯಂತೆ, ಆಳವಾದ ಸಮುದ್ರದ ಮೇಲೆ ಬಿಟ್ಟಿರುವ ಕಾಲುದಾರಿಯಂತೆ—ತಕ್ಷಣವೇ ಹಡಗಿನ ಪಕ್ಕದಲ್ಲಿರುವ ಹಲಗೆಯ ಮೇಲೆ ನಡೆದು ಸಮುದ್ರಕ್ಕೆ ಬೀಳು ಮತ್ತು ಈ ಹಾಸ್ಯಾಸ್ಪದ ಸಂಕಷ್ಟಗಳಿಂದ ಮುಕ್ತವಾಗು ಎಂದು ಆಹ್ವಾನಿಸುವಂತೆ ಸಾವಿನತ್ತ ಕರೆದೊಯ್ಯುವಂತೆ ಇತ್ತು. ಇಂಥ ಸ್ಥಿತಿಯಲ್ಲೂ ಗಾಳಿಯೋ, ಆಕಾಶವೋ ಅಥವಾ ಭೂತವೋ—ಅಂತೂ ಅಗೋಚರವಾದದ್ದೇನೋ ಹಡಗನ್ನು ಮುನ್ನಡೆಸುತ್ತಿತ್ತು.

'ಯಾರಿಗಾದರೂ ನೋಡುವ ಪ್ರಜ್ಞೆ ಇದ್ದರೆ, ಚುಕ್ಕಾಣಿ ಹಿಡಿದು ನಡೆಸುವ ವ್ಯಕ್ತಿ, ಹಠಾತ್ ಪ್ರವೃತ್ತಿಯ ದೆಸೆಯಿಂದ ಹಡಗಿನ ಮೇಲಿಂದ ಕೆಳಕ್ಕೆ ನೆಗೆದು ಮತ್ತೆ ಹಿಂದಕ್ಕೆ ಬರಲು ಒದ್ದಾಡುತ್ತಿರುವುದನ್ನು ನೋಡಬಹುದಿತ್ತು. ಅವನು ಚೀರುತ್ತಾ, ಹಡಗಿನ ಸಮುಕ್ಕೂ ಮತ್ಸ್ಯಪುರುಷನಂತೆ ಆತುರಾತುರವಾಗಿ ಈಜಿದ. ನಾವು ಅವನಿಗೆ ಹಗ್ಗವನ್ನೆಸೆದೆವು. ನೀರು ತೊಟ್ಟಿಕ್ಕುವ ಮೈಯಲ್ಲಿ ನಮ್ಮೊಂದಿಗೆ ನಿಂತುಕೊಂಡ—ಜೋಲುಮೋರೆ ಹಾಕಿಕೊಂಡು. ನಾಯಕ ಚುಕ್ಕಾಣಿಯನ್ನು ಬೇರೆಯವರಿಗೆ ಬಿಟ್ಟುಕೊಟ್ಟು, ಬಿಡಿಯಾಗಿ, ಮೊಳಕೈಯನ್ನು ಕಟಕಟೆಯ ಕಂಬಿಯ ಮೇಲೆ ಮತ್ತು ಗಲ್ಲವನ್ನು ಕೈಯ ಮೇಲೆ ಇಟ್ಟು, ಸಮುದ್ರವನ್ನು ಚಾಪಲ್ಯದಿಂದ ನೋಡುತ್ತಾ ನಿಂತ. ನಾವು ನಮ್ಮನ್ನೇ ಪ್ರಶ್ನಿಸಿಕೊಂಡೆವು—ಮುಂದೇನು? ನಾನು ಯೋಚಿಸಿದೆ—ಈಗ ಇದು ಏನೋ ಒಂದು ಥರ. ಇದು ಮಹತ್ವದ್ದು. ಮುಂದೆ ಏನಾಗುವುದೋ ಎಂದು ಆಶ್ಚರ್ಯಪಡುತ್ತೇನೆ. ಓಹ್! ಯೌವನವೇ!

'ತಕ್ಷಣವೇ ಹಿಂದೆ ಬಹಳ ದೂರದಲ್ಲಿ ಬರುತ್ತಿರುವ ಆವಿ ಹಡಗನ್ನು ಮಹೋನ್ ನೋಡಿದ. ನಾಯಕ ಬಿಯರ್ಡ್ ಹೇಳಿದ, "ನಾವು ಅದರೊಂದಿಗೆ ಸೇರಿ ಏನಾದರೂ ಮಾಡಬೇಕು ಇನ್ನು." ನಾವು ಎರಡು ಬಾವುಟಗಳನ್ನು ಹಾರಿಸಿದೆವು. ಸಮುದ್ರದ ಅಂತರ್ರಾಷ್ಟ್ರೀಯ ಭಾಷೆಯಲ್ಲಿ ಅದಕ್ಕೆ ಅರ್ಥ "ಬೆಂಕಿ ಬಿದ್ದಿದೆ, ತತ್‌ಕ್ಷಣದ ಸಹಾಯ ಬೇಕು" ಎಂದು. ಆ ಆವಿ ಹಡಗು ಬಹುಬೇಗನೆ ದೊಡ್ಡದಾಗಿ ಬೆಳೆಯಿತು ಮತ್ತು "ನಿಮ್ಮ ಸಹಾಯಕ್ಕೆ ನಾನು ಬರುತ್ತಿದ್ದೇನೆ" ಎಂದು ಹೇಳುವಂತೆ ಮುಂದಿನ ಕೂವೆ ಮರದ ಮೇಲೆ ಎರಡು ಬಾವುಟಗಳನ್ನು ಹಾರಾಡಿಸಿ ಸೂಚಿಸಿತು.

'ಅರ್ಧ ಗಂಟೆಯೊಳಗೆ ಅದು ಗಾಳಿ ಬೀಸುವ ದಿಕ್ಕಿನಲ್ಲಿ, ಸಂಬೋಧಿಸುವಷ್ಟು ಅಂತರದಲ್ಲಿ, ಎದುರುಬದರಾಗಿ ಬಂದು ನಿಂತಿತು. ನಾವು ನಮ್ಮ ಚಿತ್ತಸ್ವಾಸ್ಥ್ಯವನ್ನು ಕಳೆದುಕೊಂಡು ಎಲ್ಲರೂ ಭಾವೋದ್ವೇಗದಿಂದ ಕಿರುಚಿಕೊಂಡೆವು—"ನಾವು ಏದುಸಿರು ಬಿಡುತ್ತಿದ್ದೇವೆ. ಇದು ನಮ್ಮನ್ನು ಚೆಂಡಾಡುತ್ತಿದೆ". ಆವಿ ಹಡಗಿನ ಮಧ್ಯದ ವೇದಿಕೆ

ಯಲ್ಲಿದ್ದ ಶ್ವೇತಶಿರಸ್ತ್ರಾಣದ ವ್ಯಕ್ತಿ ಕೂಗಿ ಹೇಳಿದ, "ಆಯಿತು, ಆಯಿತು." ಅವನು ತಲೆಯನ್ನು ಅಲುಗಾಡಿಸಿ ಮುಗುಳುನಕ್ಕ ಮತ್ತು ತನ್ನ ಕೈಯಿಂದ ಸಂತೈಕೆಯ ಭಾವ ಸೂಚಿಸಿದ—ಹೆದರಿಕೊಂಡ ಮಕ್ಕಳನ್ನು ಸಂತೈಸುವ ಹಾಗೆ. ದೋಣಿಗಳಲ್ಲೊಂದು ನೀರಿಗೆ ಧುಮುಕಿ ತನ್ನ ಉದ್ದನೆಯ ಹುಟ್ಟುಗಳೊಡನೆ ನಮ್ಮ ಕಡೆಗೆ ತೇಲಿ ಬಂತು. ಮಲಯ ದೇಶದ ನಾವಿಕರ ಪ್ರಥಮ ದರ್ಶನ ನನಗಾದದ್ದು ಅಂದೇ. ಅಂದಿನಿಂದ ಅವರನ್ನು ನೋಡಿದ್ದೇನೆ. ಆದರೆ ಆಗ ನನ್ನ ಗಮನವನ್ನು ಸೆಳೆದದ್ದೆಂದರೆ ಅವರ ನಿರಾತಂಕ ಭಾವ. ಪಕ್ಕದಲ್ಲೇ ಬಂದರೂ, ನಾವಿಕ ಎದ್ದು ನಿಂತು ದೋಣಿಯ ಕೊಂಡಿಯಿಂದ ನಮ್ಮ ಮುಖ್ಯ ಸರಪಣಿಗಳನ್ನು ಹಿಡಿದುಕೊಂಡಿದ್ದರೂ ನಮ್ಮತ್ತ ಒಮ್ಮೆ ದೃಷ್ಟಿ ಹಾಯಿಸಲೋಸುಗ ತಲೆಯೆತ್ತುವ ದೊಡ್ಡ ಮನಸ್ಸು ಮಾಡಲಿಲ್ಲ. ಕಷ್ಟಕ್ಕೊಳಗಾದ ಜನಗಳ ಬಗೆಗೆ ಹೆಚ್ಚು ಲಕ್ಷ್ಯ ಕೊಡಬೇಕು ಎಂದು ನನ್ನ ಅನ್ನಿಸಿಕೆ.

'ಕರಿದ ಆಲುಗಡ್ಡೆ ಹೋಳಿನಂತೆ ಒಣಗಿದ ಮತ್ತು ಕೋತಿಯಂತೆ ಚಾಕಚಕ್ಯತೆಯುಳ್ಳ ಚಿಕ್ಕ ವ್ಯಕ್ತಿಯೊಬ್ಬ ಕೈಕಾಲೂರಿ ಕಷ್ಟಪಟ್ಟು ಹಡಗು ಹತ್ತಿದ. ಆವಿ ಹಡಗಿನ ಸಹಾಯಕ ನಾಯಕ ಅವನು. ಅವನು ಒಮ್ಮೆ ನೋಟ ಹರಿಸಿ ಕಿರುಚಿದ "ಗೆಳೆಯರೆ, ನೀವು ಇದರಿಂದ ಹೊರಬಂದರೆ ಕ್ಷೇಮ."

'ನಾವು ಮೌನದಿಂದ ಇದ್ದೆವು. ನಮ್ಮ ನಾಯಕನೊಡನೆ ಪ್ರತ್ಯೇಕವಾಗಿ ಸ್ವಲ್ಪ ಹೊತ್ತು ಮಾತಾಡಿದ, ಚರ್ಚೆಗೂ ಇಳಿದಂತೆ ತೋರಿತು. ಆಮೇಲೆ ಅವರು ತಮ್ಮ ಆವಿ ಹಡಗಿಗೆ ಹೊರಟು ಹೋದರು.

'ನಮ್ಮ ನಾಯಕ ಹಿಂದಿರುಗಿ ನಾವಿರುವಲ್ಲಿಗೆ ಬಂದಾಗ ನಮಗೆ ಗೊತ್ತಾಯಿತು—ಆವಿ ಹಡಗು: ಸೋಮರ್‌ವಿಲ್ಲೆ. ನಾಯಕ: ನಾಷ್. ಅದು ಪಶ್ಚಿಮ ಆಸ್ಟ್ರೇಲಿಯಾದಿಂದ ಬಟಾವಿಯ ಮೂಲಕ ಸಿಂಗಪೂರಿಗೆ ಟಪಾಲು ಚೀಲಗಳನ್ನು ತುಂಬಿಕೊಂಡು ಹೊರಟಿದೆ. ಆಗಿರುವ ಒಪ್ಪಂದವೆಂದರೆ ಅದು ನಮ್ಮನ್ನು ಅಂಜೇರಕ್ಕೆ, ಸಾಧ್ಯವಾದರೆ ಬಟಾವಿಯಾಕ್ಕೆ ತಲುಪಿಸುವುದು. ಅಲ್ಲಿ ನಾವು ಪಿಪಾಯಿಯಿಂದ ನೀರು ಸುರಿದು ಬೆಂಕಿಯನ್ನು ಶಮನಮಾಡಿ, ಬಾಂಕಾಕಿನ ಪ್ರಯಾಣವನ್ನು ಮುಂದುವರಿಸಬೇಕು! ಮುದುಕ ಉದ್ವೇಗಕ್ಕೆ ಒಳಗಾದಂತೆ ತೋರಿದ. "ನಾವಿದನ್ನು ಮಾಡಿಯೇ ಮುಗಿಸುತ್ತೇವೆ"—ಮಹೋನನಿಗೆ ಚುಚ್ಚುವಂತೆ ಹೇಳಿದ. ಆಕಾಶದತ್ತ ಮುಷ್ಟಿ ಹಿಡಿದು ಅಲುಗಿಸಿದ. ಬೇರೆ ಯಾರೊಬ್ಬರೂ ಒಂದು ಮಾತು ಆಡಲಿಲ್ಲ.

'ಮಧ್ಯಾಹ್ನ ಆವಿ ಹಡಗು ಎಳೆಯಲು ಆರಂಭಿಸಿತು. ಆದು ತೆಳ್ಳಗೆ ಮತ್ತು ಎತ್ತರಕ್ಕೆ ಇದ್ದು ಮುಂದೆ ಮುಂದೆ ಸಾಗಿತು. ಅಳಿದುಳಿದ ಜುಡಿಯಾ ಎಪ್ಪತ್ತು ಮಾರುದ್ದದ ಎಳೆಯುವ ಹಗ್ಗದ ಕೊನೆಯಲ್ಲಿ ಅದನ್ನು ಹಿಂಬಾಲಿಸಿತು—ಹೊರಚಾಚಿದ ಕೂವೆಮರಗಳ ತುದಿಯುಳ್ಳ ಹೊಗೆ ಮೋಡದ ಹಾಗೆ. ನಾವು ಹಾಯಿಗಳನ್ನು ಕಟ್ಟಲು ಮೇಲಕ್ಕೆ ಹೋದೆವು. ಅಡ್ಡದಿಮ್ಮಿಗಳ ಮೇಲೆ ನಿಂತು ಕೆಮ್ಮಿದೆವು ಮತ್ತು ಹಡಗಿನ ತಟದ ಉಬ್ಬಿಕೊಳ್ಳುವ ಮಧ್ಯ ಭಾಗದಲ್ಲಿ ತುಂಬ ಎಚ್ಚರಿಕೆಯಿಂದ ಇದ್ದೆವು. ಯಾವ ಕ್ಷಣದಲ್ಲಾದರೂ ಕೂವೆಮರಗಳು ತಲೆಕೆಳಗಾಗಿ ಬಿದ್ದು ಬಿಡುತ್ತವೆ ಎಂದು ಯೋಚಿಸದೆ ಇರುವ ಒಂದು ನರಪಿಳ್ಳೆಯೂ ಅಲ್ಲಿರಲಿಲ್ಲ.

'ಎತ್ತರದಲ್ಲಿರುವ ನಮಗೆ ಹೊಗೆಯಾಡುವುದು ಕಾಣುತ್ತಿರಲಿಲ್ಲ. ಹುರಿಯಿಂದ ಸಮಪ್ರಮಾಣದ ಸುತ್ತುಗಳನ್ನು ಹಾಕಿ ಕಟ್ಟಿದರು. ಕೆಳಗಿನಿಂದ ಮಹೋನ್ ಕೂಗಿಕೊಂಡ—"ಇಂಬುಗೊಟ್ಟು ಕಟ್ಟಿ—ಅಲ್ಲಿ ಎತ್ತರದಲ್ಲಿ."

'ಅರ್ಥವಾಯಿತೆ ನಿಮಗಿದು? ಅವರಲ್ಲಿ ಒಬ್ಬನಾದರೂ ವಾಡಿಕೆ ದಾರಿಯಲ್ಲಿ ಇಳಿಯುವ ನಿರೀಕ್ಷೆಯಲ್ಲಿದ್ದಾನೆಂದು ನಾನು ಭಾವಿಸುವುದಿಲ್ಲ. ನಾವು ಇಳಿದಾಗ ಅವರು ಪರಸ್ಪರ ಮಾತಾಡುತ್ತಿದ್ದುದನ್ನು ಕೇಳಿಸಿಕೊಂಡೆ—"ಹಡಗಿನ ಮೇಲ್ಗಡೆಯಿಂದ ನಾವು ಒಟ್ಟಾಗಿ ಕೋಲು ಮೊದಲಾದುವುಗಳೊಡನೆ—ಕೆಳಗಿಳಿಯಬಹುದೆಂದು ಭಾವಿಸಿದ್ದೆ. ಹಾಗೆ ಮಾಡಿಲ್ಲದಿದ್ದರೆ ಮೂದಲಿಸು." "ನಾನು ಯೋಚಿಸುತ್ತಿದ್ದದ್ದೂ ಅದನ್ನೇ"—ಸವೆದು ಹೋದ ಮತ್ತು ಪಟ್ಟಿಯಿಂದ ಕಟ್ಟುಗೊಂಡ ಇನ್ನೊಂದು ಬೆದರುಬೊಂಬೆ ಉತ್ತರಿಸಿತು. ವಿನಯದ ನಡೆನುಡಿಯ ತರಪೇತಿ ಇಲ್ಲದ ಜನ ಇವರು ಎಂಬುದನ್ನು ನೆನಪಿಡಿ. ಪ್ರಾಣ ಉಳಿಸುವ ಪ್ರಶ್ನೆಯೇ ಇಲ್ಲದ ಮಹಾ ಪಾಷಂಡ ಅಪ್ರಯೋಜಕರೆಂಬುದು ನೋಡುವವರಿಗೆ ಗೊತ್ತಾಗುತ್ತಿತ್ತು. ಆದರೆ ಮಾಡಿ ಮುಗಿಸುವಂತೆ ಅವರನ್ನು ಪ್ರಚೋದಿಸಿದ್ದು ಏನು? ಚೆನ್ನಾಗಿದೆ ಎಂದು ಪ್ರಜ್ಞಾಪೂರ್ವಕವಾಗಿ ಅಂದುಕೊಂಡರೂ ಹಡಗಿನ ಪಟದ ಮಧ್ಯದ ಉಬ್ಬಿದ ಭಾಗವನ್ನು ಸರಿಯಾಗಿಲ್ಲವೆಂದು ಎರಡು ಸಾರಿ ಅಲ್ಲಗಳೆದು ಮತ್ತೆ ಸರಿಪಡಿಸಲು ಹೇಳಿದ ನನ್ನ ಮಾತನ್ನು ಪಾಲಿಸುವಂತೆ ಮಾಡಿದ್ದು ಏನು? ವೃತ್ತಿಯ ಪ್ರಸಿದ್ಧಿ ಅವರಿಗಿಲ್ಲ—ಉದಾಹರಣೆಗಳಿಲ್ಲ, ಪ್ರಶಂಸೆ ಇಲ್ಲ. ಅದು ಕರ್ತವ್ಯ ಪ್ರಜ್ಞೆ ಅಲ್ಲವೇ ಅಲ್ಲ. ಅವರೆಲ್ಲರಿಗೂ ಚೆನ್ನಾಗಿ ಗೊತ್ತು—ಕಳ್ಳ ಬೀಳುವುದು, ಸೋಮಾರಿಯಾಗಿ ಕಾಲ ಹರಣ ಮಾಡುವುದು, ನುಣುಚಿಕೊಳ್ಳುವುದು. ಅವರು ಮನಸ್ಸು ಮಾಡಿದರೆ ಇದೆಲ್ಲ ಸುಲಭ ಸಾಧ್ಯ. ಬಹುಶಃ ಅವರು ಮನಸ್ಸು ಮಾಡಿದ್ದರು. ತಿಂಗಳಿಗೆ ಎರಡು ಪೌಂಡು ಹತ್ತು ಷಿಲ್ಲಿಂಗ್ ಅವರನ್ನು ಅಲ್ಲಿಗೆ ಕಳಿಸಿತೆ? ಅರ್ಧ ಸಂಬಳ ಬೇಕಾದಷ್ಟಾಯಿತು ಎಂದು ಅವರು ಯೋಚಿಸಿಲ್ಲ. ಇಲ್ಲ, ಅವರಲ್ಲೇನೋ ಇದೆ, ಹುಟ್ಟಿನಿಂದ ಬಂದ ಯಾವುದೋ ಒಂದು—ಸೂಕ್ಷ್ಮವಾದದ್ದು, ಶಾಶ್ವತವಾದದ್ದು. ಫ್ರೆಂಚ್ ಅಥವಾ ಜರ್ಮನ್ ಹಡಗಿನ ನೌಕರರು ಮಾಡುತ್ತಿರಲಿಲ್ಲ ಎಂದು ಇತ್ಯಾತ್ಮಕವಾಗಿ ಹೇಳಲಾರೆ. ಆದರೆ ಇವರ ಹಾಗೆಯೇ ಮಾಡುತ್ತಾರೆಂಬೋ ಎಂಬುದರ ಬಗ್ಗೆ ನನಗೆ ಅನುಮಾನವಿದೆ. ಅವರಲ್ಲಿ ಪೂರ್ಣತೆ ಇತ್ತು, ಮೂಲಧಾತುವಿನ ಹಾಗೆ ಗಟ್ಟಿಯಾದದ್ದು, ಸಹಜ ಪ್ರವೃತ್ತಿಯ ಹಾಗೆ ಉದ್ಘಟತನವುಳ್ಳದ್ದು—ಯಾವುದೋ ರಹಸ್ಯದ ಅನಾವರಣ—ಒಳಗೆ ಅಡಗಿಕೊಂಡಿರುವ ಯಾವುದೋ ಒಂದು—ಒಳ್ಳೆಯದೋ ಕೆಟ್ಟದ್ದೋ—ಜನಾಂಗ ವ್ಯತ್ಯಾಸವನ್ನು ರುಜುವಾತು ಪಡಿಸುತ್ತದೆ, ದೇಶಗಳ ಹಣೆಬರಹವನ್ನು ರೂಪಿಸುತ್ತದೆ.

'ಅದೇ ರಾತ್ರಿ ಹತ್ತು ಗಂಟೆಗೆ—ಅದರೊಡನೆ ಕುಸ್ತಿಮಾಡುತ್ತಾ ಬಂದಂದಿನಿಂದ ಮೊದಲ ಬಾರಿಗೆ—ನಾವು ಬೆಂಕಿಯನ್ನು ನೋಡಿದೆವು. ಆವಿ ಹಡಗಿನ ಎಳೆತದ ವೇಗ ಒಳಗೊಳಗೇ ಕುಮುಲುತ್ತಿದ್ದ ವಿನಾಶಕ್ಕೆ ಗಾಳಿ ಬೀಸಿತು. ಧ್ವಂಸಗೊಂಡ ಹಡಗಿನ ಅಟ್ಟದ ಕೆಳಗಿನ ಮುಂಭಾಗದಲ್ಲಿ ಹೊಳೆಯುವ ನೀಲಿ ಮಿನುಗು ಕಾಣಿಸಿತು. ತೇಪೆತೇಪೆಯಾಗಿ ತೂಗಾಡಿತು. ಮಿಣುಕು ಹುಳದ ಬೆಳಕಿನಂತೆ ಕಲಕಿ ಹರಿದಾಡುವಂತೆ ಕಾಣಿಸಿತು. ನಾನು ಮೊದಲು ನೋಡಿ ಮಹೋನನಿಗೆ ಹೇಳಿದೆ. "ಹಾಗಿದ್ದರೆ ಕೆಲಸ

ಕೆಟ್ಟಿತು" ಎಂದ ಅವನು. "ಎಳೆದುಕೊಂಡು ಹೋಗುವುದನ್ನು ನಿಲ್ಲಿಸಿದರೆ ಮೇಲು. ಇಲ್ಲದಿದ್ದರೆ ನಾವು ಸರಿ ಮಾಡುವ ಮೊದಲು ಅದು ತಟಕ್ಕನೆ ಹಿಂಭಾಗ ಮುಂಭಾಗದಲ್ಲಿ ಸ್ಫೋಟಗೊಂಡುಬಿಡುತ್ತದೆ." ನಾವು ಬೊಬ್ಬೆ ಹಾಕಿದೆವು. ಅವರ ಗಮನ ಸೆಳೆಯಲು ಗಂಟೆ ಬಾರಿಸಿದೆವು. ಅವರು ಎಳೆಯುವುದನ್ನು ನಿಲ್ಲಿಸಲಿಲ್ಲ. ಕೊನೆಗೆ ಮಹೋನ್ ಮತ್ತು ನಾನು ಮುಂದಕ್ಕೆ ತೆವಳಿಕೊಂಡು ಹೋಗಿ ಕೊಡಲಿಯಿಂದ ಹಗ್ಗವನ್ನು ಕತ್ತರಿಸಿದೆವು. ಕಟ್ಟುಗಳನ್ನು ಬಿಚ್ಚಲು ವೇಳೆಯೇ ಇರಲಿಲ್ಲ. ಹಡಗಿನ ಹಿಂಭಾಗದ ಮೇಲಟ್ಟಕ್ಕೆ ನಾವು ಧಾವಿಸುವಾಗ ನಮ್ಮ ಕಾಲ ಕೆಳಗೆ ಕಟ್ಟು ಹರಿದ ಪಂಜಿನಂತಿದ್ದ ಸಿಬುರು ಚಕ್ಕೆಗಳನ್ನು ಉರಿಯ ಕೆನ್ನಾಲಿಗೆಗಳು ನೆಕ್ಕುತ್ತಿರುವುದನ್ನು ನೋಡಬಹುದಿತ್ತು.

'ಆವಿ ಹಡಗಿನವರು ಬಹಳ ಬೇಗನೆ ಹಗ್ಗ ಕಿತ್ತು ಹೋಗಿರುವುದನ್ನು ಮನಗಂಡರು. ಅದು ಗಟ್ಟಿಯಾಗಿ ಸಿಳ್ಳೆಹಾಕಿತು. ಅದರ ದೀಪಗಳು ದೊಡ್ಡ ವೃತ್ತಾಕಾರದಲ್ಲಿ ಗುಡಿಸಿಕೊಂಡು ಬರುವುದನ್ನು ಕಾಣಬಹುದಿತ್ತು. ನಮ್ಮ ಹಡಗಿನ ಪಕ್ಕಕ್ಕೆ ಅದು ಬಂದು ನಿಂತಿತು. ನಾವೆಲ್ಲ ಹಡಗಿನ ಹಿಂಭಾಗದ ಮೇಲಟ್ಟದ ಮೇಲೆ ಒಟ್ಟಾಗಿ ಗುಂಪುಗೂಡಿ ಅದರತ್ತ ನೋಡುತ್ತಿದ್ದೆವು. ಪ್ರತಿಯೊಬ್ಬ ವ್ಯಕ್ತಿಯೂ ಒಂದು ಸಣ್ಣ ಹೊರೆಯನ್ನೋ ಚೀಲವನ್ನೋ ರಕ್ಷಿಸಿ ಉಳಿಸಿದ್ದ. ತಕ್ಷಣವೇ ಶಂಕುವಿನ ಆಕಾರದ ಜ್ವಾಲೆ—ನುಲಿಯಂತೆ ತಿರುಚಿದ ತುದಿಯೊಡನೆ— ಮುಂದಕ್ಕೆ ಎಗರಿ ಕಪ್ಪು ಸಮುದ್ರದ ಮೇಲೆ ಬೆಳಕಿನ ವೃತ್ತವನ್ನು ರಚಿಸಿತು. ಎರಡು ಹಡಗುಗಳು ಅಕ್ಕಪಕ್ಕದಲ್ಲಿ ನಿಂತಿದ್ದವು; ಮಧ್ಯದಲ್ಲಿ ಮೆತ್ತನೆಯ ಏದುಸಿರು, ಮುಲುಕು. ಕಂಬಿಯ ಚೌಕಟ್ಟಿನ ಮೇಲೆ ಗಂಟೆಗಟ್ಟಲೆಯಿಂದ ಮೂಕವಾಗಿ ಕುಳಿತಿದ್ದ ನಾಯಕ ಬಿಯರ್ಡ್ ಈಗ ಮೆಲ್ಲಗೆ ಎದ್ದು ನಮ್ಮ ಮುಂದಕ್ಕೆ ಬಂದ, ಹಡಗಿನ ಹಿಂಭಾಗದ ಕೂವೆಮರದ ಬಳಿಗೆ. ನಾಯಕ ನಾಷ್ ಕೂಗಿಕೊಂಡ—"ಬನ್ನಿ, ಹೊರಟು ಬನ್ನಿ....ವ್ಯೆಯೆಲ್ಲ ಕಣ್ಣಾಗಿ ನೋಡಿ....ನಮ್ಮ ಹಡಗಿನಲ್ಲಿ ಟಪಾಲು ಚೀಲಗಳಿವೆ. ನಾನು ನಿಮ್ಮನ್ನು ನಿಮ್ಮ ದೋಣಿಗಳನ್ನು ಸಿಂಗಪೂರಕ್ಕೆ ಕೊಂಡೊಯ್ಯುತ್ತೇನೆ."

' "ತುಂಬ ವಂದನೆಗಳು ನಿಮಗೆ! ನಾವು ಬರುವುದಿಲ್ಲ!" ನಮ್ಮ ನಾಯಕ ಹೇಳಿದ, "ನಾವು ನಮ್ಮ ಹಡಗಿನ ಕೊನೆಯನ್ನು ಕಣ್ಣಾರೆ ನೋಡಬೇಕಾಗಿದೆ."

' "ಇನ್ನು ಹೆಚ್ಚು ಹೊತ್ತು ನಿಲ್ಲಲಾರೆ. ಟಪಾಲು ಚೀಲಗಳಿವೆ" ಎಂದ ನಾಷ್;

' "ನಾವು ಕ್ಷೇಮವಾಗಿದ್ದೇವೆ."

' "ತುಂಬ ಸಂತೋಷ. ಸಿಂಗಪೂರದಲ್ಲಿ ಇದನ್ನು ವರದಿ ಮಾಡುತ್ತೇನೆ. ವಂದನೆಗಳು."

'ಅವನು ತನ್ನ ಕೈ ಬೀಸಿದ. ನಮ್ಮವರು ತಮ್ಮ ಹೊರೆಗಳನ್ನು ಶಾಂತವಾಗಿ ಕೆಳಗಿಟ್ಟರು. ಆವಿ ಹಡಗು ಮುಂದಕ್ಕೆ ಚಲಿಸಿತು. ವೃತ್ತಾಕಾರದ ಬೆಳಕನ್ನು ದಾಟಿ ಮುಂದೆ ಹೋಯಿತು. ಭಯಂಕರವಾಗಿ ಉರಿಯುವ ಜ್ವಾಲೆ ಕಣ್ಣನ್ನು ಕುಕ್ಕುತ್ತಿದ್ದುದರಿಂದ, ಆವಿ ಹಡಗು ತಟಕ್ಕನೆ ನಮ್ಮ ಕಣ್ಣೋಟದಿಂದ ಮರೆಯಾಯಿತು. ಆಗ ನಾನು ತಿಳಿದುಕೊಂಡೆ—ಸಣ್ಣ ದೋಣಿಯೊಂದರ ಅಧಿಕಾರಿಯಾಗಿ ನಾನು ಪೂರ್ವದೇಶಗಳನ್ನು ಮೊದಲ ಬಾರಿಗೆ ನೋಡುವೆನೆಂದು. ಅದು ಚೆನ್ನ ಎಂದು ಯೋಚಿಸಿದೆ.

ಹಳೆಯ ಹಡಗಿನ ಬಗ್ಗೆ ಭಕ್ತಿ ನಿಷ್ಠೆಗಳು ಇನ್ನೂ ಚೆನ್ನ. ನಾವು ಅದರ ಕೊನೆಯನ್ನು ಕಾಣಬೇಕು. ಓಹ್! ಮೋಹಗೊಳಿಸುವ ಯೌವನದ ಸೌಂದರ್ಯವೇ! ಯೌವನದ ಮಾಟವೇ! ಉರಿಯುವ ಹಡಗಿನ ಜ್ವಾಲೆಗಳಿಗಿಂತ ಮಿಗಿಲಾಗಿ ಕಣ್ಣು ಕುಕ್ಕುವಂಥದು ಯೌವನದ ಬೆಂಕಿ—ವಿಶಾಲ ವಿಶ್ವದಾದ್ಯಂತ ತನ್ನ ಮಾಂತ್ರಿಕ ಬೆಳಕನ್ನು ಚೆಲ್ಲಿ; ಕೆಚ್ಚಿನಿಂದ ಆಕಾಶಕ್ಕೆ ಕುಪ್ಪಳಿಸಿ. ಒಡನೆಯೇ ಅದನ್ನು ನಂದಿಸುವಂಥದು ಹೆಚ್ಚು ಕ್ರೂರವಾದ, ನಿಷ್ಕರುಣೆಯಾದ, ಸಮುದ್ರಕ್ಕಿಂತಲೂ ಹೆಚ್ಚು ಉಗ್ರವಾದ, ಉರಿಯುವ ಹಡಗಿನ ಜ್ವಾಲೆಗಳು ಅಭೇದ್ಯ ಕತ್ತಲಿನಿಂದ ಆವರಿಸಿಕೊಂಡಿರುವಂತೆ ಸರ್ವವನ್ನೂ ಆವರಿಸಿಕೊಂಡಿರುವ ಸರ್ವಗ್ರಾಹಿ ಕಾಲ!

* * *

ಹಡಗಿನ ಸಾಮಾನು ಸರಂಜಾಮುಗಳಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಸಮುದ್ರ ವಿಮಾ ವ್ಯಾಪಾರಿಗಳಿಗೆ ಉಳಿಸಿಕೊಡಬೇಕಾದದ್ದು ನಮ್ಮ ಕರ್ತವ್ಯದ ಅವಿಭಾಜ್ಯ ಭಾಗ ಎಂದು ವೃದ್ಧ ನಾಯಕ ತನಗೆ ಸಹಜವಾದ ಸೌಮ್ಯ ಆದರೆ ಅವಮ್ಯ ರೀತಿಯಲ್ಲಿ ನಮಗೆ ಎಚ್ಚರಿಕೆ ನೀಡಿದ. ಅದೇ ರೀತಿ ನಾವೆಲ್ಲ ಹಡಗಿನ ಹಿಂಭಾಗಕ್ಕೆ ಹೋದೆವು, ಕೆಲಸಮಾಡಲು. ನಮಗೆ ಸಾಕಷ್ಟು ಬೆಳಕನ್ನು ನೀಡಲೋಸುಗ ಅದು ಮುಂಭಾಗದಲ್ಲಿ ಉರಿಯುತ್ತಿತ್ತು. ರಾಶಿರಾಶಿ ಕೆಲಸಕ್ಕೆ ಬಾರದ ಕಚಡವನ್ನು ಎಳೆದು ಹೊರ ಹಾಕಿದೆವು. ನಾವು ಏನನ್ನು ಕಾಪಾಡಲಿಲ್ಲ. ಯಾವುದನ್ನು ಉಳಿಸಲಿಲ್ಲ? ಅಸಂಗತ ಪ್ರಮಾಣದ ತಿರುಪುಗಳಿಂದ ನೆಲೆಗೊಳಿಸಿದ್ದ ಒಂದು ಹಳೆಯ ವಾಯುಭಾರ ಮಾಪಕ ಇನ್ನೇನು ನನ್ನ ಪ್ರಾಣವನ್ನು ಆಹುತಿ ತೆಗೆದುಕೊಳ್ಳುವುದರಲ್ಲಿತ್ತು. ಅನಿರೀಕ್ಷಿತವಾಗಿ ಹೊಗೆಯ ಗಾಳಿ ನನ್ನ ಮೇಲೆರಗಿದಾಗ ಸಕಾಲದಲ್ಲಿ ಅಲ್ಲಿಂದ ಜಾರಿಕೊಂಡೆ. ಬಗೆಬಗೆಯ ದಾಸ್ತಾನುಗಳಿದ್ದವು: ರಟ್ಟು ತಟ್ಟುಗಳ ಗುಬ್ಬಿಮೊಳೆಗಳು, ಹಗ್ಗದ ಸುರುಳಿಗಳು. ಹಡಗಿನ ಹಿಂಭಾಗ ಒಂದು ಬಗೆಯಲ್ಲಿ ಕಡಲಿನ ಮಾರಾಟ ಮಳಿಗೆಯಂತೆ ಕಾಣುತ್ತಿತ್ತು. ಪಕ್ಕದ ಮೇಲಂಚಿನವರೆಗೂ ದೋಣಿಗಳ ತುಂಬ ಸಾಮಾನುಗಳನ್ನು ರಾಶಿರಾಶಿಯಾಗಿ ಒಟ್ಟಿದೆವು. ವೃದ್ಧ ನಾಯಕ ತನ್ನ ಅಧಿಕಾರಾವಧಿಯಲ್ಲಿ ಸಾಧ್ಯವಾದಷ್ಟನ್ನೆಲ್ಲ ತನ್ನೊಡನೆ ತೆಗೆದುಕೊಂಡು ಹೋಗಲು ಮನಸ್ಸು ಮಾಡಿದ್ದಾನೆಂದು ಯಾರೊಬ್ಬರೂ ಊಹಿಸಬಹುದಿತ್ತು. ಅವನು ತುಂಬ, ತುಂಬಾ ಶಾಂತವಾಗಿದ್ದ. ಆದರೆ ಪ್ರತ್ಯಕ್ಷವಾಗಿ ಸಮತೆಯನ್ನು ಕಳೆದುಕೊಂಡಿದ್ದ. ನೀವು ನಂಬುತ್ತೀರಾ? ದೊಡ್ಡ ದೋಣಿಯಲ್ಲಿ ಹಳೆಯ ಪ್ರವಾಹ ಹೊರಜಿಯೊಂದನ್ನು ಹಾಗೂ ಲಂಗರೊಂದನ್ನು ತನ್ನ ಜೊತೆಯಲ್ಲಿ ತೆಗೆದ ಕೊಂಡು ಹೋಗಬೇಕೆಂದು ಬಯಸಿದ್ದ. ನಾವೆಲ್ಲ ಗೌರವದಿಂದ ಆಯಿತು ಸಾರ್ ಎಂದೆವು. ಮೌನವಾಗಿ, ಸಾಮಾನುಗಳು ದೋಣಿಯಿಂದ ಕೆಳಗೆ ಜಾರಿ ಬೀಳಲಿ ಎಂದುಕೊಂಡೆವು. ಒಂದು ಭಾರವಾದ ಔಷಧದ ಪೆಟ್ಟಿಗೆ ಆ ಕಡೆಗೆ ಹೋಯಿತು; ಎರಡು ಚೀಲ ಕಾಫಿಪುಡಿ, ಬಣ್ಣದ ಡಬ್ಬಗಳು—ಕಲ್ಪಿಸಿಕೊಳ್ಳಿ ಬಣ್ಣ—ರಾಶಿರಾಶಿ ವಸ್ತುಗಳು. ಆಮೇಲೆ ದೋಣಿಗಳಲ್ಲಿ ಎಲ್ಲವನ್ನೂ ಸರಿಯಾಗಿ ಅಡುಕಿ ಯಾವಾಗೆಂದರೆ ಆಗ ಹಡಗನ್ನು ಬಿಟ್ಟು ದೋಣಿಯನ್ನು ಹತ್ತಲು ಸಿದ್ಧಮಾಡಿಬಿಡು ಎಂದು ನನಗೆ ಆಜ್ಞಾಪಿಸಿದ—ಸಹಾಯಕ್ಕೆ ಇಬ್ಬರನ್ನು ನನ್ನೊಡನೆ ಕಳಿಸಿ.

ಕೆಟ್ಟಿತು" ಎಂದ ಅವನು. "ಎಳೆದುಕೊಂಡು ಹೋಗುವುದನ್ನು ನಿಲ್ಲಿಸಿದರೆ ಮೇಲು. ಇಲ್ಲದಿದ್ದರೆ ನಾವು ಸರಿ ಮಾಡುವ ಮೊದಲು ಅದು ತಟಕ್ಕನೆ ಹಿಂಭಾಗ ಮುಂಭಾಗದಲ್ಲಿ ಸ್ಫೋಟಗೊಂಡುಬಿಡುತ್ತದೆ." ನಾವು ಬೊಬ್ಬೆ ಹಾಕಿದೆವು. ಅವರ ಗಮನ ಸೆಳೆಯಲು ಗಂಟೆ ಬಾರಿಸಿದೆವು. ಅವರು ಎಳೆಯುವುದನ್ನು ನಿಲ್ಲಿಸಲಿಲ್ಲ. ಕೊನೆಗೆ ಮಹೋನ್ ಮತ್ತು ನಾನು ಮುಂದಕ್ಕೆ ತೆವಳಿಕೊಂಡು ಹೋಗಿ ಕೊಡಲಿಯಿಂದ ಹಗ್ಗವನ್ನು ಕತ್ತರಿಸಿದೆವು. ಕಟ್ಟುಗಳನ್ನು ಬಿಚ್ಚಲು ವೇಳೆಯೇ ಇರಲಿಲ್ಲ. ಹಡಗಿನ ಹಿಂಭಾಗದ ಮೇಲಟ್ಟಕ್ಕೆ ನಾವು ಧಾವಿಸುವಾಗ ನಮ್ಮ ಕಾಲ ಕೆಳಗೆ ಕಟ್ಟು ಹರಿದ ಪಂಜಿನಂತಿದ್ದ ಸಿಬುರು ಚಕ್ಕೆಗಳನ್ನು ಉರಿಯ ಕೆನ್ನಾಲಿಗೆಗಳು ನೆಕ್ಕುತ್ತಿರುವುದನ್ನು ನೋಡಬಹುದಿತ್ತು.

'ಆವಿ ಹಡಗಿನವರು ಬಹಳ ಬೇಗನೆ ಹಗ್ಗ ಕಿತ್ತು ಹೋಗಿರುವುದನ್ನು ಮನಗಂಡರು. ಅದು ಗಟ್ಟಿಯಾಗಿ ಸಿಳ್ಳೆಹಾಕಿತು. ಅದರ ದೀಪಗಳು ದೊಡ್ಡ ವೃತ್ತಾಕಾರದಲ್ಲಿ ಗುಡಿಸಿಕೊಂಡು ಬರುವುದನ್ನು ಕಾಣಬಹುದಿತ್ತು. ನಮ್ಮ ಹಡಗಿನ ಪಕ್ಕಕ್ಕೆ ಅದು ಬಂದು ನಿಂತಿತು. ನಾವೆಲ್ಲ ಹಡಗಿನ ಹಿಂಭಾಗದ ಮೇಲಟ್ಟದ ಮೇಲೆ ಒಟ್ಟಾಗಿ ಗುಂಪುಗೂಡಿ ಅದರತ್ತ ನೋಡುತ್ತಿದ್ದೆವು. ಪ್ರತಿಯೊಬ್ಬ ವ್ಯಕ್ತಿಯೂ ಒಂದು ಸಣ್ಣ ಹೊರೆಯನ್ನೋ ಚೀಲವನ್ನೋ ರಕ್ಷಿಸಿ ಉಳಿಸಿದ್ದ. ತಕ್ಷಣವೇ ಶಂಕುವಿನ ಆಕಾರದ ಜ್ವಾಲೆ—ನುಲಿಯಂತೆ ತಿರುಚಿದ ತುದಿಯೊಡನೆ— ಮುಂದಕ್ಕೆ ಎಗರಿ ಕಪ್ಪು ಸಮುದ್ರದ ಮೇಲೆ ಬೆಳಕಿನ ವೃತ್ತವನ್ನು ರಚಿಸಿತು. ಎರಡು ಹಡಗುಗಳು ಅಕ್ಕಪಕ್ಕದಲ್ಲಿ ನಿಂತಿದ್ದವು: ಮಧ್ಯದಲ್ಲಿ ಮೆತ್ತನೆಯ ಏದುಸಿರು, ಮುಲುಕು. ಕಂಬಿಯ ಚೌಕಟ್ಟಿನ ಮೇಲೆ ಗಂಟಿಗಟ್ಟಲೆಯಿಂದ ಮೂಕವಾಗಿ ಕುಳಿತಿದ್ದ ನಾಯಕ ಬಿಯರ್ಡ್ ಈಗ ಮೆಲ್ಲಗೆ ಎದ್ದು ನಮ್ಮ ಮುಂದಕ್ಕೆ ಬಂದ, ಹಡಗಿನ ಹಿಂಭಾಗದ ಕೂವೆಮರದ ಬಳಿಗೆ. ನಾಯಕ ನಾಷ್ ಕೂಗಿಕೊಂಡ—"ಬನ್ನಿ, ಹೊರಟು ಬನ್ನಿ....ವೈಯೆಲ್ಲ ಕಣ್ಣಾಗಿ ನೋಡಿ....ನಮ್ಮ ಹಡಗಿನಲ್ಲಿ ಟಪಾಲು ಚೀಲಗಳಿವೆ. ನಾನು ನಿಮ್ಮನ್ನು ನಿಮ್ಮ ದೋಣಿಗಳನ್ನು ಸಿಂಗಪೂರಕ್ಕೆ ಕೊಂಡೊಯ್ಯುತ್ತೇನೆ."

' "ತುಂಬ ವಂದನೆಗಳು ನಿಮಗೆ! ನಾವು ಬರುವುದಿಲ್ಲ!" ನಮ್ಮ ನಾಯಕ ಹೇಳಿದ, "ನಾವು ನಮ್ಮ ಹಡಗಿನ ಕೊನೆಯನ್ನು ಕಣ್ಣಾರೆ ನೋಡಬೇಕಾಗಿದೆ."

' "ಇನ್ನು ಹೆಚ್ಚು ಹೊತ್ತು ನಿಲ್ಲಲಾರೆ. ಟಪಾಲು ಚೀಲಗಳಿವೆ" ಎಂದ ನಾಷ್;

' "ನಾವು ಕ್ಷೇಮವಾಗಿದ್ದೇವೆ."

' "ತುಂಬ ಸಂತೋಷ. ಸಿಂಗಪೂರದಲ್ಲಿ ಇದನ್ನು ವರದಿ ಮಾಡುತ್ತೇನೆ. ವಂದನೆಗಳು."

'ಅವನು ತನ್ನ ಕೈ ಬೀಸಿದ. ನಮ್ಮವರು ತಮ್ಮ ಹೊರೆಗಳನ್ನು ಶಾಂತವಾಗಿ ಕೆಳಗಿಟ್ಟರು. ಆವಿ ಹಡಗು ಮುಂದಕ್ಕೆ ಚಲಿಸಿತು. ವೃತ್ತಾಕಾರದ ಬೆಳಕನ್ನು ದಾಟಿ ಮುಂದೆ ಹೋಯಿತು. ಭಯಂಕರವಾಗಿ ಉರಿಯುವ ಜ್ವಾಲೆ ಕಣ್ಣನ್ನು ಕುಕ್ಕುತ್ತಿದ್ದುದರಿಂದ, ಆವಿ ಹಡಗು ತಟಕ್ಕನೆ ನಮ್ಮ ಕಣ್ಣೋಟದಿಂದ ಮರೆಯಾಯಿತು. ಆಗ ನಾನು ತಿಳಿದುಕೊಂಡೆ—ಸಣ್ಣ ದೋಣಿಯೊಂದರ ಅಧಿಕಾರಿಯಾಗಿ ನಾನು ಪೂರ್ವದೇಶಗಳನ್ನು ಮೊದಲ ಬಾರಿಗೆ ನೋಡುವೆನೆಂದು. ಅದು ಚೆನ್ನ ಎಂದು ಯೋಚಿಸಿದೆ.

ಹಳೆಯ ಹಡಗಿನ ಬಗ್ಗೆ ಭಕ್ತಿ ನಿಷ್ಠೆಗಳು ಇನ್ನೂ ಚೆನ್ನ. ನಾವು ಅದರ ಕೊನೆಯನ್ನು ಕಾಣಬೇಕು. ಓಹ್! ಮೋಹಗೊಳಿಸುವ ಯೌವನದ ಸೌಂದರ್ಯವೇ! ಯೌವನದ ಮಾಟವೇ! ಉರಿಯುವ ಹಡಗಿನ ಜ್ವಾಲೆಗಳಿಗಿಂತ ಮಿಗಿಲಾಗಿ ಕಣ್ಣು ಕುಕ್ಕುವಂಥದು ಯೌವನದ ಬೆಂಕಿ—ವಿಶಾಲ ವಿಶ್ವದಾದ್ಯಂತ ತನ್ನ ಮಾಂತ್ರಿಕ ಬೆಳಕನ್ನು ಚೆಲ್ಲಿ; ಕೆಚ್ಚಿನಿಂದ ಆಕಾಶಕ್ಕೆ ಕುಪ್ಪಳಿಸಿ. ಒಡನೆಯೇ ಅದನ್ನು ನಂದಿಸುವಂಥದು ಹೆಚ್ಚು ಕ್ರೂರವಾದ, ನಿಷ್ಕರುಣಿಯಾದ, ಸಮುದ್ರಕ್ಕಿಂತಲೂ ಹೆಚ್ಚು ಉಗ್ರವಾದ, ಉರಿಯುವ ಹಡಗಿನ ಜ್ವಾಲೆಗಳು ಅಭೇದ್ಯ ಕತ್ತಲಿನಿಂದ ಆವರಿಸಿಕೊಂಡಿರುವಂತೆ ಸರ್ವವನ್ನೂ ಆವರಿಸಿಕೊಂಡಿರುವ ಸರ್ವಗ್ರಾಹಿ ಕಾಲ!

* * *

ಹಡಗಿನ ಸಾಮಾನು ಸರಂಜಾಮುಗಳಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಸಮುದ್ರ ವಿಮಾ ವ್ಯಾಪಾರಿಗಳಿಗೆ ಉಳಿಸಿಕೊಡಬೇಕಾದದ್ದು ನಮ್ಮ ಕರ್ತವ್ಯದ ಅವಿಭಾಜ್ಯ ಭಾಗ ಎಂದು ವೃದ್ಧ ನಾಯಕ ತನಗೆ ಸಹಜವಾದ ಸೌಮ್ಯ ಆದರೆ ಅದಮ್ಯ ರೀತಿಯಲ್ಲಿ ನಮಗೆ ಎಚ್ಚರಿಕೆ ನೀಡಿದ. ಅದೇ ರೀತಿ ನಾವೆಲ್ಲ ಹಡಗಿನ ಹಿಂಭಾಗಕ್ಕೆ ಹೋದೆವು, ಕೆಲಸಮಾಡಲು. ನಮಗೆ ಸಾಕಷ್ಟು ಬೆಳಕನ್ನು ನೀಡಲೋಸುಗ ಅದು ಮುಂಭಾಗದಲ್ಲಿ ಉರಿಯುತ್ತಿತ್ತು. ರಾಶಿರಾಶಿ ಕೆಲಸಕ್ಕೆ ಬಾರದ ಕಚಡವನ್ನು ಎಳೆದು ಹೊರ ಹಾಕಿದೆವು. ನಾವು ಏನನ್ನು ಕಾಪಾಡಲಿಲ್ಲ. ಯಾವುದನ್ನು ಉಳಿಸಲಿಲ್ಲ? ಅಸಂಗತ ಪ್ರಮಾಣದ ತಿರುಪುಗಳಿಂದ ನೆಲೆಗೊಳಿಸಿದ್ದ ಒಂದು ಹಳೆಯ ವಾಯುಭಾರ ಮಾಪಕ ಇನ್ನೇನು ನನ್ನ ಪ್ರಾಣವನ್ನು ಆಹುತಿ ತೆಗೆದುಕೊಳ್ಳುವುದರಲ್ಲಿತ್ತು. ಅನಿರೀಕ್ಷಿತವಾಗಿ ಹೊಗೆಯ ಗಾಳಿ ನನ್ನ ಮೇಲೆರಗಿದಾಗ ಸಕಾಲದಲ್ಲಿ ಅಲ್ಲಿಂದ ಜಾರಿಕೊಂಡೆ. ಬಗೆಬಗೆಯ ದಾಸ್ತಾನುಗಳಿದ್ದವು: ರಟ್ಟು ತಟ್ಟುಗಳ ಗುಬ್ಬಿಮೊಳೆಗಳು, ಹಗ್ಗದ ಸುರುಳಿಗಳು. ಹಡಗಿನ ಹಿಂಭಾಗ ಒಂದು ಬಗೆಯಲ್ಲಿ ಕಡಲಿನ ಮಾರಾಟ ಮಳಿಗೆಯಂತೆ ಕಾಣುತ್ತಿತ್ತು. ಪಕ್ಕದ ಮೇಲಂಚಿನ ವರೆಗೂ ದೋಣಿಗಳ ತುಂಬ ಸಾಮಾನುಗಳನ್ನು ರಾಶಿರಾಶಿಯಾಗಿ ಒಟ್ಟಿದೆವು. ವೃದ್ಧ ನಾಯಕ ತನ್ನ ಅಧಿಕಾರಾವಧಿಯಲ್ಲಿ ಸಾಧ್ಯವಾದಷ್ಟನ್ನೆಲ್ಲ ತನ್ನೊಡನೆ ತೆಗೆದುಕೊಂಡು ಹೋಗಲು ಮನಸ್ಸು ಮಾಡಿದ್ದಾನೆಂದು ಯಾರೊಬ್ಬರೂ ಊಹಿಸಬಹುದಿತ್ತು. ಅವನು ತುಂಬ, ತುಂಬಾ ಶಾಂತವಾಗಿದ್ದ. ಆದರೆ ಪ್ರತ್ಯಕ್ಷವಾಗಿ ಸಮತೆಯನ್ನು ಕಳೆದು ಕೊಂಡಿದ್ದ. ನೀವು ನಂಬುತ್ತೀರಾ? ದೊಡ್ಡ ದೋಣಿಯಲ್ಲಿ ಹಳೆಯ ಪ್ರವಾಹ ಹೊರಜಿ ಯೊಂದನ್ನು ಹಾಗೂ ಲಂಗರೊಂದನ್ನು ತನ್ನ ಜೊತೆಯಲ್ಲಿ ತೆಗೆದ ಕೊಂಡು ಹೋಗ ಬೇಕೆಂದು ಬಯಸಿದ್ದ. ನಾವೆಲ್ಲ ಗೌರವದಿಂದ ಆಯಿತು ಸಾರ್ ಎಂದೆವು. ಮೌನವಾಗಿ, ಸಾಮಾನುಗಳು ದೋಣಿಯಿಂದ ಕೆಳಗೆ ಜಾರಿ ಬೀಳಲಿ ಎಂದುಕೊಂಡೆವು. ಒಂದು ಭಾರವಾದ ಔಷಧದ ಪೆಟ್ಟಿಗೆ ಆ ಕಡೆಗೆ ಹೋಯಿತು; ಎರಡು ಚೀಲ ಕಾಫಿಪುಡಿ, ಬಣ್ಣದ ಡಬ್ಬಗಳು—ಕಲ್ಪಿಸಿಕೊಳ್ಳಿ ಬಣ್ಣ—ರಾಶಿರಾಶಿ ವಸ್ತುಗಳು. ಆಮೇಲೆ ದೋಣಿ ಗಳಲ್ಲಿ ಎಲ್ಲವನ್ನೂ ಸರಿಯಾಗಿ ಅಡುಕಿ ಯಾವಾಗೆಂದರೆ ಆಗ ಹಡಗನ್ನು ಬಿಟ್ಟು ದೋಣಿ ಯನ್ನು ಹತ್ತಲು ಸಿದ್ಧಮಾಡಿಬಿಡು ಎಂದು ನನಗೆ ಆಜ್ಞಾಪಿಸಿದ—ಸಹಾಯಕ್ಕೆ ಇಬ್ಬರನ್ನು ನನ್ನೊಡನೆ ಕಳಿಸಿ.

'ನಾವು ಎಲ್ಲವನ್ನೂ ನೆಟ್ಟಗೆ ಜೋಡಿಸಿದೆವು. ದೊಡ್ಡ ದೋಣಿಯು ಕೂವೆಮರವನ್ನು—ಅದರ ಅಧಿಕಾರವನ್ನು ನಮ್ಮ ನಾಯಕ ವಹಿಸಿಕೊಳ್ಳುವುದರಿಂದ—ಅದರ ಕುಳಿಯಲ್ಲಿ ನೆಟ್ಟಗೆ ನಿಲ್ಲಿಸಿದೆವು. ಅದರಲ್ಲಿ ನಾನು ಗಳಿಗೆ ಹೊತ್ತು ಕೂತುಕೊಂಡದ್ದಕ್ಕೆ ನಾನೇನೂ ಪಶ್ಚಾತ್ತಾಪ ಪಡುವುದಿಲ್ಲ. ನನ್ನ ಮುಖ ಕಿವುಚಿಕೊಂಡಿತು. ಪ್ರತಿಯೊಂದು ಅಂಗವೂ ಮುರಿದು ತುಂಡಾಯಿತೇನೋ ಎನ್ನುವಂತೆ ನೋಯತೊಡಗಿತು. ಬೆನ್ನು ಮೂಳೆಯಲ್ಲಿ ಚಳುಕುಂಟಾಗಿ ಶಾಪ ಹಾಕುವಂತಾಯಿತು. ದೋಣಿಗಳು ಬಹಳ ಹತ್ತಿರದಲ್ಲಿಯೇ ಸಾಂದ್ರ ನೆರಳಿನಲ್ಲಿದ್ದವು. ಸುತ್ತಲೂ ಬೆಂಕಿಬೆಳಕಿನಿಂದ ಮೂಡಿದ ಸಮುದ್ರದ ವೃತ್ತವನ್ನು ನಾನು ನೋಡಬಹುದಿತ್ತು. ಒಂದು ದೆವ್ವಾಕಾರದ ಜ್ವಾಲೆ ನೇರವಾಗಿ ಸ್ಫುಟವಾಗಿ ಮುಂದಕ್ಕೆ ಎದ್ದು ಬಂತು. ಅದು ಕಣ್ಣು ಕುಕ್ಕುವಂತೆ ಧಗಧಗಿಸಿತು—ವೇಗವಾಗಿ ಹಾರುವ ಹಕ್ಕಿಯ ರೆಕ್ಕೆಗಳ 'ಭರ್' ಎಂಬ ಸದ್ದಿನಂತೆ; ಗುಡುಗು ಸಿಡಿಲುಗಳ ಗುಡಗುಡಬಡಬಡ ಚಿಟಿಲ್‌ಚಿಟಾರ್ ಎಂಬ ಸದ್ದಿನಂತೆ. ಚಟಚಟ ಸದ್ದುಗಳು, ಸಿಡಿತಗಳು, ಪುಂಖಾನುಪುಂಖವಾಗಿ ಮೇಲೆದ್ದವು. ಶಂಕುವಿನಾಕಾರದ ಜ್ವಾಲೆಯಿಂದ ಕಿಡಿಗಳು ಮೇಲ್ಮುಖವಾಗಿ ಹಾರಿದವು—ಮನುಷ್ಯ ಕಷ್ಟಕ್ಕೆ ಹುಟ್ಟಿದ್ದಾನೆ, ಬಿರುಕು ಬಿಟ್ಟು ಸೋರುವ ಮತ್ತು ಸುಟ್ಟುಹೋಗುವ ಹಡಗುಗಳಿಗೆ ಹುಟ್ಟಿದ್ದಾನೆ ಎನ್ನುವಂತೆ.

'ಹಡಗು ತನ್ನ ಪಾರ್ಶ್ವದ ಮುಂಭಾಗವನ್ನು ಉಬ್ಬರದತ್ತ ಆನಿಸಿಕೊಂಡಿದ್ದದ್ದರಿಂದ ಆಗ ಇದ್ದಂತಹ ಗಾಳಿಯಲ್ಲಿ ದೋಣಿಗಳು ತಾವಿದ್ದ ಸುರಕ್ಷಿತ ಸ್ಥಳದಲ್ಲಿಯೇ ಇರಲು ಸಾಧ್ಯವಾಗಲಿಲ್ಲ. ಅವು ಮೂರ್ಖ ಮಾರ್ಗದಲ್ಲಿ ಹಡಗಿನ ಹಿಂಭಾಗದ ಕೊಂಕು ಭಾಗದ ಕೆಳಗೆ ಹೋಗುವ ಮತ್ತು ಪಕ್ಕದಲ್ಲಿ ತೂಗುಯ್ಯಾಲೆಯಾಡುವ ದೃಶ್ಯವನ್ನು ಕಂಡಾಗ ನನಗೆ ಪೇಚಿಗಿಟ್ಟುಕೊಂಡಿತು. ಅವುಗಳು ಮೇಲಿಂದ ಮೇಲೆ ಅಪಾಯಕರವಾಗಿ ತಾಕಿ ಬೆಂಕಿಯ ಹತ್ತಿರಕ್ಕೆ ಬರುತ್ತಿದ್ದವು. ಹಡಗು ಅವುಗಳ ಮೇಲೆ ಉರುಳುತ್ತಿತ್ತು. ಯಾವ ಕ್ಷಣದಲ್ಲಾದರೂ ಕೂವೆ ಮರಗಳು ಪಕ್ಕಕ್ಕೆ ವಾಲಿಬೀಳುವ ಅಪಾಯ ಸದಾ ಇದ್ದೇ ಇತ್ತು. ನಾನು ಮತ್ತು ನನ್ನ ಇಬ್ಬರು ಸಹಾಯಕರು ಹುಟ್ಟುಗಳಿಂದ ಹಾಗೂ ದೋಣಿಗಣೆಗಳಿಂದ ನಮ್ಮ ಕೈಲಾದಮಟ್ಟಿಗೆ ದೂರವೆ ಇಟ್ಟಿದ್ದೆವು. ಆದರೆ ಏಕಪ್ರಕಾರವಾಗಿ ಹಾಗೆ ಮಾಡುತ್ತಿರುವುದು ಕೆರಳಿಕೆಗೆ ಕಾರಣವಾಯಿತು. ಏಕೆಂದರೆ ತಟಕ್ಕನೆ ಅಲ್ಲಿಂದ ಏಕೆ ಹೊರಡಬಾರದು ಎಂಬುದಕ್ಕೆ ಕಾರಣವೇ ಇರಲಿಲ್ಲ. ಹಡಗಿನ ಮೇಲೆ ಅವರಾರೂ ಕಾಣುತ್ತಿರಲಿಲ್ಲ. ತಡ ಮಾಡುವುದಕ್ಕೆ ಕಾರಣವೇನೆಂದು ನಾವು ಊಹಿಸಲೂ ಆಗಲಿಲ್ಲ. ದೋಣಿ ರಕ್ಷಕರು ನಿಶ್ಶಕ್ತಿಯಿಂದ ಶಾಪ ಹಾಕುತ್ತಿದ್ದರು. ನನ್ನ ಪಾಲಿನ ಕೆಲಸ ಮಾಡುವುದೇ ಅಲ್ಲದೆ ಆ ಇಬ್ಬರಿಂದ ಕೆಲಸ ಮಾಡಿಸಬೇಕಾಗಿದ್ದಿತು—ತಮ್ಮ ಪಾಡಿಗೆ ತಾವು ಜಾರಿ ಹೋಗಲಿ ಎಂದು ಕೈಕಟ್ಟಿ ಕೂರುವ ನಿರಂತರ ಪ್ರವೃತ್ತಿಯ ಆ ಜನರಿಂದ.

' ಕೊನೆಗೆ ನಾನು ಕೂಗು ಹಾಕಿದೆ. ಅಲ್ಲಿ ಹಡಗಿನ ಅಟ್ಟದ ಮೇಲೆ ಯಾರೋ ನೋಡಿದರು. "ನಾವಿಲ್ಲಿ ಸಿದ್ಧವಾಗಿದ್ದೇವೆ"—ನಾನು ಹೇಳಿದೆ. ತಲೆ ಮರೆಯಾಯಿತು. ಕೂಡಲೇ ಥಟ್ಟನೆ ಮೇಲೆದ್ದಿತು. "ನಾಯಕ ಹೇಳುತ್ತಾನೆ, ಹಡಗಿಗೆ ದೂರವಾಗಿ ದೋಣಿಗಳನ್ನು ನಿಲ್ಲಿಸಿಕೊಳ್ಳಿ".

'ಅರ್ಧ ಗಂಟೆ ಕಳೆಯಿತು. ಕೂಡಲೇ ಗುಂಡಿಗೆ ಒಡೆದು ಹೋಗುವಂಥ ಗಲಭೆ, ಗಡಿಬಿಡಿ, ಸರಪಣಿಗಳ ಝಣ ಝಣ, ಸಮುದ್ರದ ನೀರಿನ ಬುಸ್ ಹಿಸ್....ಹಡಗಿನ ಮೇಲೆ ಸ್ವಲ್ಪ ಓರೆಯಾಗಿ ಕಂಪಿಸುತ್ತಿರುವ ಧೂಮಸ್ತಂಭದೊಳಕ್ಕೆ ಲಕ್ಷಾಂತರ ಕಿಡಿಗಳು ಹಾರತೊಡಗಿದವು. ಒಪ್ಪಾರುಗಳು ಸುಟ್ಟು ಹೋದವು. ಗಣಗಣ ಕೆಂಪಗೆ ಕಾದ ಎರಡು ಲಂಗರುಗಳು ತಮ್ಮ ಹಿಂದೆಯೇ ಇನ್ನೂರು ಮಾರುದ್ದದ ಕೆಂಪಗೆ ಕಾದ ಸರಪಣಿಯನ್ನು ಕಿತ್ತುಕೊಂಡು ಸಮುದ್ರದ ತಳಕ್ಕೆ ಹೋದವು. ಹಡಗು ಅಲ್ಲಾಡಿತು. ಹೊಗೆಯ ರಾಶಿ ನಾಶವಾಗಲು ಸಿದ್ಧವಾಗಿರುವ ಹಾಗೆ ಅತ್ತಿತ್ತ ಉಯ್ಯಾಲೆಯಾಡಿತು. ಮುಂಭಾಗದ ಮುಖ್ಯ ಕೂವೆ ಕೆಳಗುರುಳಿತು. ಕೆಳಗಿಂದ ಹೊಡೆದ ಬೆಂಕಿಯ ಬಾಣದಂತೆ ಅದು ಜಿಗಿದು ಬಿದ್ದು, ದೋಣಿಯ ಹುಟ್ಟುಗಳ ಉದ್ದದ ಅಂತರದಲ್ಲಿ ಕುಪ್ಪಳಿಸುತ್ತಾ ಹೊಳೆಯುವ ಸಮುದ್ರದ ಮೇಲೆ ಕಪ್ಪಗೆ ತೇಲತೊಡಗಿತು. ನಾನು ಮತ್ತೆ ಹಡಗಿನ ಅಟ್ಟಕ್ಕೆ ಕೂಗು ಹಾಕಿದೆ. ಸ್ವಲ್ಪ ಹೊತ್ತಿನ ಮೇಲೆ ವ್ಯಕ್ತಿಯೊಬ್ಬ ಅನಿರೀಕ್ಷಿತ ಲವಲವಿಕೆಯ ಆದರೆ ತಗ್ಗಿದ ದನಿಯಲ್ಲಿ—ಬಾಯಿ ಮುಚ್ಚಿಕೊಂಡು ಮಾತಾಡಲು ಪ್ರಯತ್ನಿಸುತ್ತಿದ್ದಾನೇನೋ ಎನ್ನುವ ಹಾಗೆ— "ನೇರವಾಗಿ ಬರುತ್ತೇವೆ" ಎಂದು ತಿಳಿಸಿ ಮಾಯವಾದ. ಬಹಳ ಹೊತ್ತಿನವರೆಗೆ ಬೆಂಕಿಯ 'ಭರ್' ಹಾಗೂ ಗರ್ಜನೆಗಳನ್ನುಳಿದು ಬೇರೇನೂ ನನಗೆ ಕೇಳಿಸಲಿಲ್ಲ. ಸಿಳ್ಳೆ ಸದ್ದುಗಳೂ ಕೇಳಿ ಬರುತ್ತಿದ್ದವು. ದೋಣಿಗಳು ನೆಗೆದವು, ದೋಣಿ ಮೂತಿಗೆ ಕಟ್ಟಿದ್ದ ಹಗ್ಗವನ್ನು ಜಗ್ಗಿದವು, ಪರಸ್ಪರ ಆಟವಾಡಿದಂತೆ ಓಡಿದವು, ತಮ್ಮ ತಮ್ಮ ಪಕ್ಕಗಳು ಒಂದಕ್ಕೊಂದು ತಾಕಿದವು, ಹಡಗಿನ ಪಕ್ಕಕೆ, ಗೊಂಚಲಾಗಿ ಬಿಸುರಿದವು—ಏನು ಮಾಡುವುದು ನಾವು? ನನಗೆ ಇನ್ನು ಸಹಿಸಲಾಗಲಿಲ್ಲ. ಹಿಂಡು ಹಿಂಡಾದ ಹಗ್ಗಗಳನ್ನು ಹಿಡಿದುಕೊಂಡು ಹಡಗಿನ ಹಿಂಭಾಗದಿಂದ ದೇಕುತ್ತಾ ಬಹು ಪ್ರಯಾಸದಿಂದ ಹಡಗು ಹತ್ತಿದೆ.

'ಹಾಡು ಹಗಲಿನಂತೆ ಪ್ರಕಾಶಮಾನವಾಗಿತ್ತು. ಹೀಗೆ ಬರುತ್ತಿರುವಾಗ ನನ್ನೆದುರು ಮುಖ ಮಾಡಿದ್ದ ಬೆಂಕಿ ಹಲಗೆಯ ದೃಶ್ಯ ಭಯಾನಕವಾಗಿತ್ತು. ಅದರ ಝಳವನ್ನು ಸಹಿಸುವುದು ಅಸಾಧ್ಯ ಎಂದು ಮೊಟ್ಟಮೊದಲಿಗೆ ಅನ್ನಿಸಿತು. ಕ್ಯಾಬಿನ್ನಿನಿಂದ ಹೊರಗೆಳೆದು ತಂದ ಉದ್ದನೆಯ ಪೀಠದ ಮೆತ್ತೆಯ ಮೇಲೆ ಕಾಲುಗಳನ್ನು ಮೇಲಕ್ಕೆ ಎಳೆದುಕೊಂಡು ಒಂದು ತೋಳನ್ನು ತಲೆಗೆ ದಿಂಬಾಗಿಸಿ ನಾಯಕ ಬಿಯರ್ಡ್ ಮಲಗಿದ್ದ. ಅವನ ಮೇಲೆ ಬೆಳಕು ಆಟವಾಡುತ್ತಿತ್ತು. ಉಳಿದವರು ಯಾವುದರಲ್ಲಿ ಬಿಸಿಯಾಗಿ ಮಗ್ನವಾಗಿದ್ದರು ಗೊತ್ತೆ? ಹಡಗಿನ ಅಟ್ಟದ ಬಲಗಡೆಯ ಹಿಂಭಾಗದಲ್ಲಿ ತೆರೆದ ಪೆಟ್ಟಿಗೆಯ ಸುತ್ತ ಕುಳಿತು ಬ್ರೆಡ್ಡು ಮತ್ತು ಚೀಸ್ ತಿನ್ನುತ್ತಾ, ಪೋರ್ಟರ್ ಮದ್ಯವನ್ನು ಕುಡಿಯುತ್ತಾ ಮಜಾ ಮಾಡುತ್ತಿದ್ದರು. ತಮ್ಮ ತಲೆಗಳ ಮೇಲೆ ನುಲಿಯುತ್ತಿರುವ ಜ್ವಾಲೆಯ ಉಗ್ರ ನಾಲಗೆಗಳ ಹಿನ್ನೆಲೆಯಲ್ಲಿ ಅವರು ಅಗ್ನಿಭೂತಗಳಂತೆ ಕಾಣುತ್ತಿದ್ದರು; ಹತಾಶೆಯ ದರೋಡೆಕೋರರ ತಂಡದಂತೆ ತೋರುತ್ತಿದ್ದರು. ಅವರ ಕಣ್ಣುಗಳ ಬಿಳಿ ಭಾಗದಲ್ಲಿ ಬೆಂಕಿ ಕಿಡಿಗೆದರಿತು. ಹರಿದ ಬಟ್ಟೆಗಳ ಮಧ್ಯೆ ಕಾಣುವ ಅವರ ಬಿಳಿ ಚರ್ಮದ ಮೇಲೆ ಜ್ವಾಲೆಯ ಹೊಳಪು ಮಿನುಗಿತು. ಯುದ್ಧದಲ್ಲಿ ಭಾಗವಹಿಸಿದ್ದ ಯೋಧನಂತೆ ಪ್ರತಿಯೊಬ್ಬರಮೇಲೂ ಸಾಕ್ಷ್ಯ ಹೇಳುವ ಗುರುತುಗಳಿದ್ದವು—ಬಟ್ಟೆ ಪಟ್ಟಿ ಕಟ್ಟಿದ

ತಲೆಗಳು, ಮೊಣಕೈಗಳು, ಮೊಣಕಾಲುಗಳು. ಆದರೆ ಪ್ರತಿಯೊಬ್ಬನ ತೊಡೆಗಳ ಮಧ್ಯೆ ಮದ್ಯದ ಸೀಸೆ ಹಾಗೂ ಕೈಯಲ್ಲಿ ಚೀಸಿನ ದೊಡ್ಡ ಕಡಿಗಳೂ ಇದ್ದವು. ಮಹೋನ್ ಮೇಲೆದ್ದ. ತನ್ನ ಸುಂದರ ಹಾಗೂ ಮಾನ ಹಾನಿಗೊಂಡ ಮುಖದಿಂದ, ಕೊಕ್ಕೆಯಾಕಾರದ ಪಾರ್ಶ್ವ ದೃಶ್ಯದಿಂದ, ಉದ್ದನೆಯ ಬಿಳಿಗಡ್ಡದಿಂದ ಮತ್ತು ಕೈಯೊಳಗೆ ಹಿಡಿದ ಮುಚ್ಚಳ ತೆಗೆದ ಸೀಸೆಯಿಂದ ಅವನು ಹಿಂಸೆ ಮತ್ತು ವಿನಾಶಗಳ ಮಧ್ಯೆ ಮುದದಿಂದ ಮಜಾ ಮಾಡುವ ಹಿಂದಿನ ಕಾಲದ ಎಚ್ಚರಗೇಡಿ ಕಪ್ತಾನಗಳಲ್ಲಿ ಒಬ್ಬನನ್ನು ಹೋಲುತ್ತಿದ್ದ. "ಹಡಗಿನಮೇಲೆ ನಮ್ಮ ಕೊನೆಯ ಊಟ" ಶಾಂತವಾಗಿ ಅವನು ವಿವರಿಸಿದ, "ಇಡೀ ದಿನ ನಮಗೆ ತಿನ್ನಲು ಏನೂ ಇರಲಿಲ್ಲ. ಇದನ್ನೆಲ್ಲಾ ಇಲ್ಲಿ ಬಿಟ್ಟು ಹೋಗುವುದರಿಂದ ಪ್ರಯೋಜನವಿಲ್ಲ" ಕೈಯಲ್ಲಿರುವ ಸೀಸೆಯನ್ನು ಮುಂದೆ ಮಾಡಿ ಮಲಗಿರುವ ನಾಯಕನನ್ನು ತೋರಿಸಿ ಹೇಳಿದ, "ಅವನು ತಾನು ಏನೂ ತಿನ್ನಲಾರೆ ಎಂದು ಹೇಳಿದ. ಅದಕ್ಕೋಸ್ಕರ ನಾನು ಅವನನ್ನು ಮಲಗಿಕೊಳ್ಳುವಂತೆ ಹೇಳಿದೆ" ನಾನು ಒಂದೇ ಸಮ ಅವನನ್ನು ನೋಡುತ್ತಾ ಇದ್ದೆ, ಅವನು ಹೇಳುತ್ತಾ ಹೋದ, "ಓ ಯುವಕನೇ, ನಿನಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾಯಕ ಬಹಳ ದಿನಗಳಿಂದ ಕಣ್ಣು ಮುಚ್ಚಿಯೇ ಇಲ್ಲ, ನಿಜ ಹೇಳಬೇಕೆಂದರೆ. ದೋಣಿಗಳಲ್ಲಿ ಕೇವಲ ಕೋಳಿ ನಿದ್ದೆ ಮಾಡಬೇಕಾಗುತ್ತದೆ ಅಷ್ಟೆ" ನಾನು ರೋಷದಿಂದ ಹೇಳಿದೆ: "ಇನ್ನಷ್ಟು ಕಾಲ ನೀವು ಅವಿವೇಕಿಗಳಂತೆ ವರ್ತಿಸಿದರೆ ಮುಂದೆ ನಿಮಗೆ ದೋಣಿಗಳೂ ಸಿಕ್ಕುವುದಿಲ್ಲ" ನಾನು ನಾಯಕನಿರುವಲ್ಲಿಗೆ ಹೋಗಿ ಭುಜ ಹಿಡಿದು ಅಲುಗಿಸಿದೆ. ಕಟ್ಟಕಡೆಗೆ ಅವನು ಕಣ್ಣು ತೆರೆದ. ಆದರೆ ಅಲ್ಲಾಡಲಿಲ್ಲ. "ಹಡಗನ್ನು ಬಿಟ್ಟು ಹೋಗುವ ಹೊತ್ತು ಬಂತು, ಸಾರ್" ಶಾಂತವಾಗಿ ಹೇಳಿದೆ.

'ಅವನು ನರಳುತ್ತಾ ಮೇಲೆದ್ದ. ಜ್ವಾಲೆಯತ್ತ ನೋಡಿದ. ಹಡಗಿನ ಸುತ್ತ ಕಿಡಿಗೆದರುತ್ತಿರುವ ಸಮುದ್ರವನ್ನು ಹಾಗೂ ಮಸಿಯಂತೆ ಕಪ್ಪಾಗಿರುವ ಬಹುದೂರದ ಸಮುದ್ರವನ್ನು ನೋಡಿದ. ಹೊಗೆಯ ತೆಳುವಾದ ಪರದೆಯ ಮೂಲಕ ಕಪ್ಪಾದ—ಗ್ರೀಕ್ ಪುರಾಣಗಳಲ್ಲಿ ಬರುವ ಭೂಮಿಗೂ ಅಧೋಲೋಕಕ್ಕೂ ಮಧ್ಯೆ ಇರುವ ಅಂಧಕಾರ ಪ್ರದೇಶದಂತೆ ಕಪ್ಪಾದ—ಆಕಾಶದ ಚುಕ್ಕೆಗಳು ಮಂಕಾಗಿ ಮಿನುಗುವುದನ್ನು ನೋಡಿದ.

"ಯುವಕರು ಮೊದಲು" ಅವನು ಹೇಳಿದ.

'ಸಾಮಾನ್ಯ ನಾವಿಕನೊಬ್ಬ, ತನ್ನ ಕೈಯ ಹಿಂಭಾಗದಿಂದ ಬಾಯನ್ನು ಸೀಟಿಕೊಂಡು ಮೇಲೆದ್ದು, ಹಡಗಿನ ಹಿಂಭಾಗದ ಸುತ್ತಲೂ ಇರುವ ಕಟಕಟೆಯ ಹಳಿಯನ್ನು ಹಿಡಿದು ದೇಕುತ್ತಾ ಅದೃಶ್ಯನಾದ. ಉಳಿದವರು ಅವನನ್ನು ಹಿಂಬಾಲಿಸಿದರು. ಒಬ್ಬ, ಹೊರಡುವ ಹಂತಕ್ಕೆ ಬಂದು, ಕ್ಷಣ ನಿಂತು ಸೀಸೆಯನ್ನು ಖಾಲಿ ಮಾಡಿ, ಜೋರಾಗಿ ತೋಳನ್ನು ಬೀಸಿ ಅದನ್ನು ಬೆಂಕಿಗೆ ಎಸೆದ, "ತಗೋ ಇದನ್ನು!"—ಅವನು ಕಿರುಚಿದ.

'ನಾಯಕ ಅಸ್ತಿಮಿತತೆಯಿಂದ ಹಿಂದು ಮುಂದು ನೋಡಿದ. ಆಗ ಅವನನ್ನು ಅಲ್ಲಿಯೇ ಬಿಟ್ಟು, ಅವನ ಪ್ರಥಮ ಸಹಾಯಕ ನಾಯಕನೊಡನೆ ಕ್ಷಣಕಾಲ ಆಲೋಚಿಸಲು ಹೋದೆ. ಮತ್ತೆ ಮೇಲಕ್ಕೆ ಹೋಗಿ ನಾಯಕನನ್ನು ಕೊನೆಗೆ ಹೊರಗೆ

ತಂದೆ. ಆಗಲೇ ಹೊತ್ತಾಗಿತ್ತು. ಹಡಗಿನ ಹಿಂಭಾಗದ ಕಬ್ಬಿಣದ ಭಾಗಗಳು ಮುಟ್ಟ ಲಾಗದಷ್ಟು ಕಾವುಗೊಂಡಿದ್ದವು.

'ಆ ಮೇಲೆ ದೊಡ್ಡ ದೋಣಿಯ ಮೂತಿಗೆ ಕಟ್ಟಿದ್ದ ಹಗ್ಗವನ್ನು ತುಂಡರಿಸ ಲಾಯಿತು. ಮೂರು ದೋಣಿಗಳನ್ನು ಒಟ್ಟಿಗೆ ಕಟ್ಟಿ ಹಡಗಿನಿಂದ ದೂರವಾಗಿ ಮುಂದು ಮುಂದಕ್ಕೆ ಹೋದೆವು. ಹಡಗು ಸ್ಫೋಟಗೊಂಡ ಹದಿನಾರು ಗಂಟೆಗಳ ನಂತರ ಅದರ ಕೈಬಿಟ್ಟು ಬಂದೆವು. ಎರಡನೆಯ ದೋಣಿ ಮಹೋನನ ವಶದಲ್ಲಿತ್ತು; ಹದಿನಾಲ್ಕು ಅಡಿಯ ಚಿಕ್ಕ ದೋಣಿ ನನ್ನ ವಶದಲ್ಲಿ. ದೊಡ್ಡ ದೋಣಿ ನಮ್ಮೆಲ್ಲರನ್ನೂ ಕೊಂಡು ಹೋಗಬಹುದಿತ್ತು. ಆದರೆ ನಾಯಕ ಹೇಳಿದ—ಸಮುದ್ರ ವಿಮಾ ವ್ಯಾಪಾರಿಗಳಿಗಾಗಿ ನಮ್ಮ ಕೈಯಿಂದ ಎಷ್ಟು ಸಾಧ್ಯವೋ ಅಷ್ಟು ವಸ್ತುಗಳನ್ನು ರಕ್ಷಿಸಬೇಕು ಎಂದು. ಆದ್ದರಿಂದ ನಾನು ನನ್ನ ಪ್ರಥಮ ಅಧಿಕಾರ ವಹಿಸಿಕೊಂಡೆನು. ನನ್ನೊಡನೆ ಇಬ್ಬರು ಇದ್ದರು; ಜೊತೆಗೆ ಬಿಸ್ಕತ್ತಿನ ಒಂದು ಚೀಲ, ಮಾಂಸದ ಹಲಕೆಲವು ಡಬ್ಬಗಳು ಮತ್ತು ನೀರಿನ ಒಂದು ಸಣ್ಣ ಪೀಪಾಯಿ. ನಾನು ದೊಡ್ಡ ದೋಣಿಗೆ ಹತ್ತಿಕೊಂಡೇ ಸಾಗ ಬೇಕೆಂದು ಹುಕುಂ ಮಾಡಿದೆ—ಹವಾಮಾನ ಹದಗೆಟ್ಟರೆ ನಾವು ದೊಡ್ಡದೋಣಿಗೆ ನೆಗೆದುಕೊಳ್ಳುವುದು ಸುಲಭವಾಗುತ್ತದೆ ಎಂದು.

'ನಾನು ಏನು ಯೋಚಿಸಿದೆ ಎಂಬುದು ಗೊತ್ತೆ? ಆದಷ್ಟು ಬೇಗ ಈ ಜೊತೆಯನ್ನು ಬಿಡಬೇಕು—ಎಂದು ಯೋಚಿಸಿದೆ. ನಾನೇ ಸರ್ವ ಸ್ವಾಮ್ಯದ ಅಧಿಕಾರ ಚಲಾಯಿಸು ವಂತಿರಬೇಕು ಎಂದು ಬಾಯಿನೀರು ಕುಡಿದೆ. ಸ್ವತಂತ್ರವಾದ ಹಡಗು ಅಥವಾ ದೋಣಿ ಸಂಚಾರಕ್ಕೆ ಅವಕಾಶವಿದ್ದರೆ ನಾನು ನೌಕಾದಳದೊಡನೆ ಸಮುದ್ರ ಸಂಚಾರಕ್ಕೆ ಖಂಡಿತ ಹೋಗುವುದಿಲ್ಲ. ನಾನೇ ದಡ ಮುಟ್ಟಬೇಕು; ನೆಲ ಕಾಣಬೇಕು. ಉಳಿದ ದೋಣಿ ಗಳನ್ನು ಹಿಂದಕ್ಕೆ ಹಾಕಬೇಕು. ಯೌವನ! ಎಲ್ಲ ಯೌವನದ ಮಹಿಮೆ!—ಹುಡು ಗಾಟಿಕೆಯ, ಮೋಹಗೊಳಿಸುವ, ಮಾಟಮಾಡುವ ಸುಂದರ ಯೌವನ.

'ಆದರೆ ನಾವು ಕೂಡಲೇ ಹೊರಟು ಬಿಡಲಿಲ್ಲ. ನಾವು ನಮ್ಮ ಹಡಗಿನ ಕೊನೆ ಯನ್ನು ಕಾಣಬೇಕಿತ್ತು. ಆದ್ದರಿಂದ ಆ ರಾತ್ರಿ ಕೊಚ್ಚಿಕೊಂಡು ಹೋದ ದೋಣಿಗಳು ಏದುಸಿರು ಬಿಡುತ್ತಾ ನೀರಿನ ಉಬ್ಬಿನ ಮೇಲೆ ನಿಂತವು. ಜನರು ತೂಕಡಿಸಿದರು, ಎಚ್ಚರಾದರು, ನಿಟ್ಟುಸಿರಿಟ್ಟರು, ನರಳಿದರು. ನಾನು ಸುಟ್ಟು ಹೋಗುತ್ತಿರುವ ಹಡಗನ್ನು ನೋಡುತ್ತಾ ಕುಳಿತಿದ್ದೆ.

'ಕಪ್ಪಾದ ಭೂಮಿ ಮತ್ತು ಆಕಾಶಗಳ ಮಧ್ಯೆ ಬೂದಾಬಣ್ಣದ ಸಮುದ್ರದ ದುಂಡು ತಟ್ಟೆಯ ಮೇಲೆ ಹಡಗು ಭಯಾನಕವಾಗಿ ಉರಿಯುತ್ತಾ ಇತ್ತು. ಸಮುದ್ರದ ಮೇಲೆ ನೆತ್ತರುಗೆಂಪಿನ ಮಿನುಗು ಚಿಮ್ಮಿತ್ತು—ನೀರಿನ ದುಂಡು ತಟ್ಟೆ ಥಳಥಳಿಸುತ್ತಾ, ಅಮಂಗಳವನ್ನು ಸೂಚಿಸುತ್ತಾ. ಎತ್ತರದ, ಸ್ಫುಟವಾದ ಜ್ವಾಲೆ, ಅಗಾಧವಾದ ಏಕಾಂತ ವಾದ ಜ್ವಾಲೆ ಸಮುದ್ರದಿಂದ ಮೇಲೆದ್ದು ತನ್ನ ತುದಿಭಾಗದಿಂದ ನಿರಂತರವಾಗಿ ಆಕಾಶಕ್ಕೆ ಕಪ್ಪು ಹೊಗೆಯನ್ನು ಕಕ್ಕುತ್ತಿತ್ತು. ಹಡಗು ಉಗ್ರವಾಗಿ ಉರಿಯುತ್ತಿತ್ತು; ಶೋಕದಿಂದ ಆರ್ತನಾದ ಮಾಡುತ್ತಿತ್ತು—ಸುತ್ತಲೂ ಸುತ್ತುವರಿದ ಸಮುದ್ರದ ಕಾವಲಿನಲ್ಲಿ, ನಕ್ಷತ್ರ ಗಳ ನಿಡುನೋಟದ ಎಚ್ಚರದಲ್ಲಿ ರಾತ್ರಿ ಹೊತ್ತು ಉರಿಯುವ ಚಿತೆಯಂತೆ. ಕ್ಲೇಶಕರ

ಪ್ರಯಾಣದ ಕೊನೆಯ ದಿನಗಳಲ್ಲಿ ಆ ವೃದ್ಧ ಹಡಗಿಗೆ ಭವ್ಯವಾದ ಸಾವು ಪ್ರಾಪ್ತವಾಯಿತು—ಔಚಿತ್ಯವೆಂಬಂತೆ, ಕೊಡುಗೆಯೆಂಬಂತೆ, ಬಹುಮಾನವೆಂಬಂತೆ. ತನ್ನ ದಣಿವಿನ ಭೂತವನ್ನು—ರಕ್ಷಣೆಗಾಗಿ—ಸಮುದ್ರ ಮತ್ತು ನಕ್ಷತ್ರಗಳ ವಶ ಮಾಡಿದ್ದು ಮಹತ್ವದ ವಿಜಯವೊಂದರ ದೃಶ್ಯದಂತೆ, ಕಣ್ಣಿಗೆ ಹಬ್ಬವಾಗಿತ್ತು'; ಥಳಥಳಿಸುತ್ತಿತ್ತು. ಉಷಃ ಕಾಲಕ್ಕಿಂತ ಮೊದಲು ಕೂವೆಮರಗಳು ಬಿದ್ದವು. ಸ್ಫೋಟಗೊಂಡ ಹಾಗೂ ಕ್ಷೋಭೆಗೊಂಡ ಕಿಡಿಗಳು ಹಾರುವ ಜ್ವಾಲೆಯೊಡನೆ ಜೀವಂತವಾಗಿ ಕಾವಲು ಕಾಯುತ್ತಿದ್ದ ರಾತ್ರಿಯ ಗರ್ಭವನ್ನು ತುಂಬುತ್ತಿರುವಂತೆ ತೋರಿತು. ದೀರ್ಘ ರಾತ್ರಿ ಸಮುದ್ರದ ಮೇಲೆ ಶಾಂತವಾಗಿ ಮಲಗಿತ್ತು. ಹಗಲ ಬೆಳಕಲ್ಲಿ ಹಡಗು ಕೇವಲ ಕರಿಕಾದ ಚಿಪ್ಪಾಗಿತ್ತು—ಇನ್ನೂ ಹೊಗೆಯ ಮೋಡದ ಕೆಳಗೆ ತೇಲುತ್ತಾ, ತನ್ನ ಗರ್ಭದಲ್ಲಿನ್ನೂ ಮಿನುಗುವ ಕಲ್ಲಿದ್ದಲ ಕೂಸನ್ನು ಹೊರುತ್ತಾ.

'ಆಗ ದೋಣಿಯ ಹುಟ್ಟುಗಳು ಹೊರಬಂದವು. ದೋಣಿಗಳು ಸಾಲುಗೊಂಡು ಅದರ ಭಗ್ನಾವಶೇಷಗಳ ಸುತ್ತ ಸಂಚರಿಸಿದುವು. ದೊಡ್ಡ ದೋಣಿ ಮಾರ್ಗದರ್ಶನ ಮಾಡುತ್ತಿತ್ತು. ಹಡಗಿನ ಹಿಂಭಾಗದತ್ತ ದೋಣಿಗಳನ್ನು ಎಳೆತಂದಾಗ ತೆಳುವಾದ ಈಟಿಯಂಥ ಬೆಂಕಿ ಅಪಾಯಕರವಾಗಿ ನಮ್ಮತ್ತ ನೆಗೆಯಿತು. ಕೂಡಲೇ ಹಡಗು ತಳಕೆಳಗಾಗಿ ತಳಸೇರಿತು, ಆವಿಯ ದೊಡ್ಡ "ಹಿಸ್ಸ್sss...." ಸದ್ದಿನೊಡನೆ. ಸುಟ್ಟು ಹೋಗಿರದ ಅದರ ಹಿಂಭಾಗ ಕಟ್ಟಕಡೆಗೆ ಮುಳುಗಿತು. ಆದರೆ ಬಣ್ಣ ಹೋಗಿತ್ತು; ಬಿರುಕು ಬಿಟ್ಟಿತ್ತು; ಚರ್ಮ ಸುಲಿದು ಹೋಗಿತ್ತು; ಅಕ್ಷರಗಳು ಇರಲಿಲ್ಲ; ಒಂದು ಪದವೂ ಇರಲಿಲ್ಲ; ತನ್ನ ಆತ್ಮದಂತಹ ಜಗ್ಗದ ಕುಗ್ಗದ ಹಟಮಾರಿತನದ ಮಾಟವೊಂದೂ ಇರಲಿಲ್ಲ—ತನ್ನ ಹೆಸರು ಮತ್ತು ಅಭಿಪ್ರಾಯವನ್ನು ಉದಯ ಸೂರ್ಯನತ್ತ ಹೊಳೆಯುವಂತೆ ಮಾಡಲು.

'ನಾವು ಉತ್ತರದಿಕ್ಕಿಗೆ ನಮ್ಮ ಪ್ರಯಾಣವನ್ನು ಮುಂದುವರಿಸಿದೆವು. ಮಂದ ಮಾರುತ ಮೇಲೆದ್ದಿತು. ಮಧ್ಯಾಹ್ನದ ಹೊತ್ತಿಗೆ ಎಲ್ಲ ದೋಣಿಗಳೂ ಒಟ್ಟುಗೂಡಿದವು, ಕೊನೆಯಬಾರಿಗೆ. ಕೂವೆ ಮರವಾಗಲೀ ಪಟವಾಗಲೀ ನನ್ನ ದೋಣಿಯಲ್ಲಿರಲಿಲ್ಲ. ಆದರೆ ಬಿಡಿಯಾದ ಹುಟ್ಟೊಂದನ್ನು ಕೂವೆಯನ್ನಾಗಿ ಮಾಡಿದೆ. ದೋಣಿಯ ಮೇಲ್ಹಾಸಣಿಯ ದಪ್ಪ ಬಟ್ಟೆಯನ್ನೇ ಪಟವನ್ನಾಗಿ ಮಾಡಿ ಹಾರಿಸಿದೆ. ದೋಣಿಯನ್ನು ಹತ್ತಿರಕ್ಕೆ ಎಳೆದುಕೊಳ್ಳುವುದಕ್ಕೂ ದೂರಕ್ಕೆ ತಳ್ಳುವುದಕ್ಕೂ ಬಳಸುವ ಕಬ್ಬಿಣದ ಕೊಂಡಿಯುಳ್ಳ ಉದ್ದವಾದ ಗಣೆಯನ್ನೇ ಅಡ್ಡದಿಮ್ಮಿಯಾಗಿಸಿದೆ. ಅತಿ ಎತ್ತರದ ಕೂವೆ ನನ್ನ ದೋಣಿಗಿದ್ದರೂ ಹಿಂಭಾಗದ ಗಾಳಿಯಿಂದ ನನ್ನದು ಉಳಿದೆರಡು ದೋಣಿಗಳನ್ನು ಹಿಂದೆ ಹಾಕುತ್ತದೆ ಎಂಬ ಅರಿವಿನ ತೃಪ್ತಿ ನನಗಿತ್ತು. ನಾನು ಅವುಗಳಿಗಾಗಿ ಕಾದೆ. ಆಮೇಲೆ ನಾವೆಲ್ಲ ನಾಯಕನ ಬಳಿಯಿದ್ದ ನಕ್ಷೆಯನ್ನು ನೋಡಿದೆವು. ಗಟ್ಟಿರೊಟ್ಟಿ ಮತ್ತು ನೀರಿನ, ಸಮುದಾಯ ಊಟವಾದ ಮೇಲೆ ನಾಯಕನಿಂದ ನಾವು ಕೊನೆಯ ತಿಳಿವಳಿಕೆಯನ್ನು ಪಡೆದೆವು. ಅವುಗಳೆಲ್ಲ ತುಂಬ ಸರಳ, ಸುಲಭ: ಉತ್ತರಕ್ಕೆ ದೋಣಿ ನಡೆಸಿ, ಸಾಧ್ಯವಾದಷ್ಟೂ ಜೊತೆಯಲ್ಲಿರಲು ಪ್ರಯತ್ನಿಸಿ. ಪ್ರತ್ಯೇಕವಾಗಿ ನಾಯಕ ನನಗೆ ಹೇಳಿದ್ದು, "ಇಲ್ಲದ ಕೂವೆ, ಹಾಯಿ, ಅಡ್ಡದಿಮ್ಮಿಗಳಿಗೆ ತಾತ್ಕಾಲಿಕ ಏರ್ಪಾಡು ಮಾಡಿರುವ ನಿನ್ನ ದೋಣಿಯ ಬಗೆಗೆ ಹೆಚ್ಚು ಎಚ್ಚರದಿಂದಿರು, ಮಾರ್ಲೊ" ಮಹೋನ್ನತ ದೋಣಿಯನ್ನು ಹಿಂದೆ ಹಾಕಿ ನನ್ನ

ದೋಣಿ ಮುಂದೆ ಹೋದಾಗ ಅವನು ತನ್ನ ಬಾಗಿದ ಮೂಗನ್ನು ಸುಕ್ಕುಗೊಳಿಸಿ ಕೂಗಿ ಹೇಳಿದ, "ನೀನು ಎಚ್ಚರಿಕೆಯಿಂದ ಇರದಿದ್ದರೆ, ಓ ನನ್ನ ಯುವಮಿತ್ರ, ನೀನು ನೀರ ತಳದಲ್ಲಿರುವ ನಿನ್ನ ಹಡಗನ್ನು ನಿಜವಾಗಿ ನಡೆಸುತ್ತೀಯೆ!" ಅವನು ತುಂಬ ಅಸೂಯಾಪರ ಕೇಡಿಗ ಬುದ್ಧಿಯ ಮುದುಕ. ಅವನು ಮಲಗಿರುವ ಆಳವಾದ ಸಮುದ್ರ ಅವನನ್ನು ಮೆಲ್ಲಗೆ ತೂಗುವಂತಾಗಲಿ, ಕೊನೆಗಳಿಗೆಯವರೆಗೂ ಮೃದುವಾಗಿ ತೂಗುವಂತಾಗಲಿ!

'ಸೂರ್ಯ ಮುಳುಗುವ ಮೊದಲು, ಬಹಳ ಹಿಂದೆ ಇದ್ದ ಎರಡು ದೋಣಿಗಳ ಮೇಲೆ ಭಾರಿ ಮಳೆ ಬಿರುಗಾಳಿ ಹಾದು ಹೋಯಿತು. ಅವುಗಳನ್ನು ನೋಡಿದ್ದು ಅದೇ ಕೊನೆ. ಮಾರನೆಯ ದಿನ ನನ್ನ ಸಣ್ಣ ಚಪ್ಪಟೆ ದೋಣಿಯಲ್ಲಿ ಕುಳಿತು ಮುನ್ನಡೆಸಿದೆ. ನನ್ನ ಸುತ್ತಲೂ ನೀರು ಮತ್ತು ಆಕಾಶವನ್ನು ಬಿಟ್ಟು ಏನೂ ಇರಲಿಲ್ಲ. ಎಡಹಗಲಿನಲ್ಲಿ ಬಹುದೂರದಲ್ಲಿ ವೇಗವಾಗಿ ಹೋಗುತ್ತಿರುವ ಹಡಗನ್ನು ನೋಡಿದೆ. ಆದರೆ ಆ ಬಗ್ಗೆ ನನ್ನ ಸಹ ಕೆಲಸಗಾರರ ಜೊತೆ ಏನೂ ಹೇಳಲಿಲ್ಲ. ಅವರೂ ಆ ಹಡಗನ್ನು ಗಮನಿಸಿರಲಿಲ್ಲ. ಅದಕ್ಕೆ ಮನೆಕಡೆಯ ಗೀಳಿರಬೇಕೆಂದು ಭಯಪಟ್ಟೆ. ಆದರೆ ಪೂರ್ವದ್ವಾರದಿಂದ ಹಿಂದಿರುಗಿ ನೋಡುವ ಮನಸ್ಸಿರಲಿಲ್ಲ ನನಗೆ. ನಾನು ಜಾವಾಕ್ಕೆ ಹೋಗಲು ದೋಣಿ ನಡೆಸುತ್ತಿದ್ದೆ—ಇನ್ನೊಂದು ದಿವ್ಯ ಹೆಸರು—ಬ್ಯಾಂಕಾಕಿನ ಹಾಗೆ. ಬಹಳ ದಿನಗಳವರೆಗೆ ನಡೆಸಿದೆ.

'ತೆರೆದ ದೋಣಿಯಲ್ಲಿ ಪರದಾಡುವುದು ಎಂದರೆ ಏನು ಎಂಬುದನ್ನು ನಿಮಗೆ ಹೇಳಬೇಕಾಗಿಲ್ಲ. ನಾವು ಹುಟ್ಟುಹಾಕುವಾಗ, ಶಾಂತವಾಗಿದ್ದ ಹಗಲು ಮತ್ತು ರಾತ್ರಿಗಳು ನನಗಿನ್ನೂ ನೆನಪಿವೆ. ನಾವು ಹುಟ್ಟು ಹಾಕಿದರೂ, ಮಾಟ ಮಾಡಿದಂತೆ, ದೋಣಿ ಸಮುದ್ರ ದಿಗಂತದ ವೃತ್ತದೊಳಗೆ ಕದಲದೆ ನಿಂತಂತೆ ತೋರುತ್ತಿತ್ತು—ಆ ಬೇಗೆ ನನಗೆ ನೆನಪಿದೆ. ಪ್ರಾಣದ ಉಳಿವಿಗಾಗಿ ದೋಣಿಯೊಳಕ್ಕೆ ನುಗ್ಗಿದ ನೀರನ್ನು ಸದಾ ಮೊಗೆ ಮೊಗೆದು ಹೊರಚೆಲ್ಲುವಂತೆ ಸುರಿದ ಜಲಪ್ರಳಯದಂಥ ಬಿರುಗಾಳಿ ಮಳೆಯ ನೆನಪಿದೆ. ನನ್ನ ಪ್ರಥಮ ಅಧಿಕಾರವ್ಯಾಪ್ತಿಯ ದೋಣಿಯ ಮುಖವನ್ನು ನೈಮರಿಯುವ ಸಮುದ್ರದತ್ತ ನೇರವಾಗಿ ತಿರುಗಿಸಿ ಕಿಟ್ಟದಂತೆ ಒಣಗಿದ ಗಂಟಲಲ್ಲಿ ತುದಿಬೆರಳ ಮೇಲೆ ನಿಂತು ಹದಿನಾರು ಗಂಟೆಗಳ ಕಾಲ ಹುಟ್ಟು ಹಾಕಿದ್ದು ನೆನಪಿದೆ. ಅಲ್ಲಿಯವರೆಗೆ ನಾನೆಷ್ಟು ಒಳ್ಳೆಯ ಮನುಷ್ಯ, ಶಕ್ತಿಶಾಲಿ ಎಂಬುದು ನನಗೆ ಗೊತ್ತಿರಲಿಲ್ಲ. ನನ್ನ ದೋಣಿಯಲ್ಲಿದ್ದ ಇಬ್ಬರ ಇಳಿದು ಹೋದ ಮುಖಗಳ ಮ್ಲಾನತೆಯ ನೆನಪಿದೆ. ನನ್ನ ಯೌವನದ ಹಾಗೂ ತೀವ್ರ ಸಂವೇದನೆಯ ನೆನಪಿದೆ—ಎಲ್ಲ ಮಾನವರಿಗಿಂತ, ಭೂಮಿಗಿಂತ, ಸಮುದ್ರಕ್ಕಿಂತ ಹೆಚ್ಚು ಬಾಳಿಕೆ ಬರುವ ಸಂವೇದನೆ; ಇಲ್ಲ, ಅದು ವಂಚಕ ಭಾವನೆ—ಆಸೆ ತೋರಿಸಿ ನಮ್ಮನ್ನು ಸುಖಸಂತೋಷಗಳಿಗೆ, ಗಂಡಾಂತರಗಳಿಗೆ, ಪ್ರೇಮಕ್ಕೆ, ವಿಫಲ ಪ್ರಯತ್ನಕ್ಕೆ, ಸಾವಿಗೆ ಸೆಳೆಯುವ ಭಾವನೆ; ಎಲ್ಲ ಉತ್ಸಾಹದ, ಜಯದ ಮೂಲ ಶಕ್ತಿ; ಹಿಡಿ ಧೂಳಿನಲ್ಲಿ ಸ್ಪಂದಿಸುವ ಬಾಳಿನ ಬೆಚ್ಚನೆಯ ಶಾಖ; ಪ್ರತಿ ವರ್ಷ ಕುಂದಿ ಹೋಗುವ, ತಣ್ಣಗಾಗುವ, ಕೊನೆಗೆ ಇಲ್ಲವಾಗುವ, ಬಹಳ ಬೇಗ ಬದುಕಿಗಿಂತ ಮೊದಲೇ ಇಲ್ಲವಾಗುವ ಹೃದಯದ ಮಿನುಗು!

'ನಾನು ಪೂರ್ವವನ್ನು ನೋಡಿದ್ದು ಹೀಗೆ. ನಾನು ಅದರ ಗುಪ್ತ ಸ್ಥಳಗಳನ್ನು ನೋಡಿದ್ದೇನೆ. ಅದರ ಆತ್ಮವನ್ನೇ ಇಣಿಕಿ ನೋಡಿದ್ದೇನೆ. ಸದಾ ಚಿಕ್ಕ ದೋಣಿಯ ಮೂಲಕ ನೋಡಿದ್ದೇನೆ—ಉನ್ನತ ಪರ್ವತಗಳ ರೂಪರೇಖೆಯನ್ನು ; ಬೆಳಗಿನ ಹೊತ್ತು ದೂರದ ನೀಲಿ ಬಣ್ಣದಂತೆ, ಮಧ್ಯಾಹ್ನದ ಹೊತ್ತು ದುರ್ಬಲ ಮಂಜಿನಂತೆ, ಸಂಜೆಯ ಹೊತ್ತು ಕೋಚೆ ಕೋಚೆಯಾಗಿ ಚಾಚಿಕೊಂಡ ಊದಾ ಬಣ್ಣದ ಗೋಡೆಯಂತೆ. ಕೈಯಲ್ಲಿ ಹುಟ್ಟು ಹಿಡಿದ ಅನುಭವ, ಕಣ್ಣುಗಳಲ್ಲಿ ಸುಟ್ಟು ಕರಿಕಾಗಿಸುವ ನೀಲಿ ಸಮುದ್ರದ ನೋಟದ ಅನುಭವ. ಗಾಜಿನಂತೆ ನುಣುಪಾಗಿರುವ, ಹಿಮದಂತೆ ಬಿಳುಪಾಗಿರುವ ಕತ್ತಲೆಯಲ್ಲಿ ಮಿನುಗುವ ಕೊಲ್ಲಿಯನ್ನು—ವಿಶಾಲ ಕೊಲ್ಲಿಯನ್ನು ನೋಡಿದೆ. ದೂರದಲ್ಲಿ ಭೂಮಿಯ ಅಂಧಕಾರದ ಮೇಲೆ ಕೆಂಪು ದೀಪವೊಂದು ಉರಿಯುತ್ತಿತ್ತು. ಬೆಚ್ಚಗೆ ಮತ್ತು ಮೃದುವಾಗಿ ರಾತ್ರಿಯಿತ್ತು. ನೋಯುವ ಕೈಗಳಿಂದ ಹುಟ್ಟು ಹಾಕಿದೆವು ; ಮೀಟಿದೆವು. ತಟಕ್ಕನೆ ದುರ್ಬಲವಾದ ಮಂದವಾದ, ಸುಗಂಧವನದ ಪುಷ್ಪಗಳ ಅಪೂರ್ವ ಸುಗಂಧಗಳ ಭಾರದಿಂದ ಬಳಲಿದ, ಉಫ್ ಎಂದು ಊದಿದ ಗಾಳಿಯು ಹಟ ನಿಶ್ಚಲ ರಾತ್ರಿಯ ಒಳಗಿಂದ ಹೊರಬಂತು—ನನ್ನ ಮುಖದ ಮೇಲೆ ಪೂರ್ವದ ಪ್ರಥಮ ನಿಟ್ಟುಸಿರು. ಅದನ್ನು ನಾನೆಂದೂ ಮರೆಯಲಾರೆ. ಅದು ಲಾವಣ್ಯದ ಮೋಹಕತೆಯಂತೆ, ಕಿವಿಯಲ್ಲಿ ಪಿಸು ಗುಟ್ಟಿದ ರಹಸ್ಯ ಗರ್ಭಿತ ಆನಂದದ ವಾಗ್ದಾನದಂತೆ, ಮುಟ್ಟಿ ತಿಳಿಯಲಾಗದಂಥದು ಆದರೆ ಅನಾಮತ್ತು ತೊತ್ತಾಗಿಸಿಬಿಡುವಂಥದು.

'ಮುಕ್ತಾಯದ ಸರದಿಯಲ್ಲಿ ನಾವು ನಿರಂತರವಾಗಿ ಹನ್ನೆರಡು ಗಂಟೆಗಳ ಕಾಲ ಹುಟ್ಟು ಹಾಕಿದೆವು. ಇಬ್ಬರು ಹುಟ್ಟು ಹಾಕುತ್ತಿರುವಾಗ ವಿಶ್ರಾಂತಿ ತೆಗೆದುಕೊಳ್ಳ ಬೇಕಾಗಿದ್ದ ಮತ್ತೊಬ್ಬ ಚುಕ್ಕಾಣಿ ಹಿಡಿಕೆಯ ಮೇಲೆ ಕುಳಿತಿರುತ್ತಿದ್ದ. ಆ ಕೊಲ್ಲಿಯಲ್ಲಿ ಕೆಂಪು ದೀಪವನ್ನು ಪತ್ತೆ ಹಚ್ಚಿ, ಅದು ಸಣ್ಣ ಕರಾವಳಿಯ ಬಂದರೊಂದನ್ನು ಸೂಚಿಸು ತ್ತದೆ ಎಂದು ಭಾವಿಸಿ ಆ ಕಡೆಗೆ ಮುನ್ನಡೆಸಿದೆವು. ಹಿಂಭಾಗ ತುಂಬ ಎತ್ತರವಾಗಿರುವ, ಬೀಳ್ಗುಂಡಿರುವ, ಮುಂಭಾಗ ತಗ್ಗಾಗಿರುವ ಎರಡು ವಿಜಾತೀಯ ಹಡಗುಗಳನ್ನು ನಾವು ಹಾದು ಹೋದೆವು. ನಾವು—ಈಗ ಬಹಳ ಮಂಕಾಗಿರುವ—ದೀಪವನ್ನು ಸಮೀಪಿಸು ತ್ತಿದ್ದಂತೆ ದೋಣಿಯ ಮೂತಿ ಮುನ್ ಚಾಚಿದ ಹಡಗುಕಟ್ಟೆಗೆ ಹೊಡೆಯಿತು. ದಣಿವಿ ನಿಂದ ನಾವು ಕುರುಡರಾಗಿದ್ದೆವು. ನನ್ನವರಿಬ್ಬರು ಹುಟ್ಟುಗಳನ್ನು ಬಿಟ್ಟು ತಮ್ಮ ಪೀಠ ದಿಂದ ಕೆಳಗೆ ಬಿದ್ದರು—ಸತ್ತವರಂತೆ. ನಾನು ಅಡ್ಡದಿಮ್ಮಿಗೆ ಬಿಗಿಯಾಗಿ ಅಂಟಿಕೊಂಡೆ. ನೀರಿನ ಸೆಳವು ಸಣ್ಣ ಅಲೆಗಳನ್ನೆಬ್ಬಿಸಿತು. ತೀರದ ಸುವಾಸನೆಯ ಅಸ್ಪಷ್ಟತೆ ವಿಶಾಲ ಮೊತ್ತವಾಗಿ ಗುಂಪುಗೂಡಿದವು. ಬಹುಶಃ ಸಸ್ಯಗಳ ಬೃಹದಾಕಾರದ ತೋಪು—ಮೌನವಾದ, ಚಿತ್ರವಿಚಿತ್ರವಾದ ಆಕೃತಿಗಳು ; ಅವುಗಳ ಕಾಲ ಬುಡದಲ್ಲಿ ಅರ್ಧ ವೃತ್ತಾಕಾರದ ಪೀಠ ದುರ್ಬಲವಾಗಿ ಮಿನುಗುತ್ತಿತ್ತು—ಮಾಯೆಯಂತೆ. ಬೆಳಕಿರಲಿಲ್ಲ, ಸ್ಪಂದನವಿರಲಿಲ್ಲ, ಸದ್ದಿರಲಿಲ್ಲ. ರಹಸ್ಯ ಗರ್ಭಿತ ಪೂರ್ವ ನನ್ನೆದುರು ನಿಂತಿತು—ಪುಷ್ಪ ದಂತೆ ಸುಗಂಧಮಯವಾಗಿ, ಸಾವಿನಂತೆ ನಿಶ್ಶಬ್ದವಾಗಿ, ಸಮಾಧಿಯಂತೆ ಮಬ್ಬುಗತ್ತಲಾಗಿ.

'ನಾನು ವರ್ಣನಾತೀತ ಸುಪ್ತಿನಲ್ಲಿ, ವಿಜಯಿಯಂತೆ ಹಿಗ್ಗುತ್ತಾ, ನಿದ್ದೆಯಿಲ್ಲದೆ, ಅಗಾಧವಾದ ದೈವನಿಶ್ಚಿತ ಸಮಸ್ಯೆ ಎದುರು ಪರವಶನಾದಂತೆ, ಕುಳಿತಿದ್ದೆ.

'ಹುಟ್ಟುಗಳ ಮುಡುಮ್ಮನೆ ಬೀಳುವಿಕೆ, ಅಳತೆ ದಂಡಿಗೆಯ ಮುಳುಗು ನೀರಿನ ಮೇಲೆ ಮಾಡಿದ ಪ್ರತಿಧ್ವನಿ, ತೀರದ ನಿಶ್ಶಬ್ದತೆಯಿಂದ ತೀವ್ರಗೊಂಡು ದೊಡ್ಡ ಕರತಾಡನದಂತಾಗಿ ನಾನು ಚಂಗನೆ ನೆಗೆದೇಳುವಂತೆ ಮಾಡಿತು. ಯೂರೋಪಿನ ದೋಣಿಯೊಂದು ಒಳಗೆ ಬರುತ್ತಿತ್ತು. ಮರಣ ಹೊಂದಿದ ಹಡಗಿನ ಹೆಸರನ್ನು ಆಹ್ವಾನಿಸಿದೆ. ನಾನು ಕೂಗಿಕೊಂಡೆ: ಜುಡಿಯಾ, ಅಹೋ. ದುರ್ಬಲ ಮಾರುತ್ತರದ ದನಿ ಕೇಳಿಸಿತು.

'ಅವನು ಬೇರೆ ಯಾರೂ ಆಗಿರದೆ ನಮ್ಮ ನಾಯಕ ಬಿಯರ್ಡ್ ಆಗಿದ್ದ. ನೌಕಾಧಿಪತಿ ಪ್ರಯಾಣ ಮಾಡುತ್ತಿರುವ ಹಡಗನ್ನು ಹಿಂದೆ ಹಾಕಿ, ಮೂರುಗಂಟೆ ಮುಂಚಿತವಾಗಿಯೇ ಬಂದಿದ್ದ. ಮುದುಕನ ನಡುಗುವ ಮತ್ತು ದಣಿದ ಧ್ವನಿಯನ್ನು ಮತ್ತೆ ಕೇಳಲು ನನಗೆ ಸಂತೋಷವಾಯಿತು. "ಓಹ್, ಮಾರ್ಲೋ, ನೀನೆ?" "ಕಲ್ಲಿನ ಒಡ್ಡಿನ ಕೊನೆಗೆ ಲಕ್ಷ್ಯವಿರಲಿ, ಸಾರ್".

'ಅವನು ಎಚ್ಚರಿಕೆಯಿಂದ ಬಂದ. ಆಳವಾದ ಸಮುದ್ರದ ಮಾರ್ಗದಲ್ಲಿ ಸಮುದ್ರ ವಿಮಾ ವ್ಯಾಪಾರಿಗಳಿಗಾಗಿ ಉಳಿಸಿಕೊಂಡು ಬಂದದ್ದನ್ನು ತಂದ. ನಾನು ದೋಣಿಯ ಮೂತಿಯಲ್ಲಿರುವ ಹಗ್ಗವನ್ನು ಸಡಿಲಬಿಟ್ಟು ಪಕಕ್ಕೆ ಉರುಳಿದೆ. ಹಿಂಭಾಗ ವಿರೂಪಗೊಂಡ, ಮಂಜಿನಿಂದ ತೇವಗೊಂಡ ಅವನು ಮೊಣಕಾಲಿಗೆ ಕೈಗಳನ್ನು ಗಂಟು ಹಾಕಿಕೊಂಡು ಕುಳಿತ. ಅವನ ದೋಣಿಯವರು ಆಗಲೇ ನಿದ್ರಿಸುತ್ತಿದ್ದರು. "ನಾನು ತುಂಬ ತ್ರಾಸ ಪಡಬೇಕಾಯಿತು" ಅವನು ಗೊಣಗುಟ್ಟಿದ, "ಮಹೋನ್ ಹಿಂದೆ ಇದ್ದಾನೆ—ಬಹಳ ದೂರವಿಲ್ಲ." ಪ್ರಪಂಚವನ್ನು ಎಚ್ಚರಗೊಳಿಸಲು ಭಯವೇನೋ ಎಂಬಂತೆ ನಾವು ಪಿಸಪಿಸು ದನಿಯಲ್ಲಿ ಪರಸ್ಪರ ಮಾತಾಡಿದೆವು. ಆಗ ನಿದ್ದೆ ಹೋದವರನ್ನು ಬಂದೂಕಾಗಲೀ, ಸಿಡಿಲಾಗಲೀ, ಭೂಕಂಪವಾಗಲೀ ಎಚ್ಚರಗೊಳಿಸಲು ಆಗುತ್ತಿರಲಿಲ್ಲ.

'ಸುತ್ತಲೂ ನೋಡುತ್ತಾ ಮಾತಾಡುತ್ತಿರುವಾಗ ಸಮುದ್ರದಲ್ಲಿ ಪ್ರಕಾಶಮಾನವಾದ ಬೆಳಕು ರಾತ್ರಿಯಲ್ಲಿ ಸಂಚರಿಸುತ್ತಿರುವುದನ್ನು ದೂರದಿಂದ ನೋಡಿದೆ. "ಆವಿ ಹಡಗೊಂದು ಕೊಲ್ಲಿಗೆ ಹಾದು ಬರುತ್ತಿದೆ"—ನಾಯಕನಿಗೆ ಹೇಳಿದೆ. ಅದು ಹಾದು ಹೋಗುತ್ತಿರಲಿಲ್ಲ, ಪ್ರವೇಶಿಸುತ್ತಿತ್ತು, ತೀರ ಹತ್ತಿರಕ್ಕೆ ಬಂದು ಲಂಗರುಗೊಂಡು ನಿಂತಿತು. "ನಾನು ಬಯಸುತ್ತೇನೆ" ವೃದ್ಧ ನಾಯಕ ಹೇಳತೊಡಗಿದ, "ಅದು ಇಂಗ್ಲೆಂಡಿನದೋ ಅಲ್ಲವೋ ತಿಳಿದುಕೊ. ಬಹುಶಃ ಅವರು ನಮ್ಮನ್ನು ಎಲ್ಲಿಗಾದರೂ ಮುಂದಿನ ರೇವಿಗೆ ಕರೆದೊಯ್ಯಬಹುದು" ಪುಕ್ಕಲಿನಿಂದ ತಲ್ಲಣಗೊಂಡವನಂತೆ ತೋರುತ್ತಿದ್ದ. ತಿವಿತ ಮತ್ತು ಒದೆತಗಳಿಂದ ನನ್ನ ಸಹ ಕೆಲಸಗಾರನೊಬ್ಬನನ್ನು ನಿದ್ದೆನಡಗೆಯ ಮಟ್ಟಕ್ಕೆ ತಂದು ಕೈಗೊಂದು ಹುಟ್ಟುಕೊಟ್ಟೆ. ನಾನೊಂದು ತೆಗೆದುಕೊಂಡೆ. ಆವಿ ಹಡಗಿನ ದೀಪಗಳತ್ತ ನಮ್ಮ ದೋಣಿಯನ್ನು ನಡೆಸಿದೆವು.

'ಅದರಲ್ಲಿ ಗೊಣಗುಟ್ಟುವ ಧ್ವನಿಗಳು ಕೇಳಿಸುತ್ತಿದ್ದವು. ಯಂತ್ರ ಕೋಣೆಯ ಲೋಹಗುಂಡಿಯಲ್ಲಿ ಖಣಿಲ್ ಖಣಿಲ್ ಶಬ್ದ, ಅಟ್ಟದ ಮೇಲೆ ಹೆಜ್ಜೆ ಶಬ್ದ. ಅದರ ತೆರಪುಕಂಡಿಗಳು ಅಗಲಗೊಂಡ ದುಂಡನೆಯ ಕಣ್ಣುಗಳಂತೆ ಹೊಳೆದವು. ಆಕೃತಿಗಳು ಸಂಚಲಿಸತೊಡಗಿದವು. ಹಡಗಿನ ಮಧ್ಯದಲ್ಲಿ ನೌಕಾಧಿಪತಿಗಾಗಿ ಮೀಸಲಾದ ವೇದಿಕೆಯ

ಮೇಲೆ ಒಬ್ಬ ಛಾಯಾಮನುಷ್ಯನಿದ್ದ. ಅವನು ನಮ್ಮ ಹುಟ್ಟುಗಳ ಸದ್ದನ್ನು ಕೇಳಿಸಿಕೊಂಡ.

'ಆ ಮೇಲೆ, ನಾನು ತುಟಿ ಎರಡು ಮಾಡುವ ಮೊದಲೇ, ಪೂರ್ವ ನನ್ನೊಡನೆ ಮಾತಾಡಿತು—ಆದರೆ ಪಶ್ಚಿಮದ ಕಂಠದಲ್ಲಿ. ರಹಸ್ಯಾತ್ಮಕವಾದ, ದೈವನಿಶ್ಚಿತವಾದ ಮೌನದೊಳಕ್ಕೆ ಮಾತುಗಳ ಅಜಸ್ರಧಾರೆ ಸುರಿಯತೊಡಗಿತು. ವಿದೇಶೀಯ ಕೋಪದ ಮಾತುಗಳು, ಶಬ್ದಗಳೊಡನೆ ಮತ್ತು ಒಳ್ಳೆ ಇಂಗ್ಲಿಷಿನ ಪೂರ್ಣ ವಾಕ್ಯಗಳೊಡನೆ ಸೇರಿಕೊಂಡು, ಕಡಮೆ ಅಪರಿಚಿತ ಮತ್ತು ಹೆಚ್ಚು ಆಶ್ಚರ್ಯ ಜನಕ ಎನ್ನಿಸಿದವು. ಧ್ವನಿ ಶಪಥ ಮಾಡಿತು; ತೀವ್ರವಾಗಿ ಶಾಪ ಹಾಕಿತು. ಬೈಗುಳದ ಸುರಿಮಳೆಯ ಮೂಲಕ ಕೊಲ್ಲಿಯ ಪವಿತ್ರ ಶಾಂತಿಯ ಒಗಟನ್ನು ಒಡೆಯಿತು ಅದು. ನನ್ನನ್ನು ಹಂದಿ ಎಂದು ಕರೆಯುತ್ತಾ ಪ್ರಾರಂಭಿಸಿ, ಆರೋಪಣ ಕ್ರಮದಲ್ಲಿ ಬಾಯಲ್ಲಿ ಹೇಳಲಾಗದ ಇಂಗ್ಲಿಷಿನ ಗುಣವಾಚಕಗಳವರೆಗೂ ಸಾಗಿತು. ಮೇಲೆ ನಿಂತಿದ್ದ ಮನುಷ್ಯ ಕೆರಳಿ ಎರಡು ಭಾಷೆಗಳಲ್ಲಿ ಜೋರಾಗಿ ಮಾತಾಡಿದ. ಅವನ ರೋಷಾವೇಶದಲ್ಲಿದ್ದ ಪ್ರಾಮಾಣಿಕತೆ ಒಂದಲ್ಲ ಒಂದು ಬಗೆಯಲ್ಲಿ ವಿಶ್ವದ ಸಾವ ರಸ್ಯದ ವಿರುದ್ಧ ನಾನು ತಪ್ಪೆಸಗಿರಬೇಕು ಎಂಬುದನ್ನು ಬಹುತೇಕ ಮನಗಾಣಿಸುವಂತಿತ್ತು. ನನಗೆ ಅವನು ಕಾಣಿಸುತ್ತಿರಲಿಲ್ಲ. ಆದರೆ ಅವನು ತಾನಾಗಿಯೇ ಮೂರ್ಛೆ ರೋಗಕ್ಕೆ ತುತ್ತಾಗುತ್ತಿದ್ದಾನೆ ಎಂದು ಯೋಚಿಸಲಾರಂಭಿಸಿದೆ.

'ತಟಕ್ಕನೆ ಮೌನಿಯಾದ. ಚಪಲ ಹಂದಿಯಂತೆ ಏದುವುದು, ಗೊಟರುಗರಿಯುವುದು ನನಗೆ ಕೇಳಿಸುತ್ತಿತ್ತು. ನಾನು ಹೇಳಿದೆ—

"ಇದು ಯಾವ ಆವಿ ಹಡಗು?"

"ಹ್ಞಂ, ಯಾವುದಿದು? .. ನೀನು ಯಾರು?"

"ಸಮುದ್ರದಲ್ಲಿ ಸುಟ್ಟುಹೋದ ಇಂಗ್ಲಿಷ್ ಹಡಗಿನ ನಾವಿಕರು. ರಾತ್ರಿ ಇಲ್ಲಿಗೆ ಬಂದೆವು. ನಾನು ನಾಯಕನ ದ್ವಿತೀಯ ಸಹಾಯಕ. ನಾಯಕ ದೊಡ್ಡ ದೋಣಿಯಲ್ಲಿದ್ದಾನೆ. ನೀವು ನಮಗೆ ಯಾವುದಾದರೂ ಮುಂದಿನ ರೇವು ತಲುಪುವಂತೆ ಮಾಡುತ್ತೀರಾ ಎಂಬುದನ್ನು ತಿಳಿಯಬಯಸುತ್ತಾನೆ."

"ಅಯ್ಯೋ ದೇವರೇ! ನೋಡಿ....ಇದು ಚೀನಾದ್ದು. ಸಿಂಗಾಪೂರದಿಂದ ಹೊರಟು ಮತ್ತೆ ಹಿಂದಕ್ಕೆ ಮರು ಪ್ರಯಾಣದಲ್ಲಿದೆ. ನಾಳೆ ಬೆಳಗ್ಗೆ ನಿಮ್ಮ ನಾಯಕನೊಡನೆ ಮಾತಾಡಿ ಏರ್ಪಾಡು ಮಾಡುತ್ತೇನೆ....ಮತ್ತೆ....ನಾನು ಹೇಳ್ತಿರೋದು ಕೇಳಿಸುತ್ತಾ?"

"ಇಡೀ ಕೊಲ್ಲಿಗೆ ಕೇಳಿಸುತ್ತಿದೆ ಎಂದು ನನ್ನ ನಂಬಿಕೆ."

"ನಿನ್ನದು ತೀರ ಸೇರಿದ ದೋಣಿ ಎಂದು ಭಾವಿಸುತ್ತೇನೆ....ಈಗ, ಇಲ್ಲಿ ನೋಡು, ಈ ಪಿಶಾಚಿ ಸೋಮಾರಿ ದಗಾಕೋರ ಕಾವಲುಗಾರ ನಿದ್ದೆ ಮಾಡಲು ಮತ್ತೆ ಹೋಗಿದ್ದಾನೆ—ಉಗಿ ಅವನಿಗೆ. ದೀಪವಿಲ್ಲ....ಈ ದರಿದ್ರ ಕಲ್ಲು ಒಡ್ಡಿಗೆ ತಾಕುವ ಹಾಗೆ ತಪ್ಪು ಮಾರ್ಗದಲ್ಲಿ ಓಡಿಸಿದ್ದೆ....ಅವನು ಈ ತಂತ್ರ ಮಾಡುತ್ತಿರುವುದು ಇದು ಮೂರನೆಯ ಸಲ. ಈಗ, ನಿನ್ನನ್ನು ಕೇಳುತ್ತೇನೆ, ಇಂಥದನ್ನು ಯಾರಾದರೂ ಸಹಿಸಲಾದೀತೆ? ಒಬ್ಬ ಮನುಷ್ಯನನ್ನು ಬುದ್ಧಿವಿಕಲ್ಪನನ್ನಾಗಿ ಮಾಡಲು ಇಷ್ಟು ಸಾಕು....ನಾನು ನಿಜಸಂಗತಿಯನ್ನು ವರದಿ ಮಾಡುತ್ತೇನೆ... ನೋಡು....ದೀಪ ಇಲ್ಲ....ಆರಿಹೋಗಿದೆ— ಅಲ್ಲವೇನು?

ೀಪ ಆರಿಹೋಗಿತ್ತು ಎಂಬುದಕ್ಕೆ ನಿನ್ನನ್ನು ಸಾಕ್ಷಿದಾರನನ್ನಾಗಿ ತೆಗೆದುಕೊಳ್ಳುತ್ತೇನೆ. ೀಪ ಇರಬೇಕು, ನಿನಗೆ ಗೊತ್ತು. ಕೆಂಪು ದೀಪ....”

“ದೀಪ ಇತ್ತು”—ಮುಗ್ಧತೆಯಿಂದ ಹೇಳಿದೆ.

“ಆದರೆ ಆರಿ ಹೋಗಿದೆ....ಈ ರೀತಿ ಮಾತಾಡೋದರಿಂದ ಏನು ಪ್ರಯೋಜನ? ನಿನ್ನಿಷ್ಟಕ್ಕೆ ನೀನೇ ನೋಡಬಹುದು ಅದು ಆರಿ ಹೋಗಿದೆ—ಅಲ್ಲವೇನು? ಇಂಥ ದೈವ ವರ್ಜಿತ ತೀರಕ್ಕೆ ನೀನೇನಾದರೂ ಬೆಲೆಯುಳ್ಳ ಆವಿ ಹಡಗು ತಂದರೆ ನಿನಗೆ ದೀಪವೂ ಬೇಕು. ಈ ಹಡಗು ಕಟ್ಟೆಯ ಒಂದು ಕೊನೆಯಿಂದ ಮತ್ತೊಂದು ಕೊನೆಯವರೆಗೆ ಒದ್ದು ಬಿಡುತ್ತೇನೆ....ಆಗುವುದಿಲ್ಲ ಎನ್ನುವ ಹಾಗಿದ್ದರೆ, ನೋಡು....ಖಂಡಿತವಾಗಿ....”

“ಹಾಗಾದರೆ ನಮ್ಮನ್ನು ಕರೆದುಕೊಂಡು ಹೋಗುತ್ತೀರೆಂದು ನಮ್ಮ ನಾಯಕನಿಗೆ ತಿಳಿಸಲೆ?”—ನಾನು ಮಧ್ಯೆಯೇ ಬಾಯಿ ಹಾಕಿ ಕೇಳಿದೆ.

“ಹೌದು, ನಾನು ಕರೆದುಕೊಂಡು ಹೋಗುತ್ತೇನೆ....ಶುಭವಾಗಲಿ.”

‘ನಾನು ಹಿಂದಕ್ಕೆ ಹುಟ್ಟು ಹಾಕಿದೆ. ಚಾಚಿದ ಕಲ್ಲು ಒಡ್ಡಿಗೆ ಲಗತ್ತಿಸಿದೆ. ಕೊನೆಗೆ ನಿದ್ದೆ ಮಾಡಲು ಹೋದೆ. ನಾನು ಪೂರ್ವದ ನಿಶ್ಶಬ್ದತೆಯನ್ನು ಎದುರಿಸಿದ್ದೆ. ಅದರ ಕೆಲವು ಭಾಷೆಗಳನ್ನು ಕೇಳಿದ್ದೆ. ಮತ್ತೆ ನಾನು ಕಣ್ಣು ಬಿಟ್ಟಾಗ ಹಿಂದೆಂದೂ ಅದು ಮುಕ್ಕಾಗಿರಲಿಲ್ಲ ಎನ್ನುವಂತೆ ನಿಶ್ಶಬ್ದತೆ ಸಮಗ್ರವಾಗಿ ಸಂಪೂರ್ಣವಾಗಿ ಹಾಸಿ ಮಲಗಿತ್ತು. ಬೆಳಕಿನ ಪ್ರವಾಹದಲ್ಲಿ ನಾನು ಮಲಗಿದ್ದೆ. ಈ ಮೊದಲು ಇಲ್ಲಿಯವರೆಗೆ ಆಕಾಶ ಇಷ್ಟು ಎತ್ತರವೆಂದು ಕಂಡಿರಲೇ ಇಲ್ಲ. ನಾನು ಕಣ್ಣುಗಳನ್ನು ತೆರೆದೆ. ಅಲುಗಾಡದೆ ಮಲಗಿದೆ.

‘ಆಮೇಲೆ ಪೂರ್ವ ದೇಶದ ಜನರನ್ನು ನೋಡಿದೆ. ಅವರೆಲ್ಲರೂ ನನ್ನನ್ನು ನೋಡುತ್ತಿದ್ದರು. ಕಲ್ಲು ಒಡ್ಡಿನ ಉದ್ದಕ್ಕೂ ಜನಗಳೋ ಜನಗಳು. ನಾನು ಪೂರ್ವದೇಶದ ಜನಸಮೂಹದ ಕಂದು, ಕಂಚು, ಹಳದಿ ಮುಖಗಳನ್ನು, ಕಪ್ಪು ಕಣ್ಣುಗಳನ್ನು, ಹೊಳಪನ್ನು, ಬಣ್ಣವನ್ನು ನೋಡಿದೆ. ಇವರೆಲ್ಲರೂ ಗೊಣಗಾಟವಿಲ್ಲದೆ ಅಲುಗಾಟವಿಲ್ಲದೆ ಉಸಿರಾಟವಿಲ್ಲದೆ ನನ್ನನ್ನು ರೆಪ್ಪೆ ಹೊಡೆಯದೆ ನೋಡಿದರು. ದೋಣಿಗಳ ಕಡೆ ದುರುಗುಟ್ಟಿಕೊಂಡು ನೋಡಿದ್ದರು. ಮಲಗಿರುವವರ ಕಡೆ ದುರುಗುಟ್ಟಿಕೊಂಡು ನೋಡಿದ್ದರು. ರಾತ್ರಿ ಸಮುದ್ರದಿಂದ ಅವರಲ್ಲಿಗೆ ಬಂದಿದ್ದರು. ಏನೂ ಅಲುಗಲಿಲ್ಲ. ತಾಳೆ ಮರಗಳ ಗರಿಗಳು ಆಕಾಶಕ್ಕೆದುರಾಗಿ ಅಲುಗಾಡದೆ ನಿಂತಿದ್ದುವು. ತೀರದ ಉದ್ದಕ್ಕೂ ಒಂದು ಕೊಂಬೆಯೂ ಮಿಸುಕಾಡಲಿಲ್ಲ. ಅಡಗಿಕೊಂಡಿರುವ ಮನೆಗಳ ಕಂದು ಬಣ್ಣದ ಛಾವಣಿಗಳು ಹಸುರು ಎಲೆಗೊಂಚಲುಗಳ ಸಂಧಿಯಲ್ಲಿ ಇಣುಕುತ್ತಿದ್ದವು; ಅಲುಗದೆ ಹೊಳೆಯುವ ಇಳಿಬಿದ್ದ ದೊಡ್ಡ ಎಲೆಗಳ ಸಂಧಿಯಲ್ಲಿ ಅವು ದಾರಿ ಮಾಡಿಕೊಂಡು ನುಗ್ಗಿದ ಗಟ್ಟಿ ಲೋಹದ ಎಲೆಗಳಂತಿದ್ದವು. ಇದೇ ಪ್ರಾಚೀನ ನಾವಿಕರು ಕಂಡ ಪೂರ್ವ ದೇಶ—ಅಷ್ಟು ಪ್ರಾಚೀನ, ಅಷ್ಟು ರಹಸ್ಯಗರ್ಭಿತ, ಉಜ್ವಲ ಹಾಗೆಂಬೇ ತೇಜೋಹೀನ, ಸಮಕಾಲಿಕ ಹಾಗೆಂಬೇ ಸಂಪ್ರದಾಯಬದ್ಧ, ತುಂಬ ಅಪಾಯದ್ದು ಹಾಗೆಂಬೇ ಭರವಸೆಯದು. ಇವರೇ ಆ ಜನಗಳು. ತಟ್ಟನೆ ನಾನೆದ್ದು ಕುಳಿತುಕೊಂಡೆ. ಚಲನೆಯ ಅಲೆ ಒಂದು ಕೊನೆಯಿಂದ ಮತ್ತೊಂದು ಕೊನೆಯವರೆಗೆ ಗುಂಪಿನ ಮೂಲಕ ಹಾದು ಹೋಯಿತು,

ತಲೆಗಳ ಮೂಲಕ ಹಾದುಹೋಯಿತು, ದೇಹಗಳನ್ನು ತೂಗಾಡಿಸಿತು, ಕಲ್ಲು ಒಡ್ಡಿ
ಉದ್ದಕ್ಕೂ ಓಡಿತು—ನೀರಲ್ಲೆದ್ದ ಅಲೆಯಂತೆ, ಹುಲ್ಲುಗಾವಲಿನ ಮೇಲೆ ಬೀಸಿದ ಗಾ
ಯಂತೆ. ಮತ್ತೆ ಎಲ್ಲರೂ ಮೊದಲಿನಂತೆ ಸ್ಥಗಿತ. ನಾನು ಈಗ ನೋಡುತ್ತೇನೆ—
ಕೊಲ್ಲಿಯ ಅಗಲ ವಿಸ್ತಾರ, ಥಳಥಳಿಸುವ ಮರಗಳು, ಅನಂತ ಹಾಗೂ ವೈವಿಧ್ಯಮಯ
ಹಸುರಿನ ಸಂಪತ್ತು, ಸ್ವಪ್ನ ಸಮುದ್ರದ ಹಾಗಿರುವ ಸಮುದ್ರದ ನೀಲಿ, ಏಕಾಗ್ರ
ಶ್ರದ್ಧಾನಿರತ ಮುಖಗಳ ಜನ ಸಮೂಹ, ಬಗೆಬಗೆಯ ಬಣ್ಣಗಳ ಹೊಳಪು—ಎಲ್ಲವನ್ನೂ
ನೀರು ಪ್ರತಿಬಿಂಬಿಸುತ್ತದೆ. ಕರಾವಳಿಯ ಕೊಂಕನ್ನು, ಕಲ್ಲು ಒಡ್ಡನ್ನು, ಹಿಂಭಾಗ
ಎತ್ತರವಿರುವ ವಿದೇಶೀಯ ಹಡಗು ಇನ್ನೂ ತೇಲುತ್ತಾ ಹೋಗುತ್ತಿರುವುದನ್ನು, ಮೂರು
ದೋಣಿಗಳನ್ನು ಹಾಗೂ ಅಲ್ಲಿಯ ದೇಶದ, ಅಲ್ಲಿಯ ಜನಗಳ ಮತ್ತು ಅಲ್ಲಿಯ ಬಿಸಿಲಿನ
ಹಿಂಸೆಯ ಅರಿವಿಲ್ಲದೆ ಮಲಗಿದ ಪಶ್ಚಿಮದ ದಣಿದ ಜನರನ್ನು—ಎಲ್ಲವನ್ನೂ ಪ್ರತಿಬಿಂಬಿಸು
ತ್ತದೆ ನೀರು. ಅಡ್ಡಮಣೆಯ ಆಚೆ ಬದಿಗೆ ಬಿಸುಡಿದಂತೆ, ತಳದ ಹಲಗೆಯ ಮೇಲೆ
ಸುರುಳಿಯಂತೆ ಸುಡುರಿಕೊಂಡು, ಲಕ್ಷ್ಯವೇ ಇಲ್ಲದ ಸಾವಿನ ಭಂಗಿಗಳಲ್ಲಿ ಅವರು
ಮಲಗಿ ನಿದ್ರಿಸಿದರು. ದೊಡ್ಡ ದೋಣಿಯ ಹಿಂಭಾಗದಲ್ಲಿ ಹಿಂದಕ್ಕೆ ಒರಗಿಕೊಂಡು
ನಿದ್ರಿಸುತ್ತಿರುವ ವೃದ್ಧನಾಯಕನ ತಲೆ ಅವನ ಎದೆಯ ಮೇಲೆ ಒರಗಿತ್ತು. ಅವನೆಂದೂ
ಎಚ್ಚರಗೊಳ್ಳುವುದಿಲ್ಲವೇನೋ ಎಂಬಂತೆ ಕಂಡ. ಇನ್ನೂ ದೂರದಲ್ಲಿ ವೃದ್ಧ ಮಹೋನನ
ಮುಖ ಆಕಾಶಕ್ಕೆದುರಾಗಿ ಅಂಗತ್ತವಾಗಿತ್ತು. ಅವನ ಎದೆಯ ಮೇಲೆ ಅವನ ಉದ್ದನೆಯ
ಬಿಳಿಗಡ್ಡ ಹರಡಿಕೊಂಡಿತ್ತು. ಚುಕ್ಕಾಣಿಯ ಹಿಡಿಕೆಯ ಬಳಿ ಕುಳಿತಿದ್ದ ಅವನನ್ನು
ಯಾರೋ ಗುಂಡಿನಿಂದ ಹೊಡೆದುಬಿಟ್ಟಿದ್ದಾರೆ ಎನ್ನುವಂತೆ ಕಾಣುತ್ತಿತ್ತು. ಮತ್ತೊಬ್ಬ
ಮನುಷ್ಯ ದೋಣಿಯ ಮೂತಿಯೊಳಗಿನ ಕುಪ್ಪೆಯಂತೆ, ಎರಡು ಕೈಗಳಿಂದಲೂ
ಮುನ್‌ತುದಿಯ ತಲೆಯನ್ನು ತಬ್ಬಿಕೊಂಡು, ದೋಣಿಯ ಪಕ್ಕದ ಏಣಿನ ಮೇಲೆ ಕೆನ್ನೆ
ಇಟ್ಟುಕೊಂಡು ನಿದ್ರಿಸಿದ. ಪೂರ್ವ ಸದ್ದಿಲ್ಲದಂತೆ ಅವರನ್ನು ನೋಡಿತು.

'ಆಗಿನಿಂದ ಮೋಹಗೊಳಿಸುವ ಮಾಂತ್ರಿಕ ಶಕ್ತಿಯನ್ನು ಮನಗಂಡಿದ್ದೇನೆ. ನಾನು
ರಹಸ್ಯಗರ್ಭಿತ ಕರಾವಳಿಗಳನ್ನು, ನಿಶ್ಚಲ ಸಮುದ್ರವನ್ನು, ಕಂದುಬಣ್ಣದ ದೇಶಗಳ
ಭೂಮಿಯನ್ನು ನೋಡಿದ್ದೇನೆ. ಅಲ್ಲಿರುವ ರಹಸ್ಯದ ಪ್ರತೀಕಾರದೇವತೆ ಹೊಂಚು ಹಾಕಿ
ಕೊಂಡು ಕಾಯುತ್ತಿರುತ್ತದೆ, ಮನವೊಲಿಸುತ್ತದೆ, ತಮ್ಮ ಬುದ್ಧಿವಂತಿಕೆ ಜ್ಞಾನಶಕ್ತಿಗಳ
ಬಗೆಗೆ ಹೆಮ್ಮೆಪಡುವ ಅನೇಕ ಜಯಶೀಲ ಜನಾಂಗದ ಸಮಕ್ಕೂ ಬರುತ್ತದೆ, ಸಮಯ
ಬಿದ್ದರೆ ಹಿಂದಕ್ಕೆ ಹಾಕಿ ಮುಂದೆ ಹೋಗುತ್ತದೆ. ನನಗಂತೂ ಪೂರ್ವದ ಎಲ್ಲವೂ ನನ್ನ
ಯೌವನದ ಕಾಣ್ಕೆಯಲ್ಲಿ ಕೆನೆಗಟ್ಟಿ ನಿಂತಿದೆ ಎಂದೇ ನನ್ನ ನಂಬಿಕೆ. ನನ್ನ ಯೌವನದ
ಕಣ್ಣುಗಳನ್ನು ತೆರೆದಾಗ ಅದೆಲ್ಲವೂ ಆ ಕ್ಷಣದಲ್ಲಿ ತುಂಬಿಕೊಂಡಿರುತ್ತದೆ. ಸಮುದ್ರದ
ಜೊತೆಯ ಹೋರಾಟದಿಂದ ನಾನವನ್ನು ಆಕಸ್ಮಾತ್ತಾಗಿ ಸಂಧಿಸಿದೆ—ನಾನು ಯುವಕ
ನಾಗಿದ್ದೆ—ಅದರ ಕಣ್ಣು ನನ್ನತ್ತ ಇರುವುದನ್ನು ನಾನು ನೋಡಿದೆ. ಅದರಲ್ಲಿ ಉಳಿದಿರು
ವುದು ಇಷ್ಟೇ! ಕ್ಷಣ ಮಾತ್ರ—ಯೌವನದ ಶಕ್ತಿ, ಪ್ರಣಯ, ಕಣ್ಕಟ್ಟುವಿದ್ಯೆಯ ಕ್ಷಣ!
... ಅಪರಿಚಿತ ತೀರದ ಮೇಲೆ ಸೂರ್ಯನ ಬೆಳಕಿನ ವಿಡಿತ, ನೆನಪಿಕೊಳ್ಳುವ ಹೊತ್ತು,
ನಿಟ್ಟುಸಿರುಡುವ ಹೊತ್ತು.... ಒಳ್ಳೆಯದು, ಹೋಗಿ ಬನ್ನಿ, ಶುಭವಾಗಲಿ!

ಅವನು ಕುಡಿದ.

'ಓಹ್ ! ಹಿಂದಿನ ಆ ಒಳ್ಳೆಯ ಕಾಲ—ಆ ಒಳ್ಳೆಯ ಹಿಂದಿನ ಕಾಲ. ಯೌವನ ಮತ್ತು ಸಮುದ್ರ. ಮೋಹಗೊಳಿಸುವ ಸೌಂದರ್ಯ ಮತ್ತು ಸಮುದ್ರ. ಒಳ್ಳೆಯ ಶಕ್ತಿಯು ಸಮುದ್ರ, ರುಚಿಯು ಕಹಿಯು ಸಮುದ್ರ, ನಿಮ್ಮ ಕಿವಿಯಲ್ಲಿ ಪಿಸುಗುಡುತ್ತದೆ, ನಿಮ್ಮೆದುರು ಗರ್ಜಿಸುತ್ತದೆ, ನಿಮ್ಮ ಉಸಿರನ್ನು ಹೊರಕ್ಕೋಡಿಸುತ್ತದೆ.'

ಅವನು ಮತ್ತೆ ಕುಡಿದ.

'ಎಲ್ಲಕ್ಕಿಂತ ಅದ್ಭುತವಾದದ್ದೆಂದರೆ ಸಮುದ್ರವೇ, ಸಮುದ್ರ ಮಾತ್ರ ಎಂದು ನಂಬಿಕೆ—ಅಥವಾ ಯೌವನ ಮಾತ್ರ ಎಲ್ಲಕ್ಕಿಂತ ಅದ್ಭುತವೆ? ಯಾರು ಹೇಳಬಲ್ಲರು? ಆದರೆ ನೀವೆಲ್ಲರೂ ಇದ್ದೀರಿ—ಜೀವನದಿಂದ ಒಂದಲ್ಲ ಒಂದನ್ನು ಪಡೆದಿದ್ದೀರಿ: ಹಣ, ಪ್ರೇಮ—ಸಮುದ್ರ ತೀರದಲ್ಲಿ ಒಬ್ಬ ಏನನ್ನು ಪಡೆಯುತ್ತಾನೋ ಅದನ್ನು....ಮತ್ತೆ ನನಗೆ ಹೇಳಿ, ಅದು ಒಳ್ಳೆಯ ಕಾಲ ಅಲ್ಲವೆ, ಸಮುದ್ರದ ಮೇಲೆ ನಾವು ಯುವಕರಾಗಿದ್ದ ಕಾಲ; ಬಿರುಸಾದ ಹೊಡೆತಗಳನ್ನು ಬಿಟ್ಟು ಏನನ್ನೂ ಕೊಡದ ಸಮುದ್ರದ ಮೇಲೆ ಯುವಕರು ಮತ್ತು ಏನೂ ಇಲ್ಲದವರು—ಮತ್ತೆ ಕೆಲವು ಸಾರಿ ಅದು ನಿಮ್ಮ ಆಂತರಿಕ ಶಕ್ತಿಯನ್ನು ಅರ್ಥ ಮಾಡಿಕೊಳ್ಳಲು ಅವಕಾಶ ನೀಡುತ್ತದೆ. ಅದು ಮಾತ್ರ—ಏನು, ನೀವೆಲ್ಲ ಪಶ್ಚಾತ್ತಾಪ ಪಡುತ್ತೀರಾ?'

ಅವನ ಮುಂದೆ ನಾವೆಲ್ಲ ತಲೆದೂಗಿದೆವು: ಹಣ ಒದಗಿಸುವ ವ್ಯಕ್ತಿ, ಲೆಕ್ಕದ ವ್ಯಕ್ತಿ, ಕಾನೂನಿನ ವ್ಯಕ್ತಿ—ನಾವೆಲ್ಲ ಅವನ ಮುಂದೆ ತಲೆದೂಗಿದೆವು, ಥಳಥಳಿಸುವ ಮೇಜಿನ ಸುತ್ತ ಕುಳಿತು. ಅದು ಒಂದು ರೀತಿಯ ಕಂದುಬಣ್ಣದ ನೀರಿನ ತಟ್ಟೆಯಂತೆ ನಿಶ್ಚಲವಾಗಿದ್ದು ನಮ್ಮ ಮುಖಗಳ ಗೆರೆಗಳನ್ನು, ಸುಕ್ಕುಗಳನ್ನು ಪ್ರತಿಬಿಂಬಿಸುತ್ತಿತ್ತು; ಶ್ರಮದ, ವಂಚನೆಯ, ವಿಜಯದ, ಪ್ರೇಮದ ಗುರುತುಗಳಿಂದ ಕೂಡಿದ ನಮ್ಮ ಮುಖಗಳನ್ನು ಪ್ರತಿಫಲಿಸುತ್ತಿತ್ತು. ನಮ್ಮ ದಣಿದ ಕಣ್ಣುಗಳು ನಿಶ್ಚಲವಾಗಿ, ಒಂದೇ ಸಮನೆ; ತಳಮಳದಿಂದ ನೋಡುತ್ತಿವೆ, ಜೀವನದಿಂದ ಏನನ್ನೋ ಪಡೆಯಲು. ಆದರೆ ನಿರೀಕ್ಷಿಸುತ್ತಿದ್ದದ್ದು ಆಗಲೇ ಹೋಗಿಬಿಟ್ಟಿದೆ—ಕಣ್ಣಿಗೆ ಕಾಣದಂತೆ, ಉಸಿರಾಗಿ, ಮಿಂಚಾಗಿ—ಯೌವನದ ಜೊತೆಯಲ್ಲಿ, ಶಕ್ತಿಯ ಜೊತೆಯಲ್ಲಿ, ಪ್ರೇಮದ ಮಾಯೆಯೊಡನೆ.

ಅನು : ಸುಧಾಕರ

ಇಡೀ ಜೀವನ ತುದಿಗಾಣದ ಒಂದು ಪ್ರಯೋಗಶಾಲೆ

ಗಾಂಧೀಜಿ

ಕಾನ್ರಾಡ್‌ನ 'ಲಾರ್ಡ್ ಜಿಮ್': ಒಂದು ವಿಶ್ಲೇಷಣೆ

ಡಾ|| ಕೆ. ಸಿ. ಬೆಳ್ಳಿಯಪ್ಪ

ಜೋಸೆಫ್ ಕಾನ್ರಾಡ್ ವಿಶ್ವದ ಶ್ರೇಷ್ಠ ಕಾದಂಬರಿಕಾರರಲ್ಲಿ ಒಬ್ಬ. ಈ ಶತಮಾನದ ಹಾಗೂ ಕಾನ್ರಾಡ್‌ನ ಉತ್ಕೃಷ್ಟ ಕಾದಂಬರಿಗಳಲ್ಲಿ ಒಂದಾದ 'ಲಾರ್ಡ್ ಜಿಮ್' ಇಂಗ್ಲೆಂಡಿನ ಬ್ಲ್ಯಾಕ್‌ವುಡ್ ಮ್ಯಾಗಜಿನ್‌ನಲ್ಲಿ ಅಕ್ಟೋಬರ್ ೧೮೮೯ರಿಂದ ನವಂಬರ್ ೧೯೦೦ರ ವರೆಗೆ ಕಂತುಕಂತಾಗಿ ಪ್ರಕಟವಾಗಿ ೧೯೦೦ರ ಕೊನೆಯಲ್ಲಿ ಪುಸ್ತಕರೂಪದಲ್ಲಿ ಹೊರಬಂದಿತು. ಅವನ ಇತರ ಕಾದಂಬರಿಗಳಂತೆ 'ಲಾರ್ಡ್ ಜಿಮ್'ನ ಹಿಂದೆ ಕಾನ್ರಾಡ್‌ನ ಸ್ವಂತ ಅನುಭವ ಮತ್ತು ವ್ಯಾಸಂಗಗಳು ಇವೆ: ಕಾನ್ರಾಡ್ ವಿಡಾರ್ ಎಂಬ ನೌಕೆಯಲ್ಲಿ ಪ್ರಯಾಣ ಮಾಡಿದಾಗ ಭೇಟಿಯಾದ ಬಿಳಿ ವರ್ತಕ ಜಿಮ್ ಲಿಂಗಾರ್ಡಿನ ಕಥೆ; ೧೮೮೦ರಲ್ಲಿ ಸಿಂಗಪುರದಿಂದ ಜೆಡ್ಡಕ್ಕೆ ಸುಮಾರು ೯೦೦ ಯಾತ್ರಿಕರನ್ನು ಕೊಂಡೊಯ್ಯುತ್ತಿದ್ದ ನೌಕೆಯನ್ನು ವಿಮೆಯ ಹಣಕ್ಕಾಗಿ ನಾವಿಕರು ಕೈಬಿಟ್ಟ ಘಟನೆ ಮತ್ತು ಸರಾವಾಕ್‌ನ ರಾಜ ಜೇಮ್ಸ್ ಬ್ರೂಕ್‌ನ ಜೀವನ ಚರಿತ್ರೆ –ಇವೆಲ್ಲವನ್ನು ಈ ಕಾದಂಬರಿಯಲ್ಲಿ ಬಳಸಲಾಗಿದೆ.

ಸಂಕಲ್ಪದಲ್ಲಿ ಧೃಡತೆಯಿರುವ, ಆದರೆ ವರ್ತನೆಯಲ್ಲಿ ಹೇಡಿಯಾಗಿರುವ; ಉದ್ದೇಶಗಳಲ್ಲಿ ಧೈರ್ಯಶಾಲಿಯಾದ, ಆದರೆ ಕ್ರಿಯೆಯಲ್ಲಿ ದುರದೃಷ್ಟವಶಾತ್ ನಿಷ್ಕ್ರಿಯನಾದ ಮತ್ತು ತನ್ನ ಆದರ್ಶಗಳಲ್ಲಿ ಎದೆಗಾರಿಕೆ ತೋರುವ ಆದರೆ ಸಂದಿಗ್ಧ ಪರಿಸ್ಥಿತಿಯಲ್ಲಿ ಅಪಮಾನಕರ ರೀತಿಯಲ್ಲಿ ನಡೆಯುವ ವ್ಯಕ್ತಿಯೊಬ್ಬನ ಜೀವನದ ವಿಶ್ಲೇಷಣೆಯನ್ನು ಈ ಕಾದಂಬರಿಯಲ್ಲಿ ನಾವು ಕಾಣಬಹುದು. ಭ್ರಾಮಕ ಕನಸನ್ನು ಬೆಂಬತ್ತಿಹೋಗುವ ಮತ್ತು ಅದೇ ಸಮಯದಲ್ಲಿ ಹೇಯವಾದ ಸತ್ಯಾಂಶದಿಂದ ಪಲಾಯನ ಮಾಡುವ ಈ ವ್ಯಕ್ತಿಯೇ ಜಿಮ್. ಈತ ಕಲ್ಪನೆಯಲ್ಲಿ ಮಹಾಪುರುಷ. ಆದರೆ ವಾಸ್ತವತೆಯಲ್ಲಿ ಹೇಡಿ. ಇವನು ವಿಶ್ವಾಸ-ಘಾತುಕನೂ, ಹುತಾತ್ಮನೂ ಹೌದು—ಜೂಡಾಸ್‌ನಂತೆ

ನಡೆಯುವ ಕ್ರಿಸ್ತ, ಕ್ರಿಸ್ತನಂತೆ ಸಾಯುವ ಜೂಡಾಸ್. ಇಂತಹ ವ್ಯಕ್ತಿತ್ವವುಳ್ಳ ಜಿಮ್‌ನ ಚಿತ್ರಣದಲ್ಲಿ ಕಾದಂಬರಿಕಾರ ಕಾನ್ರಾಡ್‌ನ ವಿಶಿಷ್ಟ ಗುಣಗಳನ್ನು ನಾವು ಗುರುತಿಸಿ, ಲಾರ್ಡ್ ಜಿಮ್‌ನ ಶ್ರೇಷ್ಠತೆಯನ್ನು ಮನಗಾಣಬಹುದು.

ಸಂಕ್ಷಿಪ್ತವಾಗಿ ಹೇಳುವುದಾದರೆ, ತಾನು ನಾವಿಕನಾಗಿದ್ದ ಹಡಗು 'ಪಾಟ್ನ' ಇನ್ನೇನು ಮುಳುಗಿತು ಎಂದು ಭಾವಿಸಿ ಅದನ್ನು ತ್ಯಜಿಸಿದ ಜಿಮ್‌ನನ್ನು ಅಪರಾಧ ಭಾವ ಅವನ ಜೀವನಪರ್ಯಂತ ಕಾಡುತ್ತದೆ. ಈ ಅಪರಾಧದ ಪ್ರಾಯಶ್ಚಿತ್ತಕ್ಕಾಗಿ ಬಹು ದೂರದಲ್ಲಿರುವ ಪಟುಸನ್ ದ್ವೀಪವನ್ನು ನ್ಯಾಯಯುತವಾಗಿ ಆಳಲು ಪ್ರಯತ್ನಿಸಿ ಕೊನೆಗೆ ವಿಫಲವಾಗಿ, ಅಲ್ಲಿಯ ಮುಖ್ಯಸ್ಥನ ಮಗನ ಸಾವಿಗೆ ತಾನು ಕಾರಣವಾದಾಗ ತನ್ನ ತಪ್ಪಿಗಾಗಿ ಜಿಮ್ ತನ್ನನ್ನೇ ಬಲಿಕೊಟ್ಟುಕೊಳ್ಳುತ್ತಾನೆ.

'ಲಾರ್ಡ್ ಜಿಮ್' ಕಾದಂಬರಿಯ ಮೊದಲ ನಾಲ್ಕು ಅಧ್ಯಾಯಗಳಲ್ಲಿ ಕಾನ್ರಾಡ್ ಸರ್ವಸಾಕ್ಷಿ ನಿರೂಪಣೆಯ (omniscient narration) ಮೂಲಕ ಜಿಮ್‌ನ ಬಗ್ಗೆ ಹಲವಾರು ವಿಷಯಗಳನ್ನು ನಮ್ಮ ಗಮನಕ್ಕೆ ತರುತ್ತಾನೆ. ಕಾದಂಬರಿಯ ಪ್ರಥಮ ವಾಕ್ಯದಲ್ಲಿ ಜಿಮ್‌ನ ಆಕೃತಿಯ ಪರಿಚಯ ಇದೆ. ಅವನು ಎತ್ತರದಲ್ಲಿ ಆರಡಿಗಿಂತ ಒಂದು ಅಥವಾ ಎರಡು ಇಂಚು ಕಡಿಮೆ : ಅಂದರೆ ಸಾಧಾರಣವಾಗಿ ಒಬ್ಬನು ನಾಯಕನಾಗಲು ಅರ್ಹತೆ ಇರುವ ವ್ಯಕ್ತಿಯ ಮಟ್ಟಕ್ಕೆ ಏರಲು ಜಿಮ್ ಸ್ವಲ್ಪದರಲ್ಲಿ ಸೋಲುತ್ತಾನೆ ಎನ್ನುವ ಸೂಚನೆ ಸಿಗುತ್ತದೆ. ಅತನು ಬಲಿಷ್ಟನಾದ, ಕಟ್ಟುಮಸ್ತಾದ ಮನುಷ್ಯ. ರಭಸ ದಿಂದ ಮುನ್ನುಗ್ಗುವ ಗೂಳಿಯೆಂದು ಅವನನ್ನು ಕಾನ್ರಾಡ್ ವರ್ಣಿಸುತ್ತಾನೆ. ಇದರಿಂದ ಜೀವನದಲ್ಲಿ ನೇರ ಹೋರಾಟಕ್ಕೆ ಯಾವಾಗಲು ಸಿದ್ಧವಾಗಿರುವಂತಹ ವ್ಯಕ್ತಿತ್ವವುಳ್ಳವನು ಜಿಮ್ ಎನ್ನುವುದು ಸ್ಪಷ್ಟ. ಕಾನ್ರಾಡ್ ಕಾದಂಬರಿಯ ಮತ್ತೊಂದೆಡೆ ಜಿಮ್‌ನನ್ನು ಕತ್ತೆಗಿಂತ ಜೂಜುಕುದುರೆಯಾಗಲು ಬಯಸುವಂಥವನು ಎನ್ನುತ್ತಾನೆ. ಅಂದರೆ ಎತ್ತಿಗಿಂತ ಗೂಳಿ, ಕತ್ತೆಗಿಂತ ಜೂಜುಕುದುರೆ ಎಂಬ ಹೋಲಿಕೆಯಿಂದ ಜಿಮ್‌ನ ಬಗ್ಗೆ ಮುಖ್ಯವಾದ ಒಂದು ಅಂಶವನ್ನು ಕಾನ್ರಾಡ್ ನಮಗೆ ತಿಳಿಸುತ್ತಾನೆ. ಜಿಮ್‌ಗೆ ಪರಿಶ್ರಮ, ದುಡಿಮೆಯ ಪ್ರಜ್ಞೆಗಿಂತ ತನ್ನ ಪ್ರತಿಷ್ಠೆ ಮತ್ತು ಭ್ರಾಮಕಪ್ರಪಂಚದ ಬಗ್ಗೆ ಹೆಚ್ಚು ಚಿಂತೆ ಮತ್ತು ಆಸಕ್ತಿ. ಅವನ ಹೊರಚರ್ಯೆಯಲ್ಲಿರುವ "ಚಲದ ಆತ್ಮ ಪ್ರತಿಷ್ಠಾಪನೆ"ಯಿಂದ ನಾವು ಅವನ ಸ್ವಾರ್ಥತೆಯನ್ನು ಕಂಡುಕೊಳ್ಳಬಹುದು. ಯಾವಾ ಗಲು ತನ್ನಲ್ಲೇ ಮಗ್ನನಾಗಿರುವ ಜಿಮ್‌ನಲ್ಲಿ ಬೇರೆಯವರ ಬಗ್ಗೆ ಕುತೂಹಲ, ಆಸಕ್ತಿ ಇಲ್ಲ. ಅವನು ಬೂಟಿನಿಂದ ಹ್ಯಾಟಿನವರೆಗೆ ಪರಿಶುದ್ಧ, ನಿರ್ಮಲ ಬಿಳುಪಿನ ವೇಶಭೂಷಣ ಧಾರಿ. ಇದು ಅವನ ನೈರ್ಮಲ್ಯತೆ ಮತ್ತು ಮುಗ್ಧತೆಯನ್ನು ಸೂಚಿಸಿದರೂ ಕೂಡ ಅವನಿಗೆ ಪ್ರಪಂಚದಲ್ಲಿರುವ ಸಾಧಾರಣ ಕೊಳಕಿನ ಬಗೆಗಿರುವ ಅಸಹ್ಯತೆಯನ್ನು ಕೂಡ ಹೇಳುತ್ತದೆ. ಕೆಲವು ವಿಮರ್ಶಕರು ಅಭಿಪ್ರಾಯಪಡುವಂತೆ ಈ ಬಿಳುಪಿನೊಳಗೆ ಎಲ್ಲಿಯೋ ಒಂದು ಕಪ್ಪು ಕಲೆ ಅಡಗಿರಲೂಬಹುದು.

ಜಿಮ್ ಒಬ್ಬ ಹಗಲುಗನಸುಗಾರ. ಅವನು ಲಘುಸಾಹಿತ್ಯದ ಓದಿನಿಂದ ಪ್ರೇರಿತ ನಾಗಿ ವ್ಯಾಪಾರನೌಕೆಯ ನಾವಿಕನಾಗಲು ನಿರ್ಧರಿಸುತ್ತಾನೆ. ಅವನ ತರಬೇತಿಸಮಯ ದಲ್ಲಿ ಒಮ್ಮೆ ಸಂಭವಿಸಿದ ಅನಿರೀಕ್ಷಿತ ಕುರ್ತುಪರಿಸ್ಥಿತಿಯಲ್ಲಿ ಏನನ್ನೂ ಮಾಡಲಾರದೆ

ನಿಸ್ಸತ್ವಗೊಂಡಂತೆ ಸುಮ್ಮನೆ ನಿಲ್ಲುತ್ತಾನೆ. ಪ್ರಾರಂಭದ ಈ ಘಟನೆ ಅವನು ಕ್ರಿಯೆಗೆ ಅನರ್ಹನೆಂದು ಸಾಬೀತು ಮಾಡುತ್ತದೆ. ಎರಡನೆಯ ಅಧ್ಯಾಯದಲ್ಲಿ ಜಿಮ್‌ನ ಸಮುದ್ರ ಜೀವನದ ಮೊದಲ ವರ್ಷಗಳ ವಿವರಣೆಗಳಿವೆ. ಸಾಹಸಮಯವಲ್ಲದ ಈ ಬದುಕು ಅವನಿಗೆ ಆಶಾಭಂಗವನ್ನುಂಟುಮಾಡುವುದಲ್ಲದೆ, ಈ ಜೀವನದಲ್ಲಿರುವ ಕೆಲಸ, ಪರಿಶ್ರಮಗಳಿಂದ ಕಿಂಚಿತ್ತೂ ತೃಪ್ತಿ ಪಡೆಯಲಾರದಂತಹ ವ್ಯಕ್ತಿ ಜಿಮ್. "ಅವನ ಆಂತರಿಕ ಅರ್ಹತೆ, ಮನಸ್ಸಿನ ಹದದ ತೀಕ್ಷ್ಣತೆ ಮತ್ತು ಅವನ ಹುರುಳಿನ ಸತ್ವವನ್ನು ಹಗಲಿನ ಬೆಳಕಿನಲ್ಲಿ ತೋರುವ ಯಾವ ಘಟನೆಗಳೂ ಸಮುದ್ರದಲ್ಲಿ ಸಂಭವಿಸದಿದ್ದರೂ" ಒಂದು ಹಡಗಿನ ಮುಖ್ಯ ಅಧಿಕಾರಿಯಾಗುತ್ತಾನೆ ಜಿಮ್. ಇದರಿಂದ ಕಾನ್ರಾಡ್‌ನ ಪ್ರಪಂಚದ ಒಂದು ಮುಖ್ಯ ವಿಷಯ ನಾವು ತಿಳಿಯಬಹುದು : ಯಾವುದೇ ಒಬ್ಬ ಮನುಷ್ಯ ಒಂದು ವಿಷಮ ಸ್ಥಿತಿಯಲ್ಲಿ ಪರೀಕ್ಷೆಗೊಂಡ ಹೊರತು ಅವನ ಗುಣದ ಬಗ್ಗೆ ಏನನ್ನೂ ನಿಖರವಾಗಿ ಹೇಳಲು ಬರುವುದಿಲ್ಲ.

ಜಿಮ್‌ನ ಹಡಗು ಚಂಡಮಾರುತಕ್ಕೆ ಸಿಲುಕಿ ಹಡಗಿನ ದಿಮ್ಮಿಯೊಂದು ಅವನ ಮೇಲೆ ಬಿದ್ದು ಕುಂಟನಾಗುತ್ತಾನೆ. ಈ ಅಪಘಾತದಿಂದ ತನ್ನ ಕ್ಯಾಬಿನ್ನಿನಲ್ಲಿ ಇರಬೇಕಾಗಿ ಬಂದಾಗ ತಾನು ಹಡಗಿನ ಅಟ್ಟಕ್ಕೆ ಹೋಗಬೇಕಾಗಿಲ್ಲವೆಂದು ರಹಸ್ಯವಾಗಿ ಸಂತಸಪಡುವ ಜಿಮ್‌ನ ನಡತೆ ಅವನ ಸ್ವಭಾವವನ್ನು ಮತ್ತಷ್ಟು ಸ್ಪಷ್ಟಗೊಳಿಸುತ್ತದೆ. ತದನಂತರ ಪಾಟ್ನ ಹಡಗಿನ ಮುಖ್ಯ ಅಧಿಕಾರಿಯಾಗಿ ನೇಮಕಗೊಂಡು ಅಲ್ಲಿಯ ಸುಲಭ, ಅಶಿಸ್ತಿನ ಜೀವನ ಅವನನ್ನು ಸಂಪೂರ್ಣವಾಗಿ ತನ್ನನ್ನು ತಾನೇ ಮರೆತು, ಕನಸಿನ ಲೋಕದಲ್ಲಿ ವಿಹರಿಸುತ್ತಾ ಕಾಲಹರಣಮಾಡಲು ಪ್ರೋತ್ಸಾಹಿಸುತ್ತವೆ. ಪಾಟ್ನ ಹಡಗಿಗೆ ಸಂಭವಿಸುವ ಅಪಘಾತ ಅವನನ್ನು ವಾಸ್ತವಪ್ರಪಂಚಕ್ಕೆ ತಳ್ಳುತ್ತದೆ. ನಾಲ್ಕನೆಯ ಅಧ್ಯಾಯದಲ್ಲಿ ಅಪಘಾತದ ಬಗ್ಗೆ ನೇಮಕಗೊಂಡಿರುವ ವಿಚಾರಣ ಆಯೋಗ ಪ್ರಸಂಗದಲ್ಲಿ ನಾವು ಜಿಮ್ ನ್ಯಾಯಾಧೀಶರ ಪ್ರಶ್ನೆಗಳಿಗೆ ಉತ್ತರ ಕೊಡುವುದನ್ನು ಮತ್ತು ನಾಚಿಕೆಯಿಂದ ಕೆಂಪಾಗುವುದನ್ನು ಕಾಣಬಹುದು. ಈ ಆಯೋಗ ಅಪಘಾತದ ಸತ್ಯಾಂಶವನ್ನು ಕಂಡುಹಿಡಿಯುವ ತನ್ನ ಪ್ರಯತ್ನದಲ್ಲಿ ಜಿಮ್‌ನನ್ನು ಪ್ರಶ್ನಿಸಿದಾಗ, ಅವನ ಅತೃಪ್ತಿ, ಅಸಮಾಧಾನ ನೇರವಾಗಿ ವ್ಯಕ್ತವಾಗುತ್ತದೆ: "ಅವರಿಗೆ ವಾಸ್ತವಾಂಶಬೇಕು. ನಿಜವಾದ ವಿವರ! ಅವರು ಅವನಿಂದ ವಿವರಗಳನ್ನು ಅಪೇಕ್ಷಿಸುತ್ತಾರೆ, ವಿವರಗಳು ಎಲ್ಲವನ್ನೂ ಸ್ಪಷ್ಟೀಕರಿಸುತ್ತದೆಂಬ ಕಾರಣಕ್ಕಾಗಿ." ಜಿಮ್‌ನ ಈ ಮನೋಭಾವ ಅವನಿಗೆ ವಾಸ್ತವಪ್ರಪಂಚದ ಬಗೆಗೆ ಇರುವ ದ್ವೇಷ ಮತ್ತು ತಿರಸ್ಕಾರವನ್ನು ಸೂಚಿಸುವುದಲ್ಲದೆ, ಒಬ್ಬ ಆದರ್ಶವಾದಿಯ ಕನಸಿನ ಪ್ರಪಂಚವನ್ನು ಹೇಗೆ ಸತ್ಯಸಂಗತಿಗಳು ಸುಳ್ಳಾಗಿಸುತ್ತವೆ ಎಂಬುದನ್ನು ನಮಗೆ ಅರಿವು ಮಾಡುತ್ತದೆ. ಜಿಮ್ ಕಲ್ಪನಾಶೀಲ ಆದರ್ಶವಾದಿಯಾದರೆ; ನ್ಯಾಯಾಧೀಶರು ಅನುಭವೈಕ್ಯ ವಾದಿಗಳು. ಈ ವಿರೋಧದಿಂದ ಜಿಮ್ ಬಿಡುಗಡೆಯಾಗಲು ವಾಸ್ತವ ಸಂಗತಿಗಳು ಅಡ್ಡಬಂದು ಅವನು ಬಂಧನಕ್ಕೆ ಒಳಗಾಗುತ್ತಾನೆ. ಕೇವಲ ಕೊನೆಯಲ್ಲಿ ಪಟುಸನ್‌ನಲ್ಲಿ ಈ ವಿಮೋಚನೆ ಸಾಧ್ಯವಾಗುವುದನ್ನು ಕಾಣುತ್ತೇವೆ. ವಿಚಾರಣೆಯ ಸಮಯದಲ್ಲಿ ಜಿಮ್ ಒಬ್ಬಂಟಿಗನಾಗಿ ಪ್ರೇಕ್ಷಕರ ಕಣ್ಣಿನ ಇರಿತದಿಂದ ಪರಿತಪಿಸುತ್ತ ಇರುವಾಗ, ಮಾರ್ಲೊವಿನ ಸಹಾನುಭೂತಿಯುಕ್ತ ನೋಟ ಅವನ ಗಮನ ಸೆಳೆಯು

ತ್ತದೆ. ಈ ನೋಟವನ್ನು ಜಿಮ್ ಹಿಂದಿರುಗಿಸಿದಾಗ, ಇವರಿಬ್ಬರ ನಡುವೆ ಒಂದು ಗಾಢವಾದ ಸಂಬಂಧ ಪ್ರಾರಂಭವಾಗುತ್ತದೆ.

ಐದನೆಯ ಅಧ್ಯಾಯದಿಂದ, ಮಾರ್ಲೊ ನಿರೂಪಕನಾಗಿ ಕಾದಂಬರಿಯನ್ನು ಪ್ರವೇಶಿಸುತ್ತಾನೆ. ಕಾನ್ರಾಡ್ ಇದಕ್ಕೆ ಮುಂಚೆ ಬರೆದ ಕಥೆ 'ಯೂತ್' ಮತ್ತು ನಂತರ ಬರೆದ ಕಿರುಕಾದಂಬರಿ 'ಹಾರ್ಟ್ ಆಫ್ ಡಾರ್ಕ್‌ನೆಸ್'ನಲ್ಲಿ ಮಾರ್ಲೊವನ್ನು ನಿರೂಪಕನಾಗಿ ಬಳಸಿದ್ದಾನೆ. ಜಿಮ್‌ನ ನೋಟದಿಂದ ಮಾರ್ಲೊವನ್ನು ಬಲುಮುಖ್ಯ ಪ್ರಶ್ನೆ ಕಾಡುತ್ತದೆ. "ಜಿಮ್ ನೋಡಲು ಹೊಸ ಸವರನ್ನಿನಷ್ಟೆ ಅಪ್ಪಟವಾಗಿ ಕಂಡರು, ಅವನಲ್ಲಿ ಬೆರಕೆಯಾದ ಲೋಹವಿದೆ", ಎನ್ನುತ್ತಾನೆ ಮಾರ್ಲೊ. ಆದರೆ ಈ ಬೆರಕೆ ಎಷ್ಟಿದೆಯೆಂಬ ಪ್ರಶ್ನೆಯ ಉತ್ತರದ ಶೋಧನೆಯಲ್ಲಿ ಮಾರ್ಲೊ ತೊಡಗುತ್ತಾನೆ. ಜಿಮ್ ಚಿನ್ನವೊ ಅಥವಾ ಕೇವಲ ಹಿತ್ತಾಳೆಗಿಂತ ಉತ್ತಮವಾದ ಲೋಹವೊ? ಎಂಬ ಮೂಲಭೂತ ಪ್ರಶ್ನೆಗೆ ಉತ್ತರ, 'ಲಾರ್ಡ್ ಜಿಮ್' ಕಾದಂಬರಿ. ಮಾರ್ಲೊನ ನಿರೂಪಣೆಯಲ್ಲಿ ಜಿಮ್‌ಅನ್ನು ಕುರಿತು "ಆತ ನಮ್ಮವರಲ್ಲೊಬ್ಬ"; ಇದು ಕಾದಂಬರಿಯಲ್ಲಿ ಅನೇಕಬಾರಿ ಪ್ರತಿಧ್ವನಿಸುತ್ತದೆ. ಪ್ರತಿಬಾರಿ ಸನ್ನಿವೇಶಕ್ಕನುಗುಣವಾಗಿ ಈ ಮಾತು ಹೊಸ ಅರ್ಥ ಪಡೆಯುವುದು. ಮೊಟ್ಟಮೊದಲನೆಯದಾಗಿ ಜಿಮ್ ಮಾರ್ಲೊವಿನ ಹಾಗೆ ಬಿಳಿಯರ ಜನಾಂಗಕ್ಕೆ ಸೇರಿದವನು. ಅವನು ಪ್ರತಿಷ್ಠಿತ, ಗೌರವಾನ್ವಿತ ಮತ್ತು ಸಂವೇದನಾ ಶಕ್ತಿಯುಳ್ಳ ಜನರ ಗುಂಪಿಗೆ ಸೇರಿದಂತಹವನು. 'ಪಾಟ್ನ'ದ ಇತರ ಅಧಿಕಾರಿಗಳಂತಾಗಲಿ ಅಥವಾ ಕಾರ್ನಿಲಿಯಸ್ ಮತ್ತು ಬ್ರೌನ್‌ನ ಹಾಗೆ ಅಲ್ಪ ಜನರಂತಹವನಲ್ಲ ಜಿಮ್. ಮತ್ತೊಂದು ಅರ್ಥದಲ್ಲಿ ಜಿಮ್ ಇಡೀ ಮಾನವ ಕುಲಕ್ಕೆ ಸೇರಿದವನು—ಎಲ್ಲರಂತೆ ಅವನಲ್ಲೂ ದೋಷಿಭಾವ, ಮಾಸಿದ ಆದರ್ಶಗಳ ರಹಸ್ಯದ ಅರಿವು ಹಾಗೂ ದೈಹಿಕವಲ್ಲದಿದ್ದರೂ ನೈತಿಕವಾದ ಹೇಡಿತನ ಇವೆ. ಕೊನೆಯದಾಗಿ ಜಿಮ್ ಮಾರ್ಲೊವಿಗೆ ಶ್ರಮಜೀವಿಗಳ ಮೌಲ್ಯ ಮತ್ತು ನಂಬಿಕೆಗಳ ಪ್ರತಿನಿಧಿಯಾಗಿ ಕಾಣುತ್ತಾನೆ. ನಮ್ಮವರಲ್ಲೊಬ್ಬನಾದ ಜಿಮ್‌ನ ಜೀವನ ಮಾರ್ಲೊವಿಗೆ ಅಗಾಧ ಮಹತ್ವವುಳ್ಳದ್ದು. ಜಿಮ್‌ನ ಅಂತರಂಗ ಸತ್ಯವೊಂದೆ "ತಿಳಿಯಲು ಯೋಗ್ಯವಾದ ಸತ್ಯ" ಎನ್ನುತ್ತಾನೆ ಮಾರ್ಲೊ. ಪಾಟ್ನ ಹಡಗಿನ ವಿಚಾರಣೆ ಕೇವಲ ವಿಷಯಗ್ರಹಿಸಲು ಪ್ರಯತ್ನಿಸಿದರೆ, ಜಿಮ್ ವಿಷಯ ವಿವರಗಳಿಂದ ಬೇಸರ ಮತ್ತು ಅಸಹ್ಯ ಪಡುತ್ತಾನೆ. ಇವರೆಡರ, ಅಂದರೆ ಸಮಾಜ ಮತ್ತು ಸಮಾಜಘಾತುಕತನ ಹಾಗೂ ಅನುಭವೈಕ್ಯ ವಾದ ಮತ್ತು ಆದರ್ಶವಾದದ ನಡುವೆ ಮಾರ್ಲೊ ಪರಸ್ಪರ ಸಂಬಂಧ ಕಲ್ಪಿಸುವ ಪ್ರಯತ್ನ ಮಾಡುತ್ತಾನೆ.

ಜಿಮ್‌ನೊಡನೆ ತನ್ನ ದೀರ್ಘ ಸಂಭಾಷಣೆಯನ್ನು ನಿರೂಪಿಸುವ ಮುಂಚೆ ಮಾರ್ಲೊ ಪಾಟ್ನ ವಿಚಾರಣೆಯ ಒಬ್ಬ ನ್ಯಾಯಾಧೀಶ ಬ್ರಯರ್ಲಿಯ ಆತ್ಮಹತ್ಯೆಯನ್ನು ನಮಗೆ ತಿಳಿಸುತ್ತಾನೆ. ಸಾಫಲ್ಯ ಜೀವನ ನಡೆಸಿದ ಬ್ರಯರ್ಲಿಯ ಸಾವು ಮಾರ್ಲೊನನ್ನು ಚಕಿತಗೊಳಿಸುತ್ತದೆ. ವಿಚಾರಣೆಯಿಂದ ಪಲಾಯನ ಮಾಡಲು ಜಿಮ್‌ಗೆ ಹಣ ನೀಡಲು ಬ್ರಯರ್ಲಿ ಸಿದ್ಧ. ಬಿಳಿ ಜನರ ಸ್ವೀಕೃತ ನಡತೆಯ ಮಾನದಂಡವನ್ನು ತ್ಯಜಿಸಿದ ಜಿಮ್‌ನ ನಡವಳಿಕೆಯಿಂದ ತೀವ್ರ ಅಸಮಾಧಾನಗೊಂಡ ಬ್ರಯರ್ಲಿ ಸಾವನ್ನಪ್ಪುತ್ತಾನೆ. ವಿಮರ್ಶಕರು ಬ್ರಯರ್ಲಿಯ ಈ ನಿರ್ಧಾರಕ್ಕೆ ಕಾನ್ರಾಡ್‌ನ ಎಲ್ಲ ಮಾನವರು ಸಹೋದರರೆಂಬ

ನಂಬಿಕೆ ಕಾರಣವೆಂದು ಅಭಿಪ್ರಾಯಪಟ್ಟಿದ್ದಾರೆ. ಕಾನ್ರಾಡ್‌ನ ಕೃತಿಗಳಲ್ಲಿ ತೋರಿಕೆಯಲ್ಲಿ ಭಿನ್ನವಾದ ಇಬ್ಬರಲ್ಲಿ "ದೂರದ ರಕ್ತಸಂಬಂಧ" ಇರುವ ಸಾಧ್ಯತೆಯನ್ನು ಕಾಣುತ್ತೇವೆ. ಧೃಡವಾದ ಮನಸ್ಸಿನ, ವಿಶ್ವಾಸಾರ್ಹ ಬ್ರಯರ್ಲಿ ಚಂಚಲ ಮನಸ್ಸಿನ, ವಿಶ್ವಾಸಘಾತುಕ ಜಿಮ್‌ನಲ್ಲಿ ತನ್ನನ್ನು ಕಂಡುಕೊಂಡಾಗ ದಿಗಿಲುಕೊಳ್ಳುತ್ತಾನೆ. ಅವನ ಒಳಗೆ ಅಡಗಿರುವ ಹೇಡಿತನ ಈ ಗುರುತಿಸುವಿಕೆಯಿಂದ ಭೀತಿಗೊಂಡು ಸಾವಿನ ಮೊರೆ ಹೋಗುತ್ತದೆ. ಇಂತಹ ರಕ್ತಸಂಬಂಧದ ಕಾರಣದಿಂದಲೆ ಕಾನ್ರಾಡ್ ಬ್ರಯರ್ಲಿಯ ಪಾತ್ರದಿಂದ ಹೇಗೆ ಒಂದು ಸಣ್ಣ ಬದುಕು ಒಂದು ಪರಿಪೂರ್ಣ ಜೀವನವನ್ನು ಸೀಳಬಹುದೆಂಬುದನ್ನು ನಮಗೆ ಕಾಣಿಸುತ್ತಾನೆ.

ಮಾರ್ಲೊ ಮತ್ತು ಜಿಮ್‌ನನ್ನು ಮುಖಾಮುಖಿಯಾಗಿಸುವುದು ಒಂದು ಅರೆಹಾಸ್ಯದ ಘಟನೆ. ನ್ಯಾಯಾಲಯದ ಹೊರಗಿನ ಜನಜಂಗುಳಿಯಲ್ಲಿ, "ಆ ಅನಿಷ್ಟ ಬೀದಿನಾಯಿಯನ್ನು ನೋಡು" ಎಂದು ಒಂದು ಧ್ವನಿ ಅಲ್ಲಿದ್ದ ಕೊಳಕುನಾಯಿಯನ್ನು ನೋಡಿ ಹೇಳಿದಾಗ, ಜಿಮ್ ಪಕ್ಕನೆ ತಿರುಗಿ ಮಾರ್ಲೊವನ್ನು ಕಂಡಾಗ ತನ್ನನ್ನು ಅವಮಾನಿಸಿದನೆಂದು ಭಾವಿಸಿ ಅವನನ್ನು ದೂರುತ್ತಾನೆ. ಮಾರ್ಲೊ ಇದರಿಂದ ಬೆಪ್ಪಾಗುತ್ತಾನೆ. ಜಿಮ್‌ನ ಈ ನಿರಾಧಾರವಾದ ಪ್ರತಿಕ್ರಿಯೆಯಿಂದ ಅವನ ಬಗ್ಗೆ ನಾವು ಹೆಚ್ಚು ತಿಳಿಯಲು ಸಾಧ್ಯವಾಗುತ್ತದೆ. ಮೊದಲಿಗೆ ಮಾರ್ಲೊವಿನೊಡನೆ ಕಾದಾಡಿ ತನ್ನ ಅಪಮಾನವನ್ನು ಬಚ್ಚಿಡಲು ಪ್ರಯತ್ನಿಸುತ್ತಾನೆ. ನಂತರ ತನ್ನ ತಪ್ಪು ಅರಿವಾದಾಗ, ಮಾರ್ಲೊವಿನ ಕ್ಷಮೆ ಯಾಚಿಸುತ್ತಾನೆ. ಆದರೂ ತನ್ನ ತಪ್ಪಿಗೆ ಅಲ್ಲಿರುವ ಮೂರ್ಖ ಜನರು ಕಾರಣವೆನ್ನುತ್ತಾನೆ. ಅವನಲ್ಲಿ ತನ್ನ ನಡತೆಗೆ ತಾನು ಹೊಣೆಗಾರನೆಂಬ ಭಾವನೆ ಬಹಳ ಮಟ್ಟಿಗೆ ಕಂಡು ಬರುವುದಿಲ್ಲ.

ಪಾಟ್ನ ಘಟನೆ ಬಗೆಗೆ ಮಾರ್ಲೊ ಮತ್ತು ಜಿಮ್‌ನ ನಡುವೆ ದೀರ್ಘ ಸಂಭಾಷಣೆ (ಅಧ್ಯಾಯ ೭–೧೪) ಹೋಟೆಲೊಂದರ ಊಟದ ಕೋಣೆಯಲ್ಲಿ ಜರುಗುತ್ತದೆ. ಟೋನಿ ಟ್ಯಾನರ್‌ನ ಪ್ರಕಾರ ಕಾನ್ರಾಡ್ ಜೀವನದೃಷ್ಟಿಯಲ್ಲಿ ಮುಖ್ಯವಾಗಿ ಪ್ರಪಂಚದಲ್ಲಿ ಎರಡು ಬಗೆಯ ಜನರಿದ್ದಾರೆ—ಅಪರಾಧಿ ಮತ್ತು ಮೂರ್ಖ. ಅಪರಾಧಿಯಾದವನು ತನ್ನ ಜೀವನದಲ್ಲಿ ಕಂಡುಕೊಂಡ ಸೂಕ್ಷ್ಮ ಪರಿಜ್ಞಾನದಿಂದ ಅಥವಾ ತಾನು ಮಾಡಿದ ಪರಿಹಾರವಿಲ್ಲದ ಕೃತ್ಯದಿಂದ ಚಿಂತೆಗೀಡಾಗುತ್ತಾನೆ. ಈ ಅರಿವು ಅವನ ಆತ್ಮಸಾಕ್ಷಿಯನ್ನು ಜೀವನಪರ್ಯಂತ ಬೆನ್ನು ಹತ್ತುತ್ತದೆ. ಆದರೆ ಸಾಧಾರಣವಾಗಿ ಎಲ್ಲ ಜನರು ತಮ್ಮ ಆಳವಲ್ಲದ ತೋರ್ಕೆಯ ಜೀವನದಿಂದ ಮತ್ತು ಪ್ರಜ್ಞೆಯ ಮಿತಿಯಿಂದ 'ಮೂರ್ಖ'ರಾಗಿ ಉಳಿಯುತ್ತಾರೆ. ಅವರು ಗೌರವಾನ್ವಿತ ವ್ಯಕ್ತಿಗಳಾಗಿರಬಹುದು, ಸಂತೋಷವಾಗಿರಬಹುದು. ಆದರೆ ಅವರು ಮಂದಬುದ್ಧಿಯುಳ್ಳವರು ಮತ್ತು ಅವಿವೇಕಿಗಳಾಗಿರುತ್ತಾರೆ. ಅಂದರೆ ಜೀವಂತವಾಗಿದ್ದರೂ ಅವರಲ್ಲಿ ಜೀವನದ ಆಳವಾದ ಅರಿವು ಇರುವುದಿಲ್ಲ. ಕಾನ್ರಾಡ್‌ನ ಈ ದೃಷ್ಟಿಯಲ್ಲಿ ಜಿಮ್ 'ಅಪರಾಧಿ'. ಆದುದರಿಂದ ಈ ದೀರ್ಘ ಸಂಭಾಷಣೆಯ ಉದ್ದಕ್ಕೂ ಮಾರ್ಲೊ ಜಿಮ್‌ನನ್ನು 'ಬೆನ್ನುಹತ್ತಿದ' ವ್ಯಕ್ತಿಯೆಂದು ಕರೆಯುತ್ತಾನೆ.

ಪ್ರಪ್ರಥಮವಾಗಿ ಮಾರ್ಲೊ ಜಿಮ್‌ನಲ್ಲಿ ಕಾಣುವುದೇನೆಂದರೆ ಅವನೊಳಗೆ ಚಡಪಡಿಸುತ್ತಿರುವ ಸತ್ಯವನ್ನು ಹೊರಬರಲು ಬಿಡದೆ ತಡೆಗಟ್ಟುತ್ತಿರುವ ಅವನ ಸಹಜ

ವಾದ ನಿರ್ಲೋಪ ಮನೋಭಾವ. ಜಿಮ್ ಪಾಟ್ನದಲ್ಲಿ ಸಂಭವಿಸಿದ ಅಪಘಾತವನ್ನು ಎದುರಿಸಲು ತಾನು ಸಿದ್ಧನಿರಲಿಲ್ಲವೆಂದು ಹೇಳಿ ತನ್ನ ನಡತೆಯನ್ನು ಸಮರ್ಥಿಸಲು ಪ್ರಯತ್ನಿಸಿದಾಗ, ಮಾರ್ಲೊ "ಯಾವಾಗಲು ಅನಿರೀಕ್ಷಿತವಾದದ್ದೆ ಸಂಭವಿಸುತ್ತದೆ" ಎಂದು ಅವನಿಗೆ ತಾಕುವಂತೆ ನೆನಪಿಸುತ್ತಾನೆ. ವಾಸ್ತವವಾಗಿ ಜಿಮ್ ಅಪಘಾತದ ಸಮಯದಲ್ಲಿ ಯಾವ ಸಿದ್ಧತೆ ಅಥವಾ ತಯಾರಿ ಇಲ್ಲದೆ ನಿಷ್ಕ್ರಿಯನಾಗಿದ್ದನ್ನು ನಾವು ಕಾದಂಬರಿಯ ಪ್ರಾರಂಭದಲ್ಲಿ ಕಂಡಿದ್ದೇವೆ. ಜಿಮ್ ತಾನು ಪಾಟ್ನದ ಅಧಿಕಾರಿಗಳಿಂದ ಭಿನ್ನವಾಗಿರುವವನು, ತನ್ನನ್ನು ಅವರೊಡನೆ ಹೋಲಿಸಬಾರದೆಂದು ಮಾರ್ಲೊವನ್ನು ಯಾಚಿಸುತ್ತಾನೆ. ಆದರೆ ಪುನಃ ನಮಗೆ ಕಾಣುವ ಸತ್ಯ, ಜಿಮ್ ಕೂಡ ಉಳಿದವರಂತೆ ಪಾಶ್ಚಿಮಾತ್ಯ ಸಮುದ್ರಗಳ ಕಷ್ಟಕರ ಜೀವನದಿಂದ ತಪ್ಪಿಸಿಕೊಳ್ಳಲು, ಪೂರ್ವದಲ್ಲಿ ಸುಲಭ ಕೆಲಸವನ್ನು ಹುಡುಕಿಕೊಂಡವನು. ಈ ನಿರೂಪಣಾ ತಂತ್ರದಿಂದ ಕಾನ್ರಾಡ್ ಜಿಮ್‌ನ ಸ್ವಂತ, ವೈಯಕ್ತಿಕ ಅಭಿಪ್ರಾಯಗಳ ಮತ್ತು ವಾಸ್ತವ ಸಂಗತಿಯ ನಡುವಿನ ಅಂತರವನ್ನು ನಮಗೆ ಕಾಣಿಸಿ ಅವನ ನಿಜವಾದ ವ್ಯಕ್ತಿತ್ವದ ತಿಳುವಳಿಕೆಯನ್ನು ನಮಗೆ ನೀಡುತ್ತಾನೆ.

ಅಪಘಾತದಲ್ಲಿ ತನ್ನ ಪಾತ್ರದ ಬಗ್ಗೆ ಯಾವ ವಿಷಾದವನ್ನು ಹೊಂದದ ಜಿಮ್ ಕೇವಲ ತನಗೆ ತಪ್ಪಿಹೋದ ಖ್ಯಾತಿಯ ಬಗ್ಗೆ ಮಾತ್ರ ವ್ಯಥೆಪಡುತ್ತಾನೆ. "ಅವನಿಗೆ ತಾನು ಕಳೆದುಕೊಂಡದ್ದನ್ನು ವಿಷಾದಿಸಲು ಪುರಸತ್ತಿರಲಿಲ್ಲ, ತಾನು ಯಾವುದನ್ನು ಪಡೆಯಲು ಸೋತಿದ್ದನೋ ಅದರ ಬಗ್ಗೆ ಸಂಪೂರ್ಣ ಮತ್ತು ಸ್ವಾಭಾವಿಕವಾಗಿ ಆತಂಕಗೊಂಡಿದ್ದನು". ಮಾರ್ಲೊನೊಡನೆ ಮಾತನಾಡುವಾಗ ಜಿಮ್ ತಾನು ಹೇಗೆ ಸಾಹಸಿಯಾಗಬಹುದಿತ್ತು ಎನ್ನುವುದನ್ನು ನೆನೆದು ಹಗಲುಗನಸಿನಲ್ಲಿ ತೊಡಗುತ್ತಾನೆ. ಮಾರ್ಲೊ ಅವನನ್ನು, "ನೀನು ಹಡಗಿಗೆ ಅಂಟಿಕೊಂಡಿದ್ದರಲ್ಲವೇ" ಎಂದು ಎಚ್ಚರಕ್ಕೆ ತರುತ್ತಾನೆ. ಇದು ವಾಸ್ತವ ಪ್ರಪಂಚದ ಮತ್ತು ಕಾಲ್ಪನಿಕ ಆದರ್ಶವಾದಿಯ ಕನಸುಗಳ ನಡುವೆ ಇರುವ ಅಂತರ. ಇದನ್ನು ಕುಡ ಮಾರ್ಲೊ "ಆಹಾ! ಅವನೊಬ್ಬ ಕಾಲ್ಪನಿಕ ಅಥವಾ" ಎಂದು ಉದ್ಗರಿಸುತ್ತಾನೆ. ಕಾನ್ರಾಡ್‌ಗೆ 'ಕಲ್ಪನೆ'ಯ ಬಗ್ಗೆ ಬಹಳ ಅಪನಂಬಿಕೆಯಿತ್ತು. ಅವನ ಪ್ರಪಂಚದಲ್ಲಿ ಕಲ್ಪನೆ ಯಾವಾಗಲೂ ಪರಿಣಾಮಕಾರಿ ಮತ್ತು ವ್ಯವಸ್ಥಿತ ನಡತೆಗೆ ಮುಖ್ಯ ಬೆದರಿಕೆಯಾಗಿರುವುದನ್ನು ನಾವು ಗುರುತಿಸಬಹುದು. ಕಲ್ಪನೆ ಜೀವನದ ಸತ್ಯಸಂಗತಿಗಳಿಂದ ಮನಸ್ಸನ್ನು ಸರಿಸಿ, ಭೀತಿ ಮತ್ತು ಖ್ಯಾತಿಯ ಭ್ರಮೆಯಿಂದ ಮನಸ್ಸನ್ನು ಬಂಧಿಸುತ್ತದೆ. ಮಾರ್ಲೊ ಕಲ್ಪನೆಯನ್ನು "ಮನುಷ್ಯನ ಶತ್ರು, ಎಲ್ಲ ಭೀತಿಗಳ ಪಿತೃ" ಎಂದು ವರ್ಣಿಸುತ್ತಾನೆ. ಅದು ಕನಸಿನ ಮೂಲವೂ ಕೂಡ. ಇವೆರಡರಿಂದ ಬಿಕ್ಕಟ್ಟಿನ ಸಮಯದಲ್ಲಿ ಯಾವ ಪ್ರಯೋಜನವೂ ಇಲ್ಲ.

ಹಡಗು ಇನ್ನೇನು ಮುಳುಗಿತು ಎನ್ನುವಾಗ ಜಿಮ್ ಅದರಲ್ಲಿರುವ ಯಾತ್ರಿಕರೆಲ್ಲ ಸತ್ತರು ಎಂದೆ ಭಾವಿಸಿ, ಅವರನ್ನು ಎಚ್ಚರಿಸಿದರೆ ಕೋಲಾಹಲ ಉಂಟಾಗುತ್ತದೆ; ಇರುವ ಸಮಯ ಸ್ವಲ್ಪ; ದೋಣಿಗಳು ಕೆಲವೇ ಎಂದು ಯೋಚಿಸಿ ಏನೂ ಮಾಡಲಾಗದೆ ನಿಷ್ಕ್ರಿಯನಾಗಿ ನಿಲ್ಲುತ್ತಾನೆ. ಅವನು ಹೆದರುವುದು ಸಾವಿನ ಭಯದಿಂದಲ್ಲ: ಈ ತುರ್ತುಪರಿಸ್ಥಿತಿಯಲ್ಲಿ ಕಾರ್ಯರೂಪಕ್ಕೆ ಇಳಿಯಬೇಕಾದ ಅವಶ್ಯಕತೆಯಿಂದ.

ಮಾರ್ಲೋ ಈ ಹತಾಶ ಸ್ಥಿತಿಯನ್ನು ಗ್ರಹಿಸುತ್ತಾನೆ. ಜಿಮ್ ಮಾರ್ಲೋನನ್ನು ಕೇಳುವ ಪ್ರಶ್ನೆ, "ನಾನು ಸುಮ್ಮನೆ ಇದ್ದದ್ದರಿಂದ ನೀನು ನನ್ನನ್ನು ಕುನ್ನಿಯೆಂದು ಭಾವಿಸುತ್ತೀಯಲ್ಲವೆ? ಆದರೆ ನೀನು ಏನು ತಾನೆ ಮಾಡುತ್ತಿದ್ದೆ? ಏನು? ನೀನು ಹೇಳಲಾರೆ—ಯಾರೂ ಹೇಳಲಾರರು", ಓದುಗನನ್ನು ಕೂಡ ಕಳವಳಗೊಳ್ಳಿಸುತ್ತದೆ.

ಜಿಮ್ ಸುಮ್ಮನಿದ್ದಾಗ, ಹಡಗಿನ ಇನ್ನಿತರ ಅಧಿಕಾರಿಗಳು ತಮ್ಮ ಜೀವ ಉಳಿಸುವ ಸಲುವಾಗಿ ಒಂದು ದೋಣಿಯನ್ನು ಸಮುದ್ರಕ್ಕೆ ಇಳಿಸುವ ಕ್ರಿಯೆಯಲ್ಲಿ ತೊಡಗುತ್ತಾರೆ. ಅವರು ತಮ್ಮ ಉಳಿವಿಗಾಗಿ ಅಂದರೆ ಸ್ವಾರ್ಥಕ್ಕಾಗಿ ಆದರೂ ಕೂಡ ತೀವ್ರ ದುಡಿಮೆಯಲ್ಲಿ ಮಗ್ನವಾಗುತ್ತಾರೆ. ತನ್ನ ಸುತ್ತಮುತ್ತ ಇಂತಹ ಚಟುವಟಿಕೆ ನಡೆಯುತ್ತಿದ್ದಾಗ ಏನನ್ನೂ ಮಾಡದೆ, ಅವರ ಸಹಾಯದ ಕರೆಗೆ ಓಗೊಡದೆ, ಹೇಡಿಯೆಂದು ಕರೆದರೂ ಪ್ರತಿಕ್ರಿಯಿಸದೆ ಜಿಮ್ ತನ್ನ "ಅನಾಸಕ್ತ ಧೀರವರ್ತನೆ"ಯಲ್ಲಿ ತಲ್ಲೀನನಾಗಿರುತ್ತಾನೆ. ತನ್ನ ಮತ್ತು ಇತರರ ನಡುವೆ ಬಲು ಅಂತರವಿದೆಯೆಂದು ಮತ್ತೆ ಮತ್ತೆ ಹೇಳುವ ಜಿಮ್‌ನ ಪ್ರತಿಷ್ಠೆಯೊಂದಿಗೆ ಹೋಲಿಸಿದರೆ, ಅವನ ಸಹೋದ್ಯೋಗಿಗಳು ಸ್ವಾರ್ಥಿಗಳಾದರೂ ಕ್ರಿಯಾತ್ಮಕವಾಗಬಲ್ಲರು. ಆದರೆ ಈ ಎರಡು ವಿರೋಧಗಳ ನಡುವೆ ಬೇರೆ ರೀತಿಯ ಮನುಷ್ಯರನ್ನು ಕಾನ್ರಾಡ್ ನಮಗೆ ಪರಿಚಯಿಸುತ್ತಾನೆ. ಮಲಯಾದ ಇಬ್ಬರು ಚುಕ್ಕಾಣಿಗಾರರು ಈ ಎಲ್ಲ ಗಲಭೆಯಲ್ಲಿ ಹಡಗಿನ ಚಾಲಕಚಕ್ರವನ್ನು ತಿರುವಿಸುವುದರಲ್ಲಿ ಕಾರ್ಯೋನ್ಮುಖರಾಗಿರುತ್ತಾರೆ. ವಿಚಾರಣೆಯ ಸಮಯದಲ್ಲಿ ಹೇಳುವಂತೆ ಯಾವುದರ ಬಗ್ಗೆಯೂ ಯೋಚನೆ ಮಾಡದೆ ತಮ್ಮ ಕೆಲಸದಲ್ಲಿ ನಿರತವಾಗಿರುವುದು ಮುಖ್ಯವೆಂದು ಭಾವಿಸುವ ವ್ಯಕ್ತಿಗಳು ಇವರು. ಕಾನ್ರಾಡ್‌ನ ಪ್ರಪಂಚದಲ್ಲಿ ಇಂತಹವರಿಗೆ ವಿಶಿಷ್ಟಸ್ಥಾನ ಇದೆ. ಕಲ್ಪನಾಶಕ್ತಿ ಮತ್ತು ಆಲೋಚನ ಸಾಮರ್ಥ್ಯ ಇಲ್ಲದ ಇವರು ನಿಸ್ವಾರ್ಥವಾಗಿ ತಮ್ಮ ನಿಯಮಿತ ಕ್ರಿಯೆಯಲ್ಲಿ ತೊಡಗಿರುವುದನ್ನು ಮತ್ತು ವಾಸ್ತವ ಪ್ರಪಂಚದಿಂದ ಪಲಾಯನ ಮಾಡಲು ಯತ್ನಿಸದಿರುವುದನ್ನು ಅಮೂಲ್ಯ ಧೋರಣೆಯೆಂದು ಪರಿಗಣಿಸುವ ಕಾನ್ರಾಡ್ ಇಂತಹವರನ್ನು ಮೆಚ್ಚುತ್ತಾನೆ.

ನಿಷ್ಕ್ರಿಯನಾಗಿ ನಿಂತಿದ್ದ ಜಿಮ್ 'ನೆಗಿ' ಎಂಬ ಕೂಗಿಗೆ ಹಡಗಿನಿಂದ ನೆಗೆಯುತ್ತಾನೆ. ಈ ನೆಗೆತದ ಮೂಲ ಹೇಡಿತನವಾದರೂ ತನ್ನ ಈ ಕ್ರಿಯೆಗೆ ತಾನು ಜವಾಬ್ದಾರನಾಗಲು ಜಿಮ್ ನಿರಾಕರಿಸುವಂತಹ ಮನೋಭಾವನೆಯನ್ನು ತೋರುತ್ತಾನೆ. ಈ ನೆಗೆತ ಏನನ್ನು ಸೂಚಿಸುತ್ತದೆ ಎಂಬ ಪ್ರಶ್ನೆಗೆ ಹಲವಾರು ಉತ್ತರಗಳನ್ನು ವಿಮರ್ಶಕರು ನೀಡಿದ್ದಾರೆ. ಬಲು ವ್ಯಾಪಕವಾದ ಅರ್ಥದಲ್ಲಿ ಇದು ಮನುಷ್ಯನ ಪತನವನ್ನು ಸೂಚಿಸುತ್ತದೆ. ಆದರೆ ನಿರ್ದಿಷ್ಟವಾಗಿ ಹೇಳುವುದಾದರೆ, ಇದು ಒಬ್ಬ ಕಾಲ್ಪನಿಕ ಆದರ್ಶವಾದಿಯು ನಿಕೃಷ್ಟವಾದ ವಾಸ್ತವ ಪ್ರಪಂಚಕ್ಕೆ ಕುಸಿಯುವುದನ್ನು ತೋರುತ್ತದೆ. ಈ ನೆಗೆತ ಜಿಮ್‌ನಲ್ಲಿ ತನ್ನ ಬಗ್ಗೆ ಇದ್ದ ಉನ್ನತ ಕಲ್ಪನೆಯನ್ನು, ಆತ್ಮಶ್ಲಾಘನೆಯನ್ನು ಸಂಪೂರ್ಣವಾಗಿ ತೊರೆಯುವಂತೆ ಮಾಡುತ್ತದೆ. ಇಷ್ಟಾದರೂ ಜಿಮ್ ತನ್ನ ಈ ನೆಗೆತವನ್ನು ಸಮರ್ಥಿಸಿಕೊಳ್ಳುವ ಪ್ರಯತ್ನವನ್ನು ಮುಂದುವರಿಸಿ ಈ ವ್ಯವಹಾರದ ಅನ್ಯಾಯವನ್ನು ಪ್ರತಿಪಾದಿಸುತ್ತಾ, "ಈ ವಿಚಾರದ ಸರಿ ಮತ್ತು ತಪ್ಪಿನ ನಡುವೆ ಒಂದು ಕಾಗದದ ಹಾಳೆಯ ದಪ್ಪದಷ್ಟು ಅಂತರವಿಲ್ಲ" ಎಂದು ಮಾರ್ಲೋ

ಕೊಡನೆ ವಾದಿಸುತ್ತಾನೆ. "ಇನ್ನೂ ಎಷ್ಟು ಹೆಚ್ಚಿರಬೇಕಾಗಿತ್ತು ನಿನಗೆ!" ಎನ್ನುತ್ತಾನೆ, ಕರಣವಾಗಿ ಮಾರ್ಲೋ.

ಮಾರ್ಲೋ ಫ್ರಾನ್ಸಿನ ಒಬ್ಬ ಲೆಫ್ಟಿನೆಂಟ್‌ನೊಡನೆ ತನ್ನ ಭೇಟಿಯನ್ನು ಜ್ಞಾಪಿಸಿಕೊಂಡು ನಿರೂಪಣೆಯಲ್ಲಿ ಬದಲಾವಣೆಯುಂಟು ಮಾಡುತ್ತಾನೆ. ಈತ ಪಾಟ್ನ ಹಡಗನ್ನು ಬಂದರಿಗೆ ಎಳೆದುಕೊಂಡು ಹೋದ ಹಡಗಿನಲ್ಲಿದ್ದ ವ್ಯಕ್ತಿ. ಮಾರ್ಲೋ ಜಿಮ್‌ನ ನಡತೆಯ ಬಗ್ಗೆ ಇವನ ಅಭಿಪ್ರಾಯವನ್ನು ಕೇಳುವಾಗ, ಈತ ಮನುಷ್ಯನ ಹೃದಯದಲ್ಲಿ ಹೆದರಿಕೆಗೆ ಖಾಯಂ ಸ್ಥಾನವಿದೆಯೆಂದು ನಂಬಿದರೂ ಮನುಷ್ಯನ ನ್ಯಾಯ ನಿಷ್ಠೆಯ ಪ್ರಾಮುಖ್ಯತೆಯಲ್ಲಿ ಸಂಪೂರ್ಣ ನಂಬಿಕೆಯನ್ನು ವ್ಯಕ್ತಪಡಿಸುತ್ತಾನೆ. 'ನ್ಯಾಯ ನಿಷ್ಠೆ ಕಳೆದುಕೊಂಡ ಮನುಷ್ಯನ ಜೀವನಕ್ಕೆ ಏನು ಬೆಲೆ?" ಎನ್ನುವ ಅವನ ಈ ಅಭಿಪ್ರಾಯ ಜಿಮ್‌ನ ನಡತೆಯ ಬಗ್ಗೆ ಒಬ್ಬ ವಾಸ್ತವವಾದಿಯ ತೀರ್ಪು. ಈ ನಂತರ ಒಬ್ಬ ಶ್ರೀಮಂತ ಹೆಂಗಸಿನ ಹೆಣ್ಣಾಳನ್ನು ಬದುಕಿಸಲು ಪ್ರಯತ್ನಿಸಿ ವಿಫಲವಾಗಿ ಮುಳುಗಿಹೋದ ತನ್ನ ಪರಿಚಿತ ಬಾಬ್ ಸ್ಟ್ಯಾಂಟನ್‌ನನ್ನು ಮಾರ್ಲೋ ನೆನೆಯುತ್ತಾನೆ. ಜಿಮ್‌ಗೆ ಹೋಲಿಸಿದರೆ ಸಣ್ಣಗಿರುವ ಸ್ಟ್ಯಾಂಟನ್ ಹೆಚ್ಚು ಬಲಶಾಲಿಯಲ್ಲ. ಆದರೆ ತಾನು ಧೀರೋದಾತ್ತನೆಂದು ಜಿಮ್ ಕೇವಲ ಕನಸು ಕಂಡರೆ, ಸ್ಟ್ಯಾಂಟನ್ ನಿಜಜೀವನದಲ್ಲಿ ಧೀರನಾಗಿ ಸಾವನ್ನಪ್ಪುತ್ತಾನೆ.

ಕೊನೆಯದಾಗಿ ಜಿಮ್‌ನ ವ್ಯಕ್ತಿತ್ವದ ಬಗೆಗೆ ನಮ್ಮ ಅರಿವನ್ನು ಪರಿಪೂರ್ಣ ಮಾಡುವ ಪ್ರಯತ್ನದಲ್ಲಿ ಸಹಾಯವಾಗುವ ಮಾರ್ಲೋ ತಾನು ಭೇಟಿಮಾಡಿದ ಮತ್ತೊಬ್ಬನನ್ನು ನೆನೆಯುತ್ತಾನೆ. ಇವನು ಯಾವುದಕ್ಕೂ ಹೇಸದ ಕಡಲುಗಳ್ಳ, ಚೆಸ್ಟರ್. ವಿಚಾರಣೆಯಲ್ಲಿ ಜಿಮ್‌ನ ನಾವಿಕನ ಯೋಗ್ಯತಾಪತ್ರ ರದ್ದಾಗಿದ್ದುದನ್ನು ಅವನು ಮನಸ್ಸಿಗೆ ಹಚ್ಚಿಕೊಂಡಿರುವುದನ್ನು ಕೇಳಿ ಚೆಸ್ಟರ್ ನಗುತ್ತಾನೆ. ಈತ ಜೀವನದ ಎಲ್ಲ ಮಾನಮರ್ಯಾದೆಯ ಸಂಕೇತಗಳನ್ನು ತುಚ್ಛವಾಗಿ ಕಾಣುವುದಲ್ಲದೆ, ಮನುಷ್ಯನು ಕೇವಲ ತನ್ನ ಸ್ವಾರ್ಥಕ್ಕಾಗಿ ಜೀವಿಸಬೇಕೆಂದು ನಂಬುತ್ತಾನೆ. ಹೇಗಾದರು ಮಾಡಿ ಬದುಕುವುದೊಂದೆ ಜೀವನದ ಗುರಿ ಎಂದು ಭಾವಿಸಿದ ಚೆಸ್ಟರ್ ಅವನ ಪಾಲುದಾರ ರಾಬಿನ್‌ಸನ್ ತನ್ನ ಉಳಿವಿಗೆ ನರಭಕ್ಷಕನಾಗುವುದನ್ನು ಕೂಡ ಪೂರ್ಣವಾಗಿ ಅನುಮೋದಿಸುತ್ತಾನೆ. ಅವನಲ್ಲಿ ಯಾವ ಆದರ್ಶವಾಗಲಿ, ನೈತಿಕ ಪ್ರಜ್ಞೆಯಾಗಲಿ ಇಲ್ಲ. ಆದರೆ ಅವನಲ್ಲಿ ಅಗಾಧ ಸಾಮರ್ಥ್ಯವಿದೆ. ಅಂದರೆ ಇವನು ಜಿಮ್‌ನ ನೇರ ಪ್ರತಿರೂಪಿ. ಜಿಮ್‌ಗೆ ಗುವಾನೋ ದ್ವೀಪದಲ್ಲಿ ನಲವತ್ತು ಕೂಲಿಗಳ ಮೇಲ್ವಿಚಾರಕನಾಗಿ ಕೆಲಸ ನೀಡಲು ಚೆಸ್ಟರ್ ಮುಂದಾದಾಗ, ದಿಗಿಲುಕೊಂಡ ಮಾರ್ಲೋ ಅದನ್ನು ನಿರಾಕರಿಸುತ್ತಾನೆ. ಜಿಮ್‌ನ ಬಗ್ಗೆ ಚೆಸ್ಟರ್‌ನ ಅಂತಿಮ ನಿರ್ಣಯ ಹೀಗಿದೆ: "ಅವನು ಯಾವ ಕೆಲಸಕ್ಕೂ ಬಾರದವನು .. ಕೇವಲ ಗಾಳಿಗೋಪುರ ಕಟ್ಟುವವನು". ಅಂದರೆ ಬಲು ಮೇಲೇರುವ ಮಹತ್ವಾಕಾಂಕ್ಷೆಯಿರುವ ಜಿಮ್ ಪ್ರಾಪಂಚಿಕ ಕಾರ್ಯಗಳಿಗೆ ಯೋಗ್ಯನಲ್ಲ ಎಂದು ಅರ್ಥ.

ಮುಂದಿನ ಮೂರು ಅಧ್ಯಾಯಗಳು (೧೫–೧೭) ಮಾರ್ಲೋನ ಹೋಟೆಲಿನ ಕೋಣೆಯಲ್ಲಿ ಅವನು ಜಿಮ್‌ನೊಡನೆ ಕಳೆದ ದಿನಗಳನ್ನು ವರ್ಣಿಸುತ್ತವೆ. ಜಿಮ್

ಒಬ್ಬಂಟಿಗನಾಗಿ ತನ್ನ ಅಪಮಾನದ ಬಗ್ಗೆ ಚಿಂತಿಸಿದರೆ, ಮಾರ್ಲೊ ಅವನ ದೋಷಿ ಭಾವದ ಪ್ರಾಮುಖ್ಯತೆಯನ್ನು ಕಂಡುಕೊಳ್ಳುತ್ತಾನೆ. ಜಿಮ್ ವಿಚಾರಣೆಯ ಸಮಯದಲ್ಲಿ ತನ್ನ ವರ್ತನೆಯನ್ನು ಪ್ರಶಂಸಿಕೊಳ್ಳುವುದಲ್ಲದೆ, ಅದು ತನ್ನನ್ನು ಸೋಕಿಯೇ ಇಲ್ಲ ಎಂಬ ಗರ್ವದ ಮಾತನ್ನು ಮಾರ್ಲೊಗೆ ಹೇಳುತ್ತಾನೆ. ದೋಷಿಭಾವದಿಂದ ಹೊರಗಾಗಲು ಮಾಡುವ ಪ್ರಯತ್ನ ಇಂತಹ ನಡತೆಯದು. ಇಷ್ಟೆಲ್ಲ ಆದರೂ ಮಾರ್ಲೊ ಅವನನ್ನು ತನ್ನ ಜವಾಬ್ದಾರಿಯೆಂದು ಪರಿಗಣಿಸಿ, "ಇಂತಹ ಅಪರೂಪದ ಜೀವನ ವ್ಯರ್ಥವಾಗಿ ಹೋಗುವುದು ನಿಜಕ್ಕೂ ದುರದೃಷ್ಟಕರ" ಎನ್ನುತ್ತಾನೆ. ಈ ಪ್ರಪಂಚದ ಚೆಸ್ಟರ್‌ಗಳಿಂದ ಅವನನ್ನು ರಕ್ಷಿಸುವುದು ತನ್ನ ಕರ್ತವ್ಯವೆಂದು ಮಾರ್ಲೊ ಭಾವಿಸುತ್ತಾನೆ. "ಅವನನ್ನು ಕಗ್ಗತ್ತಲಿಗೆ ಜಾರಿಬಿಟ್ಟರೆ ನಾನು ನನ್ನನ್ನು ಎಂದಿಗೂ ಕ್ಷಮಿಸಿಕೊಳ್ಳಲಾರೆ" ಎನ್ನುತ್ತಾನೆ ಮಾರ್ಲೊ. ಮಾರ್ಲೊ ಅವನನ್ನು "ಅತ್ಯಂತ ಶ್ರೇಷ್ಠ—ಅತ್ಯಂತ ದೌರ್ಭಾಗ್ಯಶಾಲಿ" ಎಂದು ಪರಿಗಣಿಸುತ್ತಾನೆ. ಇದರಿಂದ ನಮಗೆ ಅರಿವಾಗುವುದು, ಜಿಮ್‌ಗೆ ತನ್ನ ಬಗೆಗಿರುವ ಆಸಕ್ತಿ, ತನ್ನ ಅಪಮಾನ ಮತ್ತು ಖ್ಯಾತಿಯ ಬಗ್ಗೆ ಇರುವ ಅತೀವ ವೈಯಕ್ತಿಕ ಪ್ರತಿಷ್ಠೆ ; ಜಿಮ್‌ನ ಭಯಂಕರವಾದ ಬಹಿಷ್ಕೃತ ಸ್ಥಿತಿಗೆ ಮಾರ್ಲೊ ಅತ್ಯಂತ ಅನುಕಂಪಯುಕ್ತವಾಗಿ ಪ್ರತಿಕ್ರಿಯಿಸುತ್ತಾನೆ. ಈ ಕಾರಣಗಳಿಂದ ಜಿಮ್‌ಗೆ ಸಹಾಯ ಮಾಡಬೇಕೆಂದು ನಿಶ್ಚಯಿಸಿದ ಮಾರ್ಲೊ ಅವನು ತನ್ನ ಜೀವನವನ್ನು ಪುನಃ ಹೊಸದಾಗಿ ಪ್ರಾರಂಭಿಸಬಲ್ಲೆ ಎಂಬ ವಿಶ್ವಾಸದ ಬಗ್ಗೆ ಅನುಮಾನಪಡುವುದನ್ನು ಕಾಣಬಹುದು.

ವಿಚಾರಣೆಯ ನಂತರ ಜಿಮ್ ಎರಡು ಕಡೆ ಕೆಲಸಕ್ಕೆ ಸೇರಿ ಯಶಸ್ವಿಯಾದರೂ ಅವನ ಪಾಟ್ನದ ಅಪಮಾನಕರ ಘಟನೆ ಅವನನ್ನು ಹಿಂಬಾಲಿಸದೆ ಬಿಡುವುದಿಲ್ಲ. ಗತಕಾಲದ ಈ ಘಟನೆಯನ್ನು ಹೂಳಲು ಪ್ರಯತ್ನಿಸಿ ಜಿಮ್ ವಿಫಲನಾಗಿ ಅಲ್ಲಿಂದ ಪಲಾಯನ ಮಾಡುತ್ತಾನೆ. ವಾಸ್ತವಪ್ರಪಂಚದ ಈ ಕ್ರೂರತೆಯಿಂದ ತಾನು ವಿಮುಕ್ತನಾಗಲು ಭೂಮಿಯನ್ನೆ ಬಿಟ್ಟು ಹೋಗಲು ಪ್ರಯತ್ನಿಸುವಂತೆ ನಮಗೆ ಕಾಣುತ್ತಾನೆ. ಪುನಃ ಜಿಮ್ ಮಾರ್ಲೊನ ಮೊರೆ ಹೊಕ್ಕಾಗ ಅವನು ತನ್ನ ಹಳೆಸ್ನೇಹಿತ ಸ್ಟೈನ್‌ನಲ್ಲಿಗೆ ಸಲಹೆಗಾಗಿ ಹೋಗುತ್ತಾನೆ. ಸ್ಟೈನ್ ಬಣ್ಣದ ಚಿಟ್ಟೆ ಮತ್ತು ಜೀರುಂಡೆಗಳನ್ನು ಸಂಗ್ರಹಿಸುವ ವಿದ್ವಾಂಸ ಹಾಗೂ ಮಾರ್ಲೊನ ಪರಿಚಿತರಲ್ಲಿ ಅತ್ಯಂತ ವಿಶ್ವಾಸಪಾತ್ರನಾದ ವ್ಯಕ್ತಿ. ಟೋನಿ ಟ್ಯಾನರ್ ಬಣ್ಣದ ಚಿಟ್ಟೆ ಮತ್ತು ಜೀರುಂಡೆಗಳನ್ನು ಸಂಕೇತಗಳಾಗಿ ವಿವರಿಸುತ್ತಾನೆ. ಸುಂದರ, ದುರ್ಬಲ, ಬಣ್ಣದ ಚಿಟ್ಟೆಗಳು ಭೂಮಿಯಿಂದ ಮೇಲೆ ಹಾರಿವರೆ, ಜೀರುಂಡೆಗಳು ಭೂಮಿಗೆ ಅಂಟಿಕೊಂಡಿರುವುವು. ದುರ್ಬಲ, ಆದರೆ ಹೆಗ್ಗುರಿ ಇರುವ ಆದರ್ಶವಾದಿ ಮತ್ತು ಉತ್ಸಾಹದಿಂದ ಕೂಡಿದ ದಪ್ಪ ಚರ್ಮದ ಅನುಭವೈಕ್ಯವಾದಿ—ಇವು ಮನುಷ್ಯನ ನಡತೆ ಮತ್ತು ಮೌಲ್ಯಗಳ ಪರಮಾವಧಿಯನ್ನು ಪ್ರತಿನಿಧಿಸುವ ರೂಪಕಗಳಾಗುತ್ತವೆ.

ಮಾರ್ಲೊ ಸ್ಟೈನ್‌ನ ಕುತೂಹಲಕಾರಿ ಜೀವನವನ್ನು ನಿರೂಪಿಸುತ್ತಾ ಅದನ್ನು ಎರಡು ಭಾಗಗಳಾಗಿ ವಿಂಗಡಿಸಿ, ಮೊದಲನೆಯದು ಕ್ರಿಯಾಶಾಲಿ ಮತ್ತು ಸಾಹಸಮಯವಾದದ್ದು, ಎರಡನೆಯದು ಕನಸಿನಂತೆ ವಿಸ್ಮಯಕರ ಎನ್ನುತ್ತಾನೆ. ತನ್ನ ಹೆಂಡತಿಯ

ದುರಂತ ಸಾವಿನ ನಂತರ ಅವನ ಜೀವನದಲ್ಲಿ ಈ ಬದಲಾವಣೆ ಉಂಟಾಗುತ್ತದೆ. ತನ್ನ ಕ್ರಿಯಾಶಾಲಿ ಜೀವನದಲ್ಲಿ ಬಲು ಯಶಸ್ವಿಯಾಗಿದ್ದ ಸ್ಟೈನ್ ಒಮ್ಮೆ ತನ್ನ ಏಳು ಶತ್ರುಗಳು ಹೊಂಚಿಹಾಕಿ ಅವನ ಮೇಲೆ ಬಿದ್ದಾಗ ಅವನ ಶೌರ್ಯ ಮತ್ತು ಉಪಾಯ ಕೌಶಲವನ್ನು ಕಾಣಬಹುದು. ಜಿಮ್‌ನಂತೆ ನಿಷ್ಕ್ರಿಯನಾಗದೆ, ತಾನು ಕ್ರಿಯಾತ್ಮಕನಾಗಿ ಸಫಲನಾಗುತ್ತಾನೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕೂಡ ತಾನು ಬಹುಕಾಲದಿಂದ ಹುಡುಕುತ್ತಿದ್ದ ಬಣ್ಣದ ಚಿಟ್ಟೆಯನ್ನು ಹಿಡಿಯುತ್ತಾನೆ. ಇದರ ಅರ್ಥ ಅವನು ಕೇವಲ ಕಲ್ಪನಾಶೀಲ ಮಾತ್ರನಲ್ಲ, ಅವನು ಕ್ರಿಯೆಯಲ್ಲಿ ತೊಡಗಲು ಸಾಧ್ಯವಿರುವ ವ್ಯಕ್ತಿ ಕೂಡ. ಕಾನ್ರಾಡ್ ಹೀಗೆ ಮತ್ತೊಮ್ಮೆ ಜಿಮ್‌ನ ಜೀವನವನ್ನು ಸ್ಟೈನ್‌ನ ಒಡನೆ ಹೋಲಿಸಿ ಅವನ ಜೀವನವನ್ನು ಇನ್ನಷ್ಟು ನಮಗೆ ಸ್ಪಷ್ಟಗೊಳಿಸುತ್ತಾನೆ. ಜಿಮ್‌ನ ಕಥೆಯನ್ನು ಮಾರ್ಲೊನಿಂದ ಕೇಳಿದ ಸ್ಟೈನ್, "ನನಗೆ ಚೆನ್ನಾಗಿ ಅರ್ಥವಾಗಿದೆ. ಆತನೊಬ್ಬ ಕಲ್ಪನಾಶೀಲ" ಎನ್ನುತ್ತಾನೆ. ಮನುಷ್ಯ ಹೇಗೆ ಬದುಕಬೇಕೆಂಬ ಪ್ರಶ್ನೆಗೆ ಅವನ ಉತ್ತರ ಬಲು ಮಹತ್ವದ್ದು. ಮನುಷ್ಯ ಕನಸುಕಾಣಬೇಕು ಮತ್ತು ವಾಸ್ತವ ಪ್ರಪಂಚದ ಹೊಲಸಿನಲ್ಲಿ ಬದುಕಲು ಕಲಿಯಬೇಕು ಎನ್ನುವುದು ಅವನ ನಂಬಿಕೆ. ಸ್ಟೈನ್ ತನ್ನ ಜೀವನದಲ್ಲಿ ಕಲ್ಪನಾಶೀಲತೆ ಮತ್ತು ವಾಸ್ತವತೆಯನ್ನು ಸಂಯೋಜಿಸಲು ಪ್ರಯತ್ನಿಸುವಂತೆ ಕಾಣುತ್ತದೆ. ಈ ಮನೋಭಾವದ ಸ್ಟೈನ್ ಜಿಮ್‌ನ ಬಗ್ಗೆ ನುಡಿಯುವ ಮಾತುಗಳು ಸ್ವಾಭಾವಿಕವಾಗಿ ಅಸಂಬಂದ್ಧವಾಗಿ ಕಾಣಬಹುದು. "ಆತನೊಬ್ಬ ಕಲ್ಪನಾಶೀಲ....ಮತ್ತು ಅದು ಬಹಳ ಕೆಟ್ಟದು—ಬಹಳ ಕೆಟ್ಟದು....ಬಹಳ ಒಳ್ಳೆಯದು ಕೂಡ." ಇಲ್ಲಿ ಕಾನ್ರಾಡ್ ಸ್ಟೈನ್‌ನಲ್ಲಿರುವ ಎರಡು ಧ್ವನಿ ಮತ್ತು ಭಿನ್ನವಾದ ಅಭಿಪ್ರಾಯಗಳನ್ನು ಸೂಚಿಸುವುದರಲ್ಲಿ ಸಫಲನಾಗಿದ್ದಾನೆ.

ಮಾರ್ಲೊನ ಕೋರಿಕೆಯ ಮೇಲೆ ಸ್ಟೈನ್ ಜಿಮ್‌ನಿಗೆ ಕೆಲಸ ಕೊಡಿಸಲು ನಿರ್ಧರಿಸುತ್ತಾನೆ. ಈ ಕೆಲಸ ಜಿಮ್‌ನ ಕನಸನ್ನು ನನಸಾಗಿಸಿ, ಅವನ ಆದರ್ಶಗಳು ವಾಸ್ತವಗೊಳ್ಳಲು ಮತ್ತು ನೈಜವಾದ ಕಲ್ಪನೆಯಿಂದ ಮಹಾಪುರುಷನನ್ನಾಗಿಸಲು ಸಹಾಯಕವಾಗುತ್ತವೆ. ಜಿಮ್‌ನನ್ನು ಮಲಯಾದ ದ್ವೀಪ ಪಟುಸನ್‌ಗೆ ಸ್ಟೈನ್ ಕಳುಹಿಸಿದಾಗ ವಾಸ್ತವ ಪ್ರಪಂಚದಿಂದ ತನ್ನ ಕನಸಿನ ಪ್ರಪಂಚವನ್ನು ಅವನು ಪ್ರವೇಶಿಸುತ್ತಾನೆ. ಮಾರ್ಲೊ ಪಟುಸನ್ ದ್ವೀಪವನ್ನು ದೂರದಗ್ರಹಕ್ಕೆ ಹೋಲಿಸುತ್ತಾನೆ. ತನ್ನ ಗತ ಜೀವನ ಮತ್ತು ವಸ್ತು ಸಂಗತಿಗಳಿಂದ ದೂರ ಬರಲು ಸಹಾಯ ಮಾಡುವ ಹೊಸ ಮತ್ತು ಉನ್ನತ ಪ್ರಪಂಚವನ್ನು ಪಟುಸನ್ ದ್ವೀಪದಲ್ಲಿ ಜಿಮ್ ಕಂಡುಕೊಳ್ಳುತ್ತಾನೆ. ಪಟುಸನ್ ಹೊರ ಪ್ರಪಂಚದಿಂದ ಮೂವತ್ತು ಮೈಲಿ ಕಾಡಿನಿಂದ ಬೇರ್ಪಟ್ಟಿದೆ. ಕೆಸರಂಟಿಕೊಂಡಿರುವ ಕೊಳಕು ಸ್ಥಳೀಯರೊಂದಿಗೆ ನೋಡಿದಾಗ ಜಿಮ್ ತನ್ನ ಹೊಳಪಿನ ಬಿಳಿ ಉಡುಪಿನಲ್ಲಿ ಅನ್ಯಜೀವಿಯಂತೆ ಕಾಣುತ್ತಾನೆ. ಇಲ್ಲಿಯ ಪರಿಸರವನ್ನು ಕಂಡು ಸಂತೋಷಗೊಂಡ ಜಿಮ್ ತಾನು ಬಯಸಿದ್ದ ಸ್ವಚ್ಛ ಸ್ಲೇಟು ತನಗೆ ದೊರಕಿತು; ಇನ್ನು ತನ್ನ ಹಳೆಯ ಸೋಲುಗಳನ್ನು ಮರೆತು ಹೊಸ ಜೀವನ ಪ್ರಾರಂಭಿಸಲು ಕಾತುರನಾಗುತ್ತಾನೆ. "ಪೌರ್ವಾತ್ಯ ಮುಸುಕುಧಾರಿಣಿ ವಧು ತನ್ನ ಮುಸುಕನ್ನು ತೆಗೆಯಲು ಕಾಯುತ್ತಿದ್ದಂತೆ ಅವನು ಕಾಯುತ್ತಿದ್ದ ಅವಕಾಶ ಅವನ ಬಳಿ ಕುಳಿತಿತ್ತು". ಈ

ಪ್ರತಿಮೆಯ ಮೂಲಕ ಕಾನ್ರಾಡ್ ಜಿಮ್‌ ಕಷ್ಟಕಾರ್ಪಣ್ಯಗಳ ಪ್ರಪಂಚದಿಂದ ಹೊರತಾಗಿ ಭ್ರಾಮಕ ಪ್ರಪಂಚದ ಸೆಳೆತಕ್ಕೆ ಸಿಕ್ಕಿರುವುದನ್ನು ಸೂಚ್ಯವಾಗಿ ನಮಗೆ ತಿಳಿಸಿದ್ದಾನೆ.

ಮಾರ್ಲೊ ಪಟುಸನ್ ದ್ವೀಪಕ್ಕೆ ಭೇಟಿ ನೀಡಿದಾಗ ನಾವು ಜಿಮ್‌ನ ವ್ಯಕ್ತಿತ್ವದಲ್ಲಿ ಆಗಿರುವ ಬದಲಾವಣೆಗಳನ್ನು ಅವನ ವರ್ಣನೆಯಲ್ಲಿ ಕಾಣಬಹುದು. ಜಿಮ್ ಈ ದ್ವೀಪವನ್ನು ಒಡೆಯನ ಕಣ್ಣುಗಳಿಂದ ನೋಡುತ್ತಾನೆ; ಇಲ್ಲಿನ ಶಾಂತಿ ಮತ್ತು ಏಳಿಗೆ ತನ್ನ ಜವಾಬ್ದಾರಿಯೆಂದು ಬಡಾಯಿಕೊಚ್ಚುವುದಲ್ಲದೆ ಇಲ್ಲಿಯ ಜನರಿಗೆ ತನ್ನಲ್ಲಿ ಅಗಾಧ ನಂಬಿಕೆ ಮತ್ತು ಅಗತ್ಯ ಇದೆ ಎಂದು ಮಾರ್ಲೊಗೆ ತಿಳಿಸುತ್ತಾನೆ. ತಾನು ಪಟುಸನ್‌ಗೆ ಬಂದ ಪ್ರಾರಂಭದಲ್ಲಿ ಸಂಶಯ ಸ್ವಭಾವದ ರಾಜ ಅವನನ್ನು ಬಂಧಿಸಿದ್ದ ಮರದ ಕಾವಲು ಕೋಟೆಯನ್ನು ಮಾರ್ಲೊಗೆ ತೋರಿಸಿ, ಮಾರನೆಯ ದಿನವೆ ಅದನ್ನು ಹಾರಿದನೆಂದು ಪ್ರತಿಷ್ಠೆಯಿಂದ ಹೇಳುತ್ತಾನೆ. ಈ ನೆಗೆತ ಅವನ ಪಾಟ್ನದ ನೆಗೆತವನ್ನು ನಮಗೆ ಜ್ಞಾಪಿಸುತ್ತದೆ. ಅವನ ಮೊದಲನೆಯ ನೆಗೆತ ಒಂದು ಸೋಲು ಹಾಗೂ ಪತನವಾದರೆ ಎರಡನೆಯ ನೆಗೆತ ಗೆಲುವು ಹಾಗು ಆರೋಹಣವೆಂದು ನಾವು ಪರಿಗಣಿಸಬಹುದು. ಅಲ್ಲಿಯ ರಾಜ, ಶರೀಫ್‌ಅಲಿ ಮತ್ತು ಡೋರಾಮಿನ್—ಇವರೆಲ್ಲರ ಮೇಲೆ ತನ್ನ ಹತೋಟಿಯನ್ನು ಸ್ಥಾಪಿಸಿ ಸ್ಥಳೀಯರ ಕಣ್ಣಿನಲ್ಲಿ ಒಬ್ಬ ಮಹಾ ಪವಾಡಪುರುಷನಾಗುವ ಸುಯೋಗ ಅವನಿಗೆ ಒದಗುತ್ತದೆ. ಕಾರ್ನೀಲಿಯಸ್ ಮಗಳು ಅವನ ಪ್ರೇಯಸಿಯಾದಾಗ ಅವನ ಕನಸಿನ ಪ್ರಪಂಚ ಪರಿಪೂರ್ಣತೆಯನ್ನು ಪಡೆಯುತ್ತದೆ. ಆದರೆ ಈ ಪ್ರಪಂಚದಲ್ಲಿ ಕೂಡ ಜಿಮ್‌ನನ್ನು ಬೆದರಿಸುವ ಪರಕೀಯ ವ್ಯಕ್ತಿ ಒಬ್ಬನಿದ್ದಾನೆ. ಅವನೇ ಕಾರ್ನೀಲಿಯಸ್; ಆತ ಜಿಮ್‌ನನ್ನು ಮೊದಲು ಸಾವಿನ ಹೆದರಿಕೆಯಿಂದ ಬೆದರಿಸಲು ಪ್ರಯತ್ನಿಸಿದಾಗ, ಜಿಮ್ "ನನ್ನನ್ನು ಏನೂ ಮುಟ್ಟುವುದಿಲ್ಲ" ಎಂದು ಗರ್ವದಿಂದ ಉತ್ತರಿಸುತ್ತಾನೆ. ಕಾರ್ನೀಲಿಯಸ್ ಜಿಮ್‌ನನ್ನು ಕುರಿತು ಮಾರ್ಲೊಗೆ ತಿಳಿಯಪಡಿಸುವ ಅಭಿಪ್ರಾಯ ಜಿಮ್‌ನ ವ್ಯಕ್ತಿತ್ವದ ಮೇಲೆ ಇನ್ನೊಂದು ನೋಟವನ್ನು ನಮಗೆ ನೀಡುತ್ತದೆ: "ಅವನಿಗೆ ಏನೂ ತಿಳಿದಿಲ್ಲ....ಎಲ್ಲರ ಕಣ್ಣಿಗೆ ಮಣ್ಣೆರಚುತ್ತಾನೆ...ಆದರೆ ನನ್ನ ಕಣ್ಣಿಗೆ ಮಣ್ಣೆರಚಲು ಸಾಧ್ಯವಿಲ್ಲ. ಆತ ಒಬ್ಬ ದೊಡ್ಡ ಮೂರ್ಖ....ಅವನು ಸಣ್ಣ ಮಗುವಿಗಿಂತ ಇಲ್ಲಿ ಏನು ಹೆಚ್ಚಿಲ್ಲ—ಸಣ್ಣ ಮಗುವಿನ ಹಾಗೆ—ಸಣ್ಣ ಮಗು." ನಾವು ಈ ಹಿಂದೆ ಅವನಲ್ಲಿ ಮಗುವಿನಂತಹ ಮುಗ್ಧತೆಯನ್ನು ಕಂಡಿದ್ದೇವೆ.

ಜಿಮ್ ತನ್ನ ಹಿಂದಿನ ಅಪಮಾನದ ನೆನಪುಗಳನ್ನು ಇನ್ನೂ ಸಂಪೂರ್ಣವಾಗಿ ಮರೆತಿಲ್ಲ. ಅವನನ್ನು ಹತ್ಯೆ ಮಾಡಲು ಪ್ರಯತ್ನಿಸಿದ ನಾಲ್ವರು ಸ್ಥಳೀಯರನ್ನು ತನ್ನ ಪ್ರಿಯತಮೆಯ ಸಹಾಯದಿಂದ ಹಿಡಿದು ಅವರಲ್ಲಿ ಒಬ್ಬನನ್ನು ಗುಂಡಿಕ್ಕಿ ಕೊಂದು ಉಳಿದ ಮೂವರನ್ನು ನದಿಗೆ ಹಾರುವಂತೆ ಮಾಡುತ್ತಾನೆ. ತನ್ನ ಅಪಮಾನಕರ ನೆಗೆತವನ್ನು ಅವರಿಂದ ಪುನಃ ಅಭಿನಯಿಸಿ ತಾನು ವಿಚಿತ್ರವಾದ ರೀತಿಯಲ್ಲಿ ತೃಪ್ತಿ ಪಡೆಯುವಂತೆ ನಮಗೆ ತೋರುತ್ತದೆ. ಜಿಮ್ ಮಾರ್ಲೊಗೆ ತನ್ನ ಬಗ್ಗೆ ಸ್ಥಳೀಯರಿಗಿರುವ ಅಚಲ ನಂಬಿಕೆಯನ್ನು ವಿವರಿಸಿದರೂ ಅವರು ಎಂದಿಗೂ ನಿಜವಾದ ಸತ್ಯವನ್ನು ಅರಿಯಲಾರರು ಎನ್ನುತ್ತಾನೆ. ಕೇವಲ ಬಾಹ್ಯಪ್ರಪಂಚದ ನೆನಪು ಅವನನ್ನು

ಾಗಿಲುಗೊಳಿಸುತ್ತದೆ. ಒಮ್ಮೊಮ್ಮೆ ಅವನು ಪಾಟ್ನದ ಪ್ರಪಂಚವನ್ನು ಮೀರಿದ್ದಾನೆ ನಿಸಿದರೂ, ಹಲವು ಬಾರಿ ಅವನು ಅದರಿಂದ ಅವಿತುಕೊಂಡಿರುವಂತೆ ನಮಗೆ ಅನ್ನಿಸು ತ್ತದೆ. ಮಾರ್ಲೊ ಪಟುಸನ್‌ನಿಂದ ತೆರಳುವ ಮುನ್ನ ಜಿಮ್‌ನ ಪ್ರೇಯಸಿ 'ರತ್ನ' Jewel) ಅರಣ್ಯದಿಂದ ಹೊರಗಿರುವ ಬಾಹ್ಯಪ್ರಪಂಚದಿಂದ ಜಿಮ್ ಆಕರ್ಷಿತನಾಗಿ ತನ್ನನ್ನು ತೊರೆಯಬಹುದು ಎಂದು ಅವಳ ಆತಂಕವನ್ನು ವ್ಯಕ್ತಪಡಿಸುತ್ತಾಳೆ. ಅವನು ಆ ರೀತಿ ಮಾಡುವುದಿಲ್ಲ ಎಂದು ಹೇಳಿದರೂ ಅವಳು ನಂಬಲು ನಿರಾಕರಿಸಿದಾಗ, ಮಾರ್ಲೊ ಕೋಪದಿಂದ ಬಾಹ್ಯಪ್ರಪಂಚಕ್ಕೆ ಅವನು ಬೇಕಾಗಿಲ್ಲ ಏಕೆಂದರೆ "ಅವನು ಈ ಪ್ರಪಂಚಕ್ಕೆ ತಕ್ಕವನಲ್ಲ" ಎನ್ನುತ್ತಾನೆ. ಅವಳನ್ನು ಸಂತೈಸಲು "ಯಾರೂ ಈ ಪ್ರಪಂಚಕ್ಕೆ ತಕ್ಕವರಲ್ಲ" ಎಂದಾಗ ಅವಳು ಅಳುತ್ತಾ ಅಲ್ಲಿಂದ ಓಡಿಹೋಗುತ್ತಾಳೆ.

ಮಾರ್ಲೊ ಪಟುಸನ್‌ನಿಂದ ವಾಪಸು ಹೋಗುವಾಗ ಅವನಿಗೆ ಆ ದ್ವೀಪ ಒಬ್ಬ ಮಾಂತ್ರಿಕನು ಸೃಷ್ಟಿಸಿದ ಭ್ರಾಮಕ ಪ್ರಪಂಚದಂತೆ ಭಾಸವಾಗುತ್ತದೆ. ಜಿಮ್ ಅನ್ನು ಕುರಿತ ಮಾರ್ಲೊ ಕೊನೆಯ ನೋಟ ಬಹಳ ಅರ್ಥವತ್ತಾದದ್ದು. ಜಿಮ್ ಎಂದಿನಂತೆ ಶ್ವೇತವಸ್ತ್ರಧರಿಸಿ ಸಮುದ್ರದ ದಡದಲ್ಲಿ ಮಾರ್ಲೊವನ್ನು ಬೀಳ್ಕೊಡಲು ನಿಂತಿರುವಾಗ ಅವನಿಗೆ ಈ ಶ್ವೇತ ಆಕೃತಿ ಮಹತ್ತಾದ ನಿಗೂಢತೆಯ ಅಂತರಂಗದಲ್ಲಿ ನಿಂತಂತೆ ಅನ್ನಿಸು ತ್ತದೆ. ದೂರ ಹೋದಂತೆಲ್ಲ ಈ ಬಿಳಿಯ ಆಕೃತಿ ಸಣ್ಣದಾಗುತ್ತ ಕೊನೆಗೆ ಕತ್ತಲಿನ ಪ್ರಪಂಚ ದಲ್ಲಿ ಸಣ್ಣ ಚುಕ್ಕೆಯಾಗಿ ಅಂತ್ಯಗೊಂಡು ಮಾಯವಾಗುತ್ತದೆ. ಇಲ್ಲಿ ಕಾನ್ರಾಡ್‌ನ ಪ್ರತಿಮೆಯ ಬಳಕೆಯ ಮಹತ್ವವನ್ನು ನಾವು ಕಾಣುತ್ತೇವೆ. ಬೆಳಕು ಮತ್ತು ಕಗ್ಗತ್ತಲೆ; ಹಗಲು ಮತ್ತು ರಾತ್ರಿ; ಬಿಳಿ ಮತ್ತು ಕಪ್ಪು—ಇವುಗಳ ನಡುವೆ ಇರುವ ಅಂತರ ಹಾಗೂ ಸಂಬಂಧವನ್ನು ಸೂಚ್ಯವಾಗಿ ತಿಳಿಸುವುದರಲ್ಲಿ ಕಾನ್ರಾಡ್ ಸಫಲನಾಗುತ್ತಾನೆ. ಜಿಮ್‌ನ ಈ ಬಿಳುಪು ಮುಗ್ಧತೆ ಮತ್ತು ಪರಿಶುದ್ಧತೆಯನ್ನು ಸೂಚಿಸುವುದಲ್ಲದೆ ಇದು ಕಗ್ಗತ್ತಲು ಮತ್ತು ಕೊಳಕಿನ ಜೀವನವನ್ನು ಹೇಗೆ ಹಲವು ಬಾರಿ ಉದ್ಧರಿಸಲು ಸಾಧ್ಯ ವೆಂಬುದನ್ನು ಕೂಡ ತಿಳಿಸುತ್ತದೆ. ಆದರೆ ಅವರಿಗೆ ಕತ್ತಲು ಹೇಗೆ ಹೆಚ್ಚಾಗುತ್ತದೆಯೋ ಪ್ರಪಂಚವು ಕೂಡ ಅದೇ ರೀತಿ ಅವರಿಗೆ ಅತಿ ಕೊಳಕು. ಕತ್ತಲಿನ ಶಕ್ತಿಗಳು ಬೆಳಕಿಗೆ ಒಡ್ಡಿದ ಮುಖ್ಯ ಬೆದರಿಕೆಗಳಾಗಿ ತೋರುತ್ತವೆ. ಜಿಮ್‌ನ ಸಾವಿನೊಡನೆ ಕತ್ತಲು ಮತ್ತೆ ಗೆದ್ದಂತೆ ತೋರುತ್ತದೆ.

ಕಾದಂಬರಿಯ ಕೊನೆಯ ಅಧ್ಯಾಯಗಳಲ್ಲಿ (೩೬–೪೫) ಮಾರ್ಲೊ ತನ್ನೊಬ್ಬ ಸ್ನೇಹಿತನಿಗೆ ಬರೆದ ಪತ್ರದ ಮೂಲಕ ಕಾನ್ರಾಡ್ ನಿರೂಪಣೆಯನ್ನು ಮುಂದುವರಿಸು ತ್ತಾನೆ. ಮೊದಲು ಮಾರ್ಲೊ ಜಿಮ್‌ನ ತಂದೆ ಮಗನಿಗೆ ಬರೆದ ಪತ್ರದ ಬಗ್ಗೆ ಹಲವು ವಿವರಗಳನ್ನು ನೀಡುತ್ತಾನೆ. ಈ ಕಾಗದ ಪಾಟ್ನ ಅಪಘಾತಕ್ಕಿಂತ ಹಲವು ದಿನಗಳ ಮುಂಚೆ ಬರೆದ ಪತ್ರ. ಇದರಲ್ಲಿ ತಂದೆ ಮಗನನ್ನು ತಾನು ಯಾವುದನ್ನು ತಪ್ಪು ಎಂದು ನಂಬಿದ್ದಾನೋ ಅದನ್ನು ಎಂದೂ ಮಾಡಬಾರದೆಂಬ ದೃಢ ನಿಶ್ಚಯವನ್ನು ಬೆಳೆಸಿಕೊಳ್ಳ ಬೇಕೆಂಬ ಬುದ್ಧಿವಾದ ಹೇಳುತ್ತಾನೆ. ಇದು ಪ್ರಾಟೆಸ್ಟೆಂಟ್ ಧರ್ಮದ ವಿಶೇಷ ಲಕ್ಷಣ ಗಳಲ್ಲೊಂದು. ಇದರಲ್ಲಿ ಜಿಮ್‌ನಲ್ಲಿರುವ ಸ್ವಾರ್ಥತೆಯ ಮೂಲವನ್ನು ನಾವು ಕಂಡು ಕೊಳ್ಳಬಹುದು.

ನಂತರ ಮಾರ್ಲೊ ಜಿಮ್‌ನ ಸಾವಿನ ಬಳಿಕ ಸ್ಟೈನ್‌ನಲ್ಲಿಗೆ ನೀಡಿದ ಭೇಟಿಯನ್ನು ವಿವರಿಸುತ್ತಾನೆ. ಜಿಮ್‌ನ ನಿಷ್ಠೆಯ ಅಂಗರಕ್ಷಕ ಟ್ಯಾಂಬ್ ಐಟ್ಯಾಮ್, "ಅವನು (ಜಿಮ್) ಹೋರಾಡಲು ಸಿದ್ಧನಿರಲಿಲ್ಲ" ಎನ್ನುತ್ತಾನೆ. ಅವನ ಪ್ರೇಯಸಿ ಮಾರ್ಲೊಗೆ "ಅವನು ನನ್ನನ್ನು ತೊರೆದು ಹೋದ....ನೀವೆಲ್ಲ ಯಾವಾಗಲು ನಮ್ಮನ್ನು ಬಿಟ್ಟು ಹೋಗುತ್ತೀರ" ಎಂದು, "ಅವನೊಬ್ಬ ಸುಳ್ಳ" ಎನ್ನುತ್ತಾಳೆ. ಅದನ್ನು ಕೇಳಿದ ಸ್ಟೈನ್, "ಇಲ್ಲ! ಇಲ್ಲ! ಸುಳ್ಳನಲ್ಲ! ಸತ್ಯವಂತ! ಸತ್ಯವಂತ! ಸತ್ಯವಂತ!" ಎಂದು ಹೇಳಿದಾಗ, ಜಿಮ್‌ನ ನಿಜವಾದ ವ್ಯಕ್ತಿತ್ವದ ಬಗ್ಗೆ ಎತ್ತಿದ ಪ್ರಶ್ನೆ ಬಗೆಹರಿಯದೆ ಹಾಗೆಯೇ ಉಳಿಯುತ್ತದೆ.

ಮಾರ್ಲೊ ತನ್ನ ಕಾಗದವನ್ನು ಜಿಮ್ ಮತ್ತು ಬ್ರೌನ್‌ನ ನಡುವಿನ ಸಮಾಗಮದ ವಿವರಣೆಯೊಂದಿಗೆ ಮುಗಿಸುತ್ತಾನೆ. ಬ್ರೌನ್ ಕಾದಂಬರಿಯಲ್ಲಿ ಪ್ರಮುಖವಾದ ಒಂದು ಪಾತ್ರ. ಆತ ಸ್ವಚ್ಛಂದ ಸ್ವಭಾವದ, ಸಾಮರ್ಥ್ಯವುಳ್ಳ ಅಹಂಕಾರಿ. ತನ್ನ ಜೀವನವೆಲ್ಲ ಕೇವಲ ವಿನಾಶಕಾರಕ ಕ್ರಿಯೆಯಲ್ಲಿ ತೊಡಗಿಸಿದಂತಹ ವ್ಯಕ್ತಿ. ಈತ ನೀರು ಮತ್ತು ಆಹಾರವಿಲ್ಲದೆ ಕಂಗಾಲಾಗಿ ತನ್ನ ಜೊತೆಯವರೊಡನೆ ಪಟುಸನ್ ದ್ವೀಪವನ್ನು ತಲುಪುತ್ತಾನೆ. ಜಿಮ್ ಪಟುಸನ್ ದ್ವೀಪವನ್ನು ತನ್ನ ನೈತಿಕ ಕ್ಷೇತ್ರವೆಂದು ಪರಿಗಣಿಸಿದರೆ, ಅದು ಬ್ರೌನ್‌ಗೆ ಕೇವಲ ಕೊಳ್ಳೆಹೊಡೆಯಲು ಯೋಗ್ಯವಾದ ಸ್ಥಳ. ಅವರ ಭೇಟಿ ಕಾನ್ರಾಡ್‌ನ ಪ್ರಪಂಚದಲ್ಲಿ ಬಲು ಮಹತ್ವವುಳ್ಳದ್ದು. ಕಲ್ಪನಾಶೀಲತೆ ಮತ್ತು ಆದರ್ಶವಾದದ ಇನ್ನೊಂದು ತುದಿಯಲ್ಲಿರುವವನು ಬ್ರೌನ್. ತನ್ನ ಹಸಿವನ್ನು ಜಿಮ್‌ಗೆ ತಿಳಿಸಿ ತನ್ನ ಸಂಕಷ್ಟ ಪರಿಸ್ಥಿತಿಯನ್ನು ಒಪ್ಪಿಕೊಂಡರೂ ತಾನು ಹೋರಾಡಲು ಸಿದ್ಧನೆಂದು ಹೇಳುತ್ತಾನೆ. "ನನ್ನನ್ನು ಗುಂಡಿಕ್ಕಿ ಕೊಲ್ಲುವುದು ಸುಲಭ....ಆದರೆ ಹಾಗೆ ಮಾಡಲು ನಾನು ಬಿಡಲಾರೆ. ಈ ದೋಣಿಯಲ್ಲಿ ನನ್ನವರಿದ್ದಾರೆ. ನಾನು ಅವರನ್ನು ಬಿಟ್ಟು ತೊಂದರೆಯಿಂದ ಹಾರುವಂತಹವನಲ್ಲ" ಎನ್ನುತ್ತಾನೆ ಬ್ರೌನ್. ಈ ಮಾತುಗಳು ಅವನು ಹೇಡಿಯಲ್ಲ ಎನ್ನುವುದನ್ನು ತಿಳಿಸುವುದರ ಜೊತೆ, ಜಿಮ್‌ಗೆ ತನ್ನ ಪಾಟ್ನ ಅನುಭವವನ್ನು ನೆನಪಿಗೆ ತರುತ್ತವೆ. ಬ್ರೌನ್‌ನ ಚುರುಕಿನ ಜಾಣತನ ಅವನು ಕೇಳುವ ಹರಿತವಾದ ಪ್ರಶ್ನೆಗಳು ಜಿಮ್‌ನನ್ನು ನಾಟುತ್ತವೆ. "ನಿನ್ನ ಜೀವನದಲ್ಲಿ ಸಂಶಯಾಸ್ಪದ ಕಾರ್ಯವನ್ನಾವುದು ಮಾಡಿಲ್ಲವೇ? ಈ ಇಕ್ಕಟ್ಟಿನಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿರುವಂತಹ ನನ್ನ ಮೇಲೆ ಏಕೆ ಇಷ್ಟು ನಿರ್ದಯೆ?" ಎಂದು ಬ್ರೌನ್ ಕೇಳಿದಾಗ ಜಿಮ್‌ಗೆ ತಮ್ಮಿಬ್ಬರ ನಡುವೆ ಎಲ್ಲಿಯೋ ಒಂದೇ ರೀತಿಯ ರಕ್ತಸಂಬಂಧ ಇದ್ದಂತೆ ಮತ್ತೆ ಕೆಲವು ಅನುಭವಗಳನ್ನು ತಾವು ಹಂಚಿಕೊಂಡಂತೆ ಭಾಸವಾಗುತ್ತದೆ. ತಮ್ಮಿಬ್ಬರಲ್ಲಿ ಇರುವ ಸಾಮಾನ್ಯ ದೋಷಭಾವವನ್ನು ಕಂಡು ಜಿಮ್, ತನ್ನ ಮತ್ತು ಅವನ ಮನಸ್ಸಿನ ಮತ್ತು ಹೃದಯದ ನಡುವೆ ಯಾವುದೋ ಅನ್ಯೋನ್ಯ ಬಂಧನವಿದೆಯೆಂದು ಭಾವಿಸಿ ಅಸಹ್ಯಪಡುತ್ತಾನೆ. ಇಲ್ಲಿ ನಿಜಕ್ಕೂ ಒಂದು ಪೂರ್ವಭಾವಿಯಾಗಿ ತಿಳಿಯದ ಸಂಬಂಧವನ್ನು ಜಿಮ್‌ನಂತೆ ನಾವು ಕೂಡ ಕಂಡುಕೊಳ್ಳುತ್ತೇವೆ. ಈ ಸಂಬಂಧದ ಅರಿವಿನಿಂದ ಭೀತಿಗೊಂಡ ಜಿಮ್ ಬ್ರೌನ್‌ಗೆ ಸುರಕ್ಷಿತವಾಗಿ ತೆರಳುವ ಮಾರ್ಗವನ್ನು ತೋರಿಸುತ್ತಾನೆ. ತನ್ನ ಪ್ರತಿರೂಪದೊಂದಿಗೆ

ಹೋರಾಡಲು ನಿರಾಕರಿಸುವ ಜಿಮ್ ಈ ಸೆಣಸಾಟಕ್ಕೆ ಸಿದ್ಧನಿಲ್ಲ. ಅಲ್ಲಿಂದ ತೆರಳುವ ಮುನ್ನ ಬ್ರೌನ್ ಕಾರ್ನೀಲಿಯಸ್‌ನ ಸಹಾಯದಿಂದ ಡೋರಾಮಿನ್‌ನ ಪುತ್ರ ಡೈನ್ ವಾರಿಸ್‌ನ ಗುಂಪಿನ ಮೇಲೆ ಧಾಳಿ ಮಾಡಿ ಅವನನ್ನು ಕೊಲ್ಲುತ್ತಾನೆ. ಇದರಿಂದ ಜಿಮ್‌ನ ಪ್ರತಿಷ್ಠೆ ನುಚ್ಚುನೂರಾಗುತ್ತದೆ. ನಿಜವಾದ ವಿಷಮ ಪರಿಸ್ಥಿತಿಯಲ್ಲಿ ಹೋರಾಡಲು ವಿಫಲವಾಗಿ, ತನ್ನ ಜವಾಬ್ದಾರಿಯನ್ನು ಮರೆತು ಜಿಮ್ ಪುನಃ ನಿಷ್ಕ್ರಿಯನಾಗುತ್ತಾನೆ. ಅವನ ಈ ನಿರ್ಧಾರ ಮಾನವೀಯವಾಗಿ ಕಂಡರು ಅದರಿಂದ ಆಗುವ ಅನಾಹುತ ವ್ಯಾಪಕವಾದದ್ದು. ಅವನ ವಿನಾಶಗೊಂಡ ಈ ಪುಟ್ಟ ಸಾಮ್ರಾಜ್ಯ ಅವನಿಗೆ ಎದುರಾಗಿ ನಿಲ್ಲುತ್ತದೆ.

ಆದರೂ ಕೂಡ ಈ ಘಟನೆ ಅವನು ಜೀವನಪರ್ಯಂತ ಕಾಯುತ್ತಿದ್ದ ಅವಕಾಶ ಅವನಿಗೆ ಸಲ್ಲುವಂತೆ ಮಾಡುವುದನ್ನು ನಾವು ಕಾಣಬಹುದು. ಏಕೆಂದರೆ ಈಗ ಜಿಮ್ ತನ್ನ ತಪ್ಪನ್ನು ಒಪ್ಪಿಕೊಂಡು, ತನ್ನ ಮರ್ಯಾದೆಯನ್ನು ಉಳಿಸಿಕೊಳ್ಳಲು ತನ್ನ ಪ್ರಾಣವನ್ನು ಅರ್ಪಿಸಿ ಹುತಾತ್ಮನಾಗಬಲ್ಲ. ಆದ್ದರಿಂದ ಡೋರಾಮಿನ್‌ನ ಬಳಿಗೆ ಬಂದು "ನಾನು ಸಿದ್ಧನಾಗಿ, ನಿರಾಯುಧನಾಗಿ ಬಂದಿದ್ದೇನೆ" ಎಂದು ಹೇಳುತ್ತಾನೆ. ಅವನನ್ನು ಡೋರಾಮಿನ್ ಗುಂಡಿಟ್ಟು ಕೊಡೆದಾಗ ಅಲ್ಲಿ ನೆರೆದಿದ್ದ ಜನರ ಕಡೆ ಅಭಿಮಾನದ ಮತ್ತು ಹಿಂಜರಿಯದ ನೋಟವನ್ನು ಹಾಯಿಸಿ ಮುಂದೆ ಬಿದ್ದು ಸಾಯುತ್ತಾನೆ. ಅವನು ತನ್ನ ಉನ್ನತ ಆದರ್ಶಗಳನ್ನು ಸಮರ್ಥಿಸಲು ಸಾವನ್ನಪ್ಪುತ್ತಾನೆ. ತನ್ನ ಜೀವನದುದ್ದಕ್ಕೂ ತನ್ನ ಕನಸಿಗೆ ವಿಧೇಯನಾಗಿ, ತನ್ನ ಆದರ್ಶಗಳಿಗೆ ಸತ್ಯವಾಗಿರಲು ಪ್ರಯತ್ನಿಸಿದವನು ಜಿಮ್. ಇನ್ನೊಂದು ರೀತಿ ನೋಡಿದರೆ ಹುತಾತ್ಮನಾದರೂ ಅವನ ಸಾವು ಆತ್ಮಹತ್ಯೆಯೇ. ಏಕೆಂದರೆ ಟ್ಯಾಂಬ್ ಐಟ್ಯಾಮ್ ಮತ್ತು ರತ್ನ, ಇಬ್ಬರು ಹೇಳುವಂತೆ ಹೋರಾಟಕ್ಕೆ ಇಳಿಯಲು ಅವನು ಸಿದ್ಧನಿಲ್ಲ. ಇಂತಹ ಪರಿಸ್ಥಿತಿಯಿಂದ ಸಾವು ಒಂದು ಸುಲಭ ಮಾರ್ಗ. ಇದು ಅವನನ್ನು ಅಂತಿಮಶಾಂತಿಗೆ ಒಯ್ಯುವುದಲ್ಲದೆ, ಕಾರ್ಯ ಪ್ರಪಂಚದಿಂದ ಅವನನ್ನು ವಿಮುಕ್ತನನ್ನಾಗಿ ಮಾಡುತ್ತದೆ. ಹಾಗೆಂಬೇ ಇದು ಅವನು ಕಂಡ ಕಷ್ಟಕರ, ಹೊಲಸಿನ ಪ್ರಪಂಚದಿಂದ ಮಾಡಿದ ಅಂತಿಮ ನೆಗೆತ ಕೂಡ.

ನಾವು ಜಿಮ್‌ನ ಈ ಕೊನೆಯ ಕ್ರಿಯೆಯನ್ನು ಯಾವ ದೃಷ್ಟಿಕೋನದಿಂದ ನೋಡಿದರೂ, ಅವನು ಜೀವನದ ಕೊನೆಯವರೆಗೆ 'ಸ್ವಾರ್ಥಿ'ಯಾಗಿಯೇ ಉಳಿಯುತ್ತಾನೆ. ಅವನು ಹಿಂದೆ ಹೇಗೆ ಪಾಟ್ನ ಹಡಗನ್ನು ತ್ಯಜಿಸಿದ್ದನೋ ಹಾಗೆ ಈಗ ತನ್ನ ಪ್ರೀತಿಯ ರತ್ನಳಿಗೆ ದ್ರೋಹ ಬಗೆದು ಅವಳನ್ನು ಬಿಟ್ಟು ಈ ಪ್ರಪಂಚದಿಂದ ತೆರಳುತ್ತಾನೆ. ಅವನ ನಿಷ್ಠೆ ಯಾವಾಗಲು ಆದರ್ಶಗಳಿಗೆ ಮಾತ್ರ, ಅವನು ವಾಸ್ತವತೆಯ ಕೂಗಿಗೆ ಸರಿಸಾಟಿಯಲ್ಲ. ಮಾರ್ಲೊ ತನ್ನ ನಿರೂಪಣೆಯನ್ನು ತನಗೆ ಜಿಮ್‌ನ ಬಗ್ಗೆ ಇರುವ ಸಂಶಯದೊಂದಿಗೆ ಅಂತ್ಯಗೊಳಿಸುತ್ತಾನೆ: "ಅವನಿಗೆ ಈಗಲಾದರೂ ತೃಪ್ತಿ, ಸಮಾಧಾನ ಸಿಕ್ಕಿದಿಯೇ, ನನಗೆ ತಿಳಿದಿಲ್ಲ?". ಕೊನೆಯದಾಗಿ ಜಿಮ್‌ನ ಜೀವನದ ಮಹತ್ವ ದ್ವಂದ್ವದಲ್ಲಿ ಉಳಿಯುವಂತೆ ನಮಗೆ ಅನ್ನಿಸುತ್ತದೆ. ಅವನು ಸತ್ಯವಂತನೆ ಅಥವಾ ಸುಳ್ಳನೆ ಅಥವಾ ಈ ಪ್ರಪಂಚಕ್ಕೆ ತಕ್ಕವಂಥವನೆ ಎಂಬ ಎಲ್ಲ ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ಕಾನ್ರಾಡ್ ಜಿಮ್‌ನ ಬಗ್ಗೆ ಸರಳವಾದ ಅಂತಿಮ ತೀರ್ಪನ್ನು ನೀಡಲು ನಮಗೆ

ಬಿಡುವುದಿಲ್ಲ. ಆದರೂ ಸಹಿತ ನಾವು ಕಾರ್ಯನಿಷ್ಠೆ ಮತ್ತು ಸಾಮರ್ಥ್ಯದ ಬಗ್ಗೆ ಕಾನ್ರಾಡ್‌ಗೆ ಇದ್ದ ಗೌರವವನ್ನು ಕಂಡಿದ್ದೇವೆ. ಕಾನ್ರಾಡ್ ಕೆಲವೊಮ್ಮೆ ಕೆಲಸದಲ್ಲಿ ತೊಡಗುವುದಕ್ಕಿಂತ ಸಾಯುವುದು ಸುಲಭ ಎಂದು ಭಾವಿಸಿದ್ದ. ಆದುದರಿಂದ ಈ ವಾಸ್ತವ ಪ್ರಪಂಚ ಒಂದೇ ಮನುಷ್ಯನು ಬದುಕಲು ಯೋಗ್ಯವಾದ ಪ್ರಪಂಚ ಎಂದು ಕಾನ್ರಾಡ್ ನಂಬಿದ್ದ. ಜಿಮ್ ಈ ಪ್ರಪಂಚದಲ್ಲಿ ಬದುಕಲಾರ; ಅವನು ಕೇವಲ ಕನಸಿನಲ್ಲಿ ಮಾತ್ರ ಗೆಲುವನ್ನು ಸಾಧಿಸಬಲ್ಲ; ಆದರೆ ವಾಸ್ತವತೆ ಅವನನ್ನು ಹೆಚ್ಚು ಕಾಲ ಕನಸು ಕಾಣಲು ಬಿಡುವುದಿಲ್ಲ. ಟೋನಿ ಟ್ಯಾನರ್‌ನ ಅಭಿಪ್ರಾಯದಂತೆ ನಾವು ಕಾದಂಬರಿಯ ಕೊನೆಯಲ್ಲಿ ಉತ್ಕೃಷ್ಟವಾದರೂ, ಕ್ಷಣಿಕವಾಗಿ ಕಾಣುವ ಮತ್ತು ನ್ಯೂನತೆಗಳಿರುವ ಬಣ್ಣದ ಚಿಟ್ಟೆಗಳು ಮತ್ತು ಮನುಷ್ಯರು ಬದುಕಿನೊಡನೆ ಸೆಣಸಾಡಲು ವಿಫಲರಾಗುತ್ತಾರೆ ಎಂಬುದನ್ನು ಸೂಚ್ಯವಾಗಿ ತಿಳಿಹೇಳುತ್ತದೆ ಎನ್ನುವುದನ್ನು ನಾವು ಗ್ರಹಿಸಬಹುದು.

ಕೊನೆಯಾಗಿ 'ಲಾರ್ಡ್ ಜಿಮ್'ನಲ್ಲಿ ಕಾನ್ರಾಡ್ ಬಳಸುವ ನಿರೂಪಣಾ ತಂತ್ರದ ಬಗೆಗೆ ಎರಡು ಮಾತು. ಕಾನ್ರಾಡ್ "ಜೀವನ ನಿರೂಪಿಸುವುದಿಲ್ಲ. ಅದು ನಮ್ಮ ಮನಸ್ಸಿನ ಮೇಲೆ ಚಿತ್ರಗಳನ್ನು ಮೂಡಿಸುತ್ತವೆ" ಎಂದು ನಂಬಿದ್ದ. ಆದುದರಿಂದ ತನ್ನ ಕಥೆಯನ್ನು ನಿರೂಪಿಸಲು ಒಂದು ಹೊಸ ವಿಧಾನವನ್ನು ಅವನು ಕಂಡುಕೊಳ್ಳಬೇಕಾಗಿತ್ತು. ಕಾನ್ರಾಡ್ ಫ್ರಾಯಿಡ್ ಮತ್ತ ಪ್ರೂಸ್ಟ್‌ರನ್ನು ಓದದೆ, ಮನುಷ್ಯನ ನೆನಪಿನ ಕ್ರಿಯೆಯ ಮೂಲತತ್ತ್ವ ಸಂಯೋಜನೆ ಎಂದೂ ಕಾಲಗಣನೆಯಲ್ಲವೆಂದೂ ತಿಳಿದಿದ್ದ. ಆದ್ದರಿಂದಲೇ ಮೊದಲನೆಯ ನಾಲ್ಕು ಅಧ್ಯಾಯಗಳನ್ನು ಬಿಟ್ಟರೆ, ಈ ಕಾದಂಬರಿ ಮಾರ್ಲೋ ನೆನಪಿನ ಮೂಲಕ ನಮಗೆ ತಲಪುತ್ತದೆ. ಈ ಕಾರಣದಿಂದ ನಿರೂಪಣೆಯಲ್ಲಿ ಕಾಲಗಣನೆಯ ಕ್ರಮ (chronological sequence)ವನ್ನು ಸಂಪೂರ್ಣವಾಗಿ ಕಾನ್ರಾಡ್ ಕೈಬಿಡುತ್ತಾನೆ. ಜಿಮ್‌ನ ಕಥೆಯ ಕೇಂದ್ರ ಪ್ರಜ್ಞೆ ಅನುಕಂಪಯುಕ್ತ ಮಾರ್ಲೋ ಆದರೂ, ಅವನ ಬಗ್ಗೆ ಹಲವಾರು ವ್ಯಕ್ತಿಗಳ—ಪಾಟ್ನದ ಅಧಿಕಾರಿಗಳು, ಚೆಸ್ಟರ್, ಬ್ರಯರ್ಲಿ, ಫ್ರಾನ್ಸಿನ ಲೆಫ್ಟಿನೆಂಟ್, ಸ್ಟೈನ್, ಕಾರ್ನಿಲಿಯಸ್, ರತ್ನ ಬ್ರೌನ್ ಇತ್ಯಾದಿ—ದೃಷ್ಟಿಕೋನದ ಮೂಲಕ ಜಿಮ್‌ನ ವ್ಯಕ್ತಿತ್ವದ ಚಿತ್ರಣದಲ್ಲಿ ಕಾನ್ರಾಡ್ ಅದ್ಭುತ ಪರಿಪೂರ್ಣತೆಯನ್ನು ಗಳಿಸಿದ್ದಾನೆ.

ತಾಳ್ಮೆ, ಕ್ಷಮೆ, ದಯೆ, ಔದಾರ್ಯ, ಪ್ರೇಮ ಇವು ಕ್ಷಾತ್ರಗುಣದ ಪೋಷಕ ಶಕ್ತಿಗಳು.

ಗಾಂಧೀಜಿ

ಕತ್ತಲನ್ನು ಸೀಳುವ ಬೆಳಕು: ದ ನಿಗ್ಗರ್ ಆಫ್ ದ 'ನಾರ್ಸಿಸಸ್'

ಡಾ|| ಆರ್. ರಾಮಚಂದ್ರ

“ದ ನಿಗ್ಗರ್ ಆಫ್ ದ ನಾರ್ಸಿಸಸ್” ಜೋಸೆಫ್ ಕಾನ್ರಾಡ್‌ನ ಮೂರನೆ ಕಾದಂಬರಿ. ಅದನ್ನು ಬರೆದ ನಂತರ ಕಾನ್ರಾಡ್ “ದ ಸೀಕ್ರೆಟ್ ಏಜೆಂಟ್”, “ನಾಸ್ಟ್ರೊಮೊ”, “ಅಂಡರ್ ವೆಸ್ಟರ್ನ್ ಐಸ್”, ಮುಂತಾದ ಅನೇಕ ಉತ್ಕೃಷ್ಟ ಕೃತಿಗಳನ್ನು ರಚಿಸಿದ. ಆದರೂ ಜೀವನ ಪರ್ಯಂತ ಅವನಿಗೆ “ದ ನಿಗ್ಗರ್” ಬಗ್ಗೆ ವಿಶೇಷವಾದ ಹೆಮ್ಮೆ. “ಸೃಜನಶೀಲ ಕಲೆಗಾರನಾಗಿ ನನ್ನ ಉಳಿವು, ಅಳಿವು ಅವಲಂಬಿಸಿರುವುದು ಈ ಕೃತಿಯನ್ನು: ಅದು ಹೇಗೇ ಇರಲಿ, ಮತ್ತ್ಯಾರಿಂದಲೂ ಅದನ್ನು ಬರೆಯಲು ಆಗುತ್ತಿರಲಿಲ್ಲ. ಸಾಹಿತ್ಯದ ಇತಿಹಾಸದಲ್ಲಿ ಈ ಕೃತಿ ಒಂದು ಹೆಗ್ಗುರುತಾಗಿದೆ” ಎಂದು ಅವನು ತನ್ನ ಮಿತ್ರರೊಬ್ಬರಿಗೆ ಬರೆದಿದ್ದ. ಸಮುದ್ರಯಾನ ಕುರಿತಂತೆ ಕಾನ್ರಾಡ್‌ನ ಮೊದಲ ಕೃತಿ “ದ ನಿಗ್ಗರ್”. ಆದರೆ ಅದು ಕೇವಲ ಸಮುದ್ರದ ಬಗ್ಗೆ ಒಂದು ರೊಮ್ಯಾಂಟಿಕ್ ಕತೆ ಎನ್ನುವವರ ಅಭಿಪ್ರಾಯವನ್ನು ಕಾನ್ರಾಡ್ ತನ್ನ ಜೀವನ ದುದ್ದಕ್ಕೂ ಅಲ್ಲಗಳೆಯುತ್ತಿದ್ದ. ಸಾಯುವುದಕ್ಕೆ ಸ್ವಲ್ಪ ಮುಂಚೆ ಅವನ ಒಂದು ಪತ್ರದಲ್ಲಿ ಹೀಗೆ ಬರೆದ :

> “‘ದ ನಿಗ್ಗರ್’ನಲ್ಲಿ ನಾನು ಮನುಷ್ಯರ ಸಮುದಾಯವೊಂದರ ಮಾನಸಿಕ ವರ್ತನೆಯನ್ನು ನಿರೂಪಿಸುತ್ತೇನೆ. ಅವರು ಎದುರಿಸುವ ಸಮಸ್ಯೆ ಸಮುದ್ರದಿಂದ ಉದ್ಭವವಾಗುವಂತಹುದಲ್ಲ; ಹಡಗಿನಲ್ಲೇ ಹುಟ್ಟಿಕೊಳ್ಳುವ ಸಮಸ್ಯೆ. ಆದರೆ ನೆಲದ ತೊಡಕುಗಳಿಂದ ಸಂಪೂರ್ಣವಾಗಿ ಪ್ರತ್ಯೇಕಗೊಳ್ಳುವ ಸ್ಥಿತಿಯಿಂದಾಗಿ ಅದು ವಿಶೇಷ

ಒತ್ತಡ ಹಾಗೂ ಮೆರಗು ಪಡೆದು ನಮ್ಮ ಮುಂದೆ ಎದ್ದು ನಿಲ್ಲುವಂತಾಗುತ್ತದೆ."

ನಿಜ ಹೇಳಬೇಕೆಂದರೆ "ದ ನಿಗ್ಗರ್" ಕಾನ್ರಾಡ್‌ನ ಈ ಉದ್ದೇಶವನ್ನೂ ಮೀರಿ ನಿಲ್ಲುವ ಕೃತಿ. ಅದು 'ಕಾದಂಬರಿ' ಅಲ್ಲ, ಕಾವ್ಯ.

'ನಾರ್ಸಿಸಸ್' ಎಂಬ ಹಡಗು ಬೊಂಬಾಯಿಯಿಂದ ಹೊರಟು ಬ್ರಿಸ್ಟಲ್ ತಲುಪುತ್ತದೆ. ಆದರೆ ಮಾರ್ಗದಲ್ಲಿ ನಾವಿಕರು ಎರಡು ಗಂಡಾಂತರಗಳನ್ನೆದುರಿಸುತ್ತಾರೆ: ಒಂದು, ಭಯಂಕರ ಬಿರುಗಾಳಿ; ಎರಡನೆಯ ಅಪಾಯ—'ದಂಗೆ'. ಈ ಗಂಡಾಂತರಗಳು, ಮತ್ತು ಅಪಾಯಸ್ಥಿತಿಗಳಲ್ಲಿ ನಾವಿಕರ ವರ್ತನೆ—ಇದು "ದ ನಿಗ್ಗರ್"ನ ಕತೆಯ ವಸ್ತು. ಆದರೆ ಕಾದಂಬರಿಯ ಅರ್ಥ ನಮಗೆ ಅನೇಕ ಸ್ತರಗಳಲ್ಲಿ ಸಿಗುತ್ತದೆ.

ಪ್ರಾರಂಭದಿಂದ ಶುರುವಾಗದೆ ಕಾದಂಬರಿ ಎಲ್ಲೋ ಮಧ್ಯದಿಂದ ಎನ್ನುವಂತೆ ಶುರುವಾಗುತ್ತದೆ: " 'ನಾರ್ಸಿಸಸ್' ನೌಕೆಯ ಪ್ರಥಮಾಧಿಕಾರಿ ಬೇಕರ್ ಒಂದು ಹೆಜ್ಜೆ ಮುಂದಿಟ್ಟು ತನ್ನ ಕೊಠಡಿಯ ಬೆಳಕಿನಿಂದ ಕ್ವಾರ್ಟರ್‌ಡೆಕ್‌ನ ಕತ್ತಲನ್ನು ಸೇರಿದ". ಈ ಆರಂಭದ ವಾಕ್ಯ ತೀರ ಸಾಧಾರಣವೆನಿಸಬಹುದು; ಆದರೆ ಅದರ ಸೂಚ್ಯಾರ್ಥಗಳು ಕಾದಂಬರಿ ಮುಂದುವರಿದಂತೆ ಕ್ರಮೇಣವಾಗಿ ಅರಳುತ್ತವೆ. ಬೇಕರ್ ತನ್ನ ಕೋಣೆಯಿಂದ ಹೊರಬಂದವನೆ, ಅಟ್ಟದ ಹಿಂಭಾಗಕ್ಕೆ ದೀಪ ಕಳುಹಿಸಬೇಕೆಂದು ಮೇಸ್ತ್ರಿಗೆ ತಿಳಿಸುತ್ತಾನೆ. ಆಗ ರಾತ್ರಿ ಒಂಭತ್ತರ ಸಮಯ. "ಅಟ್ಟದ ಹಿಂಭಾಗ ಕತ್ತಲಾಗಿತ್ತು; ಆದರೆ ಮುಂಭಾಗಕ್ಕಾದಂತೆ ಸ್ವಲ್ಪ ದೂರದಲ್ಲಿ ಅಟ್ಟದ ಕೋಣೆಯ ತೆರೆದ ಬಾಗಿಲಿನ ಮೂಲಕ ಬೆಳಕಿನ ಎರಡು ಗೆರೆಗಳು ಆ ನಿಶ್ಯಬ್ದ ಇರುಳಿನ ಕರಾಳತೆಯನ್ನು ಸೀಳಿ ಬಿದ್ದಿದ್ದುವು." ಸೂಕ್ಷ್ಮ ಓದುಗರಿಗೆ ಈ ಕತ್ತಲು-ಬೆಳಕಿನ ಆಟ ಅರ್ಥಗರ್ಭಿತವಾಗಿ ತೋರುತ್ತದೆ. ಮೇಸ್ತ್ರಿ ದೀಪವನ್ನು ಕಳುಹಿಸಿದ ಮೇಲೆ, ಬೇಕರ್ ನಾವಿಕರನ್ನೆಲ್ಲ ಸೇರಿಸಿ ಹಾಜರಿ ತೆಗೆದುಕೊಳ್ಳುವ ಸಮಯಕ್ಕೆ ಹುಡುಗನೊಬ್ಬ ಅವನ ಮುಂದೆ ಲಾಟೀನು ಹಿಡಿದು ನಿಂತಿರುತ್ತಾನೆ. ಪ್ರಥಮಾಧಿಕಾರಿ ಒಂದೊಂದು ಹೆಸರು ಕೂಗುತ್ತಿದ್ದಂತೆ 'ಹಾಜರ್' ಎನ್ನುತ್ತಾ ಒಬ್ಬೊಬ್ಬ ನಾವಿಕನೂ ಹಡಗಿನ ಬಲ ಕಟ್ಟೆಯಮೇಲಿನ "ನೆರಳುಗಳಿಂದ ತನ್ನನ್ನು ಬೇರ್ಪಡಿಸಿಕೊಂಡು, ಬರಿಗಾಲಿನಲ್ಲಿ ಬೆಳಕು ವೃತ್ತವನ್ನು ಹೊಕ್ಕು, ಎರಡು ಹೆಜ್ಜೆಗಳಲ್ಲಿ ಅಟ್ಟದ ಎಡಗಡೆಯ ನೆರಳುಗಳನ್ನು" ಕೂಡಿಕೊಳ್ಳುತ್ತಾನೆ. ಕಾನ್ರಾಡ್‌ನ ಕಾದಂಬರಿಯ ಗತಿಯನ್ನು ನಿಜವಾಗಿಯೂ ನಿರ್ಧರಿಸುವ ಅಂಶ ಘಟನೆಗಳ ಪ್ರವಾಹವಲ್ಲ; ಪ್ರತಿಮೆಗಳಿಂದ ಸಮೃದ್ಧವಾದ ವಿವರಣೆಗಳು. ಕಾದಂಬರಿಯ ಶುರುವಿನಲ್ಲಿ ಒಂದು ಹೆಜ್ಜೆಯನ್ನಿಟ್ಟು ದಾಟಬಹುದಾದ ಬೆಳಕಿನ ಕಡಿ, ಮುಖ್ಯಾಧಿಕಾರಿ ಹಾಜರಿ ತೆಗೆದುಕೊಳ್ಳುವ ವೇಳೆಗೆ ಎರಡು ಹೆಜ್ಜೆಗಳಷ್ಟು ಹಿಗ್ಗುತ್ತದೆ. ಮಾರನೆಯ ಬೆಳಗ್ಗೆ ಬೊಂಬಾಯಿ ಬಂದರನ್ನು ಬಿಟ್ಟು ಹೊರಡುವ ಜಹಜು "ತಟ್ಟನೆ ಬೀಳುವ ಬೆಳಕಿನಿಂದ ಚಕಿತಗೊಳ್ಳುವ, ಸೂರ್ಯನ ಪ್ರಕಾಶವನ್ನು ತಾಳಲಾರದೆ ದೂರದ ಕತ್ತಲಿನತ್ತ ಹೋಗಲು ವ್ಯರ್ಥವಾಗಿ ಯತ್ನಿಸುವ ದೈತ್ಯ ಕೀಟ"ವನ್ನು ಹೋಲುತ್ತದೆ. ಕತ್ತಲಿನಿಂದ ಬೆಳಕನ್ನು ಹಾಯ್ದು ಮತ್ತೆ ಕತ್ತಲನ್ನು ಸೇರುವುದು: ಇದು "ದ ನಿಗ್ಗರ್"

ಕಾದಂಬರಿ ಕ್ರಮಿಸುವ ಬಗೆ. ಗರ್ಭದ, ಗೋರಿಯ ಕತ್ತಲುಗಳ ನಡುವೆ ತೀಕ್ಷ್ಣವಾಗಿ ಸೀಳುವ ಬೆಳಕಿನ ಗೆರೆಯೇ ಮಾನವಜೀವನ. ಆ ಬೆಳಕಿನ ಗೆರೆಯ ಅಮೂಲ್ಯತೆಯನ್ನು ನಮಗೆ ಮನದಟ್ಟು ಮಾಡಿಕೊಡುವುದು ಕಾದಂಬರಿಯ ಉದ್ದೇಶ. ಈ ಕಾರಣಕ್ಕೇ ಕಾದಂಬರಿಯ ಶುರುವಿನಲ್ಲಿ ಕಾಣುವ ಬೆಳಕಿನ ರೇಖೆ ಕ್ರಮೇಣ ಹಿಗ್ಗುತ್ತಾ ಹೋಗುತ್ತದೆ. ಸಮುದ್ರಯಾನ 'ನಾರ್ಸಿಸಸ್'ನ ನಾವಿಕ ಸಮಾಜದ ಬಾಹ್ಯ ಜೀವನದ ಕತೆ ಮಾತ್ರ ಆಗದೆ ಮಾನವನ ಜೀವನದ ಆಂತರಿಕ ಯಾತ್ರೆಯೂ ಆಗುತ್ತದೆ.

ಯಾತ್ರೆಯ ಆಂತರಿಕ ಸ್ವರೂಪವನ್ನು ಕಾನ್ರಾಡ್ ನಮಗೆ ಸೂಚಿಸುವುದು ಎರಡು ಅಂಶಗಳ ಮೂಲಕ : (೧) ಹಡಗಿನ ಪ್ರತೀಕ ಮತ್ತು (೨) ನೀಗ್ರೋ ನಾವಿಕ ಜೇಮ್ಸ್ ವೇಯ್ಟ್.

'ನಾರ್ಸಿಸಸ್' ಒಂದು ಮಿನಿ ಜಗತ್ತು ; "ಭೂಮಿಯಿಂದ ಕಳಚಿಕೊಂಡು ತೇಲುವ ನೆಲದ ತುಣುಕು ;" ಒಂದು "ಸಣ್ಣ ಗ್ರಹ." ಆ ಜಹಜಿಗೆ "ತನ್ನದೇ ಆದ ಭವಿಷ್ಯವಿತ್ತು ; ಅದರ ಅಟ್ಟದ ಮೇಲೆ ನಡೆದಾಡುವವರ ಜೀವಿಗಳಂತೆ ಅದೂ ಜೀವಂತವಾಗಿತ್ತು. ತನ್ನನ್ನು ಕಡಲಿಗೆ ಒಪ್ಪಿಸಿದ ಭೂಮಿಯಂತೆಯೇ ಮಿತಿಮೀರಿದ ವಿಷಾದಗಳನ್ನು, ಆಸೆ ಆಕಾಂಕ್ಷೆಗಳ ಹೊರೆಯನ್ನು ಹೊತ್ತುಕೊಂಡಿತ್ತು. ಆ ಜಹಜಿನಲ್ಲಿ ಅಂಜುಬುರುಕು ಸತ್ಯ ಹಾಗೂ ನಿರ್ದಿಷ್ಟ ಅಸತ್ಯ ವಾಸಿಸುತ್ತಿದ್ದುವು. ಭೂದೇವಿಯಂತೆ ಆ ಜಹಜು ಸಹ ಪ್ರಜ್ಞಾಶೂನ್ಯವಾಗಿತ್ತು ; ಭೂಮಿಯಂತೆಯೇ ಸುಂದರವಾಗಿದ್ದು, ಮನುಷ್ಯರಿಂದ ಕೆಟ್ಟ ವಿಧಿಯತ್ತ ದೂಕಲ್ಪಟ್ಟಿತ್ತು." ಬಿರುಗಾಳಿಯಂತಹ ಗಂಡಾಂತರ ಜಹಜಿಗೆ ಇದ್ದೇ ಇರುತ್ತದೆ. ಆದರೆ ಬಾಹ್ಯದ ಅಪಾಯಗಳಿಗಿಂತ ಹೆಚ್ಚಾಗಿ ಆಂತರಿಕ ಜೀವವಿರೋಧಿ ಶಕ್ತಿಗಳೊಂದಿಗೆ ನಡೆಯುವ ಹೋರಾಟದತ್ತ ಕಾನ್ರಾಡ್ ನಮ್ಮ ಗಮನ ಸೆಳೆಯುತ್ತಾನೆ. ಈ ಜೀವವಿರೋಧಿ ಶಕ್ತಿಗಳ ಜೀವಂತ ಪ್ರತೀಕ ಜೇಮ್ಸ್ ವೇಯ್ಟ್. ಜೇಮ್ಸ್ ಒಬ್ಬ ನೀಗ್ರೊ. ಅವನು ಮೊದಲ ಬಾರಿ ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತಿದ್ದಂತೆಯೇ ನಾವಿಕರು ಕಕ್ಕಾವಿಕ್ಕಿಗೊಳ್ಳುವಂತೆ ಮಾಡುತ್ತಾನೆ. ಮೊಟ್ಟಮೊದಲು ಅವನು ಕಾಣಿಸಿಕೊಳ್ಳುವುದು ಬೇಕರ್ ಹಾಜರಿ ತೆಗೆದುಕೊಳ್ಳುವ ಸಂದರ್ಭದಲ್ಲಿ ಹಾಜರಿ ಪುಸ್ತಕದಿಂದ ಹದಿನೇಳು ಹೆಸರುಗಳನ್ನು ಕೂಗಿದ ನಂತರ ಬೇಕರ್ ಕಡೆಯ ಹೆಸರು ಓದಲಾಗುತ್ತಿಲ್ಲ, ತುಂಬಾ ಚಿತ್ತಾಗಿ ಅಸ್ಪಷ್ಟವಾಗಿದೆ ಅನ್ನುತ್ತಾನೆ. ಅದು ತನ್ನ ಹೆಸರು ಎಂದು ಹೇಳಲು ಆ ನಾವಿಕ ಗುಂಪಿನಲ್ಲಿ ಯಾರೂ ಇರುವುದಿಲ್ಲ. ಸರಿ, ಎಲ್ಲರೂ ಕೆಳಗೆ ಹೋಗಬಹುದೆಂದು ಬೇಕರ್ ಅಪ್ಪಣೆ ನೀಡುವುದಕ್ಕೆ ಸರಿಯಾಗಿ 'wait' (ನಿಲ್ಲಿ) ಎಂಬ ಗಂಭೀರ ವಾದ ಅಧಿಕಾರವಾಣಿ ಕೇಳಿಬರುತ್ತದೆ. ನಾವಿಕರೆಲ್ಲ ಬೇಕರ್‌ನ ಅಪ್ಪಣೆಯನ್ನು ಮರೆತು ಗಕ್ಕನೆ ನಿಂತುಬಿಡುತ್ತಾರೆ. ಒಂದು ಕ್ಷಣ ಬೇಕರ್ ಸಹ ಅಪ್ರತಿಭನಾಗಿ ನಿಲ್ಲುತ್ತಡೆ. ಮರುಕ್ಷಣದಲ್ಲಿ ತನ್ನ ಆಜ್ಞೆಗೆ ಪ್ರತಿಯಾಜ್ಞೆ ಕೊಟ್ಟವನ ಕೆಟ್ಟ ಧೈರ್ಯವನ್ನು ಕಂಡು ಅಸಾಧ್ಯ ಸಿಟ್ಟು ಬರುತ್ತದೆ. 'ಯಾರು ? ಯಾರು ?....' ಎಂದವನೆ (ಕಟಕಟೆಯ) ಏಣಿಯ ಬಳಿ ನಿಂತ ಆಕೃತಿಯೊಂದನ್ನು ಗಮನಿಸುತ್ತಾನೆ. ಪುನಃ 'wait' ಎನ್ನುತ್ತಾ ಆ ಆಕೃತಿ ಸಾವಕಾಶವಾಗಿ ಕತ್ತಲಿನಿಂದ ಬೇಕರ್‌ನ ಮುಂದಿದ್ದ ಲಾಟೀನಿನ ಬೆಳಕಿಗೆ ಬಂದು ನಿಲ್ಲುತ್ತದೆ. ಬೇಕರ್, "ನೀ ಯಾರು ? ನಿನಗೆಷ್ಟು ಧೈರ್ಯ ?"

ಎಂದು ಸಿಟ್ಟಿನಿಂದ ಪ್ರಶ್ನಿಸುತ್ತಿದ್ದಂತೆ ಆ ವ್ಯಕ್ತಿ ಸ್ವಲ್ಪವೂ ವಿಚಲಿತನಾಗದೆ "ನನ್ನ ಹೆಸರು ವೇಯ್ಟ್. ಜೇಮ್ಸ್ ವೇಯ್ಟ್. ನಾನು ಈ ಹಡಗಿಗೆ ಸೇರಿದವನು" ಎನ್ನುತ್ತಾನೆ. ಆಗಲೇ ಬೇಕರ್‌ಗೆ ಅರ್ಥವಾಗುವುದು—ಹಾಜರಿ ಪುಸ್ತಕದಲ್ಲಿ ಅಸ್ಪಷ್ಟವಾಗಿದ್ದ ಹೆಸರು ಜೇಮ್ಸ್ ವೇಯ್ಟ್; ಆ ವ್ಯಕ್ತಿ ತನ್ನ ಹೆಸರನ್ನು ಕೂಗಿ ತಿಳಿಸಿದುದನ್ನು ತಾನು ಪ್ರತಿಯಾಜ್ಞೆ ಎಂದು ತಪ್ಪಾಗಿ ಭಾವಿಸಿದೆ, ಎಂದು. ಹೀಗೆ ವೇಯ್ಟ್ ಹಡಗಿನ ಮೇಲೆ ಮೊದಲ ಹೆಜ್ಜೆ ಇಡುತ್ತಿರುವಂತೆಯೇ ನಾವಿಕರು ಗೊಂದಲಕ್ಕೆ ಸಿಗುತ್ತಾರೆ; ಅವರ ಶಿಸ್ತು ಕ್ಷಣಕಾಲ ಮಾಯವಾಗುತ್ತದೆ. "ಆಯ್ತು, ನೀನು ಹಡಗಿಗೆ ಸೇರಿದೆ" ಎಂದು ಬೇಕರ್ ಒಪ್ಪಿಕೊಂಡ ಕ್ಷಣದಲ್ಲಿ ವೇಯ್ಟ್ ತನ್ನ ಎದೆಯ ಮೇಲೆ ಕೈಯಿಟ್ಟು ಎರಡು ಸರ್ತಿ ಜೋರಾಗಿ ಕೆಮ್ಮುತ್ತಾನೆ. "ಅದು ಲೋಹದ ಗುಣವುಳ್ಳ, ಪ್ರಚಂಡವಾದ ಕೆಮ್ಮು; ಯಾವುದಾದರೂ ಗುಮ್ಮಟದೊಳಗೆ ಎರಡು ಭಾರಿ ಸ್ಫೋಟವನ್ನು ಹೋಲುವಂತಿತ್ತು ಅವನ ಕೆಮ್ಮಿನ ಸದ್ದು. ಆ ಸದ್ದಿಗೆ ಇಡೀ ಸೃಷ್ಟಿಯು ತಾರಸಿ ಪ್ರತಿಧ್ವನಿಸಿತು; ಹಡಗಿನ ಕಟಕಟೆಯ ಸಮಸ್ತ ಕಬ್ಬಿಣದ ಪಟ್ಟಿಗಳು ಗಡಗಡ ನಡುಗಿದವು."ಜೇಮ್ಸ್ ವೇಯ್ಟ್‌ನ ಕೆಮ್ಮಿನ ಸದ್ದಿಗೆ ಇಡೀ ಹಡಗು ನಡುಗುತ್ತದೆ—ಬಿರುಗಾಳಿಗೆ ನಡುಗುವಂತೆ. ಜೇಮ್ಸ್ ವೇಯ್ಟ್‌ನಿಗೂ ಬಿರುಗಾಳಿಯಂಥ ಮಾರಕ ಶಕ್ತಿಗೂ ಸೂಕ್ಷ್ಮವಾದ ಸಾಮ್ಯವಿರುತ್ತದೆ. ಉದಾಹರಣೆಗೆ, ಬಿರುಗಾಳಿಯ ಪ್ರಚಂಡ ರಭಸದಿಂದಾಗಿ ನಾವಿಕರು ಚೆಲ್ಲಾಪಿಲ್ಲಿಯಾಗಿ ಒಬ್ಬರಿಂದೊಬ್ಬರು ದೂರವಾಗುತ್ತಾರೆ; ಹಡಗನ್ನು ಆವರಿಸುವ ಗಾಳಿ, ನೀರುಗಳ ಭೋರ್ಗರೆತ ನಾವಿಕರ ಅತಿ ದೊಡ್ಡ ಕೂಗುಗಳನ್ನು ಅವರ ಬಾಯಿಯಿಂದ ಕಸಿದು, ಕ್ಷೀಣಗೊಳಿಸಿ, ಅವರ ನಡುವಿನ ಸಂಪರ್ಕವೇ ಕಡಿದು ಹೋಗುವಂತೆ ಮಾಡುತ್ತದೆ. ಇದರಂತೆಯೇ ಜೇಮ್ಸ್ ವೇಯ್ಟ್ ಸಹ ನಾವಿಕ-ನಾವಿಕರ ನಡುವಿನ ಸಂಬಂಧ ಕೆಡುವಂಥ ಪ್ರಭಾವವನ್ನು ಬೀರುತ್ತಾನೆ.

'ನಾರ್ಸಿಸಸ್' ಹಡಗಿನ ಮೇಲೆ ಕಾಲಿಟ್ಟ ಕ್ಷಣದಿಂದಲೇ ಅವನು ಎಲ್ಲರ ಗಮನ ಸೆಳೆಯುತ್ತಾನೆ. ಅವನ ಕಂಚಿನಂಥ ಕಂಠ, ಅವನ ಎತ್ತರ (ಜಹಜಿನಲ್ಲಿ ಅವನು ಎಲ್ಲರಿಗಿಂತ ಎತ್ತರದ ವ್ಯಕ್ತಿ)—ಇವುಗಳಿಂದ ಪ್ರಭಾವಿತನಾದ ಬೇಕರ್ ದಷ್ಟಪುಷ್ಟರಾದ ಇಬ್ಬರು ನಾವಿಕರನ್ನು ದ್ವಿತಿಯಾಧಿಕಾರಿಗೆ ಕೊಟ್ಟು, ಅವರಿಗೆ ಬದಲಾಗಿ ಜೇಮ್ಸ್ ವೇಯ್ಟ್‌ನನ್ನು ತನ್ನ ಉಸ್ತುವಾರಿಯಲ್ಲಿಟ್ಟುಕೊಳ್ಳುತ್ತಾನೆ. ದುಡಿಯಬಲ್ಲನೆಂಬ ಆಶ್ವಾಸನೆಯನ್ನು ಎಂಥವರಲ್ಲೂ ಮೂಡಿಸಬಲ್ಲ ವರ್ಚಸ್ಸು ವೇಯ್ಟ್‌ನದು. ಆದರೆ ಯಾನ ಶುರುವಾದ ಒಂದು ವಾರದಲ್ಲೇ ಅವನು ರೋಗಿಯಾಗುತ್ತಾನೆ. ಯಾವ ಕೆಲಸವನ್ನೂ ಮಾಡದೆ ಸದಾ ತನ್ನ ಕೋಣೆಯಲ್ಲೇ ಮಲಗುತ್ತಾನೆ; ಹಡಗಿನ ಅಧಿಕಾರಿಗಳು ಕೊಡುವ ಆಹಾರ ಮನುಷ್ಯಯೋಗ್ಯವಾದುದಲ್ಲ ಎಂದು ನಿಂದಿಸುತ್ತಾನೆ. ನಾವಿಕರಿಗೆಲ್ಲಾ ಮಾನಸಿಕ ಗೊಂದಲ: ಈ ಜೇಮ್ಸ್ ('ಜಿಮ್ಮಿ' ಎಂದು ಹಡಗಿನವರು ಅವನನ್ನು ಕರೆಯುತ್ತಾರೆ) ನಿಜವಾಗಿಯೂ ರೋಗಿಯೊ, ಅಥವಾ ರೋಗದ ಸೋಗು ಹಾಕುತ್ತಾನೊ ? ಅವರ ಸ್ಥಿತಿಯಿಂದ ಸಾಕಷ್ಟು ಮೋಜುಗೊಂಡ ವೇಯ್ಟ್ ಅವರ ಮನಸ್ಸನ್ನು ಮತ್ತೂ ಗೋಜಲುಗೊಳಿಸುತ್ತಾನೆ; ಕರುಣೆ ಮತ್ತು ಸಂಶಯ—ಇವುಗಳ ನಡುವೆ ನಾವಿಕರು ಹೊಯ್ದಾಡುವಂತೆ ಮಾಡುತ್ತಾನೆ. ಅವನ ರೋಗವನ್ನು ಅಪನಂಬಿಕೆ

ಯಿಂದ ನೋಡುವುದರಿಂದ ಎಲ್ಲಿ ತಾವು ಮಾನವೀಯತೆಯನ್ನು ಕಳೆದುಕೊಂಡು ಮೃಗಗಳಂತಾಗಿಬಿಡುವೆವೋ ಎನ್ನುವ ಭಯ ಒಂದು ಕಡೆ; ಅವನ ನಾಟಕವನ್ನು ನಂಬಿ ತಾವು ಮುಠ್ಠಾಳರಾಗಬಹುದೆಂಬ ಸಂಶಯ ಮತ್ತೊಂದು ಕಡೆ. ಅವರು ಭ್ರಾಂತರಾದಷ್ಟೂ ವೇಯ್ಟ್‌ಗೆ ಖುಷಿ. ತನ್ನೊಬ್ಬನಿಗೆ ಮಾತ್ರ ಸಾಯುವ ಯೋಗವಿದ್ದು, ಉಳಿದವರೆಲ್ಲಾ ಪಾಪದ ಅಮರ್ತ್ಯರೇನೊ ಎನ್ನುವಂತೆ ಅವರ ಮುಂದೆ ತನ್ನ ರೋಗವನ್ನು, ತನಗೆ ಬರಬಹುದಾದ ಸಾವನ್ನು ಮೆರೆದಾಡಿಸುತ್ತಾನೆ. ಹಡಗಿನ ಅಧಿಕಾರಿಗಳನ್ನು ಕಡೆಗಣಿಸಿ ನಾವಿಕರು ನೀಗ್ರೋನ ಸೇವೆಯಲ್ಲಿ ತಲ್ಲೀನರಾಗುತ್ತಾರೆ. ಅವರ ಜೀವನದ ಪ್ರತಿಯೊಂದು ಕ್ಷಣಕ್ಕೂ ವೇಯ್ಟ್ ಅಧಿಪತಿಯಾಗುತ್ತಾನೆ. ನಾವಿಕರ ಮೇಲೆ ಅವನು ಸ್ವಾಮಿತ್ವ ಸ್ಥಾಪಿಸುವುದು ತನ್ನ ದೈಹಿಕ ಶಕ್ತಿ, ಬುದ್ಧಿ ಮುಂತಾದ ಯಾವುದೇ ಒಳ್ಳೆಯ ಗುಣದಿಂದಲ್ಲ. ತನಗೆ ಬರಬಹುದಾದ ಸಾವು, ರೋಗ—ಇವೆರಡನ್ನೇ ಅವರ ಮುಂದೆ ಜಂಭದಿಂದ ತೋರಿಸುತ್ತಾ ಅವರನ್ನು ತನ್ನ ಅಧೀನರನ್ನಾಗಿ ಮಾಡಿಕೊಳ್ಳುತ್ತಾನೆ ಜೇಮ್ಸ್ ವೇಯ್ಟ್. ಹೀಗೆ ವೇಯ್ಟ್‌ನ ಪ್ರಭಾವಕ್ಕೆ ಸಿಗುವುದರ ನಿಜವಾದ ಅರ್ಥ—ಜೀವತತ್ವಕ್ಕೆ ವಿರುದ್ಧವಾದ ಸಾವಿಗೆ, ಅರ್ಥಹೀನತೆಗೆ ಸಿಗುವುದು. ನಾವಿಕರು ಜೇಮ್ಸ್‌ನ ಮುಂದೆ ಕಳ್ಳರಂತೆ, ತಪ್ಪಿತಸ್ಥರಂತೆ ಓಡಾಡತೊಡಗುತ್ತಾರೆ —ಜೇಮ್ಸ್ ವೇಯ್ಟ್ ನರಳುತ್ತಿರಬೇಕಾದರೆ ತಾವು ಆರೋಗ್ಯವಾಗಿದ್ದೇವಲ್ಲ ಎಂದು! ತಮ್ಮ ಆರೋಗ್ಯದ ಬಗ್ಗೆ, ಚೈತನ್ಯದ ಬಗ್ಗೆ ಅವರು ತಪ್ಪಿತಸ್ಥ ಭಾವನೆಯನ್ನು ಹೊಂದುವಂತೆ ಮಾಡುತ್ತಾನೆ ಅವರ ಜಿಮ್ಮಿ. ಅವನ ನಿದ್ದೆಗೆ ಭಂಗ ಬರದಿರಲಿ ಎಂದು ಅವರು ಸಂಜೆಯ ವೇಳೆ ಹಾಡುವುದನ್ನು ಬಿಟ್ಟುಬಿಡುತ್ತಾರೆ; ಗಟ್ಟಿಯಾಗಿ ನಗುವುದಿಲ್ಲ, ಪಿಸುದನಿಯಲ್ಲಿ ಮಾತಾಡುತ್ತಾರೆ. ಎಲ್ಲಿ ಸಣ್ಣ ಶಬ್ದದಿಂದಾಗಿ ವೇಯ್ಟ್ ಎದ್ದುಬಿಡುತ್ತಾನೊ ಎಂದು ಹಗುರವಾಗಿ ಹೆಜ್ಜೆಯಿಟ್ಟು ನಡೆದಾಡುತ್ತಾರೆ. ಊಟ ಮಾಡುವಾಗಲೂ ಅಷ್ಟೆ—ನಿಶ್ಯಬ್ದತೆಯಿಂದಿರುತ್ತಾರೆ. ಒಟ್ಟಿನಲ್ಲಿ ತಮ್ಮ ಶರೀರಗಳನ್ನೇ ಅಲ್ಲಗಳೆಯುತ್ತಾ ಪ್ರೇತಗಳಾಗಿಬಿಡುತ್ತಾರೆ. ಒಂದೊಂದು ಕ್ಷಣವೂ ಅವರು ರೋಗಗ್ರಸ್ತ ವೇಯ್ಟ್‌ನನ್ನು ನೆನೆಯುತ್ತಾರೆ. ಊಟದಿಂದ ಹಿಡಿದು ಪ್ರತಿಯೊಂದು ವಸ್ತುವನ್ನೂ ವೇಯ್ಟ್‌ನ ದೃಷ್ಟಿಯಿಂದಲೇ ಕಾಣುತ್ತಾರೆ. ಹೀಗಾಗಿ ನಾವಿಕರು ತಮ್ಮ ಸ್ವಂತ ಬಾಳನ್ನು ಬಾಳದೆ ವೇಯ್ಟ್‌ನ ರೋಗದ ವ್ಯಾಪ್ತಿಯ ಪ್ರತೀಕವಾಗಿಬಿಡುತ್ತಾರೆ; ಜೀವನಕ್ಕೇ ದ್ರೋಹ ಬಗೆಯತೊಡಗುತ್ತಾರೆ.

ನಾವಿಕರು (ಬದುಕೆಂಬ) ಸಾಗರದಲ್ಲಿ ತೇಲುವ ನೌಕಾತತ್ವದ ವಿರುದ್ಧ ನಡೆದುಕೊಳ್ಳುವಂಥ ಆ ಪರಿಸ್ಥಿತಿಯನ್ನು ವೇಯ್ಟ್ ಉಂಟುಮಾಡಿದರೆ, ಆ ಪರಿಸ್ಥಿತಿಯ ಉಪಯೋಗಿಸಿ ನಾವಿಕರನ್ನು ಅಧಿಕಾರಿಗಳ ಮೇಲೆ ದಂಗೆಯೇಳುವಂತೆ ಮಾಡುವವನು ವೇಯ್ಟ್‌ನ ಜೊತೆಗಾರ ಡಾಂಕಿನ್. ಡಾಂಕಿನ್ ಸಹ ಜೀವತತ್ವಕ್ಕೆ ವಿರೋಧವಾದವನು. ಡಾಂಕಿನ್ ಮೊದಲ ಸರ್ತಿ ನಾವಿಕರ ಎದುರುಬಂದಾಗ ಅವನ ಅವತಾರ ನಾವಿಕರನ್ನು ಅಸಹ್ಯವನ್ನು ಕೆರಳಿಸುವಂತಹುದು.

> "ಬಿಳೀ ಹುಬ್ಬಿನ ಆ ಸಣ್ಣ ಮನುಷ್ಯ ಸೊಂಟದ ಮೇಲೆ ಕೈಯಿಟ್ಟು ನಿಂತಿದ್ದ. ಅವನು ಎಲ್ಲ ಬಗೆಯ ತೇಜೋವಧೆ ಹಾಗೂ ಅವಮಾನದ

> ಪರಿಚಯವಿದ್ದವನಂತೆ ತೋರುತ್ತಿದ್ದ; ಕೈಕೋಳ ಹಾಕಿಸಿಕೊಂಡು, ಒದೆಸಿಕೊಂಡು, ಮಣ್ಣಿನಲ್ಲಿ ಒದ್ದಾಡಿದವನಂತೆ ಕಾಣುತ್ತಿದ್ದ; ಪರಚಿಸಿಕೊಂಡು, ಉಗಿಸಿಕೊಂಡು, ಮೈಮೇಲೆ ಶಿಪ್ಪೆ ಎರಚಿಸಿಕೊಂಡವನಂತೆ ಕಾಣುತ್ತಿದ್ದ. ಆದರೂ ಅವನು ಹೆಮ್ಮೆಯಿಂದ ಬೀಗುತ್ತಾ ತನ್ನ ಸುತ್ತಲಿದ್ದವರ ಮುಖವನ್ನು ವೀಕ್ಷಿಸಿದ. ಹ್ಯಾಟಿನ ಭಾರಕ್ಕೆ ಅವನ ಕಿವಿಗಳು ಬಾಗಿದ್ದವು. ಅವನ ಕರಿಕೋಟಿನ ಅಂಚು ಉದ್ದುದ್ದ ಹರಿದು ಹಿಂಭಾಗದಲ್ಲಿ ಬಾಲದಂತೆ ಮಂಡಿಯ ಕೆಳಗೆ ನೇತಾಡುತ್ತಿತ್ತು. ತನಗೆ ಸೇರಿದ್ದು ಎಂದು ಯಾರೂ ಬಹುಶಃ ಹೇಳದಂತಹ ಆ ಕೋಟನ್ನು ಅವನು ಕದ್ದು ಬಂದಂತೆ ತೋರುತ್ತಿತ್ತು....ಅವನ ಕತ್ತು ಸಣ್ಣಗೆ, ಉದ್ದಗಿತ್ತು; ಅವನ ಕಣ್ಣುರೆಪ್ಪೆ ಕೆಂಪು; ಅವನ ಕೆನ್ನೆಯ ಮೇಲೆ ಅಲ್ಲೊಂದು, ಇಲ್ಲೊಂದು ಅಪರೂಪದ ಕೂದಲು ಜೋತಾಡುತ್ತಿತ್ತು. ಅವನ ಭುಜಗಳು ಸಣ್ಣಗೆ ಚೂಪಾಗಿದ್ದು, ಪಕ್ಷಿಯೊಂದರ ಮುರಿದ ರೆಕ್ಕೆಗಳಂತೆ ಬಾಗಿದ್ದುವು. ಅವನ ಇಡೀ ಎಡಭಾಗಕ್ಕೆ ಮೆತ್ತಿಕೊಂಡಿದ್ದ ಒಣಕೆಸರು ಅವನು ಒದ್ದೆ ಚರಂಡಿಯಲ್ಲಿ ಮಲಗಿ ಬಂದದ್ದನ್ನು ಸಾರುತ್ತಿತ್ತು."

ನಾಯಿ, ರಣಹದ್ದುಗಳ ವಿಚಿತ್ರ ಸಮ್ಮಿಲನದಿಂದಾದವನಂತೆ ಕಾಣುವ ಡಾಂಕಿನ್ ಸೂರ್ಯನ ಬೆಳಕಿಗೇ ಅಪಮಾನವೆಸಗುವ ಪ್ರಾಣಿ. ಅವನು ಕೆಲಸವನ್ನೇ ಮಾಡಲಾರನವ; ಕರ್ತವ್ಯ ಪ್ರಜ್ಞೆಯೇ ಇಲ್ಲದೆ ಹಕ್ಕುಗಳ ಬಗ್ಗೆ ಜೋರುಮಾಡುವ ಡಾಂಕಿನ್‌ನ ಸತ್ವ ಎಂಥದ್ದೆಂದು ನಾವಿಕರಿಗೆಲ್ಲಾ ಗೊತ್ತು. ಆದರೂ ಜೇಮ್ಸ್ ವೇಯ್ಟ್‌ನ ಪ್ರಭಾವಕ್ಕೆ ಸಿಕ್ಕಿ ಭ್ರಾಂತರಾಗುವ ಅವರು ಡಾಂಕಿನ್‌ನ ಪ್ರಚೋದನೆಗೆ ಬಲಿಯಾಗುತ್ತಾರೆ; ಅಧಿಕಾರಿಗಳ ವಿರುದ್ಧ ದಂಗೆ ಏಳುವಷ್ಟು ಧೈರ್ಯ ಮಾಡಿಬಿಡುತ್ತಾರೆ.

ಜೇಮ್ಸ್ ವೇಯ್ಟ್‌ನ ಪ್ರಭಾವಕ್ಕೆ ಮಣಿಯದಿರುವ ಒಬ್ಬನೇ ನಾವಿಕನೆಂದರೆ ಅರವತ್ತು ವಯಸ್ಸಿನ ಸಿಂಗಲ್‌ಟನ್. ಆ ವಯಸ್ಸಿನಲ್ಲೂ ಸ್ವಲ್ಪವೂ ಶಕ್ತಿ ಚೈತನ್ಯದ ಕೊರತೆ ಕಾಣದಿರುವ ಸಿಂಗಲ್‌ಟನ್ ತನ್ನ ೪೫ ವರ್ಷದ ಸಮುದ್ರ ಜೀವನದಲ್ಲಿ ೪೦ ತಿಂಗಳನ್ನು ಕೂಡ ನೆಲದ ಮೇಲೆ ಕಳೆದವನಲ್ಲ. ಒಂದು ಸರ್ತಿ ಮಾಮೂಲಿನಂತೆ ಜೇಮ್ಸ್ ವೇಯ್ಟ್ ತನ್ನ ಸಾವಿನ ಬಗ್ಗೆ, ಊಟದ ಬಗ್ಗೆ ಗೋಳಾಡುವಾಗ ಸಿಂಗಲ್‌ಟನ್ ಅವನನ್ನು ನೇರವಾಗಿ ವಿಚಾರಿಸುತ್ತಾನೆ: "ನೀನು ಸಾಯುತ್ತಿದ್ದೀಯಾ?" ವೇಯ್ಟ್ ಅಪ್ರತಿಭನಾಗಿ, "ಯಾಕೆ ನಿನಗೆ ಕಾಣಿಸುವುದಿಲ್ಲವಾ" ಎಂದು ನಡುಗುವ ಧ್ವನಿಯಲ್ಲಿ ಗೊಣಗುಟ್ಟುತ್ತಾನೆ. "ಸರಿ ಹಾಗಾದರೆ, ನಿನ್ನ ಪಾಡಿಗೆ ನೀನು ಸಾಯಿ. ಅದರ ಬಗ್ಗೆ ಕಿರುಚಾಡಬೇಡ; ನಾವ್ಯಾರೂ ನಿನಗೆ ಸಹಾಯ ಮಾಡಲಾರೆವು" ಎಂದು ಸಿಂಗಲ್‌ಟನ್ ವೇಯ್ಟ್‌ನ ಬಾಯಿಮುಚ್ಚಿಸುತ್ತಾನೆ. ಈ ಘಟನೆ ನಡೆದದ್ದೇ ಎಲ್ಲ ನಾವಿಕರೂ ಸಿಂಗಲ್‌ಟನ್‌ನನ್ನು ಕೇಳುತ್ತಾರೆ, ವೇಯ್ಟ್ ಸಾಯುವುದು ನಿಜವಾ ಎಂದು. ಅಪಾತ್ರನಿಗೆ ತಾವು ಅನುಕಂಪ, ಕರುಣೆ ತೋರುತ್ತಿಲ್ಲವೆಂಬ ಆಶ್ವಾಸನೆ ಅವರಿಗೆ ಬೇಕು. ಆದರೆ ಈ ಸಮಾಧಾನ ಬಹಳ ಕಾಲ ಅವರಿಗೆ ಇರುವುದಿಲ್ಲ ವೇಯ್ಟ್‌ನ ಸಾವು ಖಂಡಿತ ಎಂದು

ಸಿಂಗಲ್‌ಟನ್ ಹೇಳಿದನೆಂದು ಗೊತ್ತಾದಾಗ ಡಾಂಕಿನ್ ಅವರನ್ನು ಛೇಡಿಸುತ್ತಾನೆ: "ಅಯ್ಯೋ ಹುಚ್ಚರಾ; ನೀವೂ ಸಹ ಒಂದಲ್ಲ ಒಂದು ದಿನ ಸಾಯುತ್ತೀರಾ." ಹೀಗಾಗಿ ನಾವಿಕರು ಕಡೆಯುವರೆಗೂ—ವೇಯ್ಟ್ ಸತ್ತ ನಂತರವೂ—ಭ್ರಾಂತರಾಗಿಯೇ ಉಳಿಯುತ್ತಾರೆ.

ವಾಸ್ತವದಲ್ಲಿ "ದ ನಿಗ್ಗರ್" ಎರಡು ಕತೆಗಳನ್ನೊಳಕೊಂಡಿದೆ. ೧) 'ನಾರ್ಸಿಸಸ್' ಜಹಜಿನ ನಾವಿಕರು ಬಿರುಗಾಳಿಯನ್ನು ಎದುರಿಸುವುದು: ಬಿರುಗಾಳಿ ಹಡಗನ್ನೇ ವಾಲಿಸಿ, ನಾವಿಕರನ್ನೆಲ್ಲಾ ಚೆಲ್ಲಾಪಿಲ್ಲಿಯಾಗಿ ಮಾಡಿದರೂ, ಅವರ ನಡುವಿನ ಸಂಪರ್ಕ ಕಡಿದರೂ ಅವರು ಬಿರುಗಾಳಿಯೊಡನೆ ಹೋರಾಟ ನಡೆಸುವ ಯಶಸ್ಸಿನ ಕತೆ ಇದು.

೨) ಜೇಮ್ಸ್ ವೇಯ್ಟ್‌ನ ಪ್ರಭಾವದ ವಿರುದ್ಧ ಅವರು ಸೋಲುವ 'ಅಪಜಯ'ದ ಕತೆ

ಈ ಎರಡು ಬೇರೆ ಬೇರೆಯಾಗಬಹುದಾದ ಕತೆಗಳು ಒಂದಕ್ಕೊಂದು ಹೆಣೆದುಕೊಳ್ಳುವುದಕ್ಕೆ ಸಾಧ್ಯವಾಗುವಂತೆ ಮಾಡುವ ಅಂಶ—ಹಡಗಿನ ಚೌಕಟ್ಟು. ಜೀವನದ ಬಗ್ಗೆ ಕಾನ್ರಾಡ್‌ನ ಧೋರಣೆ ನಿರಾಶಾವಾದದ್ದಾಗಲೀ, ಆಶಾವಾದದ್ದಾಗಲಿ ಆಗಿರದೆ ಅವೆರಡರನ್ನೂ ಒಳಕೊಂಡಿದ್ದು. ಆದ್ದರಿಂದ ಮಾನವಜೀವನದ ಅಪಯಶಸ್ಸಿನ ಹಾಗೂ ಯಶಸ್ಸಿನ ಕತೆಗಳನ್ನು ಅದ್ಭುತವೆನಿಸುವ ರೀತಿಯಲ್ಲಿ ಕಾನ್ರಾಡ್ ಹೆಣೆಯುತ್ತಾನೆ. ಹೀಗೆ ಒಂದರೊಳಗೊಂದು ಎರಡು ಕತೆಗಳನ್ನು ಹೆಣೆಯುವಾಗ ಮೂಡುವ ಮೌಲ್ಯ 'ಕಾಯಕ'. ಬಿರುಗಾಳಿಯ ಸಮಯದಲ್ಲಿ ಜೇಮ್ಸ್ ವೇಯ್ಟ್‌ನನ್ನು ಮರೆತು ಕಾಯಕದಲ್ಲಿ ತೊಡಗುವುದರಿಂದ ನಾವಿಕರ ಜೀವನಕ್ಕೆ ಅರ್ಥ ಸಿಗುವುದು. ಬೇರೆ ಸಮಯದಲ್ಲಿ ಜೇಮ್ ವೇಯ್ಟ್‌ನನ್ನು ಮೆಚ್ಚಿಸಲು ಅವರು ಮಾಡುವ ಕೆಲಸ ಅವರ ನಡುವೆ ಒಡಕು ಉಂಟು ಮಾಡಿ ಹಡಗನ್ನು ಅರಕ್ಷಿತಗೊಳಿಸುತ್ತದೆ. ಬಿರುಗಾಳಿಯನ್ನೆದುರಿಸುವಾಗ ತಾವೆಲ್ಲ ಒಂದು ಎನ್ನುವ ಸಮುದಾಯ ಪ್ರಜ್ಞೆಯಿಂದ ದುಡಿಯುತ್ತಾರೆ; ಆದರೆ ಜೇಮ್ಸ್ ವೇಯ್ಟ್‌ನ ಸೇವೆ ಅವರ ಅಹಂಕಾರದಿಂದ ಪ್ರಚೋದಿತವಾದದ್ದು. ಜೇಮ್ಸ್ ವೇಯ್ಟ್‌ಗೆ ಅವರು ತೋರುವ ಅತಿಯಾದ ಕರುಣೆ ಅವರ ಅಹಂಕಾರದ ಇನ್ನೊಂದು ಮುಖ ಅಷ್ಟೆ. ಸಮುದಾಯ ಪ್ರಜ್ಞೆಯಿಂದ ಮಾಡುವ ಕೆಲಸವೇ ಕಾಯಕ, ಜೀವನ; ನಮ್ಮ ಸುತ್ತಲಿನ ಅಂಧಕಾರವನ್ನು ಸೀಳುವ ಬೆಳಕು.

ಕೆಟ್ಟದ್ದನ್ನು ಮಾಡದಿರಬೇಕಾದರೆ, ಕೆಟ್ಟದ್ದರಿಂದ ಪೂರ್ಣವಾಗಿ ದೂರ ಇರಬೇಕು.

ಗಾಂಧೀಜಿ

ನಿಸರ್ಗದ ಸಮತೋಲ ಎಂದರೇನು?

ಜಿ. ಟಿ. ನಾರಾಯಣರಾವ್

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ದೇಹದ ಬೆಳೆವಣಿಗೆ ಹಾಗೂ ಅಭಿವರ್ಧನೆಗೆ ಅವಶ್ಯಕವಾದ ಶರ್ಕರಾದಿ ಘಟಕಗಳು ಯುಕ್ತ ಪ್ರಮಾಣಗಳಲ್ಲಿ ಪೂರೈಕೆ ಆಗದಿರುವುದೇ ನ್ಯೂನಪೋಷಣೆ. ವ್ಯಕ್ತಿ ಹೊಟ್ಟೆ ತುಂಬ ಆಹಾರ ತಿಂದಾಗಲೂ—ಅಂದರೆ ಆತ ಉಪವಾಸಪೀಡಿತನಾಗಿರದಾಗಲೂ—ನ್ಯೂನ ಪೋಷಣೆಯಿಂದ ನರಳುವುದು ಸಾಧ್ಯ.

ಯಂತ್ರ ಚಾಲೂ ಆಗಲು ಇಂಧನ ಹೇಗೋ ದೇಹ ಕೆಲಸ ಮಾಡಲು ಆಹಾರ ಹಾಗೆ. ಇಂಧನ ದಹಿಸಿದಾಗ ಶಕ್ತಿ ಉತ್ಪಾದನೆ ಆಗಿ ಅದರ ನೆರವಿನಿಂದ ಯಂತ್ರ ಕಾರ್ಯಪ್ರವೃತ್ತವಾಗುತ್ತದೆ. ಆಹಾರ ಜೀರ್ಣವಾಗಿ ರಕ್ತಗತವಾಗಿ ಕೋಶಗತವಾಗಿ ಬಳಸಲ್ಪಟ್ಟಾಗ (ಅಂತಿಮ ಘಟ್ಟದಲ್ಲಿ ಈ ಕ್ರಿಯೆಯೂ ದಹನವೇ—ಕಾರ್ಬನ್ ಮತ್ತು ಹೈಡ್ರೊಜನ್ ದೇಹದ ಹಿತೋಷ್ಣತೆಯಲ್ಲಿ ಆಕ್ಸಿಜನ್ನಿನೊಡನೆ ಸಂಯೋಗವಾಗುವ ಉತ್ಕರ್ಷಣಕ್ರಿಯೆ) ಶಕ್ತಿ ಬಿಡುಗಡೆ ಆಗಿ ದೇಹದ ವಿವಿಧ ಚಟುವಟಿಕೆಗಳಲ್ಲಿ ನಿರತವಾಗುತ್ತದೆ. ಆದ್ದರಿಂದ ಜನಸಂಖ್ಯೆ ವೃದ್ಧಿಸಿದಂತೆ ಶಕ್ತಿ ಬೇಡಿಕೆಯೂ ವೃದ್ಧಿಸುತ್ತದೆ.

ಮಾನವನ ಸಮಸ್ತ ಆಹಾರವೂ ಸಸ್ಯಗಳಿಂದಲೇ ಒದಗಬೇಕು. ಶುದ್ಧ ಮಾಂಸಾಹಾರಿ ಪ್ರಾಣಿಗಳಾದರೂ ಸಸ್ಯಾಹಾರಿ ಅಥವಾ ಮಿಶ್ರಾಹಾರಿ ಪ್ರಾಣಿಗಳನ್ನು ತಿಂದು ಬದುಕುವುದು ನಿಸರ್ಗ ನಿಯಮ. ಸಸ್ಯರಹಿತ ನಾಡು ಆಹಾರಶೂನ್ಯ ಬೆಂಗಾಡು. ಸಸ್ಯಗಳು ಬೆಳೆಯಲು ನೆಲ, ಜಲ, ವಾಯು ಮತ್ತು ಸೂರ್ಯಪ್ರಕಾಶ ಬೇಕು. ದ್ಯುತಿಸಂಶ್ಲೇಷಣೆ (ಫೋಟೊಸಿಂತೆಸಿಸ್) ಎಂಬ ಸಸ್ಯಗಳಿಗೆ ಮಾತ್ರ ವಿಶಿಷ್ಟವಾದ ಸಂಯಂತ್ರದ ಮೂಲಕ ಸಸ್ಯಗಳು ಸೌರಶಕ್ತಿಯನ್ನು ಉಪಯೋಗಿಸಿಕೊಂಡು ನೀರನ್ನು ಕಾರ್ಬನ್ ಡೈಆಕ್ಸೈಡಿನೊಡನೆ ಸಂಯೋಗಿಸಿ ಪಿಷ್ಟವನ್ನೂ

ಸಕ್ಕರೆಯನ್ನೂ (ಸಮಗ್ರವಾಗಿ ಶರ್ಕರಗಳನ್ನು) ಸಂಶ್ಲೇಷಿಸುತ್ತವೆ. ಆದ್ದರಿಂದ ಆಹಾರದ ಮೂಲಕ ದೇಹಕ್ಕೆ ದೊರೆಯುವ ಶಕ್ತಿಯಾದರೂ ಸೆರೆಹಿಡಿಯಲ್ಪಟ್ಟ ಸೌರ ಶಕ್ತಿಯೇ.

ಆಹಾರ ಒದಗಿಸುವ ಶಕ್ತಿಯನ್ನು ಕಿಲೊಕಿಲೊರಿಗಳಲ್ಲಿ ಅಳೆಯುವುದು ವಾಡಿಕೆ. ಭೂಮಿಯಲ್ಲಿ ಬೆಳೆಯುವ ಆಹಾರ ಪದಾರ್ಥ ಪೂರ್ತಿಯಾಗಿ ಮಾನವ ಸೇವನೆಗೆ ಒದಗುವುದಿಲ್ಲ ಎಂಬುದು ಸ್ಪಷ್ಟ. ಒಂದು ಸ್ಥೂಲ ಅಂದಾಜಿನ ಪ್ರಕಾರ ನೆಲದಲ್ಲಿ ಮತ್ತು ಕಡಲಲ್ಲಿ ಬೆಳೆಯುವ ಆಹಾರದಿಂದ ಉತ್ಪಾದನೆಯಾಗುವ ಕಿಲೊಕಿಲೊರಿಗಳ ಪೈಕಿ ತಲಾ ಹದಿನೈದನೆಯ ಒಂದು ಅಂಶ ಮಾನವಾಹಾರವಾಗಿ ೧೯೬೭ರ ವೇಳೆಗೆ ವಿನಿಯೋಗವಾಗುತ್ತಿತ್ತು. ಇಂದು (೧೯೮೭) ಬದುಕಿರುವ ಪ್ರತಿಯೊಬ್ಬನಿಗೂ ಯುಕ್ತಾಹಾರ ಒದಗಿಸಲೇಬೇಕಾದಲ್ಲಿ ಈ ಮೇಲಿನ ಶೇಕಡಾ ಸಂಖ್ಯೆಗಳನ್ನು ಇಮ್ಮಡಿಗೊಳಿಸಬೇಕಾದೀತು. ಇನ್ನು ಜನಸಂಖ್ಯೆ ದ್ವಿಗುಣಿತವಾದಂತೆ ಇದನ್ನು ಮತ್ತೆ ಏರಿಸಬೇಕಾಗುತ್ತದೆ. ಅಲ್ಲಿಗೆ ೧೯೯೦ರ ಸುಮಾರಿಗೆ, ಖಂಡಿತವಾಗಿಯೂ ೨೦೦೦ದ ವೇಳೆಗೆ, ಭೂಮಿಯಲ್ಲಿಯ ಸಮಸ್ತ ಸಸ್ಯಗಳೂ ಸೆರೆಹಿಡಿಯಲ್ಪಟ್ಟಿರುವ ಸೌರಶಕ್ತಿಯ ಶೇಕಡಾ ೮೦ನ್ನು ಮಾನವ ಕೇವಲ ಬದುಕಿರಲು ಬಳಸಬೇಕಾದೀತೆಂದು ತೋರುತ್ತದೆ. ಅಂಕೆಅಂಶಗಳು ಹೇಳುವ ಕತೆ ನಿಜಕ್ಕೂ ಭೀಕರವಾಗಿದೆ.

೨೦೦೦ದ ಅರು(ಮರ)ಣೋದಯ ಸಮೀಪವಾದಂತೆ ಮಾನವನ ಸಮಸ್ತ ಚಟುವಟಿಕೆಗಳನ್ನೂ ಏರುತ್ತಿರುವ ಬಾಯಿಗಳನ್ನು ಸಮಾಧಾನ ಸ್ಥಿತಿಯಲ್ಲಿಡುವುದರ ಕಡೆಗೇ ಕೇಂದ್ರೀಕರಿಸಬೇಕಾದೀತು. ಇದಕ್ಕಾಗಿ ಹೆಚ್ಚು ನೆಲ, ಹೆಚ್ಚು ಬೆಳೆ, (ಮತ್ತು ಅನಿವಾರ್ಯವಾಗಿ) ಹೆಚ್ಚು ಜನ ಎಂಬ ಸೂತ್ರಪ್ರಕಾರ ಹೋರಾಡಬೇಕಾದೀತು. ಇಂಥ ಒಂದು ಯೋಜನೆಯಿಂದ ನಿಸರ್ಗದ ಸಮತೋಲಕ್ಕೆ ಅನೇಕ ರೀತಿಗಳಲ್ಲಿ ಭಂಗ ತಟ್ಟುತ್ತದೆ.

ಮೊದಲನೆಯದಾಗಿ ಜನರ ವಸತಿ, ಸಂಚಾರ, ವಿಹಾರ ಮೊದಲಾದವುಗಳಿಗಾಗಿ ಹೆಚ್ಚು ಹೆಚ್ಚು ನೆಲವನ್ನು ಆಕ್ರಮಿಸಬೇಕಾಗುತ್ತದೆ. ಎರಡನೆಯದಾಗಿ ಆಹಾರೋತ್ಪಾದನೆಗಾಗಿ ಹೆಚ್ಚು ಹೆಚ್ಚು ನೆಲವನ್ನು ನಿರ್ದಿಷ್ಟ ಕೃಷಿಗೆಂದೇ ಮೀಸಲಿಡಬೇಕಾಗುತ್ತದೆ. ಇವೆರಡೂ ಒಟ್ಟಾಗಿ ನೈಸರ್ಗಿಕ ಪರಿಸ್ಥಿತಿಗಳ ಮೇಲೆ—ಅರಣ್ಯ ಸಂಪತ್ತು, ಸಸ್ಯ ಪ್ರಾಣಿಗಳು, ಬೆಟ್ಟ, ಕಣಿವೆ, ಕೆರೆ, ತೊರೆ, ಕಡಲು, ವಾಯುಮಂಡಲ—ದುಷ್ಪರಿಣಾಮ ಬೀರುತ್ತವೆ. ಮಾನವನ ಉಳಿವಿಗೆ ಅವಶ್ಯವಾದ ಶುದ್ಧ ವಾಯು ಮತ್ತು ಶುದ್ಧ ಜಲ ಮಲಿನಗೊಂಡು ಬದುಕು ಅಸಹನೀಯವಾಗುತ್ತದೆ.

ನಿಸರ್ಗದ ಸಮತೋಲವೆಂಬುದೊಂದು ಗತ್ಯಾತ್ಮಕ ಸಮತೋಲ (ಡೈನಮಿಕಲ್ ಈಕ್ವಿಲಿಬ್ರಿಯಮ್). ಅಸಂಖ್ಯಾತ ಸಸ್ಯ ಪ್ರಾಣಿಬಗೆಗಳು ನೆಲ ಜಲ ವಾಯುವಿನ ವಿವಿಧಸಂಪನ್ಮೂಲಗಳನ್ನು ಮಾತ್ರವಲ್ಲ ಪರಸ್ಪರವಾಗಿಯೂ ಅಲಂಬಿಸಿಕೊಂಡು ಈ ಸಮತೋಲವೇರ್ಪಟ್ಟಿದೆ. ಯಾವುದೇ ಕಾಡನ್ನು ಸ್ಥೂಲವಾಗಿ ನೋಡಿದಾಗಲೂ ಈ ಸಂಗತಿ ವೇದ್ಯವಾಗುತ್ತದೆ. (ಆದರೆ ಈಗ ಕಾಡೆಲ್ಲಿ!) ಅಲ್ಲಿಯ ಸಸ್ಯ ಪ್ರಾಣಿ ವೈವಿಧ್ಯವೇ ಅದರ ತ್ರಾಣ, ವಿಶೇಷೀಕರಣ ಅಥವಾ ಏಕತಾನತೆ ಅಲ್ಲ. (ಕೃಷಿ ಮಾಡಿದ ಕಾಫಿ,

ಚಹಾ ಯಾ ತೆಂಗು ತೋಟ ನೋಡಿ—ಏಕತಾನತೆಯೇ ಇದರ ವೈಶಿಷ್ಟ್ಯ.) ಕೀಟ ಬಾಧೆಯಾಗಲೀ ಬೂಷ್ಟುರೋಗವಾಗಲೀ ಸಾಂಕ್ರಾಮಿಕ ಪಿಡುಗಾಗಲೀ ಕಾಡಿಗೆ ಸಾಧಾರಣವಾಗಿ ತಾಗದು. ಒಂದು ಬಗೆಯ ಜೀವಿಗೆ ತಾಗಿದ ರೋಗ ಕೇವಲ ಅದನ್ನು ನಿರ್ನಾಮ ಮಾಡೀತೇ ವಿನಾ ಸಮಗ್ರ ಅರಣ್ಯವನ್ನಲ್ಲ. ಪ್ರತಿಯೊಂದು ಜೀವಿಗೂ ಸಾಧಾರಣವಾಗಿ ವೈರಿಜೀವಿಯೂ ಒಂದಿರುವುದು ವಾಡಿಕೆ. ಹೀಗಾಗಿ ಯಾವುದೇ ಜೀವಿ—ಸಸ್ಯವಾಗಲೀ ಪ್ರಾಣಿ ಆಗಲೀ—ಕಾಡಿನ ಒಡೆಯ ಆಗಿ ಇತರ ಜೀವಿಗಳ ನಾಶಕ್ಕೆ ಕಾರಣವಾಗುವುದು ಅಸಾಧ್ಯ.

ನಾಗರಿಕತೆಯ ಪರಿಧಿಯನ್ನು ವಿಸ್ತರಿಸುವಾಗ, ಬೇಸಾಯವನ್ನು ಸರ್ವವ್ಯಾಪಿಯಾಗಿಸುವಾಗ ಇಲ್ಲವೇ ಬೃಹಜ್ಜಲಾಶಯಗಳನ್ನು ನಿರ್ಮಿಸಿ ಹುಚ್ಚು ಹೊಳೆಗಳನ್ನು ಪಳಗಿಸುವಾಗ ಸಹಜವಾಗಿಯೇ ಮಾನವ ನಿಸರ್ಗದ ಸಮತೋಲವನ್ನು ಕೆಡಿಸಬೇಕಾಗುತ್ತದೆ. ಮಲೇರಿಯವೋ ಸಿಡುಬೋ ಬೇರೆ ಯಾವುದೇ ಪಿಡುಗೋ ನಗರಗಳ ಮೇಲೆ ದಾಳಿ ಇಟ್ಟಾಗ ಮಾನವ ಸುಲಭವಾಗಿ ಅದಕ್ಕೆ ಬಲಿ ಆಗುವುದು ಇದರ ಒಂದು ಲಕ್ಷಣ. ಗಾವುದ ಗಾವುದ ಹಬ್ಬಿ ನಳನಳಿಸುತ್ತಿರುವ ಪೈರು ಬೈಗು ಬೆಳಗಾಗುವುದರೊಳಗೆ ಮಿಡತೆ ದಂಡುಗಳಿಗೆ ಬಲಿ ಆಗಿ ಬೋಳು ಬಯಲಾಗುವುದು ಇನ್ನೊಂದು ಲಕ್ಷಣ. ಹವಾ ವೈಪರೀತ್ಯಗಳು, ಅತಿವೃಷ್ಟಿ ಅನಾವೃಷ್ಟಿ ಅನಾಹುತಗಳು, ಪ್ರವಾಹದಿಂದಾಗುವ ಸರ್ವನಾಶ ಒಂದೊಂದರ ಕಾರಣವನ್ನೂ ನಿಸರ್ಗದ ಪ್ರಕೋಪಕ್ಕೆ ಸಂಬಂಧಿಸಿ ತೋರಿಸುವುದು ಕಷ್ಟ ಸಾಹಸವೇನೂ ಅಲ್ಲ. ಹೀಗಾಗಿ ಜನಾರೋಗ್ಯ ಸಂವರ್ಧನೆ, ಪೈರು ಫಸಲುಗಳ ಸಂರಕ್ಷಣೆ, ಪ್ರವಾಹನಿಯಂತ್ರಣ ಮುಂತಾದವು ಸರ್ಕಾರಗಳ ಕೇಂದ್ರೀಯ ಹೊಣೆಗಳಾಗುತ್ತವೆ. ಇವನ್ನು ಕ್ಷಿಪ್ರವಾಗಿಯೂ ಸಮರ್ಪಕವಾಗಿಯೂ ನಿರ್ವಹಿಸಲು ಒದಗುವ ಪರಮೋತ್ಕೃಷ್ಟ ಆಯುಧ ತಂತ್ರವಿದ್ಯೆ (ಟೆಕ್ನಾಲಜಿ). ಎಂದೇ ಇಂದು ತಂತ್ರವಿದ್ಯೆ ಹಾಗೂ ಅದರ ಉತ್ಪನ್ನಗಳು ಇಷ್ಟೊಂದು ಪ್ರಪಂಚವ್ಯಾಪ್ತಿ ಗಳಿಸಿರುವುದಾಗಿದೆ. ಇವು ಮಾನವನಿಗೆ ಪರಿಸರದ ಒಡೆಯನೇ ತಾನು, ಪರಿಸರವನ್ನು (ನಿಸರ್ಗವನ್ನು) ಸ್ವೇಚ್ಛಾನುಸಾರ ವರ್ತಿಸಲು ವಿಧಿಸಬಲ್ಲ ನವ ಬ್ರಹ್ಮನೇ ತಾನು ಎಂಬ ಭ್ರಾಂತಿಜನ್ಯ ಭಾವನೆಯನ್ನು ಹುಟ್ಟಿಸಿರುವುದಾಗಿದೆ.

ವಿಜ್ಞಾನ ಸಂಶೋಧಿಸಿ ಹೊರಗೆಡಹುವ ನಿಸರ್ಗನಿಯಮಗಳನ್ನೂ ಸೂತ್ರಗಳನ್ನೂ ಆಧರಿಸಿ ತಂತ್ರವಿದ್ಯೆ ವಿಕಸಿಸುತ್ತದೆ. ಆಧುನಿಕ ತಂತ್ರವಿದ್ಯೆ ಮುಖ್ಯವಾಗಿ ಪಾಶ್ಚಾತ್ಯ ನಾಗರಿಕತೆಯ ಕೊಡುಗೆ. ಅಲ್ಲಾದರೂ ಅಮೆರಿಕ ತಂತ್ರವಿದ್ಯಾಭಿವರ್ಧನೆಯ ಮುಂಚೂಣಿಯಲ್ಲಿದೆ. ಅಮೆರಿಕಕ್ಕೆ ಈ ಧುರೀಣತ್ವ ಹೇಗೆ ಪ್ರಾಪ್ತವಾಯಿತೆಂಬುದನ್ನು ಐತಿಹಾಸಿಕವಾಗಿ ಪರಿಶೀಲಿಸಿದರೆ ಕೆಲವು ಮುಖ್ಯ ಸಂಗತಿಗಳು ವ್ಯಕ್ತವಾಗುತ್ತವೆ.

ವಿದ್ಯೆಯಲ್ಲಿ ನುರಿತ ಕಾರ್ಯಶೀಲರು ಗ್ರೇಟ್ ಬ್ರಿಟನ್ ಮತ್ತು ಯೂರೋಪಿನಿಂದ ಅಮೆರಿಕದ ಹೊಸ ನೆಲಕ್ಕೆ ವಲಸೆಹೋಗಿ ತಳ ಊರಿದರು. ಕಡಿಮೆ ಜನ ಅಧಿಕ ವಿಸ್ತಾರದ ಕನ್ನೆನೆಲವನ್ನು ಕಬಳಿಸಿದರು. ಹೀಗೆ ಅಮೆರಿಕದ ವಿಶಾಲ ಫಲವತ್ತು ದೇಶ ಆಧುನಿಕ ವಿಜ್ಞಾನ ಹಾಗೂ ತಂತ್ರವಿದ್ಯೆಯ ಪ್ರಯೋಗಗಳಿಗೂ ಅಭಿವರ್ಧನೆಗೂ ಸುಲಭವಾಗಿ ಒದಗಿತು. ಜನಸಂಖ್ಯೆಯ ತಡೆ ಇಲ್ಲದ ಏರಿಕೆಯಿಂದ ಒದಗಬಹುದಾದ ಅನಾಹುತ

(೧೨೯ನೇ ಪುಟ ನೋಡಿ)


ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಯುದ್ಧ ಮತ್ತು ಶಾಂತಿ

ಅನುವಾದ

ಪ್ರೊ॥ ದೇಜಗೌ



ಕೆಲವರು ಹೆಲೆನ್ನಳಿಗೆ ಹೇಳಲಿಲ್ಲ. ಕೆಲವರಂತು ಅವಳ ತನ್ಮಯತೆಗೆ ಭಂಗವಾಗಬಾರದೆಂದು, ಕ್ಷಣಮಾತ್ರ ಅವಳ ಬಳಿ ಸುಳಿದು, ಅವಳು ತಲೆಯೆತ್ತುವುದಕ್ಕೆ ಮುಂಚೆಯೇ ಪ್ರಗಮಿಸುತ್ತಿದ್ದರು. ದಿವಾನಖಾನೆಯನ್ನು ಬಿಡುವಾಗ ರಾಜನೀತಿ ನಿಪುಣನ ಮುಖದ ಮೇಲೆ ದುಃಖಸಿಕ್ತ ಮೌನ ಅಚ್ಚೊತ್ತಿದಂತಿತ್ತು. ಅವನು ಪಿಯರಿಯ ಸುಖಮಯ ಜೀವನದೊಂದಿಗೆ ತನ್ನ ರಾಯಭಾರಿ ಹುದ್ದೆಯ ಹಿರಿಮೆಯನ್ನು ಹೋಲಿಸಿಕೊಂಡನು. ಅವನ ಕಾಲು ಹೇಗಿದೆಯೆಂದು ತನ್ನ ಹೆಂಡತಿ ವಿಚಾರಿಸಲಾಗಿ ವಯಸ್ಕ ಸೇನಾನಿ ಅವಳ ಕಡೆಗೆ ಗುರುಗುಟ್ಟಿದನು. 'ಇವಳೊಬ್ಬಳು ಮುದಿಗೂಬೆ? ಐವತ್ತು ವರ್ಷವಾದಾಗಲೂ ರಾಜಕುಮಾರಿ ಹೆಲೆನ್ ಈಗಿನಂತೆಯೇ ರೂಪವತಿಯಾಗಿರುತ್ತಾಳೆ' ಎಂದವನು ಮನಸ್ಸಿನಲ್ಲಿಯೇ ಲೊಚಗುಟ್ಟಿದನು.

'ನಾನೀಗ ನಿಮಗೆ ಅಭಿನಂದನೆ ಸಲ್ಲಿಸಬಹುದೆಂದು ತೋರುತ್ತದೆ. ತಲೆ ನೋವಿಲ್ಲದಿದ್ದರೆ ಹೆಚ್ಚು ಹೊತ್ತು ನಿಲ್ಲುತ್ತಿದ್ದೆ' ಎಂದು ಅನ್ನಾ ಹಿರಿಯ ರಾಜಕುಮಾರಿಗೆ ಮುತ್ತೊತ್ತಿದಳು.

ರಾಜಕುಮಾರಿ ಉತ್ತರಿಸಲಿಲ್ಲ. ಮಗಳ ಸುಖ ಜೀವನದ ಚಿಂತನೆಯೆ ಅಸೂಯೆಯಾಗಿ ಪರಿಣಮಿಸಿ ಅವಳನ್ನು ಮುಕ್ಕುತ್ತಿತ್ತು.

ಅತಿಥಿಗಳೆಲ್ಲ ಬೀಳ್ಕೊಳ್ಳುತ್ತಿದ್ದಾಗ ಪಿಯರಿಯೊಬ್ಬನೇ ಹೆಲೆನ್ನಳ ಜತೆಯಲ್ಲಿ ಚಿಕ್ಕ ದಿವಾನಖಾನೆಯಲ್ಲಿ ಬಹುಹೊತ್ತು ಕುಳಿತಿದ್ದನು. ಕಳೆದ ಆರು ವಾರಗಳ ಅವಧಿಯಲ್ಲಿ ಅನೇಕ ವೇಳೆ ಅವನೊಬ್ಬನೇ ಅವಳೊಡನಿರುತ್ತಿದ್ದನು. ಆದರೂ ಪ್ರೇಮದ ವಿಷಯವಾಗಿ ಒಂದು ಸೊಲ್ಲೂ ಎತ್ತಿರಲಿಲ್ಲ. ಈಗ ಸುಮ್ಮನಿರುವಂತಿರಲಿಲ್ಲ. ಆದರೆ ಅಂತಿಮ ಪ್ರಯತ್ನಕ್ಕಾಗಿ ಮನಸ್ಸು ಗಟ್ಟಿಮಾಡಿಕೊಳ್ಳಲಾರದೆ ಅವನು ಹಿಂಸೆಗೊಳಗಾಗಿದ್ದನು. ಅವನಿಗೆ ನಾಚಿಕೆಯಾಯಿತು. ತಾನು ಹೆಲೆನ್ನಳ ಪಕ್ಕದಲ್ಲಿದ್ದುಕೊಂಡು ಬೇರೊಬ್ಬರ ಜಾಗವನ್ನು ಅಪಹರಿಸಿಕೊಂಡಿದ್ದಂತೆ ಅವನಿಗೆ ಭಾಸವಾಯಿತು. 'ಈ ಸುಖ ನಿನ್ನ ಹಣೆಯಲ್ಲಿ ಬರೆದಿಲ್ಲ. ನಿನ್ನಲ್ಲಿದ್ದದ್ದು ಯಾರಲ್ಲಿಲ್ಲವೋ ಅವರಿಗೆ ಈ ಸುಖ ಮೀಸಲು' ಎಂದು ಯಾವುದೋ ಅಂತರ್ವಾಣಿ ಅವನ ಕಿವಿಯಲ್ಲಿ ಪಿಸುಗುಟ್ಟಿದಂತಾಯಿತು.

ಆದರೂ ಅವನು ಬಹುಹೊತ್ತು ಬಾಯಿ ಹೊಲಿದುಕೊಂಡಿರುವಂತಿರಲಿಲ್ಲ. ಸತ್ಕಾರ ಕೂಟ ತೃಪ್ತಿಕರವಾಗಿತ್ತೆ ಎಂದವನು ಮಾತು ತೆಗೆದನು. ಹಿಂದಿನ ನಾಮಕರಣೋತ್ಸವಗಳು ಅಂದಿನ ನಾಮಕರಣೋತ್ಸವದಷ್ಟು ಆನಂದದಾಯಕವಾಗಿರಲಿಲ್ಲವೆಂದು ಅವಳು ಎಂದಿನಂತೆ ಸರಳ ರೀತಿಯಲ್ಲಿ ಉತ್ತರಿಸಿದಳು.

ಸಮೀಪದ ಬಂಧುಗಳಲ್ಲಿ ಕೆಲವರು ದೊಡ್ಡ ದಿವಾನಖಾನೆಯಲ್ಲಿ ಕುಳಿತು ಸಂಭಾಷಣೆ ನಡಸುತ್ತಿದ್ದರು. ವಸಿಲಿ ಸಿದಾನವಾಗಿ ಹೆಜ್ಜೆ ಇಡುತ್ತ ಪಿಯರಿಯಿದ್ದಲ್ಲಿಗೆ ಬಂದನು. ಪಿಯರಿ ಮೇಲೆದ್ದು, ಹೊತ್ತಾಯಿತೆಂದು ನುಡಿದನು. ಅವನು ಹಾಗೆ ಹೇಳಿದ್ದು ಸೌಜನ್ಯವಲ್ಲವೆಂಬಂತೆ ವಸಿಲಿ ಅವನ ಕಡೆಗೆ ಗಂಭೀರ ದೃಷ್ಟಿ ಬೀರಿದನು. ಮರುಕ್ಷಣವೇ ಅವನ ಕಠೋರ ಭಾವ ಬದಲಾಯಿತು. ಪಿಯರಿಯ ಕೈ ಹಿಡಿದು ಜಗ್ಗಿ, ಕೆಳಗೆ ಕೂರಿಸಿ, ಅವನನ್ನು ವಾತ್ಸಲ್ಯದಿಂದ ನೋಡಿದನು.

'ಏನು ಸಮಾಚಾರ? ಲೀಲ್ಯ' ಎಂದವನು ಒಡನೆಯೇ ಮಗಳ ಕಡೆ ನೋಡಿದನು. ಅವನ ಆ ಸಂಬೋಧನೆಯಲ್ಲಿ ಶೈಶವದಿಂದ ಮಕ್ಕಳನ್ನು ಬಹುವಾಗಿ ಅಂಟಿಸಿಕೊಂಡು ಮುದ್ದಿಸುವ ತಂದೆತಾಯಿಯರ ವಾತ್ಸಲ್ಯವಿತ್ತು. ಆದರೆ ವಸಿಲಿಯ ವಾತ್ಸಲ್ಯ ಇತರ ತಂದೆತಾಯಿಯರ ಅನುಕರಣೆಯಿಂದ ಪಡೆದದ್ದಾಗಿತ್ತು.

ಅವನು ಮತ್ತೆ ಪಿಯರಿಯ ಕಡೆಗೆ ತಿರುಗಿದನು. 'ಸರ್‌ಜೇಯಿಯ್ ಕುಜ್‌ವಿಚ್.... ಎಲ್ಲ ದಿಕ್ಕುಗಳಿಂದ....' ಎಂದವನು ತನ್ನ ಸೊಂಟಕವಚದ ಮೇಲಿನ ಗುಂಡಿಯನ್ನು ಕಳಚುತ್ತ ನುಡಿದನು.

ಪಿಯರಿಗೆ ನಗುಬಂತು. ವಸಿಲಿಗೆ ಬೇಕಾದ್ದು ಸರ್‌ಜೇಯಿಯ್‌ಕುಜ್‌ವಿಚ್‌ನ ಕತೆಯಲ್ಲವೆಂಬ ಸಂಗತಿ ತನಗೆ ತಿಳಿದಿದೆಯೆಂಬ ಭಾವನೆ ಅವನ ಆ ನಗುವಿನಲ್ಲಿ ಅಭಿವ್ಯಕ್ತ ವಾಗುತ್ತಿತ್ತು. ಪಿಯರಿಯ ಮನಸ್ಸು ವಸಿಲಿಗೂ ಅರ್ಥವಾಯಿತು. ತಕ್ಷಣ ಅವನು ಏನನ್ನೋ ಗೊಣಗಿಕೊಂಡು ಹೊರಟುಹೋದನು. ರಾಜಕುಮಾರನ ಮನಸ್ಸು ಕ್ಷೋಭೆ ಗೊಂಡಿರಬೇಕೆಂದು ಪಿಯರಿಗನ್ನಿಸಿತು. ಲೋಕಾನುಭವವುಳ್ಳ ಆ ಮುದುಕನ ಚಿತ್ತ ಕ್ಷೋಭೆ ಪಿಯರಿಯ ಹೃದಯವನ್ನು ತಾಕಿತು. ಅವನು ಹೆಲೆನ್ನಳ ಕಡೆ ಕಣ್ಣು ಹಾಯಿಸಿದನು. ಅವಳೂ ತಬ್ಬಿಬ್ಬಾದಂತೆ ತೋರಿದಳು. 'ಇಷ್ಟಕ್ಕೆಲ್ಲ ನೀನೇ ಹೊಣೆಗಾರ' ಎಂಬುದಾಗಿ ಅವಳ ಕಣ್ಣು ಸಾರುತ್ತಿದ್ದಂತೆ ಅವನಿಗೆ ಭಾಸವಾಯಿತು.

'ನಾನೀಗ ಮುಂದಿನ ಕ್ರಮ ಜರುಗಿಸಬೇಕಾಗಿದೆ. ಆದರೆ ನನ್ನಿಂದ ಸಾಧ್ಯವಾಗು ತ್ತಿಲ್ಲ, ಸಾಧ್ಯವಾಗದು' ಎಂದವನು ನಿಡುಸುಯ್ದನು. ಅಸಂಗತ ಸಂಗತಿಗಳ ಬಗ್ಗೆ, ಸರ್‌ಜೇಯಿಯ್‌ಕುಜ್‌ವಿಚ್‌ನ ಬಗ್ಗೆ ಅವನು ಮತ್ತೆ ಮಾತಾಡತೊಡಗಿದನು. ಅವನ ಕತೆಯನ್ನು ಸಾಂಗೋಪಾಂಗವಾಗಿ ಕೇಳಿರಲಿಲ್ಲವಾಗಿ, ಅದರ ಸಾರಾಂಶವೇನೆಂದು ಪ್ರಶ್ನಿ ಸಿದನು. ತಾನೂ ಸರಿಯಾಗಿ ಕೇಳಿಸಿಕೊಳ್ಳಲಿಲ್ಲವೆಂದು ಹೆಲೆನ್ ಮುಗುಳುನಗೆಯಿಂದಲೇ ಉತ್ತರಿಸಿದಳು.

ರಾಜಕುಮಾರ ವಸಿಲಿ ದಿವಾನಖಾನೆಗೆ ಹಿಂದಿರುಗಿದಾಗ, ಅವನ ಮಡದಿ ಮುದಿ ಮಹಿಳೆಯೊಡನೆ ಪಿಯರಿಯ ವಿಚಾರ ಕುರಿತು ತಗ್ಗಿದ ದನಿಯಲ್ಲಿ ಮಾತಾಡುತ್ತಿದ್ದಳು.

'ನಿಜ, ಇದೊಂದು ಒಳ್ಳೆಯ ಜೋಡಿ. ಆದರೆ ಸಖಿ, ಸುಖ ಮುಖ್ಯ.'

'ಮದುವೆಗಳು ಸ್ವರ್ಗದಲ್ಲಿ ಜರುಗುತ್ತವೆ' ಎಂದು ಮುದಿಮಹಿಳೆ ನುಡಿದಳು.

ಮಹಿಳೆಯರ ಮಾತು ಕೇಳಿಸಿಕೊಳ್ಳದವನಂತೆ ವಸಿಲಿ ಮುಂದೆ ನಡೆದು, ಕೋಣೆಯ ದೂರದ ಮೂಲೆಯಲ್ಲಿದ್ದ ಮೆತ್ತೆಯಮೇಲೆ ಮಂಡಿಸಿದನು. ಅವನು ಕಣ್ಣು ಮುಚ್ಚಿ ತೂಕಡಿಸುವಂತೆ ಕಂಡನು. ಅವನ ತಲೆ ಮುಂದೆ ಕುಸಿಯಲಾಗಿ ಎಚ್ಚರ ಗೊಂಡನು.

'ಅಲೀನ್', ಅವರೇನು ಮಾಡುತ್ತಿದ್ದಾರೆ, ನೋಡಿ ಬಾ' ಎಂದವನು ಹೆಂಡತಿ ಯನ್ನು ಕರೆದು ಹೇಳಿದನು.

ರಾಜಕುಮಾರಿ ಗಂಭೀರ ಹಾಗೂ ಉದಾಸೀನದ ರೀತಿಯಿಂದ ಚಿಕ್ಕ ದಿವಾನ ಖಾನೆಯತ್ತ ನಡೆದು, ಬಾಗಿಲಲ್ಲಿ ಇಣುಕಿ ನೋಡಿದಳು. ಹಿಂದಿನಂತೆಯೇ ಪಿಯರಿ ಮತ್ತು ಹೆಲೆನ್ ಮಾತಿನಲ್ಲಿ ಮಗ್ನರಾಗಿದ್ದರು.

'ಇನ್ನೂ ಹಾಗೆಯೇ ಇದ್ದಾರೆ' ಎಂದು ಮಡದಿ ಗಂಡನೊಡನೆ ನುಡಿದಳು.

ವಸಿಲಿಯ ಹುಬ್ಬು ಗಂಟಿಕ್ಕಿತು, ಮೂತಿ ತಿರುಚಿತು, ಕೆನ್ನೆ ಕಂಪಿಸಿದುವು, ಅವನಿಗೆ ಮಾತ್ರ ವಿಶಿಷ್ಟವಾದ ಅಹಿತಕರ ರೂಕ್ಷತೆ ಅವನ ಮುಖದಮೇಲೆ ಪಸರಿಸಿತು. ಕೈಕಾಲುಗಳನ್ನೊದರಿ, ಮೇಲೆದ್ದು, ತಲೆಯನ್ನು ಹಿಂದಕ್ಕೊಲೆದು, ದಿಟ್ಟ ಹೆಜ್ಜೆಗಳನ್ನಿಡುತ್ತ, ಚಿಕ್ಕ ದಿವಾನಖಾನೆಯನ್ನು ಪ್ರವೇಶಿಸಿದನು. ಬೇಗ ಬೇಗನೆ ಪಿಯರಿಯ ಬಳಿ ಹೋದನು. ಹಿಂದೆಂದು ಕಾಣದ ಅಮಿತೋತ್ಸಾಹದ ಅವನ ಮುಖವನ್ನು ಕಂಡ ಕೂಡಲೇ ಪಿಯರಿ ಗಾಬರಿಯಿಂದ ಮೇಲೆದ್ದನು.

'ಎಲ್ಲ ದೇವರ ಕೃಪೆ. ನನ್ನ ಮಡದಿ ಸಮಸ್ತ ವಿಷಯವನ್ನು ತಿಳಿಸಿದ್ದಾಳೆ' ಎಂದು ವಸಿಲಿ ನುಡಿದು, ಒಂದು ತೋಳನ್ನು ಪಿಯರಿಯ ಸುತ್ತ, ಮತ್ತೊಂದನ್ನು ಮಗಳ ಸುತ್ತ ಹಾಕಿದನು. 'ಬಾ ವತ್ಸ. ಬಾ ಮಗಳೆ. ನನಗೆ ಅತೀವ ಆನಂದವಾಗಿದೆ' ಎನ್ನುವಾಗ ಅವನ ಸ್ವರ ಕಂಪಿಸಿತು. 'ನಿನ್ನ ತಂದೆಯಮೇಲೆ ನನಗೆ ತುಂಬ ಆದರ....ಇವಳು ನಿನಗೆ ಒಳ್ಳೆಯ ಮಡದಿಯಾಗುತ್ತಾಳೆ....ದೇವರು ನಿಮ್ಮನ್ನು ಹರಸಲಿ!....'

ಅವನು ಮಗಳನ್ನಾಲಿಂಗಿಸಿಕೊಂಡನು. ಅನಂತರ ಪಿಯರಿಯನ್ನಪ್ಪಿಕೊಂಡು, ದುರ್ವಾಸನೆಯ ಬಾಯಿಂದ ಅವನನ್ನು ಚುಂಬಿಸಿದನು. ಕಣ್ಣೀರಿಂದ ಅವನ ಕೆನ್ನೆಗಳು ತೊಯ್ದುವು.

'ಬಾ ಇಲ್ಲಿ, ರಾಜಕುಮಾರಿ' ಎಂದು ಕೂಗಿದನು.

ಅವಳು ಒಳಗೆ ಪ್ರವೇಶಿಸುತ್ತಿದ್ದಂತೆಯೇ ರೋದಿಸ ತೊಡಗಿದಳು. ಮುದಿ ಮಹಿಳೆಯೂ ತನ್ನ ಕರವಸ್ತ್ರವನ್ನು ಬಳಸುತ್ತಿದ್ದಳು. ಹೆಲೆನ್ ಪಿಯರಿಗೆ ಮುತ್ತಿಟ್ಟಳು. ಅವನು ಹೆಲೆನ್ನಳ ಕೈಗಳನ್ನು ಹಲವು ಸಲ ಚುಂಬಿಸಿದನು. ಸ್ವಲ್ಪ ಹೊತ್ತಿನನಂತರ ಅವರಿಬ್ಬರೇ ದಿವಾನಖಾನೆಯಲ್ಲುಳಿದರು.

'ಇದೆಲ್ಲ ಹೀಗೆಯೇ ಆಗಬೇಕಿತ್ತು. ಬೇರೆ ದಾರಿಯೇ ಇಲ್ಲ. ಇದು ಒಳ್ಳೆಯದೋ ಕೆಟ್ಟದ್ದೋ ಎಂದು ವಿಚಾರಿಸುವುದೇ ತಪ್ಪು. ಸಂಶಯ ಪಿಶಾಚಿಯ ಹಿಂಸೆಯಿಂದ ಪಾರಾಗಿ, ಒಂದು ನಿರ್ಧಾರಕ್ಕೆ ಬಂದದ್ದರಿಂದ ಒಳ್ಳೆಯದೇ ಆಯಿತು.' ಎಂದಂದುಕೊಂಡ ಪಿಯರಿ ಮೌನದಿಂದ ತನ್ನ ಪ್ರೇಯಸಿಯ ಕೈಹಿಡಿದುಕೊಂಡು, ಏದಿಕೆಯೊಡನೆ ಉಬ್ಬಿತಗ್ಗುತ್ತಿದ್ದ ಅವಳ ಸುಂದರ ಪೀನ ವಕ್ಷಗಳನ್ನು ನೋಡುತ್ತಿದ್ದನು.

'ಹೆಲೆನ್' ಎಂದವನು ಗಟ್ಟಿಯಾಗಿ ಕೂಗಿ, ನೀರವವಾದನು.

'ಅಂಥ ಸಂದರ್ಭದಲ್ಲಿ ಏನಾದರೂ ಹೊಸ ಮಾತು ಹೇಳಬೇಕಲ್ಲವೆ?' ಎಂದವನು ಯೋಚಿಸಿದನು. 'ಇತರ ಜನ ಏನು ಹೇಳುತ್ತಾರೆ' ಎಂದು ನೆನೆಸಿಕೊಳ್ಳಲು ಪ್ರಯತ್ನಿಸಿದನು. ಅವನು ಅವಳ ಮುಖವನ್ನೆ ದಿಟ್ಟಿಸಿದನು. ಅವಳು ಹತ್ತಿರ ಬಂದಳು. ಅವಳ ಮುಖ ಕಳೆಯೇರಿತು.

'ಓ, ಅವುಗಳನ್ನು ತೆಗೆಯಿರಿ....ಅವನ್ನು....' ಎಂದವಳು ಅವನ ಚಷ್ಮಗಳ ಕಡೆಗೆ ಕೈತೋರಿದಳು.

ಪಿಯರಿ ಅವುಗಳನ್ನು ತೆಗೆದನು. ಕನ್ನಡಕಗಳನ್ನು ತೆಗೆದಾಗ ದೃಷ್ಟಿ ವಿಕಾರವಾಗಿಯೂ ವಿಚಿತ್ರವಾಗಿಯೂ ಕಾಣಿಸುವುದುಂಟಷ್ಟೆ. ಅವನು ಅವಳ ಕೈಮೇಲೆ ಬಾಗಿ

ಮುತ್ತೊತ್ತುವುದರಲ್ಲಿದ್ದನು. ಆದರೆ ಅಷ್ಟರಲ್ಲಿ ಅವಳು ಶೀಘ್ರವೂ ನಯಶೂನ್ಯವೂ ಆದ ತಲೆಯೊಲೆತದಿಂದ ಅವನ ತುಟಿಗಳನ್ನು ನಡುವೆಯೇ ತಡೆದು, ತನ್ನ ತುಟಿಯೊಡ್ಡಿದಳು. ಅವಸ್ಥಾಂತರಗೊಂಡ, ಅಹಿತಕರವಾದ ಭಾವೋದ್ರೇಕದಿಂದ ಕೂಡಿದ ಅವಳ ಮುಖ ಪಿಯರಿಯನ್ನು ಚಕಿತಗೊಳಿಸಿತು.

'ಎಲ್ಲ ಮುಗಿದಿದೆ. ಈಗೇನೂ ಮಾಡುವಂತಿಲ್ಲ. ಮೇಲಾಗಿ ಅವಳನ್ನು ಪ್ರೀತಿಸುತ್ತೇನೆ' ಎಂದು ಪಿಯರಿ ಎಣ್ಣಿದನು.

ಅಂಥ ಸಂದರ್ಭಗಳಲ್ಲಿ ಹೇಳಬೇಕಾದ ಮಾತುಗಳನ್ನು ನೆನೆದುಕೊಳ್ಳುತ್ತ 'ನಾನು ನಿನ್ನನ್ನು ಪ್ರೀತಿಸುತ್ತೇನೆ' ಎಂದನು. ಅವನ ಮಾತು ತುಂಬ ಸಪ್ಪೆಯಾಗಿದ್ದುವು. ಅವುಗಳ ಬಗ್ಗೆ ಅವನಿಗೇ ನಾಚಿಕೆಯಾಯಿತು.

ಆರು ವಾರಗಳನಂತರ ಅವನಿಗೆ ಮದುವೆಯಾಯಿತು. ಶ್ರೀಮಂತ ಬೆಜುಖೋವನ ಸುವಿಶಾಲವೂ ಸುಸಜ್ಜಿತವೂ ಆದ ಪೀಟರ್ಸ್‌ಬರ್ಗ್ ಸೌಧದಲ್ಲಿ ಅವನು ನೆಲೆನಿಂತನು. ಅನುಪಮ ರೂಪವತಿಯಾದ ಪತ್ನಿಯನ್ನೂ, ಹಲವು ಮಿಲಿಯ ಪ್ರಮಾಣದ ಸಂಪತ್ತನ್ನೂ ಪಡೆದ ಪಿಯರಿಯೇ ಪುಣ್ಯಶಾಲಿಯೆಂದು ಜನ ಕೊಂಡಾಡಿದರು.

ಅಧ್ಯಾಯ ೩

೧೮೦೫ರ ನವೆಂಬರ್ ತಿಂಗಳಲ್ಲಿ ರಾಜಕುಮಾರ ವಸಿಲಿ ಹಿರಿಯ ರಾಜಕುಮಾರ ನಿಕೊಲಾಸ್ ಬಲ್ಕೊನ್‌ಸ್ಕಿಗೊಂದು ಪತ್ರಬರೆದು, ತಾನೂ ತನ್ನ ಮಗನೂ ಅವರಲ್ಲಿಗೆ ಬರುವುದಾಗಿ ತಿಳಿಸಿದನು. 'ನಾನೀಗ ತನಿಖಾ ಪ್ರವಾಸವನ್ನು ಕೈಕೊಂಡಿದ್ದೇನೆ. ಹೆಚ್ಚಿಗೆ ಎಪ್ಪತ್ತು ಮೈಲಿ ಪಯಣಿಸಿದ್ದಾದರೆ ಏಕಕಾಲಕ್ಕೆ ನನ್ನ ಹಿತೈಷಿಗಳಾದ ನಿಮ್ಮನ್ನು ನೋಡಿದಂತಾಗುತ್ತದೆ. ಸೈನ್ಯ ಸೇರಲು ಹೋಗುತ್ತಿರುವ ನನ್ನ ಮಗ ಅನತೋಲನೂ ನನ್ನೊಂದಿಗೆ ಬರುತ್ತಾನೆ. ತನ್ನ ತಂದೆಯ ಮೇಲ್ಪಂಕ್ತಿಯನ್ನನುಸರಿಸಿ, ಖುದ್ದಾಗಿ ತಮಗೆ ವಿಶೇಷಗೌರವ ಸಲ್ಲಿಸಲು ಬರುತ್ತಿದ್ದಾನೆ. ನೀವವನಿಗೆ ಅನುಮತಿ ನೀಡುವಿರೆಂದು ನಂಬಿದ್ದೇನೆ.' ಇದು ಆ ಪತ್ರದ ಒಕ್ಕಣೆ.

ಆ ಸುದ್ದಿಯನ್ನು ಕೇಳಿದಕೂಡಲೇ 'ಹೀಗೆಲ್ಲ ಮೇರಿಯನ್ನು ಎಲ್ಲರ ಮುಂದೆ ಪ್ರದರ್ಶಿಸಬೇಕಾಗಿಲ್ಲ; ನಾವು ಮೇಲೆ ಬಿದ್ದು ಪ್ರಯತ್ನ ನಡಸಬೇಕಾಗಿಲ್ಲ, ವಿವಾಹಾರ್ಥಿಗಳು ತಮ್ಮಷ್ಟಕ್ಕೆ ತಾವೇ ನಮ್ಮೆಡೆಗೆ ಬರುತ್ತಿದ್ದಾರೆ' ಎಂದು ಕಿರಿಯರಾಜಕುಮಾರಿ ಎಚ್ಚರಿಕೆ ತಪ್ಪಿ ನುಡಿದಳು.

ನಿಕೊಲಾಸ್ ಹುಬ್ಬು ಗಂಟಿಕ್ಕಿಕೊಂಡನೇ ಹೊರತು, ಮಾತಾಡಲಿಲ್ಲ.

ಹದಿನೈದು ದಿನಗಳನಂತರ ಒಂದು ಸಂಜೆ ರಾಜಕುಮಾರ ವಸಿಲಿಯ ಸೇವಕರು ತಮ್ಮ ಯಜಮಾನರಿಗಿಂತ ಒಂದು ದಿನ ಮುಂಚೆ ಬಂದರು. ತಂದೆ ಮಕ್ಕಳು ಮಾರನೆಯ ದಿನ ಬಂದರು.

ವಸಿಲಿಯ ಶೀಲದ ಬಗ್ಗೆ ಮುದುಕ ಬಲ್ಕೊನ್‌ಸ್ಕಿಗೆ ಯಾವಾಗಲೂ ಒಳ್ಳೆಯ ಅಭಿಪ್ರಾಯವಿರಲಿಲ್ಲ. ಇತ್ತೀಚೆಗೆ, ಪಾಲ್ ಮತ್ತು ಅಲೆಕ್ಸಾಂಡರ ಆಳ್ವಿಕೆಯಲ್ಲಿ ಅವನ ಸ್ಥಾನಮಾನಗಳು ಮೇಲೇರಿ, ಅನೇಕ ಮರ್ಯಾದೆಗಳನ್ನು ಗಿಟ್ಟಿಸಿಕೊಂಡಿದ್ದುದರಿಂದ

ಮುದುಕ ಅವನ ಬಗ್ಗೆ ಅಸಮಾಧಾನದಿಂದಿದ್ದನು. ಈಗಂತು ಅವನ ಕಾಗದದಲ್ಲಿದ್ದ ಮತ್ತು ಕಿರಿಯ ರಾಜಕುಮಾರಿ ನೀಡಿದ ಸೂಚನೆಗಳಿಂದ, ಗಾಳಿ ಎತ್ತ ಬೀಸುತ್ತಿದೆಯೆಂಬುದನ್ನವನು ಅರಿತನು. ಇದರಿಂದಾಗಿ ಅವನ ಹೀನಾಭಿಪ್ರಾಯ ಜುಗುಪ್ಸಾವಹವಾದ ವೈರವಾಗಿ ಪರಿಣಮಿಸಿತು. ಅವನ ಹೆಸರು ಕಿವಿಯ ಮೇಲೆ ಬಿದ್ದೊಡನೆಯೇ ಮುದುಕ ಘೂಂಕರಿಸುತ್ತಿದ್ದನು. ವಸಿಲಿ ಬರುವ ದಿನವಂತು ಅವನು ಸಮಾಧಾನ ಕಳೆದುಕೊಂಡು, ರೇಗಾಡುತ್ತಿದ್ದನು. ವಸಿಲಿ ಬರಲಿದ್ದುದರಿಂದ ಅವನು ರೇಗಾಡುತ್ತಿದ್ದನೋ ಅಥವಾ ಮೊದಲೇ ತಲೆದೋರಿದ್ದ ರೇಗು ವಸಿಲಿಯ ಆಗಮನ ನಿರೀಕ್ಷೆಯಿಂದಾಗಿ ಉಲ್ಬಣಗೊಂಡಿತ್ತೋ ಹೇಳುವಂತಿರಲಿಲ್ಲ. ವರದಿಯೊಡನೆ ರಾಜಕುಮಾರನ ಬಳಿಗೆ ಹೋಗಬಾರದೆಂದು ಮುಂಜಾನೆಯೇ ಟಿಖಾನ್ ಶಿಲ್ಪಿಗೆ ಸಲಹೆ ನೀಡಿದ್ದನು.

'ಅವರು ಹೇಗೆ ನಡೆಯುತ್ತಿದ್ದಾರೆ ಗೊತ್ತೆ?' ಎಂದು ಟೀಖಾನ್ ರಾಜಕುಮಾರನ ಕಾಲುಸಪ್ಪಳದ ಕಡೆಗೆ ಶಿಲ್ಪಿಯ ಗಮನಸೆಳೆದನು. 'ಚಪ್ಪಟೆಯಾಗಿ ಹಿಮ್ಮಡಿಯೂರಿ ಹೆಜ್ಜೆ ಹಾಕುತ್ತಾನೆ....ಅದರ ಅರ್ಥ ನಮಗೆ ಗೊತ್ತಿದೆ'.

ಒಂಬತ್ತು ಗಂಟೆಯ ವೇಳೆಗೆ ರಾಜಕುಮಾರ ಮಕಮಲ್ಲು ಕೋಟನ್ನು ಕಪ್ಪುಬಣ್ಣದ ಕಾಲರ್ ಟೋಪಿಗಳನ್ನು ಧರಿಸಿ, ವಾಡಿಕೆಯಂತೆ ವಾಯು ವಿಹಾರಕ್ಕೆ ಹೊರಟನು. ಹಿಂದಿನ ದಿನ ಮಂಜು ಬಿದ್ದಿತ್ತು. ರಾಜಕುಮಾರ ಸಾಮಾನ್ಯವಾಗಿ ತಿರುಗಾಡುತ್ತಿದ್ದ ಕಾವುಮನೆಯ ದಾರಿಯನ್ನು ಗುಡಿಸಲಾಗಿತ್ತು. ಪೊರಕೆಯ ಗುರುತು ಮಂಜಿನಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದ್ದವು. ರಸ್ತೆಯ ಎರಡು ಬದಿಗಳಲ್ಲಿ ಮಂಜು ದಿಬ್ಬಗಳಿದ್ದುವು. ಅವುಗಳಲ್ಲೊಂದಕ್ಕೆ ಗೋರುಸಲಿಕೆ ಕಚ್ಚಿಕೊಂಡಿತ್ತು. ರಾಜಕುಮಾರ ಬದ್ಧಭ್ರುಕುಟಿಯಾಗಿ ಮೌನದಿಂದ ಸಸ್ಯರಕ್ಷಣಗೃಹ, ಸೇವಕರ ವಠಾರ ಮತ್ತು ಹೊರ ಮನೆಗಳ ಮೂಲಕ ನಡೆದನು.

'ಜಾರು ಬಂಡಿಯಿಲ್ಲಿ ಬರಬಹುದೆ?' ಎಂದವನು ಮನೆಗೆ ಹಿಂದಿರುಗುವಾಗ ಜತೆಯಲ್ಲಿ ಬರುತ್ತಿದ್ದ ಮೇಲ್ವಿಚಾರಕನನ್ನು ಪ್ರಶ್ನಿಸಿದನು. ರೀತಿ ನೀತಿಗಳಲ್ಲಿ ಮತ್ತು ನೋಟಗಳಲ್ಲಿ ಮೇಲ್ವಿಚಾರಕ ತನ್ನ ಯಜಮಾನನನ್ನೇ ಹೋಲುತ್ತ, ಗೌರವಾರ್ಹನಾಗಿದ್ದನು.

'ಮಂಜು ಆಳವಾಗಿದೆ. ಅದನ್ನು ತೆಗೆಯಲು ಏರ್ಪಾಡು ಮಾಡಿದ್ದೇನೆ, ಬುದ್ಧಿ'

ರಾಜಕುಮಾರ ತಲೆ ಮಣಿದು, ಮುಖ ಮಂಟಪದ ತನಕ ಹೋದನು. 'ದೇವರ ದಯೆ. ಬಿರುಗಾಳಿ ತೇಲಿಹೋಗಿದೆ' ಎಂದು ಮೇಲ್ವಿಚಾರಕ ತನ್ನೊಳಗೆ ತಾನು ಅಂದುಕೊಂಡನು.

'ಬಂಡಿಯ ಚಲನೆ ಕಷ್ಟವಾಗುತ್ತಿತ್ತು, ಸ್ವಾಮಿ. ಯಜಮಾನರ ಸಂದರ್ಶನಕ್ಕಾಗಿ ಯಾರೊ ಮಂತ್ರಿಗಳು ಬರುತ್ತಾರಂತೆ, ಹೌದೆ ಬುದ್ಧಿ?' ಎಂದು ಮೇಲ್ವಿಚಾರಕ ಪ್ರಶ್ನಿಸಿದನು.

ರಾಜಕುಮಾರ ಮೇಲ್ವಿಚಾರಕನ ಕಡೆಗೆ ಮುಖ ತಿರುಗಿಸಿ, ಅವನನ್ನೇ ಕೆಕ್ಕರಿಸಿ ದಿಟ್ಟಿಸಿದನು. 'ಏನು, ಏನು? ಮಂತ್ರಿಯೆ? ಎಂಥಮಂತ್ರಿ? ಆಜ್ಞೆ ಮಾಡಿದವರು ಯಾರು?' ಎಂದವನು ಗಡುಸಾದ ಕೀಚುದನಿಯಲ್ಲಿ ನುಡಿದನು. ರಸ್ತೆಯ ಸ್ವಚ್ಛೀಕರಣ

ರಾಜಕುಮಾರಿಗಾಗಿ ಅಲ್ಲ, ನನ್ನ ಮಗಳಿಗಾಗಿ ಅಲ್ಲ, ಮಂತ್ರಿಗೋಸ್ಕರ ಅಲ್ಲವೆ! ನ ಪಾಲಿಗೆ ಮಂತ್ರಿಗಳೆ ಇಲ್ಲ!'

'ಪ್ರಭು, ನಾನೆಣಿಸಿದೆ....'

'ನೀನೆಣಿಸಿದೆಯಲ್ಲವೆ?' ಎಂದು ರಾಜಕುಮಾರ ಕೂಗಿಕೊಂಡನು. ವೇಗ ವೇ ವಾಗಿ, ಅಸ್ಪಷ್ಟವಾಗಿ ಅವನ ಬಾಯಿಂದ ಮಾತುಗಳು ಹೊರಳುತ್ತಿದ್ದುವು. 'ನೀನೆಣಿಸಿ ಯಲ್ಲವೆ? ನೀಚರು, ಭಂಡರು!....ಇನ್ನೋ ಹೇಗೆ ಯೋಚನೆ ಮಾಡಬೇಕೆಂಬುದನ್ ಕಲಿಸುತ್ತೇನೆ' ಎಂದವನು ತನ್ನ ಬೆತ್ತವನ್ನೆತ್ತಿ ತೂಗಾಡಿಸಿದನು. ಮೇಲ್ವಿಚಾರ ಅಲ್ಪಾತಿಚ್ ಸಹಜಪ್ರವೃತ್ತಿಯಿಂದಲೆಂಬಂತೆ ತಪ್ಪಿಸಿಕೊಳ್ಳಲು ಪ್ರಯತ್ನಿಸದಿದ್ದರೆ ಅವನಿಗೆ ಏಟು ಬೀಳುತ್ತಿತ್ತು. 'ಆಲೋಚಿಸಿದರಂತೆ....ಭಂಡರು!....' ಎಂಬ ಬಯ್ಗುಳ ರಾಜಕುಮಾರನ ಬಾಯಿಂದ ಧಾರಾಕಾರವಾಗಿ ಹರಿಯುತ್ತಿದ್ದುವು.

ಏಟು ತಪ್ಪಿಸಿಕೊಂಡರೂ ಭಯಚಕಿತನಾಗಿದ್ದ ಅಲ್ಪಾತಿಚ್ ಶಾಂತಿ ಗೌರ ಗಳಿಂದಲೇ ರಾಜಕುಮಾರನ ಮುಂದೆ ತನ್ನ ಬೋಳುತಲೆಯನ್ನು ಬಾಗಿಸಿದನು. ಕಾರಣದಿಂದಲೇ ಒಂದೇಸಮನೆ ಬಯ್ಗುಳನ್ನು ಕಾರುತ್ತಿದ್ದ ರಾಜಕುಮಾರ ಮತ್ತೆ ಬೆತ್ತವನ್ನೆತ್ತದೆ, ದಡದಡನೆ ಮನೆಯೊಳಗೆ ನಡೆದನು.

ರಾಜಕುಮಾರನ ಮನಸ್ಸು ಸರಿಯಾಗಿರಲಿಲ್ಲವೆಂದು ತಿಳಿದ ರಾಜಕುಮಾರಿ ಮೇ ಮತ್ತು ಶ್ರೀಮತಿ ಬೌರಿಯನ್ನೆ ಭೋಜನ ಸಮಯದಲ್ಲಿ ಅವನಿಗಾಗಿ ಕಾದುಕೊಂ ದ್ದರು. 'ನನಗೇನೂ ಗೊತ್ತಿಲ್ಲ. ನಾನೆಂದಿನಂತೆಯೇ ಇದ್ದೇನೆ' ಎಂದು ಬೌರಿಯನ್ನೆಯ ಆಕರ್ಷಕವದನ ನುಡಿಯುತ್ತಿತ್ತು. ಭಯದಿಂದ ಬಿಳಿಚಿಕೊಂಡಿದ್ದ ಮೇರಿ ಅಧೋವದ ಯಾಗಿ ನಿಂತಿದ್ದಳು. ಅಂಥ ಸಂದರ್ಭಗಳಲ್ಲಿ ಬೌರಿಯನ್ನೆಯಂತೆ ಸಮಾಧಾನ ಚಿತ್ತದಿಂದಿರ ವುದು ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. 'ಏನೂ ಕಾಣದವಳಂತಿದ್ದರೆ ತಮ್ಮ ಬಗ್ಗೆ ನನ ಸಹಾನುಭೂತಿಯಿಲ್ಲವೆಂದು ಅವರು ತಿಳಿಯುತ್ತಾರೆ. ನಾನು ವ್ಯಾಕುಲದಿಂದ ನಿರುತ್ಸಾಹ ವನ್ನು ಪ್ರದರ್ಶಿಸಿದರೆ ನಾನೊಂದು ಕಸದ ಗುಡ್ಡೆಯೆಂದು ಅವರು ಭಾವಿಸುತ್ತಾರೆ ಎಂದವಳು ಕೊರಗಿದಳು.

ರಾಜಕುಮಾರ ಮಗಳ ಭಯಚಕಿತವದನದ ಕಡೆಗೆ ನೋಡಿ 'ದಡ್ಡ....ಬರಿಯ ಬೊಂಬೆ!' ಎಂದು ಘೂಂಕರಿಸಿದನು.

'ಇನ್ನೊಬ್ಬಳು ಇಲ್ಲಿಲ್ಲ. ಅನೇಕ ಕತೆ ಕೇಳಿಸಿಕೊಳ್ಳುತ್ತಿದ್ದೇನೆ' ಎಂದವನು ಭೋಜನ ಮಂದಿರದಲ್ಲಿ ಕಿರಿಯ ರಾಜಕುಮಾರಿಯನ್ನು ಕಾಣದೆ ಗೊಣಗುಟ್ಟಿಕೊಂಡನು.

'ರಾಜಕುಮಾರಿಯೆಲ್ಲಿ? ಅವಿತುಕೊಂಡಿದ್ದಾಳೆಯೆ?' ಎಂದು ಪ್ರಶ್ನಿಸಿದನು.

'ಅವಳಿಗೆ ಸ್ವಸ್ಥವಿಲ್ಲ. ಕೆಳಗಿಳಿದು ಬರುವುದಿಲ್ಲ. ಅವಳ ಸ್ಥಿತಿಯಲ್ಲಿ ಇದ ಸಹಜ.'

'ಹ್ಞೂಂ, ಹ್ಞೂಂ' ಎಂದು ಉದ್ಗರಿಸುತ್ತ ರಾಜಕುಮಾರ ಕುಳಿತುಕೊಂಡನು.

ಅವನ ತಟ್ಟೆ ಸ್ವಚ್ಛವಾಗಿಲ್ಲವೆಂಬಂತೆ ಕಂಡಿತು; ಅದರಲ್ಲಿದ್ದ ದೋಷವನ್ ಪ್ರದರ್ಶಿಸುತ್ತ ಬೀಸಿದನು. ಟಿಖಾನ್ ಅದನ್ನಾತುಕೊಂಡು, ಸೇವಕನ ಕೈ ಕೊಟ್ಟನು. ವಾಸ್ತವವಾಗಿ ಕಿರಿಯ ರಾಜಕುಮಾರಿ ಅಸ್ವಸ್ಥವಾಗಿರಲಿಲ್ಲ. ಮೊದಲ

ರಾಜಕುಮಾರನನ್ನು ಕಂಡರೆ ಅವಳಿಗೆ ಹೆದರಿಕೆ. ಅವನು ಕೋಪಾರೂಢನಾಗಿದ್ದನೆಂದರೆ ಅವಳ ಪಾಡು ಕೇಳಬೇಕೆ? ಅವನ ಮುಂದೆ ಸುಳಿಯಬಾರದೆಂದವಳು ನಿರ್ಧರಿಸಿದಳು.

'ಮಗುವಿಗಾಗಿ ನಾನು ಹೆದರಿದ್ದೇನೆ. ಅಂಜಿಕೆಯಿಂದ ಏನೇನಾಗುತ್ತದೋ ಭಗವಂತನೇ ಬಲ್ಲ' ಎಂದವಳು ಶ್ರೀಮತಿ ಬೌರಿಯನ್ನೆಯೊಡನೆ ನುಡಿದಳು.

ಸಾಧಾರಣವಾಗಿ ಕಿರಿಯ ರಾಜಕುಮಾರಿ ಬಾಲ್ಡ್ ಹಿಲ್ಸ್‌ನಲ್ಲಿ ನಿರಂತರ ಭಯದಿಂದ ಬದುಕು ನಡೆಸಿದ್ದಳು. ಹಿರಿಯ ರಾಜಕುಮಾರನ ಬಗ್ಗೆ ವೈರಭಾವನೆ ಪ್ರಬಲವಾಗಿತ್ತು. ಭಯಜ್ವರದಿಂದಾಗಿ ವೈರ ಭಾವನೆಯ ಪ್ರಜ್ಞೆ ಅವಳಿಗಿರಲಿಲ್ಲ. ಅವನಲ್ಲಿಯೂ ಅವಳ ಬಗ್ಗೆ ವೈರಭಾವನೆ ಬಲಿಯುತ್ತಿತ್ತು. ಅದರ ಜತೆಗೆ ತಿರಸ್ಕಾರವೂ ಕೂಡಿಕೊಂಡಿತ್ತು. ಬಾಲ್ಡ್ ಹಿಲ್ಲಿನ ಬದುಕಿಗೆ ಅವಳು ಹೊಂದಿಕೊಳ್ಳುತ್ತಿದ್ದಂತೆ ಶ್ರೀಮತಿ ಬೌರಿಯನ್ನೆಯ ಕಡೆಗೆ ಅವಳ ಒಲವು ಅರಳುತ್ತಿತ್ತು; ಇಡೀ ದಿನಗಳನ್ನು ಅವಳ ಜತೆ ಕಳೆಯುತ್ತಿದ್ದಳು; ತನ್ನ ಕೋಣೆಯಲ್ಲಿ ಮಲಗಿಸಿಕೊಳ್ಳುತ್ತಿದ್ದಳು, ವಿಶೇಷವಾಗಿ ಹಿರಿಯ ರಾಜಕುಮಾರನ ಪ್ರಸ್ತಾಪವೆತ್ತಿಕೊಂಡು, ಟೀಕಿಸುತ್ತಿದ್ದಳು.

'ಅತಿಥಿಗಳು ಬರುತ್ತಾರಲ್ಲವೆ, ರಾಜಕುಮಾರರೆ?' ಎಂದು ಶ್ರೀಮತಿ ಬೌರಿಯನ್ನೆ ತನ್ನ ಕೆಂಬೆರಳುಗಳಿಂದ ಬಿಳಿಯ ಚೌಕದ ಮಡಿಕೆಗಳನ್ನು ಬಿಡಿಸುತ್ತ ನುಡಿದಳು. 'ಘನತೆವೆತ್ತ ರಾಜಕುಮಾರ ವಸಿಲಿ ಕುರಾಗಿನ್ ಮತ್ತು ಅವರ ಮಗ ಎಂದು ತಿಳಿದೆ, ಹೌದೆ?' ಎಂದವಳು ಕುತೂಹಲ ದೃಷ್ಟಿಯಿಂದ ಅವನ ಕಡೆಗೆ ನೋಡಿದಳು.

'ಹ್ಞೂಂ!—ಆ ಘನತೆವೆತ್ತ ಮನುಷ್ಯ ಇದ್ದಾನಲ್ಲ, ಅವನೊಂದು ಕುನ್ನಿ.... ಅವನಿಗೆ ಹುದ್ದೆ ಕೊಡಿಸಿದವನು ನಾನೆ' ಎಂದು ರಾಜಕುಮಾರ ತಿರಸ್ಕಾರದಿಂದ ನುಡಿದನು. 'ಅವನ ಮಗ ಏಕೆ ಬರುತ್ತಿದ್ದಾನೋ ಕಾಣೆ. ಪ್ರಾಯಶಃ ರಾಜಕುಮಾರಿ ಎಲಿಜಬೆತ್ತಳಿಗೂ ರಾಜಕುಮಾರಿ ಮೇರಿಗೂ ಗೊತ್ತಿರಬೇಕು. ಇಲ್ಲಿಗೆ ತನ್ನ ಮಗನನ್ನೇಕೆ ಕರೆತರುತ್ತಿದ್ದಾನೋ ನನಗರ್ಥವಾಗದು. ನನಗವನು ಬೇಕಿಲ್ಲ.' ಕೆನ್ನೆ ಕೆಂಪೇರಿದ ಮಗಳ ಕಡೆಗೆ ಅವನು ದಿಟ್ಟಿ ಹರಿಸಿದನು. 'ನಿನ್ನ ಮೈ ಸ್ವಸ್ಥವಿಲ್ಲವೆ? ಆ ಮೂರ್ಖ ಅಲ್ಪಾತಿಚ್ ಬೆಳಗ್ಗೆ ಹೇಳಿದ, ಯಾರೋ ಮಂತ್ರಿ ಬರುತ್ತಾನೆಂದು. ಮಂತ್ರಿಯೆಂದು ನೀನು ಹೆದರಿದೆಯಾ?'

'ಇಲ್ಲ, ಅಪ್ಪ'

ಶ್ರೀಮತಿ ಬೌರಿಯನ್ನೆ ಸಂಭಾಷಣೆಗಾಗಿ ಆರಿಸಿಕೊಂಡ ವಿಷಯ ಹಿತಕರವಾಗಿರಲಿಲ್ಲ. ಆದರೂ ಅವಳು ಮಾತು ನಿಲ್ಲಿಸಲಿಲ್ಲ; ಬಳ್ಳಿಮನೆ, ಆದೇ ತಾನೆ ಅರಳಿದ ಹೂವಿನ ಚೆಲುವು ಇವುಗಳ ಬಗೆಗೆ ಗಳಹುತ್ತಿದ್ದಳು. ಎಸರು ಕುಡಿದನಂತರ ರಾಜಕುಮಾರ ಉಲ್ಲಾಸಭರಿತನಾದನು.

ಊಟವಾದನಂತರ ಅವನು ತನ್ನ ಸೊಸೆ ನೋಡುವ ಸಲುವಾಗಿ ಹೋದನು. ಕಿರಿಯ ರಾಜಕುಮಾರಿ ಕಿರುಮೇಜಿನ ಮುಂದೆ ಕುಳಿತು ತನ್ನ ಸೇವಿಕೆ ಮಾಷಳ ಜತೆ ಹರಟೆ ಹೊಡೆಯುತ್ತಿದ್ದಳು. ಮಾವನನ್ನು ನೋಡಿದ ಕೂಡಲೇ ಅವಳ ಮುಖ ಬಿಳಿಚಿಕೊಂಡಿತು.

ಅವಳು ತುಂಬ ಬದಲಾಯಿಸಿದ್ದಳು. ಸುಂದರಿಯೆನ್ನುವುದಕ್ಕಿಂತ ಪೇಲವವಾಗಿದ್ದಳೆನ್ನಬಹುದಿತ್ತು. ಕೆನ್ನೆ ಗುಳಿಬಿದ್ದಿದ್ದುವು, ತುಟಿ ಸೊರಗಿದ್ದುವು, ಕಣ್ಣು ಗೂಡಾಗಿದ್ದುವು.

'ನಿನ್ನ ಆರೋಗ್ಯ ಹೇಗಿದೆ?' ಎಂಬ ಮಾವನ ಪ್ರಶ್ನೆಗೆ ಉತ್ತರವಾಗಿ ಅವಳು 'ನನಗೆ ಒಂದು ತರಹ ಹಿಂಸೆಯಾಗುತ್ತದೆ' ಎಂದಳು.

'ನಿನಗೇನಾದರೂ ಬೇಕೊ?'

'ಇಲ್ಲ, ಏನೂಬೇಡಿ. ಧನ್ಯವಾದಗಳು, ಅಪ್ಪಾಜಿ'

'ಸರಿ, ಸರಿ, ಹಾಗಾದರೆ' ಎಂದವನು ಕೋಣೆಯಿಂದ ಹೊರಬಿದ್ದು, ನಿರೀಕ್ಷಣ ಮಂದಿರಕ್ಕೆ ಹೋದನು. ಅಲ್ಲಿ ಅಲ್ಪಾತಿಚ್ ಅವನತಶಿರನಾಗಿ ನಿಂತಿದ್ದನು.

'ಮಂಜನ್ನು ತೆಗೆದುಹಾಕಿದೆಯೆ?'

'ಹೌದು, ಮಹಾಪ್ರಭು. ದೇವರ ಮೇಲೆ ಆಣೆಯಿಟ್ಟು ಕೇಳಿಕೊಳ್ಳುತ್ತೇನೆ, ನನ್ನನ್ನು ಕ್ಷಮಿಸಿ....ಅದೆಲ್ಲ ನನ್ನ ದಡ್ಡತನ.'

'ಆಗಲಿ, ಆಗಲಿ' ಎಂದು ರಾಜಕುಮಾರ ನಡುವೆ ಬಾಯಿಹಾಕಿ, ಕೃತಕಹಾಸ ಬೀರುತ್ತ, ತನ್ನ ಕೈ ಮುಂದೆ ಚಾಚಿದನು. ಅಲ್ಪಾತಿಚ್ ಮುತ್ತಿಟ್ಟನು. ಅನಂತರ ರಾಜಕುಮಾರ ಅಧ್ಯಯನ ಕಕ್ಷ್ಯಕ್ಕೆ ನಡೆದನು.

ರಾಜಕುಮಾರ ವಸಿಲಿ ಅದೇ ದಿನ ಸಂಜೆ ಆಗಮಿಸಿದನು. ಸಾಲುಮರದ ದಾರಿಯಲ್ಲಿ ಸೇವಕರೂ ಗಾಡಿಯಾಳುಗಳೂ ಅವನಿಗೆ ಸ್ವಾಗತ ಬಯಸಿದರು. ಬೇಕಂತಲೇ ಹಿಮ ಗುಡ್ಡೆಗೊಂಡಿದ್ದ ದಾರಿಯಲ್ಲಿ ಅವರು ವಸಿಲಿಯ ಜಾರುಬಂಡಿಗಳನ್ನು ಎಳೆದುಕೊಂಡು ಬಂದು, ಅತಿಥಿಗೃಹದ ಮುಂದೆ ನಿಲ್ಲಿಸಿದರು.

ತಂದೆಮಕ್ಕಳಿಗೆ ಬೇರೆಬೇರೆ ಕೊಠಡಿಗಳನ್ನು ಅಣಿಗೊಳಿಸಲಾಯಿತು.

ಅನತೋಲ್ ತನ್ನ ಮೇಲಂಗಿಯನ್ನು ತೆಗೆದಿರಿಸಿ, ಮೇಜಿನಮುಂದೆ ಸೊಂಟಗೆಯ್ಯಾಗಿ ಕುಳಿತು, ಅದರ ಮೂಲೆಯೊಂದರಲ್ಲಿ ಅನ್ಯಮನಸ್ಕನಾಗಿ ಮಂದಹಾಸದಿಂದ ತನ್ನ ವಿಶಾಲ ಸುಂದರ ನೇತ್ರಗಳನ್ನು ನಾಟಿದನು. ತನ್ನ ಇಡೀ ಜೀವನವೇ ವಿನೋದದ ನಿರಂತರ ಸರಮಾಲಿಯಾಗಿದ್ದುದಾಗಿ ಅವನು ಬಗೆದನು. ಯಾವುದಾದರೂ ಕಾರಣಕ್ಕಾಗಿ ಯಾರಾದರೂ ಅವನಿಗೆ ಆ ವಿನೋದವನ್ನೊದಗಿಸುತ್ತಿದ್ದರು. ಈ ಭೇಟಿಯ ಕಾಲದಲ್ಲಿಯೂ ಒಬ್ಬ ಹಳ್ಳಿಯ ಮುದುಕನ ಹಾಗೂ ಹಣವಂತೆಯೂ ಕುರೂಪಿಯೂ ಆದ ಉತ್ತರಾಧಿಕಾರಿಯೊಬ್ಬಳ ಕಡೆಯಿಂದ ಅದೇ ರೀತಿಯ ವಿನೋದವನ್ನು ನಿರೀಕ್ಷಿಸಿಕೊಂಡಿದ್ದನು. ಆಗ ನಡೆಯಲಿದ್ದುದೆಲ್ಲ ತಮಾಷೆಯ ನಾಟಕವೆಂದು ಅವನು ಬಗೆದನು. 'ನಿಜಕ್ಕೂ ಅವಳ ಬಳಿ ಅಪಾರ ಹಣವಿದ್ದುದಾದರೆ ಅವಳನ್ನು ಮದುವೆಯಾಗಬಾರದೇಕೆ? ಅದರಿಂದ ಏನೂ ನಷ್ಟವಾಗುವುದಿಲ್ಲ' ಎಂದು ಅನತೋಲ್ ಗುಣಾಕಾರ ಹಾಕಿದನು.

ಅವನು ವಾಡಿಕೆಯಂತೆ ಎಚ್ಚರಿಕೆಯಿಂದ ನಾಜೋಕಾಗಿ ಕ್ಷೌರ ಮಾಡಿಕೊಂಡು, ಸುಗಂಧದ್ರವ್ಯಗಳನ್ನು ಪೂಸಿಕೊಂಡನು. ಉನ್ನಮ್ರಶಿರನಾಗಿ, ವಿಜೇತ ವ್ಯಕ್ತಿಯ ಠೀವಿಯಿಂದ, ವಿನೋದಶೀಲ ಮಂದಹಾಸದಿಂದ ಅವನು ತಂದೆಯ ಕೋಣೆಯನ್ನು ಪ್ರವೇಶಿಸಿದನು. ಅಂಗಸೇವಕರು ರಾಜಕುಮಾರ ವಸಿಲಿಗೆ ವೇಷಭೂಷಣಗಳನ್ನು ತೊಡಿಸುತ್ತಿದ್ದರು. ಅವನು ಅತ್ಯುತ್ಸಾಹದಿಂದ ಸುತ್ತಲೂ ಕಣ್ಣು ಹಾಯಿಸುತ್ತಿದ್ದನು. ಮಗ ಒಳಗೆ ಪ್ರವೇಶಿಸುತ್ತಿದ್ದಂತೆ 'ಇದೀಗ ಸರಿ. ಭರ್ಜರಿಯಾಗಿ ಕಾಣುತ್ತೀಯೆ' ಎಂಬ ಭಾವವನ್ನು ಸೂಚಿಸುವಂತೆ ಅವನು ಹುರುಪಿನಿಂದ ತಲೆಯಲ್ಲಾಡಿಸಿದನು.

'ಅಪ್ಪ, ಸದ್ಯಕ್ಕೆ ವಿನೋದ ಬೇಡ. ಅವಳು ತುಂಬ ವಿಕಾರವಾಗಿದ್ದಾಳೇನು?' ಎಂದು ಅನತೋಲ್ ಪ್ರಶ್ನಿಸಿದನು. ಪ್ರಯಾಣ ಸಮಯದ ಸಂಭಾಷಣೆಯ ಸೂತ್ರವನ್ನೇ ಮುಂದುವರಿಸಿದಂತೆ ಅವನ ಮಾತಿನಿಂದ ಅಭಿವ್ಯಕ್ತವಾಗುತ್ತಿತ್ತು.

'ಸಾಕು, ನಿಲ್ಲಿಸಯ್ಯ ನಿನ್ನ ಮಾತು. ಎಂಥ ದಡ್ಡ ನೀನು! ಅದೆಲ್ಲ ಇರಲಿ, ಹಿರಿಯ ರಾಜಕುಮಾರನನ್ನು ಸಂಧಿಸಿದಾಗ ಜಾಗರೂಕನಾಗಿರು, ಗೌರವ ತೋರಿಸಲು ಪ್ರಯತ್ನಿಸು.'

'ಅವರೇನಾದರೂ ಕ್ಯಾತೆ ತೆಗೆದರೆ ನಾನು ಹೊರಟುಹೋಗುತ್ತೇನೆ. ನಾನು ಅಂಥ ಮುದಿಯರನ್ನು ಸಹಿಸಲಾರೆ, ತಿಳಿಯಿತೆ?

'ನೆನಪಿರಲಿ, ನಿನ್ನ ಆಗುಹೋಗುಗಳೆಲ್ಲ ಇದನ್ನವಲಂಬಿಸಿದೆ.'

ಅಷ್ಟರಲ್ಲಿ ಮಂತ್ರಿ ಮತ್ತು ಅವನ ಮಗನ ಆಗಮನ ವಾರ್ತೆ ಸೇವಿಕೆಯರ ವಠಾರದಲ್ಲೆಲ್ಲ ಹಬ್ಬಿತು. ಅಷ್ಟೇಅಲ್ಲ, ಸೇವಿಕೆಯರು ಆ ತಂದೆ ಮಕ್ಕಳ ಸ್ವಭಾವ ಚರ್ಯೆಗಳನ್ನು ಕುರಿತು ವಿವರ ವಿವರವಾಗಿ ಚರ್ಚಿಸುತ್ತಿದ್ದರು. ಕುಮಾರಿ ಮೇರಿ ತನ್ನ ಚಿತ್ತಕ್ಷೋಭೆಯನ್ನು ಹತೋಟಿಗೆ ತಂದುಕೊಳ್ಳಲಾರದೆ ತನ್ನ ಕೋಣೆಯಲ್ಲೊಬ್ಬಳೇ ಕುಳಿತಿದ್ದಳು.

ಅವಳು ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಳ್ಳುತ್ತ 'ಅವರೇಕೆ ಕಾಗದ ಬರೆದರು? ಲೀಸೆ ಏಕೆ ಅದರ ವಿಚಾರ ನನಗೆ ತಿಳಿಸಿದಳು. ಅದು ಖಂಡಿತ ಸಂಭವಿಸಲಾರದು! ನಾನು ದಿವಾನಖಾನೆಗೆ ಹೋಗುವುದಾದರೂ ಹೇಗೆ? ನಾನವನನ್ನು ಒಪ್ಪಬಹುದಾದರೂ ಸದ್ಯಕ್ಕೆ ಅವನೊಡನೆ ಸಲುಗೆಯಿಂದಿರಲಾರೆ' ಎಂದು ಬಗೆದಳು. ತಂದೆಯ ನೆನಪೊಂದೆ ಸಾಕು, ಅವಳನ್ನು ನಡುಗಿಸಿತ್ತು. ಸೇವಿಕೆ ಮಾಷ ಕೆಂಗೆನ್ನೆಯ ಕರಿಹುಬ್ಬಿನ ವರನ ಸೌಂದರ್ಯದ ಬಗ್ಗೆ ಕಿರಿಯ ರಾಜಕುಮಾರಿಗೂ ಶ್ರೀಮತಿ ಬೌರಿಯನ್ನೆಗೂ ವರದಿ ಮಾಡಿದ್ದಳು. ತಂದೆ ಮಹಡಿಯೇರುವಾಗ ಕಷ್ಟಪಟ್ಟು ಕಾಲೆಳೆಯುತ್ತಿದ್ದುದನ್ನು, ಮಗ ಗಿಡಗನಂತೆ ಒಂದೊಂದು ಸಾರಿಗೆ ಮೂರು ಮೂರು ಮೆಟ್ಟಿಲು ಜಿಗಿಯುತ್ತಿದ್ದುದನ್ನು ತಿಳಿಸಿದ್ದಳು. ಕಿರಿಯ ರಾಜಕುಮಾರಿ ಮತ್ತು ಶ್ರೀಮತಿ ಬೌರಿಯನ್ನೆಯರ ಹರಟೆಯ ಸದ್ದು ರಾಜಕುಮಾರಿ ಮೇರಿಯ ಕೋಣೆಗೆ ಕೇಳಿಸುತ್ತಿತ್ತು. ತಾವು ಕೇಳಿದ ಸುದ್ದಿಯನ್ನೆಲ್ಲ ಹೊತ್ತು ಅವರು ಮೇರಿಯ ಕೋಣೆಗೆ ಹೋದರು.

'ಅವರು ಬಂದಿರುವುದು ನಿನಗೆ ತಿಳಿಯದೆ?' ಎಂದು ಕಿರಿಯ ರಾಜಕುಮಾರಿ ಜೂಗಾಡುತ್ತ ಹೋಗಿ, ಕುರ್ಚಿಯಲ್ಲಿ ಕುಸಿದಳು.

ಅವಳ ಬೆಳಗಿನ ವಾಡಿಕೆಯ ಉಡುಗೆಯೆಂದರೆ ಮೊಗಲೆಯಂಗಿ. ಈಗದನ್ನು ಬದಲಾಯಿಸಿ ನಾಜೋಕಿನ ವಸ್ತ್ರಗಳನ್ನು ಧರಿಸಿದ್ದಳು. ಅವಳ ಕೂದಲನ್ನು ಎಚ್ಚರಿಕೆಯಿಂದ ಅಲಂಕರಿಸಲಾಗಿತ್ತು. ಅವಳ ಮುಖದಲ್ಲಿ ಚೈತನ್ಯ ಉಕ್ಕುತ್ತಿತ್ತು. ಆದರೆ ಅದು ಜೋತ ಮೋರೆಯನ್ನಾಗಲೀ, ಅದರ ಮಾಸಿದ ಗೆರೆಗಳನ್ನಾಗಲೀ ಮರೆಸಲಾಗಲಿಲ್ಲ. ಪೀಟರ್ಸ್‌ಬರ್ಗ್ ಸಮಾಜದ ವೇಷಭೂಷಣಗಳಲ್ಲಿ ಅವಳು ಪಳಗಿದವಳು. ಈಗಂತು ಅವಳ ಉಡುಪು ಸರಳತರವಾಗಿತ್ತು. ತನ್ನ ವೇಷಭೂಷಣಗಳಿಗೆ ಸಂಪ್ರಾಪ್ತವಾಗಿದ್ದ ವಿಶಿಷ್ಟ ಸ್ಪರ್ಶದಿಂದಾಗಿ ಶ್ರೀಮತಿ ಬೌರಿಯನ್ನೆಯ ಸುಂದರ ಮುಖ ವಿಶೇಷ ಆಕರ್ಷಣೀಯವಾಯಿತು.

'ಇದೇನು? ನೀನಿನ್ನು ಸಿದ್ಧವಾಗಿಲ್ಲ. ಅತಿಥಿಗಳು ದಿವಾನಖಾನೆಗೆ ಬರಲಿದ್ದಾರೆ ಬಂದಕೂಡಲೇ ನಿನಗೆ ಹೇಳಿಕಳಿಸುತ್ತಾರೆ. ನಾವು ಅಲ್ಲಿಗೆ ಹೋಗಬೇಕಾಗುತ್ತದೆ ನೀನಿನ್ನೂ ಅಲಂಕಾರ ಮಾಡಿಕೊಂಡಿಲ್ಲ?' ಎಂದವಳು ಮಾತು ತೆಗೆದಳು.

ಕಿರಿಯ ರಾಜಕುಮಾರಿ ಮೇಲೆದ್ದು, ಸೇವಿಕೆಯನ್ನು ಬರಮಾಡಿ, ಮೇರಿಯ ಅಲಂಕರಣ ವಿಷಯದಲ್ಲಿ ಸಂತೋಷದಿಂದ ಅವಸರವಸರವಾಗಿ ಅಣಿಗೆಯ್ಯತೊಡಗಿದಳು ವಿವಾಹಾರ್ಥಿಯ ಆಗಮನದಿಂದಾಗಿ ಮೇರಿಯ ಸ್ವಾಭಿಮಾನಕ್ಕೆ ಆಘಾತ ಪೊದ ದಂತಾಯಿತು. ತನ್ನ ಮನಸ್ಸನ್ನರಿಯಲಾರದ ತನ್ನಿಬ್ಬರು ಜತೆಗಾತಿಯರಿಂದಾಗಿ ಆ ಆಘಾತ ಮತ್ತಷ್ಟು ಪ್ರಖರಗೊಂಡಿತು. 'ನಿಮಗಾಗಲೀ ನನಗಾಗಲೀ ಲಜ್ಜೆಯಾಗ ವುದಿಲ್ಲವೆ?' ಎಂದವಳು ಹೇಳಬೇಕೆನಿಸಿತು. ಅದರಿಂದಾಗಿ ತನ್ನ ಚಿತ್ತಕ್ಷೋಭೆಯನ್ನು ತೋರಿಸಿಕೊಂಡಂತಾಗುತ್ತಿತ್ತು. ಅವರ ಅಲಂಕರಣ ಪ್ರಯತ್ನವನ್ನು ನಿರಾಕರಿಸಿದ್ದ ಅವರ ಲೇವಡಿ ಒತ್ತಡಗಳು ಮುಂದುವರಿಯುತ್ತಿದ್ದುವು. ಅವಳ ಮುಖ ರಂಗು ರಂಗಾಯಿತು; ಅದರ ಮೇಲೆ ಕೆಂಪುಮಚ್ಚೆಗಳು ಕಾಣಿಸಿಕೊಂಡವು. ಅವಳ ಕಣ್ಣು ಮಂಕಾದುವು. ಲೀಸೆ ಮತ್ತು ಬೌರಿಯನ್ನೆಯರ ಶೃಂಗಾರ ಕ್ರಿಯೆಗೆ ಮಣಿಯ ಬೇಕಾದಾಗ ಚಿತ್ರಹಿಂಸೆಯನ್ನನುಭವಿಸುತ್ತಿದ್ದಂತೆ ಅವಳ ಮುಖಭಾವ ಅನಾಕರ್ಷಣೀಯ ವಾಗಿ ತೋರುತ್ತಿತ್ತು. ಅವಳು ಸುಂದರವಾಗಿ ಕಾಣಬೇಕೆಂದು ಆ ಇಬ್ಬರು ಹೆಂಗಸರೂ ಪ್ರಾಮಾಣಿಕವಾಗಿ ಪ್ರಯತ್ನಿಸಿದರು. ಅವಳು ಸುಂದರಿಯಲ್ಲದ್ದರಿಂದ ತಮಗೆ ಪ್ರತಿಸ್ಪರ್ಧಿಯಾಗಳೆಂದು ಅವರು ತಿಳಿದಿದ್ದರು. ಸಹಜ ಸುಂದರವಲ್ಲದ ವದನವನ್ನು ಕೃತಕೋಪಾಯಗಳಿಂದ ಆಕರ್ಷಕಗೊಳಿಸಬಹುದೆಂಬ ದೃಢ ನಿಶ್ಚಯದಿಂದ ಹಾಗೂ ನಿಷ್ಕಾಪಟ್ಯದಿಂದ ಅವರು ಪ್ರಸಾಧನ ಕಾರ್ಯದಲ್ಲಿ ತೊಡಗಿದ್ದರು.

ದೂರದಿಂದ ಹಾಗೂ ಎರಡು ಕಡೆಗಳಿಂದ ರಾಜಕುಮಾರಿ ಮೇರಿಯನ್ನು ನೋಡುತ್ತಾ ಲೀಸೆ 'ಮುದ್ದುಮಣಿ, ನಿಜಕ್ಕೂ ಈ ಉಡುಪು ನಿನಗೊಪ್ಪುವುದಿಲ್ಲ. ಕಡುಗೆಂಪು ಬಣ್ಣದ ಉಡುಪಿದೆಯಲ್ಲ, ಅದನ್ನು ತರಿಸು. ನಿನ್ನ ಇಡೀ ಬಾಳಿನ ಹಣೆಬರಹ ವೀಗ ಪರೀಕ್ಷೆಗೀಡಾಗಿದೆ. ಇದು ತುಂಬ ಮಂಕಾಗಿದೆ. ನಿನಗೊಪ್ಪುವುದಿಲ್ಲ.' ಎಂದಳು.

ಅಂದವಾಗಿಲ್ಲದ್ದು ಮೇರಿಯ ಉಡುಪಲ್ಲ, ಅವಳ ಮುಖಮೈಗಳು. ಬೌರಿಯನ್ನೆ ಯಾಗಲಿ ಕಿರಿಯ ರಾಜಕುಮಾರಿಯಾಗಲಿ ಹಾಗೆ ಭಾವಿಸಲಿಲ್ಲ. ಕೂದಲನ್ನು ನೀಟಾಗಿ ಬಾಚಿ, ನೀಲಿ ರಿಬ್ಬನ್ ಕಟ್ಟಿದ್ದಾದರೆ, ಕಡುಗೆಂಪು ಬಣ್ಣದ ಉಡುಪಿನ ಮೇಲೆ ತುಸು ಕೆಳಗಾದಂತೆ ಅಂಗವಸ್ತ್ರವನ್ನು ಅಳವಡಿಸಿದ್ದಾದರೆ, ಅವಳು ಸುಂದರವಾಗಿ ಕಾಣು ತ್ತಾಳೆಂದು ಅವರು ಬಗೆದಿದ್ದರು. ಕೇವಲ ಅಲಂಕಾರದಿಂದ ಭಯಚಕಿತ ಮುಖವನ್ನಾಗಲೀ ಪ್ರಕಂಪಿತ ದೇಹವನ್ನಾಗಲೀ ಬದಲಿಸಲಾಗದೆಂಬ ಸಂಗತಿಯನ್ನವರು ಮರೆತರು. ಎಷ್ಟು ಶ್ರಮಪಟ್ಟರೂ ಕರುಣಾಜನಕವಾದ ಮುಖ ವಿಕಾರತೆಯನ್ನು ಮರೆಸಲಾಗದೆಂಬ ನಿಜ ವನ್ನವರು ತಿಳಿಯಲಾಗಲಿಲ್ಲ. ಎರಡು ಮೂರು ಅದಲು ಬದಲುಗಳ ತರುವಾಯ, ನೆತ್ತಿಯ ಮೇಲೆ ಶಿಖೆಯನ್ನು ಸರಿಪಡಿಸುತ್ತಿದ್ದಂತೆ, ಕಡುಗೆಂಪು ಉಡುಪನ್ನುಟ್ಟು ಅಂಗ ವಸ್ತ್ರವನ್ನು ನೇರ್ಪಡಿಸಿಕೊಳ್ಳುತ್ತಿದ್ದಂತೆ ಕಿರಿಯ ರಾಜಕುಮಾರಿ ತನ್ನ ಪುಟ್ಟ ಕೈಗಳಿಂದ ಅವಳ ಉಡುಪಿನ ನೆರಿಗೆಗಳನ್ನು ತಿದ್ದುವ, ಹಾಗೂ ಅಂಗವಸ್ತ್ರವನ್ನು ಹೊಂದಿಸುವ ಸಲು

ವಾಗಿ ಅವಳನ್ನೆರಡು ಸಾರಿ ಬಳಸಿದಳು. ತಲೆಯೆತ್ತಿ, ಬಗ್ಗಿಸಿ, ಒಮ್ಮೆ ಒಂದು ಕಡೆ, ಮತ್ತೊಮ್ಮೆ ಮತ್ತೊಂದು ಕಡೆ ಅವಳನ್ನು ಸಂವೀಕ್ಷಿಸಿದಳು.

ಕೈ ಕೈ ಹಿಸುಕಿಕೊಳ್ಳುತ್ತ, ಅವಳು ನಿಶ್ಚಿತ ಧ್ವನಿಯಲ್ಲಿ 'ಇಲ್ಲ, ಇಲ್ಲ, ಇದು ಒಪ್ಪುವುದಿಲ್ಲ. ನಿಜಕ್ಕೂ ಒಪ್ಪುವುದಿಲ್ಲ, ಮೇರಿ. ದಿನ ನಿತ್ಯದ ಬೂದಿ ಬಣ್ಣದ ಉಡುಪಿದೆ ಯಲ್ಲ, ಅದೇ ಸರಿ ನಿನಗೆ. ನನಗೋಸ್ಕರವಾಗಿ ಇದನ್ನು ಬದಲಿಸಬೇಕು' ಎಂದು ಗೋಗರೆದಳು. ಸೇವಿಕೆ ಕಾಟಿಯನ್ನು ಕರೆದು 'ರಾಜಕುಮಾರಿಯ ಬೂದಿ ಬಣ್ಣದ ಉಡುಪಿದೆಯಲ್ಲ, ಅದನ್ನು ತಾ. ಬೌರಿಯನ್ನೆ, ನೀನೇ ನೋಡುವಿಯಂತೆ ಎಷ್ಟರ ಮಟ್ಟಿಗೆ ಅಂದಗೊಳಿಸಬಲ್ಲೆನೆಂಬುದನ್ನು' ಎಂದವಳು ತನ್ನ ರಸಿಕತೆಯನ್ನು ಪ್ರದರ್ಶಿಸಿದಳು.

ಕಾಟಿ ಗೊತ್ತಾದ ಉಡುಪನ್ನು ತಂದಾಗ ಮೇರಿ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಳ್ಳುತ್ತ ನಿಶ್ಚೇಷ್ಟಿತಳಾಗಿ ಕುಳಿತಿದ್ದಳು. ಕಣ್ಣು ನೀರ ಗೂಡಿದ್ದುವು, ತುಟಿ ಕಂಪಿಸುತ್ತಿದ್ದುವು. ಬಿಕ್ಕು ಉಕ್ಕುವುದರಲ್ಲಿತ್ತು.

'ಬಾ, ರಾಜಕುಮಾರಿ, ಇದೇ ಕೊಟ್ಟಕೊನೆಯ ಪ್ರಯತ್ನ' ಎಂದು ಬೌರಿಯನ್ನೆ ಕರೆದಳು.

ಸೇವಿಕೆಯಿಂದ ಉಡುಪನ್ನೀಸಿಕೊಂಡು ಕಿರಿಯ ರಾಜಕುಮಾರಿ ಮೇರಿಯ ಬಳಿ ಬಂದಳು.

'ಈಗ ಸುಲಭವಾಗಿ, ಸರಳವಾಗಿ, ಅಂದವಾಗಿ ಕಾಣುವಂತೆ ಅಣಿಗೊಳಿಸುತ್ತೇವೆ' ಎಂದವಳು ನುಡಿದಳು.

ಕಾಟಿ ಏಕೊ ನಗುತ್ತಿದ್ದಳು. ಅವಳ, ಕಿರಿಯ ರಾಜಕುಮಾರಿಯ ಮತ್ತು ಬೌರಿಯನ್ನೆಯ ಧ್ವನಿಗಳು ಮಿಶ್ರಗೊಂಡು, ಹಕ್ಕಿಗಳ ಚಿಲಿಪಿಲಿಯಂತೆ ಕೇಳಿಸುತ್ತಿದ್ದುವು.

'ನನ್ನನ್ನು ಕಾಡಬೇಡಿ' ಎಂದು ಮೇರಿ ಗದರಿಸಿದಳು.

ದುಃಖ ಗಾಂಭೀರ್ಯ ಸಮ್ಮಿಶ್ರವಾದ ಅವಳ ಧ್ವನಿ ತಕ್ಷಣವೆ ಹಕ್ಕಿಗಳ ಚಿಲಿಪಿಲಿ ಯನ್ನು ಸ್ಥಗಿತಗೊಳಿಸಿತು. ಅವರು ಅವಳ ವಿಶಾಲವೂ ಸುಂದರವೂ ಆಲೋಚನಾ ಮಗ್ನವೂ ಅಶ್ರುಪೂರ್ಣವೂ ಆದ ನೇತ್ರಗಳ ಕಡೆಗೆ ನೋಡಿದರು. ಸಾಂಜಲಿಯಾಗಿ ದೈನ್ಯದಿಂದ ತಮ್ಮಲ್ಲಿಯೇ ನಾಟಿದ್ದ ಕಣ್ಣುಗಳನ್ನು ನೋಡಿದ ಅವರು ಒತ್ತಾಯ ನಿಷ್ಪ್ರಯೋಜಕವೆಂದೂ ಕ್ರೂರವೆಂದೂ ಮನಗಂಡರು.

'ಕೊನೆಗೆ ತಲೆಗೂದಲಿನ ಅಂದವನ್ನಾದರೂ ಬದಲಿಸು' ಎಂದು ಕಿರಿಯ ರಾಜಕುಮಾರಿ ಅಲ್ಪರಿದಳು. 'ನಾನಾಗಲೇ ನಿನಗೆ ಹೇಳಲಿಲ್ಲವೆ, ಮೇರಿಯ ತಲೆ ಗೂದಲನ್ನು ಅಂದಗೈದ ರೀತಿ ಅವಳಿಗೆ ಒಪ್ಪುವುದಿಲ್ಲವೆಂದು? ಖಂಡಿತ ಒಪ್ಪುವುದಿಲ್ಲ. ಅದನ್ನು ಬದಲಾಯಿಸು' ಎಂದವಳು ಆಕ್ಷೇಪಾರ್ಥಕವಾಗಿ ಬೌರಿಯನ್ನೆಯ ಕಡೆ ನೋಡಿ ದಳು.

'ನನ್ನ ಬಳಿ ಯಾರೂ ಇರಬೇಡಿ. ದಯೆಯಿಟ್ಟು ಕಾಡಬೇಡಿ. ನಾನು ಹೇಗಿದ್ದರೂ ಒಂದೆ' ಎಂದು ಗದ್ಗದದೊಡನೆ ಹೊರಡುತ್ತಿದ್ದ ಧ್ವನಿ ಉತ್ತರಿಸಿತು. ಮೇರಿ ಆ ವೇಷ ದಲ್ಲಿ ವಿಕಾರವಾಗಿ, ಸಾಧಾರಣ ದಿನಗಳಿಗಿಂತಲೂ ಕಡೆಯಾಗಿ ಕಾಣುತ್ತಿದ್ದುದಕ್ಕೆ ತಾವೇ ಹೊಣೆಯೆಂದು ಬೌರಿಯನ್ನೆ ಮತ್ತು ಕಿರಿಯ ರಾಜಕುಮಾರಿ ಒಪ್ಪಿಕೊಳ್ಳಬೇಕಾಗಿತ್ತು.

ಆದರೆ ಕಾಲ ಮಿಂಚಿಹೋಗಿತ್ತು. ಅವಳ ದುಃಖತಪ್ತ, ಚಿಂತಾಮಗ್ನ ದೃಷ್ಟಿ ಅವರಿಗೆ ಅಪರಿಚಯವೇನಲ್ಲ. ಅದರಿಂದ ಯಾರಿಗೂ ಭಯವಾಗುತ್ತಿರಲಿಲ್ಲ. ಆದರೆ ಅಂಥ ಸ್ಥಿತಿಯಲ್ಲಿ ಅವಳು ಮೂಕಳಾಗುತ್ತಿದ್ದಳೆಂಬ ಹಾಗೂ ಅವಳ ಸಂಕಲ್ಪ ಅವಿಚಲವಾದುದೆಂಬ ಸಂಗತಿ ಅವರಿಗೆ ಮನವರಿಕೆಯಾಗಿತ್ತು.

'ನೀನದನ್ನು ಬದಲಿಸಲಾರೆಯಾ?!' ಎಂದು ಲೀಸೆ ಪ್ರಶ್ನಿಸಿದಳು. ಮೇರಿಯಿಂದ ಉತ್ತರ ದೊರೆಯಲಿಲ್ಲವಾಗಿ ಅವಳು ಕೋಣೆಯಿಂದ ಹೊರಗೆ ಹೋದಳು.

ಮೇರಿ ಏಕಾಕಿಯಾದಳು. ಅವಳು ಲೀಸೆ ಹೇಳಿದಂತೆ ತನ್ನ ಕೂದಲನ್ನು ತಿದ್ದಿಕೊಳ್ಳಲೂ ಇಲ್ಲ, ಕನ್ನಡಿಯಲ್ಲಿ ನೋಡಿಕೊಳ್ಳಲೂ ಇಲ್ಲ. ಅವಳ ಕೈ ಅಸಹಾಯಕವಾಗಿದ್ದಂತೆ ತೋರುತ್ತಿದ್ದುವು. ಕಣ್ಣು ನೆಲ ನೋಡುತ್ತಿದ್ದುವು; ಚಿಂತೆ ಕಾಡುತ್ತಿತ್ತು. ಬಲಿಷ್ಠನೂ ದೃಢಿಷ್ಠನೂ ಪ್ರಬಲನೂ ಆದ ಪುರುಷ, ಅರ್ಥಾತ್ ಗಂಡ ಅವಳ ಕಲ್ಪನೆಯಲ್ಲಿ ಮೂಡಿ, ಸಂಪೂರ್ಣ ತನ್ನದೇ ಆದ ಆನಂದಮಯ ಪ್ರಪಂಚಕ್ಕೆ ಅವಳನ್ನು ಹೊತ್ತುಕೊಂಡು ಹೋದನು. ಹಿಂದಿನ ದಿನ ತನ್ನ ದಾದಿಯ ಮಗಳ ತೋಳುಗಳಲ್ಲಿ ಕೂಸೊಂದನ್ನು ನೋಡಿದ್ದಳು. ತನ್ನದೇ ಆದ ಅಂಥ ಕೂಸೊಂದು ತನ್ನ ಮೊಲೆಯುಣ್ಣುತ್ತಿದ್ದಂತೆ, ಗಂಡ ಬಳಿ ನಿಂತು ಅವಳನ್ನೂ ಮಗುವನ್ನೂ ಅಕ್ಕರೆಯಿಂದ ನಿಟ್ಟಿಸುತ್ತಿದ್ದಂತೆ ಅವಳು ಕಲ್ಪಿಸಿಕೊಂಡಳು. 'ಆದರೆ ಇಲ್ಲ, ಇದೆಲ್ಲ ಸಾಧ್ಯವಿಲ್ಲ. ನಾನು ಅತ್ಯಂತ ಕುರೂಪಿ' ಎಂಬ ಯೋಚನೆ ಮರುಕ್ಷಣದಲ್ಲಿಯೇ ಅವಳ ಮನಸ್ಸಿನಲ್ಲಿ ಮೂಡಿತು.

'ಚಹಾ ಸಿದ್ಧವಾಗಿದೆ. ದಯೆಯಿಟ್ಟು ಬನ್ನಿ. ರಾಜಕುಮಾರರು ಈ ಕ್ಷಣದಲ್ಲಿ ಬರುವವರಿದ್ದಾರೆ' ಎಂಬ ಸೇವಿಕೆಯ ಧ್ವನಿ ಬಾಗಿಲಲ್ಲಿ ಕೇಳಿಸಿತು. ಅವಳು ಕಲ್ಪನಾ ಲೋಕದಿಂದ ವಾಸ್ತವ ಜಗತ್ತಿಗಿಳಿದಾಗ ತನ್ನ ಕಲ್ಪನೆಗಳನ್ನು ನೆನೆದು ಹೆದರಿದಳು. ಮಹಡಿಯಿಂದಿಳಿಯುವ ಮುನ್ನ ಅವಳು ಪ್ರತಿಮಾಗೃಹಕ್ಕೆ ಹೋದಳು. ದೀಪದ ಬೆಳಕಿನಲ್ಲಿ ರಾರಾಜಿಸುತ್ತಿದ್ದ ಯೇಸುಕ್ರಿಸ್ತನ ಬೃಹತ್ ಪ್ರತಿಮೆಯ ಮುಂದೆ ನಿಂತು, ಕೆಲವು ಕ್ಷಣ ಮುಗಿದ ಕೈಯಾಗಿ ಅದರ ಕಪ್ಪು ಮುಖದಲ್ಲಿ ತನ್ನ ದೃಷ್ಟಿಯನ್ನು ನಾಟಿದಳು. ಅಸಹನೀಯ ಸಂಶಯವೊಂದು ಅವಳ ಅಂತರಂಗವನ್ನು ವ್ಯಾಪಿಸಿಕೊಂಡಿತು. ಪ್ರೇಮದ ಆನಂದವನ್ನನುಭವಿಸುವ, ಪುರುಷನ ಪ್ರೇಮಕ್ಕೆ ಪಾತ್ರವಾಗುವ ಪುಣ್ಯ ತನಗಿದೆಯೆ? ಮದುವೆಯ ವಿಷಯ ಕುರಿತು ಆಲೋಚಿಸುವಾಗ ಮೇರಿ ಭೋಗವೈಭವದ ಹಾಗೂ ಶಿಶುವಾತ್ಸಲ್ಯದ ಕನಸು ಕಂಡಳು. ಕಾಮ ಪಿಪಾಸೆಯ ತೃಪ್ತಿಯೇ ಅವಳ ಪ್ರಬಲತಮ ಗುಪ್ತಾಕಾಂಕ್ಷೆಯಾಗಿತ್ತು. ಅದನ್ನದುಮಲು ಪ್ರಯತ್ನಿಸಿದಷ್ಟೂ ಅದು ಉಲ್ಬಣಗೊಳ್ಳುತ್ತಿತ್ತು. 'ಅಯ್ಯೋ ದೇವರೆ, ಈ ಪೈಶಾಚಿಕ ವ್ಯಾಮೋಹಗಳನ್ನು ನಿಗ್ರಹಿಸುವುದಾದರೂ ಹೇಗೆ? ಶಾಂತಿಯಿಂದ ನಿನ್ನ ಸಂಕಲ್ಪವನ್ನು ಈಡೇರಿಸುವ ಮುನ್ನ ದುಷ್ಟಕಲ್ಪನೆಗಳನ್ನು ತ್ಯಜಿಸುವುದಾದರೂ ಹೇಗೆ?' ಆ ಪ್ರಶ್ನೆ ಮೂಡುತ್ತಿದ್ದಂತೆಯೇ ದೇವರ ಉತ್ತರ ಅವಳ ಅಂತರಂಗದಲ್ಲಿ ಸ್ಫುರಿಸಿತು. 'ನಿನಗಾಗಿ ಏನನ್ನೂ ಬಯಸಬೇಡ, ಏನನ್ನೂ ಹುಡುಕಬೇಡ. ಕಾತರತೆಯಾಗಲೀ ಮಾತ್ಸರ್ಯವಾಗಲೀ ಸಲ್ಲದು. ಮನುಷ್ಯನ ಭವಿಷ್ಯವಾಗಲಿ ನಿನ್ನ ಹಣೆಯ ಬರಹವಾಗಲಿ ಯಾರಿಗೂ ತಿಳಿಯುವಂತಿಲ್ಲ. ಅವು ರಹಸ್ಯವಾಗಿಯೇ ಉಳಿದಿರುತ್ತವೆ. ಎಂಥ ತ್ಯಾಗಕಾರ್ಯಗಳಿಗಾದರೂ ಸಿದ್ಧವಾಗುವಂತೆ

ಬದುಕನ್ನು ಅಣಿಗೊಳಿಸು. ವಿವಾಹದ ಮೂಲಕ ನಿನ್ನನ್ನು ಪರೀಕ್ಷಿಸುವುದೆ ಭಗವಂತನ ಸಂಕಲ್ಪವಾಗುವುದಾದರೆ, ಅದಕ್ಕೆ ಶರಣಾಗು.' ಈ ಸದ್ಭಾವನೆಗಳಿಂದ ಸಮಾಧಾನ ಗೊಂಡು, ಪ್ರಾಪಂಚಿಕ ಕಾಮನೆಗಳನ್ನು ಪೂರೈಸಿಕೊಳ್ಳುವ ನಂಬಿಕೆಯಿಂದ ಮೇರಿ ನಿಡುಸುಯ್ದಳು; ತನ್ನ ಮೇಲುಡುಪು ಮತ್ತು ಕೇಶಾಲಂಕಾರಗಳ ಪರಿವೆ ಇಲ್ಲದೆಯೆ, ಹೇಗೆ ದಿವಾನಖಾನೆಯನ್ನು ಪ್ರವೇಶಿಸಬೇಕು, ಹೇಗೆ ಮಾತಾಡಬೇಕು ಎಂಬ ವಿಷಯ ಗಳ ಬಗ್ಗೆ ಆಲೋಚಿಸದೆಯೆ ಅವಳು ಕೆಳಗಿಳಿದಳು. ಈಶ್ವರೇಚ್ಛೆಯಿಲ್ಲದೆ ಮನುಷ್ಯನ ತಲೆಗೂದಲು ಸಹ ಅಲುಗಾಡುವುದಿಲ್ಲವೆಂದ ಮೇಲೆ ಉಳಿದುವುಗಳ ಬಗ್ಗೆ ಯೋಚಿಸಿ ಪ್ರಯೋಜನವೇನು?

ಅಧ್ಯಾಯ ೪

ರಾಜಕುಮಾರಿ ಮೇರಿ ಕೆಳಗೆ ಬರುವ ವೇಳೆಗೆ ರಾಜಕುಮಾರ ವಸಿಲಿ ಮತ್ತು ಅವನ ಮಗ ದಿವಾನಖಾನೆಯಲ್ಲಿ ಕಿರಿಯ ರಾಜಕುಮಾರಿ ಮತ್ತು ಶ್ರೀಮತಿ ಬೌರಿ ಯನ್ನೆಯರ ಬಳಿ ಮಾತಾಡುತ್ತಿದ್ದರು. ಮೇರಿ ಹಿಮ್ಮಡಿಯ ಮೇಲೆ ಭಾರ ಬಿಟ್ಟು ನಡೆಯುತ್ತ ಒಳಗೆ ಪ್ರವೇಶಿಸಿದಾಗ ಗಂಡಸರು ಮತ್ತು ಬೌರಿಯನ್ನೆ ಮೇಲೆದ್ದರು. ಕಿರಿಯ ರಾಜಕುಮಾರಿ ಮೇರಿಯನ್ನು ಗಂಡಸರ ಬಳಿ ಕರೆದೊಯ್ದು, 'ಇವರನ್ನು ನೋಡು, ಮೇರಿ' ಎಂದಳು. ಮೇರಿ ಅವರನ್ನು ಸವಿವರವಾಗಿ ನೋಡಿದಳು. ಅವಳನ್ನು ನೋಡಿದ ಕೂಡಲೇ ವಸಿಲಿಯ ಮುಖ ಗಂಭೀರವಾಯಿತು; ಮರುಕ್ಷಣದಲ್ಲಿಯೇ ನಗುದೋರಿತು. ಅತಿಥಿಗಳ ಮೇಲೆ ಮೇರಿ ಮೂಡಿಸಿದ ಪ್ರಭಾವವನ್ನು ಕಿರಿಯ ರಾಜ ಕುಮಾರಿ ಕುತೂಹಲದಿಂದ ಗಮನಿಸುತ್ತಿದ್ದಳು. ಸುಂದರ ವದನದ ಬೌರಿಯನ್ನೆ ಯನ್ನೂ, ಅವನಲ್ಲಿಯೇ ನಾಟಿದ್ದ ಉತ್ಸಾಹಭರಿತವಾದ ದೃಷ್ಟಿಯನ್ನೂ ಮೇರಿ ಗಮನಿಸಿ ದಳು. ಆದರೆ ಅವಳು ಅವನನ್ನು ನೋಡಲಾಗಲಿಲ್ಲ. ತಾನು ಕೋಣೆಯನ್ನು ಪ್ರವೇಶಿಸು ತ್ತಿದ್ದಾಗ, ಸುಂದರವೂ ಪ್ರಕಾಶಮಾನವೂ ಸ್ಥೂಲವೂ ಆದ ವಸ್ತುವೊಂದು ತನ್ನ ಕಡೆಗೆ ಚಲಿಸುತ್ತಿದ್ದುದನ್ನವಳು ಗುರುತಿಸಿದ್ದಳು. ಮೊದಲು ಅವಳ ಬಳಿ ಬಂದವನು ವಸಿಲಿ. ತನ್ನ ಕೈಮೇಲೆ ಮಣಿದ ಅವನ ಬೋಳು ಹಣೆಯನ್ನವಳು ಚುಂಬಿಸಿದಳು. ತನ್ನ ಗುರುತಿದೆಯೆ ಎಂದು ಅವನು ಕೇಳಿದ ಪ್ರಶ್ನೆಗುತ್ತರವಾಗಿ, ಅವಳು ಚೆನ್ನಾಗಿ ನೆನಪಿದೆಯೆಂದಳು. ಅನಂತರ ಅನತೋಲ್ ಬಂದನು. ಹತ್ತಿರ ಬಂದಾಗಲೂ ಅವಳು ಅವನನ್ನು ಸರಿಯಾಗಿ ನೋಡಲಾಗಲಿಲ್ಲ. ತನ್ನ ಕೈಯನ್ನು ಬಿಗಿಯಾಗಿ ಹಿಡಿದುಕೊಂಡ ಮೃದು ಹಸ್ತದ ಸ್ಪರ್ಶವನ್ನು ಮಾತ್ರ ಅನುಭವಿಸಿದಳು. ಸುಗಂಧಯುಕ್ತ ಈಷತ್ ಕಪಿಶವರ್ಣದ ಕೇಶ ಹಾರಾಡುತ್ತಿದ್ದ ಬಿಳಿಯ ಹಣೆಯ ಮೇಲೆ ಅವಳು ತನ್ನ ತುಟಿಗಳ ನ್ನೊತ್ತಿದಳು. ಕಣ್ಣೆತ್ತಿ ನೋಡಿದಾಗ ಅವನ ಸೌಂದರ್ಯಕ್ಕೆ ಬೆರಗಾದಳು. ತುಸು ಬಾಗಿದ ತಲೆಯ ಉಬ್ಬಿದೆದೆಯ ಅನತೋಲ್ ತನ್ನ ಸಮವಸ್ತ್ರದ ಗುಂಡಿಯಡಿ ಬಲಗೈ ಹೆಬ್ಬೆರಳನ್ನು ಸಿಕ್ಕಿಸಿಕೊಂಡು, ಒಂದು ಪಾದವನ್ನು ತೂಗಾಡಿಸುತ್ತ ನಿಂತಿದ್ದನು. ಮಾತಿಲಿಯಾಗಿ, ಶೂನ್ಯಚಿತ್ತನಾಗಿ, ತನ್ನ ಕಾಂತಿಯುತವಾದ ಕಣ್ಣುಗಳನ್ನು ಅವಳಲ್ಲಿ ನಾಟಿದ್ದನು. ಅವನು ಸೂಕ್ಷ್ಮಮತಿಯೂ ಅಲ್ಲ, ವಾಕ್ಚತುರನೂ ಅಲ್ಲ. ಸಮಾಜದಲ್ಲಿ

ಅತ್ಯಮೂಲ್ಯವೆಂದು ಪರಿಗಣಿತವಾದ ಅಪ್ರಕ್ಷುಬ್ಧ ಸ್ವಸ್ಥಚಿತ್ತತೆ ಅವನ ಹಿರಿಯ ಗುಣವಾಗಿತ್ತು. ಆತ್ಮಪ್ರತ್ಯಯವಿಲ್ಲದ ವ್ಯಕ್ತಿ ಪ್ರಥಮ ಪರಿಚಯದಲ್ಲಿಯೇ ಮೂಕನಾಗುಳಿದದ್ದಾದರೆ, ಆ ಮೌನ ಅಸಭ್ಯವಾಗಿ ತೋರಿದ್ದಾದರೆ ಪರಿಣಾಮ ಕೆಟ್ಟದ್ದಾಗುತ್ತದೆ. ಅವನು ಕಾಲಲ್ಲಾಡಿಸುತ್ತ, ಹಸಿತವದನನಾಗಿ ಅವಳ ಕುರುಳನ್ನು ಪರೀಕ್ಷಿಸುತ್ತಿದ್ದನು. ಅದೇ ಸ್ಥಿತಿಯಲ್ಲಿ ಅವನು ಬಹಳ ಹೊತ್ತು ನಿಂತಿದ್ದನು. 'ಮೌನ ಬೇಡವಾದವರು ಮುರಿಯಲಿ, ತಾನು ಮಾತ್ರ ಮಾತಾಡುವುದಿಲ್ಲ'ವೆಂಬ ಭಾವ ಅವನ ಮುಖದ ಮೇಲೆ ಅಚ್ಚೊತ್ತಿದಂತಿತ್ತು. ಆತ್ಮಾಧಿಕ್ಯ ಮತ್ತು ಸ್ವಪ್ರತಿಷ್ಠೆಯಿಂದೊಡಗೂಡಿದ ಅವನ ವರ್ತನೆ ಹೆಂಗಸರಲ್ಲಿ ಭಯಗೌರವಾದರಗಳನ್ನು ಮೂಡಿಸುತ್ತಿತ್ತು. 'ನಾನು ನಿನ್ನನ್ನು ಬಲ್ಲೆ, ನಾನು ನಿನ್ನನ್ನು ಬಲ್ಲೆ. ನಿನ್ನ ಬಗ್ಗೆ ನಾನೇಕೆ ತೊಂದರೆ ತೆಗೆದುಕೊಳ್ಳಲಿ? ನಿನಗೆ ಸಂತೋಷವಾಗುತ್ತದೆಂದು ಬಲ್ಲೆ' ಎಂದು ನುಡಿಯುವಂತಿದ್ದುವು ಅವನ ರೀತಿನೀತಿಗಳು. ಈ ಭಾವನೆ ಅಥವಾ ಆಲೋಚನೆಗಳು ಅವನ ಮನಸ್ಸಿನಲ್ಲಿ ಸುಳಿದಿರಲಾರವು. ಆದರೆ ಅವನ ನೋಟಗಳಲ್ಲಿ ಇವು ಸ್ಪಷ್ಟವಾಗಿ ಪ್ರೈದೋರುತ್ತಿದ್ದುವು. ಅವನನ್ನು ನೋಡಿದಾಗ ರಾಜಕುಮಾರಿಗಾದ ಅನುಭವಗಳಿವು. ಅದರಿಂದಾಗಿ ಅವಳು ನಿರಾಸಕ್ತಿಯಿಂದಲೇ ತನ್ನ ತಂದೆಯ ಕಡೆಗೆ ತಿರುಗಿದಳು. ದಿನನಿತ್ಯದ ವಿಷಯಗಳನ್ನು ಕುರಿತ ಸಂಭಾಷಣೆ ಸ್ವಾರಸ್ಯವಾಗಿತ್ತು, ಉತ್ಸಾಹದಿಂದ ಕೂಡಿತ್ತು. ರಾಜಕುಮಾರಿ ಲೀಸೆಯ ಮಂಜುಳ ಧ್ವನಿಯಿಂದಾಗಿ ಹಾಗೂ ಅವಳ ಬಿಳಿಯ ಹಲ್ಲುಗಳನ್ನು ಪ್ರದರ್ಶಿಸುತ್ತಿದ್ದ ಮೃದು ಓಷ್ಠಗಳಿಂದಾಗಿ ಇಡೀ ವಾತಾವರಣದಲ್ಲಿ ವಿಶೇಷ ಕಳೆ ಆವರಿಸಿಕೊಂಡಿತ್ತು. ತನ್ನ ಮತ್ತು ರಾಜಕುಮಾರಿ ವಸಿಲಿಯ ಸಂಬಂಧ ತುಂಬ ಹಳೆಯದು ಹಾಗೂ ಆತ್ಮೀಯವಾದುದೆಂಬಂತೆ ಅತ್ಯಂತ ಸಲುಗೆಯಿಂದ ಹಾಗೂ ಉತ್ಸಾಹದಿಂದ ಅವನೊಡನೆ ಹರಟುತ್ತಿದ್ದಳು, ವಿನೋದ ಮಾಡುತ್ತಿದ್ದಳು, ಹಿತಕರವಾದ ಹಿಂದಿನ ಘಟನೆಗಳನ್ನು ನೆನಪಿಗೆ ತಂದುಕೊಡುತ್ತಿದ್ದಳು. ಆದರೆ ವಾಸ್ತವವಾಗಿ ಅವರ ಸಂಬಂಧ ಹಳೆಯದೂ ಅಲ್ಲ, ಆತ್ಮೀಯವಾದುದೂ ಅಲ್ಲ ; ವಿನೋದಾತ್ಮಕವಾದ ಜೀವನ ಸ್ಮೃತಿಗಳು ನಡೆದುವೂ ಅಲ್ಲ. ವಸಿಲಿ ಸಹ ಅವಳೊಡನೆ ಸಲುಗೆಯಿಂದ ವರ್ತಿಸಿದನು. ಕಿರಿಯ ರಾಜಕುಮಾರಿ ತನ್ನ ಹರಟೆಯಿಂದ ಅನತೋಲನನ್ನೂ ಹತ್ತಿರಕ್ಕೆ ಸೆಳೆದಳು. ಬೌರಿಯನ್ನೆ ಸಹ ಆ ಮಾತುಕತೆಗಳಲ್ಲಿ ಪಾಲುಗೊಂಡಳು. ಮೇರಿಯ ಮನಸ್ಸಿಗೂ ಶಾಂತಿಸಮಾಧಾನಗಳೊದಗಿದುವು.

'ಪ್ರಿಯ ರಾಜಕುಮಾರರೆ, ಇಲ್ಲಂತು ನಮಗೆ ನಿಮ್ಮ ಸಹವಾಸದ ಪೂರ್ಣ ಪ್ರಯೋಜನ ಲಭಿಸಿದೆ. ಅನ್ನತ್ತೆಯ ಸತ್ಕಾರ ಸಮಾರಂಭಗಳಲ್ಲಿ ನೀವು ಕೈಗೆ ಸಿಗುತ್ತಿರಲಿಲ್ಲ. ಅಲ್ಲಲ್ಲಿ ಓಡಾಡುತ್ತಿದ್ದಿರಿ' ಎಂದು ಕಿರಿಯ ರಾಜಕುಮಾರಿ ವಸಿಲಿಯನ್ನು ಫ್ರೆಂಚ್ ಭಾಷೆಯಲ್ಲಿ ಸಂಬೋಧಿಸಿದಳು.

'ಓಹೋ, ಅನ್ನತ್ತೆಯ ಹಾಗೆ ನೀವು ರಾಜಕೀಯ ವಿಚಾರ ಮಾತಾಡುವುದಿಲ್ಲವಲ್ಲ.'

'ಈ ಚಿಕ್ಕ ಚಹ ಕೂಟದಲ್ಲಿ?'

'ನಿಜ, ನಿಜ!'

'ನೀವು ಅನ್ನತ್ತೆಯ ಸತ್ಕಾರ ಕೂಟಗಳಲ್ಲಿ ಕಾಣುತ್ತಿರಲಿಲ್ಲವಲ್ಲ, ಏಕೆ?' ಎಂದು ಕಿರಿಯ ರಾಜಕುಮಾರಿ ಅನತೋಲನನ್ನು ಪ್ರಶ್ನಿಸಿದಳು. 'ನಾನು ಬಲ್ಲೆ, ಬಲ್ಲೆ ಬಿಡಿ' ಎಂದವಳು ಅವನ ಕಡೆಗೆ ಕುಹಕದೃಷ್ಟಿ ಹರಿಸಿದಳು. 'ನಿಮ್ಮಣ್ಣ ಹಿಪ್ಪೊಲೈಟ್ ನಿಮ್ಮೆಲ್ಲ ಕಾರುಬಾರುಗಳನ್ನು ನನಗೆ ತಿಳಿಸಿದ್ದಾರೆ' ಎಂದವಳು ತನ್ನ ತೋರುಬೆರಳನ್ನು ಅವನ ಮುಂದೆ ಅಲ್ಲಾಡಿಸಿದಳು. 'ಪ್ಯಾರಿಸ್ಸಿನಲ್ಲಿ ನೀವು ನಡಸುತ್ತಿದ್ದ ವ್ಯವಹಾರಗಳನ್ನೂ ನಾನು ಬಲ್ಲೆ.'

ಓಡಿಹೋಗಲಿದ್ದ ಅವಳನ್ನು ಉಪಾಯಾಂತರದಿಂದ ತಡೆದು ನಿಲ್ಲಿಸಿದನೇನೋ ಎಂಬಂತೆ ವಸಿಲಿ ಕಿರಿಯ ರಾಜಕುಮಾರಿಯ ಕೈಹಿಡಿದುಕೊಂಡು, ತನ್ನ ಮಗನ ಕಡೆಗೆ ಮುಖವಾಗಿ 'ರಾಜಕುಮಾರಿಗಾಗಿ ತಾನೆಷ್ಟು ಕೊರಗಿ ಬಡವಾದನೆಂಬುದನ್ನು, ಅವಳು ಅವನಿಗೆಂದು ಬಾಗಿಲು ತೋರಿದಳೆಂಬುದನ್ನು ಹಿಪ್ಪೊಲೈಟ್ ನಿನಗೆ ವಿವರಿಸಲಿಲ್ಲವೆ?' ಎಂದು ಪ್ರಶ್ನಿಸಿದನು. ಒಡನೆಯೆ ಅವನು ಮೇರಿಯ ಕಡೆಗೆ ತಿರುಗಿ, ಅಬ್ಬ, ರಾಜಕುಮಾರಿ ಮಹಿಳೆಯರಲ್ಲಿ ರತ್ನಪ್ರಾಯಳಾದವಳು' ಎಂದವನು ನುಡಿದನು.

ಪ್ಯಾರಿಸ್ ನಗರದ ಮಾತು ಬಂದಾಗ ಬೌರಿಯನ್ನೆಗೆ ಖುಷಿಯಾಯಿತು ; ಜೀವನ ಸ್ಮೃತಿಗಳ ಪ್ರವಾಹದಲ್ಲಿ ಸೇರಲು ಅವಳು ಹಿಂಜರಿಯಲಿಲ್ಲ. 'ನೀವು ಪ್ಯಾರಿಸ್‌ನಲ್ಲಿದ್ದದ್ದು ಯಾವಾಗ? ನಿಮಗೆ ಆ ನಗರ ಹಿಡಿಸಿತೆ?' ಎಂದವಳು ಅನತೋಲನನ್ನು ಪ್ರಶ್ನಿಸಿದಳು. ಅನತೋಲ್ ಫ್ರೆಂಚ್ ಮಹಿಳೆಯ ಪ್ರಶ್ನೆಗಳಿಗೆ ಉತ್ತರ ನೀಡಿದನು. ಮುಗುಳು ನಗೆ ಸೂಸುತ್ತ, ಅವಳ ಮುಖವನ್ನೇ ನೋಡುತ್ತ ಅವನು ಅವಳ ಮಾತೃಭೂಮಿಯ ಬಗ್ಗೆ ತಾನು ತಿಳಿದದ್ದನ್ನೆಲ್ಲ ವಿವರಿಸಿದನು. ಬಾಲ್ಡ್ ಹಿಲ್ಸ್‌ನ ಬಾಳು ಸಹ ಬೋಳಲ್ಲವೆಂದು ಅವನು ಯೋಚಿಸಿದನು. 'ಖಂಡಿತ ಕಳಪೆಯಲ್ಲ' ಅವಳ ಮೇಲೆ ನಾಟಿದ್ದ ದೃಷ್ಟಿಯನ್ನಲುಗಿಸದೆ 'ಖಂಡಿತ ಕಳಪೆಯಲ್ಲ, ಆ ಚಿಕ್ಕ ಸಂಗಾತಿಯ ಜತೆಯಲ್ಲಿ ! ಮದುವೆಯಾದ ನಂತರ ಅವಳು ತನ್ನ ಜತೆಯಲ್ಲಿ ಜೀವಕಳೆಯನ್ನು ತಂದಾಳು. ಅವಳು ಆಕರ್ಷಕವಾಗಿದ್ದಾಳೆ' ಎಂದಂದುಕೊಂಡನು.

ಹಿರಿಯ ರಾಜಕುಮಾರ ತನ್ನ ಅಧ್ಯಯನ ಕಕ್ಷ್ಯದಲ್ಲಿ ವಿರಾಮವಾಗಿ ಉಡುಪು ಧರಿಸುತ್ತಿದ್ದಾಗ, ಅವರ ಮುಂದೆ ತಾನು ಯಾವ ರೀತಿ ವರ್ತಿಸಬೇಕೆಂಬುದರ ಬಗ್ಗೆ ಚಿಂತಿಸುತ್ತಿದ್ದನು. ಆಗಾಗ್ಗೆ ಅವನ ಹುಬ್ಬುಗಂಟುಗೊಳ್ಳುತ್ತಿತ್ತು. ಅತಿಥಿಗಳ ಆಗಮನ ಅವನ ಮನಸ್ಸಿಗೆ ಮುಜುಗರವುಂಟುಮಾಡಿತ್ತು. 'ವಸಿಲಿಗೂ ಅವನ ಮಗನಿಗೂ ಅಂತೆಯೇ ನನಗೂ ಎಲ್ಲಿಗೆಲ್ಲಿಯ ಸಂಬಂಧ? ವಸಿಲಿಯೊಬ್ಬ ಮಂಕುದಿಣ್ಣೆ, ಜಂಬದ ಕೋಳಿ. ಅವನ ಮಗನಂತು ತಂದೆಗೊಪ್ಪುವ ಮರುಕು' ಎಂದವನು ಗೊಣಗಿಕೊಂಡನು. ಅತಿಥಿಗಳ ಆಗಮನದಿಂದಾಗಿ ಅವನ ಮನಸ್ಸನ್ನು ಹಿಂಡುತ್ತಿದ್ದ ಅಪರಿಹಾರ್ಯ ಸಮಸ್ಯೆಯೊಂದು ಅವನ ಮುಂದೆ ಕಣೆಗೆದರಿ ನಿಲ್ಲುತ್ತಿತ್ತು. ಅದು ಯಾವಾಗಲೂ ಅವನನ್ನು ವಂಚಿಸುತ್ತಿತ್ತು. ಅವನ ಕೋಪಕ್ಕೂ ಅದೇ ಕಾರಣವಾಗಿತ್ತು. ತನ್ನ ಮಗಳನ್ನು ಗಂಡನಿಗೊಪ್ಪಿಸಿದನಂತರ ತಾನು ಏಕಾಕಿಯಾಗಿರಬೇಕಾಗುತ್ತದೆಂಬ ಭಯ ಅವನನ್ನು ಕಾಡುತ್ತಿತ್ತು. ಆ ಪ್ರಶ್ನೆ ತಲೆದೋರಿದಾಗಲೆಲ್ಲ ಅವನ ಮನಸ್ಸು ಇಬ್ಬಗಿಯಾಗುತ್ತಿತ್ತು. ನ್ಯಾಯ ಮತ್ತು ವಾತ್ಸಲ್ಯಗಳ ನಡುವೆ ಸಂಘರ್ಷ ಪ್ರಾರಂಭವಾಗು

ತ್ತಿತ್ತು. ಮೇರಿಯಿಲ್ಲದ ಬದುಕು ಅವನ ಕಲ್ಪನೆಗೆ ನಿಲುಕದ ಸಂಗತಿಯಾಗಿತ್ತು. 'ಅವಳೇಕೆ ಮದುವೆಯಾಗಬೇಕು?' ಎಂದವನು ಮೇಲಿಂದ ಮೇಲೆ ಪ್ರಶ್ನೆ ಹಾಕಿಕೊಳ್ಳುತ್ತಿದ್ದನು. 'ನಿಜಕ್ಕೂ ಅದರಿಂದ ಸುಖವಿಲ್ಲ. ಆಂಡ್ರೂವನ್ನು ಮದುವೆಯಾಗಿದ್ದಾಳೆ ಲೀಸೆ. ಈ ಕಾಲದಲ್ಲಿ ಅಂಥ ಗಂಡ ಸಿಗುವುದೇ ಅಪರೂಪ. ತನ್ನ ಪ್ರಾಪ್ತಿಯ ಬಗೆಗೆ ಅವಳಿಗೆ ಸಮಾಧಾನವಿದೆಯೆ? ಕೇವಲ ಪ್ರೇಮಕ್ಕಾಗಿ ಯಾರು ಮೇರಿಯನ್ನು ಮದುವೆಯಾಗುತ್ತಾರೆ? ಅವಳು ಕುರೂಪಿ. ನೆಂಟಸ್ತಿಕೆ ಮತ್ತು ಶ್ರೀಮಂತಿಕೆಗೆಂದೇ ಜನ ಮೇಲೆ ಬಿದ್ದು ಬರುತ್ತಿದ್ದಾರೆ. ಅವಿವಾಹಿತ ಮಹಿಳೆಯರಿಲ್ಲವೆ? ಅವರು ಸುಖವಾಗಿಲ್ಲವೆ?' ವಸ್ತ್ರಾಲಂಕರಣ ಸಮಯದಲ್ಲಿ ಬಲ್ಕೋನ್‌ಸ್ಕಿಯ ಆಲೋಚನೆ ಈ ರೀತಿ ಪ್ರವಹಿಸುತ್ತಿತ್ತು. ಅವನು ಯಾವಾಗಲೂ ಮುಂದೂಡುತ್ತಿದ್ದ ಪ್ರಶ್ನೆಗೆ ಆ ಕೂಡಲೇ ಉತ್ತರವನ್ನೊದಗಿಸಬೇಕಾಗಿತ್ತು. ವಸಿಲಿಯ ಆಗಮನೋದ್ದೇಶವೂ ಅವನಿಗೆ ತಿಳಿದಿತ್ತು. ಮದುವೆಯ ಪ್ರಸ್ತಾಪವನ್ನೆತ್ತಲಿಕ್ಕಾಗಿಯೇ ಆವನು ತನ್ನ ಮಗನನ್ನು ಕರೆತಂದಿದ್ದುದು. ಸಮಾಜದಲ್ಲಿ ಅವನ ಜನ್ಮಸ್ಥಾನಗಳು ಗಣ್ಯವಾಗಿಯೇ ಇದ್ದುವು. 'ಈ ಸಂಬಂಧದ ಬಗ್ಗೆ ನನಗೇನೂ ಆಕ್ಷೇಪವಿಲ್ಲ. ಆದರೆ ಇವನು ಅವಳಿಗೆ ತಕ್ಕವನಾಗಿರಬೇಕು. ನಾವು ನೋಡಬೇಕಾದ್ದೇ ಇದು.'

'ನಾವು ನೋಡಬೇಕಾದ್ದೇ ಇದು! ನಾವು ನೋಡಬೇಕಾದ್ದೇ ಇದು!' ಎಂದವನು ಗಟ್ಟಿಯಾಗಿ ಪುನರುಕ್ತಿಸಿದನು.

ಅವನು ಶೀಘ್ರವಾಗಿ ಸುತ್ತಲೂ ಕಣ್ಣು ಹಾಯಿಸುತ್ತ, ಜಾಗರೂಕತೆಯಿಂದ ಹೆಜ್ಜೆ ಹಾಕುತ್ತ, ದಿವಾನಖಾನೆಯನ್ನು ಪ್ರವೇಶಿಸಿದನು. ಬೌರಿಯನ್ನೆಯಳ ರಿಬ್ಬನ್‌ನಲ್ಲಿ ಹಾಗೂ ಕಿರಿಯ ರಾಜಕುಮಾರಿಯ ಉಡುಪಿನಲ್ಲವನು ಬದಲಾವಣೆಯನ್ನು ಗಮನಿಸಿದನು. ಮಗಳ ಕೇಶಾಲಂಕಾರ ಅವನಿಗೆ ಅಸಹ್ಯವಾಗಿ ಕಂಡಿತು. ಅವಳ ಒಂಟಿತನದಲ್ಲಿ ಹಾಗೂ ಅಲ್ಲಿ ನಡೆಯುತ್ತಿದ್ದ ಚರ್ಚೆಯಲ್ಲಿ ಕ್ಷಿಪ್ರ ವ್ಯತ್ಯಾಸವನ್ನು ಗುರುತಿಸಿದನು. 'ಎಂಥ ದಡ್ಡಿಯೂ ಈ ರೀತಿ ಸಿಂಗರಿಸಿಕೊಳ್ಳುತ್ತಿರಲಿಲ್ಲ. ಅವಳು ಲಜ್ಜೆಗೇಡಿ. ಹೇಗೂ ಅವನು ತಿರಸ್ಕರಿಸುತ್ತಾನೆ' ಎಂದವನು ಅವಳ ಕಡೆಗೆ ಸಿಡುಕು ನೋಟ ಬೀರಿದನು.

ಅವನು ನೇರವಾಗಿ ರಾಜಕುಮಾರ ವಸಿಲಿಯ ಕಡೆಗೆ ಸರಿದನು.

'ಬಂದಿರಾ? ಹೇಗಿದ್ದೀರಿ? ಕುಶಲವೆ? ನಿಮ್ಮನ್ನು ನೋಡಿ ಸಂತೋಷವಾಯಿತು.'

'ದೂರದಲ್ಲಿದ್ದಷ್ಟೂ ಸ್ನೇಹ ಮಗಮಗಿಸುತ್ತದೆ. ಇವನು ನನ್ನ ಎರಡನೆಯ ಮಗ. ಅವನ ಮೇಲೆ ನಿಮ್ಮ ದಯೆ ಇರಬೇಕು' ಎಂದು ರಾಜಕುಮಾರ ವಸಿಲಿ ಬೇಗ ಬೇಗನೆ ಆತ್ಮವಿಶ್ವಾಸದಿಂದ ಹಾಗೂ ಆತ್ಮೀಯತೆಯಿಂದ ನುಡಿದನು.

ರಾಜಕುಮಾರ ಬಲ್ಕೋನ್‌ಸ್ಕಿ ಅನತೋಲನನ್ನು ಆಮೂಲಾಗ್ರವಾಗಿ ಸಮೀಕ್ಷಿಸಿದನು. 'ಒಳ್ಳೆಯ ತರುಣ, ಒಳ್ಳೆಯ ತರುಣ, ಭೇಷ್. ಬಾ ಇಲ್ಲಿ, ಮುತ್ತಿಡು' ಎಂದವನು ತನ್ನ ಕೆನ್ನೆಯೊಡ್ಡಿದನು.

ಅನತೋಲ್ ಮುದುಕನನ್ನು ಚುಂಬಿಸಿದನು; ಕುತೂಹಲ ಹಾಗೂ ಜೇಪ್ರಕ್ಷುಬ್ಧತೆಗಳಿಂದ ಅವನನ್ನು ನಿಟ್ಟಿಸಿದನು. ತನ್ನ ತಂದೆ ಮೊದಲೇ ವಿವರಿಸಿದ್ದ ಮುದುಕನ ವಿಲಕ್ಷಣಗಳ ಪ್ರದರ್ಶನಕ್ಕಾಗಿ ಕಾದು ಕುಳಿತನು.

ತನಗೆ ರೂಢಿಯಾಗಿದ್ದ ಮೆತ್ತೆಯ ಮೂಲೆಯೊಂದರಲ್ಲಿ ಬಲ್ಕೋನ್‌ಸ್ಕಿ ಮಂಡಿಸಿ ಕುರ್ಚಿಯೊಂದನ್ನು ಹತ್ತಿರಕ್ಕೆಳೆದುಕೊಂಡು, ಅದರಲ್ಲಿ ಕುಳಿತುಕೊಳ್ಳುವಂತೆ ವಸಿಲಿಗೆ ಸನ್ನೆ ಮಾಡಿದನು ; ರಾಜಕೀಯ ವ್ಯವಹಾರ ಮತ್ತು ಸಮಾಚಾರಗಳ ಬಗ್ಗೆ ಪ್ರಶ್ನಿಸಿದನು. ವಸಿಲಿಯ ಮಾತುಕತೆಗಳನ್ನು ಎಚ್ಚರಿಕೆಯಿಂದ ಕೇಳುವಂತೆ ಕಂಡುಬಂದರೂ ಅವನ ದೃಷ್ಟಿ ಮೇರಿಯಲ್ಲಿ ಕೇಂದ್ರೀಕೃತವಾಗಿತ್ತು.

'ಹಾಗಾದರೆ ಅವರಾಗಲೇ ಪೋಟ್ಸ್‌ದಮ್‌ನಿಂದ ಪತ್ರ ಬರೆಯುತ್ತಿದ್ದಾರೆನ್ನಿ?' ಎಂದವನು ವಸಿಲಿಯ ಕೊನೆಯ ಮಾತುಗಳನ್ನು ಪುನರುಕ್ತಿಸಿದನು. ಅನಂತರ ಅವನು ಹಠಾತ್ತನೆ ಮೇಲೆದ್ದು ಮಗಳ ಕಡೆಗೆ ಸರಿದನು.

'ಅತಿಥಿಗಳಿಗಾಗಿ ನೀನು ಈ ರೀತಿ ಅಲಂಕಾರ ಮಾಡಿಕೊಂಡಿದ್ದೀಯಲ್ಲವೆ? ಸೊಗಸಾಗಿದೆ! ತುಂಬ ಸೊಗಸಾಗಿದೆ. ಓಹೋ, ಅತಿಥಿಗಳಿಗಾಗಿ ಹೊಸ ರೀತಿಯಲ್ಲಿ ಕೇಶಾಲಂಕಾರ ಮಾಡಿಕೊಂಡಿದ್ದೀಯೆಂದು ತಿಳಿಯಿತು. ಭೇಷ್, ಭೇಷ್. ಈ ಅತಿಥಿಗಳ ಸಾಕ್ಷಿಯಾಗಿ ನಾನು ನಿನಗೆ ಸ್ಪಷ್ಟಪಡಿಸುತ್ತಿದ್ದೇನೆ, ಇನ್ನುಮುಂದೆ ನನ್ನ ಅನುಮತಿಯಿಲ್ಲದೆ ನಿನ್ನ ವಸ್ತ್ರಾಲಂಕಾರ ವಿಧಾನವನ್ನು ಬದಲಿಸಲಾಗದು, ತಿಳಿಯಿತೆ?' ಎಂದವನು ಉದ್ಗಾರ ತೆಗೆದನು.

'ಅದು ನನ್ನ ತಪ್ಪು, ಅಪ್ಪ' ಎಂದು ಕಿರಿಯ ರಾಜಕುಮಾರಿ ಕೆನ್ನೆಗೆಂಪಾಗಿ ಮಧ್ಯೆ ಬಾಯಿ ಹಾಕಿದಳು.

ರಾಜಕುಮಾರ ಬಲ್ಕೋನ್‌ಸ್ಕಿ ಸೊಸೆಯ ಕಡೆಗೆ ತಲೆಮಣಿದು 'ನೀನು ಬೇಕಾದರೆ ಹೇಗಾದರೂ ಮಾಡು. ಆದರೆ ಮೊದಲೇ ರೂಪವತಿ, ಮತ್ತಷ್ಟು ರೂಪವತಿಯಾಗುವುದು ಬೇಡ' ಎಂದು ನುಡಿದು ಕುಳಿತುಕೊಂಡನು. ಅವನು ಮತ್ತೆ ಮಗಳ ಕಡೆಗೆ ತಿರುಗಲಿಲ್ಲ. ಮೇರಿಯ ಕಣ್ಣಲ್ಲಿ ನೀರು ಗಳಗಳನೆ ಸುರಿಯಿತು.

'ರಾಜಕುಮಾರಿಗೆ ಈಗಿನ ಕೇಶಾಲಂಕಾರ ಚೆನ್ನಾಗಿ ಒಪ್ಪುತ್ತದಲ್ಲವೆ?' ಎಂದು ವಸಿಲಿ ಪುಸಲಾಯಿಸಿದನು.

ಬಲ್ಕೋನ್‌ಸ್ಕಿ ಅನತೋಲನ ಕಡೆಗೆ ತಿರುಗಿಕೊಂಡು 'ತರುಣ ರಾಜಕುಮಾರರೆ, ಈ ಕಡೆ ಬನ್ನಿ ಈಗ. ನಿಮ್ಮ ಹೆಸರೇನು? ಇಲ್ಲಿ ಬನ್ನಿ, ಮಾತಾಡೋಣ, ಪರಸ್ಪರ ಪರಿಚಯ ಮಾಡಿಕೊಳ್ಳೋಣ' ಎಂದು ಕರೆದನು.

ಅನತೋಲ್ ಮುಗುಳುನಗು ಸೂಸುತ್ತ, ಮುದುಕನ ಬಳಿ ಕುಳಿತುಕೊಂಡು 'ಇದೀಗ ತಮಾಷೆ ಶುರುವಾಗುತ್ತದೆ' ಎಂದು ಬಗೆದನು.

'ನೀವು ವಿದೇಶದಲ್ಲಿ ಓದಿದವರೆಂದು ಕೇಳಿದೆ. ನನ್ನ ಅಥವಾ ನಿಮ್ಮ ತಂದೆಯ ಹಾಗೆ ಓದುಬರಹಗಳನ್ನು ಡೀಕನ್ನನಿಂದ ಕಲಿಯಲಿಲ್ಲವೆಂದು ತಿಳಿದೆ. ನೀವೀಗ ಕಾವಲು ಕುದುರೆಪಡೆಯ ಸೇವೆಯಲ್ಲಿದ್ದೀರೇನು?' ಎಂದು ಮುದುಕ ಪ್ರಶ್ನಿಸುತ್ತ, ಅನತೋಲನನ್ನು ಸೂಕ್ಷ್ಮವಾಗಿ ಹಾಗೂ ವಿವರ ವಿವರವಾಗಿ ಪರೀಕ್ಷಿಸುತ್ತಿದ್ದನು.

'ನನಗೀಗ ಕ್ಷೇತ್ರ ಸೈನ್ಯಕ್ಕೆ ವರ್ಗಾವಣೆಯಾಗಿದೆ' ಎಂದು ಅನತೋಲ್ ಗಟ್ಟಿಯಾಗಿ ನಕ್ಕನು.

'ಭೇಷ್, ಒಳ್ಳೆಯದೆ. ಹಾಗಾದರೆ ನೀವು ತ್ಸಾರನಿಗೂ ದೇಶಕ್ಕೂ ಸೇವೆ ಸಲ್ಲಿಸ

ಬೇಕೆಂದು ಇಚ್ಛಿಸಿದ್ದೀರಲ್ಲವೆ? ಇದು ಯುದ್ಧದ ಕಾಲ. ನಿಮ್ಮಂಥವರು ಈಗ ಮುಂದೆ ಬರಬೇಕು, ಮಗು. ಹಾಗಾದರೆ ನೀವು ಮುಂಚೂಣಿಗೆ ಹೊರಟಿದ್ದೀರಲ್ಲವೆ?'

'ಹಾಗಲ್ಲ, ರಾಜಕುಮಾರರೆ, ನಮ್ಮ ಸೈನ್ಯ ಮುಂಚೂಣಿಗೆ ಸರಿದಿದೆ. ಆದರೆ ಯಾವುದೋ ವಿಭಾಗಕ್ಕೆ ಲಗತ್ತಿಸಿದ್ದಾರೆ. ಯಾವ ವಿಭಾಗಕ್ಕೆ ಅಪ್ಪ' ಎಂದು ಅನತೋಲ್ ತಂದೆಯ ಕಡೆಗೆ ತಿರುಗಿಕೊಂಡು ಹಲ್ಲು ಬಿಡುತ್ತಾನೆ.

'ಅಸಾಧಾರಣ ಯೋಧ, ನಿಜಕ್ಕೂ ಅಸಾಧಾರಣ!...."ನನ್ನನ್ನು ಯಾವ ವಿಭಾಗಕ್ಕೆ ಲಗತ್ತಿಸಿದ್ದಾರೆ? ಅಪ್ಪ" ಅಹಹ, ಅಹಹ' ಎಂದು ಬಲ್ಕೋನ್‌ಸ್ಕಿ ನಕ್ಕನು. ಅನತೋಲ್ ಮತ್ತೂ ಗಟ್ಟಿಯಾಗಿ ನಕ್ಕನು. ಒಡನೆಯೆ ರಾಜಕುಮಾರ ಬಲ್ಕೋನ್‌ಸ್ಕಿಯ ಹುಬ್ಬು ಗಂಟಿಕ್ಕಿತು.

'ನೀವೀಗ ಹೋಗಬಹುದು' ಎಂದವನು ಅನತೋಲನ ಕಡೆಗೆ ನೋಡಿದನು.

ಸ್ತ್ರೀಯರ ಕಡೆಗೆ ನಸುನಗೆ ಬೀರುತ್ತ ಅನತೋಲ್ ಹಿಂದಿರುಗಿದನು.

'ಹಾಗಾದರೆ ಅವರಿಗೆ ವಿದೇಶದಲ್ಲಿ ಶಿಕ್ಷಣ ಕೊಡಿಸಿದ್ದೀರಲ್ಲವೆ, ವಸಿಲಿಯವರೆ? ಎಂದು ಹಿರಿಯ ರಾಜಕುಮಾರ ರಾಜಕುಮಾರ ವಸಿಲಿಯನ್ನು ಪ್ರಶ್ನಿಸಿದನು.

'ನಾನು ಶಕ್ತಿ ಮೀರಿ ಅವನಿಗೆ ಸಕಲ ಸೌಲಭ್ಯಗಳನ್ನು ಕಲ್ಪಿಸಿದ್ದೇನೆ. ಅಲ್ಲಿಯ ಶಿಕ್ಷಣದ ಮಟ್ಟ ನಮ್ಮದಕ್ಕಿಂತ ಉತ್ತಮವಾದುದೆಂದು ನಿಮಗೆ ಭರವಸೆ ನೀಡುತ್ತೇನೆ.'

'ನಿಜ. ಈ ಕಾಲದಲ್ಲಿ ಪ್ರತಿಯೊಂದೂ ಭಿನ್ನವಾಗಿದೆ. ಪ್ರತಿಯೊಂದೂ ಬದಲಾಗಿದೆ. ಹುಡುಗನೇನೋ ಒಳ್ಳೆಯವನೆ, ಮುರುಕು! ಇರಲಿ. ಈಗ ನನ್ನೊಡನೆ ಬನ್ನಿ' ಎಂದವನು ವಸಿಲಿಯ ಕಂಕುಳಲ್ಲಿ ತನ್ನ ತೋಳು ತೂರಿಸಿ, ಅಧ್ಯಯನ ಕಕ್ಷ್ಯಕ್ಕೆ ಕರೆದೊಯ್ದನು. ಅವರು ಏಕಾಂತದಲ್ಲಿದ್ದಾಗ, ವಸಿಲಿ ತನ್ನ ಆಶೆ ಆಕಾಂಕ್ಷೆಗಳನ್ನು ಹಿರಿಯ ರಾಜಕುಮಾರನಿಗೆ ತಿಳಿಸಿದನು.

'ನಾನವಳಿಗೆ ಅಡ್ಡ ಬರುತ್ತೀನಿ, ಅವಳನ್ನಗಲಲಾರೆ ಎಂಬುದು ನಿಮ್ಮ ಅಭಿಪ್ರಾಯವೆ?' ಎಂದು ಹಿರಿಯ ರಾಜಕುಮಾರ ಸಿಡಿದನು. 'ನಾಳೆಯೆ ನಾನು ಸಿದ್ಧ. ನನ್ನ ಅಳಿಯನನ್ನು ಚೆನ್ನಾಗಿ ಅರಿತುಕೊಳ್ಳಬೇಕೆಂಬುದೇ ನನ್ನ ಯೋಚನೆ. ನಾನು ಶಿಸ್ತುಗಾರನೆಂದು, ನಿಯಮ ಪಾಲಕನೆಂದು ನಿಮಗೆ ತಿಳಿದಿದೆಯಷ್ಟೆ. ನಾಳೆ ನಿಮ್ಮೆದುರಿಗೇ ಅವಳನ್ನು ಕೇಳುತ್ತೇನೆ. ಅವಳು ಒಪ್ಪುವುದಾದರೆ, ಅವನು ಇನ್ನು ಕೆಲವು ದಿನ ನಿಲ್ಲಬಹುದು' ಎಂದವನು ನುಡಿದಾಗ ಮೂಗಿನ ಮೂಲಕ ಮಾತಾಡಿದಂತಾಗು ತ್ತಿತ್ತು. 'ಅವಳು ಮದುವೆಯಾಗಲಂತೆ. ಆದರಿಂದ ನನ್ನದೇನೂ ಅಭ್ಯಂತರವಿಲ್ಲ' ಎಂದ ವನು ತನ್ನ ಮಗಳ ಅಗಲಿಕೆಯ ಕಾಲದಲ್ಲಿ ಚೀರುವಂತೆ ಒರಲಿದನು.

ಅವನಂಥ ಚುರುಕು ದೃಷ್ಟಿಯ ಗೆಳೆಯನ ಮುಂದೆ ತನ್ನ ಕುಯುಕ್ತಿ ನಡೆಯ ಲಾರದೆಂದು ನಿಶ್ಚಯಿಸಿಕೊಂಡ ವಸಿಲಿ 'ಜನರ ನಾಡಿಯನ್ನು ಸರಿಯಾಗಿ ಹಿಡಿಯುವ ಸಾಮರ್ಥ್ಯ ನಿಮ್ಮಲ್ಲಿದೆ. ಅನತೋಲ್ ಮಹಾಪ್ರತಿಭಾವಂತನೆಂದು ಹೇಳಲಾರೆ. ಆದರೆ ಅವನು ಪ್ರಾಮಾಣಿಕನೂ, ನಿಷ್ಕಲ್ಮಷ ಹೃದಯಿಯೂ ಆದ ತರುಣ. ಸುಪುತ್ರ ಹಾಗೂ ಸುಬಂಧು' ಎಂದವನು ಮಾತಿನ ಮೋಡಿಯನ್ನು ಮೆರೆಸಿದನು.

'ಸರಿ, ಸರಿ, ನೋಡೋಣ!'

ದೀರ್ಘಕಾಲ ಪುರುಷ ಸಮಾಜದಿಂದ ವಂಚಿತರಾಗಿ, ಏಕಾಂತದಲ್ಲಿ ಬೆಳೆದ ಸ್ತ್ರೀಯರಂತೆ, ರಾಜಕುಮಾರ ಬಲ್ಕೋನ್‌ಸ್ಕಿಯ ಕುಟುಂಬದ ಮೂವರು ಹೆಂಗಸರೂ ಅನತೋಲನನ್ನು ನೋಡಿದಾಗ, ಆ ತನಕದ ತಮ್ಮ ಬಾಳು ನಿಸ್ಸಾರವಾಯಿತೆಂದು ಭಾವಿಸಿದರು. ಅವರ ತರ್ಕ ಸಾಮರ್ಥ್ಯ, ಭಾವ ಶ್ರೀಮಂತಿಕೆ ಹಾಗೂ ಅವರ ವೀಕ್ಷಣ ಶಕ್ತಿ ಕೂಡಲೆ ಹತ್ತು ಪಟ್ಟು ಅಧಿಕವಾದಂತೆ ತೋರಿತು. ಗಾಢಾಂಧಕಾರದಲ್ಲಿ ತೊಳಲಾಡುತ್ತಿದ್ದ ಬದುಕಿಗೆ ವಿಶೇಷಾರ್ಥವೂ ಹೊಸ ಬೆಳಕೂ ಹಠಾತ್ತನೆ ಸಮನಿಸಿದಂತೆ ಭಾಸವಾಯಿತು.

ರಾಜಕುಮಾರಿ ಮೇರಿ ತನ್ನ ಮುಖ ಮತ್ತು ಶಿರೋಭೂಷಣವನ್ನು ಮರೆತಳು. ತನ್ನ ಗಂಡನಾಗಬಹುದಾದ ಆ ವ್ಯಕ್ತಿಯು ತೆರೆದ ಸುಂದರ ಮುಖದಲ್ಲಿ ಅವಳ ಗಮನವೆಲ್ಲ ಕೇಂದ್ರೀಕೃತವಾಗಿತ್ತು. ಅವನು ಅವಳ ಕಣ್ಣಿಗೆ ದಯಾಳುವೂ, ಧೀರನೂ, ದೃಢ ಸಂಕಲ್ಪನೂ, ಉದಾತ್ತನೂ ಆದ ಪುರುಷನಾಗಿ ಕಾಣುತ್ತಾನೆ. ಆ ಬಗ್ಗೆ ಅವಳಿಗೆ ಅಪಾರ ವಿಶ್ವಾಸವಿತ್ತು. ಭವಿಷ್ಯ ಕುಟುಂಬ ಜೀವನದ ಸಾವಿರಾರು ಕನಸುಗಳು ಅವಳ ಕಲ್ಪನೆಯಲ್ಲಿ ಚಿಗುರಿದುವು. ಅವು ಹೊರಗಣವರಿಗೆ ಗೊತ್ತಾಗದಂತೆ ಅದುಮಿಟ್ಟುಕೊಳ್ಳಲು ಪ್ರಯತ್ನಿಸಿದಳು. 'ಆದರೆ ನಾನವನ ಸಮ್ಮುಖದಲ್ಲಿ ಬಿಮ್ಮಗೆ ವರ್ತಿಸಿದೆನಲ್ಲವೆ ?' ಎಂದವಳು ಜ್ಞಾಪಿಸಿಕೊಂಡಳು. 'ನನ್ನ ಮನೋಗುಪ್ತಿಗೊಂದು ಕಾರಣವಿದೆ. ಈಗಾಗಲೇ ನಾನು ಅವನಿಗೆ ತುಂಬ ಹತ್ತಿರವಾಗಿರುವಂತೆ ನನ್ನ ಅಂತರಂಗದ ದನಿ ಪಿಸುಗುಡುತ್ತಿದೆ. ಆದರೆ ಆ ದನಿಯನ್ನವನು ಅರ್ಥ ಮಾಡಿಕೊಳ್ಳಲಾರ. ತನ್ನಲ್ಲಿ ನನಗೆ ಪ್ರೀತಿಯಿಲ್ಲವೇನೋ ಎಂದವನು ಊಹಿಸಿಕೊಳ್ಳಬಹುದು.'

ರಾಜಕುಮಾರಿ ಮೇರಿ ಪ್ರಯತ್ನಿಸಿದರೂ, ಹೊಸ ಅತಿಥಿಯ ಬಗ್ಗೆ ಸ್ನೇಹದಿಂದ ವರ್ತಿಸಲು ಅವಳಿಗೆ ಸಾಧ್ಯವಾಗಲಿಲ್ಲ. 'ಪಾಪದ ಆ ಹುಡುಗಿ ದೆವ್ವ ಹಿಡಿದಂತಿದ್ದಳಲ್ಲಾ' ಎಂದು ಅನತೋಲ್ ಭಾವಿಸಿಕೊಂಡನು.

ಅವನ ಆಗಮನದಿಂದ ಭಾವೋದ್ವಿಗ್ನೆಯಾದ ಕುಮಾರಿ ಬೌರಿಯನ್ನೆ ಸಹ ಬೇರೊಂದು ರೀತಿಯಲ್ಲಿ ಅರ್ಥೈಸಿಕೊಂಡಳು. ತನಗೊಂದು ದೇಶವಿಲ್ಲದ, ಹೇಳಿಕೊಳ್ಳಬಹುದಾದ ಬಂಧುಗಳಿಲ್ಲದ ರೂಪವಂತೆ ತರುಣಿಯಾದರೂ, ಗಟ್ಟಿಯಾಗಿ ಓದುವ ಕಾಯಕದ ಮೂಲಕ ಬಲ್ಕೋನ್‌ಸ್ಕಿಯನ್ನು ಸೇವಿಸುತ್ತ ಮತ್ತು ರಾಜಕುಮಾರಿ ಮೇರಿಯ ಸಂಗದಲ್ಲಿರುತ್ತ ತನ್ನ ಇಡೀ ಬಾಳನ್ನು ಸವೆಸುವ ಉದ್ದೇಶ ಅವಳಿಗಿಲ್ಲ. ಅಲಂಕಾರ ಶೂನ್ಯವಾದ, ಸರಿಯಾಗಿ ಉಡದ ತೊಡದ, ವಕ್ರವರ್ತನೆಯ ರಷ್ಯನ್ ರಾಜಕುಮಾರಿಯರ ಎದುರಿನಲ್ಲಿ ಕೇವಲ ಕಟಾಕ್ಷವೀಕ್ಷಣದಿಂದ ತನ್ನ ಮೇಲ್ಮೆಯನ್ನು ಮೆಚ್ಚಿ, ಪ್ರೀತಿಸಿ, ತನ್ನನ್ನು ಹಾರಿಸಿಕೊಂಡು ಹೋಗಬಲ್ಲ ರಷ್ಯನ್ ರಾಜಕುಮಾರನಿಗಾಗಿ ಅವಳು ಬಹುದಿನಗಳಿಂದ ಕಾದುಕೊಂಡಿದ್ದಳು. ಈಗೊಬ್ಬ ರಾಜಕುಮಾರ ಇಲ್ಲಿಯೇ ಪ್ರತ್ಯಕ್ಷನಾಗಿದ್ದ. ತನ್ನ ಚಿಕ್ಕಮ್ಮನ ಬಾಯಿಂದ ಕೇಳಿ, ತನಗಿಷ್ಟ ಬಂದಂತೆ ಅರ್ಥಮಾಡಿಕೊಂಡಿದ್ದು, ಮೇಲಿಂದ ಮೇಲೆ ಜ್ಞಾಪಿಸಿಕೊಳ್ಳುತ್ತಿದ್ದ ಕತೆಯೊಂದು ಮತ್ತೆ ಅವಳ ಮನದಲ್ಲಿ ತಲೆಯೆತ್ತಿತ್ತು. ಮದುವೆಯಾಗದೆಯೆ ತರುಣನೊಬ್ಬನ ದುಷ್ಪ್ರೇರಣೆಗೊಳಗಾಗಿದ್ದ ಕಾರಣಕ್ಕಾಗಿ ದರಿದ್ರ ಮಾತೆಯ ಶಾಪಕ್ಕೆ ಗುರಿಯಾಗಿದ್ದ ಹುಡುಗಿಯೊಬ್ಬಳ ಕತೆಯದು. ತನ್ನನ್ನು ದುರ್ಮಾರ್ಗಕ್ಕೆಳೆದ ತರುಣನೊಡನೆ ಆ ಕತೆಯನ್ನು ನಿರೂಪಿಸು

ವಂತೆ ಕಲ್ಪಿಸಿಕೊಂಡಾಗ ಅವಳ ಕಣ್ಣು ಕೋಡಿವರಿಯುತ್ತಿದ್ದವು. ಈಗ ಬಂದಿರುವ ರಾಜಕುಮಾರ ತನ್ನನ್ನು ಹಾರಿಸಿಕೊಂಡು ಹೋಗಿ, ಮದುವೆಯಾಗುವಂತೆ ಅವಳು ಮನಸ್ಸಿನಲ್ಲಿ ಮಂಡಗೆ ಸವಿಯುತ್ತಿದ್ದಳು. ಅನತೋಲನ ಜತೆಯಲ್ಲಿ ಪ್ಯಾರಿಸ್ ಬಗ್ಗೆ ತಾನು ಮಾತಾಡುತ್ತಿದ್ದಾಗ ತನ್ನ ಭವಿಷ್ಯವೂ ತಲೆಯಲ್ಲಿ ರೂಪುಗೊಳ್ಳುತ್ತಿತ್ತು. ಮುಂದೇನು ಮಾಡಬೇಕೆಂಬುದರ ಬಗ್ಗೆ ಅವಳು ಮೊದಲೇ ಲೆಕ್ಕಾಚಾರ ಹಾಕಿಕೊಳ್ಳ ದಿದ್ದರೂ, ಎಲ್ಲವೂ ಅವಳಿಗೆ ಸುಪರಿಚಿತವಾಗಿದ್ದಂತೆ ತೋರುತ್ತಿತ್ತು. ಅನತೋಲ್ ಪ್ರತ್ಯಕ್ಷನಾದ ಮೇಲಂತು ಎಲ್ಲ ಆಲೋಚನೆಗಳೂ ಅವನ ಸುತ್ತಮುತ್ತ ಗುಂಪುಗೊಳ್ಳು ತ್ತಿದ್ದುವು. ಅವನನ್ನು ಮೆಚ್ಚಿಸಲು ಶಕ್ತಿಮೀರಿ ಪ್ರಯತ್ನಿಸಿದಳು.

ತುತ್ತೂರಿಯ ನಿನಾದವನ್ನು ಕೇಳಿದ ಮುದಿ ರಣವಾಜಿಯಂತೆ, ತನ್ನ ಪರಿಸ್ಥಿತಿ ಯನ್ನು ಮರೆತೋ ಅಪ್ರಜ್ಞಾಪೂರ್ವಕವಾಗಿಯೋ ಕಿರಿಯ ರಾಜಕುಮಾರಿ ಯಾವ ದುರುದ್ದೇಶವಾಗಲಿ ಹೋರಾಟವಾಗಲಿ ಇಲ್ಲದೆಯೇ, ನಿಷ್ಕಪಟವೂ ಲಘುತರವೂ ಆದ ಹರ್ಷದಿಂದ ಹುಡುಗಾಟಿಕೆಯ ಹಾಗೂ ಸಲುಗೆಯ ನೆಗೆದಾಟಕ್ಕೆ ಸಿದ್ಧಳಾದಳು.

ಸ್ತ್ರೀ ಸಮಾಜದ ಮಧ್ಯೆ ಇದ್ದಾಗ, ಅವರ ಆಕ್ರಮಣಕ್ಕೊಳಗಾಗಬಹುದಾದ ಅಂಜಿಕೆಯಿಂದ ಅನತೋಲ್ ಸಾಮಾನ್ಯವಾಗಿ ಪುರುಷತ್ವವನ್ನು ಪ್ರದರ್ಶಿಸುತ್ತಿದ್ದನು. ಈ ಮೂವರು ಹೆಂಗಸರ ಮೇಲಣ ಪ್ರಭಾವದ ಪ್ರದರ್ಶನದಿಂದಾಗಿ ಅವನ ಬಡಾಯಿಗೆ ಕೋಡು ಮೂಡಿದಂತಾಗಿತ್ತು. ತನ್ನನ್ನು ಹಠಾತ್ತನೆ ವಶಪಡಿಸಿಕೊಂಡು, ಅಸಭ್ಯವೂ ಅಜಾಗರೂಕವೂ ಆದ ವ್ಯಾಪಾರಗಳಿಗೆ ಪ್ರಚೋದಿಸುವ, ಆಕರ್ಷಕವೂ ಉದ್ರೇಕ ಕಾರಿಯೂ ಆದ ಕುಮಾರಿ ಬೌರಿಯನ್ನೆಯ ರಾಗೋಜ್ವಲ ಸಂವೇದನೆಯ ಸ್ಪರ್ಶಸುಖದ ಅನುಭವ ಅವನನ್ನು ಮೆಲ್ಲ ಮೆಲ್ಲನೆ ಆಕ್ರಮಿಸಿಕೊಳ್ಳುತ್ತಿತ್ತು.

ಟೀ ಮುಗಿದ ನಂತರ ಅತಿಥಿಗಳು ಬೈಠಕ್‌ಖಾನೆಗೆ ನಡೆದರು. ತಂತಿವಾದ್ಯವನ್ನು ನುಡಿಸುವಂತೆ ಕುಮಾರಿ ಮೇರಿಯನ್ನು ಕೇಳಿಕೊಳ್ಳಲಾಯಿತು. ಅನತೋಲ್ ನಗುತ್ತ ಉಲ್ಲಾಸದಿಂದ ಕುಮಾರಿ ಬೌರಿಯನ್ನೆಯ ಪಕ್ಕದಲ್ಲಿದ್ದ ಅವಳಿಗೆದುರಾಗಿ ತನ್ನ ಮೊಳ ಕೈಮೇಲೊರಗಿ ಕುಳಿತನು. ಆತಂಕ ಮಿಶ್ರಿತ ಹರ್ಷಭಾವದಿಂದ ಕುಮಾರಿ ಮೇರಿ ಅವನ ಕಡೆಗೆ ನೋಡಿದಳು. ತನಗೆ ಪ್ರಿಯವಾದ ಸಂಗೀತಕೃತಿ ಅವಳನ್ನು ಸುಪರಿಚಿತವಾದ ಕಾವ್ಯಲೋಕಕ್ಕೊಯ್ದಿತ್ತು. ಅವಳ ಮುಖಭಾವದ ಉಜ್ವಲತೆಯಿಂದ ಆ ಲೋಕ ಮತ್ತಷ್ಟು ಕಾವ್ಯಮಯವಾಯಿತು. ಆದರೆ ಅನತೋಲನ ಕಣ್ಣು ಅವಳ ಮೇಲೆ ನಾಟಿ ದ್ದರೂ, ಗಮನ ಮಾತ್ರ ಕುಮಾರಿ ಬೌರಿಯನ್ನೆಯ ಕಿರುಪಾದದ ಚಲನೆಯ ಕಡೆಗೆ ಹರಿದಿತ್ತು. ತಂತಿವಾದ್ಯದ ಕೆಳಗಿನಿಂದ ಅವನು ತನ್ನ ಪಾದವನ್ನು ಅವಳ ಪಾದಕ್ಕೆ ಸೋಕಿಸುತ್ತಿದ್ದನು. ಬೌರಿಯನ್ನೆ ಮೇರಿಯ ಕಡೆಗೆ ಕಣ್ಣಾಗಿದ್ದಳು. ಸುಂದರ ನೇತ್ರ ಗಳಲ್ಲಿ ಅವಳಿಗೆ ಹೊಸದಾಗಿ ತೋರುತ್ತಿದ್ದ ಭಯಮಿಶ್ರಿತ ಆನಂದವೂ ಭರವಸೆಯೂ ಕಾಣುತ್ತಿದ್ದುವು.

'ಅವಳು ನನ್ನನ್ನೆಷ್ಟು ಪ್ರೀತಿಸುತ್ತಾಳೆ?' ಎಂದು ಮೇರಿ ತನ್ನೊಳಗೆ ತಾನೆ ತೃಪ್ತಿ ಪಟ್ಟುಕೊಂಡಳು. 'ನಾನೆಂಥ ಸುಖಿ ಈಗ? ಇಂಥ ಗೆಳತಿಯಿರುವಾಗ, ಅಂಥ ನಲ್ಲ ಸಿಗು ವಾಗ ನನ್ನ ಸುಖಕ್ಕೆ ಎಲ್ಲೆಯಿದೆಯೆ? ಗಂಡ ಅಹುದೆ? ಅದು ಸಾಧ್ಯವೆ?' ಎಂದವಳು

ಅವನ ಮುಖವನ್ನು ನೋಡಲು ಧೈರ್ಯವಿಲ್ಲದೆ, ತನ್ನಲ್ಲಿಯೇ ನೆಟ್ಟ ಅವನ ನೋಟದ ಭಾವವನ್ನು ಪರಿಭಾವಿಸುತ್ತಿದ್ದಳು.

ರಾತ್ರಿ ಭೋಜನದ ನಂತರ ಎಲ್ಲರೂ ವಿಶ್ರಾಂತಿಗಾಗಿ ಸರಿಯಲಿದ್ದಾಗ, ಅನತೋಲ್ ಮೇರಿಯ ಕೈಯನ್ನು ಚುಂಬಿಸಿದನು. ತನ್ನ ದೂರದೃಷ್ಟಿ ದೋಷದ ಕಣ್ಣುಗಳ ಹತ್ತಿರಕ್ಕೆ ಅವನ ಸುಂದರ ಮುಖ ಬಂದಾಗ ಅವಳಿಗೆ ಹೇಗೆ ಧೈರ್ಯ ಬಂದಿತೋ, ಅದನ್ನವಳು ಎವೆಯಿಕ್ಕದೆ ನೋಡಿದಳು. ರಾಜಕುಮಾರಿ ಮೇರಿಯ ಕಡೆಯಿಂದ ಅವನು ಬೌರಿಯನ್ನೆಯ ಕಡೆಗೆ ತಿರುಗಿ, ಅವಳ ಕೈಗೆ ಮುತ್ತಿಟ್ಟನು. (ಅದು ಸಭಾ ಮರ್ಯಾದೆಯಲ್ಲ. ಆದರೆ ಅವನು ಅತ್ಯಂತ ಸರಳವಾಗಿ ಆತ್ಮವಿಶ್ವಾಸದಿಂದ ವರ್ತಿಸಿದ್ದನು) ಬೌರಿಯನ್ನೆಯ ಮುಖ ಕೆಂಪೇರಿತು, ರಾಜಕುಮಾರಿಯನ್ನು ಭಯಚಕಿತ ದೃಷ್ಟಿಯಿಂದ ನೋಡಿದಳು.

'ಎಂಥ ಸೂಕ್ಷ್ಮದ ಪರಿಸ್ಥಿತಿ! ನಾನು ತನ್ನ ಬಗ್ಗೆ ಹೊಟ್ಟೆಕಿಚ್ಚು ಪಡುತ್ತೇನೆಂದವಳು ತಿಳಿದಿರುವಳೆ? ಅವಳು ನನ್ನಲ್ಲಿಟ್ಟಿರುವ ಶುದ್ಧ ಪ್ರೇಮ ಮತ್ತು ಶ್ರದ್ಧಾನಿಷ್ಠೆಗಳನ್ನು ಮರೆತಿರುವೆನೆ?' ಎಂದು ರಾಜಕುಮಾರಿ ಚಿಂತೆಗೀಡಾದಳು. ಅವಳೇ ಗೆಳತಿಯ ಬಳಿ ಹೋಗಿ ಎದೆ ತುಂಬಿ ಚುಂಬಿಸಿದಳು. ರಾಜಕುಮಾರಿಯ ಕೈಗೆ ಮುತ್ತಿಡುವ ಸಲುವಾಗಿ ಅನತೋಲ್ ಅವಳ ಬಳಿ ಸರಿದನು.

'ಕೂಡದು, ಕೂಡದು, ನಿಮ್ಮ ವರ್ತನೆ ಸರಿಯಾಗಿದೆಯೆಂದು ನಿಮ್ಮ ತಂದೆ ನನಗೆ ಬರೆದ ನಂತರ, ನೀವು ನನ್ನ ಕೈ ಚುಂಬಿಸಬಹುದು. ಅಲ್ಲಿಯ ತನಕ ಸಲ್ಲದು!' ಎಂದವಳು ಬೆರಳ ಸನ್ನೆಯಿಂದಲೇ ಅವನನ್ನು ನಿವಾರಿಸಿ, ಮುಗುಳುನಗುತ್ತ, ಕೋಣೆಯಿಂದ ಹೊರನಡೆದಳು.

ಅಧ್ಯಾಯ ೫

ಅತಿಥಿಗಳೆಲ್ಲ ಅಗಲಿದರು. ಎಲ್ಲರೂ ಆ ರಾತ್ರಿ ಬಹು ಹೊತ್ತಿನತನಕ ಎಚ್ಚರವಾಗಿದ್ದರು. ಹಾಸುಗೆ ಮೇಲೆ ಉರುಳಿಕೊಂಡ ಕೂಡಲೇ ಅನತೋಲ್ ಮಾತ್ರ ಗಾಢ ನಿದ್ರೆಗೆ ಸಂದನು.

'ಈ ಅಪರಿಚಿತ ವ್ಯಕ್ತಿ ನಿಜವಾಗಿಯೂ ನನಗೆ ಗಂಡನಾಗುವನೆ? ಅವನಲ್ಲಿರುವ ಮುಖ್ಯ ಗುಣವೆಂದರೆ ದಯಾಪರತೆ' ಎಂಬ ಭಾವನೆ ಮೇರಿಯ ಮನಸ್ಸಿನಲ್ಲಿ ಮೂಡಿತು. ಅವಳು ಸಾಮಾನ್ಯವಾಗಿ ಭಯಸ್ಥೆಯಲ್ಲದಿದ್ದರೂ, ಭೀತಿ ಅವಳ ಚಿತ್ತವನ್ನಾವರಿಸಿತು. ಸುತ್ತಮುತ್ತ ಕಣ್ಣು ಹೊರಳಿಸಲು ಅವಳಿಗೆ ಹೆದರಿಕೆ. ಕತ್ತಲೆಯ ಮೂಲೆಯಲ್ಲಿ, ತೆರೆಯ ಹಿಂದೆ ಯಾರೋ ನಿಂತಿದ್ದಂತೆ ಅವಳಿಗೆ ಕಂಡಿತು. ಆ ಯಾರು ಯಾರಿರಬಹುದು? ಭೂತವೆ? ಬಿಳಿನೊಸಲ, ಕಪ್ಪು ಹುಬ್ಬಿನ, ಕೆಂದುಟಿಯ ಆ ವ್ಯಕ್ತಿ ಇರಬಹುದೇ' ಎಂದವಳು ಭಾವಿಸಿದಳು.

ಅವಳು ಗಂಟೆ ಬಾರಿಸಿದಳು. ಸೇವಕಿ ಬಂದಳು. ತನ್ನ ಕೋಣೆಯಲ್ಲಿ ಮಲಗುವಂತೆ ಅವಳಿಗೆ ಆಜ್ಞಾಪಿಸಿದಳು.

ಆ ರಾತ್ರಿ ಕುಮಾರಿ ಬೌರಿಯನ್ನೆ ಬಹುಹೊತ್ತಿನ ತನಕ ಹಸುರುವಾಣಿ ಚಪ್ಪರದ ಕೆಳಗೆ ಶತಪಥ ತಿರುಗುತ್ತಿದ್ದಳು. ಯಾರಿಗೋ ಕಾದುಕೊಂಡಿದ್ದಂತೆ ಕಾಣು

ತ್ತಿದ್ದಳು. ಅವಳೊಮ್ಮೆ ಮುಗುಳುನಗು ಸೂಸುತ್ತಿದ್ದರೆ, ಮತ್ತೊಮ್ಮೆ ತನ್ನ ಪತನಕ್ಕಾಗಿ ಛೇಡಿಸುತ್ತಿದ್ದ ತಾಯಿಯ ಬಯ್ಗಳನ್ನು ಕಲ್ಪಿಸಿಕೊಂಡು ಅಳುತ್ತಿದ್ದಳು.

ಹಾಸುಗೆ ಸರಿಯಾಗಿಲ್ಲವೆಂದು ಕಿರಿಯ ರಾಜಕುಮಾರಿ ಸೇವಕಿಯೊಡನೆ ಗೊಣಗುತ್ತಿದ್ದಳು. ಪಕ್ಕಕ್ಕಾಗಲಿ, ಮುಖವಡಿಯಾಗಿಯಾಗಲಿ ಅವಳು ಮಲಗಲು ಸಾಧ್ಯವಾಗುತ್ತಿರಲಿಲ್ಲ. ಯಾವ ಕಡೆ ಹೊರಳಿದರೂ ಅಸಹ್ಯವಾಗಿ ಕಷ್ಟಕರವಾಗಿ ಕಾಣುತ್ತಿತ್ತು. ಅನತೋಲನ ಆಗಮನದಿಂದಾಗಿ ಎಂದೂ ಇಲ್ಲದ ಭಾರ ಅವಳನ್ನದುಮುತ್ತಿದ್ದಂತೆ ಭಾಸವಾಗುತ್ತಿತ್ತು. ಅವನು ಬರುವ ಮುನ್ನ ಎಲ್ಲವೂ ಹಗುರವಾಗಿದ್ದಂತೆ ಆನಂದಮಯವಾಗಿದ್ದಂತೆ ಅವಳ ಮನಸ್ಸಿಗೆ ಹೊಳೆಯುತ್ತಿತ್ತು. ಇರುಳು ಟೋಪಿ ಮತ್ತು ಮೇಲಂಗಿಗಳಲ್ಲಿಯೇ ಅವಳು ಕುರ್ಚಿಯಲ್ಲಿ ಕುಳಿತಳು. ಕೆದರುಗೂದಲ, ನಿದ್ದೆಗಣ್ಣಿನ ಕಾತಿ ಮೂರನೆಯ ಸಲ ದಪ್ಪನೆಯ ಮೆತ್ತೆ ಹಾಸುಗೆಯನ್ನು ತಿರುವಿ ತಿರುವಿ ಬಡಿಯುವಾಗ, ಮನಸ್ಸಿನಲ್ಲಿಯೇ ಗೊಣಗಿಕೊಳ್ಳುತ್ತಿದ್ದಳು.

'ಅದೆಲ್ಲ ಗಂಟು ಗಂಟಾಗಿದೆ, ಉಬ್ಬುತಗ್ಗಾಗಿದೆಯೆಂದು ಮೊದಲೇ ನಾನು ನಿನಗೆ ಹೇಳಲಿಲ್ಲವೆ? ಗಾಢವಾಗಿ ನಿದ್ರಿಸಬೇಕೆಂದು ಎಣಿಸಿಕೊಂಡಿದ್ದೆ. ನಿದ್ರೆಹತ್ತದ್ದಕ್ಕೆ ನಾನಲ್ಲ ಕಾರಣ' ಎಂದು ರಾಜಕುಮಾರಿ ಮತ್ತೆ ಮತ್ತೆ ಗೊಣಗುಟ್ಟುತ್ತಿದ್ದಳು. ರೋದಿಸಲು ತೊಡಗುವ ಮಗುವಿನಂತೆ ಅವಳ ಧ್ವನಿ ಗದ್ಗದಿಸುತ್ತಿತ್ತು.

ವೃದ್ಧ ರಾಜಕುಮಾರನಿಗೂ ನಿದ್ದೆ ಹತ್ತಲಿಲ್ಲ. ಕೋಪದಿಂದ ಹೆಜ್ಜೆಯಿಡುತ್ತಿದ್ದ ಮತ್ತು ಘೂಂಕರಿಸುತ್ತಿದ್ದ ಶಬ್ದ ಅರೆನಿದ್ದೆಯಲ್ಲಿದ್ದ ಟಿಖಾನನಿಗೆ ಕೇಳಿಸುತ್ತಿತ್ತು. ತನ್ನ ಮಗಳಿಂದಾಗಿ ತನಗೆ ಅವಮಾನವಾಯಿತೆಂದವನು ಭಾವಿಸಿಕೊಂಡಿದ್ದನು. ತನ್ನಿಂದಲ್ಲದೆ ತನ್ನ ಪ್ರಾಣಕ್ಕಿಂತ ಮಿಗಿಲಾಗಿ ಪ್ರೀತಿಸುತ್ತಿದ್ದ ಮಗಳ ದೆಸೆಯಿಂದ ಸಂಭವಿಸಿದ್ದ ಆ ಅವಮಾನ ಅವನ ಮೇಲೆ ಅಪಾರ ಆಘಾತವುಂಟುಮಾಡಿತ್ತು. ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದನಂತರ ಯಾವುದು ಸರಿಯೆಂಬುದನ್ನು ನಿರ್ಧರಿಸಿಕೊಂಡು ಅದರಂತೆ ವರ್ತಿಸುವುದಾಗಿ ಅವನು ತನ್ನೊಳಗೆ ತಾನೆ ಹೇಳಿಕೊಂಡದ್ದುಂಟು. ಆದರೂ ಅವನು ಕ್ಷಣಕ್ಷಣಕ್ಕು ಭಾವೋದ್ವಿಗ್ನನಾಗುತ್ತಿದ್ದ.

'ಹೊಸಬನೊಬ್ಬ ಬಂದನೆಂದರೆ ಸರಿ, ಅವಳು ನನ್ನನ್ನೂ ಎಲ್ಲವನ್ನೂ ಮರೆತು, ಮಾಹಡಿಯ ಮೇಲೆ ಹಾರಿ ಹೋಗಿ, ಕೂದಲನ್ನಲಂಕರಿಸಿಕೊಂಡು ಬಾಲವಲ್ಲಾಡಿಸುತ್ತ, ತನ್ನನ್ನು ತಾನೇ ಮರೆತುಬಿಡುತ್ತಾಳೆ. ತಂದೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲೂ ಅವಳು ಸಿದ್ಧ. ತನ್ನ ವರ್ತನೆಯನ್ನು ನಾನು ಗಮನಿಸುತ್ತಿದ್ದೇನೆಂಬುದು ಅವಳಿಗೆ ಗೊತ್ತು. ಆ ತಿಳಿಗೇಡಿಯ ದೃಷ್ಟಿಯೆಲ್ಲ ಬೌರಿಯನ್ನೆಯ ಮೇಲೆಂಬ ಸಂಗತಿಯನ್ನು ನಾನು ಬಲ್ಲೆ. ಅವಳನ್ನು ತೊಲಗಿಸಲೇ ಬೇಕು. ಅದನ್ನೆಲ್ಲ ಅರ್ಥಮಾಡಿಕೊಳ್ಳುವಂಥ ಸ್ವಾಭಿಮಾನ ಅವಳಿಗಿರಬೇಡವೆ? ತನಗಲ್ಲದಿದ್ದರೂ, ನನಗೋಸ್ಕರವಾದರೂ ಅವಳಿಗೆ ಅಭಿಮಾನ ಬೇಡವೆ? ಆ ದಡ್ಡನ ಕಣ್ಣು ಬೌರಿಯನ್ನೆಯ ಮೇಲೆ ನಾಟಿದೆಯೆಂಬುದನ್ನು ಅವಳಿಗೆ ಮನದಟ್ಟುಮಾಡಿಕೊಡಬೇಕು. ಇಲ್ಲ, ಅವಳಿಗೆ ಖಂಡಿತ ಅಭಿಮಾನವಿಲ್ಲ. ಇದು ಅವಳಿಗೇ ಕಲ್ಯಾಣವಂತಾಗಲಿ.'

ಮಗಳಿಗೆ ಅವಳ ತಪ್ಪನ್ನು ಮನವರಿಕೆ ಮಾಡಿಕೊಟ್ಟರೆ, ಬೌರಿಯನ್ನೆಯೊಡನೆ

ಅನತೋಲ್ ನಡೆಸುತ್ತಿರುವ ಪ್ರಣಯಚೇಷ್ಟೆಯನ್ನು ಅವಳಿಗೆ ತಿಳಿಸಿದರೆ, ಅವಳ ಆತ್ಮಗೌರವಕ್ಕೆ ಭಂಗ ಬಂದಂತಾಗಿ, ತನ್ನ ಇಷ್ಟಾರ್ಥ ಸಿದ್ಧಿಸುವುದೆಂದು ವೃದ್ಧ ರಾಜಕುಮಾರ ಬಗೆದನು. ಈ ಆಲೋಚನೆಯಿಂದ ತನ್ನನ್ನು ತಾನೆ ಸಮಾಧಾನ ಪಡಿಸಿಕೊಂಡು, ಟಿಖಾನನನ್ನು ಕರೆದು, ಬಟ್ಟೆ ಬದಲಾಯಿಸಲು ತೊಡಗಿದನು. ಒಣಗಿದ ಮುದಿದೇಹದ ಹಾಗೂ ಬಿಳಿಗೂದಲ ಎದೆಯಮೇಲೆ ಇರುಳಂಗಿಯನ್ನು ಟಿಖಾನ್ ತೊಡಿಸುವಾಗ 'ಅವರನ್ನಿಲ್ಲಿಗೆ ಕರೆತಂದ ಸೈತಾನನಾರು? ನಾನವರನ್ನು ಕರೆಯಲಿಲ್ಲ. ನನ್ನ ಬದುಕಿನ ಶಾಂತಿಯನ್ನು ಭಂಗಗೊಳಿಸಲು ಬಂದಿದ್ದಾರೆ. ನನ್ನ ಆಯುಸ್ಸು ಸಹ ಹೆಚ್ಚಿಲ್ಲ' ಎಂದವನು ಅಂದುಕೊಂಡನು. ತಲೆ ಅವನ ಷರ್ಟಿನ ಒಳಗಿದ್ದಾಗಲೇ 'ಭೂತ ಅವರನ್ನೊಯ್ಯಲಿ!' ಎಂದವನು ಶಪಿಸಿದನು.

ಕೆಲವೊಮ್ಮೆ ಗಟ್ಟಿಯಾಗಿ ಆಲೋಚಿಸುತ್ತಿದ್ದ ತನ್ನ ಯಜಮಾನನ ಸ್ವಭಾವ ಟಿಖಾನನಿಗೆ ಗೊತ್ತಿತ್ತು. ಷರ್ಟಿನ ಹೊರಗೆ ಗೋಚರಿಸಿದ ಕೋಪಾನ್ವಿತ ಅನ್ವೇಷಕ ಭಾವದ ಮುಖವನ್ನು ಕಂಡಾಗ ಅವನ ದೃಷ್ಟಿಯಲ್ಲಿ ವ್ಯತ್ಯಾಸ ಕಾಣಲಿಲ್ಲ.

'ಅವರು ಮಲಗಿಕೊಂಡರೆ?' ಎಂದು ರಾಜಕುಮಾರ ಪ್ರಶ್ನಿಸಿದ.

ಇಂಗಿತಜ್ಞರಾದ ಎಲ್ಲ ಅಂಗಸೇವಕರಂತೆ ಟಿಖಾನ್ ತನ್ನ ಯಜಮಾನನ ಆಲೋಚನೆಯ ದಿಕ್ಕನ್ನು ಅಂತರ್ಬೋಧೆಯಿಂದಲೆಂಬಂತೆ ಗ್ರಹಿಸಿದನು. ರಾಜಕುಮಾರ ವಸಿಲಿಗೆ ಮತ್ತು ಅವನ ಮಗನಿಗೆ ಸಂಬಂಧಿಸಿದ ಪ್ರಶ್ನೆಯೆಂದು ಅವನು ಊಹಿಸಿದನು.

'ಅವರು ಮಲಗಿಕೊಂಡಿದ್ದಾರೆ. ದೀಪ ಆರಿಸಿದ್ದಾರೆ, ಮಹಾಪ್ರಭು'

'ಸರಿಯಿಲ್ಲ, ಸರಿಯಿಲ್ಲ' ಎಂದು ಬಿರುಬಿರನೆ ನುಡಿಯುತ್ತ, ತನ್ನ ಚಪ್ಪಲಿಗಳೊಳಗೆ ಕಾಲುಗಳನ್ನು, ಇರುಳಂಗಿಯ ತೋಳುಗಳೊಳಗೆ ತನ್ನ ತೋಳುಗಳನ್ನು ತೂರಿಸುತ್ತ, ಮೆತ್ತೆಯ ಮೇಲೆ ಮಲಗಿದನು.

ಅನತೋಲ್ ಮತ್ತು ಬೌರಿಯನ್ನೆಯರ ನಡುವೆ ಹೆಚ್ಚು ಮಾತು ಜರುಗದಿದ್ದರೂ, ತಮ್ಮ ಪ್ರಣಯ ಪ್ರಕರಣದ ಪ್ರಥಮ ಭಾಗವನ್ನವರು ಚೆನ್ನಾಗಿ ಅರಿತುಕೊಂಡಿದ್ದರು. ಏಕಾಂತವಾಗಿ ಮಾತಾಡಬೇಕಾಗಿದ್ದ ವಿಷಯ ಬಹಳವಾಗಿತ್ತೆಂಬುದೂ ಅವರಿಗೆ ಗೊತ್ತಿತ್ತು. ಅದಕ್ಕಾಗಿ ಒಬ್ಬರೊಬ್ಬರು ಭೇಟಿಯಾಗಲು ಬೆಳಗಿನಿಂದ ಸಮಯಕ್ಕಾಗಿ ಅವರು ಕಾಯುತ್ತಿದ್ದರು. ಕ್ಲುಪ್ತ ಸಮಯಕ್ಕೆ ಸರಿಯಾಗಿ ಮೇರಿ ತನ್ನ ತಂದೆಯ ಕೋಣೆಯೊಳಗೆ ಹೋದಾಗ, ಬೌರಿಯನ್ನೆ ಅನತೋಲರಿಬ್ಬರೂ ಹಸುರು ಚಪ್ಪರದಲ್ಲಿ ಭೇಟಿಯಾದರು.

ಮೇರಿ ಗಾಬರಿಯಿಂದಲೇ ಅಧ್ಯಯನ ಕಕ್ಷ್ಯವನ್ನು ಪ್ರವೇಶಿಸಿದಳು. ತನ್ನ ಹಣೆಬರಹ ಅಂದೇ ತೀರ್ಮಾನವಾಗುವ ಸಂಗತಿ, ಅಂತೆಯೇ ಆ ವಿಚಾರವಾದ ಅವಳ ಆಲೋಚನೆ ಸರ್ವರಿಗೂ ತಿಳಿದಿದ್ದಂತೆ ಅವಳಿಗೆ ತೋರಿತು. ಬಿಸಿನೀರನ್ನೊಯ್ಯುತ್ತಿದ್ದ ಟಿಖಾನ್ ಮತ್ತು ರಾಜಕುಮಾರ ವಸಿಲಿಯ ಅಂಗರಕ್ಷಕರು ತನ್ನನ್ನು ಮೊಗಸಾಲೆಯಲ್ಲಿ ಸಂಧಿಸಿ, ನಮಸ್ಕರಿಸಿದಾಗ, ಅವರ ಮುಖಭಾವದಿಂದವಳು ಅನೇಕ ಊಹೆಗಳನ್ನು ರಚಿಸಿಕೊಂಡಿದ್ದಳು.

ಬೆಳಗ್ಗೆ ವೃದ್ಧರಾಜಕುಮಾರ ತನ್ನ ಮಗಳೊಡನೆ ಎಚ್ಚರಿಕೆಯಿಂದ ವರ್ತಿಸಿ,

ಪ್ರೇಮವರ್ಷವನ್ನು ಸುರಿಸಿದನು. ತಂದೆಯ ಭಾವಾಭಿವ್ಯಕ್ತಿಯಲ್ಲಿ ಮಗಳು ಶ್ರಮವನ್ನು ಗುರುತಿಸಿದ್ದಳು. ಅವಳಿಗೆ ಗಣಿತದ ಲೆಕ್ಕ ಅರ್ಥವಾಗದಿದ್ದಾಗ ಅವಳ ಮುಖದ ನೇರಕ್ಕೆ ಸರಿಯಾಗಿ ತನ್ನ ಬತ್ತಿದ ಮುಷ್ಟಿಯನ್ನು ಹಿಡಿದು ಅವನು ತನ್ನ ರೇಗನ್ನು ಪ್ರದರ್ಶಿಸುತ್ತಿದ್ದುದುಂಟು; ಕುರ್ಚಿಯಿಂದೆದ್ದು, ಸಣ್ಣದನಿಯಲ್ಲಿ ಮಾತುಗಳನ್ನು ಪುನರುಚ್ಚರಿಸುತ್ತ ಅಡ್ಡಾಡುತ್ತಿದ್ದುದುಂಟು. ಅಂಥದೇ ಭಾವವನ್ನು ಮಗಳು ತಂದೆಯ ಮುಖದಲ್ಲಿ ಕಂಡಿದ್ದಳು.

ಪದ್ಧತಿಯಂತೆ ಅವಳನ್ನಾದರಿಸಿ, ಕೂಡಲೇ ಪ್ರಸ್ತುತ ವಿಷಯವನ್ನೆತ್ತಿಕೊಂಡನು. 'ನಿನ್ನನ್ನು ಕುರಿತಂತೆ ನನ್ನದೊಂದು ಸಲಹೆಯಿದೆ' ಎಂದವನು ಕೃತ್ರಿಮ ಹಾಸವನ್ನು ಸೂಸಿದನು. ರಾಜಕುಮಾರ ವಸಿಲಿ ನನ್ನ ಕಣ್ಮಣಿಯನ್ನು ನೋಡಲಿಕ್ಕಾಗಿ ತನ್ನ ಮಾಣಿಯನ್ನು (ಯಾವುದೋ ಕಾರಣಕ್ಕಾಗಿ ರಾಜಕುಮಾರ ಬಲ್ಕೋನ್‌ಸ್ಕಿ ಅನತೋಲನನ್ನು ಮಾಣಿಯೆಂದು ಕರೆದಿದ್ದ.) ಕರೆತಂದಿರಲಾರನೆಂಬ ಸಂಗತಿ ನಿನ್ನ ಊಹೆಗೆ ಬಂದಿರಬೇಕೆಂದು ನಾನು ಎಣಿಸಿದ್ದೇನೆ. ಹಿಂದಿನ ರಾತ್ರಿ ಅವರು ನಿನ್ನ ಪ್ರಸ್ತಾಪವೆತ್ತಿಕೊಂಡು ಮಾತಾಡಿದರು. ನನ್ನ ರೀತಿ ನೀತಿ ನಿನಗೆ ಗೊತ್ತಿದೆಯಷ್ಟೆ?'

'ನಾಚಿಕೆಯಿಂದ ಮುಖ ಬಿಳಿಚಿಕೊಂಡ ರಾಜಕುಮಾರಿ 'ನಿಮ್ಮ ಮನಸ್ಸೇಂತು ನನಗರ್ಥವಾಗುತ್ತದೆ, ಅಪ್ಪ?' ಎಂದು ನುಡಿದಳು.

'ನನ್ನನ್ನರ್ಥ ಮಾಡಿಕೊಳ್ಳುವುದು ಹೇಗೆ ಎಂದೆಯಾ?' ಎಂದು ತಂದೆ ಕೋಪೋದ್ರೇಕನಾಗಿ ಅಬ್ಬರಿಸಿದನು. 'ನಿನ್ನನ್ನು ಸೊಸೆಯಾಗಿ ತಂದುಕೊಳ್ಳುವುದು ರಾಜಕುಮಾರ ವಸಿಲಿಗೆ ತುಂಬ ಇಷ್ಟ. ತನ್ನ ಮಾಣಿಯ ಪರವಾಗಿ ಅವರೇ ಆ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಅರ್ಥಮಾಡಿಕೊಳ್ಳುವುದು ಹೇಗೆಂದು ಕೇಳಿದೆಯಲ್ಲವೆ? ಇದೋ ಹೀಗೆ, ನಾನೀಗ ನಿನ್ನನ್ನು ಕೇಳಬೇಕಾಗಿದೆ.'

'ನಿಮ್ಮ ಅಭಿಪ್ರಾಯ ನನಗೆ ಗೊತ್ತಾಗಲಿಲ್ಲ, ಅಪ್ಪ' ಎಂದು ರಾಜಕುಮಾರಿ ಮೆಲು ದನಿಯಲ್ಲಿ ನುಡಿದಳು.

'ನನ್ನ....ನನ್ನ ಅಭಿಪ್ರಾಯವೆ? ಅದೇನೇ ಇರಲಿ, ನನ್ನನ್ನು ಮರೆತು ನಿನ್ನ ಅಭಿಪ್ರಾಯ ಸೂಚಿಸು. ಮದುವೆಯಾಗುವವನು ನಾನಲ್ಲ. ನನಗೆ ಬೇಕಾದ್ದು ನಿನ್ನ ಅಭಿಪ್ರಾಯ.'

ತನ್ನ ಮದುವೆಯ ವಿಚಾರ ತಂದೆಗೆ ಇಷ್ಟವಿರಲಿಲ್ಲವೆಂದು ರಾಜಕುಮಾರಿಗೆ ಮನವರಿಕೆಯಾಯಿತು. ತನ್ನ ಹಣೆಬರಹ ಆ ಗಳಿಗೆಯಲ್ಲೇ ನಿಶ್ಚಿತವಾಗಬೇಕೇ ಹೊರತು ಮುಂದೆಂದೂ ಸಾಧ್ಯವಿಲ್ಲವೆಂಬುದನ್ನವಳು ಅರಿತಳು. ತಂದೆಯ ನೆಟ್ಟದಿಟ್ಟಿಯ ಕಡೆಗೆ ದಿಟ್ಟಿಹರಿಸಿದರೆ ಮಾತೇ ಹೊರಡುವುದಿಲ್ಲವೆಂಬ ಸತ್ಯ ಅವಳಿಗೆ ಗೊತ್ತಿತ್ತು. ಅವನ ಮಾತಿಗೆ ಶರಣಾಗುವುದೇ ಅವಳವಾಡಿಕೆಯಾಗಿತ್ತು. 'ನಿಮ್ಮ ಇಚ್ಛೆಗನುಗುಣವಾಗಿ ನಡೆಯುವುದೇ ನನ್ನ ಇಷ್ಟ. ನನ್ನ ಬಯಕೆಯನ್ನು ಸ್ಪಷ್ಟಪಡಿಸಬೇಕೆಂದಾದರೆ....'

ಅವಳು ವಾಕ್ಯವನ್ನು ಪೂರ್ತಿಮಾಡುವ ಮುನ್ನವೆ ವೃದ್ಧರಾಜಕುಮಾರ ಮಧ್ಯೆ ಬಾಯಿಹಾಕಿದನು. 'ಭೇಷ್ ನಿಜಕ್ಕೂ ಮೆಚ್ಚಬೇಕಾದ ಮಾತು' ಎಂದವನು ಗರ್ಜಿಸಿದನು. 'ಅವರು ನಿನ್ನ ಬಳುವಳಿಯನ್ನು ಕಸಿದುಕೊಂಡು, ಬೌರಿಯನ್ನೊಡನೆ

ಚೌಕಾಶಿ ಶುರುಮಾಡುತ್ತಾರೆ. ಅವಳು ಮುದುದಿಯಾಗುತ್ತಾಳೆ. ನೀನೋ....' ಎಂದವನು ಮಾತು ನಿಲ್ಲಿಸಿದನು. ಈ ಮಾತು ತನ್ನ ಮಗಳ ಮೇಲೆ ಬೀರಿದ ಪ್ರಭಾವವನ್ನು ಗಮನಿಸಿದನು. ಅವಳು ನತಶಿರೆಯಾದಳು. ಅವಳ ಕಣ್ಣಲ್ಲಿ ನೀರು ತುಳುಕುತ್ತಿದ್ದುವು.

'ಈಗ ನೋಡು, ಮಗು. ನಾನು ತಮೂಷೆಗೆ ಹಾಗೆ ಹೇಳಿದೆ. ತನ್ನ ಪತಿಯನ್ನು ವರಿಸುವ ಪೂರ್ಣ ಹಕ್ಕು ಕನ್ನೆಗಿದೆಯೆಂಬ ತತ್ತ್ವಕ್ಕೆ ನಾನು ಬದ್ಧ. ಈ ವಿಷಯದಲ್ಲಿ ನೀನು ಸ್ವತಂತ್ರೆ. ನಿನ್ನ ಬಾಳಿನ ಸುಖ ನಿನ್ನ ನಿರ್ಧಾರವನ್ನವಲಂಬಿಸಿದೆಯೆನ್ನುವುದನ್ನು ಮಾತ್ರ ನೆನಪಿನಲ್ಲಿಡು. ನನ್ನ ವಿಷಯ ಮನಸ್ಸಿಗೆ ಹಚ್ಚಿಕೊಳ್ಳಬೇಡ.'

'ಆದರೆ ನನಗೇನೂ ಗೊತ್ತಾಗೋಲ್ಲ, ಅಪ್ಪ!'

'ಹೆಚ್ಚು ಮಾತು ಅನವಶ್ಯ. ಅವನು ತನ್ನ ತಂದೆಯ ಆಜ್ಞಾನುಸಾರವಾಗಿ ನಿನ್ನನ್ನೋ ಬೇರೆ ಯಾರನ್ನೋ ಮದುವೆಯಾಗುತ್ತಾನೆ. ಆದರೆ ಆಯ್ಕೆಯ ಸ್ವಾತಂತ್ರ್ಯ ನಿನಗಿದೆ. ನೀನೀಗ ಕೋಣೆಗೆ ಹೋಗು, ಮರಳಿ ಮರಳಿ ಆಲೋಚಿಸು. ಒಂದು ಗಂಟೆಯೊಳಗೆ ಮತ್ತೆ ಬಾ. ಅವರ ಸಮ್ಮುಖದಲ್ಲಿ 'ಉಂಟು ಅಥವಾ ಇಲ್ಲ' ಹೇಳಿಬಿಡು. ನೀನು ಈ ವಿಷಯದಲ್ಲಿ ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತೀಯೆ, ನಿಜ. ಬೇಕಾದರೆ ಪ್ರಾರ್ಥಿಸು, ನಾನು ಬೇಡವೆನ್ನುವುದಿಲ್ಲ. ಆದರೆ ಸರಿಯಾಗಿ ಆಲೋಚಿಸಿ ನೋಡು. ಹೋಗು. ಉಂಟು, ಇಲ್ಲ; ಉಂಟು, ಇಲ್ಲ; ಉಂಟು, ಇಲ್ಲಗಳೊಳಗೆ ಯಾವುದನ್ನಾದರೂ ಹೇಳಿಬಿಡು' ಎಂದವನು ಗರ್ಜಿಸುತ್ತಿದ್ದಂತೆ, ಅವಳು ಕಾವಳದಲ್ಲಿ ಕರಗಿದಂತಾಗಿ, ಅಧ್ಯಯನ ಕಕ್ಷ್ಯದ ಹೊರಗಡೆ ತೂರಾಡಿಕೊಂಡು ಹೋದಳು.

ಅವಳ ಹಣೆಬರಹ ನಿರ್ಧಾರವಾಗಿತ್ತು. ಬೌರಿಯನ್ನೆಯ ಬಗ್ಗೆ ತಂದೆ ಹೇಳಿದ್ದ ವಿಷಯ ಭಯಂಕರವಾಗಿತ್ತು. ಅದರಲ್ಲಿ ಸತ್ಯವಿರಲಿಲ್ಲ. ಆದರೂ ಅದರ ನೆನಪೇ ಭೀಕರವಾಗಿತ್ತು. ಅದರ ಯೋಚನೆಯೆ ಅವಳ ಮನವನ್ನೆಲ್ಲ ಆವರಿಸಿಕೊಂಡಿತ್ತು. ಯಾವ ಕಡೆಗೂ ನೋಡದೆ, ಯಾವುದನ್ನೂ ಕಿವಿಯ ಮೇಲೆ ಹಾಕಿಕೊಳ್ಳದೆ ಅವಳು ಹಸುರು ಚಪ್ಪರದ ಮೂಲಕ ನೇರವಾಗಿ ಹೋಗುತ್ತಿದ್ದಳು. ಅಷ್ಟರಲ್ಲಿ ಬೌರಿಯನ್ನೆಯ ಪಿಸುದನಿ ಅವಳನ್ನೆಚ್ಚರಿಸಿತು. ಅವಳು ಕಣ್ಣೆತ್ತಿ ನೋಡಿದಾಗ, ಎರಡು ಹೆಜ್ಜೆ ದೂರದಲ್ಲಿ ಫ್ರೆಂಚ್ ಮಹಿಳೆಯನ್ನಪ್ಪಿಕೊಂಡು, ಅವಳ ಕಿವಿಯಲ್ಲಿ ಪಿಸುಗುಡುತ್ತಿದ್ದ ಅನತೋಲ್ ಕಣ್ಣಿಗೆ ಬಿದ್ದನು. ಅವನೂ ಅವಳ ಕಡೆಗೆ ನೋಡಿದಾಗ ಅವನ ಸುಂದರ ವದನದಲ್ಲಿ ಅಂಜಿಕೆ ಸುಳಿದಾಡಿತು. ಆದರೆ ಅವನು ಕೂಡಲೇ ಬೌರಿಯನ್ನೆಯ ಸೊಂಟದಿಂದ ತನ್ನ ಕೈಯನ್ನು ಹಿಂತೆಗೆದುಕೊಂಡಿರಲಿಲ್ಲ. ಮೇರಿಯಿನ್ನೂ ಬೌರಿಯನ್ನೆಯ ಕಣ್ಣಿಗೆ ಬಿದ್ದಿರಲಿಲ್ಲ.

'ಯಾರವಳು? ಏಕೆ? ಕ್ಷಣ ತಡೆ' ಎಂಬುದಾಗಿ ಅನತೋಲನ ಮುಖ ಹೇಳುತ್ತಿದ್ದಂತೆ ತೋರಿತು. ಮೇರಿ ಅವರಿಬ್ಬರನ್ನು ಮೌನದಿಂದ ನೋಡಿದಳು. ಅವಳಿಗೆ ಆ ಸಂದರ್ಭ ಅರ್ಥವಾಗಲಿಲ್ಲ. ಕೊನೆಗೆ ಬೌರಿಯನ್ನೆ ಚೀರುತ್ತ ಓಡಿ ಹೋದಳು. ಗೆಲವಿನ ನಗುವಿನಿಂದ ಅವನು ಅವಳ ಕಡೆಗೆ ತಲೆಮಣಿದನು. ಆ ತಮೂಷೆಯ ವ್ಯವಹಾರದ ಬಗ್ಗೆ ಅವಳಿಂದಲೂ ಅವನು ನಗೆಯನ್ನು ನಿರೀಕ್ಷಿಸಿದನು. ಅನಂತರ ಅವನು ಭುಜಹಾರಿಸುತ್ತ, ತನ್ನ ಕೋಣೆಯ ಕಡೆಗೆ ನಡೆದನು.

ಒಂದು ಗಂಟೆಯ ನಂತರ ವೃದ್ಧರಾಜಕುಮಾರನೆಡೆಗೆ ಮೇರಿಯನ್ನು ಕರೆದೊಯ್ಯುವ ಸಲುವಾಗಿ ಟಿಖಾನ್ ಬಂದನು. ರಾಜಕುಮಾರ ವಸಿಲಿಯೂ ಅಲ್ಲಿರುವುದಾಗಿ ಅವಳಿಗೆ ತಿಳಿಸಿದನು. ಅವನು ಬಂದಾಗ ಮೇರಿ ಅಳುತ್ತಿದ್ದ ಬೌರಿಯನ್ನೆಯನ್ನು ತನ್ನ ತೋಳುಗಳೊಳಗೆ ಇರುಕಿಕೊಂಡು, ಅವಳ ಕೂದಲನ್ನು ನೇವರಿಸುತ್ತ, ಸೋಫಾದ ಮೇಲೆ ಕುಳಿತಿದ್ದಳು. ಪ್ರಶಾಂತ ತೇಜಸ್ಸನ್ನು ಮುಕ್ಕಳಿಸುತ್ತಿದ್ದ ರಾಜ-ಕುಮಾರಿಯ ಸುಂದರ ನೇತ್ರಗಳು ಬೌರಿಯನ್ನೆಯ ಅಂದವಾದ ಕಣ್ಣುಗಳ ಕಡೆಗೆ ಪ್ರೇಮಾನುಕಂಪೆಯನ್ನು ಸುರಿಸಿದ್ದುವು.

'ಎಂದೆಂದಿಗೂ ನಿಮ್ಮ ಪ್ರೇಮದಿಂದ ವಂಚಿತಳಾಗಲಿದ್ದೇನೆ, ರಾಜಕುಮಾರಿ' ಎಂದು ಬೌರಿಯನ್ನೆ ಉದ್ಗಾರ ತೆಗೆದಳು.

'ಏಕೆ? ನಾನು ನಿನ್ನನ್ನು ಎಂದಿಗಿಂತಲೂ ಅಧಿಕವಾಗಿ ಪ್ರೀತಿಸುತ್ತೇನೆ. ನಿನ್ನ ಸುಖಕ್ಕಾಗಿ ಏನು ಬೇಕೋ ಅದನ್ನೆಲ್ಲ ಎಸಗಲು ನಾನು ಸಿದ್ಧಳಿದ್ದೇನೆ' ಎಂದು ಮೇರಿ ಭರವಸೆ ನೀಡಿದಳು.

'ಆದರೆ ನನ್ನನ್ನು ಕಡೆಗಣಿಸುವ ಕಾಲ ಬಂದೇ ಬರುತ್ತದೆ. ಭಾವೋದ್ರೇಕಕ್ಕೆ ವಶವಾದವರ ಅವಸ್ಥೆ ಶುದ್ಧ ಮನಸ್ಸಿನ ನಿಮ್ಮಂಥವರಿಗೆ ಅರ್ಥವಾಗುವುದಿಲ್ಲ. ನನ್ನ ಪಾಪದ ತಾಯಿಗೆ ಮಾತ್ರ....'

'ನನಗೆ ಖಂಡಿತ ಅರ್ಥವಾಗುತ್ತದೆ, ಪ್ರಿಯ ಗೆಳತಿ. ಶಾಂತಳಾಗು. ತಂದೆ ಹೇಳಿ ಕಳಿಸಿದ್ದಾರೆ. ಬರುತ್ತೇನೆ' ಎಂದು ಮೇರಿ ದುಃಖ ಮಿಶ್ರಿತ ಮಂದಹಾಸವನ್ನು ಸೂಸಿ, ಹೊರಗೆ ನಡೆದಳು.

ಕೈಯಲ್ಲಿ ನಶ್ಯದ ಭರಣಿ ಹಿಡಿದಿದ್ದ ರಾಜಕುಮಾರ ವಸಿಲಿ, ತೊಡೆಯ ಮೇಲೆ ತೊಡೆಯೇರಿಸಿಕೊಂಡು ಕುಳಿತಿದ್ದನು. ರಾಜಕುಮಾರಿ ಮೇರಿ ಪ್ರವೇಶಿಸಿದಾಗ, ಅವನ ಹೃದಯಾಂತರಾಳವೇ ಕ್ಷೋಭೆಗೊಂಡಂತೆ ಭಾವೋದ್ರೇಕದ ಮಂದಹಾಸ ಅವನ ಮುಖದ ಮೇಲೆ ತಾಂಡವವಾಡುತ್ತಿತ್ತು. ತನ್ನ ಮನಸ್ಸಿನ ಸೂಕ್ಷ್ಮತೆಗಾಗಿ ಒಳಗೊಳಗೆ ಒಮ್ಮೆ ವ್ಯಸನಪಟ್ಟರೆ, ಮತ್ತೊಮ್ಮೆ ನಗುತ್ತಿದ್ದನು. ಶೀಘ್ರವಾಗಿ ಒಂದು ಚಿಟಿಕೆ ನಶ್ಯವನ್ನವನು ಹಿಡಿದುಕೊಂಡನು.

ಅವನು ಮೇಲೆದ್ದು, 'ಬಾ, ಬಾ ಪ್ರೇಮದ ಪುತ್ತಳಿಯೆ' ಎಂದು ಎರಡು ಕೈಗಳಿಂದ ಅವಳನ್ನು ಸ್ವಾಗತಿಸಿದನು. ಅನಂತರ ಅವನು ನಿಟ್ಟುಸಿರು ಬಿಡುತ್ತ 'ನನ್ನ ಮಗನ ಹಣೆಬರಹ ನಿನ್ನ ಕೈಯಲ್ಲಿದೆ. ಯಾವಾಗಲೂ ನಿನ್ನನ್ನು ನನ್ನ ಮಗಳಿಗಿಂತ ಮಿಗಿಲಾಗಿ ಪ್ರೀತಿಸಿದ್ದೇನೆ. ನನ್ನೊಲವಿನ ಸುಮಸಮ ಸುಕುಮಾರಿ ಮೇರಿ, ನಿನ್ನ ನಿರ್ಧಾರವನ್ನು ತಿಳಿಸು' ಎಂದವನು ಕೇಳಿಕೊಂಡು, ಹಿಂದೆ ಸರಿದನು. ಅವನ ಕಣ್ಣುಗಳಲ್ಲಿ ನೀರು ತುಳುಕಿತು.

'ತಮ್ಮ ಮಾಣಿಯು, ಅಂದರೆ ತಮ್ಮ ಮಗನ ಹೆಸರಿನಲ್ಲಿ ರಾಜಕುಮಾರರು ನಿನ್ನ ಮುಂದೆ ಸಲಹೆಯೊಂದನ್ನು ಮಂಡಿಸಿದ್ದಾರೆ. ನೀನು ರಾಜಕುಮಾರ ಅನತೋಲ್ ಕುರಾಗಿನ್ನನ ಮಡದಿಯಾಗಲಿಷ್ಟವಿದೆಯೋ ಇಲ್ಲವೋ ಹೇಳಿಬಿಡು. ಉಂಟು ಅಥವಾ ಇಲ್ಲ. ಅಷ್ಟೇ ಉತ್ತರ ಸಾಕು' ಎಂದು ರಾಜಕುಮಾರ ಬಲ್ಕೋನ್‌ಸ್ಕಿ ಗರ್ಜಿಸಿದನು.

ನನ್ನ ಅಭಿಪ್ರಾಯವನ್ನು ಕೊನೆಗೆ ತಿಳಿಸುತ್ತೇನೆ. ಹೌದಲ್ಲ್ವದು, ನನ್ನದು ಕೇವಲ ಅಭಿಪ್ರಾಯವಷ್ಟೆ?' ಎಂದು ಬಲ್ಕೋನ್‌ಸ್ಕಿ ರಾಜಕುಮಾರ ವಸಿಲಿಯ ಕುತೂಹಲ ದೃಷ್ಟಿಗೆ ಉತ್ತರ ನೀಡುವವನಂತೆ ಅವನ ಕಡೆಗೆ ತಿರುಗಿದನು. 'ಉಂಟು ಅಥವಾ ಇಲ್ಲ ಅಷ್ಟೇ.'

'ನಿಮ್ಮಿಂದೆಂದಿಗೂ ಅಗಲಬಾರದೆಂಬುದೇ ನನ್ನ ಹಂಬಲ, ಅಪ್ಪಾಜಿ. ನಿಮ್ಮನ್ನು ಬಿಟ್ಟು ನಾನು ಹೋಗಲಾರೆ. ನನಗೆ ಮದುವೆಯೇ ಬೇಕಿಲ್ಲ.' ಎಂದವಳು ಕಡ್ಡಿ ತುಂಡಾದಂತೆ ನುಡಿಯುತ್ತ, ವಸಿಲಿಯ ಕಡೆಗೊಮ್ಮೆ, ತಂದೆಯ ಕಡೆಗೊಮ್ಮೆ ಮನೋಹರ ಕಟಾಕ್ಷವನ್ನು ಹರಿಸಿದಳು.

'ಅವಿವೇಕ, ಅಸಂಬದ್ಧ, ಅವಿವೇಕ, ಅವಿವೇಕ, ಅಸಂಬದ್ಧ!' ಎಂದು ರಾಜಕುಮಾರ ಬಲ್ಕೋನ್‌ಸ್ಕಿ ಬೊಬ್ಬಿರಿದು, ಅವಳ ಕೈಹಿಡಿದುಕೊಂಡನು. ಅವನ್ನು ಚುಂಬಿಸದೆ, ತನ್ನ ಹಣೆಯನ್ನಷ್ಟೇ ಮುಟ್ಟಿಸಿ, ಅದುಮಿದಾಗ ಅವಳು ಬೆಚ್ಚಿಬಿದ್ದು, ಕೂಗಿಕೊಂಡಳು.

ರಾಜಕುಮಾರ ವಸಿಲಿ ಮೇಲೆದ್ದನು. 'ಈ ಕ್ಷಣವನ್ನು ನಾನೆಂದಿಗೂ ಮರೆಯಲಾರೆ, ಮಗು. ಕರುಣಾಮಯವೂ ಔದಾರ್ಯ ಸಂಯುತವೂ ಆದ ಈ ಹೃದಯಕ್ಕೆ ಸಂತೋಷವಾಗುವ ಭರವಸೆಯನ್ನು ನೀಡಲಾರೆಯಾ, ತಾಯಿ. "ಪ್ರಾಯಶಃ" ಎಂದಿಷ್ಟೇ ಹೇಳಿಬಿಡು. ಭವಿಷ್ಯ ದೂರವಿದೆ. "ಪ್ರಾಯಶಃ" ಎಂದು ಹೇಳಿಬಿಡು.'

'ಹಿರಿಯರೆ, ನಾನು ನುಡಿದದ್ದೆಲ್ಲ ಎದೆಯಾಳದಿಂದ ಬಂದದ್ದು. ನಿಮ್ಮ ವಿಶ್ವಾಸಕ್ಕಾಗಿ ಧನ್ಯವಾದಗಳು. ಆದರೆ ನಾನೆಂದೂ ನಿಮ್ಮ ಮಗನ ಮಡದಿಯಾಗಲಾರೆ.'

'ಸರಿ, ಪ್ರಿಯ ಮಿತ್ರ. ಈ ಪ್ರಕರಣ ಮುಗಿಯಿತು. ನಿಮ್ಮನ್ನು ನೋಡಿದ್ದೇ ಸಂತೋಷ. ತುಂಬ ಸಂತೋಷ! ನಿಮ್ಮ ಕೋಣೆಗಳಿಗೆ ಹೋಗಿ. ನೀನೂ ಹೋಗು, ಮಗು. ನಿಮ್ಮನ್ನು ನೋಡಿದ್ದೇ ಪರಮ ಸಂತೋಷ' ಎಂದು ಮತ್ತೆ ಮತ್ತೆ ಹೇಳುತ್ತ ವೃದ್ಧ ರಾಜಕುಮಾರ ವಸಿಲಿಯನ್ನಪ್ಪಿಕೊಂಡನು.

'ನನ್ನ ಪ್ರವೃತ್ತಿಯೇ ಬೇರೆ' ಎಂದು ಮೇರಿ ತನ್ನ ಮನದಲ್ಲೆಣಿಸಿಕೊಂಡಳು. 'ಬೇರೊಂದು ತೆರನ ಸುಖದಲ್ಲಿ, ಪ್ರೇಮ ತ್ಯಾಗಗಳ ಸುಖದಲ್ಲಿ ನನ್ನ ಸುಖವಿದೆ. ಎಷ್ಟೇ ಬೆಲೆ ತೆರಬೇಕಾದ ಸಂದರ್ಭವೊದಗಿದರೂ ಸರಿಯೆ, ಅಮೊಲಿಯ ಸುಖಕ್ಕಾಗಿ ನಾನೆಲ್ಲ ಪ್ರಯತ್ನವನ್ನೆಸಗಬೇಕು. ಅವನನ್ನವಳು ಗಾಢವಾಗಿ ಪ್ರೀತಿಸುತ್ತಾಳೆ. ಅಷ್ಟೇ ತೀವ್ರವಾಗಿ ಪಶ್ಚಾತ್ತಾಪ ಪಡುತ್ತಾಳೆ. ಅವರಿಬ್ಬರ ನಡುವೆ ಸಂಬಂಧ ಕುದುರಿಸುತ್ತೇನೆ. ಅವನು ಶ್ರೀಮಂತನಲ್ಲವಾದರೆ, ತಂದೆಯನ್ನೂ ಆಂಡ್ರೂವನ್ನು ಕೇಳಿ, ಅವಳಿಗೆ ಅನುಕೂಲವೊದಗಿಸುತ್ತೇನೆ. ಅವಳು ಅವನ ಮಡದಿಯಾದಾಗ ನನಗೆ ಅಪಾರ ಸಂತೋಷವಾಗುತ್ತದೆ. ಅವಳು ನತದೃಷ್ಟೆ, ಅಪರಿಚಿತೆ, ಏಕಾಕಿನಿ, ದಿಕ್ಕಿಲ್ಲದವಳು! ಓ ದೇವರೆ, ಅವಳು ತನ್ನನ್ನು ತಾನೇ ಮರೆಯಬೇಕಾದರೆ, ಅವನನ್ನೆಷ್ಟು ಗಾಢವಾಗಿ ಪ್ರೀತಿಸುತ್ತಿರಬೇಕು? ಪ್ರಾಯಶಃ ನಾನೂ ಹಾಗೆಯೇ ವರ್ತಿಸುತ್ತಿದ್ದೆನೋ ಏನೊ!....' ಎಂದವಳು ಮನಸ್ಸಿನಲ್ಲಿಯೇ ಅಂದುಕೊಂಡಳು.

ಅಧ್ಯಾಯ ೬

ರೊಸ್ತೋವ್ ಕುಟುಂಬಕ್ಕೆ ನಿಕೊಲಾಸನ ಸುದ್ದಿ ತಿಳಿದು ಬಹುದಿನಗಳಾಗಿದ್ದುವು. ಕೌಂಟನ ಕೈಗೆ ತನ್ನ ಮಗನೇ ಬರೆದ ಪತ್ರ ತಲುಪಿದಾಗ ಅರ್ಧ ಮಾಗಿಯೇ ಮುಗಿದುಹೋಗಿತ್ತು. ಅದು ಕೈಗೆ ಸಿಕ್ಕಿದ ಕೂಡಲೇ, ಅವರಿವರ ಕಣ್ಣು ತಪ್ಪಿಸಿಕೊಳ್ಳುವ ಸಲುವಾಗಿ ಅವನು ಗಾಬರಿಯಿಂದ ತ್ವರೆಯಾಗಿ ಅಧ್ಯಯನ ಕಕ್ಷ್ಯಕ್ಕೆ ಮೆಟ್ಟುಗಾಲಿನಲ್ಲಿ ಸರಿದನು. ಬಾಗಿಲು ಹಾಕಿಕೊಂಡು, ಕಾಗದ ಓದತೊಡಗಿದನು.

ಆ ಮನೆಯಲ್ಲಿ ನಡೆಯುತ್ತಿದ್ದುದೆಲ್ಲ ಅನ್ನಾಮಿಖಾಯ್‌ಲೋವ್ನಳಿಗೆ ಗೊತ್ತಿರುತ್ತಿತ್ತು. ಕಾಗದ ಬಂದ ಸುದ್ದಿ ತಿಳಿದು, ಅವಳು ಮೆಲ್ಲನೆ ಕೌಂಟನ ಕೋಣೆಯೊಳಗೆ ಜುಣುಗಿದಳು. ಏಕಕಾಲದಲ್ಲಿ ಬಿಕ್ಕುತ್ತ, ನಗುತ್ತ ಕಾಗದ ಓದುತ್ತಿದ್ದ ಕೌಂಟನನ್ನವಳು ಕಂಡಳು.

ತನ್ನ ಸ್ಥಿತಿಗತಿ ಉತ್ತಮಗೊಂಡಿದ್ದರೂ ಅನ್ನಾ ಇನ್ನೂ ರೊಸ್ತೋವ್ ಕುಟುಂಬದೊಡನೆಯೇ ವಾಸಿಸುತ್ತಿದ್ದಳು.

ಅವನಲ್ಲಿ ಸಹಾನುಭೂತಿ ವ್ಯಕ್ತಪಡಿಸುವ ದೃಷ್ಟಿಯಿಂದ ಅವಳು ಮರುಕದಿಂದಲೆ 'ಅಕ್ಕರೆಯ ಗೆಳೆಯರೆ?' ಎಂದು ಮಾತು ತೆಗೆದಳು.

ಕೌಂಟ್ ಹೆಚ್ಚುಹೆಚ್ಚಾಗಿ ಗದ್ಗದಿಸತೊಡಗಿದನು.

'ನಿಕೊಲೆಂಕ![1]....ಕಾಗದ....ಗಾ....ಗಾಯ .. ಗಾಯಗೊಂಡ....ಅಯ್ಯೋ ನನ್ನ ಮುದ್ದು ಕಂದ....ಶ್ರೀಮಂತೆ....ಅಧಿಕಾರಿ ಹುದ್ದೆಗೆ ಬಡ್ತಿ ದೊರಕಿದೆಯಂತೆ ...ದೇವರಿಗೆ ಧನ್ಯವಾದ....ಕಿರಿಯ ಶ್ರೀಮಂತೆಗೆ ಈ ವಿಷಯ ಹೇಗೆ ತಿಳಿಸಲಿ?'

ಅನ್ನಾ ಅವನ ಪಕ್ಕದಲ್ಲಿಯೇ ಕುಳಿತುಕೊಂಡು, ತನ್ನ ಕೈಚೌಕದಿಂದ ಕಣ್ಣುಗಳಲ್ಲಿದ್ದ ಮತ್ತು ಕಾಗದದ ಮೇಲೆ ಬಿದ್ದಿದ್ದ ನೀರನ್ನೊರಸಿದಳು. ತನ್ನ ಕಣ್ಣೀರನ್ನು ಒರಸಿಕೊಂಡ ನಂತರ ಶ್ರೀಮಂತನನ್ನು ಸಮಾಧಾನಪಡಿಸಿದಳು. ಊಟದ ವೇಳೆಯಿಂದ ಮೊದಲುಗೊಂಡು ಟೀ ಸಮಯದ ತನಕ ವಾರ್ತಾಸ್ವೀಕಾರಕ್ಕೋಸ್ಕರ ಶ್ರೀಮಂತೆಯ ಮನಸ್ಸನ್ನು ಅಣಿಗೊಳಿಸುವುದಾಗಿಯೂ, ಟೀ ಮುಗಿದ ನಂತರ ದೇವರ ಮೇಲೆ ಭಾರ ಹಾಕಿ, ಸುದ್ದಿಯನ್ನು ಅವಳ ಕಿವಿಗೆ ತಾಕಿಸುವುದಾಗಿಯೂ ಅವಳು ನಿಶ್ಚಯಿಸಿಕೊಂಡಳು.

ಊಟದ ಸಮಯದಲ್ಲಿ ಅವಳದೇ ಮಾತುಕತೆ. ಯುದ್ಧ ವಾರ್ತೆಯ ಬಗ್ಗೆ, ನಿಕೋಲೆಂಕನ ಬಗ್ಗೆ ಪ್ರಸ್ತಾಪಿಸಿದಳು. ತನಗೆ ಮೊದಲೇ ಗೊತ್ತಿದ್ದರೂ ಕೊನೆಯ ಕಾಗದ ಅವನಿಂದ ಬಂದದ್ದು ಯಾವಾಗ ಎಂದು ಎರಡು ಸಾರಿ ಕೇಳಿದಳು. ಅಂದೇ ಕಾಗದ ಬಂದರೂ ಬರಬಹುದೆಂದು ತರ್ಕಿಸಿದಳು. ಅವಳ ಸೂಚನೆಗಳು ಹೆಜ್ಜೆಹೆಜ್ಜೆಗೂ ಶ್ರೀಮಂತೆಯ ಕಾತರತೆಯನ್ನು ಹೆಚ್ಚಿಸುತ್ತಿದ್ದುವು. ಶ್ರೀಮಂತೆ ಶ್ರೀಮಂತನ ಕಡೆಗೊಮ್ಮೆ, ಅನ್ನಾಳ ಕಡೆಗೊಮ್ಮೆ ಕಣ್ಣು ಹಾಯಿಸುತ್ತಿದ್ದಳು. ಅನ್ನಾಳಂತು ಉಪಾಯವಾಗಿ ಸಂಭಾಷಣೆಯನ್ನು ಕ್ಷುಲ್ಲಕ ವಿಷಯಗಳ ಕಡೆಗೆ ತಿರುಗಿಸುತ್ತಿದ್ದಳು. ಧ್ವನಿಯ ಛಾಯೆಯನ್ನು, ದೃಷ್ಟಿಯ ರೀತಿಯನ್ನು, ಅಭಿವ್ಯಕ್ತಿಯ ಮೋಡಿಯನ್ನು ಅರ್ಥಮಾಡಿಕೊಳ್ಳುವಲ್ಲಿ, ಇಡೀ ಕುಟುಂಬದಲ್ಲಿಯೇ ಹೆಚ್ಚು ಸಾಮರ್ಥ್ಯವನ್ನು ಪಡೆದಿದ್ದ ನತಾಷ ಭೋಜನ ವೇಳೆಯಿಂದಲೂ ಅನ್ನಾಳ ಕಿವಿಯನ್ನು ತಿವಿಯುತ್ತಿದ್ದಳು. ತನ್ನ ತಂದೆ

[1] ನಿಕೊಲಾಸ್‌ನ ಮುದ್ದಿನ ಹೆಸರು

ಮತ್ತು ಅನ್ನಾಳ ನಡೆನುಡಿಗಳಲ್ಲಿ ಏನೋ ರಹಸ್ಯವಿದ್ದಿರಬೇಕೆಂದೂ, ಅದು ತನ್ನ ಸೋದರನಿಗೆ ಸಂಬಂಧಿಸಿದ್ದಾಗಿರಬೇಕೆಂದೂ, ಅದರ ಸ್ವೀಕಾರಕ್ಕಾಗಿ ತಮ್ಮನ್ನವಳು ಸಿದ್ಧಗೊಳಿಸುತ್ತಿದ್ದಿರಬೇಕೆಂದೂ ಅವಳು ನಿಸ್ಸಂದೇಹವಾಗಿ ತಿಳಿದುಕೊಂಡಿದ್ದಳು. ಅವಳು ದಿಟ್ಟೆಯಾದರೂ, ನಿಕೋಲೆಂಕನಿಗೆ ಸಂಬಂಧಿಸಿದ ವಿಷಯ ತನ್ನ ತಾಯಿಯ ಮನಸ್ಸನ್ನು ಕಲಕಬಹುದಾದ್ದರಿಂದ, ಊಟದ ಸಮಯದಲ್ಲಿ ಆ ಬಗ್ಗೆ ಪ್ರಶ್ನಿಸಲು ಅವಳು ಧೈರ್ಯ ಮಾಡಲಿಲ್ಲ. ಭಾವೋದ್ರೇಕದಿಂದ ಊಟ ಸೇರದೆ, ಉಪಾಧ್ಯಾಯಿನಿಯ ಸೂಚನೆಯನ್ನು ಲೆಕ್ಕಿಸದೆ, ಅವಳು ಕುರ್ಚಿಯಲ್ಲಿಯೇ ಲಿವಿಲಿವಿ ಒದ್ದಾಡುತ್ತಿದ್ದಳು. ಊಟದ ತರುವಾಯ ನೇರವಾಗಿ ಅನ್ನಾಳನ್ನು ಹಿಂಬಾಲಿಸಿ, ಅವಳ ಕಡೆಗೆ ದಡದಡನೆ ಧಾವಿಸಿ, ಬೈಠಕ್ ಖಾನೆಯಲ್ಲಿ ಸಿಕ್ಕಿದ ಕೂಡಲೇ ಅವಳ ಕುತ್ತಿಗೆಗೆ ನೇತುಹಾಕಿಕೊಂಡಳು: 'ಅದೇನು ನನಗೆ ಹೇಳಬಾರದೆ? ಚಿಕ್ಕಮ್ಮ'

'ಏನೂ ವಿಶೇಷವಿಲ್ಲ, ಮಗಳೆ'

'ನನ್ನ ಒಲವೆ, ನನ್ನ ಜೇನೆ, ನನ್ನ ಸಿಹಿಯೆ, ನಾನೀಗ ನಿನ್ನನ್ನು ಬಿಡುವುದಿಲ್ಲ. ನಿನಗೆ ಏನೋ ಸುದ್ದಿ ಗೊತ್ತಿದೆಯೆಂಬುದನ್ನು ಬಲ್ಲೆ.'

ಅನ್ನಾ ಮಿಖಾಯ್‌ಲೋವ್ನ ತನ್ನ ತಲೆ ಅಲ್ಲಾಡಿಸಿದಳು. 'ನೀನೊಬ್ಬಳು ಠಕ್ಕುಗಾತಿ' ಎಂದು ನುಡಿದಳು.

ಅನ್ನಾಳ ಮುಖಭಾವವನ್ನರ್ಥ ಮಾಡಿಕೊಂಡು 'ನಿಕೋಲೆಂಕನಿಂದ ಪತ್ರ ಬಂದಿರಬೇಕು! ಆ ಬಗ್ಗೆ ನನಗೆ ಸಂದೇಹವೇ ಇಲ್ಲ' ಎಂದು ನತಾಷ ಒದರಿದಳು.

'ದಮ್ಮಯ್ಯ, ಎಲ್ಲಿಯಾದರೂ ಬಾಯಿ ಬಿಟ್ಟೀಯೆ? ಜೋಕೆ. ಮಮ್ಮಿಗೆ ಅದರಿಂದ ಎಷ್ಟು ತೊಂದರೆಯಾಗುತ್ತದೆಂಬುದು ನಿನಗೆ ತಿಳಿಯದ ವಿಷಯವೇನಲ್ಲ.'

'ಅದು ನನಗೆ ಗೊತ್ತು. ನನಗೆ ನಿಜ ಹೇಳಿಬಿಡು. ಹೇಳಲಿಲ್ಲ, ಈಗಲೇ ಹೋಗಿ ಅದನ್ನು ರಟ್ಟುಮಾಡಿಬಿಡುತ್ತೇನೆ'

ಯಾರಿಗೂ ಹೇಳಕೂಡದೆಂಬ ಶರತ್ತಿನ ಮೇಲೆ, ಕಾಗದದ ಒಕ್ಕಣೆಯನ್ನು ಕೆಲವು ಮಾತುಗಳಲ್ಲಿ ಸಂಗ್ರಹಿಸಿ ಹೇಳಿದಳು.

'ನನ್ನಾಣೆ, ಯಾರಿಗೂ ಹೇಳುವುದಿಲ್ಲ' ಎಂದು ನತಾಷ ಅಡ್ಡಬಾಯಿ ಹಾಕಿ, ಕೂಡಲೇ ಸೋನ್ಯ ಬಳಿಗೆ ಓಡಿಹೋದಳು.

'ನಿಕೋಲೆಂಕ....ಗಾಯಗೊಂಡಿದ್ದಾನೆ....ಪತ್ರ' ಎಂದವಳು ವಿಜಯೋತ್ಸಾಹದ ಆನಂದದಿಂದ ಘೋಷಿಸಿದಳು.

'ನಿಕೊಲಾಸ್' ಎಂದು ಉಚ್ಚರಿಸುತ್ತಿದ್ದಂತೆ, ಸೋನ್ಯಾಳ ಮುಖ ಬಿಳಿಚಿಕೊಂಡಿತು.

ತನ್ನ ಸೋದರ ಗಾಯಗೊಂಡ ಸುದ್ದಿ ಸೋನ್ಯಳ ಮನಸ್ಸಿನ ಮೇಲೆ ಬೀರಿದ ಪರಿಣಾಮದಿಂದಾಗಿ ನತಾಷ ಮೊತ್ತ ಮೊದಲಿಗೆ ಆ ಸುದ್ದಿಯ ದುಃಖದ ಮಗ್ಗುಲನ್ನು ಮನಗಂಡಳು. ಸೋನ್ಯಳ ಬಳಿಗೆ ಹಾಯ್ದು, ಅಪ್ಪಿಕೊಂಡು, ಅಳಲಾರಂಭಿಸಿದಳು. 'ಸಣ್ಣ ಗಾಯ. ಅವನನ್ನು ಅಧಿಕಾರಿಯ ಹುದ್ದೆಗೆ ಏರಿಸಲಾಗಿದೆ. ಅವನೀಗ ಕ್ಷೇಮದಿಂದಿದ್ದಾನೆ. ಅವನೇ ಸ್ವತಃ ಪತ್ರ ಬರೆದಿದ್ದಾನೆ' ಎಂದವಳು ಕಣ್ಣೀರಿನ ನಡುವೆಯೇ ನುಡಿದಳು.

'ಅಗೊಳ್ಳಪ್ಪ! ಹೆಂಗಸರೆಲ್ಲ ಅಳುಗುನ್ನಿ ಮಕ್ಕಳೆಂಬುದು ನಿಜ' ಎಂದು ಪೇತ್ಯ ಕೋಣೆಯೊಳಗೆ ದೊಡ್ಡ ದಿಟ್ಟ ಹೆಜ್ಜೆ ಹಾಕುತ್ತ ಟೀಕಿಸಿದನು. 'ನನ್ನ ಸೋದರನಿಗೊದ ಗಿರುವ ಯಶಸ್ಸಿಗಾಗಿ ನನಗೆ ಸಂತೋಷವಾಗಿದೆ. ಆನಂದವೋ ಆನಂದ. ನೀವೆಲ್ಲ ಅತ್ತು ಅತ್ತು, ಮುಖ ಊದಿಸಿ ಕೊಳ್ಳುವಿರಿ ಹೊರತು, ಯಾವುದೂ ನಿಮಗರ್ಥವಾಗುವುದಿಲ್ಲ' ಕಣ್ಣೀರಿನ ನಡುವೆಯೇ ನತಾಷಳ ಮಂದಹಾಸ ಮಿಂಚಿತು.

'ನೀನು ಕಾಗದ ಓದಿಲ್ಲವಷ್ಟೆ?' ಎಂದು ಸೋನ್ಯ ಪ್ರಶ್ನಿಸಿದಳು.

'ಇಲ್ಲ, ಗಾಯಗೀಯ ಎಲ್ಲ ಮಾದಿದೆಯಂತೆ. ಅವನೀಗ ಅಧಿಕಾರಿಯಂತೆ. ಇದನ್ನೇ ಅನ್ನಾ ಹೇಳಿದ್ದು.'

'ದೇವರ ದಯೆಯೊಂದಿರಲಿ' ಎಂದು ಸೋನ್ಯ ಕ್ರೂಸೆಯಂತೆ ಕರನ್ಯಾಸ ಮಾಡಿದಳು. 'ಆದರೆ ಅವಳು ನಿಜ ಹೇಳಿದಂತೆ ತೋರುವುದಿಲ್ಲ. ಮಮ್ಮಿಯ ಬಳಿಗೆ ಹೋಗೋಣ'

ತುಸು ಹೊತ್ತು ಮೌನದಿಂದ ಕೋಣೆಯಲ್ಲಿಯೆ ಶತಪಥ ತಿರುಗುತ್ತಿದ್ದ ಪೇತ್ಯ 'ನಾನೇನಾದರೂ ನಿಕೊಲಿಂಕನ ಜಾಗದಲ್ಲಿದ್ದಿದ್ದರೆ, ಇನ್ನೂ ಹೆಚ್ಚು ಫ್ರೆಂಚ್ ಯೋಧರನ್ನು ಕೊಲ್ಲುತ್ತಿದ್ದೆ. ಅಸಹ್ಯ ಜಂತುಗಳವರು! ದೊಡ್ಡ ಬಣಬೆಯೊಡ್ಡುವಷ್ಟು ಮಂದಿಯನ್ನು ಕೊಲ್ಲುತ್ತಿದ್ದೆ' ಎಂದು ಗರ್ಜಿಸಿದನು.

'ಪೇತ್ಯ, ನಾಲಗೆ ಬಿಗಿಹಿಡಿ. ಮಡ್ಡಿಯಂತೆ ಹರಟಬೇಡ'

'ನಾನಲ್ಲ ಮಡ್ಡಿ, ಕ್ಷುಲ್ಲಕ ವಿಷಯಗಳ ಬಗ್ಗೆ ಕೊಚ್ಚುವವರು'

'ನಿನಗವನ ನೆನಪಿದೆಯೆ?' ಎಂದು ನತಾಷ ಕ್ಷಣಮೌನದ ನಂತರ ಪ್ರಶ್ನಿಸಿದಳು.

ಸೋನ್ಯ ಮುಗುಳುನಗೆ ಸೂಸಿದಳು

'ನನಗೆ ನಿಕೊಲಾಸನ ನೆನಪಿದೆಯೆ?'

'ಹಾಗಲ್ಲ, ಸೋನ್ಯ. ಅವನನ್ನು ಪೂರ್ಣವಾಗಿ ಅರಿಯುವಷ್ಟು, ಅವನಿಗೆ ಸಂಬಂಧಿಸಿದ ಎಲ್ಲ ಸಂಗತಿಗಳು ನಿನಗೆ ನೆನಪಿವೆಯೆ?' ಎಂದು ನತಾಷ ತನ್ನ ಮಾತುಗಳ ನಿರ್ದಿಷ್ಟಾರ್ಥವನ್ನು ಮನವರಿಕೆ ಮಾಡಿಕೊಡುವ ಸಲುವಾಗಿ ಅಂಗಭಂಗಿಯ ಮೂಲಕ ಅಭಿವ್ಯಕ್ತಿಸಿದಳು. 'ನಿಕೋಲಿಂಕನನ್ನು ಚೆನ್ನಾಗಿ ಬಲ್ಲೆ. ಅವನ ನೆನಪು ಸ್ಪಷ್ಟವಾಗಿದೆ. ಆದರೆ ಬೋರಿಸ್ ನೆನಪಿಗೆ ಬರುತ್ತಿಲ್ಲ. ಸ್ವಲ್ಪವೂ ನೆನಪಿಲ್ಲ' ಎಂದವಳು ನುಡಿದಳು.

'ಏನು, ಏನು! ನಿನಗೆ ಬೋರಿಸ್‌ನ ನೆನಪಿಲ್ಲವೆ?' ಎಂದು ಸೋನ್ಯ ಸೋಜಿಗ ವ್ಯಕ್ತಪಡಿಸಿದಳು.

'ನೆನಪಿಲ್ಲವೆಂದು ಹೇಳಲಾರೆ. ಅವನು ಹೇಗಿದ್ದಾನೆಂಬುದನ್ನು ಬಲ್ಲೆ. ಆದರೆ ನಿಕೋಲಿಂಕನ ಬಗೆಗಿರುವಷ್ಟು ಸ್ಪಷ್ಟತೆಯಿಲ್ಲ. ತುಸು ಕಣ್ಣುಮುಚ್ಚಿದರೆ ಸಾಕು, ಅವನು ಕಣ್ಮುಂದೆ ನಿಲ್ಲುತ್ತಾನೆ. ಆದರೆ ಬೋರಿಸ್....ಇಲ್ಲ! (ಅವಳು ಕಣ್ಣುಮುಚ್ಚಿ) ಇಲ್ಲ! ಇಲ್ಲವೇ ಇಲ್ಲ'

'ಓಹೊ ನತಾಷ! ನಿನ್ನ ಸೋದರನನ್ನು ಮನಸಾರೆ ಪ್ರೀತಿಸಿದ್ದೇನೆ. ಇದು ನನ್ನ ಅಂತಿಮ ನಿರ್ಧಾರ. ಅವನಿಗಾಗಲಿ ನನಗಾಗಲಿ ಏನೇ ಸಂಭವಿಸಲಿ, ನಾನು ಬದುಕಿರುವ ತನಕ ಅವನನ್ನು ಪ್ರೀತಿಸುತ್ತೇನೆ. ಈ ನಿರ್ಧಾರದಿಂದ ನಾನು ವಿಚಲಿತಳಾಗಲಾರೆ.'

ಎಂದು ಸೋನ್ಯ ತನ್ನ ಗೆಳತಿಯ ಕಡೆಗೆ ನೋಡುವಾಗ ಅವಳ ಮುಖದಲ್ಲಿ ಶ್ರದ್ಧೆಯೂ ಭಾವೋದ್ರೇಕವೂ ಮುಕ್ಕುಳಿಸುತ್ತಿದ್ದುವು. ತಾನು ಹೇಳಿದ್ದನ್ನು ಕೇಳುವ ಅರ್ಹತೆ ತನ್ನ ಗೆಳತಿಗಿರಲಾರದೆಂಬ ನಿರ್ಲಕ್ಷ್ಯಭಾವವೂ, ಹುಡುಗಾಟಿಕೆಯಿಲ್ಲದ ಹೊಣೆಗಾರಿಕೆಯುಳ್ಳ ಬೇರೊಂದು ವ್ಯಕ್ತಿಯೊಡನೆ ಮಾತಾಡುತ್ತಿರಬೇಕೆಂಬ ಅನ್ಯಮನಸ್ಕತೆಯೂ ಅವಳ ಮಾತಿನಿಂದ ವ್ಯಕ್ತವಾಗುವಂತಿತ್ತು.

ನತಾಷ ಸೋನ್ಯಳ ಕಡೆಗೆ ಆಶ್ಚರ್ಯಚಕಿತ ಕುತೂಹಲ ದೃಷ್ಟಿಯಿಂದ ನೋಡಿದಳೆ ಹೊರತು, ಬಾಯಿ ತೆರೆಯಲಿಲ್ಲ. ಸೋನ್ಯ ನಿಜ ಹೇಳುತ್ತಿರಬೇಕೆಂದೇ ಅವಳು ಭಾವಿಸಿದಳು. ಸೋನ್ಯಳ ಪ್ರೀತಿಯ ಬಗ್ಗೆಯೂ ಅವಳಿಗೆ ಸಂದೇಹವಿರಲಿಲ್ಲ. ನತಾಷಳ ಹೃದಯದಲ್ಲಿನ್ನೂ ಅಂಥ ಭಾವ ಮೊಳೆತಿರಲಿಲ್ಲ. ಅದು ಸಾಧ್ಯವಿರಬೇಕೆಂಬ ಭಾವನೆ ಅವಳಲ್ಲಿದ್ದಿರಬಹುದಾದರೂ, ಅವಳದನ್ನು ಅರ್ಥಮಾಡಿಕೊಂಡಿರಲಿಲ್ಲ. 'ಅವನಿಗೇಕೆ ನೀನು ಪತ್ರ ಬರೆಯಬಾರದು?' ಎಂದವಳು ಪ್ರಶ್ನಿಸಿದಳು.

ಸೋನ್ಯ ಆಲೋಚನಾಪರಳಾದಳು. ನಿಕೊಲಾಸ್‌ಗೆ ಹೇಗೆ ಬರೆಯಬೇಕು, ತಾನೇ ಬರೆಯುವುದು ಸರಿಯೆ ಎಂಬ ಪ್ರಶ್ನೆಗಳು ಅವಳನ್ನು ಕಾಡಿದುವು. ಅವನೀಗ ಅಧಿಕಾರಿಯಾಗಿರುವಾಗ, ಜತೆಗೆ ಗಾಯಾಳುವಾಗಿರುವಾಗ, ತನ್ನ ಬಗ್ಗೆಯಾಗಲಿ, ತನ್ನನ್ನು ಕುರಿತ ಅವನ ಕರ್ತವ್ಯವನ್ನಾಗಲಿ, ಅವನ ನೆನಪಿಗೆ ತಂದು ಕೊಡುವುದು ಸರಿಯೆ ಎಂದವಳು ಚಿಂತಿಸಿದಳು. 'ನನಗೇನೂ ಹೊಳೆಯದು. ಅವನು ಬರೆದರೆ ನಾನು ಬರೆದೇನು.' ಎನ್ನುವಾಗ ಅವಳ ಮುಖ ಕೆಂಪೇರಿತು.

'ಅವನಿಗೆ ಬರೆಯಲು ನಿನಗೆ ನಾಚಿಕೆಯಾಗುತ್ತದೆಯೆ?'

'ಇಲ್ಲ' ಎಂದು ಸೋನ್ಯ ಮುಗುಳುನಗೆ ಸೂಸಿದಳು.

'ಬೋರಿಸ್‌ಗೆ ಬರೆಯಲು ನನಗೇಕೊ ಲಜ್ಜೆಯಾಗುತ್ತದೆ. ನಾನು ಬರೆಯುವುದಿಲ್ಲ.'

'ನಿನಗೇಕೆ ಲಜ್ಜೆ?'

'ನನಗೆ ಗೊತ್ತಿಲ್ಲ. ಏನೊ ಮುಜುಗರ? ನಾಚಿಕೆಯಾಗುತ್ತದೆ.'

ಆ ಮುನ್ನ ನತಾಷ ಮಾಡಿದ ಟೀಕೆಯಿಂದ ಒಳಗೊಳಗೆ ಕುದಿಯುತ್ತಿದ್ದ ಪೇತ್ಯ 'ಅವಳಿಗೇಕೆ ನಾಚಿಕೆಯಾಗುತ್ತಿದೆಯೆಂಬುದನ್ನು ಬಲ್ಲೆ' ಎಂದು ನುಡಿದನು. 'ಕನ್ನಡಕ ಧರಿಸಿದ ಬೊಜ್ಜುಮೈಯ ಇದ್ದಾನಲ್ಲ, ಅವನನ್ನು ಪ್ರೀತಿಸುತ್ತಿದ್ದಳು; (ತನ್ನ ಹೆಸರಿನ, ಹೊಸದಾಗಿ ಶ್ರೀಮಂತ ಸ್ಥಾನವನ್ನು ಪಡೆದ ಬೆಜುಖೋವ್‌ನನ್ನು ಪೇತ್ಯ ವರ್ಣಿಸಿದ್ದೀ ಹಾಗೆ) ಅವಳೀಗ ಆ ಸಂಗೀತಗಾರನನ್ನು ಪ್ರೀತಿಸುತ್ತಿದ್ದಾಳೆ. (ಅವನ ತಲೆಯಲ್ಲಿದ್ದವನು ನತಾಷಳ ಇಟಲಿಯ ಸಂಗೀತದ ಮೇಷ್ಟ್ರು); ಈ ಕಾರಣಕ್ಕಾಗಿಯೇ ಅವಳು ನಾಚಿಕೊಂಡಿದ್ದಾಳೆ.'

'ಪೇತ್ಯ, ನೀನೊಬ್ಬ ಗುಗ್ಗು'

'ನಿನಗಿಂತೇನೂ ನಾನು ಗುಗ್ಗುವಲ್ಲ, ಮಾತಾಯಿ' ಎಂದು ಒಂಬತ್ತು ವರ್ಷದ ಪೇತ್ಯ ಹಳೆಯ ದಳಪತಿಯಂತೆ ನುಡಿದನು.

ಊಟದ ವೇಳೆಯಲ್ಲಿಯೇ ಅನ್ನಾ ಮಿಖಾಯ್‌ಲೋವ್ನಾ ಶ್ರೀಮಂತೆಯ ಮನಸ್ಸನ್ನು ತಿದ್ದಿದ್ದಳು. ತಾನೊಬ್ಬಳೆ ತನ್ನ ಕೋಣೆಗೆ ಸರಿದು, ಆರಾಮ ಕುರ್ಚಿಯ

ಮೇಲೆ ಕುಳಿತುಕೊಂಡಾಗ, ನಶ್ಯದ ಭರಣಿಯ ಮುಚ್ಚಳದ ಮೇಲಿದ್ದ ಸೂಕ್ಷ್ಮಾಕಾರದ ತನ್ನ ಮಗನ ತಸ್ವೀರಿನ ಮೇಲೆ ಅವಳ ಕಣ್ಣು ನಾಟಿತು. ಕಣ್ಣಿಂದ ನೀರು ಧಾರಾಕಾರ ವಾಗಿ ಹರಿಯುತ್ತಿತ್ತು. ಅನ್ನಾ ಪತ್ರದೊಡನೆ ಮೆಟ್ಟುಗಾಲಿನಲ್ಲಿ ಶ್ರೀಮಂತೆಯ ಬಾಗಿಲಿಗೆ ಬಂದು ನಿಂತಳು.

ತನ್ನನ್ನೇ ಹಿಂಬಾಲಿಸುತ್ತಿದ್ದ ಶ್ರೀಮಂತನನ್ನು ಕುರಿತು 'ಒಳಗೆ ಬರಬೇಡಿ. ಆಮೇಲೆ ಬರುವಿರಂತೆ' ಎಂದವಳು ನುಡಿದು, ಒಳಗೆ ಪ್ರವೇಶಿಸಿ, ಕದ ಮುಚ್ಚಿಕೊಂಡಳು.

ಶ್ರೀಮಂತ ಬೀಗದಕೈ ಕಂಡಿಯಲ್ಲಿ ಕಿವಿಗೊಟ್ಟು ಕೇಳಿಸಿಕೊಳ್ಳುತ್ತಿದ್ದನು. ಮೊದ ಮೊದಲು ಹರ್ಷದುಃಖ ಮಿಶ್ರಿತವಾದ ಧ್ವನಿ ಅವನ ಕಿವಿಯ ಮೇಲೆ ಬಿದ್ದುವು. ಅನಂತರ ಅನ್ನಾಳ ದೀರ್ಘಭಾಷಣದ ಧ್ವನಿ ಮಾತ್ರ ಕೇಳಿಸುತ್ತಿತ್ತು. ಆಮೇಲೆ ಅಳು. ತದನಂತರ ಮೌನ. ತರುವಾಯ ಸಂತೋಷದ ಸ್ವರದಲ್ಲಿ ಎರಡು ಧ್ವನಿಗಳೂ ತೂರಿಬರುತ್ತಿದ್ದುವು. ಕೊನೆಗೆ ಹೆಜ್ಜೆಯ ಸಪ್ಪಳ. ಅನ್ನಾ ಬಾಗಿಲು ತೆರೆದಳು. ಅದೆ ತಾನೆ ಕಷ್ಟಕರವಾದ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮುಗಿಸಿ, ತನ್ನ ಕೈಚಳಕವನ್ನು ನೋಡಿ ಮೆಚ್ಚ ಲೆಂದು ಸಾರ್ವಜನಿಕರ ಪ್ರವೇಶಕ್ಕೆ ಅನುಮತಿ ನೀಡುವ ವೈದ್ಯನ ಅಭಿಮಾನಭಾವ ಅವಳ ಮುಖದಲ್ಲಿ ತುಂಬಿ ತುಳುಕುತ್ತಿತ್ತು.

ವಿಜಯೋತ್ಸವದ ಗೆಲವಿನಿಂದ ಒಂದು ಕೈಯಲ್ಲಿ ಭಾವಚಿತ್ರವಿದ್ದ ನಶ್ಯದ ಭರಣಿ ಯನ್ನು ಮತ್ತೊಂದು ಕೈಯಲ್ಲಿ ಕಾಗದವನ್ನು ಹಿಡಿದುಕೊಂಡು ಅವುಗಳನ್ನು ಪರ್ಯಾಯ ವಾಗಿ ತನ್ನ ತುಟಿಗೊತ್ತಿಕೊಳ್ಳುತ್ತಿದ್ದ ಶ್ರೀಮಂತೆಯ ಕಡೆಗೆ ತೋರಿಸುತ್ತ, 'ಎಲ್ಲ ಸರಿಯಾಗಿದೆ' ಎಂದವಳು ಶ್ರೀಮಂತನಿಗೆ ಒಪ್ಪಿಸಿದಳು.

ಶ್ರೀಮಂತನನ್ನು ಕಂಡಕೂಡಲೇ ಅವಳು ತನ್ನ ತೋಳುಗಳನ್ನು ಚಾಚಿ, ಬೋಳು ಮಂಡೆಯನ್ನಪ್ಪಿಕೊಂಡೇ, ಅದರ ಮೇಲಿಂದ ಕಾಗದವನ್ನೂ ಭಾವಚಿತ್ರವನ್ನೂ ನೋಡು ತ್ತಿದ್ದಳು. ಅವನ್ನು ತುಟಿಗೊತ್ತಿಕೊಳ್ಳುವ ಸಲುವಾಗಿ ಬೋಳುಮಂಡೆಯನ್ನು ತುಸು ಪಕ್ಕಕ್ಕೆ ತಳ್ಳಿದಳು. ವೇರ, ನತಾಷ, ಸೋನ್ಯ ಮತ್ತು ಪೇತ್ಯ ಕೋಣೆಯನ್ನು ಪ್ರವೇಶಿಸಿ ದರು. ಕಾಗದದ ಓದು ಶುರುವಾಯಿತು. ತಾನೇ ಭಾಗವಹಿಸಿದ್ದ ದಂಡಯಾತ್ರೆಯನ್ನೂ ಎರಡು ಕದನಗಳನ್ನೂ ಸಂಕ್ಷೇಪವಾಗಿ ವರ್ಣಿಸಿ, ತನ್ನ ಬಡ್ತಿಯ ಸುದ್ದಿಯನ್ನು ತಿಳಿಸಿದ ತರುವಾಯ, ಆಶೀರ್ವಾದವನ್ನು ಬಯಸಿ, ತನ್ನ ತಂದೆಯ ಮತ್ತು ತಾಯಿಯ ಕೈಗಳನ್ನು ಚುಂಬಿಸುವುದಾಗಿ ನಿಕೋಲಾಸ್ ಬರೆದಿದ್ದನು. ವೇರ, ನತಾಷ ಮತ್ತು ಪೇತ್ಯರಿಗೆ ಮುತ್ತು ಕಳಿಸಿದ್ದನು. ಜತೆಗೆ ಶ್ರೀಮಾನ್ ಷೆಲ್ಲಿಂಗ್ ಮತ್ತು ಶ್ರೀಮತಿ ಷಾಸ್ ಅವರಿಗೆ, ಅಂತೆಯೇ ತನ್ನ ದಾದಿಗೆ ಒಸಗೆ ನುಡಿತಿಳಿಸಿದ್ದನು. ತಾನು ಪ್ರೀತಿಸಿ, ಹಿಂದಿನಂತೆಯೇ ತನ್ನ ಅನುರಾಗಕ್ಕೆ ಪಾತ್ರಳಾಗಿದ್ದ ತನ್ನೊಲವಿನ ಸೋನ್ಯಳನ್ನು ತನ್ನ ಬದಲಿಗೆ ಚುಂಬಿಸುವಂತೆ ಕೇಳಿಕೊಂಡಿದ್ದನು. ಆ ಮಾತು ತನ್ನ ಕಿವಿಯನ್ನು ತಾಕುತ್ತಿದ್ದಂತೆ, ಸೋನ್ಯಳ ಮುಖ ಕೆಂಪೇರಿತು; ಅಶ್ರುಧಾರೆ ಹರಿಯಿತು; ತನ್ನಲ್ಲಿಯೇ ಕೇಂದ್ರೀಕೃತವಾಗಿದ್ದ ದೃಷ್ಟಿಗಳನ್ನು ಸಹಿಸಲಾರದೆ ಅವಳು ನೃತ್ಯಾಂಗಣಕ್ಕೆ ಓಡಿದಳು; ಪೂರ್ಣವೇಗದಿಂದ ಅದರ ಸುತ್ತ ಗಿರಗಿರನೆ ಸುತ್ತಿದಳು; ಅವಳ ವಸ್ತ್ರ ಬೆಲೂನಿನಂತೆ ಊದಿಕೊಂಡಿತು. ಅವಳ ಮುಖ ಕೆಂಪೇರಿತು, ಮುಗುಳುನಗುತ್ತ ನೆಲದ ಮೇಲೆ ದೊಪ್ಪನೆ ಬಿದ್ದುಬಿಟ್ಟಳು. ಶ್ರೀಮಂತೆ ಅಳುತ್ತಿದ್ದಳು.

'ನೀನೇಕೆ ಅಳುತ್ತೀಯೆ, ಮಮ್ಮಾ? ಅವನ ಪತ್ರದ ಒಕ್ಕಣೆಯನ್ನು ಕೇಳಿದ ಮೇಲೆ, ಹರ್ಷಿಸಬೇಕೇ ಹೊರತು, ದುಃಖಿಸಬಾರದು' ಎಂದು ವೇರ ನುಡಿದಳು.

ಅವಳು ನುಡಿದದ್ದು ನಿಜ. ಆದರೆ ಶ್ರೀಮಂತ ಶ್ರೀಮಂತೆಯರು ಮತ್ತು ನತಾಷ ಅವಳ ಕಡೆಗೆ ಆಕ್ಷೇಪಣೀಯವಾಗಿ ನೋಡಿದರು. 'ಇವಳು ಯಾರನ್ನು ಹೋಲಬಹುದು?' ಎಂದು ಶ್ರೀಮಂತೆ ಮನಸ್ಸಿನಲ್ಲಿಯೇ ಗೊಣಗಿಕೊಂಡಳು.

ನಿಕೊಲಾಸ್‌ನ ಪತ್ರವನ್ನು ನೂರಾರುಸಲ ಓದಲಾಯಿತು. ಅದನ್ನು ಕೇಳಲಿಚ್ಛೆಯುಳ್ಳವರು ಶ್ರೀಮಂತೆಯ ಬಳಿಗೆ ಬರಬೇಕಾಗಿತ್ತು. ಮನೆಯ ಮೇಷ್ಟ್ರು, ದಾದಿಯರು, ದಿಮಿತ್ರಿಯಷ್ಟೆ ಅಲ್ಲ, ಹಲವು ಪರಿಚಿತರು ಬಂದರು. ಶ್ರೀಮಂತೆ ಅದನ್ನು ಮತ್ತೆ ಮತ್ತೆ ಹಿಗ್ಗಿನಿಂದ ಓದಿದಳು. ಪ್ರತಿಸಲವೂ ಅವಳು ಅದರಲ್ಲಿ ನಿಕೋಲೆಂಕನ ಗುಣಶೀಲಗಳಿಗೆ ಹೊಸಹೊಸ ಸಾಕ್ಷಿಗಳನ್ನು ಕಂಡುಕೊಳ್ಳುತ್ತಿದ್ದಳು. ಇಪ್ಪತ್ತು ವರ್ಷಗಳ ಹಿಂದೆ ತಾನು ಯಾವ ಮಗನ ಪುಟಾಣಿ ಅಂಗಗಳ ಸೂಕ್ಷ್ಮ ಚಲನೆಯ ಸಂವೇದನೆಯನ್ನನುಭವಿಸಿದ್ದಳೋ, ಯಾವ ಮಗನನ್ನು ಅತಿಯಾಗಿ ಮುದ್ದುಮಾಡುತ್ತಿದ್ದ ಶ್ರೀಮಂತನ ಜತೆಯಲ್ಲಿ ಸದಾ ಜಗಳವಾಡುತ್ತಿದ್ದಳೋ, ಯಾವ ಮಗನ ಪಪ್ಪ, ಮಮ್ಮ ಎಂಬ ತೊದಲು ನುಡಿಗಳ ಸವಿಯನ್ನನುಭವಿಸಿದ್ದಳೋ, ಅದೇ ಮಗ ಧೀರ ಯೋಧನಾಗಿ ವಿದೇಶದ ಭೂಮಿಯಲ್ಲಿ ಅಪರಿಚಿತ ವಾತಾವರಣದ ನಡುವೆ, ಯಾರ ಸಹಾಯ ಮಾರ್ಗದರ್ಶನವೂ ಇಲ್ಲದೆ, ತನ್ನಷ್ಟಕ್ಕೆ ತಾನೆ ಪುರುಷಯೋಗ್ಯವಾದ ಉದ್ಯೋಗದಲ್ಲಿ ನಿರತನಾಗಿರುವಾಗ ಅವಳಿಗೆಷ್ಟು ಆನಂದವಾಗಿರಬೇಕು! ಆಶ್ಚರ್ಯವಾಗಿರಬೇಕು! ಅಸಾಧಾರಣವಾಗಿ ಕಂಡಿರಬೇಕು! ತೊಟ್ಟಿಲಿಂದ ಪ್ರಾಯದವರೆಗೆ ಮಕ್ಕಳು ಅರಿವಾಗದಂತೆ ಬೆಳೆಯುತ್ತವೆಂಬ ಯುಗಯುಗಗಳ ಸಾರ್ವತ್ರಿಕಾನುಭವ ಶ್ರೀಮಂತೆಯ ಪಾಲಿಗೆ ಇಲ್ಲವಾಗಿತ್ತು. ಪ್ರಾಯದವರೆಗಿನ ಪ್ರತಿಯೊಂದು ಹಂತದ ತನ್ನ ಮಗನ ಬೆಳವಣಿಗೆ ಅವಳಿಗೆ ಅನನ್ಯಸಾಧಾರಣವಾಗಿ ತೋರುತ್ತಿತ್ತು. ಅವನಂತೆಯೇ ಕೋಟಿ ಕೋಟಿ ಮಕ್ಕಳು ಬೆಳೆಯುತ್ತಿದ್ದರೆಂಬುದನ್ನವಳು ಗಣನೆಗೆ ತಂದುಕೊಂಡಿರಲಿಲ್ಲ. ತನ್ನ ಹೃದಯದ ಕೆಳಭಾಗದಲ್ಲಿಲ್ಲಿಯೋ ವಾಸಿಸುತ್ತಿದ್ದ ಸೂಕ್ಷ್ಮಜೀವಿ ಅಳುತ್ತಾ ಮೊಲೆ ಕುಡಿಯುತ್ತಾನೆ, ಮಾತಾಡುತ್ತಾನೆಂಬ ಸಂಗತಿ ಇಪ್ಪತ್ತು ವರ್ಷಗಳ ಕೆಳಗೆ ಅವಳಿಗೆಂತು ಅಸಾಧ್ಯವಾಗಿ ಕಂಡಿತ್ತೋ, ಅದೇ ಸೂಕ್ಷ್ಮಜೀವಿ, ಆ ಕಾಗದದಿಂದ ತಿಳಿಯುವಂತೆ, ಕಸುವಾಗಿ, ಧೀರನಾಗಿ, ಆದರ್ಶ ಪುತ್ರನಾಗಿ ಮತ್ತು ಅಧಿಕಾರಿಯಾಗಿ ವಿಜೃಂಭಿಸಬಲ್ಲನೆಂಬುದು ಅಂತೆಯೇ ಅವಳಿಗೆಂದೂ ನಂಬಲಾರದ ಸಂಗತಿಯಾಗಿತ್ತು.

'ಆಃ ಎಂಥ ಶೈಲಿ! ಅದೆಷ್ಟು ಮನಮೋಹಕವಾಗಿ ವರ್ಣಿಸುತ್ತಾನೆ!' ಎಂದವಳು ವರ್ಣನೆಯ ಭಾಗವನ್ನೋದಿದಳು-'ಎಂಥ ಉನ್ನತ ಚೇತನ! ತನ್ನ ಬಗ್ಗೆ ಒಂದು ಮಾತಾದರೂ ಬೇಡವೆ?....ಒಂದು ಬಿಡಿ ಮಾತೂ ಇಲ್ಲ! ಯಾರೋ ಡೆನಿಸೋವ್‌ನಂತೆ, ಮತ್ತಾರೊ ಯಾರಿಗೆ ಗೊತ್ತು? ಅವರಿಗಿಂತ ಇವನು ಧೈರ್ಯಶಾಲಿಯೆಂದು ನಾನು ಪ್ರಮಾಣಮಾಡಿ ಹೇಳಬಲ್ಲೆ. ತನ್ನ ಕಷ್ಟನಷ್ಟಗಳ ಬಗ್ಗೆ ಒಂದು ಮಾತಾದರೂ ಬೇಡವೆ? ಎಂಥ ಪರಿಶುದ್ಧ ಹೃದಯ! ಅವನಂತೆ ಯಾರಿದ್ದಾರೆ? ಯಾರನ್ನೂ ಬಿಡದೆ, ಎಲ್ಲರನ್ನೂ ನೆನೆಸಿಕೊಂಡಿದ್ದಾನಲ್ಲ! ನಾನು ಯಾವಾಗಲೂ ಹೇಳುತ್ತಿದ್ದೆ, ಅವನು ಬಹಳ ಎತ್ತರಕ್ಕೇರುತ್ತಾನೆಂದು—ಯಾವಾಗಲೂ ಹೇಳುತ್ತಿದ್ದೆ.'

ಒಂದು ವಾರಕ್ಕಿಂತ ಮಿಗಿಲಾಗಿ ಸಿದ್ಧತೆಗಳು ನಡೆಯುತ್ತಿದ್ದುವು. ಕುಟುಂಬದ ಜನರೆಲ್ಲ ನಿಕೊಲಾಸ್‌ನಿಗೆ ಬರೆಯಬೇಕಾಗಿದ್ದ ಪತ್ರಗಳ ಕರಡು ತಯಾರಿಸಿದರು; ತದನಂತರ ಅವುಗಳನ್ನು ನೀಟಾಗಿ ಪ್ರತಿಮಾಡಿದರು. ಶ್ರೀಮಂತೆಯ ನೇತೃತ್ವದಲ್ಲಿ ಮತ್ತು ಶ್ರೀಮಂತನ ಉತ್ಸುಕತೆಯ ಪ್ರೋತ್ಸಾಹದಲ್ಲಿ ಹೊಸದಾಗಿ ಸನ್ನದು ಪಡೆದ ಅಧಿಕಾರಿಯ ಸಾಮಾನು ಸರಂಜಾಮು ಮತ್ತು ಸಮವಸ್ತ್ರಗಳಿಗಾಗಿ ಬೇಕಾದ ಧನದ್ರವ್ಯಗಳನ್ನು ಸಂಗ್ರಹಿಸಲಾಯಿತು. ಕಾರ್ಯಕುಶಲೆಯಾದ ಅನ್ನಾಮಿಖಾಯ್‌ಲೋವ್ನ ಸೈನ್ಯಾಧಿಕಾರಿಗಳ ಕೃಪೆಯಿಂದ ತನ್ನ ಮತ್ತು ತನ್ನ ಮಗನ ನಡುವಣ ಸಂಪರ್ಕ ಮಾಧ್ಯಮ ಸಲೀಸಾಗುವಂತೆ ವ್ಯವಸ್ಥೆ ಮಾಡಿಕೊಂಡಿದ್ದಳು. ಅವಳು ಕಾವಲುಪಡೆಯ ಅಧಿಪತಿಯಾಗಿದ್ದ ಡ್ಯೂಕ್ ಕಾನ್‌ಸ್ಟೆಂಟೀನ್ ಪಾವ್‌ಲೊವಿಚ್‌ನಿಗೆ ಆಗಾಗ್ಗೆ ಕಾಗದಗಳನ್ನು ಕಳಿಸುವ ಅಭ್ಯಾಸವಿಟ್ಟುಕೊಂಡಿದ್ದಳು. ವಿದೇಶದಲ್ಲಿದ್ದ ರಷ್ಯನ್ ಕಾವಲುಪಡೆಯ ವಿಳಾಸ ಸುರಕ್ಷಿತವಾಪದ್ದೆಂಬ ಸಂಗತಿ ರೊಸ್ತೋವ್ ಕುಟುಂಬಕ್ಕೆ ತಿಳಿದಿತ್ತು. ಕಾವಲು ಪಡೆಯ ಆಧಿಪತಿಗೆ ಕಾಗದ ತಲಪುವುದಾದರೆ, ಎಲ್ಲಿಯೋ ಅದರ ನೆರೆಯಲ್ಲಿದ್ದ ಪಾವ್ಲೊಗ್ರಾಡ್ ದಳಕ್ಕೆ ಅದು ತಲುಪದಿರಲು ಕಾರಣವೇ ಇರಲಿಲ್ಲ. ಹಣ ಮತ್ತು ಕಾಗದಗಳನ್ನು ಡ್ಯೂಕನ ಹರಿಕಾರನ ಮೂಲಕ ಬೋರಿಸ್‌ಗೆ ಕಳಿಸುವುದೆಂದೂ, ಬೋರಿಸ್ ಅವನ್ನು ನಿಕೊಲಾಸ್‌ನಿಗೆ ಕಳಿಸಬಹುದೆಂದೂ, ನಿಶ್ಚಯವಾಯಿತು. ಶ್ರೀಮಂತ ಶ್ರೀಮಂತೆ ಪೇತ್ಯ ವೇರ ನತಾಷ ಮತ್ತು ಸೋನ್ಯ ಬರೆದ ಪತ್ರಗಳ ಜತೆಗೆ, ಶ್ರೀಮಂತ ಮಗನ ಸಜ್ಜಿಗೆಂದು ಕೂಡಿಸಿದ್ದ ಆರುಸಾವಿರ ರೂಬಲ್ ಮತ್ತು ಇತರ ವಸ್ತುಗಳು ರವಾನೆಗೆ ಸಿದ್ಧವಾಗಿದ್ದುವು.

ಅಧ್ಯಾಯ ೭

ನವೆಂಬರ್ ೧೨ರಂದು ಆಲ್‌ಮುತ್ಸ್‌ನಲ್ಲಿ ಬೀಡುಬಿಟ್ಟಿದ್ದ ಕುತುಜೋವನ ಸೈನ್ಯ ರಷ್ಯಾ ಮತ್ತು ಆಸ್ಟ್ರಿಯಾ ಚಕ್ರವರ್ತಿಗಳ ಮಾರನೆಯ ದಿನದ ಪರಿಶೀಲನೆಗಾಗಿ ಸಿದ್ಧವಾಗಿತ್ತು. ಅದೆ ತಾನೆ ರಷ್ಯಾದಿಂದ ಬಂದಿದ್ದ ಕಾವಲುಪಡೆ ಆಲ್‌ಮುತ್ಸ್‌ನಿಂದ ಹತ್ತು ಮೈಲಿ ದೂರದ ಬಿಡಾರದಲ್ಲಿ ಇರುಳು ಕಳೆದು, ಮಾರನೆಯ ದಿನದ ಪರಿಶೀಲನೆಗಾಗಿ ಬೆಳಗಿನ ಹತ್ತು ಗಂಟೆಯೊಳಗಾಗಿ ಅಲ್ಲಿಗೆ ನೇರವಾಗಿ ಬರಬೇಕಾಗಿತ್ತು.

ಇಸ್ಮಾಯ್‌ಲೋವ್ನ ದಳ ಆಲ್‌ಮುತ್ಸ್‌ನಿಂದ ಹತ್ತುಮೈಲಿ ದೂರದಲ್ಲಿ ರಾತ್ರಿ ಬೀಡು ಬಿಟ್ಟಿತ್ತೆಂದೂ, ನಿಕೊಲಾಸ್ ರೊಸ್ತೊವ್ ಅಲ್ಲಿಗೆ ಬಂದುದಾದರೆ, ಅವನಿಗೆಂದು ತನ್ನ ಬಳಿಯಿದ್ದ ಹಣ ಮತ್ತು ಕಾಗದಗಳನ್ನು ಕೊಡಲಾಗುವುದೆಂದೂ ಅದೇ ದಿನ ಬೋರಿಸ್‌ನಿಂದ ಅವನಿಗೊಂದು ಪತ್ರ ಬಂದಿತ್ತು. ವಿರಾಮಕ್ಕಾಗಿ ಬೀಡು ಬಿಟ್ಟಿದ್ದ ಸೈನ್ಯದ ಪಾಳೆಯದ ಸುತ್ತ, ಸಕಲ ಸಾಮಗ್ರಿಗಳನ್ನು ಜಮಾಯಿಸಿಕೊಂಡಿದ್ದ ಶಿಬಿರ ಹರದರೂ, ಎಲ್ಲ ವಿಧದ ಆಕರ್ಷಕ ವಸ್ತುಗಳನ್ನು ತಂದಿದ್ದ ಆಸ್ಟ್ರಿಯಾ ಯಹೂದ್ಯರೂ ಅಲ್ಲಿ ಕಿಕ್ಕಿರಿದಿದ್ದುದರಿಂದ, ರೊಸ್ತೊವ್‌ನಿಗೆ ಹಣದ ಜರೂರು ಅಗತ್ಯವಿತ್ತು. ಕದನದಲ್ಲಿ ತಾವು ಪ್ರಶಸ್ತಿಗಳನ್ನು ಪಡೆದ ಸಂತೋಷಕ್ಕಾಗಿ ಪಾವ್‌ಲೊಗ್ರಾಡ್ ಸೈನ್ಯ ಹಬ್ಬದ ಮೇಲೆ ಹಬ್ಬವನ್ನು ಆಚರಿಸುತ್ತಿತ್ತು. ಆಲ್‌ಮುತ್ಸ್‌ನಲ್ಲಿ ಹಂಗೇರಿ ನಿವಾಸಿಯೊಬ್ಬ

ತೆರೆದಿದ್ದ, ಚೆಲುವೆಯರೇ ಪರಿಚಾರಿಕೆಗಿದ್ದ ಹೋಟಲಿಗೆ ಸೈನಿಕರು ಆಗಾಗ್ಗೆ ಹೋಗುತ್ತಿದ್ದರು. ತಾನು ಅಶ್ವದಳಪತಿಯಾದದ್ದಕ್ಕಾಗಿ ಸಂತೋಷಕೂಟವನ್ನು ಏರ್ಪಡಿಸಿ, ಡೆನಿಸೋವ್‌ನ ಅರಬ್ಬಿಟಾಕಣವನ್ನು ಕೊಂಡು, ಸ್ನೇಹಿತರಲ್ಲಿ, ಹರದರಲ್ಲಿ ಮೈತುಂಬ ಸಾಲಮಾಡಿಕೊಂಡಿದ್ದನು. ಬೋರಿಸ್‌ನ ಪತ್ರ ಕೈಸೇರಿದ ಕೂಡಲೇ ಅವನು ತನ್ನೊಬ್ಬ ಗೆಳೆಯನೊಡನೆ ಆಲ್‌ಮುತ್ಸ್‌ಗೆ ಸವಾರಿಸಿ, ಊಟಮುಗಿಸಿ, ವೈನ್ ಕುಡಿದು, ತರುವಾಯ ತಾನೊಬ್ಬನೇ ತನ್ನ ಬಾಲ್ಯ ಸ್ನೇಹಿತನನ್ನು ನೋಡುವ ಸಲುವಾಗಿ ಕಾವಲು ಪಡೆಯ ಬಿಡಾರದ ಕಡೆಗೆ ಹೋದನು. ಸಮಯಾಭಾವದಿಂದ ಅವನಿನ್ನೂ ಸಮವಸ್ತ್ರವನ್ನು ಒದಗಿಸಿಕೊಂಡಿರಲಿಲ್ಲ. ಸೈನಿಕ ವಿದ್ಯಾರ್ಥಿ ಧರಿಸುವ, ಸೈನಿಕ ಪದಕದಿಂದ ಭೂಷಿತವಾದ, ದುಸ್ಥಿತಿಯ ಕವಚವನ್ನೂ, ಅಷ್ಟೇ ದುಸ್ಥಿತಿಯಲ್ಲಿದ್ದ, ಹರಿದ ತೊಗಲಿನ ಅಂಚುಳ್ಳ ಗೊಂಡೆಕುಚ್ಚಿನ ಬಾಗುಕತ್ತಿಯುಳ್ಳ ಅಧಿಕಾರಿ ಬಳಸುವ ಸವಾರಿ ಷರಾಯಿಯನ್ನು ಅವನು ಧರಿಸಿದ್ದನು. ಕದನದ ಸಮಯದಲ್ಲಿ ತುರ್ಕಿ ಜನಾಂಗದ ರಾವುತನೊಬ್ಬನಿಂದ ಕೊಂಡಿದ್ದ ಕುದುರೆಯನ್ನವನು ಸವಾರಿಗೆ ಬಳಸುತ್ತಿದ್ದನು; ತಲೆಯ ಒಂದು ಭಾಗದಲ್ಲಿ ಹಿಂದುಗಡೆಗೆ ತುಸು ಓರೆಯಾದಂತೆ ಸುಕ್ಕು ಹಿಡಿದ ಟೋಪಿಯನ್ನು ಧರಿಸಿಕೊಂಡಿದ್ದನು. ಬೋರಿಸ್‌ನ ಮತ್ತು ಕಾವಲುಪಡೆಯ ಇತರ ಗೆಳೆಯರ ಮೇಲೆ ತನ್ನ ಚಹರೆ–ಹೋರಾಟದಲ್ಲಿ ಅಗ್ನಿಪರೀಕ್ಷೆಗೊಳಗಾಗಿದ್ದ ರಾವುತನ ವೇಷ-ಎಷ್ಟರ ಮಟ್ಟಿಗೆ ಪರಿಣಾಮ ಬೀರಬಹುದೆಂದು ಬಿಡಾರ ಸನ್ನಿಹಿತವಾಗುತ್ತಿದ್ದಂತೆ ಅವನು ಯೋಚಿಸಿದನು.

ವಿಹಾರ ಯಾತ್ರೆಯೋ ಎನ್ನುವಂತೆ, ತಮ್ಮ ಶಿಸ್ತು ಸ್ವಚ್ಛತೆಗಳನ್ನು ಪ್ರದರ್ಶಿಸುತ್ತ, ಕಾವಲುಪಡೆಯ ಗತಿ ಹಂತಹಂತವಾಗಿ ಸಾಗಿತ್ತು. ಅವರಿಗೆ ಕಷ್ಟವೇ ಕಾಣಿಸಲಿಲ್ಲ. ಸೈನಿಕರ ಬೆನ್ನು ಚೀಲಗಳು ಗಾಡಿಗಳಲ್ಲಿದ್ದುವು. ಪ್ರತಿಯೊಂದು ತಂಗುದಾಣದಲ್ಲಿಯೂ ಆಸ್ಟ್ರಿಯಾ ಪ್ರಭುತ್ವ ಅಧಿಕಾರಿಗಳಿಗೆ ರಾಜಭೋಜನವನ್ನು ಏರ್ಪಡಿಸುತ್ತಿತ್ತು. ದಾರಿಯೆಡೆಯ ಊರು ತಲುಪಿದ ನಂತರ ಅದನ್ನು ಬಿಡುವ ತನಕ ವಾಳಗಳು ಬ್ಯಾಂಡ್ ಬಾರಿಸುತ್ತಿದ್ದುವು. ಡ್ಯೂಕನ ಆಜ್ಞೆಯ ಮೇರೆಗೆ ಸೈನಿಕರು ಅಣಿಹೆಜ್ಜೆ ಹಾಕುತ್ತಿದ್ದರು (ಅಂಥ ಶಿಸ್ತಿನ ನಡಗೆಯೆಂದರೆ ಅವರಿಗೆ ಹೆಮ್ಮೆ); ಅಧಿಕಾರಿಗಳು ಸಹ ತಂತಮ್ಮ ಸ್ಥಾನಗಳಲ್ಲಿದ್ದುಕೊಂಡೇ ಲಯಕ್ರಮವನ್ನನುಸರಿಸುತ್ತಿದ್ದರು. ಸಿಪಾಯಿಗಳ ಬಿಡದಿಯಲ್ಲಿದ್ದ ಬೋರಿಸ್ ದಳಪತಿ ಬರ್ಗ್‌ನೊಡನೆ ಮುನ್ನಡೆದಿದ್ದನು. ತನ್ನ ಚುರುಕು ಮತ್ತು ನಿಖರತೆಯ ವರ್ತನೆಯಿಂದ ಹಿರಿಯ ಅಧಿಕಾರಿಗಳ ವಿಶ್ವಾಸಕ್ಕೆ ಪಾತ್ರನಾಗಿದ್ದ ಬರ್ಗ್ ದಂಡಯಾತ್ರೆಯ ಅವಧಿಯಲ್ಲಿಯೇ ಕಪ್ತಾನ್ ಹುದ್ದೆಯನ್ನು ಸಂಪಾದಿಸಿದ್ದನು. ತೃಪ್ತಿಕರವಾಗಿ ಹಣದ ವ್ಯವಸ್ಥೆಯನ್ನು ಸಹ ಮಾಡಿಕೊಂಡಿದ್ದನು. ತನಗೆ ಪ್ರಯೋಜನವಾಗಬಲ್ಲ ಅನೇಕ ಜನರನ್ನು ದಂಡಯಾತ್ರೆಯ ಸಮಯದಲ್ಲಿಯೇ ಬೋರಿಸ್ ಪರಿಚಯಿಸಿಕೊಂಡಿದ್ದನು. ಪಿಯರಿಯಿಂದ ತಂದಿದ್ದ ಶಿಫಾರಸು ಪತ್ರದ ನೆರವಿನಿಂದ ರಾಜಕುಮಾರ ಆಂಡ್ರೂ ಬಲ್ಕೋನ್‌ಸ್ಕಿಯನ್ನು ಗುರುತುಮಾಡಿಕೊಂಡು, ಅವನ ಮೂಲಕ ದಂಡನಾಯಕನ ಕಚೇರಿಯಲ್ಲೊಂದು ಸ್ಥಾನವನ್ನು ಗಿಟ್ಟಿಸಿಕೊಳ್ಳುವ ಹವಣಿಕೆಯಲ್ಲಿದ್ದನು. ಹಿಂದಿನ ದಿನದ ಪ್ರಯಾಣದ ನಂತರ ಅಚ್ಚುಕಟ್ಟಾಗಿ ಉಡುಪು ಧರಿಸಿದ್ದ

ಬರ್ಗ್ ಮತ್ತು ಬೋರಿಸ್‌ರು ತಮಗಾಗಿ ಕಾದಿರಿಸಿದ್ದ ನಿರ್ಮಲ ವಸತಿಗೃಹದಲ್ಲಿ ದುಂಡು ಮೇಜಿನ ಮುಂದೆ ಕುಳಿತು ಚದುರಂಗ ಆಡುತ್ತಿದ್ದರು. ಬರ್ಗ್ ಹೊಗೆ ಚುಂಗಾಣಿ ಯೊಂದನ್ನು ತನ್ನ ಮೊಣಕಾಲುಗಳ ನಡುವೆ ಇರುಕಿಸಿಕೊಂಡಿದ್ದನು. ಕರಾರುವಾಕ್ಕಿಗೆ ಹೆಸರಾದ ಬೋರಿಸ್ ಬರ್ಗ್ಗನ ಸರದಿಗಾಗಿ ಕಾಯುತ್ತ, ತನ್ನ ಬಿಳಿಯ ಸಪುರ ಬೆರಳು ಗಳಿಂದ ಚದುರಂಗದ ಕಾಯಿಗಳ ಸಣ್ಣ ಪಿರಮಿಡ್ಡನ್ನು ನಿರ್ಮಿಸುತ್ತಿದ್ದನು. ಆಟ ದಲ್ಲಿಯೇ ನಿಮಗ್ನಗೊಂಡ ಮನಸ್ಸಿನಿಂದ ಅವನು ಎದುರಾಳಿಯ ಮುಖವನ್ನೇ ನೋಡು ತ್ತಿದ್ದನು. ಹಿಡಿದ ಕಾರ್ಯದಲ್ಲಿ ಏಕಾಗ್ರತೆಯನ್ನು ಸಾಧಿಸುವುದೇ ಅವನ ಜಾಯ ಮಾನ. 'ಅದರಿಂದ ನೀನು ಹೊರಬರುವುದೆಂತು?' ಎಂದವನು ಪ್ರಶ್ನಿಸಿದನು.

'ಪ್ರಯತ್ನಿಸೋಣ' ಎಂದು ಬರ್ಗ್ ಪೇದೆಯನ್ನು ಮುಟ್ಟಿ, ಕೈಯನ್ನು ಹಿಂದಕ್ಕೆ ತೆಗೆದುಕೊಂಡು ಉತ್ತರಿಸಿದನು. ಅಷ್ಟರಲ್ಲಿ ಕದ ತೆರೆಯಿತು.

'ಕೊನೆಗೂ ಸಿಕ್ಕಿದ. ಬರ್ಗ್ ಸಹ ಇಲ್ಲೇ ಇದ್ದಾನೆ' ಎಂದು ರೊಸ್ತೋವ್ ಕೂಗಿ ಕೊಂಡನು. ರಷ್ಯನ್ ದಾದಿಯ ಫ್ರೆಂಚ್ ಭಾಷೆಯನ್ನನುಕರಿಸುತ್ತ 'ಓಹೋ, ಹಸುಗೂಸುಗಳೆ, ನೀವೀಗ ಮಲಗಿ' ಎಂದವನು ಬೊಬ್ಬಿಟ್ಟನು. ಆ ಫ್ರೆಂಚ್ ನುಡಿಗಳು ಕಿವಿಯ ಮೇಲೆ ಬಿದ್ದಾಗ ತಾವಿಬ್ಬರೂ ಗೊಳ್ಳೆಂದು ನಗುತ್ತಿದ್ದುದು ಬೋರಿಸ್‌ನಿಗೆ ನೆನಪಾಯಿತು.

'ಪ್ರಿಯಮಿತ್ರ, ನೀನು ಬದಲಾವಣೆಯಾಗಿರುವಂತೆ ತೋರುತ್ತಿದೆಯಲ್ಲ!' ಎನ್ನುತ್ತ ಬೋರಿಸ್ ರೊಸ್ತೋವ್‌ನನ್ನು ಸ್ವಾಗತಿಸಲೆದ್ದನು. ಆದರೆ ಅವನು ಏಳುವಮುನ್ನ ಕಾಯಿಗಳನ್ನು ಎಚ್ಚರಿಕೆಯಿಂದ ನೋಡಿ, ಬೀಳುತ್ತಿದ್ದುವನ್ನು ಬದಲಿಸಲು ಮರೆಯಲಿಲ್ಲ. ತನ್ನನ್ನವನು ಆಲಿಂಗಿಸಿಕೊಳ್ಳುವಷ್ಟರಲ್ಲಿ ನಿಕೊಲಾಸ್ ತಪ್ಪಿಸಿಕೊಂಡನು. ಸವೆದ ಜಾಡನ್ನು ತೊರೆದು ಹಿರಿಯರು ಅನುಸರಿಸುತ್ತಿದ್ದ ಕೃತಕ ಮರ್ಯಾದೆಗಿಂತ ಭಿನ್ನವಾದ ರೀತಿಯಲ್ಲಿ ಸ್ನೇಹವನ್ನು ವ್ಯಕ್ತಪಡಿಸುವ ಯೌವನ ಸಹಜವಾದ ವಿಲಕ್ಷಣ ಭಾವನೆಯಿಂದ ನಿಕೊಲಾಸ್ ವಿಶೇಷರೀತಿಯಲ್ಲಿ ಸ್ನೇಹವನ್ನು ಸೂಚಿಸಬೇಕೆಂದು ಅವನು ಯೋಚಿಸು ತ್ತಿದ್ದನು. ಚುಂಬನ ಆಗ ಚಾಲ್ತಿಯಲ್ಲಿದ್ದ ರೂಢಿ. ಅದನ್ನು ಬಿಟ್ಟು ಜಿಗುಟುವುದು, ನೂಕುವುದು ಇತ್ಯಾದಿ ಯಾವುದಾದರೂ ಹೊಸಹುನ್ನಾರು ಹಿಡಿಯಬೇಕೆಂಬುದು ಅವನ ಅಪೇಕ್ಷೆಯಾಗಿತ್ತು. ಆದಾಗ್ಗೂ ಬೋರಿಸ್ ಅವನನ್ನು ಗಾಢ ಸ್ನೇಹದಿಂದಾಲಿಂಗಿಸಿ ಕೊಂಡು, ಮೂರುಸಾರಿ ಮುತ್ತಿಕ್ಕಿದನು.

ಅವರು ಸುಮಾರು ವರ್ಷಾರ್ಧದಿಂದ ಪರಸ್ಪರವಾಗಿ ಭೇಟಿಯಾಗಿರಲಿಲ್ಲ. ಜೀವನ ಮಾರ್ಗದಲ್ಲಿ ಮೊದಲ ಹೆಜ್ಜೆಯಿಡುವ ಯುವವಯಸ್ಸಿನವರಾದ್ದರಿಂದ ಒಬ್ಬರು ಮತ್ತೊಬ್ಬರಲ್ಲಿ ಅಗಾಧ ವ್ಯತ್ಯಾಸಗಳನ್ನು ಕಂಡರು. ಬಾಲ್ಯದಿಂದ ಬದುಕು ಸಾಗಿಸಿದ್ದ ಸಮಾಜವೂ ಅವರಿಗೆ ನವನವೀನವಾಗಿ ತೋರಿತು. ಹಿಂದೆ ಸಂಧಿಸಿದಾಗಿನಿಂದೀಚೆಗೆ ಇಬ್ಬರೂ ತುಂಬ ಬದಲಾವಣೆಗೊಂಡಿದ್ದರು. ತಮ್ಮಲ್ಲಾಗಿದ್ದ ಬದಲಾವಣೆಗಳನ್ನು ವಿನಿಮಯಮಾಡಿಕೊಳ್ಳಲು ಅವರು ಕಾತರರಾಗಿದ್ದರು.

'ಓಹೋ, ನೀವು ಅನಿಷ್ಟದ ಪೋಕಿಲಾಲರು! ಉತ್ಸವಕ್ಕೆ ಹೋಗಿದ್ದವರಂತೆ ಸ್ವಚ್ಛವಾಗಿ ಗರಿಗರಿಯಾಗಿ ಕಾಣುತ್ತೀರಿ. ನಾವೋ, ಸಾಲು ದಳದ ನತದೃಷ್ಟ ಸೈನಿಕರು!'

ಎಂದು ರೊಸ್ತೋವ್ ಧೂಳಿಡಿದ ತನ್ನ ಷರಾಯಿಗಳನ್ನು ತೋರಿಸುತ್ತ, ವೀರೋಚಿತ ಜಬರ್‌ದಸ್ತಿಯಿಂದ, ಬೋರಿಸ್‌ನಿಗೆ ಹೊಸದಾಗಿ ತೋರಿದ ಮಧ್ಯಮಸ್ವರದಲ್ಲಿ ನುಡಿದನು. ಜರ್ಮನಿಯವಳಾದ ಅಂಗಡಿಯ ಯಜಮಾನಿ ರೊಸ್ತೋವ್‌ನ ಗರ್ಜನೆ ಕೇಳಿದ ಕೂಡಲೇ ಬಾಗಿಲಲ್ಲಿ ತಲೆಹಾಕಿದಳು. 'ಅವಳು ಚೆನ್ನಾಗಿದ್ದಾಳೇನು?' ಎಂದು ರೊಸ್ತೋವ್ ಕಣ್ಣು ಮಿಟುಕಿಸಿದನು.

'ಅಷ್ಟೇಕೆ ಕಿರಿಚುತ್ತೀಯೆ? ಅವರು ಹೆದರಿಕೊಳ್ಳುತ್ತಾರೆ!' ಎಂದು ಬೋರಿಸ್ ಅವನನ್ನು ಎಚ್ಚರಿಸಿದನು. 'ಈ ಹೊತ್ತು ನಾನು ನಿನ್ನನ್ನು ನಿರೀಕ್ಷಿಸಿರಲಿಲ್ಲ. ಕುತುಜೋವ್‌ನ ಸಹಾಯಾಧಿಕಾರಿಯಾದ ಬಲ್ಕೋನ್‌ಸ್ಕಿ ಕೈಯಲ್ಲಿ ನಿನ್ನೆ ನಿನಗೆಂದು ಒಂದು ಚೀಟಿ ಕಳಿಸಿದ್ದು ನಿಜ. ಬಲ್ಕೋನ್‌ಸ್ಕಿ ನನ್ನ ಗೆಳೆಯ. ಇಷ್ಟು ಬೇಗ ಅದು ನಿನಗೆ ತಲುಪುತ್ತದೆಂದು ನಾನು ಊಹಿಸಿಕೊಂಡಿರಲಿಲ್ಲ....ಇರಲಿ ನೀನು ಹೇಗಿದ್ದೀಯೆ? ಈಗಾಗಲೇ ಗುಂಡಿನ ಬಾಯಿಗೆ ಗುರಿಯಾಗಿರಬೇಕಲ್ಲವೆ?'

ರೊಸ್ತೋವ್ ಉತ್ತರಿಸಲಿಲ್ಲ. ತನ್ನ ಸಮವಸ್ತ್ರದ ಹುರಿಗೆ ಬಿಗಿದಿದ್ದ ಸಂತ್ ಜಾರ್ಜ್ ಲಾಂಛನವನ್ನು ಅಲ್ಲಾಡಿಸಿ, ಪಟ್ಟಿಕಟ್ಟಿದ ತೋಳನ್ನು ತೋರಿಸುತ್ತ, ಮುಗುಳು ನಗೆ ಸೂಸುತ್ತ ಬೋರಿಸ್‌ನನ್ನು ನೋಡಿದನು. 'ನಿನಗೆ ಹೇಗೆ ಕಾಣುತ್ತೇನೆ?'

'ಹಾಗೊ? ಹೌದ್ಹೌದು! ನಮ್ಮ ಪ್ರಯಾಣವೂ ಭರ್ಜರಿಯಾಗಿತ್ತು. ಉದ್ದಕ್ಕೂ ಚಕ್ರವರ್ತಿಗಳು ನಮ್ಮೊಡನಿದ್ದರು. ಆದ್ದರಿಂದ ನಮಗೆ ಸಕಲ ಸೌಲಭ್ಯಾನುಕೂಲಗಳೂ ದೊರೆತವು. ಪೋಲೆಂಡಿನಲ್ಲಿ ನಮಗೆ ದೊರೆತ ಸ್ವಾಗತದ ಸಂಭ್ರಮ ವರ್ಣನಾತೀತ! ಔತಣಗಳೇನು? ನೃತ್ಯಗಳೇನು? ಅದನ್ನೆಲ್ಲ ವಿವರಿಸಲಾರೆ. ಚಕ್ರವರ್ತಿಕುಮಾರರಂತು ಅಧಿಕಾರಿಗಳಿಗೆ ತೋರಿದ ಕರುಣೆಯನ್ನು ಮರೆಯಲಾಗದು?' ಎಂದು ಬೋರಿಸ್ ಹೆಮ್ಮೆಯಿಂದ ನುಡಿದನು.

ಇಬ್ಬರು ಗೆಳೆಯರು ತಂತಮ್ಮ ಕೆಲಸಕಾರ್ಯಗಳ ವಿವರಗಳನ್ನು ವಿನಿಮಯ ಮಾಡಿಕೊಂಡರು. ರಾವುತದಳದ ಸಮ್ಮೋದ ಸಂಭ್ರಮಗಳನ್ನು ಕದನಮುಖದ ಜೀವನಾನುಭವವನ್ನು ಒಬ್ಬ ವರ್ಣಿಸಿದರೆ, ಸಾರ್ವಭೌಮ ಕುಟುಂಬದವರ ಸೇವೆಯ ಆಮೋದ ಪ್ರಮೋದ ಸೌಲಭ್ಯಗಳನ್ನು ಮತ್ತೊಬ್ಬ ವರ್ಣಿಸಿದನು.

'ಕಾವಲು ಪಡೆಯ ನೀವ್ರೋ! ಅದಿರಲಿ, ವೈನ್ ತರಿಸಯ್ಯ' ಎಂದು ರೊಸ್ತೋವ್ ಒರೆದನು.

ಬೋರಿಸ್ ಹಲ್ಲು ಕಿರಿದನು. 'ನಿಜಕ್ಕೂ ಬೇಕೇನು?' ಅವನು ಹಾಸುಗೆಯ ಬಳಿಸಾರಿ, ಮಡಿತಲೆದಿಂಬಿನಡಿಯಿಂದ ಹಣದ ಚೀಲವನ್ನು ತೆಗೆದುಕೊಂಡು, ವೈನ್ ತರಲು ಕಳಿಸಿದನು. 'ನನ್ನ ಬಳಿ ನಿನಗಾಗಿ ಕಳಿಸಿರುವ ಹಣ ಮತ್ತು ಕಾಗದಗಳಿವೆ.'

ರೊಸ್ತೋವ್ ಕಾಗದವನ್ನು ಕೈಗೆತ್ತಿಕೊಂಡು, ಹಣವನ್ನು ಸೋಫದ ಮೇಲಿರಿಸಿ, ಮೇಜಿನ ಮೇಲೆ ಎರಡು ತೋಳುಗಳನ್ನು ಊರಿ, ಓದತೊಡಗಿದನು. ಕೆಲವು ಸಾಲುಗಳ ನ್ನೋದಿದನಂತರ ಅವನು ಬರ್ಗ್ ಕಡೆಗೆ ಕುಪಿತದೃಷ್ಟಿಬೀರಿದನು. ಅನಂತರ ಅವನ ಕಣ್ಣುಗಳನ್ನೆ ನೋಡುತ್ತ, ಕಾಗದದ ಹಿಂದುಗಡೆ ಮುಖ ಮರೆಮಾಡಿಕೊಂಡನು.

'ಪರವಾ ಇಲ್ಲ, ದೊಡ್ಡಮೊತ್ತವನ್ನೇ ಕಳಿಸಿದಂತಿದೆ. ನಮಗೋ, ಶ್ರೀಮಂತ

ಮಹಾಶಯ, ನಮ್ಮ ಸಂಬಳವಲ್ಲದೆ ಬೇರೇನೂ ಇಲ್ಲ. ನನ್ನ ವಿಚಾರ ಮಾತ್ರ ನಾನು ಹೇಳುತ್ತಿದ್ದೇನೆ....' ಎಂದು ಬರ್ಗ್ ಸೋಫಾದಲ್ಲಿ ಅದ್ದಿದ್ದ ಭಾರಿ ಗಂಟನ್ನೆ ನೋಡುತ್ತಿದ್ದನು.

'ಅಯ್ಯಾ ಬರ್ಗ್, ನನ್ನ ಪ್ರೀತಿಯ ಸ್ನೇಹಿತ, ಮನೆಯಿಂದ ನಿನಗೊಂದು ಪತ್ರ ಬಂದಿದೆಯೆಂದು ತಿಳಿ. ನಿನಗೆ ಆತ್ಮೀಯರಾದವರೊಬ್ಬರು ಬಳಿಯಿದ್ದರೆ, ಕಾಗದದ ವಿವರಗಳನ್ನು ಅವನಿಗೆ ತಿಳಿಸಲು ನೀನು ಕಾತರನಾಗುವುದು ಸಹಜವಲ್ಲವೆ? ನಾನೇನಾದರೂ ಅಲ್ಲಿದ್ದ ಪಕ್ಷದಲ್ಲಿ, ಕೂಡಲೇ ಅಲ್ಲಿಂದ ಕಂಬಿಕೀಳುತ್ತೇನೆ. ಎಲ್ಲಿಗಾದರೂ ಹಾಳಾಗಿ ಹೋಗು ....ಪಿಶಾಚಿಯ ಗುಹೆಗೆ ಹೋದರೂ ಸರಿಯೆ!' ಎಂದು ರೊಸ್ತೋವ್ ಗಟ್ಟಿಯಾಗಿ ಒದರಿದನು. ಕೂಡಲೇ ಅವನ ಭುಜವನ್ನು ಹಿಡಿದುಕೊಂಡು, ತನ್ನ ಮಾತಿನ ಕಾಠಿನ್ಯವನ್ನು ಮೆದುಗೊಳಿಸುವ ಸಲುವಾಗಿ, ಅವನ ಮುಖದ ಮೇಲೆ ಸ್ನಿಗ್ಧ ಸ್ನೇಹ ದೃಷ್ಟಿಯನ್ನು ಬೀರಿ, 'ನಿನಗೆ ನೋವಾಗಲಿಲ್ಲ ತಾನೆ, ಮಿತ್ರ. ನಾನು ಎದೆಯಾಳದಿಂದ ಮುಚ್ಚುಮರೆಯಿಲ್ಲದೆ, ಹಳೆಯ ಗೆಳೆಯನೊಬ್ಬನೊಡನೆ ಮಾತಾಡುವಂತೆ ಮಾತಾಡಿದ್ದೇನೆ.'

'ಹೆಚ್ಚೇನೂ ಹೇಳಬೇಡಿ, ಶ್ರೀಮಂತರೆ! ನನಗರ್ಥವಾಗಿದೆ' ಎಂದು ಬರ್ಗ್ ಮೇಲೆದ್ದು, ಉಸಿರುಕಟ್ಟಿದವನಂತೆ ಗಂಟಲಲ್ಲಿಯೆ ಮಾತಾಡಿದನು.

'ಅಗೋ ಅಲ್ಲಿ ನಮ್ಮ ಆತಿಥೇಯರಿದ್ದಾರೆ. ಅವರು ಕರೆದರು. ನೀನಲ್ಲಿಗೆ ಹೋಗು' ಎಂದು ಬೋರಿಸ್ ನುಡಿದನು.

ಕೊಳೆಯಾಗಲಿ ಧೂಳಿನ ಕಣವಾಗಲಿ ಅಂಟದ ಅತ್ಯಂತ ಶುಭ್ರವಾದ ಕೋಟನ್ನು ಧರಿಸಿಕೊಂಡು ಬರ್ಗ್ ಕನ್ನಡಿಯ ಮುಂದೆ ನಿಂತುಕೊಂಡನು. ಚಕ್ರವರ್ತಿ ಅಲೆಕ್ಸಾಂಡರ್‌ನ ಮಾದರಿಯಲ್ಲಿ ಕಣತಲೆಯ ಮೇಲಿದ್ದ ಕೂದಲನ್ನು ಮೇಲಕ್ಕೆ ಬಾಚಿಕೊಂಡು, ರೊಸ್ತೋವ್ ತನ್ನ ಕಡೆಗೆ ದಿಟ್ಟಿಸುತ್ತಿದ್ದುದರಿಂದ ತನ್ನ ಕೋಟು ಅವನ ಕಣ್ಣಿಗೆ ಬಿದ್ದಿರಬೇಕೆಂದು ಖಾತರಿ ಮಾಡಿಕೊಂಡು, ಆಹ್ಲಾದಕರವಾದ ಮಂದಹಾಸವನ್ನು ಬೀರುತ್ತ, ಅವನು ಕೋಣೆಯಿಂದ ಹೊರಬಿದ್ದನು.

'ಓ ನನ್ನ ಒಲವೆ, ನಾನೆಂಥ ಜಂತು!' ಎಂದು ಕಾಗದ ಓದುತ್ತಿದ್ದಂತೆ ರೊಸ್ತೋವ್ ಗೊಣಗಿಕೊಂಡನು.

'ಏಕೆ?'

'ನಾನೆಂಥ ಸೂಕರ! ಒಮ್ಮೆಯಾದರೂ ನಾನವರಿಗೆ ಬರೆದಿಲ್ಲವಲ್ಲ. ಅವರು ತುಂಬ ಹೆದರಿರುವುದಕ್ಕೆ ನಾನೇ ಕಾರಣ. ನಾನೆಂಥ ಹಂದಿ!' ಎಂದವನು ಮತ್ತೆ ಮತ್ತೆ ಉಚ್ಚರಿಸುತ್ತ, ಕೆಂಪಗಾದನು. 'ಅದಿರಲಿ, ವೈನ್ ತರಲು ಗೇಬ್ರಿಯಲ್ ಕಳಿಸಿದ್ದೀಯೇನು? ಅವನು ಬರಲಿ ಸ್ವಲ್ಪ ಗುಟುಕರಿಸೋಣ.'

ಅವನ ತಂದೆತಾಯಿಯರಿಂದ ಬಂದಿದ್ದ ಪತ್ರದ ಜತೆಗೆ ಬಗ್ರೇಷನ್ ಹೆಸರಿಗೆ ಒಂದು ಶಿಫಾರಸು ಪತ್ರವನ್ನು ಸಹ ಲಗತ್ತಿಸಲಾಗಿತ್ತು. ಅನ್ನಾ ಮಿಖಾಯ್‌ಲೋವ್ನಳ ಸಲಹೆಯಂತೆ ಶ್ರೀಮಂತೆ ತನ್ನ ಪರಿಚಯದ ವ್ಯಕ್ತಿಯ ಮೂಲಕ ಆ ಶಿಫಾರಸ್ ಕಾಗದವನ್ನು ಪಡೆದಿದ್ದಳು. ಅದನ್ನು ಸಂಬಂಧಪಟ್ಟವರಿಗೆ ತಲುಪಿಸಿ, ಅದರ ಪ್ರಯೋಜನವನ್ನು ಪಡೆಯುವಂತೆ ಮಗನಿಗೆ ತಿಳಿಸಿದ್ದಳು.

'ಇದೆಂಥ ಅವಿವೇಕ! ನನಗೆ ಅದರ ಆಗತ್ಯವೇನಿದೆ?' ಎಂದು ರೊಸ್ತೋವ್ ಅದನ್ನು ಮೇಜಿನ ಕೆಳಗೆ ಬಿಸಾಡಿದನು.

'ಅದನ್ನೇಕೆ ಬಿಸಾಡಿದೆ?' ಎಂದು ಬೋರಿಸ್ ಕೇಳಿದನು.

'ಅದೊಂದು ಶಿಫಾರಸುಪತ್ರ. ಆ ಹಾಳು ಪತ್ರ ನನಗೇಕೆ ಬೇಕಿತ್ತು?'

'ಏಕಯ್ಯ? "ಹಾಳು ಪತ್ರ" ಎಂದು ಹೇಳುತ್ತೀಯಲ್ಲ' ಎಂದು ಬೋರಿಸ್ ಅದನ್ನೆತ್ತಿಕೊಂಡು, ವಿಳಾಸವನ್ನೋದಿದನು. 'ಈ ಕಾಗದದಿಂದ ನಿನಗೆ ತುಂಬ ಪ್ರಯೋಜನವಾಗುತ್ತದೆ.'

'ನನಗೇನೂ ಬೇಕಿಲ್ಲ. ನಾನು ಯಾರಿಗೂ ಸಹಾಯಾಧಿಕಾರಿಯಾಗಿರಲಾರೆ.'

'ಏಕೆ ಬೇಡ?'

'ಅದೊಂದು ಅಡಿಯಾಳಿನ ಕೆಲಸ!'

'ನೀನಿನ್ನೂ ಅದೇ ಸ್ವಪ್ನ ಪ್ರಪಂಚದಲ್ಲಿದ್ದೀಯೆ' ಎಂದು ಬೋರಿಸ್ ತಲೆಯಲ್ಲಾಡಿಸಿದನು.

'ನೀನಿನ್ನೂ ಅದೇ ರಾಯಭಾರಿಯಾಗಿದ್ದೀಯೆ! ಅದೀಗ ನನಗೆ ಮುಖ್ಯವಲ್ಲ.... ಹೇಗಿದ್ದೀಯೆ? ಹೇಳು' ಎಂದು ರೊಸ್ತೋವ್ ಪ್ರಶ್ನಿಸಿದನು.

'ನೀನೇ ನೋಡ್ತಾ ಇದ್ದೀಯಲ್ಲ. ಈ ತನಕ ಎಲ್ಲ ಸರಿ. ಸಹಾಯಾಧಿಕಾರಿಯಾಗಿರುವುದೇ ನನಗೆ ಇಷ್ಟ. ಕದನಾಗ್ರಭಾಗದಲ್ಲಿರಲು ನನಗಿಷ್ಟವಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೇನೆ.'

'ಏಕೆ?'

'ಸೈನ್ಯಕ್ಕೆ ಸೇರಿದ ಮೇಲೆ, ಅದರಿಂದ ಎಷ್ಟು ಯಶಸ್ಸು ಪಡೆಯಬಹುದೋ ಅಷ್ಟನ್ನು ಪಡೆಯಲು ಯತ್ನಿಸಬೇಕು.'

'ಓಹೋ, ಅಷ್ಟೇ ತಾನೆ' ಎಂದು ರೊಸ್ತೋವ್ ಅನ್ಯಮನಸ್ಕನಾಗಿ ನುಡಿದನು. ಅವನು ಉದ್ದೇಶ ಪೂರ್ವಕವಾಗಿ ಕುತೂಹಲ ದೃಷ್ಟಿಯಿಂದ ತನ್ನ ಗೆಳೆಯನ ಕಣ್ಣುಗಳನ್ನೆ ನೋಡುತ್ತ ಯಾವುದೋ ಪ್ರಶ್ನೆಗೆ ಉತ್ತರ ಪಡೆಯಲು ಅಯಶಸ್ವಿಯಾದನು.

ಮುದುಕ ಗೇಬ್ರಿಯಲ್ ವೈನ್ ತಂದನು.

'ಈಗ ಬರ್ಗ್‌ನಿಗೆ ಹೇಳಿಕಳಿಸೋಣವೆ? ಅವನು ನಿನಗೆ ಸಂಗ ಕೊಡುತ್ತಾನೆ. ನನ್ನಿಂದ ಸಾಧ್ಯವಿಲ್ಲ' ಎಂದು ಬೋರಿಸ್ ನುಡಿದನು.

'ಸರಿ, ಕರೆಸು....ಆ ಜರ್ಮನಿಯವನೊಡನೆ ಹೇಗೆ ಏಗುತ್ತೀಯೆ?' ಎಂದು ರೊಸ್ತೋವ್ ತಾತ್ಸಾರದ ನಗೆ ಬೀರಿದನು.

'ಅವನು ಸಭ್ಯ, ಪ್ರಾಮಾಣಿಕ, ಸ್ನೇಹಪರ' ಎಂದು ಬೋರಿಸ್ ಉತ್ತರಿಸಿದನು.

ಮತ್ತೆ ರೊಸ್ತೋವ್ ಬೋರಿಸ್‌ನ ಕಣ್ಣುಗಳನ್ನು ನಿಟ್ಟಿಸಿ, ನಿಡುಸುಯ್ದನು. ಬರ್ಗ್ ಬಂದನಂತರ ವೈನ್‌ಪಾನದೊಡನೆ ಆ ಮೂವರ ಸಂಭಾಷಣೆ ಕಾವೇರಿತು. ತಮ್ಮ ಪ್ರಯಾಣದ ವಿವರಗಳನ್ನೂ, ರಷ್ಯಾ ಪೋಲೆಂಡ್ ಮತ್ತು ಇತರ ದೇಶಗಳಲ್ಲಿ ತಮಗೆ ದೊರೆತ ವೈಭವೋಪೇತ ಸ್ವಾಗತವನ್ನೂ ಆ ಕಾವಲುಪಡೆಯ ಅಧಿಕಾರಿಗಳು ವಿವರಿಸಿದರು. ತಮ್ಮ ದಳಾಧಿಪತಿ ಡ್ಯೂಕನ ನಡೆನುಡಿಗಳನ್ನೂ ಸಿಡುಕುಕರುಣೆಗಳ ಕಥೆಗಳನ್ನೂ ವರ್ಣಿಸಿ

ದರು. ಮಾತಿನ ವಿಷಯ ತನಗೆ ಸಂಬಂಧಿಸದಿದ್ದಾಗ ವಾಡಿಕೆಯಂತೆ ಬರ್ಗ್ ಮೌನ ತಾಳುತ್ತಿದ್ದನು. ಆದರೆ ಡ್ಯೂಕನ ಸಿಡುಕಿನ ಕಥೆ ಪ್ರಸ್ತಾಪಗೊಂಡಾಗ ಬರ್ಗ್ ಉತ್ಸಾಹ ದಿಂದ ತನ್ನ ಅನುಭವವನ್ನು ನಿವೇದಿಸಿದನು. ಆಗ ಸೈನ್ಯ ಗೇಲೀಷಿಯಾದಲ್ಲಿ ಚಲಿಸು ತ್ತಿತ್ತು—ಅವರ, ಅಕ್ರಮ ಚಲನ ವಿನ್ಯಾಸದಿಂದ ಕಿರಿಕಿರಿಗೊಂಡ ಡ್ಯೂಕ್ ದಳಗಳ ಪರಿಶೀಲನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದನು. 'ಆರ್ನಾಟ್ಸ್' (ಆಲ್ಬೇನಿಯಾ ದೇಶದವರನ್ನು ಕರೆಯುತ್ತಿದ್ದ ರೀತಿ) ಎಂದವನು ಭಾವಾವೇಶದಿಂದ ಬೊಬ್ಬಿಡುತ್ತ, ಅವನ ಬಳಿ ಅಶ್ವಾರೂಢನಾಗಿ ಬಂದನು ; ಬಂದವನೆ ಪಡೆಯೊಡೆಯನನ್ನು ಕರೆದನು.

'ನೀವು ನಂಬ್ತೀರೋ ಇಲ್ಲವೋ ಕಾಣೆ, ಶ್ರೀಮಂತರೆ. ನಾನು ಸ್ವಲ್ಪವೂ ಚಕಿತ ನಾಗಲಿಲ್ಲ. ಏಕೆಂದರೆ, ನಾನು ಸರಿಯಾಗಿದ್ದೆನೆಂಬುದರಲ್ಲಿ ಸ್ವಲ್ಪವೂ ಸಂಶಯವಿರಲಿಲ್ಲ. ನಾನು ಜಂಬ ಕೊಚ್ಚಿಕೊಳ್ಳುತ್ತಿಲ್ಲ. ಸೈನ್ಯದ ಆಜ್ಞೆಗಳೆಲ್ಲ ನನಗೆ ಹೃದ್ಗತವಾಗಿದ್ದುವು. ಕಾನೂನುಗಳೂ ಅಷ್ಟೇ. ಪ್ರಭುಪ್ರಾರ್ಥನೆಯೂ ಅಷ್ಟೇ ಚೆನ್ನಾಗಿ ಬರುತ್ತಿತ್ತು. ನನ್ನ ಪಡೆಯಲ್ಲೆಂದೂ ನಿರ್ಲಕ್ಷ್ಯವಿದ್ದದ್ದಿಲ್ಲ. ನನ್ನ ಕರ್ತವ್ಯಜ್ಞಾನವೂ ದೋಷ ದೂರವಾಗಿತ್ತು. ನಾನು ಮುಂದೆ ಸರಿದೆ....(ಬರ್ಗ್ ಮೇಲೆದ್ದು ನಿಂತನು. ಟೋಪಿಯ ಸಮಕ್ಕೆ ತನ್ನ ಕೈಯನ್ನೆತ್ತಿ, ಡ್ಯೂಕನಿಗೆ ಕಾಣಿಸಿಕೊಂಡ ಪರಿಯನ್ನು ಪ್ರದರ್ಶಿಸಿದನು. ಆ ಸಮಯದಲ್ಲಿ ಅವನ ಮುಖ ಪ್ರದರ್ಶಿಸಿದ ಗೌರವ ಆತ್ಮವಿಶ್ವಾಸಗಳನ್ನು ಬೇರೊಂದು ಮುಖ ಪ್ರದರ್ಶಿ ಸುವುದು ಕಷ್ಟವಾಗುತ್ತಿತ್ತು.) 'ಅವರು ನನ್ನ ಮೇಲೆ ಲಗ್ಗೆ ಹೂಡಿದರೆಂದೇ ಹೇಳಬೇಕು. ಆಗ ನಮ್ಮ ಮುಂದಿದ್ದದ್ದು ಬದುಕಿನ ವಿಷಯವಲ್ಲ, ಸಾವಿನ ವಿಷಯ "ಆಲ್ಬೇನಿಯನ್ನರು!" "ದೆವ್ವಗಳು !" "ಸೈಬೀರಿಯಾಕ್ಕೆ" ಎಂದು ಡ್ಯೂಕ್ ಅಬ್ಬರಿಸಿದನು. ನಾನು ಕರಾರು ವಾಕ್ಕಾಗಿದ್ದೆನೆನ್ನುವುದು ನನಗೆ ಗೊತ್ತಿತ್ತು. ಆದ್ದರಿಂದ ನಾನು ಮೌನವಾಗಿದ್ದೆ. ಅದು ಸರಿ ತಾನೆ, ಶ್ರೀಮಂತರೆ ? "ಹೇ, ನೀವು ಮೂಗರೊ ?" ಎಂದವರು ಬೊಬ್ಬಿರಿದರು. ಆಗಲೂ ನಾನು ತೆಪ್ಪಗಿದ್ದೆ. ನನ್ನ ನಡತೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು ? ಶ್ರೀಮಂತರೆ. ಮಾರನೆಯದಿನದ ದೈನಂದಿನ ಆಜ್ಞೆಗಳಲ್ಲಿ ಆ ವಿಷಯದ ಪ್ರಸ್ತಾಪವೇ ಇಲ್ಲ. ತಲೆಯನ್ನು ಸರಿಯಾಗಿಟ್ಟುಕೊಳ್ಳುವ ವಿಧಾನವೇ ಇದು, ಅಲ್ಲವೆ ಶ್ರೀಮಂತರೆ ?' ಎಂದು ಬರ್ಗ್ ಚುಂಗಾಣಿಯನ್ನು ಹಚ್ಚಿಕೊಂಡು, ಹೊಗೆಯ ಉಂಗುರಗಳನ್ನು ನೇಯ್ದನು.

'ಕತೆ ಸೊಗಸಾಗಿತ್ತು' ಎಂದು ರೊಸ್ತೋವ್ ಮಂದಹಾಸ ಬೀರಿದನು.

ಬರ್ಗ್‌ನನ್ನವನು ತಮಾಷೆಮಾಡಲು ಅಣಿಯಾಗುತ್ತಿದ್ದನೆಂಬುದನ್ನು ಬೋರಿಸ್ ಗಮನಿಸಿ, ಚಮತ್ಕಾರದಿಂದ ವಿಷಯಾಂತರ ಮಾಡಿದನು. ಎಲ್ಲಿ, ಹೇಗೆ ಗಾಯಗೊಂಡ ದ್ದೆಂದು ಬೋರಿಸ್ ರೊಸ್ತೋವ್‌ನನ್ನು ಕೇಳಿದನು. ಆ ಪ್ರಶ್ನೆಯಿಂದ ರೊಸ್ತೋವ್‌ಗೆ ಹರ್ಷವಾಯಿತು. ಸರಿ, ಅವನು ತನ್ನ ಕತೆ ಹರಿಯಬಿಟ್ಟ. ಮಾತು ಹರಿಯುತ್ತಿದ್ದಂತೆ ಭಾವದ ಕಾವು ಏರುತ್ತಿತ್ತು. ಯುದ್ಧದಲ್ಲಿ ಪಾಲ್ಗೊಂಡವರು ವಾಸ್ತವತೆಯನ್ನು ಮರೆತು ತಮ್ಮ ಸಾಹಸದ ಮಹಿಮೆಯನ್ನೆಂತು ವರ್ಣಿಸುತ್ತಾರೆಯೋ, ಅಂದರೆ ಅದು ಹೇಗಿದ್ದಿರ ಬಹುದೆಂದು ಊಹಿಸಿಕೊಂಡು ಅಥವಾ ಇತರರು ವರ್ಣಿಸಿದ್ದನ್ನು ಕೇಳಿಕೊಂಡು ವಿವರಿಸು ತ್ತಾರೆಯೋ, ಅದೇ ರೀತಿಯಲ್ಲಿ ಅವನು ಷಾನ್‌ಗ್ರಾಬೆರ್ನ್ ಪ್ರಕರಣವನ್ನು ವಿವರಿಸಿದನು.

(ಮುಂದುವರಿಯುವುದು)

(ಅಲನೇ ಪುಟದಿಂದ ಮುಂದುವರಿದದ್ದು)

ಗಳನ್ನು ಆ ಮಂದಿ ಅರಿತವರಾದ್ದರಿಂದ ತಮ್ಮ ರಾಷ್ಟ್ರದ ಜನಸಂಖ್ಯಾವೃದ್ಧಿಯನ್ನು ನಿಯಂತ್ರಿಸಲು ಉದ್ಯುಕ್ತರಾಗಿ ಸಫಲರಾದರು. ವಿಶ್ವಸಂಸ್ಥೆಯ ಮೂಲಗಳಿಂದ ಪಡೆಯ ಲಾದ ೧೯೭೩ರ ಪರಿಸ್ಥಿತಿಯನ್ನು ಕೆಳಗಿನ ಯಾದಿಯಲ್ಲಿ ಕಾಣಿಸಿದೆ :

ಪ್ರದೇಶ	ಜನಸಂಖ್ಯೆ ಕೋಟಿಗಳಲ್ಲಿ	ಸ್ಥೂಲ ವಾರ್ಷಿಕ ಜನನ ಸಂಖ್ಯೆ ಶೇಕಡಾ	ಸ್ಥೂಲ ವಾರ್ಷಿಕ ಮರಣ ಸಂಖ್ಯೆ ಶೇಕಡಾ	ವಾರ್ಷಿಕ ನಿವ್ವಳ ವೃದ್ಧಿ ಶೇಕಡಾ
ಪ್ರಪಂಚ	386	3.3	1.3	2
ಅಭಿವರ್ಧಿತ ರಾಷ್ಟ್ರಗಳು	112	1.7	0.9	0.8
ಅಭಿವರ್ಧಶೀಲ ರಾಷ್ಟ್ರಗಳು	274	3.9	1.4	2.5
ಆಫ್ರಿಕ	35.5	4.6	1.9	2.7
ಜಪಾನ್ ಹೊರತಾದ ಏಷ್ಯ	210	3.8	1.4	2.4
ಲ್ಯಾಟಿನ್ ಅಮೆರಿಕ (ಉಷ್ಣವಲಯ)	26.5	3.8	0.8	3
ಅಮೆರಿಕ ಸಂಯುಕ್ತ ಸಂಸ್ಥಾನಗಳು	21	1.5	0.9	0.6
ಜಪಾನ್	10.8	1.9	0.7	1.2
ಯೂರೋಪ್	47.2	1.6	1.1	0.5
ಸೋವಿಯತ್ ಒಕ್ಕೂಟ	25	1.8	0.8	1
ಇತರ ರಾಷ್ಟ್ರಗಳು : ಕೆನಡ, ಆಸ್ಟ್ರೇಲಿಯ, ನ್ಯೂಜಿಲೆಂಡ್, ಲ್ಯಾಟಿನ್ ಅಮೆರಿಕ (ಸಮಶೀತೋಷ್ಣ ವಲಯ)	8	2.2	0.8	1.4

ಅಮೆರಿಕದ ಕುಶಲಿಗಳಿಗೆ ಒದಗಿಬಂದ ಸನ್ನಿವೇಶ ವಿಶೇಷತರಹದ್ದು : ತಂತ್ರವಿದ್ಯಾ ಪರಿಣಿತ ಅಲ್ಪ ಜನಸಂಖ್ಯೆ, ವಿಪುಳ ನೈಸರ್ಗಿಕ ಸಂಪನ್ಮೂಲಗಳು, ವಿಶಾಲ ಪ್ರದೇಶ. ವ್ಯವಸ್ಥಿತವಾಗಿ ಈ ಸಂಪನ್ಮೂಲಗಳನ್ನು ಅನ್ವೇಷಿಸಿ ಸ್ವಂತ ಸೌಕರ್ಯಕ್ಕಾಗಿ ಬಳಸು ವುದು ಸಹಜವಾಗಿ ಅವರ ಉದ್ದೇಶವಾಯಿತು. ಆ ದಿನಗಳಂದು—ತಂತ್ರವಿದ್ಯೆಯ ಅನಿರ್ಬಂಧಿತ ವಿಸ್ತರಣೆಯ ಉಜ್ಜ್ವಲ ದಿನಗಳಂದು—ನವ ಅಮೆರಿಕನ್ ಸಂಸ್ಕೃತಿ

ಸ್ಥಳೀಯ ರೆಡ್ ಇಂಡಿಯನ್ ಸಂಸ್ಕೃತಿಯನ್ನು ವ್ಯವಸ್ಥಿತವಾಗಿ ಶೋಷಿಸಿ ಮೂಲೆಗುಂಪು ಮಾಡುತ್ತಿತ್ತು. ಇದಕ್ಕೊಂದು ಜೀವಂತ ಮನೋವೇಧಕ ನಿದರ್ಶನ:

ಅಮೆರಿಕ ಸಂಯುಕ್ತ ಸಂಸ್ಥಾನಗಳ ಮಹಾಧಿಸತಿಪೆತ್ತ ಅಧ್ಯಕ್ಷ ಮಹಾಶಯ ರೆಡ್ ಇಂಡಿಯನ್ ಬುಡಕಟ್ಟಿನ ನಾಯಕ ಸಿಯಾತಲ್ ಎಂಬಾತನಿಗೆ ಒಂದು ಕೋರಿಕೆ ಸಲ್ಲಿಸಿ ರೆಡ್ ಇಂಡಿಯನ್ನರ ವಸತಿ ಪ್ರದೇಶವನ್ನು ಸರಕಾರಕ್ಕೆ ಮಾರಬೇಕೆಂದು ಕೇಳಿಕೊಂಡಿದ್ದ (೧೮೫೫). ದೊರೆಯ ಕೋರಿಕೆ ಎಂದರೆ ಮಿಲಿಟರಿ ಹುಕುಂ ಎಂದು ಅರ್ಥವಷ್ಟೆ. ಆಧುನಿಕ ಯಂತ್ರಸ್ಥಾವರಗಳ ವಿಸ್ತರಣೆಗೆ, ನಾಗರಿಕ ಜನತೆಯ ಹೊಸ ಅಲೆಯ ವಹಿವಾಟುಗಳಿಗೆ ಮತ್ತು ಸಮಗ್ರವಾಗಿ ರಾಷ್ಟ್ರದ ಸುಧಾರಣೆಗೆ ಈ ಹೆಜ್ಜೆ ಅವಶ್ಯವಾಗಿತ್ತು. 'ಮುಗ್ಧ, ಅನಾಗರಿಕ ಮತ್ತು ಅವಿದ್ಯಾವಂತ' ಸಿಯಾತಲ್ ರಾಷ್ಟ್ರಾಧ್ಯಕ್ಷನಿಗೆ ಬರೆದ ಉತ್ತರದ ಕೆಲವು ಅಂಶಗಳನ್ನು ಇಲ್ಲಿ ಉದ್ಧರಿಸಿದೆ.

"ವಾಷಿಂಗ್ಟನ್ನಿನಲ್ಲಿರುವ ಮಹಾಪ್ರಭು ನಮ್ಮ ನೆಲವನ್ನು ಕೊಳ್ಳುವ ತಮ್ಮ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಸ್ನೇಹ ಮತ್ತು ಸದ್ಭಾವನೆಯ ಮಾತುಗಳನ್ನು ಸಹ ಪ್ರಭುಗಳು ನಮಗೆ ಕಳಿಸಿರುವರು. ಇದು ಅವರ ದಯಾವಂತಿಕೆಯ ದ್ಯೋತಕ. ಏಕೆಂದರೆ ನಾವು ಮರುಸಲ್ಲಿಸಬಹುದಾದಂಥ ಸ್ನೇಹ ಅವರಿಗೆ ಅಗತ್ಯವಿಲ್ಲವೆಂಬುದು ನಮಗೆ ತಿಳಿದಿದೆ. ನಾವು ನಿಮ್ಮ ಬೇಡಿಕೆಯನ್ನು ಪರಿಶೀಲಿಸುತ್ತೇವೆ. ಹಾಗೆ ಮಾಡದಿದ್ದರೆ ಬಿಳಿ ಮನುಷ್ಯ ತುಪಾಕಿಗಳ ಸಮೇತ ಬಂದು ನಮ್ಮ ನೆಲವನ್ನು ನುಂಗಬಲ್ಲ ಎಂದು ನಮಗೆ ಗೊತ್ತುಂಟು. ಆದರೆ ನೀವು ಬಾನನ್ನು ಹೇಗೆ ತಾನೇ ಕೊಳ್ಳಬಲ್ಲಿರಿ ಅಥವಾ ಮಾರಬಲ್ಲಿರಿ? ನೆಲದ ಒಲವನ್ನು? ಈ ಭಾವನೆಯೇ ನಮಗೆ ವಿಚಿತ್ರವಾಗಿದೆ. ಭೂಮಂಡದ ಪ್ರತಿಯೊಂದು ಅಂಶವೂ ನಮ್ಮ ಜನರಿಗೆ ಪವಿತ್ರವಾದದ್ದು. ಒಂದೊಂದು ಮರದ ಕೊಂಬೆರೆಂಬೆಗಳು, ಕಡಲ ಕಿನಾರೆಯಲ್ಲಿಯ ಬಿಳಿ ಮರಳ ಹಾಸು, ದಟ್ಟ ಕಾಡುಗಳಲ್ಲಿಯ ಮಬ್ಬು ಇಬ್ಬನಿಯ ಮುಸುಕು, ಗುಂಯಿಡುವ ಕೀಟದ ಸ್ವನ ಎಲ್ಲವೂ ನಮ್ಮ ಬಳಗದವರಿಗೆ ಆತ್ಮೀಯವಾದಂಥವು. ಬಿಳಿ ಮನುಷ್ಯನಿಗೆ ನಮ್ಮ ರೀತಿಗಳು ಅರ್ಥವಾಗುವುದಿಲ್ಲ ಎಂದು ನನಗೆ ಗೊತ್ತಿದೆ. ನೆಲದ ಯಾವುದೇ ಭಾಗ ಅವನಿಗೆ ಇನ್ನೊಂದು ಭಾಗದಂತೆ ಒಂದೇ. ಏಕೆಂದರೆ ಅವನು ರಾತ್ರಿಂಚರನಾದ ಹೊಸಬ. ತನಗೆ ಬೇಕಾದದ್ದನ್ನೆಲ್ಲ ನೆಲದಿಂದ ಕತ್ತರಿಸುವುದೊಂದೇ ಅವನ ಕಸಬು. ಭೂಮಿ ಅವನ ಭ್ರಾತೃ ಅಲ್ಲ, ಶತ್ರು. ಇದನ್ನು ಜಯಿಸಿದ ಬಳಿಕ ಅವನು ಮತ್ತೆ ಮುಂದೆ ಸಾಗುತ್ತಾನೆ. ಅವನ ಸುಡುವ ಹಸಿವು ಇಡೀ ಇಳೆಯನ್ನೇ ಕಬಳಿಸಿ ಬೆಂಗಾಡಾಗಿಸುತ್ತದೆ.

"ನಿಮ್ಮ ನಗರಗಳ ದೃಶ್ಯ ಕೆಂಪು ಮನುಷ್ಯನ ಕಂಗಳಲ್ಲಿ ನೋವು ಉಂಟುಮಾಡುವುದು. ಪ್ರಾಯಶಃ ಕೆಂಪು ಮನುಷ್ಯ ಒಬ್ಬ ಮೃಗ. ನಿಮ್ಮ ಸೂಕ್ಷ್ಮ ಅವನಿಗೆ ಅರ್ಥವಾಗುವುದಿಲ್ಲ. ನೀವು ನೀಡಿರುವ ಕರೆಯನ್ನು ನಾವು ಮನ್ನಿಸುವುದು ಅನಿವಾರ್ಯವಾಗಿದೆ. ಆದರೆ ಒಂದು ಷರತ್ತನ್ನು ನಿಮ್ಮ ಮುಂದಿಡಬಯಸುತ್ತೇನೆ: ಈ ನೆಲದ ಜಂತುಗಳನ್ನು ಬಿಳಿ ಮನುಷ್ಯ ತನ್ನ ಸೋದರ ಪ್ರಾಣಿಗಳೆಂಬುದಾಗಿ ಪರಿಗಣಿಸಬೇಕು. ನಾವು ಕಂಡುಕೊಂಡಿರುವ ಒಂದು ಸತ್ಯ ಉಂಟು. ಇದನ್ನು ಬಿಳಿ ಮನುಷ್ಯ ಕೂಡ ಒಂದಲ್ಲ ಒಂದು ದಿನ ತಿಳಿದೇ ತಿಳಿಯುತ್ತಾನೆ: ನಮ್ಮೆಲ್ಲರ ದೇವರೂ ಒಬ್ಬನೇ. ನಮ್ಮ

ನೆಲವನ್ನು ಹೇಗೆ ನೀವು ಸ್ವಂತಕ್ಕೆ ಪಡೆಯಬೇಕೆಂದು ಹವಣಿಸಿದ್ದೀರೋ ಹಾಗೆ ಆತನನ್ನು ಕೂಡ ಕೇವಲ ನಿಮ್ಮ ಖಾಸಾ ಸೊತ್ತಾಗಿ ಮಾಡಿಕೊಳ್ಳಲು ಬಗೆದಿರಬಹುದು. ಆದರೆ ಅದು ನಡೆಯದು. ಅವನು ಜನರ ದೇವರು. ಅವನ ಕಟಾಕ್ಷ ಕೆಂಪು ಮಂದಿಗೂ ಬಿಳಿ ಮಂದಿಗೂ ಸಮವಾಗಿಯೇ ಹಂಚಿಕೊಂಡಿದೆ. ಧರಣಿಮಂಡಲ ಅವನಿಗೆ ಅಮೂಲ್ಯವಾದದ್ದು. ಇದನ್ನು ಕುಲಗೆಡಿಸುವುದೆಂದರೆ ಸೃಷ್ಟೀಶನ ಮೇಲೆ ಅವಹೇಳನ ಹೇರಿದಂತೆ. ಬಿಳಿಯರು ಕೂಡ, ಪ್ರಾಯಶಃ ಇತರ ಬುಡಕಟ್ಟಿನವರಿಗಿಂತ ಬಲು ಬೇಗ, ತೊಲಗಿ ಹೋಗುತ್ತಾರೆ. ನಿಮ್ಮ ಹಾಸಿಗೆಯನ್ನು ಹೊಲಸುಗೊಳಿಸುವುದನ್ನು ಹೀಗೆಯೇ ಮುಂದುವರಿಸುತ್ತಿರಿ—ಒಂದು ರಾತ್ರಿ ಆ ರೊಚ್ಚೆಯಲ್ಲಿ ನಿಮ್ಮ ಉಸಿರೇ ಕಟ್ಟಿಹೋಗುತ್ತದೆ. ಕಾಡೆಮ್ಮೆಗಳೆಲ್ಲವನ್ನೂ ಕಡಿದೊಗೆದ ಬಳಿಕ, ಕಾಡುಕುದುರೆಗಳೆಲ್ಲವನ್ನೂ ಪಳಗಿಸಿ ಮುಗಿದ ತರುವಾಯ. ವನಾಂತರಗಳ ಪ್ರಶಾಂತ ಏಕಾಂತಗಳೆಲ್ಲವೂ ನರಗಬ್ಬಿನಿಂದ ನಾರುತ್ತಿರುವಾಗ ಮತ್ತು ಫಲಸಮೃದ್ಧ ಗಿರಿದೃಶ್ಯಗಳು ಚೆಲ್ಲಗಾತಿಯರ ಬೋಳುಹರಟೆಯಲ್ಲಿ ಮುಳುಗಿಹೋದಾಗ ಹೊದರೆಲ್ಲಿ ಉಳಿದಿರುವುದು? ಹದ್ದನ್ನು ಎಲ್ಲಿ ಅರಸಲಿ? ಈ ಸೂರೆಗೆ ಈ ಹನನಕ್ಕೆ ವಿದಾಯವೆಂದು? ಸಾವಿನ ಮೊನೆ ತಿವಿಯುವಂದೇ ಬದುಕಿನ ಕೊನೆ.

“ಬಿಳಿ ಮನುಷ್ಯನ ಪಟ್ಟಣಗಳಲ್ಲಿ ಎಲ್ಲಿಯೂ ಶಾಂತಪ್ರದೇಶವೇ ಇಲ್ಲ. ವಸಂತ ಮಾರುತದಿಂದ ತೊನೆಯುವ ಎಲೆಗಳ ನಿನಾದ ಅಲ್ಲಿಲ್ಲ. ಜೀರುಂಡೆಗಳ ರೆಕ್ಕೆ ಅದಿರಿಕೆಯ ಸೊಲ್ಲು ಅಲ್ಲಿಲ್ಲ. ಆದರೆ ನಾನೊಬ್ಬ ಅನಾಗರಿಕ. ನನಗೆ ತಿಳಿಯಲಾರದೋ ಏನೋ! ನಗರದ ಹರಟೆ ನನ್ನ ಕಿವಿಗಳನ್ನು ಇರಿಯುತ್ತದೆ. ಕೋಗಿಲೆಯ ಕುಹುಕುಹೂ ರವವನ್ನಾಗಲೀ ರಾತ್ರಿ ವೇಳೆ ಕೊಳದ ಸುತ್ತ ನೆರೆದು ಅಖಂಡ ಸಂವಾದದಲ್ಲಿ ಲೀನವಾಗಿರುವ ಮಂಡೂಕಗಳ ಟ್ರೊಂಯ್ ಟ್ರೊಂಯ್ ನಾದವನ್ನಾಗಲೀ ಆಲಿಸಲಾಗದಿದ್ದರೆ ಬದುಕಿನಲ್ಲಿ ಉಳಿವುದೇನು? ನಡುಹಗಲ ಮಳೆಯಿಂದ ಕೊಳೆ ತೊಳೆದ ಇಲ್ಲವೇ ಸುರ ಹೊನ್ನೆಯ ಕಂಪನ್ನು ಧರಿಸಿದ ತಂಗಾಳಿಯ ಮೆಲು ಬೀಸು ಕೆಂಪು ಮನುಷ್ಯನಿಗೆ ಬಲು ತಂಪು. ಪಕ್ಷಿಗಳ ಕಲರವ ಕೆಂಪು ಮನುಷ್ಯನಿಗೆ ಬಲು ಇಂಪು. ಈತನಿಗೆ ವಾಯು ಅತ್ಯಮೂಲ್ಯವಾದದ್ದು. ಏಕೆಂದರೆ ಇದೇ ಸರ್ವರಿಗೂ—ಪ್ರಾಣಿಗಳನ್ನೂ ಸಸ್ಯಗಳನ್ನೂ ಒಳಗೊಂಡಂತೆ—ಜೀವದಾಯಕ ಉಸಿರು. ತಾನು ಶ್ವಸನಿಸುವ ವಾಯುವನ್ನು ಬಿಳಿ ಮನುಷ್ಯ ಗಮನಿಸಿರುವಂತೆ ತೋರುವುದಿಲ್ಲ. ನವೆದು ನವೆದು ಸಾಯುತ್ತಿರುವ ರೋಗಿಯಂತೆ ಅವನು ಪರಿಮಳಕ್ಕೆ ಮರವಟ್ಟಿದ್ದಾನೆ. ಪ್ರಾಣಿಸಂಗವಿಲ್ಲದಂಥ ಮಾನವನ ಬದುಕು ಬದುಕೇ? ವನ್ಯಪ್ರಾಣಿಗಳೆಲ್ಲವೂ ನಿರ್ನಾಮವಾಗಿ ಹೋದುವೋ ಮಾನವ ಧೃತಿಗುಂದಿದವನಾಗಿ ಏಕಾಂಗಿಯಾಗಿ ಸತ್ತ್ವ ಕಳೆದುಕೊಂಡವನಾಗಿ ನಶಿಸಿಯೇ ಹೋಗುವುದು ನಿಚ್ಚಳ ಸತ್ಯ. ಏಕೆಂದರೆ ಪ್ರಾಣಿಗಳಿಗೆ ಇಂದು ಯಾವ ಗತಿ ಒದಗುವುದೋ ಅದು ನಾಳೆ ಮಾನವನಿಗೆ ಒದಗುವುದು ನಿಸರ್ಗನಿಯಮ.

“ಬಿಳಿ ಮನುಷ್ಯನ ಕನಸುಗಳೇನು? ಚಳಿಗಾಲದ ಸುದೀರ್ಘ ರಾತ್ರಿಗಳಲ್ಲಿ ಅವನು ತನ್ನ ಎಳೆಯರ ಕಲ್ಪನೆಗಳಿಗೆ ಕಟ್ಟುವ ರೆಕ್ಕೆಗಳೇನು? ಅವರ ಮುಂದೆ ಇಡುವ ಘನ ಆದರ್ಶಗಳೇನು? ಅವರು ಲೋಕವನ್ನು ಯಾವ ತೆರನಾಗಿ ಸ್ವಾಗತಿಸಬೇಕೆಂದು ಅವನು

ಬಯಸುತ್ತಾನೆ? ಇವು ಯಾವುವೂ ನಮಗೆ ತಿಳಿದಿಲ್ಲ. ನಾವು ದಸ್ಯುಗಳು. ಬಿ
ಮನುಷ್ಯನ ಕನಸುಗಳಿಗೆ ಪ್ರವೇಶ ನಮಗಿಲ್ಲ. ಅವು ಹೇಗಿರಬಹುದು ಎಂಬುದ
ನಮಗೆ ಗೊತ್ತಿಲ್ಲದಿರುವುದರಿಂದ ನಮ್ಮ ಚಿಂತನೆಯ ಧಾಟಿಯಲ್ಲಿಯೇ ನಾವು ಮುಂದ
ವರಿಯುತ್ತೇವೆ. ನಮಗೆ ನೀವು ಮೀಸಲುಪ್ರದೇಶವೊಂದನ್ನು ಒದಗಿಸುವ ಮಾತ
ಕೊಟ್ಟಿದ್ದೀರಿ. ಆ ಭರವಸೆ ಮೇರೆಗೆ ನಾವು ನಿಮಗೆ ಈ ನೆಲೆಯನ್ನು ಮಾರುತ್ತೇವೆ
ಪ್ರಾಯಶಃ ಆ ಹೊಸ ತಾಣದಲ್ಲಿ ನಮ್ಮ ಇಚ್ಛಾನುಸಾರ ನಾವು ಎಣಿಕೆಯ ದಿನಗಳನ್
ತಳ್ಳಿಯೇವು. ಕೊನೆಯ ಕೆಂಪು ಮನುಷ್ಯ ಈ ಸುಂದರ ವಸುಂಧರೆಯಿಂದ ಅಂತರ್ಧಾನ
ನಾದ ಮೇಲೆಯೂ ಅಲ್ಲದೆ ಆತನ ಸ್ಮೃತಿ ಪ್ರೇಯರಿಗಳ ಮೇಲೆ ಸರಿಯುವ ತೆಳ
ಮೋಡದ ನೆರಳಾದ ಮೇಲೆಯೂ ಈ ಕಿನಾರೆ ಮತ್ತು ಕಾಡುಗಳು ಆತನ ಸತ್ತ್
ತೇಜಸ್ಸುಗಳನ್ನು ಹಿಡಿದಿಟ್ಟಿರುತ್ತವೆ. ಏಕೆಂದರೆ ಕೆಂಪುಜನ ಭೂಮಾತೆಯನ್ನು ನವಜಾ
ಶಿಶು ತಾಯಿಯ ಗುಂಡಿಗೆ ಮಿಡಿತವನ್ನು ಮುದ್ದಿಸಿ ಅಪ್ಪುವಂತೆ ಪ್ರೀತಿಸಿ ಆಲಿಂಗಿ
ಕೊಂಡಿದ್ದಾರೆ. ನಮ್ಮ ಈ ವಲಯವನ್ನು ನಾವು ನಿಮಗೆ ಮಾರುತ್ತೇವೆ. ಆದ
ನಾವು ಇದನ್ನು ಪ್ರೀತಿಸಿದಂತೆ ನೀವೂ ಪ್ರೀತಿಸಬೇಕು, ಓಲೈಸಿದಂತೆ ನೀವೂ ಓಲೈ
ಬೇಕು, ಆರೈಸಿದಂತೆ ನೀವೂ ಆರೈಸಬೇಕು. ಇದರ ಈಗಿನ ಚಿತ್ರವನ್ನು ನಿಮ
ಮನಃಪಟಲದ ಮೇಲೆ ಪಡಿಮೂಡಿಸಿ ಚೆನ್ನಾಗಿ ಕಾಪಾಡಿಕೊಳ್ಳಿ. ನಿಮ್ಮ ಸಮಸ್
ಪ್ರಾಣ ತ್ರಾಣಗಳಿಂದ ಮನಃಪೂರ್ವಕವಾಗಿ ಇದನ್ನು ರಕ್ಷಿಸಿ. ಭಗವಂತ ಸಮಸ್
ರನ್ನೂ ಹೇಗೆ ಪ್ರೀತಿಯಿಂದ ಕಾಣುವನೋ ಹಾಗೆ ನೀವು ಇದನ್ನು ಪ್ರೀತಿಯಿಂ
ನೋಡಿಕೊಳ್ಳಿ. ಒಂದು ಸಂಗತಿ ಚೆನ್ನಾಗಿ ನಮಗೆ ಮನದಟ್ಟಾಗಿದೆ: ನಿಮ್ಮ ಮತ್ತ
ನಮ್ಮ ದೇವರು ಒಬ್ಬನೇ; ಈ ನೆಲ ಅವನ ಕೃತಿ; ಇದು ಅವನಿಗೆ ಪ್ರಿಯವಾದದ್ದು
ಅಮೂಲ್ಯವಾದದ್ದು; ಇಲ್ಲಿ ಬಿಳಿ ಮನುಷ್ಯ ಕೂಡ ಅಪವಾದವಾಗಲಾರ."

ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ವಾಸ್ತವವಾಗಿ ತಲೆದೋರಿರು
ಪರಿಸರಮಾಲಿನ್ಯದ ಖಚಿತ ಆಗಮನವನ್ನು ಪ್ರವಾದಿಯ ಮಾತುಗಳ ರೀತಿಯಲ್ಲಿ ಮತ್ತ
ವಿಜ್ಞಾನಿಯ ಬರವಣಿಗೆಯ ಸೂತ್ರಗಳ ತೆರದಲ್ಲಿ ಈ ಮೇಲಿನ ಗುಂಡಿಗೆ ಕಲಕು
ಹೃದಯವಂತಿಕೆಯ ಪತ್ರ ವರ್ಣಿಸಿದೆ.

ಸಕೇ

ನಾಗರೀಕತೆ ಅಂದರೆ ತಾಳ್ಮೆ ಸಹಿಷ್ಣುತೆಗಳ ತವರು. ಹಿಂಸೆ ಪ್ರತಿಹಿಂಸೆ
ಗಳ ಸಮುದ್ರವಲ್ಲ.

ಗಾಂಧೀಜಿ

ತತ್ತ್ವನಿಷ್ಠ ಪ್ರಾಧ್ಯಾಪಕ ಸ. ಸ. ಮಾಳವಾಡ

ಡಾ|| ಎಚ್. ತಿಪ್ಪೇರುದ್ರಸ್ವಾಮಿ

"ಸಾಕಷ್ಟು ಪರಿಶೀಲನೆ, ಆಲೋಚನೆಗಳ ನಂತರವೇ ನನ್ನ ನಿಲವನ್ನು ರೂಪಿಸಿಕೊಳ್ಳುವುದು ನನ್ನ ರೂಢಿಯೂ ಆಗಿದೆ. ನೇರವಾಗಿ ಸ್ಪಷ್ಟವಾಗಿ ಆಡುವ ನನ್ನ ಸ್ವಭಾವದಿಂದಾಗಿ ಲೌಕಿಕವಾಗಿ ನಾನು ಹಾನಿಗೊಳಗಾಗಿದ್ದೇನೆ. ನಯಗಾರಿಕೆ ವ್ಯವಹಾರಜ್ಞಾನಗಳಿಲ್ಲದವ, ದರ್ಪದ ವ್ಯಕ್ತಿ, ಎಂದು ಕರೆಯಿಸಿಕೊಂಡಿದ್ದೇನೆ. ಅಂತಹದಕ್ಕೆ "ದಾರಿಸಾಗಿದೆ" ಬರಹವೂ ಅವಕಾಶಕೊಡಬಹುದೇನೊ? ಆದರೆ ನೇರ್ಪು, ಸ್ಪಷ್ಟತೆ, ನಿರ್ವಂಚನೆ, ನಿಸ್ಪೃಹತೆಗಳು ನಾನು ಮೆಚ್ಚಿಕೊಳ್ಳುವ ಅಂಶಗಳಾಗಿವೆ. ಕೃತಕ ಶಿಷ್ಟಾಚಾರ ನನಗೆ ಸೇರುವುದಿಲ್ಲ"—ಇವು ಪ್ರೊ|| ಸ. ಸ. ಮಾಳವಾಡ ಅವರು, ಇತ್ತೀಚೆಗೆ ಪ್ರಕಟವಾದ ತಮ್ಮ ಆತ್ಮಕಥೆಯ ನಾಲ್ಕನೆಯ ಭಾಗ "ದಾರಿಸಾಗಿದೆ; ದೊಡ್ಡಪ್ಪ" ಎಂಬ ಗ್ರಂಥಕ್ಕೆ ಬರೆದ ಮೊದಲ ಮಾತಿನ ಕೆಲವು ವಾಕ್ಯಗಳು. ಅವರ ಸ್ವಭಾವಕ್ಕೆ ಈ ಮಾತುಗಳು ಕನ್ನಡಿ ಹಿಡಿಯುತ್ತವೆ. ಆಳವಾದ ಪರಿಶೀಲನೆ ಆಲೋಚನೆಗಳಿಂದ ತಮ್ಮ ನಿಲುವನ್ನು ಕಂಡುಕೊಳ್ಳುವುದು, ಮತ್ತು ಅದನ್ನು ನೇರವಾಗಿ ಸ್ಪಷ್ಟವಾಗಿ ಆಡುವುದು, ಅವರ ಸ್ವಭಾವ, ನೇರ್ಪು, ಸ್ಪಷ್ಟತೆ, ಸಿರ್ವಂಚನೆ, ನಿಸ್ಪೃಹತೆಗಳು ಅವರು ಮೆಚ್ಚಿಕೊಂಡ ಅಂಶಗಳಷ್ಟೇ ಅಲ್ಲ; ತಮ್ಮ ಜೀವನದುದ್ದಕ್ಕೂ ರೂಢಿಸಿಕೊಂಡು ಬಂದ ಮೌಲ್ಯಗಳೂ ಆಗಿವೆ. ಅವರು ಇನ್ನೊಂದು ಕಡೆ ತಮ್ಮ ಜೀವನದೃಷ್ಟಿಯನ್ನು ಕುರಿತು ಹೀಗೆ ಹೇಳಿದ್ದಾರೆ: "ಅನುಕೂಲತೆಗಿಂತ ಆತ್ಮಗೌರವ ಹೆಚ್ಚಿನದು. ಲಾಭಕ್ಕಿಂತ ತತ್ತ್ವನಿಷ್ಠೆ ಹೆಚ್ಚಿನದು ಈ ದೃಷ್ಟಿಯಿಂದ ಬಾಳುವುದು." ಈ ಸೂತ್ರದ ಜೀವಂತ ಭಾಷ್ಯದಂತೆ ಬಾಳಿ ಉನ್ನತ ವ್ಯಕ್ತಿತ್ವವನ್ನು ಸಾಧಿಸಿದ ಹಿರಿಯ ಚೇತನ ಪ್ರೊ|| ಸ. ಸ. ಮಾಳವಾಡ ಅವರು, ೩೦–೮–೧೯೮೭ರಂದು ನಮ್ಮನ್ನಗಲಿದರು.

ಬಿಜಾಪುರ ಜಿಲ್ಲೆಯ ಗೋವನಕೊಪ್ಪದ ಪ್ರತಿಷ್ಠಿತ ಮನೆತನದ ಹಿರಿಯ ಮಗನಾಗಿ ಜಿ. ಸಂಗಪ್ಪ ಸಂಗನ ಬಸಪ್ಪ ಮಾಳವಾಡರು ೧೪-೧೦-೧೯೧೦ರಂದು ಜನ್ಮ ತಳೆದರು. ಹುಟ್ಟಿದ್ದು ತಾಯಿಯ ತವರುಮನೆ ಮೆಣಸಿಗೆಯಲ್ಲಿ. ಬಾಲ್ಯ ಜೀವನದ ಪರಿಸರ ಮತ್ತು ಬೆಳವಣಿಗೆಗಳನ್ನು ತಮ್ಮ ಆತ್ಮಕಥೆಯ ಮೊದಲ ಭಾಗ "ಹಳ್ಳಿಯ ಹುಡುಗ" ಕೃತಿಯಲ್ಲಿ ಬಹಳ ಚೆನ್ನಾಗಿ ಚಿತ್ರಿಸಿದ್ದಾರೆ. ಪ್ರಾರಂಭದ ವಿದ್ಯಾಭ್ಯಾಸ ಗೋವನಕೊಪ್ಪದಲ್ಲಿ. ಅನಂತರ ಗುಳೇದಗುಡ್ಡ, ಬಾಗಲುಕೋಟೆ, ಬಿಜಾಪುರ, ಮತ್ತು ಧಾರವಾಡಗಳಲ್ಲಿ ಅವರ ಶಿಕ್ಷಣ ಮುಂದುವರಿದು, ೧೯೩೫ರಲ್ಲಿ ಬೊಂಬಾಯಿ ವಿಶ್ವವಿದ್ಯಾ ನಿಲಯದಿಂದ ಎಂ. ಎ. ಪದವಿಯನ್ನು ಉಚ್ಚಶ್ರೇಣಿಯಲ್ಲಿ ಪಡೆದರು. ಮುಂದೆ ಕೊಲ್ಹಾಪುರದಲ್ಲಿ ಕಾನೂನು ವಿದ್ಯಾಭ್ಯಾಸವನ್ನು ಒಂದು ವರ್ಷ ಮುಂದುವರಿಸುವಷ್ಟರಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ ಹುದ್ದೆ ಲಭ್ಯವಾಯಿತು. ಅಂದಿನಿಂದ ಆ ಕಾಲೇಜು ಅವರ ಬಹುಮುಖ ಸಾಧನೆಯ ಕೇಂದ್ರವಾಯಿತು.

ಕರ್ನಾಟಕ ಕಾಲೇಜಿನಲ್ಲಿ ಹಿಂದೆ ಅವರು ವಿದ್ಯಾರ್ಥಿಯಾಗಿದ್ದಾಗಲೇ ಕನ್ನಡದ ಚಟುವಟಿಕೆಗಳಲ್ಲಿ ಆಸಕ್ತರಾಗಿದ್ದರು. ಕನ್ನಡದ ಬಗೆಗೆ ತಾತ್ಸಾರವಿದ್ದ ಆ ದಿನಗಳಲ್ಲಿ ವಿದ್ಯಾರ್ಥಿಗಳನ್ನು ಸಂಘಟಿಸಿ ಕನ್ನಡದ ಕೆಲಸವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದರು. ಈಗ ಅಧ್ಯಾಪಕರಾಗಿ ಬಂದಮೇಲಂತೂ ಕನ್ನಡದ ಸ್ಥಾನವನ್ನು ಭದ್ರಗೊಳಿಸುವ ಅನೇಕ ಕಾರ್ಯಕ್ರಮಗಳನ್ನು ಕೈಕೊಳ್ಳುವ ಅವಕಾಶಗಳನ್ನು ಬಳಸಿಕೊಂಡು, ಕನ್ನಡದ ಕೆಲಸಗಳಿಗೆ ಒಂದು ಗೌರವವನ್ನು ತಂದುಕೊಟ್ಟರು. ೧೯೩೬ರಿಂದ ೧೯೬೬ರವರೆಗೆ ಅವರ ಅಧಿಕಾರ ಅಂತಸ್ತು ಅಂತೆಯೇ ಅವರ ಕಾರ್ಯವ್ಯಾಪ್ತಿ ಬೆಳೆಯುತ್ತಾ ಬಂದುವು. ೧೯೫೩ರಿಂದ ೫೭ರವರೆಗೆ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದುದರ ಜೊತೆಗೆ ಕನ್ನಡ ಸಂಸ್ಥೆಯ ನಿರ್ದೇಶಕರೂ ಆಗಿದ್ದು ಆ ಸಂಸ್ಥೆಗೆ ಒಂದು ಹೊಸ ಚೇತನವನ್ನು ತಂದುಕೊಟ್ಟರು; ಅದನ್ನೊಂದು ಸಂಶೋಧನೆಯ ಕೇಂದ್ರವನ್ನಾಗಿ ಮಾಡಿದರು. ಇವರ ಮಾರ್ಗದರ್ಶನದಲ್ಲಿ ಅನೇಕರು ಸಂಶೋಧನೆಯನ್ನು ಕೈಕೊಂಡು ಪಿ.ಎಚ್.ಡಿ. ಪದವಿಗಳನ್ನು ಪಡೆದರು. ೧೯೫೭ರಿಂದ ೬೨ರವರೆಗೆ ಕರ್ನಾಟಕ ಕಲಾ ಮತ್ತು ವಿಜ್ಞಾನ ಕಾಲೇಜುಗಳ ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳಾಗಿದ್ದು ವಿದ್ಯಾರ್ಥಿಗಳ ಒಳಿತಿಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ ಕೀರ್ತಿಯೂ ಇವರದಾಯಿತು. ೧೯೬೨ರಿಂದ ನಾಲ್ಕು ವರ್ಷಗಳ ಕಾಲ ಕರ್ನಾಟಕ ಕಲಾ ಕಾಲೇಜಿನ ಪ್ರಿನ್ಸಿಪಾಲರಾಗಿ ದಕ್ಷರೀತಿಯಿಂದ ಆಡಳಿತವನ್ನು ನಿರ್ವಹಿಸಿದರು. ೧೯೬೬ರಿಂದ ೭೦ರವರೆಗೆ ಯು. ಜಿ. ಸಿ. ಪ್ರಾಧ್ಯಾಪಕರಾಗಿದ್ದುದಲ್ಲದೆ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕ ನಿರ್ದೇಶನಾಲಯದ ಸ್ಥಾಪಕರೂ ಅದರ ಪ್ರಥಮ ನಿರ್ದೇಶಕರೂ ಆಗಿದ್ದರು.

ಪ್ರಾರಂಭದ ದಿನಗಳಲ್ಲಿ ಪ್ರೊ|| ಮಾಳವಾಡರು ಅನೇಕ ಸಾರ್ವಜನಿಕ ಚಟುವಟಿಕೆಗಳ ಸಂಘಟನೆಯಲ್ಲಿ ಬಹಳ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಧಾರವಾಡದಲ್ಲಿ ನಡೆಯುತ್ತಿದ್ದ ಯಾವುದೇ ಕನ್ನಡದ ಕೆಲಸವಾಗಲೀ ಸಾರ್ವಜನಿಕ ಹಿತಾಸಕ್ತಿಯ ಕಾರ್ಯಕ್ರಮಗಳಾಗಲೀ ಅಲ್ಲಿ ಶ್ರೀ ಮಾಳವಾಡರ ಪಾತ್ರ ಪ್ರಧಾನವಾಗಿರುತ್ತಿತ್ತು. ಕಾಲೇಜಿನಲ್ಲಂತೂ ವಿದ್ಯಾರ್ಥಿಗಳ ಸಂಘಟನೆಯ ನೇತೃತ್ವ ಇವರದೇ. ಕರ್ನಾಟಕ

ಸಂಘದ ಅಧ್ಯಕ್ಷರಾಗಿ ಅದರ ಮೂಲಕ ಅತ್ಯುತ್ತಮ ಕಾರ್ಯಗಳನ್ನು ನಿರ್ವಹಿಸಿದರು. ವಿದ್ಯಾರ್ಥಿ ಹಾಸ್ಟೆಲುಗಳ ಪ್ರಮುಖರಾಗಿ, ಕಾಲೇಜು ಜಿಮಖಾನಾದ ಮುಖ್ಯಾಧಿಕಾರಿಗಳಾಗಿ ವಿದ್ಯಾರ್ಥಿಗಳ ಚಟುವಟಿಕೆಗಳಿಗೆ ಆದರ್ಶಪ್ರಾಯರಾದ ಮಾರ್ಗದರ್ಶಕರಾಗಿದ್ದರು.

ಇವರ ಜೊತೆಗೆ ಇನ್ನೊಂದು ಮಹತ್ವಪೂರ್ಣವಾದ ಕಾರ್ಯವನ್ನು ನಿರ್ವಹಿಸುವ ಅವಕಾಶವೂ ಇವರ ಪಾಲಿಗೆ ಬಂದಿತು. ಅದೆಂದರೆ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯ ಸಂದರ್ಭದಲ್ಲಿ ಇವರು ವಹಿಸಿದ ಪ್ರಮುಖ ಪಾತ್ರ. ಅದರ ಸ್ಥಾಪನೆಯ ಪೂರ್ವಭಾವೀ ಕಾರ್ಯದಲ್ಲಿ ಅತ್ಯಂತ ಕ್ರಿಯಾಶಾಲಿಯಾಗಿ ಇವರು ಪಾಲುಗೊಂಡರು. ಈ ವಿಶ್ವವಿದ್ಯಾಲಯದ ಅವಶ್ಯಕತೆಯ ಬಗೆಗೆ ಜನಾಭಿಪ್ರಾಯವನ್ನು ರೂಪಿಸಿದುದಲ್ಲದೆ ಈ ಬಗೆಗೆ ಮುಂಬಾಯಿ ಸರ್ಕಾರವನ್ನು ಸಂದರ್ಶಿಸಿದ ನಿಯೋಗದ ಕಾರ್ಯದರ್ಶಿಯೂ ಆಗಿದ್ದರು. ಮುಂದೆ ಆ ವಿಶ್ವವಿದ್ಯಾಲಯ ಸ್ಥಾಪಿತವಾದ ಮೇಲೆ ಅದರ ಪ್ರಥಮ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿದ್ದುದಲ್ಲದೆ ಇನ್ನೂ ಅನೇಕ ಸಮಿತಿಗಳಲ್ಲಿ ಸದಸ್ಯರಾಗಿ ಅದರ ಏಳಿಗೆಗಾಗಿ ದುಡಿದರು. ಇನ್ನೊಂದು ಬಹಳ ಮುಖ್ಯವಾದ ಅಂಶವನ್ನು ಮರೆಯುವಂತಿಲ್ಲ. ವಿಶ್ವವಿದ್ಯಾಲಯ ಈಗಿರುವ ಛೋಟಾಬಹಾಬಲೇಶ್ವರದಲ್ಲಿಯೇ ಸ್ಥಾಪಿತವಾಗಬೇಕೆಂದು ಹಟ ಹಿಡಿದು ಆ ಅಭಿಪ್ರಾಯವನ್ನು ರೂಪಿಸಿ ಅದನ್ನು ಸ್ಥಾಪಿಸಿದುದರಲ್ಲಿ ಪ್ರಮುಖಪಾತ್ರ ಇವರದು. ಮೈಸೂರು, ಮುಂಬೈ, ಬೆಂಗಳೂರು ಮತ್ತು ಇತರ ಅನೇಕ ವಿಶ್ವವಿದ್ಯಾನಿಲಯಗಳೊಡನೆ ಇದ್ದ ಇವರ ನಿಕಟ ಸಂಪರ್ಕ ಈ ವಿಶ್ವವಿದ್ಯಾಲಯವನ್ನು ರೂಪಿಸುವುದಕ್ಕೂ ನೆರವಾಯಿತು.

ಹೀಗೆ ಸದಾ ಕಾರ್ಯನಿರತವಾಗಿದ್ದ ಅವರ ಸಾರ್ವಜನಿಕ ಹಾಗೂ ಔದ್ಯೋಗಿಕ ಚಟುವಟಿಕೆಗಳು ಅವರ ಅಧ್ಯಯನ ಅಧ್ಯಾಪನಗಳಿಗೂ ಮತ್ತು ಅವರ ಬರಹಗಳಿಗೂ ಅಡ್ಡಿಯಾಗದಂತೆ ನೋಡಿಕೊಂಡದ್ದು ಅವರ ಬಹುದೊಡ್ಡ ಸಾಧನೆ. ಅನೇಕ ವೇಳೆ ಬಹಿರ್ಮುಖ ಕಾರ್ಯಗಳಲ್ಲಿ ತೊಡಗಿದವರು ಅಂತರ್ಮುಖ ಸಾಧನೆಯನ್ನು ಮರೆತು ಬಿಡುವುದುಂಟು, ಆದರೆ ಪ್ರೊ॥ ಮಾಳವಾಡರು ಇದನ್ನು ಮರೆಯಲಿಲ್ಲ. ಅಂತರ್ಮುಖ ಅರಿವು ಅವರ ಸಹಜ ಪ್ರವೃತ್ತಿಯಾಗಿಯೇ ಬೆಳೆದುಬಂದಿತ್ತು. ಜೀವನದ ನೋವು ನಲಿವುಗಳನ್ನುಂಡಂತೆಲ್ಲಾ ಕ್ರಮೇಣ ಅದು ಹೆಚ್ಚು ಅಂತರ್ಮುಖವಾಗ ತೊಡಗಿತು. ಇದರ ಜೊತೆಗೆ ಅವರ ಮನೋಧರ್ಮವನ್ನರಿತು ಅವರೊಡನೆ ಬೆಳೆಯಬಲ್ಲ ಜೀವನ ಸಂಗಾತಿ ದೊರೆತದ್ದು ಇದಕ್ಕೆ ಬೆಂಬಲವಾಗಿ ನಿಂತಿತು.

ಇವರ ಕೆಲಸಕ್ಕೆ ಸೇರಿದ ಒಂದು ವರ್ಷದಲ್ಲಿ ಅಂದರೆ ೧೯೩೭ರಲ್ಲಿಯೇ ಇವರ ಕೈಹಿಡಿದು ಮನೆ ಮನಗಳನ್ನು ತುಂಬಿ ಬಂದವರು ಶ್ರೀಮತಿ ಶಾಂತಾದೇವಿ ಅವರು. ಅವರ ಎಲ್ಲ ಕಾರ್ಯಚಟುವಟಿಕೆಗಳಿಗೂ ಇವರು ಒತ್ತಾಸೆಯಾಗಿ ನಿಂತುದಲ್ಲದೆ ಅವರ ಆಶಯದಂತೆ ಆಂತರಿಕ ಸಾಧನೆಯನ್ನೂ ವಿದ್ಯಾವ್ಯಾಸಂಗವನ್ನೂ ರೂಢಿಸಿಕೊಂಡು ಅವರ ಮಾರ್ಗದರ್ಶನದಲ್ಲಿ ತಮ್ಮ ಸ್ವಯಂ ಪ್ರತಿಭೆಯನ್ನು ಅರಳಿಸಿಕೊಂಡರು. 'ಕೃಷ್ಣಾ ಮಲಪಹಾರಿಗಳ ಸಂಗಮದಂತೆ ಈ ಎರಡು ಜೀವನವಾಹಿನಿಗಳು ಒಂದುಗೂಡಿವೆ'— ಎಂದು ಹೇಳಲಾಗಿರುವ ಮಾತು ಅರ್ಥವತ್ತಾಗಿದೆ. ಇಂದು ಕನ್ನಡದ ಮಹಿಳಾ ಬರಹ

ಗಾರರಲ್ಲಿ ಶ್ರೀಮತಿ ಶಾಂತಾದೇವಿ ಮಾಳವಾಡ ಅವರ ಹೆಸರು ಅತ್ಯಂತ ಪ್ರಮುಖ ವಾದುದು. ಸುಮಾರು ಇಪ್ಪತ್ತಕ್ಕಿಂತಲೂ ಹೆಚ್ಚು ವೈವಿಧ್ಯಪೂರ್ಣವಾದ ಗಮನಾರ್ಹ ವಾದ ಕೃತಿಗಳನ್ನು ಅವರು ಕನ್ನಡಕ್ಕೆ ಕೊಟ್ಟಿದ್ದಾರೆ.

ಪ್ರೊ. ಮಾಳವಾಡರ ಸಾಹಿತ್ಯ ಕೃಷಿ ಅಂದಿನ ನವೋದಯ ಸಾಹಿತ್ಯ ಸೃಷ್ಟಿಯ ಸಂದರ್ಭದಲ್ಲಿ ವಿಮರ್ಶೆಯ ಒಂದು ಹೊಸ ದಾರಿಯನ್ನೇ ಸೃಷ್ಟಿಸಿತು. ಕನ್ನಡ ಸಾಹಿತ್ಯ ಸಂಸ್ಕೃತಿ ಮತ್ತು ವಿಮರ್ಶೆಯನ್ನು ಕುರಿತು ಅವರು ಬರೆದ ಲೇಖನಗಳು ಸಾಹಿತ್ಯದ ವಿದ್ಯಾರ್ಥಿಗಳಿಗೆ ಸದಾಕಾಲ ಮಾರ್ಗದರ್ಶಕವಾಗುವಂತಹ ಶಾಶ್ವತ ಸತ್ತ್ವವನ್ನುಳ್ಳವು ಗಳು. ನಿರ್ದುಷ್ಟವಾದ ವಿವೇಚನೆ, ಖಚಿತವಾದ ನಿರೂಪಣೆ, ಸಮತೋಲನ ದೃಷ್ಟಿ ಯಿಂದ ಕೂಡಿದ ಪ್ರಾಮಾಣಿಕ ವಿಮರ್ಶೆ ಇವುಗಳಿಂದ ಅವರ ಲೇಖನಗಳು ಶ್ರೀಮಂತ ವಾಗಿವೆ; ವಿಪುಲವಾದ ಅಧ್ಯಯನ, ಆಳವಾದ ಅನುಭವ, ಸೂಕ್ಷ್ಮವಾದ ಚಿಂತನೆಗಳಿಗೆ ಸಾಕ್ಷಿಯಾಗಿವೆ.

ಸುಮಾರು ನಲವತ್ತು ವರ್ಷಗಳಿಗಿಂತಲೂ ಹೆಚ್ಚುಕಾಲ ವಿಚಾರಶೀಲ ಬರಹಗಾರ ರಾಗಿ ನಾಡು ನುಡಿಗಳಿಗೆ ಬಹುಮುಖ ಸೇವೆಸಲ್ಲಿಸಿದ್ದಾರೆ. ಅವರ ಬರಹಗಳ ವಿಸ್ತಾರ ವೈವಿಧ್ಯ ವಿಪುಲತೆಗಳು ಆಶ್ಚರ್ಯಕರವಾದುವು. ಆದರೆ ಅವೆಲ್ಲಾ ಅನೇಕ ಪತ್ರಿಕೆಗಳಲ್ಲಿ ಚದುರಿಹೋಗಿದ್ದು ಅವುಗಳ ವ್ಯಾಪ್ತಿ ಮತ್ತು ಮಹತ್ವಗಳು ಮರೆಯಾಗುವಂತಿದ್ದ ಸಂದರ್ಭದಲ್ಲಿ ಅವುಗಳನ್ನೆಲ್ಲಾ ಒಟ್ಟುಗೂಡಿಸಿ ಗ್ರಂಥರೂಪದಲ್ಲಿ ತರುವ ಪ್ರಯತ್ನ ನಡೆದದ್ದು ಅತ್ಯಂತ ಸ್ತುತ್ಯವಾದುದು. ಆ ಪ್ರಯತ್ನದಲ್ಲಿ ಕಾಲವಾಹಿನಿ ಮೊದಲು ಪ್ರಕಟವಾಯಿತು. ಅನಂತರ ಅವರಿಗೆ ಅರವತ್ತು ವರ್ಷಗಳಾದಾಗ ಬಂದುದು ಅವರ ಬೃಹತ್ ಕೃತಿ ಸಾಹಿತ್ಯ ಸಂಗಮ. ಅರವತ್ತು ಲೇಖನಗಳನ್ನುಳ್ಳ ಈ ಗ್ರಂಥ ಕನ್ನಡ ಸಾಹಿತ್ಯ ಮತ್ತು ಭಾಷೆಯ ಸ್ವರೂಪ, ಕವಿಕೃತಿಗಳ ವಿವೇಚನೆ, ಹೊಸಗನ್ನಡದ ಸಮಸ್ಯೆಗಳು ಮತ್ತು ಸಾಧನೆಗಳು, ಕರ್ನಾಟಕ ಸಂಸ್ಕೃತಿಯ ಹಿರಿಮೆ ಮತ್ತು ಸಮಗ್ರತೆ– ಇವುಗಳನ್ನು ಮನಗಾಣಿಸುತ್ತಿದೆ. ಆಳವಾದ ಅಧ್ಯಯನದ ಜೊತೆಗೆ ಪೂರ್ಣ ದೃಷ್ಟಿ ವಿಚಾರ ಶೀಲತೆಗಳಿಂದ ಕೂಡಿ ಇಂದಿಗೂ ಮಹತ್ವದ ಕೃತಿಯಾಗಿ ಉಳಿದಿದೆ.

ಇದರ ಜೊತೆಗೆ ಇನ್ನೊಂದು ಯೋಜನೆಯನ್ನು ಶ್ರೀಮತಿ ಶಾಂತಾದೇವಿ ಮಾಳವಾಡ ಅವರು ಕೈಕೊಂಡದ್ದು, ಪ್ರೊ. ಮಾಳವಾಡರ ಲೇಖನಗಳಲ್ಲಿ ಬಹುಪಾಲು ನಮಗೆ ಲಭ್ಯವಾಗುವ ಅವಕಾಶವನ್ನು ತಂದುಕೊಟ್ಟಿತು. ಅದೆಂದರೆ "ಸಾಹಿತ್ಯನಿಧಿ" ಪುಸ್ತಕ ಯೋಜನೆ. ಈ ಯೋಜನೆಯಡಿಯಲ್ಲಿ "ದೃಷ್ಟಿಕೋನ" "ಸಾಹಿತ್ಯದೃಷ್ಟಿ" ಸಂಚಾರ ಸಂಗಮ "ಸುವಿಚಾರ ಸಂಗಮ" "ಅರವಿಂದ ಮಾತಾ ಪಥ" "ನಾಲ್ಕು ಭಾಷಣಗಳು" ಮೊದಲಾದ ಹತ್ತು ಗ್ರಂಥಗಳು ಪ್ರಕಟವಾದುವು. ಇವಲ್ಲದೆ "ಹರಿಹರನ ರಗಳೆಗಳಲ್ಲಿ ಜೀವನ ದರ್ಶನ" "ಕಾವ್ಯ ಮತ್ತು ಜೀವನ ಚಿತ್ರಣ", "ಅರವಿಂದ ಸ್ಮರಣೆ" "ಉತ್ತಂಗಿ ಚೆನ್ನಪ್ಪ" ಮೊದಲಾದ ಕೃತಿಗಳೂ ಸೇರಿ ನಲವತ್ತಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಇವರ ಗ್ರಂಥಗಳು ಪ್ರಕಟವಾಗಿವೆ.

ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕುರಿತ ವಿಮರ್ಶೆ ಮತ್ತು ವಿವೇಚನೆಗಳು ಇವರ ಬರವಣಿಗೆಯ ಮುಖ್ಯವಾದ ಒಂದು ಮುಖವಾದರೆ ಇಷ್ಟೇ ಮುಖ್ಯವಾದ

ಇನ್ನೊಂದು ವಲಯ ಆಧ್ಯಾತ್ಮ. ಇವೆರಡನ್ನೂ ಪರಸ್ಪರ ಪೂರಕ ಶಕ್ತಿಗಳನ್ನಾಗಿ ಇವರು ಕಂಡವರು. ಇವೆರಡರ ಪ್ರಭಾವದಿಂದ ಜೀವನ ಹಸನಾಗಬೇಕೆಂದು ಬಯಸಿದವರು. ಇದು ಇವರ ಲೇಖನಗಳಲ್ಲಿ ಅಂತೆಯೇ ಇವರ ಜೀವನ ವಿಧಾನದಲ್ಲಿಯೂ ಹಾಸು ಹೊಕ್ಕಾಗಿರುವ ಜೀವಂತ ಶಕ್ತಿಯಾಗಿದೆ. "ಕಾವ್ಯ ಮತ್ತು ಜೀವಣ ಚಿತ್ರಣ" ಮತ್ತು ಪ್ರಥಮ ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಮಾಲೆಯಲ್ಲಿ ಪ್ರಕಟವಾಗಿರುವ "ಸಾಹಿತ್ಯ ಸಮಾಲೋಚನೆ" ಈ ಮೊದಲಾದ ಕೃತಿಗಳಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಹುದು. ಇದೆಲ್ಲಕ್ಕೂ ಹಿನ್ನೆಲೆಯಾಗಿರುವ ಇವರ ಜೀವನ ದೃಷ್ಟಿ, "ದೃಷ್ಟಿಕೋನ" ಗ್ರಂಥದಲ್ಲಿ ಮೂಡಿ ನಿಂತಿದೆ. ಅವರ ಜೀವನ ದೃಷ್ಟಿಕೋನವನ್ನು ಕಂಡುಕೊಳ್ಳುವ ಒಂದೆರಡು ಮಾತುಗಳನ್ನು ಇಲ್ಲಿ ಉದಾಹರಿಸಬಹುದು.

"ಜೀವನದಲ್ಲಿಯ ನೋವು, ಅನಿಷ್ಟ, ಘರ್ಷಣೆಗಳು ಮಾನವೀಯ ಚೇತನವನ್ನು ಎಚ್ಚರಿಸುವ, ಎತ್ತರಿಸುವ, ಸಾಧನಗಳೆಂದು ನಾವು ಭಾವಿಸಬೇಕು. ಈ ದೃಷ್ಟಿಯಿಂದಾಗಿ ಪರಿಸ್ಥಿತಿಯ ಬಗೆಗೆ ನಾವು ಉದ್ವೇಗದ ಪ್ರತಿಕ್ರಿಯೆಯನ್ನು ತೋರಬಾರದು. ಒದಗಿಬರುವ ಪರಿಸ್ಥಿತಿಯನ್ನು ಪ್ರಸನ್ನಭಾವದಿಂದ ನಾವು ಸ್ವೀಕರಿಸಬೇಕು." (ದೃಷ್ಟಿಕೋನ ಪುಟ ೪೨)

"ಜೀವನವನ್ನು ಏಕಪಕ್ಷೀಯವಾಗಿ ಕಾಣುವುದು. ಒಂದು ದೃಷ್ಟಿಯಿಂದಲೇ ಪ್ರತಿಪಾದಿಸುವುದು ಮಾನವನ ಸಾಮಾನ್ಯ ಸ್ವಭಾವವಾಗಿದೆ. ಇದು ವೈಷಮ್ಯ, ಅತೃಪ್ತಿ ದುಃಖ, ಕಟುತ್ವಗಳಿಗೆ ಕಾರಣವಾಗುತ್ತಿದೆ. ಇದಕ್ಕೆ ಪ್ರತಿಯಾಗಿ ಸಮನ್ವಯ ದೃಷ್ಟಿಯನ್ನು ರೂಢಿಸಿಕೊಂಡರೆ ನಾವು ಸಮರಸ, ತೃಪ್ತಿ, ಸುಖ, ಮಾಧುರ್ಯಗಳನ್ನು ಪಡೆಯುವುದು ಸಾಧ್ಯವಿದೆ. (ಅದೇ ಪುಟ ೪೩)

ಇಂತಹ ಅನೇಕ ಮಾತುಗಳನ್ನು ಉದಾಹರಿಸಬಹುದು. ಇವರ "ಸುವಿಚಾರ ಸಂಗಮ"ವಂತೂ ಇಂತಹ ಆಧ್ಯಾತ್ಮಿಕ ಚಿಂತನದ ಆಣಿಮುತ್ತುಗಳ ಅಪೂರ್ವ ಸಂಗಮವಾಗಿದೆ. ಅವರ ಬರಹಗಳಲ್ಲೆಲ್ಲಾ, ಅದು ವಿಮರ್ಶೆಯಾಗಿರಲಿ, ವಿಚಾರ ಸಾಹಿತ್ಯವಾಗಿರಲಿ, ಆಧ್ಯಾತ್ಮಿಕ ಅಭಿವ್ಯಕ್ತಿಯಾಗಿರಲಿ, ಈ ಪರಿಪಕ್ವ ಮನಸ್ಸಿನ ಪ್ರಭಾವವನ್ನು ಕಾಣಬಹುದಾಗಿದೆ. ಇದರಿಂದ ಮೂಡಿಬಂದ ಅವರ ಮಾತುಗಳು ಅನೇಕವೇಳೆ ಸೂತ್ರಪ್ರಾಯವಾಗಿದ್ದು ಮತ್ತೆ ಮತ್ತೆ ಮನನ ಮಾಡುವಂತಿರುತ್ತವೆ. ಮಾದರಿಗಾಗಿ ಕೆಲವು ಮಾತುಗಳನ್ನು ಉದಾಹರಿಸಬಹುದು.

"ಬಾಳಿನ ಅಸ್ತವ್ಯಸ್ತತೆಯಲ್ಲಿ ಒಂದು ಕ್ರಮವನ್ನು ಕಂಡುಕೊಂಡು ಅದನ್ನು ಮೂಡಿಸುವುದು ಕಲೆಯ ಕಾರ್ಯವಾಗಿದೆ."

"ಜೀವನದ ವಿಷಮತೆಯನ್ನು ಮೀರಿನಿಂತು, ಭಾವಲೋಕದಲ್ಲಿ ವಿಹರಿಸಿ, ರಸಾನುಭವ ಪಡೆದ ಹಿರಿಯ ಚೇತನವೊಂದರ ಅಂತಃಸ್ಫುರಣವೇ ಸಾಹಿತ್ಯ".

"ಬಾಳು ಸಂತೆಯೂ ಆಗಿರಬಹುದು. ಆದರೆ ಸಂತೆಯೇ ಜೀವನದ ಪರಮ ಗಂತವ್ಯವಲ್ಲ. ಬಾಳು ದೇಗುಲವೂ ಆಗಿರಬಲ್ಲುದು. ಬಾಳಿನ ಸಂತೆಯಲ್ಲಿ ದೇಗುಲವನ್ನು ಅರಸುವ ದೃಷ್ಟಿಯನ್ನು ಒದಗಿಸಬಲ್ಲ ಸಾಹಿತ್ಯಕಲೆಯು ಸಾರ್ಥಕವೆಂದು ಹೇಳಬೇಕು." ಹೀಗೆಯೇ ಸಾಹಿತ್ಯ ಕೃತಿಗಳನ್ನು, ಕವಿಗಳನ್ನು, ಕಲಾಕೃತಿಗಳನ್ನು ಕುರಿತು ಮಾಡಿದ ವಿಮರ್ಶೆಯಲ್ಲಿ ಆ ಕಲೆಗಳ ತಿರುಳನ್ನು ದರ್ಶಿಸುವ ದಾರ್ಶನಿಕ ವಿಮರ್ಶೆಯ ಮಾತುಗಳು

ಸಹಜವಾಗಿ ಮೂಡಿಬರುತ್ತವೆ. ನೇರವಾದ ಸಹಜವಾದ ಮಾತುಗಳಲ್ಲಿ ಅತ್ಯಂತ ಅಡಕವಾಗಿ ತಮ್ಮ ಅಭಿಪ್ರಾಯ ಅನುಭವಗಳನ್ನು ಒಡಮೂಡಿಸುವ ವಿಶಿಷ್ಟ ಶೈಲಿ ಇವರದು. ಎಲ್ಲಿಯೂ ಆಡಂಬರವಿಲ್ಲ, ಆವೇಶವಿಲ್ಲ ಸಂಯಮ ಪೂರ್ಣವಾಗಿ ಪ್ರಶಾಂತ ಪ್ರವಾಹದಂತೆ ಹರಿಯುತ್ತದೆ. ಅತ್ಯಂತ ಸೂಕ್ಷ್ಮವಾದ ಚಿಂತನ ಶೀಲವಾದ ವಿಚಾರ ವಿಮರ್ಶೆಗೆ ಹದವಾದ ಗದ್ಯಶೈಲಿಯನ್ನು ರೂಪಿಸಿಕೊಂಡ ಸಿದ್ಧ ಲೇಖಕರು ಪ್ರೊ. ಸ. ಸ. ಮಾಳವಾಡ ಅವರು. ಅವರ ಒಂದೊಂದು ಕೃತಿಯಿಂದಲೂ ಇದನ್ನು ಸಮರ್ಥಿಸುತ್ತಾ ಹೋಗಬಹುದು.

ಅವರ ಅಧ್ಯಯನದ ವ್ಯಾಪ್ತಿ, ಅನುಭವದ ಆಳ, ವಿಸ್ತಾರ, ವೈವಿಧ್ಯಗಳನ್ನೂ ಮತ್ತು ಅವರ ಬರವಣಿಗೆಯ ವಿಶಿಷ್ಟ ಸಾಮರ್ಥ್ಯವನ್ನೂ ಗಮನಿಸಿದಾಗ ಒಟ್ಟಿನಲ್ಲಿ ಅವರು ಬರೆದದ್ದು ಕಡಮೆಯೆಂದೇ ಹೇಳಬೇಕು. ಇದಕ್ಕೆ ಕಾರಣ ಬರವಣಿಗೆಯ ವಿಚಾರದಲ್ಲಿ ಅವರಿಗಿದ್ದ ಅತ್ಯಂತ ಗಂಭೀರವಾದ ನಿಲುವು. ಬರಹಕ್ಕಿಂತ ಜೀವನ ದೊಡ್ಡದು ಎಂದು ಅವರು ಭಾವಿಸಿದವರು. ಈ ದೃಷ್ಟಿಯಿಂದ ಬರೆಯುವುದು ಅನಿವಾರ್ಯವಾದಾಗ ಮಾತ್ರ ಬರೆದವರು. ಪ್ರಸಿದ್ಧಿಗಾಗಿಯಾಗಲೀ, ಜನಪ್ರಿಯತೆಗಾಗಲೀ ಅವರು ಲೇಖನಿಯನ್ನು ಎತ್ತಿದವರಲ್ಲ. ಅವರ ಕಾರ್ಯಚಟುವಟಿಕೆಯಲ್ಲಾಗಲೀ, ಬರವಣಿಗೆಯಲ್ಲಾಗಲೀ, ಜನಪ್ರಿಯತೆಯ ಗೀಳನ್ನು ಎಂದೂ ಬಳಿಗೆ ಸುಳಿಯಗೊಡಲಿಲ್ಲ. ಸಹಜ ಸ್ವಭಾವದಿಂದಲೇ ಅವರು ನ್ಯಾಯನಿಷ್ಠುರರು; ತತ್ತ್ವನಿಷ್ಠರು "ದಾಕ್ಷಿಣ್ಯಪರನಲ್ಲ, ನ್ಯಾಯನಿಷ್ಠುರ ಶರಣ ನಾರಿಗಂಜುವನಲ್ಲ" ಎನ್ನುವ ಶರಣ ಮಾರ್ಗಕ್ಕೆ ಅವರು ಒಲಿದವರು. ಅವರ ಜೊತೆಗೆ ಮುಂದೆ ಅರವಿಂದರ ಪ್ರಭಾವವೂ ಸೇರಿ ಅದು ಇನ್ನೂ ಗಂಭೀರವಾಯಿತು. ಮೌಲ್ಯ ನಿಷ್ಠೆ, ಅಧ್ಯಾತ್ಮಿಕ ದೃಷ್ಟಿ ಅವರ ಜೀವನದ ಉಸಿರಾಯಿತು. ತಮ್ಮ ಕೃತಿಗಳನ್ನೂ ಮೀರಿ ಬೆಳೆದ ವ್ಯಕ್ತಿತ್ವ ಅವರದಾಯಿತು.

ಅವರನ್ನು ಹತ್ತಿರದಿಂದ ಕಾಣುವ ಅವಕಾಶ ನನ್ನದಾಗಿತ್ತು. ಅವರ ಮಾರ್ಗದರ್ಶನದಲ್ಲಿ ನಾನು ಪಿ.ಎಚ್.ಡಿ. ಪದವಿಯನ್ನು ಪಡೆದೆ. ಆಗ ಅವರು ಕನ್ನಡ ಸಂಶೋಧನ ಸಂಸ್ಥೆಯ ನಿರ್ದೇಶಕರಾಗಿಯೂ ಕೆಲಸ ಮಾಡುತ್ತಿದ್ದ ಕಾಲ. ಅವರ ಮಾರ್ಗದರ್ಶನ ಆ ಮಹಾಪ್ರಬಂಧಕ್ಕೆ ಮಾತ್ರವಲ್ಲ ಮುಂದಿನ ನನ್ನ ವೈಚಾರಿಕ ಬರವಣಿಗೆಗೆಲ್ಲಾ ತಳಹದಿಯನ್ನು ಹಾಕಿತೆಂದು ಹೇಳಬಹುದು. ಅದಕ್ಕಿಂತ ಹೆಚ್ಚಾಗಿ ತತ್ತ್ವನಿಷ್ಠವಾದ ಅವರ ವ್ಯಕ್ತಿತ್ವ ನನ್ನ ಮೇಲೆ ಗಾಢವಾದ ಪ್ರಭಾವವನ್ನುಂಟು ಮಾಡಿತು. ಅವರ ಮತ್ತು ಶ್ರೀಮತಿ ಶಾಂತಾದೇವಿ ಮಾಳವಾಡ ಅವರ ಶಿಷ್ಯ ವಾತ್ಸಲ್ಯ, ಆದರದ ಆತಿಥ್ಯ, ಮಕ್ಕಳಿಲ್ಲದ ಲೌಕಿಕ ಕೊರತೆಯನ್ನೂ ಕಡೆಗಣಿಸಿದ ಆದರ್ಶ ದಾಂಪತ್ಯದ ಉದಾತ್ತ ಜೀವನ ನಿರಂತರವಾಗಿ ಮಾರ್ಗ ದರ್ಶಕವಾದುವು.

ಸಾಹಿತ್ಯಲೋಕದಲ್ಲಿ ಯಾವ ಗುಂಪನ್ನೂ ಸೇರದೆ, ಯಾವ ಪ್ರಸಿದ್ಧಿಯನ್ನೂ ಪ್ರತಿಫಲವನ್ನೂ ಬಯಸದೆ ತಮ್ಮ ಚಿಂತನೆಯ ಫಲವನ್ನು ನಿರ್ಭೀತಿಯಿಂದ ನಿರ್ದಾಕ್ಷಿಣ್ಯವಾಗಿ ಅಭಿವ್ಯಕ್ತಗೊಳಿಸುತ್ತ ನಾಡು ನುಡಿಗಳ ವೈಚಾರಿಕ ಸಂಪತ್ತನ್ನು ಅವರು ಶ್ರೀಮಂತಗೊಳಿಸಿದರು. ಶರಣರು ಹೇಳುವಂತಹ ನಡೆ ನುಡಿಗಳೊಂದಾದ ಪರಿಶುದ್ಧ ಜೀವನ, ಅರವಿಂದರ ಪ್ರಭಾವದಿಂದಾದ ಪ್ರಶಾಂತ ಪರಿಸರದ ಆಧ್ಯಾತ್ಮಿಕ ಸಾಧನೆ. ಇವುಗಳಿಂದ

ಕೂಡಿದ ಸದ್ದುಗದ್ದಲವಿಲ್ಲದ ಅವರ ಸಾರಸ್ವತ ತಪಸ್ಸು ಕನ್ನಡ ಲೋಕದಲ್ಲಿ ಒಂದು ವಿಶಿಷ್ಟವಾದ ಅಧ್ಯಾಯವನ್ನು ನಿರ್ಮಿಸಿದೆ. ತಮ್ಮ ಬರಹಗಳ ಮೂಲಕವೇ ಅವರು ಬೆಳೆದು ಅವುಗಳನ್ನು ಮೀರಿನಿಂತ ಮಹಾವ್ಯಕ್ತಿಯಾದರು. ಯಾವ ಪ್ರಲೋಭನೆಗಳಿಗೂ ಒಳಗಾಗದ ಕಟ್ಟುನಿಟ್ಟಾದ ಶಿಸ್ತು, ನಿಸ್ಪೃಹತೆ, ಖಂಡಿತವಾದಿತ್ವ ಅಹಂಕಾರವಿಲ್ಲದ ಅಖಂಡ ಸತ್ಯನಿಷ್ಠೆ, ಅಚಲವಾದ ಜೀವನಶ್ರದ್ಧೆ, ಅಂತರ್ ನಿರೀಕ್ಷಣೆಯ ನಿರಂತರ ಆಧ್ಯಾತ್ಮಿಕ ಪರಿಭಾವನೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ತಮ್ಮ ಕೃತಿಗಳಲ್ಲಿಯೂ ಒಡಮೂಡಿಸಿದ ಪ್ರೊ|| ಸ. ಸ. ಮಾಳವಾಡರ ಸಾಧನೆ ಸಹೃದಯರ ಸ್ಮರಣೆಯಲ್ಲಿ ಬಹು ಕಾಲ ಉಳಿಯುವಂತಹುದು.

ಅಹಿಂಸೆ ಹೇಡಿತನವಲ್ಲ, ಆತ್ಮಧೈರ್ಯದ ಪ್ರತೀಕ. ಆದರೆ ಅಹಿಂಸೆಯಿಂದ ಗುರಿ ಮುಟ್ಟಬೇಕಾದರೆ ತಾಳ್ಮೆ ಅಗತ್ಯ.

ಧರ್ಮ ಧರ್ಮಗಳ ಮಧ್ಯೆ ಜಗಳವಿರಬಾರದು. ಆದರೆ ಎಲ್ಲ ಧರ್ಮಗಳೂ ಅಧರ್ಮದ ವಿರುದ್ಧ ಹೋರಾಡಬೇಕು.

ಗಾಂಧೀಜಿ

ಮಹಿಳಾ ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಹಾಜರಾತಿ ಸಮಸ್ಯೆ—ನಿವಾರಣೋಪಾಯಗಳು

ನೆಂ. ವನಜಾಕ್ಷಮ್ಮ

ಮಾನವ ಸಂಪನ್ಮೂಲದ ಅಭಿವೃದ್ಧಿಯಲ್ಲಿ ಶಿಕ್ಷಣ ಒಂದು ಮುಖ್ಯ ಅಂಶ ಎನ್ನುವುದು ಉತ್ಪ್ರೇಕ್ಷೆಯ ಮಾತಲ್ಲ. ವ್ಯಕ್ತಿಯ ಬೌದ್ಧಿಕ, ಸಾಮಾಜಿಕ ಮತ್ತು ಭಾವನಾತ್ಮಕ ಉನ್ನತಿ ಶಿಕ್ಷಣದಿಂದ ಮಾತ್ರ ಸಾಧ್ಯ.

ಶೇಕಡ. ೩೬.೨೩ ಸಾಕ್ಷರತೆಯಿರುವ ಭಾರತದಲ್ಲಿ ಶತಮಾನಗಳಿಂದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ತುಳಿತಕ್ಕೊಳಗಾಗಿ ಇರುವ, ಜೀವನವಿಡೀ ಪರಾವಲಂಬಿಯಾಗಿ ಬದುಕಿ, ಶೋಷಣೆ, ಅನ್ಯಾಯ, ದೌರ್ಜನ್ಯಗಳಿಗೊಳಗಾಗುತ್ತಿರುವ ಮಹಿಳೆಯರ ಶೇಕಡ ಸಾಕ್ಷರತೆ ಕೇವಲ ೨೪.೮೨ (೧೯೮೧ರ ಜನಗಣತಿ ಪ್ರಕಾರ) ಮಹಿಳೆಯರ ಇಂದಿನ ಸ್ಥಿತಿಗತಿಗೆ ಸಾಮಾಜಿಕ, ಸಾಂಸ್ಕೃತಿಕ ಕಾರಣಗಳಲ್ಲದೆ ಅವರಲ್ಲಿರುವ ಅಜ್ಞಾನ, ಅನಕ್ಷರತೆಯೂ ಕಾರಣವೆಂಬುದನ್ನು ಮನಗಂಡ ಭಾರತ ಸರಕಾರ ೧೯೭೮ರಲ್ಲಿ ಹಾಕಿಕೊಂಡ ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯಲ್ಲಿ ಮಹಿಳಾ ಸಾಕ್ಷರತೆಗೆ ಹೆಚ್ಚಿನ ಪ್ರಾಧಾನ್ಯ ನೀಡಿದ್ದು ಮಾತ್ರವಲ್ಲದೆ ಮಹಿಳಾ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ತೆರೆಯಲು ವಿಶೇಷ ಪ್ರೋತ್ಸಾಹ ನೀಡಿತು. ಆದರೆ ನಿರೀಕ್ಷಿತ ಮಟ್ಟದಲ್ಲಿ ಕಾರ್ಯಕ್ರಮ ನಡೆಯಲಿಲ್ಲ; ಮಹಿಳೆಯರು ಸಾಕ್ಷರರಾಗಲಿಲ್ಲ. ಇದಕ್ಕೆ ಮುಖ್ಯ ಕಾರಣ. ಕಾರ್ಯಕ್ರಮದ ಬಗ್ಗೆ ಮಹಿಳೆಯರಲ್ಲಿರುವ ಅಜ್ಞಾನ, ನಿರುತ್ಸಾಹ. ಪರಿಣಾಮವಾಗಿ, ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಹಾಜರಾತಿ ಕೊರತೆ.

ಹಾಜರಾತಿ ಸಮಸ್ಯೆ

ಹಾಜರಾತಿ ಸಮಸ್ಯೆ ಎಂದರೆ ಆರಂಭದಲ್ಲಿ ೩೦ ಮಂದಿ ಅನಕ್ಷರಸ್ಥರನ್ನೊಳಗೊಂಡ ವಯಸ್ಕರ ಶಿಕ್ಷಣ ಕೇಂದ್ರ ಕೆಲವೇ

ತಿಂಗಳುಗಳಲ್ಲಿ, ವಾರಗಳಲ್ಲಿ, ದಿನಗಳಲ್ಲಿ ಕಲಿಯುವವರ ಗೈರುಹಾಜರಿಯಿಂದಾಗಿ ಮುಚ್ಚುವ ಹಂತ ತಲುಪಿಬಿಡುವುದು. ಎಷ್ಟೇ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡರೂ ಈ ಸಮಸ್ಯೆಯ ಧಾಳಿಗೆ ಬಲಿಯಾಗದ ಕೇಂದ್ರಗಳಿಲ್ಲ. ಈ ದೃಷ್ಟಿಯಿಂದ ಇದೊಂದು ಸಾರ್ವತ್ರಿಕ ಸಮಸ್ಯೆ ಎನ್ನಬಹುದು.

ಈ ಸಮಸ್ಯೆಯು ತೀವ್ರತೆ ಅನುಭವವಾಗುವುದು ಹೆಚ್ಚಾಗಿ ಮಹಿಳಾ ಕೇಂದ್ರಗಳಲ್ಲಿ ಪುರುಷರ ಕೇಂದ್ರಗಳಲ್ಲಿ ಈ ಸಮಸ್ಯೆ ಒಂದು ತೊಡಕೆಂದೆನಿಸಿದರೆ, ಮಹಿಳಾ ಕೇಂದ್ರಗಳಲ್ಲಿ ಇದು ಕೇಂದ್ರವನ್ನು ಮುಚ್ಚುವ ಹಂತಕ್ಕೆ ತಲುಪಿಸಿಬಿಡುತ್ತದೆ. ಇದಕ್ಕೆ ಕಾರಣಗಳನ್ನು ಹುಡುಕಿ ಅಧ್ಯಯನಗಳು ರಾಷ್ಟ್ರದ ಕೆಲವು ರಾಜ್ಯಗಳಲ್ಲಿ ನಡೆದಿವೆ.

ಬೊಂಬಾಯಿಯ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್ (Tata Institute of Social Sciences) ೧೯೮೧ರಲ್ಲಿ ನಡೆಸಿದ ಹಾಜರಾತಿ ಸಮಸ್ಯೆಯ ಅಧ್ಯಯನದಿಂದ ಕಂಡುಬಂದ ಅಂಶಗಳು ಎರಡು—ಗೃಹ ನಿರ್ವಹಣೆಯ ಜವಾಬ್ದಾರಿ ಮತ್ತು ಆರ್ಥಿಕ ಪರಿಸ್ಥಿತಿ. ಶೇಕಡ ೩೩ ಮಂದಿ ಮನೆಗೆಲಸದ ಕಾರಣದಿಂದಾಗಿ ತಾವು ಕೇಂದ್ರಕ್ಕೆ ಬರಲಾಗುವುದಿಲ್ಲವೆಂದು ತಿಳಿಸಿದರೆ, ಶೇ. ೧೪ ಮಂದಿ ಆರ್ಥಿಕ ಕಾರಣವನ್ನು ನೀಡಿದರೆ, ಶೇಕಡ ಇಬ್ಬರು ಮಾತ್ರ ಎರಡನ್ನೂ ತಮ್ಮ ಗೈರು ಹಾಜರಿಗೆ ಕಾರಣಗಳೆಂದು ತಿಳಿಸಿದರು. ನಗರದ ಕೇಂದ್ರಗಳಲ್ಲಿ ಶೇ. ೫೮ ಮಂದಿ ಮನೆಗೆಲಸದ ಹೊರೆಯನ್ನು ಕಾರಣವೆಂದು ಹೇಳಿದರೆ, ಗ್ರಾಮೀಣ ಮಹಿಳೆಯರಿಗೆ ಆರ್ಥಿಕ ಪರಿಸ್ಥಿತಿಯೇ ಕೇಂದ್ರ ಬಿಡಲು ಮುಖ್ಯ ಕಾರಣವಾಗಿತ್ತು.

ವಯಸ್ಕರ ಶಿಕ್ಷಣ ಕಾರ್ಯಕ್ರಮ ಕುರಿತಂತೆ ಬಿಹಾರ, ಗುಜರಾತ್, ಮಹಾರಾಷ್ಟ್ರ, ತಮಿಳುನಾಡು, ಕೇರಳ ಮುಂತಾದ ರಾಜ್ಯಗಳಲ್ಲಿ ಅಧ್ಯಯನಗಳು ನಡೆದಿವೆಯಾದರೂ, ಈ ಸಮಸ್ಯೆಯೊಂದನ್ನೇ ಕೇಂದ್ರವಾಗಿಟ್ಟುಕೊಂಡು ನಡೆಸಿದ ಅಧ್ಯಯನಗಳು (ಕೇರಳ, ತಮಿಳುನಾಡುಗಳನ್ನು ಹೊರತುಪಡಿಸಿ) ಕಡಿಮೆಯೇ ಎನ್ನಬಹುದು. ಈ ಎಲ್ಲಾ ಅಧ್ಯಯನಗಳಲ್ಲಿ ಸಮಸ್ಯೆಯ ಕಡೆಗೆ ಅಲ್ಲಲ್ಲಿ ಬೆಳಕು ಚೆಲ್ಲುವ ಪ್ರಯತ್ನಗಳು ನಡೆದು, ಗೃಹಕೃತ್ಯಗಳ ಹೊರೆ ಹಾಗೂ ಆರ್ಥಿಕ ದುಸ್ಥಿತಿಗಳೇ ಪ್ರಮುಖ ಕಾರಣಗಳಾಗಿ ಕಂಡು ಬಂದಿವೆ.

೧೯೮೫-೮೬ರಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರವು ಮೈಸೂರು ತಾಲ್ಲೂಕಿನ ಮಹಿಳಾ ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಹಾಜರಾತಿ ಸಮಸ್ಯೆಯ ಅಧ್ಯಯನವನ್ನು ಕೈಗೊಂಡಿತು. ಈ ಅಧ್ಯಯನದ ಫಲವಾಗಿ, ಕೆಲವು ಪ್ರಮುಖ ಅಂಶಗಳು ಬೆಳಕಿಗೆ ಬಂದವು. ಅದರಂತೆ ಕಲಿಯುವವರ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳು, ವೈಯಕ್ತಿಕ ಸಮಸ್ಯೆಗಳಲ್ಲದೆ ಹಾಜರಾತಿಯ ಕೊರತೆಯ ಸಮಸ್ಯೆಗೆ ಹಲವು ಮುಖಗಳಿರುವುದು ಗೋಚರಿಸಿತು. ಇವು ಗ್ರಾಮ ಮತ್ತು ನಗರಗಳಿಗೆ ಭಿನ್ನವಾಗಿದ್ದುವು. ನಗರ ಕೇಂದ್ರಗಳಲ್ಲಿ ಪ್ರತಿ ಕೇಂದ್ರಕ್ಕೆ ಸರಾಸರಿ ೭ ಮಂದಿ ಕೇಂದ್ರವನ್ನು ಮಧ್ಯದಲ್ಲಿ ಬಿಟ್ಟಿದ್ದರೆ, ಗ್ರಾಮಗಳಲ್ಲಿ ಅಂಥವರ ಸಂಖ್ಯೆ ಕೇಂದ್ರವೊಂದಕ್ಕೆ ಸರಾಸರಿ ೧೨ ಆಗಿತ್ತು. ಗ್ರಾಮಗಳಲ್ಲಿ ಶೇಕಡ ೫೨.೩೮ ಮಂದಿ ಸಾಮಾಜಿಕ, ಆರ್ಥಿಕ ಕಾರಣಗಳನ್ನು ಕೊಟ್ಟಿದ್ದರೆ, ನಗರದಲ್ಲಿ ಶೇ. ೪೯.೧೫ ಮಂದಿ ಅದೇ ಕಾರಣವನ್ನು ಹೊಂದಿದ್ದರು. ಗ್ರಾಮೀಣ ಮಹಿಳೆಯರಲ್ಲಿ ಶೇ. ೪೨.೮೫ ಮಂದಿ

ವೈಯಕ್ತಿಕ ಕಾರಣಗಳನ್ನು ಹೊಂದಿದ್ದರೆ, ನಗರದಲ್ಲಿ ಶೇ. ೨೮.೮೧ ಮಂದಿ ಅದೇ ಕಾರಣ ನೀಡಿದ್ದರು. ಕೇಂದ್ರಕ್ಕೆ ಸಂಬಂಧಿಸಿದ ಕಾರಣಗಳನ್ನು ನೀಡಿದವರು ನಗರದಲ್ಲಿ ಶೇ. ೨೨.೦೩ ಮಂದಿಯಾದರೆ, ಗ್ರಾಮಗಳಲ್ಲಿ ಶೇ. ೪.೭೫ ಮಂದಿ ಮಾತ್ರ. ಪರಿಶಿಷ್ಟ ಜಾತಿಗೇ ಮೀಸಲಾದ ಎರಡು ಕೇಂದ್ರಗಳನ್ನು ಕೆಲವೇ ತಿಂಗಳುಗಳಲ್ಲಿ ಮುಚ್ಚಲಾಗಿತ್ತು.

ಕೇಂದ್ರ ಬಿಟ್ಟವರ ಜಾತಿ, ವೃತ್ತಿ, ವೈವಾಹಿಕ ಸ್ಥಾನಮಾನ, ಔಪಚಾರಿಕ ಶಿಕ್ಷಣ ಹಿಂದೆ ಪಡೆದಿದ್ದರೆ ಇಲ್ಲವೆ, ಕೇಂದ್ರ ಸೇರಲು ಪ್ರೇರಣೆಯ ಮೂಲ ಯಾವುದು, ವಯಸ್ಸು ಇತ್ಯಾದಿ ಅಂಶಗಳ ಆಧಾರದ ಮೇಲೆ ಅಂಕಿಅಂಶಗಳನ್ನು ವಿಶ್ಲೇಷಿಸಿದಾಗ ತಿಳಿದು ಬಂದ ಅಂಶಗಳೆಂದರೆ, ಹಿಂದುಳಿದ ಜಾತಿಯವರನ್ನು ಬಿಟ್ಟರೆ ಪರಿಶಿಷ್ಟ ಜಾತಿಯವರು, ೨೧–೨೫ ವರ್ಷ ವಯೋಗುಂಪಿನವರನ್ನು ಬಿಟ್ಟರೆ ೧೫–೨೦ ವಯೋಗುಂಪಿನವರು, ವಿವಾಹಿತರು, ಹಿಂದೆ ಬಾಲ್ಯದಲ್ಲಿ ಔಪಚಾರಿಕ ಶಿಕ್ಷಣ ಪಡೆಯಲಾಗದವರು, ಕಲಿಯುವ ಆಸೆಯಿಂದ ತಾವಾಗಿಯೇ ಕೇಂದ್ರ ಸೇರಿದವರು ಹಾಗೂ ಕೇಂದ್ರಗಳನ್ನು ಮತ್ತೊಮ್ಮೆ ಸೇರಲಿಚ್ಛಿಸಿದವರೇ ಗರಿಷ್ಠ ಸಂಖ್ಯೆಯಲ್ಲಿದ್ದರು.

ಈ ಅಧ್ಯಯನದ ಹಿನ್ನೆಲೆಯಲ್ಲಿ ಗ್ರಾಮ ಮತ್ತು ನಗರದ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ಕುರಿತಂತೆ ಪ್ರಸ್ತುತ ಪರಿಸ್ಥಿತಿಯನ್ನು ವಿಶ್ಲೇಷಿಸಬಹುದು. ಇಂದಿನ ಸಾಕ್ಷರತಾ ಮಟ್ಟವನ್ನು ಉತ್ತಮಪಡಿಸುವ ದಿಸೆಯಲ್ಲಿ ಎದುರಾಗುವ ತೊಡಕುಗಳು ಹಲವಾರು. ಅವೆಂದರೆ,

—ಅನಕ್ಷರಸ್ಥ ಮಹಿಳೆಯರಲ್ಲಿ ಸಾಕ್ಷರತೆಯ ಅಗತ್ಯತೆಯ ಅರಿವಿನ ಕೊರತೆ.

—ಗೃಹಿಣಿಯರ ಸಮಸ್ಯೆ—ಮನೆಗಳಲ್ಲಿ ಅತಿದುಡಿತ, ಮಕ್ಕಳ ಜವಾಬ್ದಾರಿ.

—ಸಾಮಾಜಿಕ ನಿರ್ಬಂಧಗಳು ಹಾಗೂ ಸಾಂಸ್ಕೃತಿಕ ಕಾರಣಗಳು—ಸಂಪ್ರದಾಯಗಳು, ಆಚರಣೆಗಳು ಇತ್ಯಾದಿ

—ಆರ್ಥಿಕ ಕಾರಣ—ಕಡುಬಡತನ—ಮನೆಯ ಒಳಗೆ ಮತ್ತು ಹೊರಗೆ ದುಡಿತ

—ಸಾಕ್ಷರತೆ ಪಡೆಯಬೇಕೆಂಬ ಮನೋಭಾವ ಬೆಳೆಸಿಕೊಳ್ಳಲು ಯಾವುದೇ ಬಾಹ್ಯ ಕಾರಣಗಳು ಅಥವಾ ಒತ್ತಡಗಳು ಇಲ್ಲದಿರುವುದು.

—ಸಾಕ್ಷರೋತ್ತರ ಕಾರ್ಯಕ್ರಮಗಳು ಸರಿಯಾಗಿ ನಡೆಯದೆ ಸಾಕ್ಷರರಾದವರೆಲ್ಲ ಅನಕ್ಷರತೆಗೆ ಮರಳಿ ತಮ್ಮ ಹಿಂದಿನ ಜೀವನ ವಿಧಾನಕ್ಕೇ ಜೋತುಬೀಳಬೇಕಾದ ಅನಿವಾರ್ಯ ಪರಿಸ್ಥಿತಿ ಇರುವುದರಿಂದಾಗಿ, ಇಂಥ ಕಾರ್ಯಕ್ರಮಗಳು ಅಪ್ರಯೋಜಕ ಎಂಬ ಭಾವನೆ ವಯಸ್ಕರಲ್ಲಿ ಮೂಡಿರುವುದು.

—ಸಾಕ್ಷರತಾ ಕಾರ್ಯಕ್ರಮ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳು ಪರಸ್ಪರ ಯಾವುದೇ ಸಂಬಂಧವಿಲ್ಲದಂತೆ ಪ್ರತ್ಯೇಕವಾಗಿ ನಡೆಯುತ್ತಿರುವುದು.

—ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮಗಳು ಕಲಿಯುವವರ ವೃತ್ತಿನೈಪುಣ್ಯವನ್ನು ಉತ್ತಮಪಡಿಸುವ ಅಥವಾ ಹೊಸ ವೃತ್ತಿಯೊಂದನ್ನು

ಕಲಿಸುವ ದಿಕ್ಕಿನಲ್ಲಿ ಸಂಪೂರ್ಣ ವಿಫುಲಗೊಂಡು ಕೇವಲ ಸಾಕ್ಷರತಾ ಕಾರ್ಯಕ್ರಮವಾಗಿ ಪರಿವರ್ತನೆ ಹೊಂದಿರುವುದು.

—ಪ್ರಸಾರ ಮಾಧ್ಯಮಗಳಾದ ರೇಡಿಯೊ, ಟಿ.ವಿ., ವೃತ್ತಪತ್ರಿಕೆಗಳು, ವೀಡಿಯೊ ಮುಂತಾದುವುಗಳು ಮಹಿಳಾ ಸಾಕ್ಷರತಾ ಕಾರ್ಯಕ್ರಮಗಳನ್ನು ಉತ್ತಮ ಪಡಿಸುವ ದಿಕ್ಕಿನಲ್ಲಿ ಸ್ವಲ್ಪವೂ ಬಳಸಿಕೊಳ್ಳದಿರುವುದು.

—ಜಿಲ್ಲಾ ಸಂಪನ್ಮೂಲ ಕೇಂದ್ರಗಳ ಕೊರತೆಯಿಂದಾಗಿ ಸಾಕ್ಷರತಾ ಪುಸ್ತಕಗಳು ರಾಜ್ಯ ಮಟ್ಟದಲ್ಲಿ ತಯಾರಾಗುತ್ತಿದ್ದು ಕಲಿಯುವವರ ಅಗತ್ಯಗಳಿಗೆ ಅನುಗುಣವಾಗಿಲ್ಲದಿರುವುದು.

—ಕೇಂದ್ರದ ಸಚೇತಕಿಯರ ಆಯ್ಕೆ ಅನೇಕ ಸಂದರ್ಭಗಳಲ್ಲಿ ಪಕ್ಷಪಾತದಿಂದ ಕೂಡಿದ್ದು, ಅವರು ಸಾಕ್ಷರತಾ ಕಾರ್ಯಕ್ರಮದ ಮೂಲ ಉದ್ದೇಶಗಳನ್ನು ಅರ್ಥಮಾಡಿಕೊಳ್ಳುವ ಹಾಗೂ ತಮ್ಮ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುವ ದಿಕ್ಕಿನಲ್ಲಿ ತಮ್ಮ ಬೇಜವಾಬ್ದಾರಿ ಅಥವಾ ಅಸಮರ್ಥತೆಯನ್ನು ತೋರ್ಪಡಿಸಿರುವುದು ಕಲಿಯುವವರ ಸಮಸ್ಯೆಗಳಿಗೆ ಸ್ಪಂದಿಸದಿರುವುದು ಹಾಗೂ ಕೆಲವೊಮ್ಮೆ ಗ್ರಾಮಕ್ಕೆ ಅಪರಿಚಿತರಾಗಿದ್ದು ಕಲಿಯುವವರ ಅಗತ್ಯಗಳು, ಸಮಸ್ಯೆಗಳ ಬಗ್ಗೆ ಅಜ್ಞಾನಿಗಳಾಗಿರುವುದು.

ಮೇಲ್ಕಂಡ ಪರಿಸ್ಥಿತಿಯಲ್ಲಿ ಮಹಿಳಾ ಸಾಕ್ಷರತಾ ಕಾರ್ಯಕ್ರಮ ಪರಿಣಾಮಕಾರಿಯಾಗಿಲ್ಲದಿರುವುದನ್ನು ಗಮನಿಸಿ, ಪ್ರಸ್ತುತ ಕಾರ್ಯಕ್ರಮಗಳನ್ನು ಉತ್ತಮ ರೀತಿಯಲ್ಲಿ ಜಾರಿಗೊಳಿಸುವ ದಿಶೆಯಲ್ಲಿ ಆಳವಾದ ಚಿಂತನೆ ನಡೆಯಬೇಕಾಗಿರುವುದು ಇಂದಿನ ತುರ್ತು ಅಗತ್ಯವಾಗಿದೆ.

ಇದಕ್ಕೆ ಸಂಬಂಧಪಟ್ಟಂತೆ ಕೆಲವು ಸಲಹೆಗಳನ್ನು ಕೆಳಗೆ ನೀಡಲಾಗಿದೆ.

ವಯಸ್ಕರ ಶಿಕ್ಷಣ ಕೇಂದ್ರ :

ಅನಕ್ಷರಸ್ಥರಿರುವ ಪ್ರತಿಯೊಂದು ಹಳ್ಳಿಯೂ ವಯಸ್ಕರ ಶಿಕ್ಷಣ ಕೇಂದ್ರವೊಂದನ್ನು ಹೊಂದಿರಬೇಕು.

—ಈ ಕೇಂದ್ರ ಯಾರದೋ ಮನೆಯಲ್ಲಿ ಅಥವಾ ಧಾರ್ಮಿಕ ಸ್ಥಳಗಳಲ್ಲಿ ನಡೆಯದೆ, ಎಲ್ಲಾ ಜಾತಿ/ವರ್ಗಗಳಿಗೂ ಮುಕ್ತ ಪ್ರವೇಶವಿರುವಂಥ ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಶಾಲೆಗಳಲ್ಲಿ ನಡೆಯುವಂತೆ ನೋಡಿಕೊಳ್ಳಬೇಕು.

—ಕೇಂದ್ರದ ೩೦ ಮಂದಿಗೂ ಒಂದೇ ಸಮಯವನ್ನು ನಿಗದಿಪಡಿಸುವುದರ ಬದಲು, ಕಲಿಯುವವರ ವೃತ್ತಿ, ಬಿಡುವಿನ ವೇಳೆಯನ್ನು ಗಮನದಲ್ಲಿಟ್ಟುಕೊಂಡು ಅವುಗಳಿಗನುಗುಣವಾಗಿ ಕೇಂದ್ರ ನಡೆಯಬೇಕು. ಅಂದರೆ ೧೦-೧೫

ಮಂದಿ ಗುಂಪಿಗೆ ಬೇರೆ ಬೇರೆ ಸಮಯವನ್ನು ನಿಗದಿಪಡಿಸಿ ತರಗತಿ ನಡೆಸು ವುದು ಉತ್ತಮ.

—ಕೇಂದ್ರವನ್ನು ಆಕರ್ಷಕವಾಗಿ ಇಡುವ ಹಾಗೂ ಅನುಕೂಲತೆಯ ದೃಷ್ಟಿ ಯಿಂದ ಕೆಲವು ಅಗತ್ಯ ಸೌಲಭ್ಯಗಳು–ವಿದ್ಯುಚ್ಛಕ್ತಿ, ಪೀಠೋಪಕರಣಗಳು, ಶೌಚಾಲಯ, ಕುಡಿಯುವ ನೀರು ಮುಂತಾದ ಸೌಲಭ್ಯಗಳನ್ನು ಒದಗಿಸು ವುದು ಅವಶ್ಯ. ಶಾಲಾಕಟ್ಟಡಗಳು ಪ್ರಸ್ತುತ ಪರಿಸ್ಥಿತಿಯಲ್ಲಿ ಮೇಲ್ಕಂಡ ಸೌಲಭ್ಯಗಳ ಕೊರತೆಯನ್ನು ಹೊಂದಿವೆ.

—ಕೇಂದ್ರದ ಸುತ್ತಮುತ್ತಲ ಪರಿಸರ ಆರೋಗ್ಯವಾಗಿರಬೇಕು. ಅಂದರೆ ಹೆಂಡದಂಗಡಿಗಳು, ಹೋಟೆಲುಗಳು, ಜೂಜು ಕೇಂದ್ರಗಳು ಹಾಗೂ ಸಮಾಜವಿರೋಧಿಶಕ್ತಿಗಳು ಒಂದೆಡೆ ಸೇರುವಂಥ ಸ್ಥಳಗಳು ಕೇಂದ್ರಕ್ಕೆ ಹತ್ತಿರ ವಿದ್ದು ಮಹಿಳೆಯರು ಓಡಾಡಲು ಹಿಂಜರಿಯುವಂಥ ಪರಿಸರ ಇರಬಾರದು.

ಪಠ್ಯಸಾಮಗ್ರಿ :

—ಇವು ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿರಬೇಕು. ಅದಕ್ಕಾಗಿ ಇವು ಈಗಿರುವಂತೆ ರಾಜ್ಯಮಟ್ಟದಲ್ಲಿ ತಯಾರಾಗದೆ ಮಂಡಲ ಅಥವಾ ತಾಲ್ಲೂಕ ಮಟ್ಟದಲ್ಲಿ ಸಾಧ್ಯವಾದರೆ ಕೇಂದ್ರಮಟ್ಟದಲ್ಲಿ ತಯಾರಾಗಬೇಕು.

—ಪಠ್ಯ ತಯಾರಿಕೆಯಲ್ಲಿ ಸ್ಥಳೀಯ ಸಂಪನ್ಮೂಲಗಳು, ಸ್ಥಳೀಯ ಸಾಮಾಜಿಕ ಆರ್ಥಿಕ, ಸಾಂಸ್ಕೃತಿಕ ಬೆಳವಣಿಗೆಯ ದೃಷ್ಟಿಕೋನ ಹೊಂದಿರಬೇಕು.

—ಇವು ಸ್ಥಳೀಯ ವಯಸ್ಕರ ಶಿಕ್ಷಣ ತಜ್ಞರಿಂದ ಆಗಾಗ ಪರಿಷ್ಕರಣಗೊಳ್ಳು ತ್ತಿರಬೇಕು.

—ಸಕಾಲದಲ್ಲಿ ಪಠ್ಯ ಸಾಮಗ್ರಿಗಳನ್ನು ಕೇಂದ್ರಕ್ಕೆ ಒದಗಿಸಬೇಕು.

—ಸಾಕ್ಷರೋತ್ತರ ಸಾಹಿತ್ಯ ಪುಸ್ತಕಗಳು ಹೆಚ್ಚು ಸಂಖ್ಯೆಯಲ್ಲಿ ತಯಾರಾಗ ಬೇಕು. ಇದಕ್ಕೆ ಅಭಿವೃದ್ಧಿ ಇಲಾಖೆಗಳ ಸಹಕಾರವನ್ನು ಪಡೆಯಬೇಕು.

ಗ್ರಂಥಭಂಡಾರ :

ಪ್ರತಿ ಕೇಂದ್ರಕ್ಕೆ ಒಂದು ಗ್ರಂಥಭಂಡಾರದ ಸೌಲಭ್ಯವಿರಬೇಕು. ಇಲ್ಲಿ ಅಭಿ ವೃದ್ಧಿ ಕಾರ್ಯಕ್ರಮಗಳನ್ನು ಕುರಿತ ಮಾಹಿತಿ ದೊರಕಿಸುವಂಥ, ವಯಸ್ಕರಿಗಾಗಿಯೆ ಬರೆದಂಥ ಪುಸ್ತಕಗಳು ದೊರೆಯುವಂತಿರಬೇಕು. ಅಕ್ಷರಸ್ಥ ವಯಸ್ಕರು ಮತ್ತೆ ಅನಕ್ಷರತೆಗೆ ಮರಳದಂತೆ ನವಸಾಕ್ಷರರಿಗಾಗಿ ಬರೆದಂಥ ಸಾಹಿತ್ಯ, ವೃತ್ತಿ, ಸಮಾಜ ಸಂಸ್ಕೃತಿ, ಆರ್ಥಿಕ ಪರಿಸ್ಥಿತಿ, ಸಂಪನ್ಮೂಲಗಳ ಅಭಿವೃದ್ಧಿ, ಮಹಿಳೆಯರ ಮೂಲಭೂ ಹಕ್ಕುಗಳು, ಸಮಸ್ಯೆಗಳು, ಕಾನೂನು ಸೌಲಭ್ಯಗಳು ಮುಂತಾದ ವಿಷಯಗಳನ್ನು ಕುರಿತ ಪುಸ್ತಕಗಳನ್ನು ಈ ಗ್ರಂಥಭಂಡಾರ ಹೊಂದಿರಬೇಕು.

ಕಲಿಕೆ–ಗಳಿಕೆ ಯೋಜನೆ :

ಕೇಂದ್ರದಲ್ಲಿ ಕಲಿಯುವವರ ವೃತ್ತಿನೈಪುಣ್ಯವನ್ನು ಹೆಚ್ಚಿಸುವಂಥ ಹಾಗೂ ಆರ್ಥಿಕ ಸುಧಾರಣೆಗೆ ಸಾಧ್ಯವಾಗುವಂಥ ಕಲಿಕೆ–ಗಳಿಕೆ ಯೋಜನೆಯನ್ನು ಅಳವಡಿಸಬೇಕು. ಇದರಿಂದ ವಯಸ್ಕ ಮಹಿಳೆಯರು ಸಾಕ್ಷರತೆಯನ್ನು ಹೊಂದುವ ಕಾಲಾವಧಿಯಲ್ಲಿ ವೃತ್ತಿನೈಪುಣ್ಯ ಹಾಗೂ ಆರ್ಥಿಕ ಗಳಿಕೆಯೂ ಸಾಧ್ಯವಾಗಿ ಕಲಿಯುವವರನ್ನು ಮಧ್ಯದಲ್ಲಿ ಕೇಂದ್ರ ಬಿಡದಂತೆ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ.

ಮಕ್ಕಳ ಪಾಲನಾ ಕೇಂದ್ರ :

ಕಲಿಯುವ ತಾಯಂದಿರಿಗೆ ಮಕ್ಕಳ ಹೊಣೆಗಾರಿಕೆ ಕೇಂದ್ರಕ್ಕೆ ಬರುವಲ್ಲಿ ಒಂದು ಅಡಚಣೆಯಾಗದಂತೆ ವಯಸ್ಕರ ಶಿಕ್ಷಣ ಕೇಂದ್ರಕ್ಕೆ ಹತ್ತಿರದಲ್ಲಿ ಮಕ್ಕಳ ಪಾಲನಾ ಕೇಂದ್ರವನ್ನು ತೆರೆಯಬೇಕು. ಇಲ್ಲಿ ಮಕ್ಕಳಿಗೆ ಉಚಿತ ಆಹಾರ, ಆರೋಗ್ಯರಕ್ಷಣೆಯ ಸೌಲಭ್ಯ ಇರಬೇಕು. ಇದಕ್ಕಾಗಿ ಸಮಗ್ರ ಬಾಲವಿಕಾಸ ಯೋಜನೆಯನ್ನು ಹಳ್ಳಿಗಳಿಗೆ ವಿಸ್ತರಿಸುವುದು ಉತ್ತಮ.

ಊಟದ ವ್ಯವಸ್ಥೆ :

ಕೇಂದ್ರವನ್ನು ಮಧ್ಯದಲ್ಲಿ ಬಿಡುವವರಲ್ಲಿ ಹೆಚ್ಚಿನವರಿಗೆ ಹಸಿದ ಹೊಟ್ಟೆಯೇ ಕಾರಣವಾಗಿರುವಾಗ ಅಂಥವರಿಗೆ ಕೇಂದ್ರದ ಅವಧಿಯಲ್ಲಿ ದಿನಕ್ಕೊಂದು ಊಟದ ವ್ಯವಸ್ಥೆ ಅಪೇಕ್ಷಣೀಯ. ಇದು ಕೇಂದ್ರದ ಮುಖ್ಯ ಆಕರ್ಷಣೆಯಾಗಬಹುದು.

ಸಮುದಾಯ ಕೇಂದ್ರ :

ವಯಸ್ಕರ ಶಿಕ್ಷಣ ಕೇಂದ್ರ ಸಮುದಾಯ ಕೇಂದ್ರವಾಗಬೇಕು. ಇಲ್ಲಿ ಗ್ರಾಮದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಚಟುವಟಿಕೆಗಳು ನಡೆಯುವಂತಾಗಬೇಕು.

ಇವಿಷ್ಟು ವಯಸ್ಕರ ಶಿಕ್ಷಣ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುವಲ್ಲಿ ವಯಸ್ಕರ ಶಿಕ್ಷಣ ಹೇಗಿರಬೇಕೆಂಬುದರ ಬಗ್ಗೆಯಾದರೆ, ಅಧ್ಯಾಪಕಿ/ಸಚೇತಕಿ ಎಂಥವರಿರಬೇಕು ಎಂಬುದರ ಬಗ್ಗೆ ಸ್ವಲ್ಪ ಯೋಚಿಸೋಣ.

ಅರ್ಹತೆ :

ವಿದ್ಯಾರ್ಹತೆ ಈಗಿರುವಂತೆ ಎಸ್.ಎಸ್.ಎಲ್.ಸಿ. ಮಾತ್ರ ಆಗಿರದೆ ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆ ಸ್ವಾಗತಾರ್ಹ. ಕನಿಷ್ಠ ಪದವೀಧರರಾಗಿರುವುದು ಉತ್ತಮ.

— ಕೇಂದ್ರದ ಕಾರ್ಯನಿರ್ವಹಣೆ, ಕಲಿಯುವವರಲ್ಲಿ ಕಲಿಕೆಯ ಪ್ರೇರಣೆ ಉಂಟು ಮಾಡುವಲ್ಲಿ ಸಮರ್ಥರಾಗಿರಬೇಕು.

— ಸ್ಥಳೀಯರಾಗಿದ್ದು, ಅಲ್ಲಿನ ಜನರ ಸಮಸ್ಯೆಗಳು, ಜೀವನ ವಿಧಾನ, ಸಾಮಾಜಿಕ ಆರ್ಥಿಕ ಪರಿಸರದ ಅರಿವನ್ನು ಹೊಂದಿರಬೇಕು.

—ಸೇವಾ ಮನೋಭಾವ, ಸಮಯಪ್ರಜ್ಞೆ, ಪ್ರಾಮಾಣಿಕತೆ, ಸ್ನೇಹಸ್ವಭಾವ–
ಈ ಗುಣಗಳು ಅತ್ಯವಶ್ಯ.

ಆಯ್ಕೆ :

— ಅರ್ಹತೆಯ ಆಧಾರದ ಮೇಲಿರಬೇಕು. ಆರ್ಥಿಕ ತೊಂದರೆ ನಿರುದ್ಯೋಗ, ಅಸಹಾಯಕ ಪರಿಸ್ಥಿತಿಗಳು, ಮೀಸಲಾತಿ ಆಯ್ಕೆಯ ಮಾನದಂಡವಾಗ ಬಾರದು. ಆಯ್ಕೆ ನಿಷ್ಪಕ್ಷಪಾತವಾಗಿರಬೇಕು. ಆಯ್ಕೆ ಸಮಿತಿ ರಚಿಸ ಬೇಕು. ಮಂಡಲ ಪಂಚಾಯಿತಿ ಮಟ್ಟದಲ್ಲಿ ಆಯ್ಕೆಯಾಗಬೇಕು.

ತರಬೇತಿ :

—ಕೇಂದ್ರ ತೆರೆಯುವ ಮೊದಲೇ ಪೂರ್ವಭಾವಿ ಸಿದ್ಧತೆಯಾಗಿ ಸಚೇತಕಿಯರಿಗೆ ತರಬೇತಿ ನೀಡಿರಬೇಕು. ತರಬೇತಿ ಅವಧಿ ಮೂರರಿಂದ ಆರು ತಿಂಗಳುಗಳಿಗೆ ವಿಸ್ತರಿಸಬೇಕು. ಈ ಅವಧಿಯಲ್ಲಿ ಅವರಿಗೆ ವಯಸ್ಕರ ಮನಶಾಸ್ತ್ರ, ಪತ್ಯ ರಚನೆ ಬೋಧನಾ ವಿಧಾನ, ಅಭಿವೃದ್ಧಿ ಕಾರ್ಯಕ್ರಮಗಳು, ವೃತ್ತಿ ತರ ಬೇತಿ, ಕ್ಷೇತ್ರಭೇಟಿ ಇವುಗಳಿಗೆ ಹೆಚ್ಚು ಒತ್ತುಕೊಡಬೇಕು.

ನೇಮಕಾತಿ ಮತ್ತಿತರ ಸೌಲಭ್ಯಗಳು :

1) ಸಚೇತಕಿಯ ನೇಮಕಾತಿ ಅನಕ್ಷರತೆಯ ನಿರ್ಮೂಲನಾ ಅವಧಿಯವರೆಗೆ ಅಥವಾ ತಾತ್ಕಾಲಿಕವಾಗಿರಬಹುದು. ಆದರೆ ಕೇಂದ್ರದಲ್ಲಿ ಸಲ್ಲಿಸಿದ ಸೇವಾವಧಿ ಮುಂದೆ ಯಾವುದೇ ಕ್ಷೇತ್ರದಲ್ಲಿ ಪರಿಗಣಿತವಾಗಬೇಕು. ಅಲ್ಲದೆ ಅವರಿಗೆ ಆದ್ಯತೆ ದೊರೆಯಬೇಕು.

2) ಕೇಂದ್ರದ ಸಚೇತಕಿಗೆ ತನ್ನ ಸೇವೆಗಾಗಿ ಪ್ರಾಥಮಿಕ ಶಿಕ್ಷಕರಿಗೆ ದೊರಕು ವಷ್ಟೇ ವೇತನ ದೊರಕಬೇಕು. ಈ ಮೂಲಕ ಸಚೇತಕಿಯೂ ಆರ್ಥಿಕ ವಾಗಿ ಉತ್ತಮ ಸ್ಥಿತಿಯಲ್ಲಿರುವುದಲ್ಲದೆ ಆತ್ಮವಿಶ್ವಾಸವನ್ನು ಪಡೆಯು ವಂತಾಗಬೇಕು.

3) ಕೇಂದ್ರದ ಸಚೇತಕಿಯ ಹುದ್ದೆ ಒಂದು ಗೌರವಾನ್ವಿತ ಹುದ್ದೆ ಎಂಬ ಭಾವನೆ ಜನರಲ್ಲಿ ಮೂಡುವಂತಾಗಬೇಕು.

ಹೊಣೆಗಾರಿಕೆ :

—ಶೈಕ್ಷಣಿಕ, ಸಾಂಸ್ಕೃತಿಕ, ಮನರಂಜನಾ ಕಾರ್ಯಕ್ರಮಗಳನ್ನು ಬೋಧನೆಯ ಜೊತೆಗೆ ನಡೆಸುವ ಜವಾಬ್ದಾರಿ ಹೊರಬೇಕು.

—ಕೇಂದ್ರದ ಕಾರ್ಯಕ್ರಮಗಳೊಂದಿಗೆ ಅಭಿವೃದ್ಧಿ ಇಲಾಖೆಗಳ ಸಮನ್ವಯ ಸಾಧಿಸಬೇಕು ಇಲಾಖೆಗಳ ಸಹಯೋಗದೊಡನೆ ಯಾವುದೇ ಕಾರ್ಯಕ್ರಮ ಗಳು ನಡೆಯಬೇಕು.

—ಕಲಿಯುವವರಲ್ಲಿ ಸಾಕ್ಷರತೆ, ಅರಿವು ಮೂಡಿಸುವುದಲ್ಲದೆ ಕ್ರಿಯಾಶೀಲತೆಯನ್ನುಂಟುಮಾಡುವ ದಿಕ್ಕಿನಲ್ಲಿ ಸತತ ಪ್ರಯತ್ನ ಮಾಡಬೇಕು.

—ಕೇಂದ್ರ ಬಿಡುವವರ ಸಮಸ್ಯೆಯನ್ನರಿತು ತನ್ನ ಕೈಲಾದ ನೆರವನ್ನು ನೀಡಬೇಕು.

ಅಭಿವೃದ್ಧಿ ಇಲಾಖೆಗಳು :

1) ಪ್ರತಿ ಹಳ್ಳಿಯಲ್ಲೂ ತನ್ನ ಕಾರ್ಯಕ್ರಮಗಳನ್ನು ವಯಸ್ಕರ ಶಿಕ್ಷಣ ಕೇಂದ್ರಗಳ ಮೂಲಕ ಜಾರಿಗೊಳಿಸಬೇಕು.
2) ಕೇಂದ್ರದ ಪ್ರಗತಿ ಪರಿಶೀಲನಾ ಸಮಿತಿಯಲ್ಲಿ ಅಭಿವೃದ್ಧಿ ಇಲಾಖೆಯೂ ಸದಸ್ಯತ್ವ ಪಡೆದಿರಬೇಕು.
3) ಇಲಾಖೆಯ ಸವಲತ್ತುಗಳ ನೀಡಿಕೆಯಲ್ಲಿ ಸಾಕ್ಷರರಾದವರಿಗೆ ಆದ್ಯತೆ ನೀಡಬೇಕು. ಅಥವಾ ಅನಕ್ಷರಸ್ಥರಾಗಿದ್ದರೆ ವಯಸ್ಕರ ಶಿಕ್ಷಣ ಕೇಂದ್ರದಲ್ಲಿ ನೋಂದಾಯಿಸಲು ಪ್ರೇರಣೆ ನೀಡಬೇಕು.
4) ಇಲಾಖೆಯ ಕಾರ್ಯಕ್ರಮಗಳ ಪರಿಚಯವನ್ನು ಆಗಾಗ ಕೇಂದ್ರದ ಕಲಿಯುವವರಿಗೆ ಮಾಡಿಕೊಡಬೇಕು.
5) ಇಲಾಖೆಯ ಅಧಿಕಾರಿಗಳು ಹಳ್ಳಿಗೆ ಬಂದಾಗಲೆಲ್ಲಾ ಕಡ್ಡಾಯವಾಗಿ ಕೇಂದ್ರಕ್ಕೆ ಭೇಟಿ ನೀಡಬೇಕು. ಪ್ರಗತಿಯ ವರದಿಯನ್ನು ಮಂಡಲ ಪಂಚಾಯಿತಿಗೆ ನೀಡಬೇಕು.

ಪ್ರಚಾರ ಮಾಧ್ಯಮಗಳು :

ರಾಜ್ಯ ಮತ್ತು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವಂಥ ಪ್ರಸಾರ ಮಾಧ್ಯಮಗಳಾದ ಟಿ.ವಿ., ರೇಡಿಯೋ, ದಿನಪತ್ರಿಕೆ, ವಾರಪತ್ರಿಕೆ ಮೊದಲಾದವುಗಳಲ್ಲಿ ವಯಸ್ಕರ ಶಿಕ್ಷಣ ಒಂದು ಮುಖ್ಯ ವಿಷಯವಾಗಬೇಕು. ಕಾರ್ಯಕ್ರಮದ ಪ್ರಚಾರ ಕಾರ್ಯವಲ್ಲದೆ ಅನಕ್ಷರಸ್ಥರು ಸಾಕ್ಷರರಾಗುವಂತೆ, ಕೇಂದ್ರಕ್ಕೆ ಸೇರಲು ಸಾಕ್ಷರತೆಯ ಮಹತ್ವ ಇತ್ಯಾದಿಗಳ ಬಗ್ಗೆ ತಿಳುವಳಿಕೆ, ಪ್ರೇರಣೆ ನೀಡುವಂಥ ಕಾರ್ಯಕ್ರಮಗಳು, ಪ್ರಕಟಣೆಗಳು, ಘೋಷಣೆಗಳನ್ನು ಅಳವಡಿಸಿಕೊಳ್ಳಬೇಕು.

ವಾರ್ತಾ ಮತ್ತು ಪ್ರಚಾರ ಇಲಾಖೆ :

ಕಾರ್ಯಕ್ರಮಕ್ಕೆ ಸಂಬಂಧಪಟ್ಟ ವಿಷಯಗಳನ್ನು ಯಶಸ್ವೀ ನಿದರ್ಶನಗಳನ್ನೊಳಗೊಂಡಂಥ ಪ್ರಕಟಣೆಗಳು, ಚಲನಚಿತ್ರ, ಸ್ಲೈಡ್, ಭಿತ್ತಿಚಿತ್ರಗಳನ್ನು ಪ್ರಕಟಿಸಬೇಕು. ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಿಗೆ ಕ್ಷೇತ್ರ ಪ್ರಚಾರ ಇಲಾಖೆ ಹೆಚ್ಚು ಮಹತ್ವ ನೀಡಬೇಕು.

ಸ್ಥಳೀಯ ಸಮಿತಿ

ರಚನೆ :—ಪ್ರತಿಯೊಂದು ಕೇಂದ್ರವೂ ಸ್ಥಳೀಯ ಸಮಿತಿಯನ್ನು ಹೊಂದಿರಬೇಕು. ಈ ಸಮಿತಿಯಲ್ಲಿ ಸರ್ಕಾರಿ ಅಧಿಕಾರಿಗಳು, ಸ್ಥಳೀಯ ಮುಂದಾಳುಗಳು, ಗಣ್ಯರು, ರಾಜಕೀಯ ನಾಯಕರು, ಶಿಕ್ಷಕರು, ಶಿಕ್ಷಣ ತಜ್ಞರು ಸದಸ್ಯರಾಗಿರಬೇಕು.

ಕೆಲಸ ಕಾರ್ಯಗಳು

—ಜನತೆಯಲ್ಲಿ ಸಾಕ್ಷರತೆಯ ಅಗತ್ಯತೆಯ ಅರಿವು ಮೂಡಿಸುವುದು. ಇದಕ್ಕಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು.

—ಕೇಂದ್ರ ಸೇರಲು ಪ್ರೇರಣೆ ನೀಡುವುದು.

—ಕೇಂದ್ರಗಳ ಕಾರ್ಯಕ್ರಮಗಳಿಗೆ ಸಲಹೆ ಮತ್ತು ಸಹಕಾರ ನೀಡುವುದು.

—ಕೇಂದ್ರದ ಪ್ರಗತಿಯ ಮೌಲ್ಯಮಾಪನ ಮಾಡುವುದು.

—ಕೇಂದ್ರದ ಕೆಲಸಕಾರ್ಯಗಳಿಗೆ ಅಡೆತಡೆಗಳು ಬರದಂತೆ ನೋಡಿಕೊಳ್ಳುವುದು.

—ಕೇಂದ್ರ ಬಿಟ್ಟವರ ವೈಯಕ್ತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸುವುದು.

—ಗ್ರಾಮೀಣ ಸಮೀಕ್ಷೆಯನ್ನು ಮಾಡಿ, ಸಾಕ್ಷರತೆಯ ಅಂಕಿಅಂಶಗಳ ಮಾಹಿತಿಯನ್ನು ಮಂಡಲ ಪಂಚಾಯಿತಿಗೆ ನೀಡುವುದು.

—ಕೇಂದ್ರಕ್ಕೆ ಅಗತ್ಯವಾದ ಭೌತಿಕ ಸೌಲಭ್ಯಗಳು ಮತ್ತಿತರ ಅಗತ್ಯಗಳನ್ನು ಗಮನಿಸಿ ವರದಿ ಸಲ್ಲಿಸುವುದು.

—ಅಭಿವೃದ್ಧಿ ಇಲಾಖೆಗಳೊಂದಿಗೆ ಸಂಪರ್ಕ, ಅವುಗಳಿಂದ ಸಹಕಾರ ಪಡೆಯುವುದು.

—ಕಾರ್ಯಕ್ರಮ ತಯಾರಿಕೆಯಲ್ಲಿ ಸಲಹೆ ಸಹಕಾರ ನೀಡುವುದು.

ಮಂಡಲ ಪಂಚಾಯಿತಿ

—ಸ್ಥಳೀಯ ಸಮಿತಿಗಳ ರಚನೆ ಮಾಡುವುದು.

—ಸ್ಥಳೀಯ ಸಮಿತಿಗಳು ಸಲ್ಲಿಸಿದ ವರದಿಗಳು, ಅಂಕಿಅಂಶಗಳನ್ನು ಕ್ರೋಢೀಕರಿಸುವುದು, ನಿರ್ದೇಶಿಸುವುದು ಹಾಗೂ ಮಾರ್ಗದರ್ಶನ ಮಾಡುವುದು.

—ಕೇಂದ್ರಗಳಿಗೆ ಆರ್ಥಿಕ ಸಹಾಯ ನೀಡುವುದು.

—ಪಠ್ಯಪುಸ್ತಕಗಳ ರಚನೆ ಮತ್ತು ಅವುಗಳ ಸಕಾಲಿಕ ವಿತರಣೆಯ ಜವಾಬ್ದಾರಿ ಹೊರುವುದು.

—ಆಡಳಿತಾತ್ಮಕ ವಿಷಯಗಳ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಹೊರುವುದು.

ವಿದ್ಯಾರ್ಥಿನಿಯರು

—ವಯಸ್ಕ ಶಿಕ್ಷಣವನ್ನು ಶಾಲಾ ಕಾಲೇಜುಗಳಲ್ಲಿ ಅಧ್ಯಯನ ವಿಷಯವಾಗಿ ಇಡುವುದು.

—ವಯಸ್ಕ ಶಿಕ್ಷಣ ಕಾರ್ಯಕರ್ತರ ಆಯ್ಕೆಯಲ್ಲಿ ವಯಸ್ಕ ಶಿಕ್ಷಣವನ್ನು ಅಧ್ಯಯನ ಮಾಡಿದವರಿಗೆ ಆದ್ಯತೆ ನೀಡುವುದು.

—ವಯಸ್ಕ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರಿಗೆ ಇತರ ಕ್ಷೇತ್ರಗಳಲ್ಲಿ ಉದ್ಯೋಗ ನೀಡುವಾಗ ಆದ್ಯತೆ ನೀಡುವುದು ಹಾಗೂ ಸೇವೆ ಸಲ್ಲಿಸಿದ ಅವಧಿಯನ್ನು ಪರಿಗಣಿಸಿ ವೇತನ ಬಡ್ತಿ, ಮುಂಬಡ್ತಿಗಳನ್ನು ನೀಡುವುದು.

—ಸಾಕ್ಷರತೆಗಾಗಿ ದುಡಿಯುವುದು, ರಾಷ್ಟ್ರಕ್ಕಾಗಿ ತಾನು ಮಾಡಬೇಕಾದ ಒಂದು ಕರ್ತವ್ಯ ಎಂಬ ಧೋರಣೆಯನ್ನು ಅವರಲ್ಲಿ ಮೂಡಿಸುವುದು.

ಸ್ವಯಂಸೇವಾ ಸಂಸ್ಥೆಗಳು : ಮಹಿಳಾ ಸಂಘಟನೆಗಳು

ಸ್ವಯಂಸೇವಾ ಸಂಸ್ಥೆಗಳು ಈಗ ನಡೆಸುತ್ತಿರುವ ಔಪಚಾರಿಕ ಶಿಕ್ಷಣ ಸಂಸ್ಥೆಗಳ ಜೊತೆಗೆ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸುವಂತೆ ಪ್ರೋತ್ಸಾಹಿಸುವುದು ಅಗತ್ಯ.

ಅಂತೆಯೇ ಮಹಿಳಾ ಸಮಾನತೆಗಾಗಿ ದುಡಿಯುತ್ತಿರುವ ಜಾಗೃತ ಮಹಿಳಾ ವೇದಿಕೆ ಸಂಘಸಂಸ್ಥೆಗಳು ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳುವಂತೆ ಅವುಗಳನ್ನು ಹಣಕಾಸು ಮತ್ತಿತರ ಸೌಲಭ್ಯಗಳನ್ನು ನೀಡುವ ಮೂಲಕ ಪ್ರೋತ್ಸಾಹಿಸಬೇಕು. ಇದು ಸಾಧ್ಯವಾಗದಿದ್ದಲ್ಲಿ ಅಂಥ ವೇದಿಕೆಗಳೊಂದಿಗೆ ಕೇಂದ್ರಗಳು ಸಂಪರ್ಕ ಪಡೆದಿರುವಂತೆ ನೋಡಿಕೊಳ್ಳುವುದು. ಅವುಗಳ ಸಹಕಾರ ಪಡೆದು ಶೈಕ್ಷಣಿಕ ಕಾರ್ಯಕ್ರಮಗಳು—ಉಪನ್ಯಾಸ ಚರ್ಚೆ ಮುಂತಾದುವುಗಳನ್ನು ನಡೆಸುವುದು.

ಮೇಲ್ಕಂಡ ಸಲಹೆಗಳು ಈ ಸಂಶೋಧಕಿ ಮೈಸೂರು ತಾಲ್ಲೂಕಿನಲ್ಲಿ ೧೯೮೫-೮೬ರಲ್ಲಿ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಮಧ್ಯ ಬಿಟ್ಟವರೊಂದಿಗೆ ನಡೆಸಿದ ಸಂದರ್ಶನಗಳು ಹಾಗೂ ಪಡೆದ ಅನುಭವಗಳ ಆಧಾರಿತವಾಗಿವೆ. ಈ ದಿಕ್ಕಿನಲ್ಲಿ ಮಹಿಳೆಯರಿಗೇ ನಿಮಿತಗೊಂಡಂತೆ ಪ್ರತ್ಯೇಕ ಅಧ್ಯಯನಗಳು ನಡೆಯಬೇಕಾದ ಅಗತ್ಯವಿದೆ. ಮೇಲ್ಕಂಡ ಸಲಹೆಗಳಲ್ಲಿ ಕೆಲವಾದರೂ ಮಹಿಳಾ ಸಾಕ್ಷರತಾ ಕಾರ್ಯಕ್ರಮಗಳನ್ನು ಯೋಜಿಸಬೇಕಾದ ಸರ್ಕಾರದ ಗಮನ ಸೆಳೆದಲ್ಲಿ, ಈ ಅಧ್ಯಯನ ನಡೆಸುವುದಕ್ಕಾಗಿ ಪಟ್ಟ ಶ್ರಮ ಸಾರ್ಥಕವಾಗುತ್ತದೆಂದು ಭಾವಿಸುತ್ತೇನೆ.

ನಕ್ಷತ್ರ ವೀಕ್ಷಣೆಯ ಹರ್ಷೋಲ್ಲಾಸ

ಜೆರಿ ಕೇಂಬ್ರಿಡ್ಜ್ ಮತ್ತು ಶಾನೂ ಬಿಜ್‌ಲಾನಿ

ಜನವರಿ ತಿಂಗಳ ರಾತ್ರಿಯ ಆಕಾಶ ನೋಡಿದಾಗ ವಜ್ರಗಳನ್ನು ಕುಂದಣ ಕೂರಿಸಿರುವಂತೆ ಥಳ ಥಳ ಹೊಳೆಯುವ ತಾರೆಗಳ ಸಮೂಹ ಗೋಚರಿಸುತ್ತದೆ. ಉಜ್ವಲ, ಮಂದ, ಕೆಂಪನೆಯ ಹಲಕೆಲವು ಮಿನುಗುವ ಚುಕ್ಕಿಗಳನ್ನು ಅಲ್ಲಿ ನೋಡುವಿರಿ. ನೀವು ಅದೃಷ್ಟಶಾಲಿಗಳಾದರೆ ಬಾನಿನಲ್ಲಿ ಕೆಂಬಣ್ಣದ ಉಂಡೆಯಾಗಿ ಕಣ್ಣಿಗೆ ಕಾಣುವ ಮುನ್ನ ಬೆಳಕಿನ ಪುಂಜವನ್ನು ಪಸರಿಸಿ ಅನಂತರ ಅದೃಶ್ಯವಾಗುವ ಬೀಳುವ ನಕ್ಷತ್ರವನ್ನು (Shooting star) ನೋಡಬಹುದು. ಕವಿ ರವೀಂದ್ರರ ವಾಣಿಯನ್ನು ನೆನಪಿಗೆ ತಂದುಕೊಳ್ಳಿ. "ಕಾಲದ ಪ್ರವಾಹದಲ್ಲಿ ಸದಾ ಹುಟ್ಟುತ್ತ ಕಾದ ಕಬ್ಬಿಣದಂತೆ ಜ್ವಲಿಸುತ್ತ ಸುಳಿಸುತ್ತುತ್ತ ಕತ್ತಲೆಯಲ್ಲಿ ಗೋಚರಿಸುವ ತಾರೆಗಳು ಲಕ್ಷಾಂತರ ವರ್ಷಗಳಿಂದ ಪ್ರಜ್ವಲಿಸುತ್ತಿವೆ."

ಆಕಾಶದ ಬಗ್ಗೆ ಇನ್ನೂ ಹೆಚ್ಚು ಅರಿಯಲು ನೀವು ಇಚ್ಛಿಸುವಿರಿ ತಾನೆ? ಹಾಗಿದ್ದರೆ, ಗ್ರಹಗಳು ಹಾಗೂ ನಕ್ಷತ್ರಗಳನ್ನು ಗುರುತಿಸಲು ನಿಮಗೆ ನೀವೇ ಸ್ವಯಂ ಮಾರ್ಗದರ್ಶಿಗಳಾಗಿ. ಇದಕ್ಕೆ ಬೇಕಾಗುವ ಸಲಕರಣೆ ಎಂದರೆ ಕೇವಲ ಒಂದು ಬೈನಾಕ್ಯುಲರ್ಸ್, ಆಕಾಶದ ಒಂದು ಅಟ್ಲಾಸ್ ಹಾಗೂ ಸಾಧ್ಯವಾದರೆ ಒಂದು ದೂರದರ್ಶಕ.

ಜನವರಿಯ ಕೊರೆವ ಚಳಿಗೆ ಬೆಚ್ಚನೆಯ ಹೊದಿಕೆ ಹೊದ್ದು ನಕ್ಷತ್ರ ವೀಕ್ಷಣೆಗೆ ಸಿದ್ಧರಾದರೆ ನಮ್ಮ ಭೂಮಿಯನ್ನು ಪರಿಭ್ರಮಿಸುವ ಏಕೈಕ ನೈಸರ್ಗಿಕ ಕಾಯವಾದ ಚಂದ್ರನಲ್ಲಿಯ ಕುಳಿಗಳು ಮತ್ತು ಅದರ ಗಾಢಾಂಧತೆಯ 'ಸಾಗರ'ಗಳನ್ನು ವೀಕ್ಷಿಸಬಹುದು. ನೀಲಾಕಾಶದಲ್ಲಿ ಮಹಾಶ್ವಾನಪುಂಜದ ಪ್ರಥಮ ನೀಲವರ್ಣದ ಮಹೋಜ್ವಲ ತಾರೆ ಲುಬ್ಧಕ ಮತ್ತು ಮಹಾವ್ಯಾಧ ನಕ್ಷತ್ರ ಪುಂಜದ ನಡುಪಟ್ಟಿಯ ಮೂರು ಸಮೋಜ್ವಲ

೧೯೮೭ರ ಜನವರಿ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಲೇಖನದ ಅನುವಾದ.

ತಾರೆಗಳು ಏಕರೇಖಾಸ್ಥವಾಗಿ ರಾರಾಜಿಸುತ್ತಿರುವುದನ್ನು ನೋಡಬಹುದು. ಪ್ರಾಚೀನ ಭಾರತೀಯ ಖಗೋಳಶಾಸ್ತ್ರಜ್ಞರು ಮಹಾವ್ಯಾಧನ ಈ ನಡುಪಟ್ಟಿಯನ್ನು "ತ್ರಿಕಂಡಬನ್" ಅಂದರೆ "ಒರೆಯ ಖಡ್ಗ", ಇದರಿಂದ ವ್ಯಾಧ ಮೃಗವನ್ನು ಕೊಂದ ಎನ್ನುತ್ತಾರೆ.

ಆಕಾಶದ ಹರವು ಊಹಾತೀತ. ಉದಾ: ವೃಷಭರಾಶಿಯಲ್ಲಿಯ ಸಣ್ಣ ನಕ್ಷತ್ರ ಪುಂಜ ಕೃತ್ತಿಕೆ ಭೂಮಿಯಿಂದ ೪೧೫ ಜ್ಯೋತಿರ್ವರ್ಷಗಳಷ್ಟು ದೂರದಲ್ಲಿದೆ. ನೀವೀಗ ನೋಡುತ್ತಿರುವ ಅದರ ಕಿಡಿ ಒಂದು ಸೆಕೆಂಡಿಗೆ ೨೯೯,೭೦೦ ಕಿಮೀ ವೇಗದಲ್ಲಿ ಅಕ್ಬರ್ ಚಕ್ರವರ್ತಿಯ ಆಳ್ವಿಕೆಯ ಕಾಲದಲ್ಲಿ ತನ್ನ ನೆಲೆಯನ್ನು ಬಿಟ್ಟು ಅಲ್ಲಿಂದ ಹೊರಟಿತ್ತು. ಇಂಥ ಆಕಾಶ ಕಾಯಗಳ ಮುಕುಟ ಮಣಿಯಿಂದ ಹೊರಹೊಮ್ಮುವ ಉಜ್ವಲ ಪ್ರಭೆಯಿಂದ ಅವು ಪರಸ್ಪರ ಸಮೀಪದಲ್ಲಿದ್ದಂತೆ ನಿಮಗೆ ತೋರಿದರೂ ಅವುಗಳ ನಡುವಿನ ಅಂತರ ೧೫ *ಜ್ಯೋತಿರ್ವರ್ಷಗಳಷ್ಟು ಇದೆ.

ಅದ್ಭುತ ಕುತೂಹಲ : ಬಾನಿನ ಕೆಲವು ಚುಕ್ಕೆಗಳ ನೈಜಗಾತ್ರವನ್ನು ಅರಿತರೆ ನೀವು ಬೆಕ್ಕಸ ಬೆರಗಾಗುವಿರಿ. ಉದಾ ; ಮಹಾವ್ಯಾಧನ ಒಂದು ತಾರೆಯಾದ ಆರ್ದ್ರಾ ೪೦೦ ಮಿಲಿಯನ್ ಕಿಮೀ ಸುತ್ತಳತೆಯ ದೈತ್ಯಕಾಯ ಎಂದರೆ ನಿಮಗೆ ಆಶ್ಚರ್ಯ ವಾಗುವುದಲ್ಲವೇ? ಹೇಳಬೇಕೆಂದರೆ, ನಕ್ಷತ್ರವೂ ಒಂದೊಂದು ಸೂರ್ಯನೇ!! ನಮ್ಮ ಸೂರ್ಯನಂತೆ! ಪ್ರಾಯಶಃ ನಮ್ಮ ಪ್ರಾಚೀನ ಖಗೋಳ ಶಾಸ್ತ್ರಜ್ಞರು ಇದನ್ನು ಅರಿತಿದ್ದರೇನೋ? ಆದ್ದರಿಂದಲೇ "ಸಪ್ತ ದಿಶೋ ನನಃ ಸೂರ್ಯ" ಎಂದು ಋಗ್ವೇದದ ಉವಾಚ. ಇದರ ಅರ್ಥ ಸೂರ್ಯರು ಬ್ರಹ್ಮಾಂಡದಲ್ಲೆಲ್ಲಾ ವ್ಯಾಪಿಸಿದ್ದಾರೆ ಎಂದು.

ನಕ್ಷತ್ರಗಳು ಪ್ರಕೃತಿಯ ಸಹಜ ಬೈಜಿಕ ಸ್ಥಾವರಗಳು. ಇಲ್ಲಿ ಹೈಡ್ರೊಜನ್ ಹೀಲಿಯಮ್ ಆಗಿ ಪರಿವರ್ತನೆಯಾಗುವುದರಿಂದ ಅಗಾಧ ಶಕ್ತಿ ಉತ್ಪಾದನೆಯಾಗುತ್ತದೆ. ಕೆಲವು ನಕ್ಷತ್ರಗಳು ಅಧಿಕ ಶಕ್ತಿಯ ಆಕರಗಳು. ಮಹಾವ್ಯಾಧ ನಕ್ಷತ್ರ ಪುಂಜದ ನೈರುತ್ಯ ಶೃಂಗದ ನೀಲಿಛಾಯೆಯ ವ್ಯಾಧ ಪೃಷ್ಠ ಅತ್ಯುಜ್ವಲ ನಕ್ಷತ್ರ ವಾಗಿದ್ದು ೨೦,೦೦೦°C ಉಷ್ಣತೆಯೊಂದಿಗೆ ಧಗಧಗನೆ ಉರಿಯುತ್ತಿದೆ. ನಮ್ಮ ಸೂರ್ಯನಿಗಿಂತ ಉಷ್ಣತೆಯಲ್ಲಿ ಮೂರು ಮಡಿ ಅಧಿಕ ಈ ತಾರೆಯದು.

ಹತ್ತರಿಂದ ಇಪ್ಪತ್ತು ಸಾವಿರ ಮಿಲಿಯನ್ ವರ್ಷಗಳ ಹಿಂದೆ ನಡೆದ ಮಹಾ ಬಾಜಣೆಯ ವಿಪ್ಲವದಿಂದ ಹೊರಟ ಧೂಳು ಮತ್ತು ಅನಿಲದಿಂದ ನಮ್ಮ ಜಗತ್ತು ಮತ್ತು ಅದರಲ್ಲಿಯ ಸಮಸ್ತ ಈ ಸೃಷ್ಟಿಯಾಯಿತೆನ್ನುತ್ತಾರೆ, ಖಗೋಳತಜ್ಞರು. ಮುಂಬಯಿಯ ನೆಹರು ಪ್ಲಾನೆಟೋರಿಯಮ್ಮಿನ ನಿರ್ದೇಶಕ ಡಾ|| ವಿ. ಎಸ್. ವೆಂಕಟವರದನ್ ನಕ್ಷತ್ರಗಳ ಕ್ಷವೀಕ್ಷಣೆ ನಿಮ್ಮನ್ನು ಅವುಗಳ ಮೂಲ ಹುಟ್ಟಿನೆಡೆಗೆ ಕೊಂಡೊಯ್ಯುತ್ತದೆ ಎನ್ನುತ್ತಾರೆ. ಅವರ ಮಾತಿನಲ್ಲಿ "ಖಗೋಳಶಾಸ್ತ್ರವು ವಿಶ್ವದ ಬೃಹತ್ತ್ವವನ್ನು ಮನವರಿಕೆಮಾಡಿಕೊಡುವಲ್ಲಿ ನಿಮಗೆ ಸಹಕಾರವೀಯುತ್ತದೆ."

---

*ಬೆಳಕಿನ ವೇಗ ಒಂದು ಸೆಕೆಂಡಿಗೆ ೩,೦೦,೦೦೦ ಕಿಮೀ. ಈ ವೇಗದಲ್ಲಿ ಬೆಳಕು ಒಂದು ವರ್ಷದಲ್ಲಿ ಕ್ರಮಿಸುವ ದೂರವನ್ನು ಜ್ಯೋತಿರ್ವರ್ಷವೆನ್ನುತ್ತಾರೆ.

ನೀವು ಕ್ಷೀರಪಥ, ಹಾಲ್ದೊರೆ ಎಂದು ಕರೆವ ಆಕಾಶಗಂಗೆಯ ಆಳವಿವರಣೆಗೆ ಕೈಹಾಕಿದರೆ ಉಸಿರುಕಟ್ಟುವ ಅದರ ದೈದೃಶ್ಯ ಹಾಗೂ ಜನವರಿ ಮಾಸದಲ್ಲಿ ಹಾಯುವ ಅದರ ಬೆಳಕಿನ ಪಸೆಗೆ ಮನಸೋತು ತಲೆದೂಗುವಿರಿ. ಆಕಾಶಗಂಗೆಯನ್ನು ಪ್ರಾಚೀನ ಭಾರತೀಯರು "ಆಕಾಶಗಂಗಾ ಪವಿತ್ರಗಂಗೆ, ಆಕಾಶಕಾಯಗಳನ್ನು ಪಾವನಗೊಳಿಸಿದಳು" ಎಂಬ ಭಾವನೆಯಿಂದ ಗೌರವಿಸಿದರು. ೪೦೦ ಬಿಲಿಯನ್ ನಕ್ಷತ್ರಗಳಿಂದ ತುಂಬಿರುವ ಇದರ ಒಂದು ತುದಿಯಿಂದ ಮತ್ತೊಂದು ತುದಿಗೆ ಇರುವ ದೀರ್ಘವ್ಯಾಸದ ಉದ್ದ ೧,೦೦,೦೦೦ ಜ್ಯೋತಿರ್ವರ್ಷಗಳಷ್ಟು. ನಮಗೆ ಆಕಾಶಗಂಗೆ ಒಂದು ವೃತ್ತದಂತೆ ಗೋಚರಿಸುತ್ತದೆ. ಕಾರಣ ನಾವು ಅದರೊಳಗೆ ಇದ್ದೇವೆ.

ಆಕಾಶಗಂಗೆಯಲ್ಲಿ ನಕ್ಷತ್ರಗಳು ಕ್ಷಯಿಸುತ್ತವೆ. ಬೃಹತ್ ಆದ್ರಾ್ರ ವ್ಯಾಕೋಚಿಸುತ್ತ ಮತ್ತೆ ಸಂಕೋಚನಗೊಳ್ಳುವುದರಿಂದ ಅದರ ಹೈಡ್ರೊಜನ್ ಮುಗಿಯುತ್ತ ಬಂದು ಕೊನೆಗೆ ಅದೊಂದು ವಿಶ್ವದ ಕಿಟ್ಟವಾಗುಳಿಯುತ್ತದೆ.

ಮಹಾವ್ಯಾಧನ ಕರವಾಲ ಅಥವಾ ಖಡ್ಗದೆಡೆ ಸೂಕ್ಷ್ಮ ದೃಷ್ಟಿ ಹರಿಸಿದರೆ ಅದು ಬರಿಗಣ್ಣಿಗೆ ಅಸ್ಪಷ್ಟವಾಗಿ ಗೋಚರಿಸುತ್ತದೆ. ಆದರೆ ದುರ್ಬೀನು ಅಥವಾ ದೂರದರ್ಶಕದ ಮೂಲಕ ವಿಶೇಷವಾಗಿ ಖಗೋಳಜ್ಞರ ತಂತ್ರದಂತೆ ಅಂದರೆ ನೆಟ್ಟ ನೋಟದಿಂದ ನೋಡದೆ ಕಿಗ್ಗಣ್ಣಿನಲ್ಲಿ (ಅಕ್ಷಿಪಟದ ಹೊರಭಾಗವು ಮಧ್ಯಭಾಗಕ್ಕಿಂತ ಮಂದ ಬೆಳಕಿಗೆ ತುಂಬಾ ಸೂಕ್ಷ್ಮ) ನೋಡಿದಾಗ ನಿಮಗೆ ಅನಿಲ ಮತ್ತು ಧೂಳಿನ ಘನೀಕೃತ ಮಂದನೀಲಿ ಪ್ರಜ್ವಲಿಕೆ ಕಾಣಿಸುತ್ತದೆ. ಇಲ್ಲಿ ಅಂದರೆ ಕರವಾಲದಲ್ಲಿ ೧,೦೦೦ ಜ್ಯೋತಿರ್ವರ್ಷಗಳಷ್ಟು ದೂರದಲ್ಲಿ ನಕ್ಷತ್ರಗಳ ಜನನವನ್ನು ವೀಕ್ಷಿಸಲು ಸಾಧ್ಯ.

ಮಹಾವ್ಯಾಧ ನಿಹಾರಿಕೆಯು (Nebula) ೧೦,೦೦೦ ನಕ್ಷತ್ರಗಳಿಗಾಗುವಷ್ಟು ದ್ರವ್ಯವನ್ನು ಹೊಂದಿದೆ ಎಂದು ಒಂದು ಅಂದಾಜು. ಇಷ್ಟು ಅಗಾಧ ಪ್ರಮಾಣದ ದ್ರವ್ಯ ಈ ನಿಹಾರಿಕೆಯಲ್ಲಿ ಲಭ್ಯವಿದ್ದರೂ ಖಗೋಳಜ್ಞರ ಪ್ರಕಾರ ಈ ನಿಹಾರಿಕೆಯಲ್ಲಿ ಧೂಳಿನ ವಿರಳತೆ ಎಷ್ಟೆಂದರೆ, ಒಂದು ಪ್ರನಾಳವನ್ನು ಮಹಾವ್ಯಾಧ ನಿಹಾರಿಕೆಯ ಅಡ್ಡಗಲಕ್ಕೆ ತೂರಿಸಿ ಗೋರಿದರೆ ಸಂಗ್ರಹವಾಗುವ ಧೂಳು ಕೇವಲ ಒಂದು ರೂಪಾಯಿ ನಾಣ್ಯದ ತೂಕಕ್ಕಿಂತ ಕಡಿಮೆ ತೂಗುತ್ತದೆ.

ನಕ್ಷತ್ರ ವೀಕ್ಷಣೆ ತೀಕ್ಷ್ಣವಾದ ಮೋಹಪರವಶತೆಯನ್ನು ಬೀರುತ್ತದೆ. ನಿರ್ಮಲ ರಾತ್ರಿಯ ನಿಶ್ಯಬ್ಧತೆಯಲ್ಲಿ ಕೈಗೊಳ್ಳುವ ನಕ್ಷತ್ರ ವೀಕ್ಷಣೆಯ ಸಾಹಸವು ಮನಸ್ಸಿಗೆ ಹರ್ಷೋಲ್ಲಾಸವನ್ನು ಕೊಡುತ್ತದೆ. ಈ ವೀಕ್ಷಣೆಯಿಂದ ಕಂಡೂ ಕಾಣದಂತೆ ತಲೆದೂಗುವ ಮಿಥುನ (Gemini) ಲಘುಶ್ವಾನ (Conis minor) ಅಥವಾ ಕುಂತೀಪುಂಜದ ಪರಿಚಯ ಸ್ಪಷ್ಟವಾಗಿ ಮನಸ್ಸಿನಲ್ಲಿ ಗೋಚರಿಸುವ ೨೦೦೦ಕ್ಕೂ ಹೆಚ್ಚು ನಕ್ಷತ್ರಗಳ ಬಗ್ಗೆ ಅರಿಯಲು ನಿಮ್ಮಲ್ಲಿ ಹುರುಪು ತುಂಬುವ ದುರ್ಬೀನಿನ ಬೆಲೆ ಹೆಚ್ಚೆಂದರೆ ರೂ. ೪೦೦. ಆದರೆ ದೂರದರ್ಶಕದ ಬೆಲೆ ಸುಮಾರು ೧೦೦೦ ಮಾತ್ರ.

ನೀವು ಸುಲಭವಾಗಿ ನಕ್ಷತ್ರಗಳ ಪ್ರರೂಪವನ್ನು (Pattern) ತಿಳಿಯಬಹುದು. ನಕ್ಷತ್ರಗಳ ಪ್ರರೂಪಗಳು ಖಗೋಳಶಾಸ್ತ್ರದ ಕೈಪಿಡಿ ಹಾಗೂ ನಕ್ಷೆಗಳಲ್ಲಿ ದೊರೆಯುತ್ತವೆ. ನಗರದ ಬೀದಿ ದೀಪಗಳಿಂದ ದೂರವಿರುವ ಒಂದು ಆಯಕಟ್ಟಿನ ಸ್ಥಳವೊಂದನ್ನು ಆರಿಸಿ

ಕೊಳ್ಳಿ. ಈ ಆಯ್ಕೆಯೇ ನಿಮ್ಮ ಪ್ರಾಥಮಿಕ ಖಗೋಳಾಧ್ಯಯನದ ಪ್ರಥಮ ಪಾಠ. ನಿಮ್ಮ ಕಣ್ಣುಗಳು ಈಗ ಕತ್ತಲೆಗೆ ಹೊಂದಿಕೊಂಡಿರುವುದರಿಂದ ಒಂದು ಪ್ರಕಾಶದ ಬ್ಯಾಟರಿಯನ್ನು ಬಳಿಯಲ್ಲಿ ಇಟ್ಟುಕೊಂಡಿರಿ. ಆಕಾಶದಲ್ಲಿ ಕಾಣುವ ಅವಿಚ್ಛಿನ್ನ ದೃಶ್ಯದ ನಕ್ಷತ್ರಗಳ ಪ್ರರೂಪದೊಡನೆ ನಿಮ್ಮ ನಕ್ಷೆಯನ್ನು ಹೋಲಿಸಿ ನೋಡಲು ಕತ್ತಲೆಯಲ್ಲಿ ಬ್ಯಾಟರಿ ಸಹಾಯಕ್ಕೆ ಬರುತ್ತದೆ. ಮೊದಲಿಗೆ ನಿಮಗೆ ಗೊತ್ತಿರುವ ಒಂದು ನಕ್ಷತ್ರದಿಂದ ನಿಮ್ಮ ಖಗೋಳ ವೀಕ್ಷಣೆಯು ಪ್ರಾರಂಭಗೊಳ್ಳಲಿ. ಉದಾ: ಜನವರಿ ಮಾಸದಲ್ಲಿ ಈಶಾನ್ಯ ದಿಕ್ಕಿನಾಕಾಶದಲ್ಲಿ ಏಳು ನಕ್ಷತ್ರಗಳು ಗೋಚರಿಸುತ್ತವೆ. ಇವು ತಟ್ಟೆಯಾಕಾರ ಅಥವಾ ಹರಿವಾಣದಾಕಾರವನ್ನು ಹೋಲುತ್ತವೆ. ಇವನ್ನು ಪಾಶ್ಚಾತ್ಯರು ಮಹಾ ಬಲ್ಲೂಕವೆಂದೂ, ಭಾರತೀಯ ಖಗೋಳತಜ್ಞರು "ಸಪ್ತರ್ಷಿ ಮಂಡಲ"ವೆಂದು ಕರೆದರು. ಇದರ ಪತ್ತೆ ಸುಲಭ ಹಾಗೂ ಎಲ್ಲರಿಗೂ ಸುಪರಿಚಿತ.

ಈ ಸಪ್ತರ್ಷಿ ಮಂಡಲದ ಕೊನೆಯ ತಾರೆಯಿಂದ ಒಂದು ಕೃತಕ ಗೆರೆಯನ್ನು ಉತ್ತರಕ್ಕೆ ಲಂಬಿಸಿ. ಈಗ ನೀವು ಉತ್ತರದಿಕ್ಕಿನ ಧೃವ ನಕ್ಷತ್ರ ಸೇರುವಿರಿ. ನಮ್ಮ ಭಾರತೀಯರ ದೈವಿಕ ಸ್ವರ್ಗದ ದಿಡ್ಡಿ ಬಾಗಿಲು ಇದೇ ತಾನೇ? ನೈಜ ಉತ್ತರದಿಕ್ಕಿನ ದಿಕ್ಸೂಚಿ. ನಮ್ಮ ಗೋಳಾಕಾರದ ಭೂಮಿ ಈ ಭೂಮ್ಯಕ್ಷದ ಮೇಲೆ ಗಿರಿಕಿ ಹೊಡೆಯುತ್ತಿದೆ. ಆದರೆ ಭೂಮಿ ಸೂರ್ಯನನ್ನು ಪರಿಭ್ರಮಿಸುತ್ತಿರುವುದರಿಂದ ಉತ್ತರದಾಕಾಶದಲ್ಲಿ ಕಾಣುವ ೪೬ ನಕ್ಷತ್ರ ಪುಂಜಗಳು ಋತುವಿನಿಂದ ಋತುವಿಗೆ ಬದಲಾಗುತ್ತಿರುತ್ತವೆ. ಜನವರಿ ೧೧ನೇ ತಾರೀಖು ದಕ್ಷಿಣಾಕಾಶದಲ್ಲಿ ಕಾಣುವ ಮಹಾವ್ಯಾಧ (Orion) ಚಳಿಗಾಲದ ನಕ್ಷತ್ರಪುಂಜ, ಹಾಗೆಯೇ ಬೇಸಿಗೆಯ ಸುಂದರ ನಕ್ಷತ್ರಪುಂಜ ಧನು.

ಕೆಲವು ಗ್ರಹಗಳು ನಕ್ಷತ್ರಗಳಿಗಿಂತ ಉಜ್ಜ್ವಲವಾಗಿ ಬೆಳಗುತ್ತವೆ. ಸೂರ್ಯ ಚಂದ್ರರ ಅಸ್ತಾನಂತರ ಅತ್ಯಂತ ಉಜ್ಜ್ವಲವಾಗಿ ಬೆಳಗುವ ಕಾಯ ಆಕಾಶದಲ್ಲಿ ಶುಕ್ರ. ಪೂರ್ವ ದಿಕ್ಕಿನಲ್ಲಿ ವಜ್ರದಂತೆ ಹೊಳೆಯುವ ಶುಕ್ರ ಜನವರಿ ತಿಂಗಳ ಮುಂಜಾನೆ ಥಳ ಥಳ ಮಿನುಗುತ್ತದೆ. ಬೃಹತ್‌ಗಾತ್ರದ ಗುರು ನಮ್ಮ ಸೌರವ್ಯೂಹದ ಬೃಹದ್ದೇಹಿ. ೧,೪೩,೦೦೦ ಕಿಮೀ ದೂರದಲ್ಲಿರುವ ಅಂಬರಬಣ್ಣದ ಹೊಳಪಿನ ಈ ಗ್ರಹ ನೈರುತ್ಯ ಮತ್ತು ಪಶ್ಚಿಮದ ದಿಗಂತದ ನಡುವೆ ಜನವರಿ ಮಾಹೆಯಲ್ಲಿ ಸೂರ್ಯಾಸ್ತದ ನಂತರ ಉಜ್ಜ್ವಲವಾಗಿ ಹೊಳೆಯುತ್ತದೆ. ಇದರ ಮೇಲ್ಮೈನ ರಕ್ತಕಲೆಯನ್ನು ನೋಡಲು ದೂರದರ್ಶಕಬೇಕು. ಆಧಾರವೊಂದಕ್ಕೆ ನಿಮ್ಮ ದುರ್ಬೀನನ್ನು ಸ್ಥಿರಗೊಳಿಸಿ ಗುರುವನ್ನು ವೀಕ್ಷಿಸಿದ್ದೇ ಆದರೆ ಅದರ ೧೬ ಚಂದ್ರರ ಪೈಕಿ ೪ ಚಂದ್ರರನ್ನು ನೋಡಬಹುದು. ಇವು ೨ ರಿಂದ ೧೭ ದಿನಗಳಿಗೊಮ್ಮೆ ಗುರುವನ್ನು ಪರಿಭ್ರಮಿಸುತ್ತಿದ್ದು ಬಾನಿನಲ್ಲಿ ಮಿನುಗುತ್ತದೆ.

ಆಕಾಶಕಾಯ: ಶನಿ ಗುರುವಿಗಿಂತ ಗಾತ್ರದಲ್ಲಿ ಎರಡನೆಯದು. ಗ್ರಹಗಳಲ್ಲೆಲ್ಲ ಇದೊಂದು ಅನರ್ಘ್ಯರತ್ನ. ೨,೭೦,೦೦೦ ಕಿಮೀ ಅಗಲ ೧೦೦ ಮೀಟರ್ ದಪ್ಪದ ಇದರ ಉಂಗುರಗಳು ಅಥವಾ ಬಳೆಗಳು ಶನಿಗ್ರಹದ ಪ್ರಶಾಂತತೆಯನ್ನು ಅಧಿಕಗೊಳಿಸಿವೆ. ಈ ಬಳೆಗಳು ಪರಿಭ್ರಮಿಸುವ ಅಸಂಖ್ಯಾತ ಮಂಜು ಮತ್ತು ಧೂಳಿನ ಕಣಗಳಿಂದಾಗಿವೆ.

೧೯೮೦ರಲ್ಲಿ ಈ ಗ್ರಹ ತಲುಪಿದ ಅಮೆರಿಕಾದ ಬಾಹ್ಯಾಕಾಶನೌಕೆ ವಯೋಜರ್-೧, ಈ ಗ್ರಹದಲ್ಲಿ ಗಂಟೆಗೆ ೧೫೦೦ ಕಿಮೀ ವೇಗದಲ್ಲಿ ಬೀಸುವ ಚಂಡಮಾರುತದ ಬಗ್ಗೆ ಪುರಾವೆ ಒದಗಿಸಿದೆ. ಅತ್ಯಂತ ರಭಸದಲ್ಲಿ ಬೀಸುವ ಗಾಳಿ ನಮ್ಮ ಸೌರವ್ಯೂಹದಲ್ಲಿ ಇಲ್ಲಿ ಮಾತ್ರ.

ನಕ್ಷತ್ರಗಳ ನವಿರು ಪಥದೊಂದಿಗೆ ಹೋಲಿಸಿದಾಗ ಗ್ರಹಗಳ ಚಲನೆ ಎರ್‍ರಾಬಿರ್‍ರಿಯಾಗಿ ಕಾಣಿಸುತ್ತದೆ. ಪ್ರಾಚೀನ ಗ್ರೀಕರು ಭೂಮಿ ಕೇಂದ್ರವೆಂದೂ ಗ್ರಹಗಳು "ಅಲೆಮಾರಿಗಳು" ಎಂದು ಭಾವಿಸಿದ್ದರು. ಪ್ರಾಚೀನ ಭಾರತೀಯರ ದೃಷ್ಟಿಯಲ್ಲಿ ಗ್ರಹಗಳು ಒಂದು ನಕ್ಷತ್ರದಿಂದ ಮತ್ತೊಂದಕ್ಕೆ ತಮ್ಮಿಚ್ಛೆಯಂತೆ ಚಲಿಸುವ ಪ್ರಭಾವಶಾಲಿ ದೇವತೆಗಳೆಂಬ ಪೂಜ್ಯಭಾವನೆ. ಆದರೆ, ಗ್ರಹಗಳು ಸೂರ್ಯನ ಸುತ್ತ ಸುತ್ತುತ್ತವೆ ಎಂದು ೧೫೪೩ರಲ್ಲಿ ಕೂಪರ್‌ನಿಕಸ್ ತನ್ನ ವಾದ ಮಂಡಿಸಿದ. ಮುಂದೆ ಇಟಲಿಯ ಖಗೋಳಜ್ಞ ಗೆಲಿಲಿಯೋ ತಾನೇ ಹೊಸದಾಗಿ ನಿರ್ಮಿಸಿದ ದೂರದರ್ಶಕವನ್ನು ದಿಗಂತದೆಡೆಗೆ ತಿರುಗಿಸಿದ. ತಾನು ವೀಕ್ಷಿಸಿದ ಶುಕ್ರ ಗ್ರಹದ ಚಲನೆಯ ಮಜಲನ್ನು ತನ್ನ ಊಹೆಯೊಂದಿಗೆ ತಾಳೆ ಮಾಡಿ ದೃಢಪಡಿಸಿಕೊಂಡ. ಮುಂದೆ ಇದೇ ಆಧುನಿಕ ಖಗೋಳಶಾಸ್ತ್ರದ ಪ್ರಾರಂಭದ ಅಡಿಗಲ್ಲಾಯಿತು.

ಅಲ್ಲಿಂದೀಚೆಗೆ, ವಿಜ್ಞಾನ ತುಂಬಾ ಮುಂದುವರಿದಿದೆ. ವೈನ ಒಪ್ಪುರವರ ಸ್ಮರಣಾರ್ಥ ಅವರ ಹೆಸರಿನಲ್ಲಿ ಸ್ಥಾಪಿಸಲ್ಪಟ್ಟ ೧೫೫ ಟನ್ ತೂಗುವ ಬೃಹತ್ ಗಾತ್ರದ ಚಾಕ್ಷುಕ್ಷ ದೂರದರ್ಶಕವನ್ನು ತಮಿಳುನಾಡಿನ ಕವಲೂರಿನಲ್ಲಿ ಸ್ಥಾಪಿಸಲಾಗಿದೆ. ೬ ಕೋಟಿ ರೂ. ವೆಚ್ಚದ ಈ ದೂರದರ್ಶಕ ಭಾರತೀಯ ಇಂಜಿನಿಯರುಗಳಿಂದ ನಿರ್ಮಿಸಲ್ಪಟ್ಟಿದ್ದು ಇಡೀ ಏಷ್ಯಾದಲ್ಲೇ ಅತ್ಯಂತ ದೊಡ್ಡದು. ಕವಲೂರು ಸ್ಫಟಿಕದಂತ ನಿರ್ಮಲ ಆಕಾಶಕ್ಕೆ ಹೆಸರಾಗಿದೆ.

ಬ್ರಹ್ಮಾಂಡದಲ್ಲಿ (Galaxy) ನಮ್ಮ ಸೌರವ್ಯೂಹದ ಆಕಾಶಗಂಗೆಯಂತೆಯೇ ಅನೇಕ ಮಿಲಿಯನ್ ಆಕಾಶಗಂಗೆಗಳು ಇವೆ. ಪ್ರತಿಯೊಂದು ಆಕಾಶಗಂಗೆ ನಮ್ಮ ಸೂರ್ಯನಂತೆ ಮಿಲಿಯನ್‌ಗಟ್ಟಳೆ ತಾರೆಗಳನ್ನೊಳಗೊಂಡಿವೆ. ಅವುಗಳಲ್ಲಿ ಒಂದನ್ನು ದೂರದರ್ಶಕ ಬಳಸದೆ ನೋಡಬಹುದು. ಬೃಹತ್ ಸಿಂಬಿಯಂತಿರುವ ದ್ರೌಪದಿ ಅಥವಾ ದೇವಯಾನಿಯ ಮಂದ ನಕ್ಷತ್ರ ಪುಂಜದಲ್ಲಿ ಪ್ರಾಯಶಃ ೨,೦೦,೦೦೦ ಮಿಲಿಯನ್ ತಾರೆಗಳು ಇವೆ. ದಿಗ್ಭ್ರಮೆಗೊಳಿಸುವಷ್ಟು ಅತ್ಯಂತ ದೂರದಲ್ಲಿರುವ ದೇವಯಾನಿ ೨.೨ ಮಿಲಿಯನ್ ಜ್ಯೋತಿರ್ವರ್ಷಗಳಷ್ಟು ದೂರದಲ್ಲಿದ್ದರೂ ಬರಿಗಣ್ಣಿಗೆ ಸ್ಪಷ್ಟವಾಗಿ ಗೋಚರಿಸುತ್ತದೆ. ಮಾನವ ಭೂಮಂಡಲದಲ್ಲಿ ತಳವೂರುವ ಮುನ್ನಿನಿಂದಲೂ ಇದು ಇದೆ ಎಂದು ತಿಳಿದುಬಂದಿದೆ.

ಸಂಕ್ಷಿಪ್ತ ನೋಟ: ಖಗೋಳಶಾಸ್ತ್ರವು ವಿಜ್ಞಾನದಲ್ಲೇ ಅಸಮಾನ್ಯವಾದುದ್ದು. ಖಗೋಳಶಾಸ್ತ್ರದ ಅಭ್ಯಾಸದಲ್ಲಿ ಖಗೋಳ ಹವ್ಯಾಸಿಗಳು ಬಾನಿನ ಅಂಚಿನಲ್ಲಿದ್ದರೆ, ವೃತ್ತಿನಿರತರು ಅದರ ಸರಹದ್ದಿನ ಮೇಲೆ ದೃಷ್ಟಿ ಇಟ್ಟಿದ್ದಾರೆ. ಶ್ರದ್ಧಾಯುಕ್ತ ಹವ್ಯಾಸಿಗಳು ಮನೆಹತ್ತಿರವೇ ಕುಳಿತು ಬಾನಂಗಡಿಯಲ್ಲಿ ನಡೆಯುವ ಚದುರಂಗದಾಟವನ್ನು

ವೀಕ್ಷಿಸುತ್ತಾರೆ. ಕೆಲವರು ಸೂರ್ಯಗ್ರಹಣದ ಬಗ್ಗೆ ಮಾಹಿತಿ ಕಲೆಹಾಕಿದರೆ ಇತರರು ಪ್ರಕಾಶದಲ್ಲಾಗಲೀ ಪ್ರಮಾಣದಲ್ಲಾಗಲೀ ನಿಯತಕಾಲಿಕವಾಗಿ ಬದಲಾಯಿಸುತ್ತಿರುವ ತಾರೆಗಳನ್ನು ವೀಕ್ಷಿಸುತ್ತಾರೆ. ಪ್ರತಿ ವರ್ಷ ಒಂದು ನಿಗದಿತ ವೇಳೆಯಲ್ಲಿ—ಡಿಸೆಂಬರ್ ಮಾಹೆ ೭–೧೫, ಮೇ ೨–೭, ಜುಲೈ ೨೫, ಆಗಸ್ಟ್ ೧೮ ಗಗನ ವೀಕ್ಷಕರಿಗೆ ಅಂದು ಬಾನಿನಲ್ಲಿ ಸುಡುಮದ್ದಿನ ವಿನೋದದ ಓಕುಳಿಯಾಟ. "ನಕ್ಷತ್ರ ವೀಕ್ಷಣೆಯು ಒಂದು ಚಟವಿದ್ದಂತೆ. ಒಂದು ಸಾರಿ ಅದರ ಸ್ನೇಹಕ್ಕೆ ಮರುಳಾದರೆ ನೀವು ಶಾಶ್ವತವಾಗಿ ಅದರ ಹಂಗಿನಲ್ಲಿರುವಿರಿ" ಎನ್ನುತ್ತಾರೆ, ಉದಯಪುರದ ಖಗೋಳ ಕೇಂದ್ರದ ನಿರ್ದೇಶಕ ಶ್ರೀ ಅರವಿಂದ ಬಾಟ್ನಾಗರ್.

ಅನುವಾದ: ಎಸ್. ಎನ್. ಲಕ್ಷ್ಮೀಪತಿ

ಮಾನವ ಕುಲವೊಂದು ಮಹಾಸಾಗರ. ಕೆಲವು ಹನಿಗಳು ಹೊಲಸಾದರೆ ಇಡೀ ಸಾಗರ ಹೊಲಸಾಗುವುದಿಲ್ಲ.

ಕಲ್ಲು ಇಟ್ಟಿಗೆಗಳಿಂದ ಕಟ್ಟಿರುವ ಗುಡಿ ಗೋಪುರಗಳಿಗಿಂತ ನರ ಮಾಂಸಗಳಿಂದ ನಿರ್ಮಾಣವಾಗಿರುವ ಮಾನವ ಶರೀರಗಳೇ ನಿಜವಾದ ದೇವಾಲಯಗಳು.

ಗಾಂಧೀಜಿ

ಸೇಡು ಕೇವಲ ವಿನಾಶಕಾರಿ ಭಾವನೆಯೆ?

ದಯಾನಂದ ವರ್ಮಾ

ಒಂದು ವೇಳೆ ಯಾವುದಾದರೂ ವ್ಯಕ್ತಿ ನಮಗೆ ತೊಂದರೆ ಉಂಟು ಮಾಡಿದರೆ ಅಂತಹವನ ಹಿತಕ್ಕೆ ಧಕ್ಕೆ ಉಂಟುಮಾಡುವ ತೀವ್ರವಾದ ಬಯಕೆ ನಮ್ಮ ನಮ್ಮ ಮನಸ್ಸಿನಲ್ಲಿ ಹುಟ್ಟುವುದುಂಟು. ತೊಂದರೆಗೆ ಎದುರಾಗಿ ತೊಂದರೆಯನ್ನು ಉಂಟುಮಾಡುವಂತಹ ಪ್ರೇರಣೆ ಒದಗಿಸುವ ಈ ಭಾವನೆಗೆ 'ಸೇಡು' ಎಂದು ಹೆಸರು.

ಸೇಡು ಹುಟ್ಟುವುದು ಕೋಪದಿಂದ. ಆದರೆ ಸೇಡಿನ ಭೀಷಣ ಸ್ವರೂಪ ಕೋಪಕ್ಕಿಂತ ಮಿಗಿಲಾದುದು. ಕೋಪಗೊಂಡವ್ಯಕ್ತಿ ಉದ್ರೇಕಕ್ಕೆ ಒಳಗಾಗುತ್ತಾನೆ, ಆದರೆ ಈ ಉದ್ರೇಕ ಕೇವಲ ಕ್ಷಣಿಕವಾದದ್ದು, ಸ್ವಲ್ಪ ಹೊತ್ತು ಮಾತ್ರ ಇರುವಂತಹದು. ಆದರೆ ಸೇಡು ಸಾಧಿಸುವವನಲ್ಲಿ ಆ ಕೋಪವನ್ನು ಹಿಡಿದಿಟ್ಟು ಕೊಳ್ಳುವ ಮತ್ತು ಗುಪ್ತವಾಗಿಯೇ ಸಾಧಿಸಿಕೊಳ್ಳುವ ಶಕ್ತಿ ಇರುತ್ತದೆ. ಕೋಪೋದ್ರೇಕದಲ್ಲಿ ಒಬ್ಬ ವ್ಯಕ್ತಿ ತನಗೆ ತೊಂದರೆ ಉಂಟುಮಾಡಿದವನ ಮೇಲೆ ಆತುರದಿಂದಲೇ ಎರಗುತ್ತಾನೆ, ಆದರೆ ಆವೇಶ ಇಳಿದಮೇಲೆ ಆತುರದ ಜಾಗದಲ್ಲಿ ಪಾಶ್ಚಾತ್ತಾಪ ಮನೆ ಮಾಡುತ್ತದೆ. ಇದಕ್ಕೆ ಬದಲಾಗಿ ಸೇಡುತೀರಿಸಿಕೊಳ್ಳುವ ವ್ಯಕ್ತಿ ಯಲ್ಲಿ ಮೇಲ್ನೋಟಕ್ಕೆ ಆವೇಶ ಕಂಡುಬರುವುದಿಲ್ಲ. ಪ್ರಕಟವಾಗದ ರೂಪದಲ್ಲಿ ಉಂಟಾಗುವಂತಹ ಭಾವನೆ ಕ್ಷಣಿಕವಾದುದಾಗಿರುವು ದಿಲ್ಲ. ಈ ಭಾವನೆ ಸೇಡಿನ ಕಿಡಿ ಆರುವವರೆಗೆ ಒಳಗೇ ಭುಗಿಲೇಳು ತ್ತಿರುತ್ತದೆ. ಸೇಡಿನ ವ್ಯಕ್ತಿಯಲ್ಲಿ ಏಕಾಗ್ರಶಕ್ತಿ ಮೊನಚಾಗಿರು ತ್ತದೆ. ಕಂಪಾಸ್ ಅಥವಾ ದಿಕ್ಸೂಚಿಯ ಸೂಜಿ ಉತ್ತರದಕಡೆ ಮುಖ ಮಾಡಿರುವಂತೆ ಸೇಡುತೀರಿಸಿಕೊಳ್ಳುವ ಮನುಷ್ಯನಲ್ಲಿ ಅದನ್ನು ಹೇಗೆ ಕೈಗೂಡಿಸಿಕೊಳ್ಳಬೇಕು. ಎಂಬ ವಿಷಯದಲ್ಲಿ ಒಮ್ಮುಖವಾದ ಚಿಂತನೆ ನಡೆಯುತ್ತಿರುತ್ತದೆ. ಸೇಡನ್ನು ತೀರಿಸಿ ಕೊಂಡಮೇಲೆ ಅಂತಹ ವ್ಯಕ್ತಿಯ ಮನಸ್ಸಿನಲ್ಲಿ ಉಂಟಾಗುವ ಶಾಂತಿ ದೊಡ್ಡ ಸಾಲವನ್ನು ತೀರಿಸಿದಾಗ ಸಿಗುವ ನೆಮ್ಮದಿಗಿಂತ

ಯಾವ ಬಗೆಯಲ್ಲೂ ಕಡಿಮೆಯದಾಗಿರುವುದಿಲ್ಲ. ಈ ಕಾರಣದಿಂದಲೇ ಸಾಲಕ್ಕೆ ಸಂಬಂಧ ಪಟ್ಟಂತೆ 'ತೀರಿಸುವುದು' ಎಂಬ ಪದದ ಬಳಕೆಯಾಗುವಂತೆಯೇ ಸೇಡಿನ ಜೊತೆಯಲ್ಲೂ ಅದರ ಬಳಕೆಯಾಗುತ್ತದೆ. (ಉದಾಹರಣೆ—ಸೇಡುತೀರಿಸುವುದು) ಈ ಮಟ್ಟದಲ್ಲಿ ಸೇಡಿನ ವ್ಯಕ್ತಿಯ ಪಾಲಿಗೆ ಅದನ್ನು ತೀರಿಸುವುದು ಕರ್ತವ್ಯವೆನಿಸಿಕೊಂಡುಬಿಡುತ್ತದೆ. ಬಹುಶಃ ಇದರಿಂದಲೇ ಏನೋ ಹಿಂದಿನ ಕಾಲದಿಂದಲೂ ಸಾಲ ತೀರಿಸುವುದಕ್ಕೆ ಕೊಡುತ್ತಿದ್ದ ಮಹತ್ವವನ್ನೇ ಸೇಡುತೀರಿಸುವುದಕ್ಕೂ ಕೊಡುತ್ತಿದ್ದರು ಎನಿಸುತ್ತದೆ.

ಸೇಡಿನಭಾವನೆ ಬೇರೆಲ್ಲ ಪ್ರಾಣಿಗಳಿಗಿಂತ ಮನುಷ್ಯನಲ್ಲಿ ಹೆಚ್ಚಾಗಿರುವುದು ಕಂಡು ಬರುತ್ತದೆ. ಅದಕ್ಕೆ ಕಾರಣವೇನೆಂದರೆ ಉಳಿದ ಪ್ರಾಣಿಗಳಿಗಿಂತ ಮನುಷ್ಯನಿಗೆ ನೆನಪಿನ ಶಕ್ತಿ ಹೆಚ್ಚಾಗಿರುತ್ತದೆ. ಬೇರೆ ಪ್ರಾಣಿಗಳು ಕೋಪಗೊಳ್ಳಬಹುದು. ಸಿಟ್ಟಿನ ಭರದಲ್ಲಿ ತಮಗೆ ಅಪಕಾರ ಮಾಡಿದವರನ್ನು ಹಿಡಿದು ಕೊಲ್ಲಬಹುದು. ಆದರೆ ಇದು ಮುಯ್ಯಿಗೆ ಮುಯ್ಯಿ ಎಂದು ಕರೆಸಿಕೊಳ್ಳುವಂತಹ ಸೇಡಿನ ಭಾವನೆಯಲ್ಲಿ ಸೇಡಿನ ಲೆಕ್ಕಾಚಾರಗಳು ತುಂಬಾಕಾಲ ನಡೆಯುವಂತಹವು. ನೆನಪಿನ ಶಕ್ತಿ ಪ್ರಬಲವಾಗಿರುವಂಥ ಪ್ರಾಣಿಗಳು ಮಾತ್ರ ಈ ಭಾವನೆಯನ್ನು ಹೆಚ್ಚುಕಾಲ ಕಾಪಾಡಿಕೊಂಡು ಬರಬಲ್ಲವು.

ಸೇಡಿನ ಭಾವನೆ ಮನುಷ್ಯಜಾತಿಯ ಪ್ರತಿಯೊಂದು ವರ್ಗದಲ್ಲೂ ಪ್ರತಿಯೊಂದು ಕಾಲದಲ್ಲೂ ಇರುವುದೇ ಆಗಿದೆ. ರಾಜಕೀಯ ಇಲ್ಲವೇ ಸಾಮಾಜಿಕ ವ್ಯಾಪಾರೋದ್ಯಮ ಇಲ್ಲವೇ ಧಾರ್ಮಿಕ, ಅಪರಾಧ ಅಥವಾ ಪ್ರಣಯ ಸಂಬಂಧಗಳು ಹೀಗೆ ಯಾವುದೇ ಕ್ಷೇತ್ರನನ್ನು ತೆಗೆದುಕೊಂಡರೂ ಇದು ಕಂಡುಬರುತ್ತದೆ. ಮನುಷ್ಯ ಸಮಾಜದಲ್ಲಿ ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ಎಲ್ಲಿಯವರೆಗೆ ತೊಂದರೆ ಉಂಟಾಗುತ್ತಿರುತ್ತದೋ ಅಲ್ಲಿಯವರೆಗೆ ಇದು ಅಳಿಯುವ ಹಾಗಿಲ್ಲ.

ಸೇಡು ಎಲ್ಲ ಮನುಷ್ಯರಲ್ಲೂ ಒಂದೇ ಪ್ರಮಾಣವಲ್ಲಿರುವುದಿಲ್ಲ. ಒಬ್ಬ ವ್ಯಕ್ತಿ ಈ ಭಾವನೆಗೆ ಹೆಚ್ಚು ಈಡಾದರೆ ಅವನಲ್ಲಿ ಇದು ವಿಪರೀತವಾಗಿ ಬೇರೂರಿ ಇತರ ಭಾವನೆಗಳನ್ನು ಮೆಟ್ಟಿ ನಿಲ್ಲುತ್ತದೆ. ಇಂಥ ವ್ಯಕ್ತಿ ಯಾವಾಗಲೂ ಜೀವವಿರುವ, ಇಲ್ಲವೇ ಜೀವವಿಲ್ಲದಿರುವ ಎಲ್ಲದರ ಮೇಲೂ ಸೇಡು ತೀರಿಸಿಕೊಳ್ಳುವ ಬಗ್ಗೆ ಯೋಚಿಸುತ್ತಿರುತ್ತಾನೆ.

ಸೇಡು ತೀರಿಸಿಕೊಳ್ಳುವ ಅಭ್ಯಾಸಕ್ಕೆ ಪ್ರೇರಣೆ ಸಿಗುವುದು ಎಳೆತನದಿಂದಲೇ ಪ್ರಾರಂಭವಾಗುತ್ತದೆ. ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಸಲುವಾಗಿ ಮನುಷ್ಯ ಅಗತ್ಯಕ್ಕಿಂತ ಹೆಚ್ಚು ತತ್ಪರನಾದರೆ ಈ ಅಭ್ಯಾಸಕ್ಕೆ ಪ್ರೇರಣೆ ದೊರಕಿದ ಹಾಗಾಗುತ್ತದೆ. ಇಂಥ ಸೂಕ್ಷ್ಮ ಸಂವೇದಿಯಾದ ವ್ಯಕ್ತಿಗೆ ತನಗೆ ಉಂಟಾಗುತ್ತಿರುವ ಅಹಿತವೇ ಹೆಚ್ಚು ಮನಸ್ಸಿಗೆ ಬರುತ್ತದೆ. ಹಾಗೂ ಅವನು ಆಲೋಚಿಸುವ ಮತ್ತು ಅರ್ಥಮಾಡಿಕೊಳ್ಳುವ ಬಗೆ ಸಾಮಾಜಿಕವಾಗಿರದೆ ವ್ಯಕ್ತಿಗತವಾಗಿ ಬಿಡುತ್ತದೆ. ತನ್ನ ಸ್ವಂತ ಹಿತದ ಬಗ್ಗೆ ತೀವ್ರವಾಗಿ ಚಿಂತಿಸುವ ಈ ಭಾವನೆ ಯಾವುದೇ ಮನುಷ್ಯನನ್ನು ಸೇಡಿನ ದಾರಿಯಲ್ಲಿ ತೊಡಗಿಸಲು ಸಾಕು.

ನಾಗರಿಕ ಸಮಾಜದಲ್ಲಿ ಸೇಡಿನ ಈ ಭಾವನೆಗೆ ಅಷ್ಟಾಗಿ ಮಹತ್ವ ಕೊಡದೇ ಹೋದರೂ ಅನಾಗರಿಕ ಸಮಾಜಗಳಲ್ಲಿ ಇದು ಅಷ್ಟೇ ಪ್ರಶಂಸೆಗೆ ಪಾತ್ರವಾಗಿದೆ. ಅನೇಕ

ಅನಾಗರಿಕ ಜಾತಿ ಮತ್ತು ಬುಡಕಟ್ಟುಗಳಲ್ಲಿ ಒಬ್ಬ ಮನುಷ್ಯ ಸೇಡುತೀರಿಸಿಕೊಳ್ಳದೆ ಹೋದರೆ ಅವನ ಗಂಡಸುತನವನ್ನೇ ಸಂದೇಹಕ್ಕೆ ಒಡ್ಡಲಾಗುತ್ತದೆ. ಅಂತೆಡೆಗಳಲ್ಲಿ ಸೇಡಿಗೆ ಸಾಮಾಜಿಕ ಮನ್ನಣೆ ಉಂಟು. ತಲೆಮಾರಿನಿಂದ ತಲೆಮಾರಿಗೆ ಸೇಡು ಕೂಡ ಮುಂದುವರಿಯುತ್ತದೆ. ಒಂದು ವೇಳೆ ಶಿಕ್ಷಿತವಲ್ಲದ ಸಮಾಜದಲ್ಲಿ ಈ ಭಾವನೆಯನ್ನು ಅನಾಮತ್ತಾಗಿ ಅಳಿಸಿಹಾಕಿಬಿಟ್ಟದ್ದಲ್ಲಿ ಸ್ವಲ್ಪಕಾಲ ಆ ಜನರಿಗೆ ಕಾಲ ಹೇಗೆ ಕಳೆಯುವುದೆಂಬುದೇ ದೊಡ್ಡ ಸಮಸ್ಯೆಯಾಗಬಹುದು.

ಸೇಡಿನಭಾವನೆಗೆ ಕೆಟ್ಟಹೆಸರು ಬರುವುದರಲ್ಲಿ ನಾಗರಿಕ ಸಮಾಜದ ಪಾತ್ರ ಹೆಚ್ಚು. ಆದರೆ ಸಮಾಜಕ್ಕೆ ಇದರಿಂದ ಏನು ಉಪಕಾರವಾಗಿದೆ ಅದರ ಬಗ್ಗೆ ಯಾರೂ ಹೆಚ್ಚು ಯೋಚಿಸುವ ಗೋಜಿಗೆ ಹೋಗಿರುವುದಿಲ್ಲ. ದುರ್ಬಲವಾದ ಮನುಷ್ಯನನ್ನು ಬಲಶಾಲಿಯಾದ ಮನುಷ್ಯನಿಂದ ಉಳಿಸಲು ಯಾವುದೇ ಬಗೆಯ ಹೆದರಿಕೆ ಇಲ್ಲದ ಸಮಾಜವೊಂದನ್ನು ಕಲ್ಪಿಸಿಕೊಳ್ಳಿ. ಅತ್ಯಾಚಾರ ಮಾಡುವುದನ್ನು ಅಂಥ ಕಡೆಗಳಲ್ಲಿ ತಡೆಗಟ್ಟುವವರಾರು? ಆಗ ಬಲಶಾಲಿ ತನ್ನ ಅತ್ಯಾಚಾರವನ್ನು ಕಡಿಮೆಮಾಡುವಂತೆ ಅವನನ್ನು ನಿಯಂತ್ರಿಸುವ ಯಾವುದಾದರೂ ಭಯದ ಅವಶ್ಯಕತೆ ಕಂಡುಬರುತ್ತದೆ. ಅನೇಕ ಸಂದರ್ಭಗಳಲ್ಲಿ ಸಾಧನ ಸೌಲಭ್ಯಗಳನ್ನು ಹೊಂದಿರುವವರು ಅವುಗಳಿಲ್ಲದವರ ಮೇಲೆ ಅತ್ಯಾಚಾರವೆಸಗುವುದನ್ನು ತಡೆಯುವ ಹಾದಿಯಲ್ಲಿ ಸೇಡು ಒಂದು ಮುಖ್ಯವಾದ ಉಪಕರಣ. ಕೆಲವೊಮ್ಮೆ ಯಾವುದೇ ಅಡೆತಡೆಯಿಲ್ಲದೆ ದೀನ ದುರ್ಬಲರ ಮೇಲೆ ಅತ್ಯಾಚಾರಗಳು ನಡೆದಲ್ಲಿ ಅವರು ಒಟ್ಟುಗೂಡಿ ಸೇಡನ್ನು ತೀರಿಸಿಕೊಳ್ಳಲು ಪ್ರತಿಭಟಿಸಿ ನಿಲ್ಲುತ್ತಾರೆ. ಸೇಡಿನ ಈ ಬಗೆ 'ಕ್ರಾಂತಿ' ಎಂದು ಕರೆಸಿಕೊಳ್ಳುತ್ತದೆ.

ಪ್ರತಿಯೊಂದು ಯುಗದಲ್ಲೂ ಸೇಡು ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಾ ಹೋಗುತ್ತದೆ. ಮಾನವ ನಾಗರಿಕತೆಯ ಮೂಸೆಯಲ್ಲಿ ಅಚ್ಚಿಳಿಯುತ್ತಾ ಬಂದಂತೆಲ್ಲ, ಸೇಡಿಗೆ ನವಿರಾದ ರೂಪವನ್ನು ಕೊಡುತ್ತಾ ಬಂದಿದ್ದಾನೆ. ಈ ರೂಪ ಏನೆಂಬುದನ್ನು ತಿಳಿದುಕೊಳ್ಳುವುದಕ್ಕಿಂತ ಮುಂಚೆ ಮಾನವಕುಲ ನಡೆದುಬಂದ ಹಾದಿಯನ್ನು ಎರಡು ಮಾತುಗಳಲ್ಲಿ ನೆನಪಿಸಿಕೊಳ್ಳುವುದು ಉಚಿತವೆನಿಸುತ್ತದೆ.

ಬುಡಕಟ್ಟುಗಳಲ್ಲಿ ವಾಸಮಾಡುತ್ತಿದ್ದ ಅನಾಗರಿಕ ಜನ ನಾಗರಿಕರಾಗ ತೊಡಗಿದಾಗ ರಾಜನ ಆಳ್ವಿಕೆ ಅಸ್ತಿತ್ವಕ್ಕೆ ಬಂತು. ಪ್ರಜೆಗಳ ರಕ್ಷಣೆಯ ಹೊಣೆಯನ್ನು ಆಡಳಿತ ನಡೆಸುವವರು ತಮ್ಮ ಜವಾಬ್ದಾರಿಯನ್ನಾಗಿ ಮಾಡಿಕೊಂಡರು. ಹೊಡೆದಾಟ ಬಡಿದಾಟಗಳಲ್ಲೇ ತೊಡಗಿರಬೇಕಾಗಿದ್ದ ಜನರಿಗೆ ಸ್ವಲ್ಪ ಮಟ್ಟಿಗೆ ಬಿಡುವು ನೆಮ್ಮದಿಗಳು ದೊರೆತವು. ಇದರಿಂದ ಶಾರೀರಿಕ ಬಲವನ್ನು ಉಪಯೋಗಿಸುವುದರಲ್ಲಿ ಇದ್ದ ಮಹತ್ವ ಕಡಿಮೆಯಾಯಿತು. ಬುದ್ಧಿಬಲ ಮತ್ತು ಹಣಬಲಗಳಿಗೆ ಹೆಚ್ಚಿನ ಮನ್ನಣೆ ದೊರೆಯಿತು. ಅಧಿಕಾರ ಎಂಬುದು ಬುದ್ಧಿ ಮತ್ತು ಹಣವುಳ್ಳವರ ಕೈಸೇರಿತು. ರಾಜ್ಯದಲ್ಲಿ ಆಡಳಿತ ವ್ಯವಸ್ಥೆಯನ್ನು ಸುಸೂತ್ರವಾಗಿ ನಡೆಸಲು ಸೇಡು ಸಹ ಒಂದು ಆವಶ್ಯಕ ಅಂಶವೆಂಬುದನ್ನು ಅವರು ಮನಗಂಡರು. ಪ್ರತಿಯೊಬ್ಬ ವ್ಯಕ್ತಿಗೂ ವೈಯಕ್ತಿಕವಾಗಿ ಸೇಡು ತೀರಿಸಿಕೊಳ್ಳುವ ಅವಕಾಶವನ್ನು ಕೊಟ್ಟರೆ ಸೇಡಿನ ಅಭ್ಯಾಸದ ತೆಕ್ಕೆಗೆ ಬಿದ್ದ ಮನುಷ್ಯ ಈ ಅವಕಾಶವನ್ನು ದುರುಪಯೋಗಪಡಿಸಿಕೊಳ್ಳಬಹುದು ಎಂಬುದನ್ನು ಅವರು ಅರಿತು

ಕೊಂಡರು. ಆದ್ದರಿಂದ ಪ್ರಜೆಗಳ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತ ಆಡಳಿತಾರೂಢರೇ ಸೇಡಿನ ಹೊಣೆಗಾರಿಕೆಯನ್ನು ಹೊತ್ತುಕೊಂಡರು. ತೊಂದರೆಗೊಳಗಾದ ಜನರು ತಮಗೆ ಉಂಟಾದ ತೊಂದರೆಯ ಪೂರ್ಣ ವಿವರಗಳನ್ನು ಸರ್ಕಾರಕ್ಕೆ ಕೊಡತಕ್ಕದ್ದೆಂದೂ, ಸರ್ಕಾರ ತನಗೆ ಉಚಿತವಾದ ರೀತಿಯಲ್ಲಿ ತೊಂದರೆಯನ್ನು ಉಂಟುಮಾಡಿದವರ ವಿರುದ್ಧ ಕ್ರಮತೆಗೆದುಕೊಂಡು ದಂಡಿಸತಕ್ಕದ್ದೆಂದೂ ತೀರ್ಮಾನವಾಯಿತು. ಸೇಡು ತೀರಿಸಿಕೊಳ್ಳುವ ಈ ಹೊಸ ರಾಷ್ಟ್ರೀಯ ಪ್ರಕಾರಕ್ಕೆ ಹೊಸ ಹೆಸರನ್ನಿಟ್ಟರು—'ಶಿಕ್ಷೆ'.

ಯಾರ ಮನಸ್ಸಿಗೆ ನೋವು ಅಥವಾ ಧಕ್ಕೆ ಉಂಟಾಗಿದೆ, ಅಂಥವರಿಗೆ ಸಮಾಧಾನ ಸಿಗಬೇಕೆಂಬುದು ಈ ಶಿಕ್ಷೆಯ ವ್ಯವಸ್ಥೆಯ ಒಂದು ಧ್ಯೇಯ. ಇದರ ಇನ್ನೊಂದು ಮುಖ್ಯ ಉದ್ದೇಶವೆಂದರೆ ಈವರೆಗೆ ಯಾರು ಇಂಥ ಅಹಿತಕರವಾದ ಕೆಲಸಗಳಲ್ಲಿ ಭಾಗವಹಿಸಿಲ್ಲವೊ, ಅವರು ಮುಂದೆಯೂ ಶಿಕ್ಷೆಯ ಭಯದಿಂದಾಗಿ ಭಾಗವಹಿಸದಿರಲಿ ಎಂಬುದು.

ಈ ವ್ಯವಸ್ಥೆ ಇವತ್ತಿನವರೆಗೂ ನಡೆದುಕೊಂಡುಬಂದಿದೆ. ಆದರೆ ಕೆಲವು ಜನ ತಮ್ಮ ಸೇಡಿನ ವಿಚಾರವನ್ನು ಸರ್ಕಾರಕ್ಕೆ ಒಪ್ಪಿಸಲು ಇಷ್ಟಪಡುವುದಿಲ್ಲ. ಸರಕಾರದ ಮೂಲಕ ನ್ಯಾಯ ತೀರ್ಮಾನ ಆಗುವುದರಲ್ಲಿ ವಿಳಂಬವಾಗುವುದನ್ನು ಅವರು ಸಹಿಸಲಾರರು. ಹಾಗಿಲ್ಲದೆ ಹೋದರೂ ಕಾನೂನಿನ ದೃಷ್ಟಿಯಲ್ಲಿ ಆರೋಪಿಯನ್ನು ಅಪರಾಧಿಯೆಂದು ಸಾಬೀತುಪಡಿಸಲು ಸಾಧ್ಯವಾಗದೆಂಬ ಭಾವನೆ ಅವರಿಗಿರುತ್ತದೆ. ಬಹಳ ಕಾಲ ಸೇಡಿನ ಬೆಂಕಿಯಲ್ಲಿ ಉರಿಯುವ ಬದಲು ಸೇಡು ತೀರಿಸಿಕೊಳ್ಳುವ ಹೊಣೆಗಾರಿಕೆಯನ್ನು ಅವರು ತಾನೇ ಹೊರಬಯಸುತ್ತಾರೆ. ಆದರೆ ಅವರ ಇಂಥ ನಡೆಯನ್ನು ಸರ್ಕಾರ ಒಪ್ಪುವುದಿಲ್ಲ. ತನ್ನ ಪ್ರತಿಷ್ಠೆಗೆ ಧಕ್ಕೆ ಉಂಟಾಯಿತೆಂದು ಅದು ಭಾವಿಸುತ್ತದೆ. ಹೀಗೆ ನಡೆಯಲು ಅವಕಾಶವಿತ್ತರೆ, ಉಳಿದವರು ಕೂಡ ತಮ್ಮ ಮನಸ್ಸಿಗೆ ಬಂದಹಾಗೆ ಸೇಡು ತೀರಿಸಿಕೊಂಡಾರು ಎಂಬ ಭಯದಿಂದ ಸರಕಾರ ಯಾರು ತನ್ನ ಕಾನೂನುನಿರ್ವಹಣೆಗೆ ತಲೆಬಾಗುವುದಿಲ್ಲವೋ ಅಂಥವರಿಗೇ ಶಿಕ್ಷೆ ನೀಡಲು ಮುಂದಾಗುತ್ತದೆ. ಸೇಡು ತೀರಿಸಿಕೊಳ್ಳಲು ಬಲವಾದ ಬಯಕೆಯಿರುವ ವ್ಯಕ್ತಿ ತಾನು ಅದರಲ್ಲಿ ಯಶಸ್ವಿಯಾದಾಗ, ಅದೆಷ್ಟು ನೆಮ್ಮದಿಯಲ್ಲಿ ಮುಳುಗಿಹೋಗುತ್ತಾನೆಂದರೆ ಅವನಿಗೆ ಸರ್ಕಾರದಿಂದ ಲಭಿಸುವ ಶಿಕ್ಷೆಯ ಪರಿವೆಯೆ ಇರುವುದಿಲ್ಲ. ಅಂಥ ಶಿಕ್ಷೆ ಅವನ ದೃಷ್ಟಿಯಲ್ಲಿ ಕ್ಷುಲ್ಲಕವೆನಿಸುತ್ತದೆ. ಸರಿಯಾದ ರೀತಿಯಲ್ಲಿ ಸೇಡು ತೀರಿಸಿಕೊಂಡ ಸಮಾಧಾನ ದೊರೆಯಿತೆಂದರೆ ಅವನ ಪಾಲಿಗೆ ಉಳಿದ ಕಷ್ಟನಷ್ಟಗಳೆಲ್ಲವೂ ತೃಣಕ್ಕೆ ಸಮಾನ.

ಸರಕಾರ ಒಂದು ವೇಳೆ ಯಾವುದು ಸರಿ ಯಾವುದು ತಪ್ಪು ಎಂಬುದನ್ನು ಸೂಕ್ತವಾಗಿ ತೀರ್ಮಾನಿಸುವುದರಲ್ಲಿ ವಿಫಲಗೊಂಡರೆ ಅಥವಾ ಶಿಕ್ಷೆಗೊಳಗಾಗಬೇಕಾದ ವ್ಯಕ್ತಿ ತನ್ನ ಸಾಧನಸಂಪತ್ತುಗಳ ಬಲದಿಂದ ಉಳಿದುಕೊಂಡರೆ ಅಥವಾ ತಪ್ಪು ಮಾಡದ ಮನುಷ್ಯ ಶಿಕ್ಷೆಗೊಳಗಾದರೆ ಅಂಥ ಕಾನೂನು ಮತ್ತು ಶಿಕ್ಷೆಯ ವ್ಯವಸ್ಥೆ ಜನರಲ್ಲಿ ಅಸಮಾಧಾನದ ಭುಗಿಲೆಬ್ಬಿಸುತ್ತದೆ. ಇಂಥ ಪರಿಸ್ಥಿತಿ ಮುಂದುವರೆದರೆ ಉಳ್ಳವರು ಯಾವ ಬಗೆಯ ಸಾಮಾಜಿಕ ಅಹಿತವನ್ನು (ಅಪರಾಧವನ್ನು) ಮಾಡಿ ಧಕ್ಕಿಸಿಕೊಳ್ಳಬಲ್ಲವರಾಗುತ್ತಾರೆ. ಜನತೆಯಲ್ಲಿ ಅಸಮಾಧಾನ ಬೆಳೆಯುತ್ತಲೆ ಹೋಗುತ್ತದೆ. ತಾವು ಕೊಟ್ಟಂತಹ ಅಧಿಕಾರಗಳನ್ನು ಸವಲತ್ತುಗಳನ್ನು ಸರಕಾರ ಅನುಚಿತವಾಗಿ ಬಳಸಿಕೊಳ್ಳು

ತ್ತಿದೆ ಎಂಬ ಹಿನ್ನೆಲೆಯಲ್ಲಿ ಅಸಂತುಷ್ಟರಾದ ಜನ ಸರಕಾರದ ವಿರುದ್ಧವಾಗಿಯೆ ಸೇಡು ತೀರಿಸಿಕೊಳ್ಳಲು ಮುಂದಾಗುತ್ತಾರೆ. ಇಂಥ ಸಂದರ್ಭದಲ್ಲಿ ಒಬ್ಬ ದೃಢಮನಸ್ಸುಳ್ಳ, ಶಕ್ತಿಶಾಲಿಯಾದ ಮತ್ತು ಸರಕಾರದ ಧೋರಣೆಗಳಿಗೆ ವಿರುದ್ಧವಾಗಿರುವ ವ್ಯಕ್ತಿಯ ಮುಂದಾಳುತನ ದೊರೆಯಿತೆಂದರೆ ಸರಕಾರ ಉರುಳಿಹೋಗುತ್ತದೆ. ಈ ಬಗೆಯಲ್ಲಿ ಸಾಮೂಹಿಕವಾಗಿ ಸೇಡುತೀರಿಸಿಕೊಳ್ಳುವ ಕ್ರಮಕ್ಕೆ 'ಕ್ರಾಂತಿ' ಎಂದು ಹೆಸರು.

ಕೆಲವಾರು ಸಂದರ್ಭಗಳಲ್ಲಿ ಸರಕಾರಕ್ಕೆ ಇಷ್ಟವಿದ್ದರೂ ಉಚಿತವಾದ ಶಿಕ್ಷೆ ನೀಡುವುದರಲ್ಲಿ ಅದು ವಿಫಲವಾಗುತ್ತದೆ. ಶಿಕ್ಷಣದ ಪ್ರಸಾರ ಹೆಚ್ಚುತ್ತಿರುವಂತೆಯೆ ಈ ಅಸಹಾಯಕ ಸ್ಥಿತಿ ಸಹ ತೀವ್ರಗೊಳ್ಳುತ್ತಿದೆ. ನಾವು ಯಾವುದನ್ನು ಏಳಿಗೆ ಎಂದು ಹೇಳಿಕೊಳ್ಳುತ್ತಿದ್ದೇವೆಯೊ ಅಂತಹ ಏಳಿಗೆಯ ಹಾದಿಯಲ್ಲಿ ಮುನ್ನಡೆದಂತೆಲ್ಲ ನಮ್ಮ ಮನೋವಿಕೃತಿಗಳನ್ನು ಹೆಚ್ಚು ಹೆಚ್ಚು ಕ್ಲಿಷ್ಟಗೊಳಿಸಿಕೊಳ್ಳುತ್ತಿದ್ದೇವೆ. ಪ್ರತೀಕಾರದ ಭಾವನೆಯನ್ನು ಹತ್ತಿಕ್ಕುವಷ್ಟು ದೊಡ್ಡವರಾಗಿ ನಾವಿನ್ನೂ ಬೆಳೆದಿಲ್ಲ. ಆದರೆ ನಮ್ಮ ಮನಸ್ಸಿನಲ್ಲಿ ಉಂಟಾಗುವ ಸೇಡಿನ ಅಹಿತಕಾರಿ ಭಾವನೆಗಳಿಗೆ ಎಂಥ ರೂಪವನ್ನು ಕೊಡುತ್ತೇವೆಂದರೆ ಸೇಡೂ ತೀರಬೇಕು, ಆದರೆ ಸರ್ಕಾರ ಇಲ್ಲವೆ ಸಮಾಜಕ್ಕೆ ಸ್ವಲ್ಪವೂ ಅದರ ಸುಳಿವು ದೊರೆಯಬಾರದು, ಯಾವ ಪುರಾವೆಯೂ ಸಿಕ್ಕಬಾರದು.

'ಪ್ರಾಣಕ್ಕೆ ಬದಲಾಗಿ ಪ್ರಾಣ ತೆಗೆಯುವ' ಸ್ವರೂಪದ ಸೇಡಿನ ಭಾವನೆ ಇಂದು ಕೇವಲ ಅಪರಾಧಿಗಳ ಪ್ರಪಂಚದಲ್ಲಿ ಮಾತ್ರ ಪ್ರಚಲಿತವಾಗಿದೆ. ಆದರೆ ನಾಗರಿಕ ಸಮಾಜದಲ್ಲಿ ಮಾನಸಿಕ ಯಾತನೆಯನ್ನು ಉಂಟುಮಾಡಿ ತೊಂದರೆ ಕೊಡುತ್ತಾರೆ ಹಾಗೂ ಅದೇ ಬಗೆಯ ಮಾನಸಿಕ ಯಾತನೆಯನ್ನು ಕೊಟ್ಟೆ ಸೇಡು ತೀರಿಸಿಕೊಳ್ಳುತ್ತಾರೆ.

ಯಾವುದೇ ಒಬ್ಬ ಮನುಷ್ಯ ತನ್ನ ಕಾರ್ಯಕ್ಷೇತ್ರದಲ್ಲಿ ಯಶಸ್ಸನ್ನು ಪಡೆಯದೆ ಹೋದರೆ, ಕೆಲವೊಮ್ಮೆ ತನ್ನ ಸಹೋದ್ಯೋಗಿಗಳ ಯಶಸ್ಸನ್ನುಕಂಡು ಕರುಬತೊಡಗುತ್ತಾನೆ. ಈ ರೀತಿ ಕರುಬುವುದನ್ನೇ ಹೊಟ್ಟೆಕಿಚ್ಚು ಅಥವಾ ಈರ್ಷ್ಯೆ ಎನ್ನುತ್ತೇವೆ. ಒಂದು ವೇಳೆ ಈ ಮನುಷ್ಯ ತನ್ನ ಅಸಫಲತೆಗೆ ಯಶಸ್ವಿಯಾದ ಇನ್ನೊಬ್ಬ ಸಹೋದ್ಯೋಗಿ ಕಾರಣನೆಂದು ಭಾವಿಸಿಕೊಂಡು ಅವನನ್ನು ಕೆಳಗೆ ಬೀಳಿಸುವ ಕೆಲಸಕ್ಕೆ ಕೈಹಾಕುತ್ತಾನೆ. ತನ್ನ ವೈಫಲ್ಯಕ್ಕೆ ಆ ಇನ್ನೊಬ್ಬನೇ ಕಾರಣನೆಂದು ಬಗೆದು ಸೇಡು ತೀರಿಸಿಕೊಳ್ಳಲೆಣಿಸುತ್ತಾನೆ. ಇದರಲ್ಲಿ ಆ ಯಶಸ್ವಿ ವ್ಯಕ್ತಿಯು ಕುತಂತ್ರವಿರಲಿ ಬಿಡಲಿ ಆ ಬಡಪಾಯಿ ಸೇಡಿಗೆ ಬಲಿಪಶುವಾಗಬೇಕಾಗುತ್ತದೆ.

ಈಗ ನಾವು ನಮ್ಮ ಅನುಕೂಲಕ್ಕೋಸ್ಕರ ಸೇಡು ಎಂಬ ಈ ಭಾವನೆಯ ಎರಡು ರೂಪಗಳಿಗೆ ಬೇರೆಬೇರೆ ಹೆಸರುಗಳನ್ನು ಇಡೋಣ. ಒಂದನ್ನು ನಾವು ಆವೇಶ ಪ್ರಧಾನವಾದ ಸೇಡೆಂದು ಇನ್ನೊಂದನ್ನು ಈರ್ಷ್ಯಾ ಪ್ರಧಾನವಾದ ಸೇಡೆಂದೂ ಕರೆಯೋಣ. ಅಲ್ಲದೆ ಸೇಡಿನಂತೆಯೆ ಹೊಟ್ಟೆಕಿಚ್ಚು ಸಹ ಕೋಪದಿಂದಲೇ ಹುಟ್ಟಿದ ಭಾವನೆಯೆಂಬುದನ್ನು ನಾವು ಮರೆಯುವ ಹಾಗಿಲ್ಲ. ಆದರೆ ವ್ಯತ್ಯಾಸವೆಂದರೆ ಹೊಟ್ಟೆಕಿಚ್ಚಿನಲ್ಲಿ ಸಕ್ರಿಯತೆಗಿಂತಲೂ ಮಿಗಿಲಾಗಿ ಅಕರ್ಮಣ್ಯತೆ ಮನೆಮಾಡಿರುತ್ತದೆ. ಅಂದರೆ ಸುಮ್ಮನೆ ಕುಳಿತುಕೊಂಡು ಒಳಗೊಳಗೇ ಅಸೂಯೆಪಟ್ಟುಕೊಳ್ಳುವುದು ಹೊಟ್ಟೆಕಿಚ್ಚಿಗೆ ತುತ್ತಾದವರ ಲಕ್ಷಣ. ಆದರೆ ಸೇಡಿನಲ್ಲಿ ಕ್ರಿಯಾಶೀಲತೆಯಿದೆ. ಕೋಪದ ಈ ಎರಡು ಮುಖಗಳೂ

ಒಂದರೊಡನೊಂದು ಸೇರಿಕೊಂಡಾಗ ಒಂದರ ಗುಣಸ್ವರೂಪಗಳನ್ನು ಇನ್ನೊಂದು ಗ್ರಹಿಸುತ್ತದೆ. ಸೇಡಿನ ಕರ್ಮಣ್ಯಭಾವನೆಯನ್ನು ಪಡೆದುಕೊಂಡು ಹೊಟ್ಟೆಕಿಚ್ಚು ಸ್ವಲ್ಪಮಟ್ಟಿಗೆ ಕ್ರಿಯಾಶೀಲವಾಗುತ್ತದೆ, ಹಾಗೂ ಹೊಟ್ಟೆಕಿಚ್ಚಿನ ಅಕರ್ಮಣ್ಯತೆಯನ್ನು ಪಡೆದುಕೊಂಡು ಸೇಡು ಕೆಲವು ವೇಳೆ ಅಂತರ್ಮುಖಿಯಾಗುತ್ತದೆ.

ಆವೇಶಪ್ರಧಾನವಾದ ಹಾಗೂ ಈರ್ಷ್ಯಾ ಪ್ರಧಾನವಾದ ಸೇಡಿನ ಬಗೆಗಳಲ್ಲಿ ಇರುವ ಮುಖ್ಯವಾದ ವ್ಯತ್ಯಾಸವೆಂದರೆ ಮೊದಲನೆಯದು ಯಾವುದೇ ಎಗ್ಗಿಲ್ಲದೆ ಎದುರಾಗುತ್ತದೆಯಾದರೆ ಎರಡನೆಯದು ಮರೆಯಲ್ಲಿಯೆ ಅಡಗಿ ಕುಳಿತಿರುತ್ತದೆ. ಮೊದಲನೆಯದು ತೀವ್ರವಾದಾಗ ಶಾರೀರಿಕವಾಗಿ ಕೇಡನ್ನು ಉಂಟುಮಾಡಬಯಸುತ್ತದೆಯಾದರೆ ಎರಡನೆಯದು ಇನ್ನೊಬ್ಬರನ್ನು ಕೆಳಕ್ಕೆ ತಳ್ಳುವುದರಲ್ಲಿ ಅಥವಾ ಎಳೆಯುವುದರಲ್ಲಿ ಸಾರ್ಥಕತೆಯನ್ನು ಕಾಣಬಯಸುತ್ತದೆ. ಶಾರೀರಿಕವಾಗಿ ಬಲಶಾಲಿಗಳಾಗಿರುವುದನ್ನು ಮೊದಲನೆಯದು ಕಾಡಿದರೆ ಬುದ್ಧಿಬಲದಿಂದ ಬದುಕುವವರನ್ನು ಎರಡನೆಯದು ಕಾಡುತ್ತದೆ. ಆವೇಶ ಪ್ರಧಾನವಾದ ಸೇಡಿನ ಪ್ರಕರಣಗಳನ್ನು ನೋಡಬೇಕಾದರೆ ಸೇನಾ ನ್ಯಾಯಾಲಯಗಳ ಕಡೆಗೆ ದೃಷ್ಟಿ ಹರಿಸಬಹುದು. ಎರಡನೆಯ ಬಗೆಯ ಸೇಡಿನ ಉದಾಹರಣೆಗಳನ್ನು ನೋಡಲು ನಾವು ಹೆಚ್ಚು ದೂರ ಹೋಗಬೇಕಾಗಿಲ್ಲ. ನಮ್ಮ ಮನೆಗಳಲ್ಲಿ, ಕಚೇರಿಗಳಲ್ಲಿ, ಸುತ್ತಮುತ್ತಲಲ್ಲಿ ಎಲ್ಲಿಬೇಕಾದರೂ ಹೇರಳವಾಗಿ ಉದಾಹರಣೆಗಳು ಕಾಣ ದೊರೆಯುತ್ತವೆ. ಒಂದುವೇಳೆ ಸಮದರ್ಶಿಯಾದ ಭಾವನೆಯಿಂದ ನಮ್ಮ ಮನಸ್ಸಿನೊಳಗೇ ನಾವು ಇಳಿಯತೊಡಗಿದರೆ ಅಲ್ಲಿ ಇಲ್ಲಿ ಹುಡುಕಾಡುವ ಕೆಲಸವೂ ತಪ್ಪಬಹುದೇನೊ.

ಈರ್ಷ್ಯಾ ಪ್ರಧಾನವಾದ ಸೇಡು ಹಾಗೂ ಈರ್ಷ್ಯೆ ಇವೆರಡರ ನಡುವೆ ಇರುವ ವ್ಯತ್ಯಾಸವನ್ನು ಸಹ ಮನದಟ್ಟು ಮಾಡುವುದು ಒಳ್ಳೆಯದು. ಒಬ್ಬ ವ್ಯಕ್ತಿ ತಾನು ಎಲ್ಲಿ ಕುಳಿತುಕೊಂಡಿರಬೇಕೆಂದು ಬಯಸುತ್ತಾನೆಯೊ, ಅಲ್ಲಿ ತನ್ನ ಬದಲಿಗೆ ಬೇರೆ ಯಾರಾದರೂ (ಸಂಬಂಧಿಗಳು, ಸಹೋದ್ಯೋಗಿಗಳು ಅಥವಾ ಹತ್ತಿರದ ಬೇರೆ ಯಾವುದೇ ವ್ಯಕ್ತಿ) ಕುಳಿತಿದ್ದರೆ ಮನಸ್ಸಿನಲ್ಲಿ ಕರುಬತೊಡಗುತ್ತಾನೆ. ಅಂತಹವನ ವಿಚಾರದಲ್ಲಿ ಕೇವಲ ಮನಸ್ಸಿನಲ್ಲೇ ಅಹಿತವನ್ನು ಬಯಸುತ್ತಿದ್ದರೆ ಅವನು ಕೇವಲ ಹೊಟ್ಟೆಕಿಚ್ಚಿನ ಮನುಷ್ಯ ಎಂದೆನಿಸಿಕೊಳ್ಳುತ್ತಾನೆ. ಆದರೆ ಈ ರೀತಿ ಅಹಿತವನ್ನು ಬಯಸುವುದರ ಜೊತೆಯಲ್ಲಿಯೆ ಅದಕ್ಕಾಗಿ ಪ್ರಯತ್ನವನ್ನು ನಡೆಸಿದರೆ ಅಂತಹವನು ಈರ್ಷ್ಯಾ ಪ್ರಧಾನವಾದ ಸೇಡುಳ್ಳವನಾಗುತ್ತಾನೆ.

ಒಂದುವೇಳೆ ನಾವು ನಮ್ಮ ಕಾರ್ಯಕ್ಷೇತ್ರದಲ್ಲಿ ನಿಜವಾಗಿಯೂ ಯಶಸ್ವಿಯಾದ ವ್ಯಕ್ತಿಗಳು ಎಂದೆನಿಸಿಕೊಂಡಿದ್ದಲ್ಲಿ ನಮ್ಮನ್ನು ಕಂಡು ಕರುಬುವವರ ಸಂಖ್ಯೆ ಎಷ್ಟೆಂದು ಪತ್ತೆಯಾಗುವುದಿಲ್ಲ. ಆದರೆ ಹೊಟ್ಟೆಕಿಚ್ಚಿನ ದೆಸೆಯಿಂದ ನಮಗೆ ತೊಂದರೆ ಉಂಟು ಮಾಡುವವರ ಸಂಖ್ಯೆ ಪತ್ತೆಯಾಗಬಹುದೇನೊ. ಇದನ್ನೇ ಇನ್ನೊಂದು ಮಾತಿನಲ್ಲಿ ಹೇಳಬಹುದಾದರೆ, ನಾವು ಯಾರನ್ನು ಹೊಟ್ಟೆಕಿಚ್ಚಿನವರು ಎಂದು ಭಾವಿಸಿಕೊಳ್ಳುತ್ತೇವೆಯೊ ಅವರು ವಾಸ್ತವವಾಗಿ ಹೊಟ್ಟೆಕಿಚ್ಚಿನ ಸೇಡಿನವರು ಅಷ್ಟೆ. ಏಕೆಂದರೆ ನಮ್ಮನ್ನು ಹೊಟ್ಟೆಕಿಚ್ಚುಪಡುವ ಜನ ಎಂದೂ ತಮ್ಮ ಮನಸ್ಸನ್ನು ಬಿಚ್ಚಿ ತೋರುವುದಿಲ್ಲ. ತಮ್ಮ ಹೊಟ್ಟೆಕಿಚ್ಚನ್ನು ಗುಟ್ಟು ರಟ್ಟಾಗದಂತೆ ಅವರು ನೋಡಿಕೊಳ್ಳುತ್ತಾರೆ.

ಇಂಥ ಹೊಟ್ಟೆಕಿಚ್ಚಿನ ಮಂದಿ ಒಂದುವೇಳೆ ಚಿತ್ರಕಲಾವಿದರಾದರೆ ತಮಗಿಂತ ಹೆಚ್ಚು ಸಾಧನ ಸಂಪತ್ತುಗಳನ್ನು ಸವಲತ್ತುಗಳನ್ನು ಹೊಂದಿರುವ ವ್ಯಕ್ತಿಗಳ ಕೀರ್ತಿಯನ್ನೇ ಮಸುಗೊಳಿಸಲು ಅವರ ಬಗ್ಗೆ ವ್ಯಂಗ್ಯಚಿತ್ರಗಳನ್ನು ರಚಿಸತೊಡಗುತ್ತಾರೆ. ಒಂದುವೇಳೆ ಲೇಖಕರಾದರೆ ಅಂಥವರು ತಮ್ಮ ಸೇಡಿಗೆ ಪಾತ್ರವೆನಿಸುವ ವ್ಯಕ್ತಿಗಳ ಪಾತ್ರದ ಬಗ್ಗೆ ಲೇವಡಿಮಾಡಿ ಬರೆಯುತ್ತಾರೆ. ಒಂದುಪಕ್ಷ ಅವರು ಮುಂದಾಳು ಪ್ರವೃತ್ತಿಯವರಾದರೆ, ತಮ್ಮ ರೀತಿಯಲ್ಲಿಯೆ ಸೇಡುಬಗೆಯಲು ಹಾತೊರೆಯುತ್ತಿರುವ ಜನರನ್ನು ಒಟ್ಟು ಸೇರಿಸಿಕೊಂಡು ಗುಂಪು ಕಟ್ಟುತ್ತಾರೆ.ಆ ಗುಂಪಿನ ನೆರವು ಪಡೆದು ಹೊಟ್ಟೆಕಿಚ್ಚಿಗೆ ಗುರಿಯಾದ ಮನುಷ್ಯನ ಆಸ್ತಿಪಾಸ್ತಿಗಳನ್ನು ಕಸಿಯುವ ಅಥವಾ ಹಾಳು ಮಾಡುವ ಕೆಲಸಕ್ಕೆ ಕೈಹಾಕುತ್ತಾರೆ. ಒಂದುವೇಳೆ ಇಂಥ ಸೇಡಿನ ಮನೋಭಾವದ ಮುಂದಾಳು ಪ್ರತಿಭಾಶಾಲಿಯೂ ಆದಲ್ಲಿ ತನ್ನ ಗುಂಪಿನಲ್ಲಿ ಹೆಸರುವಾಸಿಯಾಗುತ್ತಾನೆ. ಹಾಗೆ ಪ್ರಸಿದ್ಧಿ ಪಡೆದ ವ್ಯಕ್ತಿಗಳನ್ನೇ ನಾವು ಯಶಸ್ವಿ ಚಿತ್ರಕಲಾವಿದ, ಯಶಸ್ವಿ ವ್ಯಂಗ್ಯ ಲೇಖಕ ಹಾಗೂ ಯಶಸ್ವಿ ಮುಂದಾಳು ಎಂದು ಕರೆಯತೊಡಗುತ್ತೇವೆ. ನಮ್ಮಲ್ಲಿ ಸಾಧನ ಸಂಪತ್ತುಗಳು ಉಳ್ಳವರ ಸಂಖ್ಯೆಗಿಂತಲೂ ಇಲ್ಲದಿರುವವರ ಸಂಖ್ಯೆ ಹೆಚ್ಚಾಗಿರುವುದೇ ಅವರ ಪ್ರಸಿದ್ಧಿಗೆ ಒಂದು ಮುಖ್ಯ ಕಾರಣ. ಮೇಲೆ ಹೇಳಿದಂತಹ ಕಲಾವಿದ ಹೆಚ್ಚು ಜನರ ಭಾವನೆಗಳನ್ನು ಪ್ರತಿನಿಧಿಸುವುದರಿಂದ, ತನ್ನದೇ ರೀತಿಯ ವಿಚಾರಗಳನ್ನು ಹೊಂದಿರುವ ಜನಸಮೂಹದಲ್ಲಿ ಗೌರವಕ್ಕೆ ಪಾತ್ರನಾಗುತ್ತಾನೆ. ಸಾಧನ ಸಂಪತ್ತುಗಳನ್ನೆ ಹೊಂದಿರುವವರ ವಿಷಯದಲ್ಲಿ ವ್ಯಂಗ್ಯವಾಗಿ ಟೀಕೆ ಮಾಡುತ್ತಲೆ ಅವರೂ ಶ್ರೀಮಂತರಾಗಿಬಿಡಬಹುದು. ಆದರೆ ತಮಗೆ ಶ್ರೀಮಂತಿಕೆಯನ್ನು ಕೀರ್ತಿಯನ್ನೂ ತಂದುಕೊಟ್ಟ ತಮ್ಮ ಹಳೆಯ ಕಸುಬಿಗೆ ದೊಡ್ಡ ನಮಸ್ಕಾರ ಹಾಕಿ ಕೈಬಿಡುವ ಕೆಲಸವನ್ನು ಅವರು ಮಾಡುವುದಿಲ್ಲ.

ಒಬ್ಬ ವ್ಯಕ್ತಿ ತನ್ನ ಯಾವುದಾದರೂ ಕಲಾವಂತಿಕೆಯ ಕಾರಣದಿಂದಾಗಿ ಯಶಸ್ವಿ ಎಂದೆನಿಸಿಕೊಂಡಲ್ಲಿ, ಆ ಕ್ಷೇತ್ರದಲ್ಲಿ ಅಷ್ಟಾಗಿ ಹೆಸರುಮಾಡದೆ ಇರುವ ಇತರ ಕಲಾವಿದರ ಕಣ್ಣು ಕೆಂಪಾಗತೊಡಗುತ್ತದೆ. ಆ ಯಶಸ್ವಿ ಕಲಾವಿದನನ್ನು ಕೀರ್ತಿಶಿಖರದಿಂದ ಕೆಳಕ್ಕೆಳೆಯಲು ಹೊಟ್ಟೆಕಿಚ್ಚಿನ ಸಹೋದ್ಯೋಗಿಗಳ ಒಂದು ಹೊಸ ಗುಂಪೇ ಸಿದ್ಧವಾಗುತ್ತದೆ. ಕೆಲವುಮಂದಿ ವಿಮರ್ಶಕರು ಹುಟ್ಟಿಕೊಳ್ಳುತ್ತಾರೆ. ಅಂಥ ವಿಮರ್ಶಕರಲ್ಲಿ ಯಾರು ತುಂಬ ಯಶಸ್ವಿಗಳಾಗುತ್ತಾರೊ ಅವರು ಉಳಿದ ಅಸಫಲ ವಿಮರ್ಶಕರ ಕಣ್ಣಿಗೆ ಬೇನೆಯಾಗತೊಡಗುತ್ತಾರೆ. ಇಂಥ ಅಸಫಲ ವಿಮರ್ಶಕರಲ್ಲಿ ಯಾರು ತುಂಬ ಕಟುವಾಗಿ ವಿಮರ್ಶಿಸುತ್ತಾರೊ ಅವರು ಮತ್ತೆ ಯಶಸ್ವಿ ವಿಮರ್ಶಕರೆಂದೆನಿಸಿಕೊಳ್ಳುತ್ತಾರೆ. ಸೇಡಿನ ಚಕ್ರ ಹೀಗೆ ನಿರಂತರವಾಗಿ ಹರಿಯುತ್ತದೆ.

ಒಂದು ಉದ್ಯಮದ ಇಬ್ಬರು ಪಾಲುದಾರರು, ಒಂದು ಸಂಸ್ಥೆಯ ಇಬ್ಬರು ಸಮಾನಾಧಿಕಾರವುಳ್ಳ ಸದಸ್ಯರು ಅಥವಾ ಒಂದು ಕಚೇರಿಯ ಇಬ್ಬರು ಸಮಾನಸ್ಕಂಧರಾದ ಸಹೋದ್ಯೋಗಿಗಳು ಇಂತಹವರಲ್ಲಿ ಒಬ್ಬರ ಪ್ರತಿಷ್ಠೆ ಮತ್ತು ಹೆಚ್ಚುಗಾರಿಕೆ ಬೆಳೆಯತೊಡಗಿದರೆ ಇನ್ನೊಬ್ಬ ಕೈಕಟ್ಟಿ ಕೂಡುವುದಿಲ್ಲ. ಬದಲಾಗಿ ಆ ಒಬ್ಬನ ಪ್ರತಿಷ್ಠೆಯನ್ನು ಹೇಗಾದರೂ ಮಾಡಿ ಹಾಳುಮಾಡುವುದಕ್ಕಾಗಿ ಏನಾದರೂ ಮಾಡತೊಡಗು

ತ್ತಾನೆ. ಒಂದು ವೇಳೆ ಸೇಡು ತೀರಿಸಿಕೊಳ್ಳುವುದಕ್ಕೆ ಬೇರೆಯಾವ ದಾರಿಯೂ ಸಿಗದಿದ್ದಲ್ಲಿ ತನ್ನ ಸಹೋದ್ಯೋಗಿಯ ಯಾವುದಾದರೂ ಅನಿಸಿಕೆಗಳಿಗೆ ಅಥವಾ ಸಲಹೆಗಳಿಗೆ ಅಡ್ಡಗಾಲು ಹಾಕಿ ತನ್ನ ಪ್ರತಿಷ್ಠೆಯನ್ನು ಮೆರೆಯಬಯಸುತ್ತಾನೆ. ತನ್ನ ವೈಫಲ್ಯಕ್ಕೆ ಕಾರಣಗಳನ್ನು ಇನ್ನೊಬ್ಬ ವ್ಯಕ್ತಿಯ ಸಾಫಲ್ಯದಲ್ಲಿ ಹುಡುಕುತ್ತಾ ಹೋಗುತ್ತಲೆ ಮನುಷ್ಯ ಹೊಟ್ಟೆಕಿಚ್ಚಿನ ಭಾವನೆಗೆ ಈಡಾಗುತ್ತಾನೆ. ಈ ರೀತಿ ಹೊಟ್ಟೆಕಿಚ್ಚಿನ ಅಭ್ಯಾಸ ಬೆಳೆಸಿಕೊಂಡ ಮನುಷ್ಯನ ಎಲ್ಲಕ್ಕಿಂತ ದೊಡ್ಡ ಆಯುಧವೆಂದರೆ—ಮುಖಕ್ಕೆ ಮಸಿ ಬಳಿಯುವುದು, ತಪ್ಪು ಅಭಿಪ್ರಾಯ ಮೂಡಿಸುವುದು ಹಾಗೂ ಚಾಡಿ ಚುಚ್ಚುವುದು.

ಸೇಡು ತೀರಿಸಿಕೊಳ್ಳುವ ಅಧಿಕಾರ ಕೇವಲ ಸಮರ್ಥರಾದ ಮತ್ತು ಶಕ್ತಿಶಾಲಿಗಳಾದ ವ್ಯಕ್ತಿಗಳಿಗೆ ಮಾತ್ರ ಮೀಸಲಾದದ್ದಲ್ಲ. ಸಮರ್ಥರಲ್ಲದವರು ಸಹ ತಮಗೆ ಉಂಟಾದ ಅಹಿತಕ್ಕೆ ಬದಲಾಗಿ ತಮ್ಮದೇ ಆದ ರೀತಿಯಲ್ಲಿ ಸೇಡು ತೀರಿಸಿಕೊಂಡು ಮನಸ್ಸಿಗೆ ಸಮಾಧಾನ ತಂದುಕೊಳ್ಳುತ್ತಾರೆ. ಒಬ್ಬ ಜವಾನನಿಗೆ ತನ್ನ ಯಜಮಾನನ ಮೇಲೆ ಸಿಟ್ಟುಬಂದರೆ ಏನುತಾನೆ ಮಾಡಬಲ್ಲ? ಅವನು ನಿಜವಾಗಿಯೂ ಸಮರ್ಥನಾಗಿದ್ದರೆ ತನ್ನ ಯಜಮಾನನಿಗೆ ತೊಂದರೆ ಉಂಟುಮಾಡಲು ಒಂದಲ್ಲ ಒಂದು ದಾರಿ ಹುಡುಕಲು ಕಷ್ಟವೇನಾಗುವುದಿಲ್ಲ. ಆದರೆ ಅವನು ಸಮರ್ಥನಲ್ಲ ಅಂದುಕೊಂಡಲ್ಲಿ, ಹೊಸರೀತಿಯಲ್ಲಿ ಸೇಡು ತೀರಿಸಿಕೊಳ್ಳುತ್ತಾನೆ.

ಯಜಮಾನ ಒಂದು ವೇಳೆ ಅಚ್ಚುಕಟ್ಟಿನ ಮನುಷ್ಯನಾದಲ್ಲಿ ಅವನಿಂದ ತಿಂದ ಬೈಗುಳಕ್ಕೆ ಬದಲಾಗಿ ಜವಾನ ಅವನಿಗೆ ಎಂಜಲು ಲೋಟದಲ್ಲಿ ನೀರು ತಂದುಕೊಡಬಹುದು. ಜವಾನ ಇಲ್ಲಿ ಸ್ಪಷ್ಟವಾಗಿ ತನ್ನ ಯಜಮಾನನಿಗೆ ಅಪಕಾರ ಬಗೆಯುವುದಿಲ್ಲ. ಅದರಿಂದ ಅಪಕಾರವಾಯಿತೆ ಇಲ್ಲವೆ ಎಂಬುದು ಇಲ್ಲಿ ಮುಖ್ಯವಲ್ಲ. ಅವನು ತನ್ನ ಕಡೆಯಿಂದ ಪ್ರಯತ್ನಮಾಡಿದ ಅಷ್ಟೆ. ಅಷ್ಟು ಪ್ರಯತ್ನದಿಂದಲೇ ಅವನಿಗೆ ನೆಮ್ಮದಿ ದೊರೆಯುತ್ತದೆ.

ಮಕ್ಕಳನ್ನು ಕಂಡರೆ ತಂದೆತಾಯಿಗಳಿಗೆ ಅಚ್ಚುಮೆಚ್ಚು, ಅವರು ಮಕ್ಕಳನ್ನು ಪ್ರೀತಿಸುತ್ತಾರೆ. ಆದರೆ ಕೆಲವುವೇಳೆ ಮಕ್ಕಳನ್ನು ಬೈಯ್ಯುವ ಸಂದರ್ಭ ಉಂಟಾಗಬಹುದು. ಅಥವಾ ಮಕ್ಕಳಿಗೆ ಇಷ್ಟವಾಗುವ ಯಾವುದಾದರೂ ಕೆಲಸಕ್ಕೆ ಇಲ್ಲವೆ ಆಟಕ್ಕೆ ತಂದೆತಾಯಿಗಳು ಅಡ್ಡಿಯುಂಟುಮಾಡಬಹುದು. ಇದು ಮಕ್ಕಳ ಒಳಿತಿಗೇ ಇರಬಹುದಾದರೂ ಅವರು ತಂದೆತಾಯಿಗಳ ದೃಷ್ಟಿಯನ್ನು ಅರ್ಥಮಾಡಿಕೊಳ್ಳದೆ ಹೋಗಬಹುದು. ಯಾವುದಾದರೂ ಮಗುವಿಗೆ ಇಂಥ ಸಂದರ್ಭದಲ್ಲಿ ಸಿಟ್ಟು ಬರುತ್ತದೆನ್ನಿ. ಆಗ ತಂದೆತಾಯಿಗಳನ್ನು ಧಿಕ್ಕರಿಸುವ ಉಪಾಯವನ್ನು ಅದು ಯೋಚಿಸುತ್ತದೆ. ಉದಾಹರಣೆಗೆ, ತಾಯಿ ಕರೆಯುತ್ತಿದ್ದರೂ ಅದನ್ನು ಕೇಳಿಸಿಕೊಳ್ಳದಂತೆ ನಟಿಸುತ್ತಾ ಅವಳ ಕಿರಿಚಾಟದಲ್ಲಿ ವಿಚಿತ್ರವಾದ ಆನಂದವನ್ನು ಅನುಭವಿಸುವುದು, ಊಟದ ಸಮಯದಲ್ಲಿ ಆಟದ ನೆಪ ಹೂಡಿ ಅಮ್ಮನನ್ನು ಸತಾಯಿಸುವುದು, ತಾಯಿ ತಟ್ಟೆಗೆ ಅನ್ನ ಬಡಿಸಿ ಮಗುವಿನ ಹಿಂದೆ ಹಿಂದೆ ಹೋಗುತ್ತಿದ್ದರೆ ಅದರಿಂದ ಖುಷಿಪಡುವುದು ಇತ್ಯಾದಿ. ಮಗುವಿಗೆ ಹಸಿವಿಲ್ಲವೇನೊ? ಅಂತ ತಾಯಿ ಅದನ್ನು ಸಮಾಧಾನಮಾಡಲು

ಇನ್ನೇನಾದರೂ ಅಣಿಮಾಡುತ್ತಿದ್ದರೆ ಆ ಮೂಲಕ ಅವಳಮೇಲುಂಟಾದ ಒತ್ತಡದಿಂದಾಗಿ ಸಮಾಧಾನ ಪಟ್ಟುಕೊಳ್ಳುವುದು, ಸಹ ಇಂತಹ ಮಕ್ಕಳಲ್ಲಿ ಕಂಡುಬರುತ್ತದೆ.

ಈ ರೀತಿಯ ಉಪಾಯಗಳನ್ನು ಮಾಡುವುದರಿಂದ ವಾಸ್ತವವಾಗಿ ಮಗು ತನ್ನದೇ ಹಾನಿಯನ್ನು ಉಂಟುಮಾಡಿಕೊಳ್ಳುತ್ತಿರುತ್ತದೆ. ಆದರೆ ಸೇಡು ತೀರಿಸಿಕೊಳ್ಳುವ ಸಮಯದಲ್ಲಿ ಸ್ವಂತ ಕಷ್ಟನಷ್ಟಗಳ ಬಗ್ಗೆ ಗಮನ ಕೊಡುವವರಾರು? ಮಗುವಿನ ಅಪರಿಪಕ್ವವಾದ ಬುದ್ಧಿ ಹೇಗಾದರೂ ಮಾಡಿ ತನಗೆ ಅಪಕಾರ ಉಂಟುಮಾಡುತ್ತಿರುವ ತಂದೆತಾಯಿಗಳಿಗೆ ತೊಂದರೆ ಕೊಡುವುದೇ ಆಗಿರುತ್ತದೆ. ಅದರಿಂದ ತಂದೆತಾಯಿಗಳಲ್ಲಿ ಸ್ವಲ್ಪ ಮಟ್ಟಿಗೆ ಕಷ್ಟ ಆಗುತ್ತದಲ್ಲ ಎಂಬುದೇ ಅವನಿಗೆ ಸಮಾಧಾನ. ಅವನಿಗೆ ಸಾಧ್ಯ ವಾಗುವುದಿದ್ದರೆ ಅದಕ್ಕಿಂತ ಹೆಚ್ಚು ತೊಂದರೆ ಕೊಡುತ್ತಿದ್ದನೇನೊ!

ಅದೇ ಮಗು ಬೆಳೆದು ದೊಡ್ಡವನಾದ ಮೇಲೆ ಅವನ ತಂದೆತಾಯಿಗಳು ಅವನನ್ನು ಅವಲಂಬಿಸುತ್ತಾರೆ. ತಾನು ಚಿಕ್ಕವನಾಗಿ ಅಸಹಾಯಕನಾಗಿದ್ದಾಗ ತನಗೆ ಉಂಟಾದ ಕಷ್ಟಕ್ಕಾಗಿ ಅವನು ಈಗ ಅವರಿಗೆ ಕಷ್ಟಕೊಟ್ಟು ಸೇಡು ತೀರಿಸಿಕೊಳ್ಳುತ್ತಾನೆ. ಅವನಿಗೆ ಚಿಕ್ಕಂದಿನ ಘಟನೆಗಳು ನೆನಪಿಗೆ ಬರುವುದಿಲ್ಲ, ಬದಲಾಗಿ ಅಚೇತನವಾದ ಮನಸ್ಸಿನಲ್ಲಿ ಕೂಡಿಕೊಂಡ ತಿರಸ್ಕಾರ ಹೆಡೆಯಾಡತೊಡಗುತ್ತದೆ. ತನ್ನ ತಂದೆ ತಾಯಿಗಳಿಗೆ ತೀರ ಅಗತ್ಯವೆನಿಸಿದ ಪದಾರ್ಥಗಳನ್ನು ತಂದುಕೊಡದೆ, ತನಗೆ ತುಂಬ ಆವಶ್ಯಕವಲ್ಲದ ಪದಾರ್ಥಗಳಿಗೆ ದಂದುವೆಚ್ಚ ಮಾಡಿ ತಂದು ಅವರನ್ನು ಕಾಡಿಸಿ ವಿಚಿತ್ರವಾದ ಸಂತೋಷ ವನ್ನು ಪಡೆಯುತ್ತಾನೆ. ಈ ಸಂತೋಷ ಸೇಡಿನಿಂದ ಹುಟ್ಟಿದ್ದಲ್ಲದೆ ಬೇರೇನೂ ಅಲ್ಲ.

ಈ ರೀತಿಯಾಗಿ ವಿವಂಚನೆಗೊಂಡ ತಂದೆತಾಯಿಗಳು ತಮ್ಮ ಮಕ್ಕಳ ಈ ಬಗೆಯ ನಡವಳಿಕೆಯನ್ನು ಕ್ಷಮಿಸುವುದಿಲ್ಲ. ತಮಗೆ ಕಷ್ಟಕೊಟ್ಟ ಮಕ್ಕಳಿಗೆ ಅಗತ್ಯಬಿದ್ದರೆ ರಕ್ತವನ್ನೂ ಕೊಡಲು ಅವರು ತಯಾರಾಗಿರುತ್ತಾರೆ. ಒಂದೊಂದು ತೊಟ್ಟು ರಕ್ತ ವನ್ನೂ ಮಕ್ಕಳ ಸಲುವಾಗಿ ಹರಿಯಬಿಡಲೂ ಅವರು ಸಿದ್ಧ. ಮಕ್ಕಳಿಗೆ ಕೆಡುಕಾಗ ಲೆಂದು ಅವರು ಎಂದೂ ಬಯಸುವುದಿಲ್ಲ. ಆದರೆ ಮನದಾಳದಲ್ಲಿ ಅಡಗಿರುವ ಸೇಡು ತೀರಿಸಿಕೊಳ್ಳುವ ಮೋಹವನ್ನು ಅವರು ಕೈಬಿಡಲಾರರು.

ನಾನು ಒಬ್ಬ ಹಿರಿಯ ವಯಸ್ಸಿನ ಹೆಂಗಸನ್ನು ಬಲ್ಲೆ. ಆಕೆಯ ಮಗ ಒಬ್ಬ ಗೆಜೆಟೆಡ್ ಆಫೀಸರ್. ಆದರೆ ಅವನ ತಾಯಿ ತಿಂಗಳಿಗೆ ಐವತ್ತು ರೂಪಾಯಿಗಳ ಲೆಕ್ಕ ದಲ್ಲಿ ಬೇರೆಯವರ ಮನೆಯಲ್ಲಿ ಪಾತ್ರೆ ತೊಳೆಯುವ ಕೆಲಸ ಮಾಡುತ್ತಾಳೆ. ಆ ಹೆಂಗಸು ಕೆಲಸ ಮಾಡುವ ಮನೆಯ ಯಜಮಾನನಿಗೆ ಆಕೆಯನ್ನು ಎಷ್ಟು ಹೊಗಳಿದರೂ ಸಮಾಧಾನ ಆಗುವುದಿಲ್ಲ. ತಾಯಿ ಮನೆಯಲ್ಲಿ ಒಂದು ಮೂಲೆಯಲ್ಲಿ ಸುಮ್ಮನೆ ಕು ತಿದ್ದರೆ ಸಾಕು, ಅವಳಿಗೆ ತಿಂಗಳಿಗೆ ನೂರು ರೂಪಾಯಿ ಕೊಡಲು ನಾನು ಸಿದ್ಧ ಅಂ ಮಗ ಹೇಳುತ್ತಾನೆ. ಆದರೆ ಮೂಲೆಯಲ್ಲಿ ಸುಮ್ಮನೆ ಕೆಲಸಕ್ಕೆ ಬಾರದ ಹಾಗೆ ಕುಳಿತ ಕೊಳ್ಳುವ ಷರತ್ತು ಆಕೆಗೆ ಒಪ್ಪಿಗೆಯಿಲ್ಲ. ತಾನು ಕೆಲಸ ಮಾಡುವ ಮನೆಯ ಯ ಮಾನನ ದೃಷ್ಟಿಯಲ್ಲಿ ಆಕೆ ತುಂಬಾ ಸುಸಂಸ್ಕೃತ ನಡೆವಳಿಕೆಯುಳ್ಳವಳು, ಏಕೆಂದರೆ ಅ ತನಗೆ ಯಾವುದೇ ಅಧಿಕಾರವಿದೆಯೆಂದು ಆಕೆ ಚಲಾಯಿಸಬಯಸುವುದಿಲ್ಲ. ಆದರೆ ತನ ಸ್ವಂತ ಮನೆಯಲ್ಲಿ ಮಗ ಮತ್ತು ಸೊಸೆಯ ಮೇಲೆ ತನ್ನ ಅಧಿಕಾರವನ್ನು ಚಲಾಯಿ

ಬಯಸುತ್ತಾಳೆ. ಅಲ್ಲಿ ಅವಳಿಗೆ ಹೊಟ್ಟೆಗೆ ಏನಿಲ್ಲದಿದ್ದರೂ ಚಿಂತೆಯಿಲ್ಲ, ಆದರೆ ಮಗ ಚಿಕ್ಕಂದಿನಲ್ಲಿ ಅವಳನ್ನು ಪ್ರೀತಿಸುತ್ತಿದ್ದ. ಆದರಿಸುತ್ತಿದ್ದ ಹಾಗೆ ನಡೆದುಕೊಂಡರೆ ಅವಳಿಗೆ ಸಾಕು. ಹಾಗೆಯೆ ಸೊಸೆ ಬಂದು ಕಸಿದುಕೊಂಡಳೆಂದುಕೊಂಡಿರುವ ಆ ಹಿಂದಿನ ಅಧಿಕಾರಗಳು ಅವಳಿಗೆ ದೊರೆತರೆ ಅದಕ್ಕಿಂತ ಬೇರೆ ನೆಮ್ಮದಿಯಿಲ್ಲ. ಆದರೆ ಆ ಅಧಿಕಾರ, ಆ ಪ್ರೀತಿ ಅವಳಿಗೆ ಸಿಕ್ಕದೆ ಹೋದಾಗ ಬೇರೆ ಮನೆಯ ಉಳಿಕೆ ಅನ್ನ ತಿನ್ನಲೂ ಅವಳು ಸಿದ್ಧ. ಈ ರೀತಿ ಮಾಡುವುದರಿಂದ ಕಡೆಯ ಪಕ್ಷ ಅವಳು ತನ್ನ ಮಗನ ಕೃತಘ್ನತೆಯ ವಿಚಾರವಾಗಿ ಡಂಗುರವನ್ನಾದರೂ ಹೊಡೆಯಬಲ್ಲಳು. ಜನ ತುಂಬ ಸಹಾನುಭೂತಿಯಿಂದ ಆಡುವ ಮಾತುಗಳು ಅವಳ ಕಿವಿಯ ಮೇಲೆ ಬೀಳುತ್ತವೆ–"ನೋಡಿ, ಹೊಟ್ಟೆಬಟ್ಟೆ ಕಟ್ಟಿ ಕಷ್ಟದಿಂದ ಓದಿಸಿ ಸಾಕಿದ್ದಕ್ಕೆ ಮಗ ಅನಿಸಿಕೊಂಡವನು ಯಾವ ರೀತಿ ನಡೆದುಕೊಳ್ಳುತ್ತಿದ್ದಾನೆ," ಅವಳ ಗಾಯಗೊಂಡ ಅಹಂ ಭಾವನೆಗೆ ಈ ಬಗೆಯ ಮಾತುಗಳು ತಣ್ಣನೆಯ ಮುಲಾಮಿನಂತೆ. ಈ ರೀತಿಯ ಸಹಾನುಭೂತಿಯಿಂದ ಕೂಡಿದ ಮಾತುಗಳನ್ನು ಕೇಳುವ ಸಲುವಾಗಿ ಅವಳು ಎಂಥ ಕೆಟ್ಟ ಪರಿಸ್ಥಿತಿಯಲ್ಲಿಯೂ ಇರಬಲ್ಲಳು. ತನ್ನ ಮಗನಿಗೆ ಶಾರೀರಕವಾಗಿ ತೊಂದರೆಯಾಗುವುದನ್ನು ಅವಳು ಬಯಸಲಾರಳು, ಆದರೆ ಅವನ ಘನತೆ ಗೌರವಗಳಿಗೆ ಧಕ್ಕೆಯುಂಟುಮಾಡುವಲ್ಲಿ ಅವಳು ಯಶಸ್ವಿಯಾದಳು. ಒಟ್ಟಿನಲ್ಲಿ ಮಗನ ಕೃತಘ್ನತೆಗೆ ಸೇಡು ತೀರಿಸಿಕೊಂಡ ಸಮಾಧಾನ ಪಡೆದುಕೊಂಡಳು.

ಸೇಡು ಇನ್ನೂ ಅನೇಕ ರೂಪಗಳಲ್ಲಿ ನಮ್ಮ ಮುಂದೆ ಬರುತ್ತದೆ. ಅದರ ಎಲ್ಲ ರೂಪಗಳನ್ನು ಎಣಿಸಲು ಸಾಧ್ಯವಾಗುವುದಿಲ್ಲ. ಅವುಗಳಲ್ಲಿ ಕೆಲವು ಉದಾಹರಣೆಗಳನ್ನು ಇಲ್ಲಿ ಮುಂದೆ ಕೊಡುತ್ತಿದ್ದೇವೆ.

ಸಮಾಜದ ಎಲ್ಲ ಜನರನ್ನೂ ತಿರಸ್ಕಾರದಿಂದ ನೋಡುವ ವ್ಯಕ್ತಿಯೊಬ್ಬನದು ಇಂಥ ಒಂದು ಉದಾಹರಣೆ. ಅವನು ಎಂಥ ಮನುಷ್ಯನೆಂದರೆ ಒಂದು ಕಾಲದಲ್ಲಿ ಸಮಾಜದ ತಿರಸ್ಕಾರಕ್ಕೆ ತೀವ್ರವಾಗಿ ಒಳಗಾಗಿದ್ದ. ನನಗೆ ಯಾರೂ ಬೇಕಾಗಿಲ್ಲ. ನನಗೆ ಯಾರದೇನು ಮುಲಾಜು ಇತ್ಯಾದಿ ಮಾತನಾಡುತ್ತಾ ತನಗೆ ತಿರಸ್ಕಾರ ಮಾಡಿದ ಸಮಾಜದ ಮೇಲೆ ಅವನು ಸೇಡು ತೀರಿಸಿಕೊಳ್ಳುತ್ತಾನೆ.

ಇನ್ನೊಬ್ಬ ವ್ಯಕ್ತಿಯನ್ನು ನೋಡಿ. ಈತ ಮೊದಲು ತುಂಬ ದಯಾಳುವಾಗಿದ್ದು ಈಚೆಗೆ ಕ್ರೂರವಾಗಿ ನಡೆದುಕೊಳ್ಳುತ್ತಾನೆ. ಅವನ ಸ್ವಂತ ಬದುಕಿನ ಕಡೆಗೆ ಕಣ್ಣು ಹಾಯಿಸಿದರೆ ಈ ಪರಿವರ್ತನೆಗೆ ಕಾರಣ ಸ್ಪಷ್ಟವಾಗುತ್ತದೆ. ಬಹುಶಃ ಅವನ ಹರೆಯದ ಮಗ ಪ್ರಪಂಚದಿಂದ ಕಣ್ಮರೆಯಾಗಿರಬಹುದು. ಅಥವಾ ಅವನು ಚೆನ್ನಾಗಿ ನಡೆದುಕೊಂಡರೂ ಅವನ ಹತ್ತಿರದ ನೆಂಟರಿಷ್ಟರಲ್ಲಿ ಯಾರಾದರೂ ಅವನಿಗೆ ನಂಬಿಕೆದ್ರೋಹ ಎಸಗಿರಬಹುದು.

ಒಂದು ವೇಳೆ ಇಂಥ ಮನುಷ್ಯ ಈ ಘಟನೆಗಳಿಗಿಂತ ಮುಂಚೆ ಕ್ರೂರಿಯಾಗಿದ್ದರೆ ತನ್ನ ಕ್ರೌರ್ಯಕ್ಕೆ ದೇವರು ಸರಿಯಾದ ಶಾಸ್ತಿ ಮಾಡಿದ ಅಂತ ಅಂದುಕೊಂಡು ದಯಾಳುವಾಗುತ್ತಿದ್ದನೇನೊ. ಆದರೆ ಈ ಮನುಷ್ಯ ಮುಂಚೆ ದಯಾಳುವಾಗಿದ್ದವನು. ಬಹುಶಃ ತನ್ನ ಒಳ್ಳೆಯ ನಡವಳಿಕೆಗಾಗಿ ಬಂದ ಪ್ರತಿಫಲದ ವಿರುದ್ಧ ದೇವರ ಮೇಲೆ ಸೇಡು ತೀರಿಸಿಕೊಳ್ಳುವ ಸಲುವಾಗಿ ಅವನ ಸೃಷ್ಟಿಯ ಜನರ ಮೇಲೆ ಕತ್ತಿ ಮಸೆಯಲಾರಂಭಿಸಿದನೇನೊ.

ಸೇಡಿನ ಮತ್ತೊಂದು ಹಾಗೂ ತೀರ ಭಯಂಕರವಾದ ಸ್ಥಿತಿಯೊಂದುಂಟು. ಇನ್ನೊಬ್ಬರಿಗೆ ತೊಂದರೆ ಉಂಟುಮಾಡುವ ಸಲುವಾಗಿ ಸೇಡು ತೀರಿಸಿಕೊಳ್ಳುವವನು ತನ್ನ ಪ್ರಾಣವನ್ನೇ ನೀಗಿಸಿಕೊಳ್ಳುವುದು ಈ ವಿಪರೀತಕ್ಕೆ ಒಂದು ಉದಾಹರಣೆ. ಹಲವಾರು ಆತ್ಮಹತ್ಯೆಯ ಪ್ರಕರಣಗಳನ್ನು ಈ ನಿಟ್ಟಿನಲ್ಲಿ ನೋಡಬಹುದು.

ಆತ್ಮಹತ್ಯೆ ಮಾಡಿಕೊಳ್ಳುವ ಬಹಳಷ್ಟು ಮಂದಿ ತಮ್ಮ ಜೊತೆಯಲ್ಲಿ ಒಂದಲ್ಲ ಒಂದು ಸಂದೇಶವನ್ನು ಬಿಟ್ಟುಹೋಗಿರುತ್ತಾರೆ. ಈಗ ನನ್ನ ಆವಶ್ಯಕತೆ ಯಾರಿಗೂ ಇಲ್ಲ, ನನ್ನ ಸಾವಿನಿಂದ ಯಾರಿಗೂ ಕಿಂಚಿತ್ತು ವ್ಯಸನವಾಗುವುದಿಲ್ಲ, ಯಾರೂ ಕಣ್ಣೀರು ಹರಿಸುವುದಿಲ್ಲ, ಈಗ ಸತ್ತುಹೋಗುವುದೇ ಉತ್ತಮ—ಇಂಥ ಹಲವಾರು ಮಾತುಗಳು ಸಂದೇಶದ ಒಕ್ಕಣೆಯಲ್ಲಿರುತ್ತವೆ. ಆದರೆ ಇದು ಮೇಲೆ ಹೇಳುವ ಮಾತು. ತಾನು ಸತ್ತುಹೋದಲ್ಲಿ ಯಾರಾದರೂ ಕಣ್ಣೀರು ಹಾಕುತ್ತಾರೆ, ಅದರಿಂದ ಯಾರಿಗಾದರೂ ಧಕ್ಕೆ ಉಂಟಾಗುತ್ತದೆ ಎಂದು ಅವನಿಗೆ ಗೊತ್ತಿರುತ್ತದೆ. ಸತ್ತಮೇಲೆ ತನ್ನ ಕೀರ್ತಿ ಹರಡುತ್ತದೆ ಎಂಬುದು ಅವನಿಗೆ ಗೊತ್ತು. ಅಂದಮೇಲೆ ತನ್ನ ಕೀರ್ತಿಯನ್ನು ಹೆಚ್ಚಿಸಿಕೊಳ್ಳಲು ಅಥವಾ ಯಾರಿಗಾದರೂ ಪಶ್ಚಾತ್ತಾಪ ಪಡುವ ಸಂದರ್ಭ ಒದಗಿಸಲು ಅವನು ಸಾಯುವಂತಹ ಕೆಲಸಕ್ಕೆ ಕೈಹಾಕಿದರೆ ಏನಂತೆ!

ತೀರ ವಿಷಮ ಪರಿಸ್ಥಿತಿಯಲ್ಲಿ ಸಿಲುಕಿಕೊಂಡು ಇನ್ನೇನೂ ದಾರಿಕಾಣದೆ ಹತಾಶೆಗೊಂಡಾಗ ಮನುಷ್ಯ ಸೇಡು ತೀರಿಸಿಕೊಳ್ಳುವ ಈ ಭೀಕರ ಉಪಾಯಕ್ಕೆ ಕೈಹಾಕುತ್ತಾನೆ. ತನಗೆ ತೊಂದರೆಯುಂಟುಮಾಡಿದವರ ವಿರುದ್ಧ ಮುಯ್ಯಿ ತೀರಿಸಿಕೊಳ್ಳಲು ಇದಕ್ಕಿಂತ ಮಿಗಿಲಾದ ಉಪಾಯ ಅವನಿಗೆ ತೋರುವುದಿಲ್ಲ. ತಾನು ಸಾಯಬೇಕಾದರೆ ಜೊತೆಯಲ್ಲಿ ಕಾಗದವನ್ನಿಟ್ಟು ತನಗೆ ಅಪಕಾರ ಮಾಡಿದವರ ಹೆಸರನ್ನು ಅದರಲ್ಲಿ ಸೂಚಿಸಿರುತ್ತಾನೆ. ಪ್ರೇಮಿಗಳು ಪರಸ್ಪರರ ಮೇಲೆ, ಒಬ್ಬ ಮನುಷ್ಯ ತನ್ನ ಹೆಂಡತಿ ಮಕ್ಕಳ ಮೇಲೆ ನೆಂಟರಿಷ್ಟರ ಮೇಲೆ ಅಥವಾ ಸಮಾಜದ ಮೇಲೆ ಸರ್ಕಾರದ ಮೇಲೆ ಈ ಬಗೆಯ ಅಪವಾದ ಹೊರಿಸಿ ಸಾವನ್ನಪ್ಪಬಹುದು. ಅವನು ವಾಸ್ತವವಾಗಿ ಯಾವುದೇ ಅಪಕಾರ ಮಾಡಲಿ ಬಿಡಲಿ, ತನ್ನ ಸೇಡಿಗೆ ಗುರಿಯಾದವರ ಗೌರವಕ್ಕೆ ಮಸಿ ಹಚ್ಚುವುದರಲ್ಲಂತೂ ಯಶಸ್ವಿಯಾಗುತ್ತಾನೆ.

ಒಂದೊಂದು ಬಾರಿ ಕೆಲವರು ತಮ್ಮ ಆತ್ಮಹತ್ಯೆಗೆ ತಾವೇ ಕಾರಣರು, ಬೇರಾರೂ ಅಲ್ಲ ಎಂಬ ರೀತಿಯ ಕಾಗದವನ್ನು ಬಿಟ್ಟುಹೋಗುವುದುಂಟು. ಈ ರೀತಿ ಮಾಡಿದಾಗ ಯಾವ ವ್ಯಕ್ತಿಯ ವಿರುದ್ಧ ಸೇಡು ತೀರಿಸಿಕೊಳ್ಳಬೇಕಾಗಿದೆಯೊ, ಆ ವ್ಯಕ್ತಿ ಇಂಥ ಆತ್ಮಹತ್ಯೆಗೆ ತಾನೇ ಕಾರಣನೆಂದು ತಿಳಿದು ಮನಸ್ಸಿನಲ್ಲೆ ಪಶ್ಚಾತ್ತಾಪದಿಂದ ಬೇಯುತ್ತಾನೆ ಎಂಬುದು ಆತ್ಮಹತ್ಯೆಗೆ ಕೈಹಾಕುವವನ ಅಂದಾಜು. ಕೆಲವುವೇಳೆ ಸೇಡು ತೀರಿಸಿಕೊಳ್ಳಬೇಕಾದ ವ್ಯಕ್ತಿಯ ಹೆಸರಿಗೇ ತನ್ನ ಎಲ್ಲ ಆಸ್ತಿಯನ್ನೂ ಬರೆದು ಆತ್ಮಹತ್ಯೆ ಮಾಡಿಕೊಳ್ಳುವವರೂ ಇದ್ದಾರೆ. ಹಾಗೆ ಮಾಡಿದಾಗ ಆಸ್ತಿಗೆ ವಾರಸುದಾರನಾಗುವ ಆ ವ್ಯಕ್ತಿ ಬದುಕಿನುದ್ದಕ್ಕೂ ಪಶ್ಚಾತ್ತಾಪದಲ್ಲಿ ನಾಚಿಕೆಯಲ್ಲಿ ದಿನ ದೂಡುತ್ತಾನೆಂಬುದು ಸಾಯುವವನ ಲೆಕ್ಕಾಚಾರ. ಹಾಗೆ ಇನ್ನೊಬ್ಬ ಕಣ್ಣೀರು ಹಾಕುತ್ತಾನೊ ಅಥವಾ ಪಶ್ಚಾತ್ತಾಪ ಪಡುತ್ತಾನೊ ಎಂಬುದು ಬೇರೆ ಮಾತು. ಆದರೆ ಆತ್ಮಹತ್ಯೆ ಮಾಡಿಕೊಳ್ಳು

ವವನು ಕನ್ನ ಕಲ್ಪನೆಯಲ್ಲೇ ತನ್ನ ಸಾವಿನ ಅನಂತರ ನಡೆಯಬಹುದಾದ ಘಟನೆಗಳನ್ನು ಅವಲೋಕಿಸುತ್ತಾನೆ. ಆ ಪ್ರತಿಕ್ರಿಯೆಯ ಕಲ್ಪನೆಯಿಂದಲೇ ಸಾಯುವ ಕಡೆಯ ಕ್ಷಣಗಳನ್ನು ಆವನು ನೆಮ್ಮದಿಯಿಂದ ಉಸಿರೆಳೆಯುತ್ತಾನೆ. ಬದುಕಿರುವ ಮನುಷ್ಯನೊಬ್ಬ ಸೇಡು ತೀರಿಸಿಕೊಂಡಾಗ ಉಂಟಾಗುವ ಮನಃಶಾಂತಿಯೆ ಪ್ರಾಯಃ ಅವನ ಪಾಲಿಗೆ ಆಗ ದಕ್ಕುತ್ತದೆ.

ಸೇಡಿನ ಭಯದಿಂದಲೇ ಅನೇಕಮಂದಿ ಸಾಮಾನ್ಯ ಜನರು ಬೇರೊಬ್ಬರಿಗೆ ಅಹಿತವನ್ನು ಉಂಟುಮಾಡಲು ಹಿಂಜರಿಯುತ್ತಾರೆ. ಈ ದೃಷ್ಟಿಯಿಂದ ಸಾಮಾಜಿಕ ವ್ಯವಸ್ಥೆ ಸಮತೋಲನದಲ್ಲಿರಲು ಸೇಡು ನಿಸ್ಸಂದೇಹವಾಗಿಯೂ ನೆರವು ನೀಡಿದೆ ಎನ್ನಬಹುದು. ಆದರೆ ಸೇಡುತೀರಿಸಿಕೊಳ್ಳಲು ಅಭ್ಯಾಸಮಾಡಿಕೊಂಡ ಮನುಷ್ಯನಪಾಲಿಗೆ ಈ ಭಾವನೆ ಒಂದು ಬಗೆಯ ಮಾನಸಿಕ ಶಿಕ್ಷೆ. ಕಾನೂನು ಪ್ರಕಾರವಾಗಿ ನೀಡಲಾಗುವ ಶಿಕ್ಷೆಯಿಂದ ಒಬ್ಬ ವ್ಯಕ್ತಿ ಬಚಾವಾಗಬಹುದು. ಆದರೆ ಮನಸ್ಸಿನಲ್ಲಿ ಉರಿಯುತ್ತಿರುವ ಸೇಡಿನ ಬೇಗೆಯಿಂದ ತಪ್ಪಿಸಿಕೊಳ್ಳುವುದು ಕಷ್ಟ. ಸೇಡನ್ನು ಪೂರ್ತಿಯಾಗಿ ತೀರಿಸಿಕೊಳ್ಳುವವರೆಗೆ ಮನಸ್ಸಿಗೆ ಶಾಂತಿ ಎಂಬುದೇ ಇರುವುದಿಲ್ಲ. ಈ ಭಾವನೆ ಎಷ್ಟೋ ಸಂದರ್ಭಗಳಲ್ಲಿ ಮನುಷ್ಯನನ್ನು ಪಶುಗಳಿಗೂ ಕಡಮೆಯಾಗಿಸುತ್ತದೆ.

ಕೆಲವು ಮಂದಿ ವಿದ್ವಾಂಸರು ಸೇಡನ್ನು 'ವೈರ ಶುದ್ಧಿ' ಎಂದು ಸಹ ಕರೆದಿರುವುದುಂಟು. ಆದರೆ ಸೇಡು ತೀರಿಸಿಕೊಂಡ ಅನಂತರ ವೈರ ಶುದ್ಧಿಗೊಳ್ಳುತ್ತದೊ ಇಲ್ಲವೊ ಎಂಬುದನ್ನು ಸ್ಪಷ್ಟಪಡಿಸಲು ಎರಡು ಬುಡಕಟ್ಟಿನ ಜನರನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ. ಈ ಎರಡು ಬುಡಕಟ್ಟುಗಳೂ ರಕ್ತಕ್ಕೆ ಬದಲು ರಕ್ತ ಎಂಬ ಭಾವನೆಯನ್ನೇ ತಮ್ಮ ಧರ್ಮವೆಂದು ಭಾವಿಸುತ್ತಾರೆ ಅಂದುಕೊಳ್ಳೋಣ.

ಒಂದು ಬುಡಕಟ್ಟಿನ ಜನ ಅಕಸ್ಮಾತ್ತಾಗಿ ತಪ್ಪು ಗ್ರಹಿಕೆಯಿಂದ ಇನ್ನೊಂದು ಬುಡಕಟ್ಟಿನ ಒಬ್ಬನನ್ನು ಕೊಂದುಬಿಡುತ್ತಾರೆ ಅಂತ ಭಾವಿಸೋಣ. ಆಗ ಎರಡನೆಯ ಬುಡಕಟ್ಟಿನವರು ಈ ಘಟನೆಯ ಆಳಕ್ಕೆ ಹೋಗಿ ವಿಮರ್ಶಿಸಲು ಸಿದ್ಧರಾಗಿರುವುದಿಲ್ಲ. ಅದಕ್ಕೆ ಬದಲಾಗಿ ಅವರು ವಿರೋಧಿ ಬುಡಕಟ್ಟಿನ ಇಬ್ಬರನ್ನು ಕೊಂದುಬಿಡುತ್ತಾರೆನ್ನಿ. ಇದರಿಂದ ವೈರಶುದ್ಧಿ ಹೇಗಾಯಿತು? ಪ್ರಾಯಃ ಎರಡನೆಯ ಬುಡಕಟ್ಟಿನವರ ದೃಷ್ಟಿಯಲ್ಲಿ ತಮ್ಮ ಕೆಲಸ ನ್ಯಾಯಬದ್ಧವೇ ಆಗಿರಬಹುದು. ಆದರೆ ಮೊದಲನೆಯ ಗುಂಪಿನವರು ಇವರ ಗುಂಪಿನಲ್ಲಿ ಮತ್ತೆ ಮೂವರನ್ನು ಕೊಂದೇ ಸಮಾಧಾನಗೊಳ್ಳುವರೆಂಬುದನ್ನು ಇವರು ಮರೆತುಬಿಡುತ್ತಾರೆ. ಈ ರೀತಿಯಾಗಿ ಸೇಡಿನ ಸರಪಳಿ ಬಿಚ್ಚಿಕೊಳ್ಳುತ್ತಲೇ ಹೋಗುತ್ತದೆ. ಅದಕ್ಕೆ ಕೊನೆಯೆಂಬುದೇ ಇರುವುದಿಲ್ಲ.

ಬೆಂಕಿಯಿಂದ ಬೆಂಕಿ ಎಂದೂ ತಣಿಯುವುದಿಲ್ಲ. ಬೆಂಕಿ ತಣ್ಣಗಾಗುವುದು ನೀರಿನಿಂದ. ಸೇಡೆಂಬ ಬೆಂಕಿ ತಣ್ಣಗಾಗುವುದು ಕ್ಷಮೆಯೆಂಬ ನೀರಿನಿಂದ.

ನೋವುಂಡ ಹೃದಯಕ್ಕೆ ಕ್ಷಮೆ ಶಾಂತಿ ನೀಡಿ ತಂಪೆರೆಯುತ್ತದೆ. ಆವೇಶ ಪ್ರಧಾನವಾದ ಸೇಡಿನ ಜ್ವಾಲೆಯಿಂದ ಬದುಕುಳಿಯಲು ಇದೇ ಮಹದುಪಾಯ. ಈರ್ಷ್ಯೆ ಪ್ರಧಾನವಾದ ಸೇಡಿನಿಂದ ಬಚಾವಾಗುವ ಉಪಾಯವೆಂದರೆ ಯಶಸ್ವಿಯಾದ ವ್ಯಕ್ತಿಯ ಯಶಸ್ಸಿನ ಹಿಂದೆ ಅಡಗಿರುವ ವಾಸ್ತವವಾದ ಕಾರಣಗಳನ್ನು ಕಂಡುಕೊಳ್ಳುವುದು.

ಒಂದುವೇಳೆ ಹೊಟ್ಟೆಕಿಚ್ಚಿನ ಮೊಟ್ಟೆಕೋಳಿಯೆನಿಸಿದ ಮನುಷ್ಯ ತನ್ನ ಸೋಲಿಗೆ ಇನ್ನೊಬ್ಬನ ಗೆಲುವು ಕಾರಣವೆಂಬ ದೃಷ್ಟಿಯಿಂದಲೇ ನೋಡುತ್ತಿದ್ದರೆ ಸೇಡು ತೀರಿಸಿಕೊಳ್ಳಲು ಕುಮ್ಮಕ್ಕು ದೊರೆಯುತ್ತಲೇ ಇರುತ್ತದೆ. ಅದಕ್ಕೆ ಬದಲಾಗಿ ಅವನು ತನ್ನ ಮತ್ತು ಯಶಸ್ವಿ ಮನುಷ್ಯನ ಸ್ಥಿತಿಯನ್ನು ಕೂಲಂಕಷವಾಗಿ ವಿಮರ್ಶಿಸಿ ಸರಿಯಾದ ಕಾರಣಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದರೆ ಬಹುಶಃ ಏಳಿಗೆಯ ಹಾದಿಯಲ್ಲಿ ಮುನ್ನಡೆಯಲು ಕಾರಣಗಳು ದಾರಿಗಳು ದೊರೆಯಬಹುದೇನೋ.

ತುಂಬ ಪ್ರಬಲವಾದ ಮನೋವಿಕೃತಿಗಳಿಂದ ಪೂರ್ತಿಯಾಗಿ ಪಾರಾಗುವುದು ಮನುಷ್ಯನಿಗೆ ಕಷ್ಟ. ಆದರೆ ಅವುಗಳ ಬಗ್ಗೆ ಅರಿವು ಮೂಡಿದ ಮೇಲೆ, ಅವನು ಬಯಸುವುದಾದರೆ, ಅಂಥ ಮನೋವಿಕೃತಿಗಳನ್ನು ಉಪಯುಕ್ತವಾದ ರೀತಿಯಲ್ಲಿ ನಡೆಸಿಕೊಳ್ಳಲು ಸಾಧ್ಯ.

ಈರ್ಷ್ಯೆ ಪ್ರಧಾನವಾದ ಸೇಡಿನಿಂದ ಈ ಕೆಳಕಂಡಂತೆ ಪ್ರಯೋಜನ ಪಡೆದುಕೊಳ್ಳಬಹುದು. ಹೊಟ್ಟೆಕಿಚ್ಚು ಪಡುವವನು ಅಂಥ ಭಾವನೆ ತನ್ನಲ್ಲಿ ಹುಟ್ಟಲು ಯಾರು ಕಾರಣರಾದರೂ, ಅವರಿಗಿಂತಲೂ ಮಿಗಿಲಾಗಿ ಆ ಕ್ಷೇತ್ರದಲ್ಲಿ ತಾನು ಏಳಿಗೆ ಹೊಂದಿ ಆ ವ್ಯಕ್ತಿಯನ್ನು, ಹಿಂದೆ ಹಾಕಿ ತನ್ನ ಪ್ರತಿಭಾ ಸಾಮರ್ಥ್ಯವನ್ನು ಮೆರೆಯಬೇಕಾಗುತ್ತದೆ. ವಿವೇಕಶಾಲಿಗಳಾದ ಜನರು ಹೊಟ್ಟೆಕಿಚ್ಚಿನಿಂದ ಹುಟ್ಟಿದ ಸೇಡಿನ ಭಾವನೆಯನ್ನು ಸ್ಪರ್ಧೆಯ ಭಾವನೆಯಾಗಿ ಬದಲಾಯಿಸಿಕೊಳ್ಳುತ್ತಾರೆ. ಸೇಡು ತೀರಿಸಿಕೊಳ್ಳುವ ಸಮಯದಲ್ಲಿ ನಮ್ಮ ವಿಧ್ವಂಸಕ ಶಕ್ತಿಗಳೆಲ್ಲ ಒಟ್ಟಾಗಿ ಜಾಗೃತವಾದರೆ, ಸ್ಪರ್ಧೆಯ ಕಾಲದಲ್ಲಿ ನಿರ್ಮಾಣಕಾರಿಯಾದ ಶಕ್ತಿಗಳೆಲ್ಲ ಒಟ್ಟುಗೂಡಿ ಮೇಲೆದ್ದು ಬರುತ್ತವೆ. ಸೇಡಿನ ಭಾವನೆ ವಿವೇಕವನ್ನು ಮೆಟ್ಟಿಹಾಕಿ ತಾನೇ ಸರ್ವಶಕ್ತವಾಗುತ್ತದೆ. ಆದರೆ ಸ್ಪರ್ಧೆ ವಿವೇಕದ ನೆರವಿನಿಂದ ಮನಸ್ಸಿನಲ್ಲಿ ಅಡಗಿರುವ ಸುಪ್ತಶಕ್ತಿಗಳನ್ನು ಮತ್ತೆ ಕ್ರಿಯಾಶೀಲನನ್ನಾಗಿ ಮಾಡುತ್ತದೆ. ಒಂದು ಗೆರೆ ಎಳೆದಿದ್ದರೆ ಹೊಟ್ಟೆಕಿಚ್ಚಿನ ಮನುಷ್ಯ ಅದರ ಸ್ವಲ್ಪಭಾಗವನ್ನು ಅಳಿಸಿಹಾಕಿ ಚಿಕ್ಕದು ಮಾಡುವುದನ್ನು ಬಿಟ್ಟು ಬೇರೇನೂ ಯೋಚಿಸಲಾರ. ಆದರೆ ಸ್ಪರ್ಧಾಮನೋಭಾವನೆಯನ್ನು ಬೆಳೆಸಿಕೊಂಡ ಮನುಷ್ಯ ಆ ಗೆರೆಯ ಪಕ್ಕದಲ್ಲಿ ಇನ್ನೊಂದು ದೊಡ್ಡ ಗೆರೆಯನ್ನು ಎಳೆದು ಮುಂಚೆ ಎಳೆದಿದ್ದ ಗೆರೆ ಚಿಕ್ಕದೆಂದು ತೋರಿಸುವಲ್ಲಿ ತೊಡಗಿರುತ್ತಾನೆ.

ಸೇಡಿನ ಈ ನಿರ್ಮಾಣಕಾರಿಯಾದ ಸ್ವರೂಪ ಹೊಸ ಅನ್ವೇಷಣೆಯೇನಲ್ಲ. ಆದಿಕಾಲದಿಂದ ಹಿಡಿದು ಇಂದಿನವರಲ್ಲಿ ಮಾನವಕುಲ ಬೆಳವಣಿಗೆಯ ಹಾದಿಯಲ್ಲಿ ನಡೆದುಬಂದ ರೀತಿಯನ್ನು ಅವಲೋಕಿಸಿದರೆ ಗೊತ್ತಿಲ್ಲದೆಯೊ ಇಂಥ ನಿರ್ಮಾಣಕಾರಿ ಸೇಡಿನ ಭಾವನೆಯಿಂದ ಪ್ರಯೋಜನವನ್ನು ಪಡೆದುಕೊಂಡ ಉದಾಹರಣೆಗಳು ಹೇರಳವಾಗಿ ದೊರೆಯುತ್ತವೆ.

ಅನು : ಲಕ್ಷ್ಮೀನಾರಾಯಣ ಅರೋರಾ

ಸ್ವರ್ಣ ಸಂಪುಟದಿಂದ ಹೊರಬಂದ ಒಕ್ಕಣ್ಣಿನ ದೊರೆ

ಮಾರಿಸ್ ಶಡ್ ಬೋಲ್ಸ್

ಬಹಳ ಹಿಂದಿನ ಕಾಲದ ಭಯೋತ್ಪಾದಕ ಯೋಧನೊಬ್ಬನ ಜೀವ ತುಂಬಿದಂತಿರುವ ಮತ್ತು ಭೂತಾಕಾರದ ಒಂದು ಶಿರಸ್ಸು ಇಂಗ್ಲೆಂಡಿನ ಮ್ಯಾಂಚೆಸ್ಟರ್ ವಸ್ತುಪ್ರದರ್ಶನಾಲಯದಲ್ಲಿದೆ. ಅದು ಅಲ್ಲಿನ ಸಂದರ್ಶಕರನ್ನು ತನ್ನೆಡೆಗೆ ಆಹ್ವಾನಿಸುತ್ತಿರುವಂತೆಯೇ ಹಿಮ್ಮೆಟ್ಟಿಸುತ್ತದೆ ಕೂಡ. ವಿಕಾರವಾದ ಗಾಯದ ಕಲೆಯೇ ಬಲಗಣ್ಣಿನ ಗುಳಿಯಾಗಿರುವ, ಗಡ್ಡಧಾರಿಯಾದ ಹಾಗೂ ಹೋರಾಟದ ಹೊಡೆತಕ್ಕೆ ಗಾಸಿಯಾದಂತಿರುವ ಆ ಮೋರೆ ಯಾವನೇ ಒಬ್ಬ ಸಾಮಾನ್ಯ ಯೋಧನದ್ದಲ್ಲ. ಹಿಂದೆಂದೂ ಮಾಡಿರದ ವೈಜ್ಞಾನಿಕ ಪತ್ತೆದಾರಿ ಕೆಲಸದ ಫಲಸ್ವರೂಪವಾಗಿ ಮೇಣದ ಕಾಮಗಾರಿಕೆಯಿಂದ ಪುನರ್ ನಿರ್ಮಾಣ ಹೊಂದಿದ ಈ ಆಕೃತಿ ೨,೩೦೦ ವರ್ಷಗಳ ಹಿಂದೆ ಗ್ರೀಸ್ ದೇಶವನ್ನು ಒಗ್ಗೂಡಿಸಿದ ಧುರೀಣನಾದ ಮೆಸಿಡೋನಿಯಾದ ಎರಡನೆಯ ಫಿಲಿಪ್‌ನ ಶಿರ. ಇದು ಕಾಲಾತೀತವಾಗಿ ಮಹತ್ತರವಾಗಿರುವ ಪ್ರಾಕ್ತನ ಸಂಶೋಧನೆಗಳನ್ನು ಪ್ರತಿನಿಧಿಸುವ ಒಂದು ಅಂತಿಮ ಪುರಾವೆ.

ಕ್ರಿ.ಪೂ. ೩೩೬ರ ಬೇಸಿಗೆ. ಗ್ರೀಸ್‌ನ ಉತ್ತರಭಾಗದಲ್ಲಿ ಬಲಾಢ್ಯವಾಗಿದ್ದ ಮೆಸಿಡೋನಿಯಾದ ರಾಜಾಸ್ಥಾನ. ಅಲ್ಲಿ ರಾಜ ಕುಟುಂಬದ ಮದುವೆಯೊಂದು ನೆರವೇರುತ್ತಿದ್ದಾಗಲೇ ಈ ಭಯೋತ್ಪಾದಕ ಮುಖ ಮುದ್ರೆಯ ಅಪೂರ್ವ ಕಥೆ ಮೊದಲಾಯಿತು. ಗ್ರೀಕ್ ಲೋಕದ ಎಲ್ಲ ಕಡೆಗಳಿಂದಲೂ ವಿಶೇಷ ಅತಿಥಿಗಳು 'ದೋಣಿಯಲ್ಲಿ ಮತ್ತು ಕುದುರೆಯ ಮೇಲೆ ಸಾಗಿ ಬಂದು ತಲುಪಿದ್ದರು. ತಾವು ಕೇವಲ ಭೀಕರವಾಗಿ ಕಾದಾಡುವ ರಾಷ್ಟ್ರೀಯರು ಮಾತ್ರ ಅಲ್ಲವೆಂದು ಮೆಸಿಡೋನಿಯಾದ ನಿವಾಸಿಗಳು ತಮ್ಮ ದಕ್ಷಿಣದ ನೆರೆಹೊರೆಯವರಿಗೆ ಪ್ರದರ್ಶನ ಮಾಡುತ್ತಿದ್ದರು. ಭಾರಿ ಔತಣಗಳು, ಆಟೋಟಗಳು, ಕವಿಗಳಿಗೆ

೧೯೮೫ರ ಜೂನ್ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಲೇಖನದ ಅನುವಾದ.

ಪುರಸ್ಕಾರಗಳು ಮತ್ತು ಎಥೇನಿನ ನಟರಿಂದ ಅನುವಾಚನಗಳು ಅಲ್ಲಿದ್ದುವು. ಈ ಎಲ್ಲ ಭವ್ಯತೆಗಳ ಮಧ್ಯೆ ಇಡಿಯ ಯೂರೋಪ್ ಖಂಡಕ್ಕೆ ಭೀತಿದಾಯಕನಾದ ಮನುಷ್ಯ— ಎರಡನೆಯ ಫಿಲಿಪ್ (Phillip II) ಇದ್ದನು.

ಫಿಲಿಪ್ ಯಾವತ್ತೂ ಯುದ್ಧಾಂತರಗಳಲ್ಲಿ ತನ್ನ ತುಕಡಿಗಳ ಮುಂಚೂಣಿಯಲ್ಲಿದ್ದುಕೊಂಡು ಇತರ ಗ್ರೀಕ್ ರಾಜ್ಯಗಳ ವಿರುದ್ಧ ಸೈನ್ಯಗಳನ್ನು ನಡಿಸಿದ್ದ. ಎಲ್ಲ ರಾಜ್ಯಗಳೂ ಬಿದ್ದು ಇದೀಗ ಅವನು ಪರ್ಸಿಯಾದ ವಿರುದ್ಧ ಯುದ್ಧ ಸಾರಲುದ್ಯುಕ್ತನಾಗಿದ್ದನು. ಮೆಸಿಡೋನಿಯಾಕ್ಕೆ ಅತಿ ಸಮೀಪದ ಗ್ರೀಕ್ ನೆರೆಯವನಾದ ಇಪಿರಸ್‌ನ ದೊರೆಗೆ ಅವನು ತನ್ನ ಮಗಳನ್ನು ವಿವಾಹದ ಮೂಲಕ ಧಾರೆ ಎರೆದಿದ್ದ. ವಿವಾಹ ಸಮಾರಂಭದ ಮಾರನೆಯ ಮುಂಜಾನೆ; ಗ್ರೀಕ್ ದೇವತೆಗಳ ಪ್ರತಿಮೆಗಳನ್ನು ಪುರಸ್ಕರಿಸಬೇಕಾಗಿದ್ದ ಒಂದು ಥಿಯೇಟರಿಗೆ ಅವನು ತನ್ನ ಸ್ಫುರದ್ರೂಪಿಯಾದ ಮಗ ೨೦ ವರ್ಷದ ಅಲೆಕ್ಸಾಂಡರನೊಡನೆ ನಡೆದುಹೋದ. ಈಗಾಗಲೇ ಮನುಷ್ಯನಿಗೂ ಮೀರಿದ ದೇವತೆಯಂತೆ ತೋರಿದ್ದ ತನ್ನ (ಫಿಲಿಪ್‌ನ) ಪ್ರತಿಮೆಯನ್ನು ಅವುಗಳ ನಡುವೆ ಸಿಂಹಾಸನಾರೂಢಗೊಳಿಸುವುದಿತ್ತು.

ಕೊಲೆಯ ನಿಗೂಢತೆ: ಇಷ್ಟಾದರೂ ಒಂದೆರಡೇ ನಿಮಿಷಗಳನಂತರ ಫಿಲಿಪ್ ತಾನು ಕೇವಲ ನಶ್ವರನೆಂದು ಸಾಧಿಸಿದ. ಅವನು ಥಿಯೇಟರನ್ನು ಪ್ರವೇಶಿಸುತ್ತಲೇ ಅವನ ಅಂಗರಕ್ಷಕರಲ್ಲಿ ಒಬ್ಬನು ಅವನ ಬದಿಗೆ ಕಠಾರಿಯಿಂದ ರಭಸದಿಂದ ಇರಿದ. ಫಿಲಿಪ್ ಆ ಗಳಿಗೆಯಲ್ಲೇ ಸತ್ತ. ಅವನ ಕೊಲೆಗಡುಕ ಬೆನ್ನಟ್ಟಲ್ಪಟ್ಟ ಮತ್ತು ಕೆಲವರ ಅಭಿಪ್ರಾಯದಂತೆ ಆ ಗಳಿಗೆಯಲ್ಲೇ ವಧಿಸಲ್ಪಟ್ಟ.

ಈ ಗುಪ್ತವಧೆಯ ಹಿನ್ನೆಲೆಯಲ್ಲಿ ಯಾರಿದ್ದರು ? ಫಿಲಿಪ್‌ನ ಪತ್ನಿಯರಲ್ಲಿ ಒಬ್ಬಳೂ ಅಲೆಕ್ಸಾಂಡರನ ತಾಯಿಯೂ ಆದ ಒಲಿಂಪಿಯಾಳಲ್ಲಿ ಸಂಶಯ ನೆಟ್ಟಿತು. ಅವಳ ಈರ್ಷೆಗೆ ಕಾರಣವಿತ್ತು. ಫಿಲಿಪ್ ಇತರ ಆರು ಮಂದಿ ಹೆಂಡಿರನ್ನು ಕಟ್ಟಿಕೊಂಡಿದ್ದ. ಅವರಲ್ಲಿ ಕೊನೆಯವಳು ಅದೇ ತಾನೆ ಒಂದು ಗಂಡು ಮಗುವಿಗೆ ಜನ್ಮ ಕೊಟ್ಟಿದ್ದಳು. ಆ ಮಗು ಒಂದು ದಿನ ಅಲೆಕ್ಸಾಂಡರನ ಅಧಿಕಾರಾರೂಢತೆಗೆ ಮುಳುವಾಗಬಹುದಿತ್ತು.

ಅಲೆಕ್ಸಾಂಡರ ಆತುರದಿಂದ ಕಿರೀಟಧಾರಣೆ ಮಾಡಿಸಿಕೊಂಡ. ಜಗದ್ವಿಖ್ಯಾತ ಅಲೆಕ್ಸಾಂಡ್ರನಾಗಿ ಅವನ ಕೀರ್ತಿಯು ಆ ಕೂಡಲೇ ಅವನ ತಂದೆಯ ಪ್ರಸಿದ್ಧಿಗೆ ಗ್ರಹಣ ಪ್ರಾಯವಾಗುವುದು) ಫಿಲಿಪ್‌ನ ಅಂತ್ಯಸಂಸ್ಕಾರದ ವಿಧಿಗಳು ನೆರವೇರಿದುವು: ಅವನ ದೇಹವು ದಹನಗೊಂಡಿತು; ಮತ್ತು ಅವನ ಎಲುಬುಗಳು ಶುದ್ಧೀಕೃತವಾಗಿ ಅವನ ಹತ್ಯಾರುಗಳು ಮತ್ತು ಅರಮನೆಯ ರಾಜಯೋಗ್ಯ ನಿಧಿಗಳೊಂದಿಗೆ ಸಮಾಧಿಸ್ತವಾದುವು. ಆಮೇಲೆ ೨೩ ಶತಮಾನಗಳೂ ಮೀರಿ ಈ ದೃಶ್ಯವನ್ನು ಕತ್ತಲೆಯು ಮರೆಮಾಡಿತು.

ವರ್ಜೀನಾ ಒಂದು ಸಣ್ಣ ಮತ್ತು ಹಚ್ಚಹಸಿರಾಗಿರುವ ಗ್ರೀಕ್ ಹಳ್ಳಿ. ಅದರ ಜನಸಂಖ್ಯೆ ೧,೨೦೦ ಆಗಿದ್ದು ಸಲೋನಿಕಾದ ಆಗ್ನೇಯಕ್ಕೆ ಸುಮಾರು ೬೫ ಕಿಲೋಮೀಟರ್ ದೂರದಲ್ಲಿ ಉಪಸ್ಥಿತವಾಗಿದೆ. ಇದು ಹಳೆಯ ದಾಖಲೆಗಳಲ್ಲಿ ಮೆಸಿಡೋನಿಯಾ ಅರಸೊತ್ತಿಗೆಯ ಪೂರ್ವದ ನೆಲೆಯಾದ ಆಗ್ಯಾ ಎಂದು ಪರಿಚಿತವಾಗಿದ್ದು ಎಡಿಸ್ಸಾ ಎಂಬ

ಸ್ಥಳದಿಂದ ಡಜನ್‌ಗಟ್ಟಲೆ ಕಿಲೋಮೀಟರ್‌ಗಳಷ್ಟು ದೂರದಲ್ಲಿದೆ ಎಂದು ಬಹಳ ಹಿಂದೆಯೇ ಖಾತ್ರಿಯಾಗಿದೆ. ವರ್ಜೀನಾದ ಬಳಿ ಆಶ್ಚರ್ಯಕರವಾಗಿ ದೊಡ್ಡದಾಗಿ ಹರಡಿದ್ದ ಮೆಸಿಡೋನಿಯಾದ ಅರಮನೆಯ ಒಂದು ಭಾಗವನ್ನು ೧೮೬೦ರಲ್ಲಿ ಒಬ್ಬ ಫ್ರೆಂಚ್ ಪ್ರಾಕ್ತನ ಶಾಸ್ತ್ರಜ್ಞ ಭೂಶೋಧನೆಗೆ ಒಳಪಡಿಸಿದ್ದ.

ಸನ್ ೧೯೩೦ರಲ್ಲಿ ೧೮ ವರ್ಷ ಪ್ರಾಯದ, ಮೆಸಿಡೋನಿಯಾದ ಪ್ರಾಕ್ತನ ಶಾಸ್ತ್ರದ ವಿದ್ಯಾರ್ಥಿಯಾದ ಮನೋಲಿಸ್ ಆ್ಯಂಡ್ರೋನಿಕಾಸ್ ಎಂಬುವನು ಅರಮನೆಯ ಉಳಿದ ಭಾಗದ ಭೂ ಶೋಧನೆಯಲ್ಲಿ ತೊಡಗಿದ್ದ ತಂಡದೊಂದಿಗೆ ಕೆಲಸ ಮಾಡುತ್ತಿದ್ದ. ವರ್ಜೀನಾದ ಸುತ್ತಮುತ್ತಲಿನ ಮೈದಾನಗಳೂ, ಅದರಲ್ಲೂ ಕ್ರಿ.ಪೂ. ೧೦೦೦–೭೦೦ರ ನಡುವಿನ ಪೂರ್ವದ ಕಬ್ಬಿಣ ಯುಗದ ಸಮಾಧೀ ದಿಬ್ಬಗಳು ಅಥವಾ ಭೂಗೆಡ್ಡೆ (Tumuli)ಗಳ ವಿಷಯದಲ್ಲಿ ಆ್ಯಂಡ್ರೋನಿಕಾಸನು ಹೆಚ್ಚು ಆಸಕ್ತಿ ವಹಿಸಿದ. ಹಳ್ಳಿಯ ಮಧ್ಯಭಾಗದಲ್ಲಿ ಒಂದು ದಿಬ್ಬ ಇತರೆಲ್ಲವುಗಳಿಗಿಂತ ಗಾತ್ರದಲ್ಲಿ ದೊಡ್ಡದಾಗಿತ್ತು. ಅದು ಸುಮಾರು ೧೧೦ ಮೀಟರುಗಳಷ್ಟು ಅಡ್ಡಗಲಕ್ಕಿದ್ದು ಹನ್ನೆರಡೂವರೆ ಮೀಟರು ಗಳಷ್ಟು ಎತ್ತರವಾಗಿತ್ತು. ಕಬ್ಬಿಣ ಯುಗದ ಇನ್ನಾವುದೇ ಸಮಾಧಿಯಲ್ಲಿ ಹೊಳಿರ ಲಾರದ ವಿಶೇಷವಾಗಿರುವುದೇನೋ ಈ ಮಹಾದಿಬ್ಬದೊಳಗೆ ಅಡಗಿರಬಹುದೇ ಎಂದು ಎಳೆಯ ಆ್ಯಂಡ್ರೋನಿಕಾಸನು ಬೆರಗುಗೊಂಡ.

ಎರಡನೆಯ ಜಾಗತಿಕ ಯುದ್ಧ ಮತ್ತು ಗ್ರೀಕ್ ಅಂತರ್ಯುದ್ಧಗಳು ನಡುವೆ ಬಂದುವು. ಸಲೋನಿಕಾ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪಡೆದು ಆ್ಯಂಡ್ರೋನಿ ಕಾಸ್ ವರ್ಜೀನಾಕ್ಕೆ ಮರಳಬೇಕಾದರೆ ೧೯೫೨ನೇ ಇಸವಿ ಬಂದೇ ಬಂತು. ವರ್ಜೀನಾದಲ್ಲಿ ಸೈನಿಕರು ಕಂದರಗಳನ್ನು ಅಗೆದಾಗ ಮೇಲೆ ಬಂದ ಅಮೃತಶಿಲೆಯ ತುಂಡುಗಳಲ್ಲಿ ಅವರು ಕ್ರಿ.ಪೂ. ೪ನೇ ಶತಮಾನದಲ್ಲಿ ಕೆತ್ತಲ್ಪಟ್ಟ ಎರಡು ಸಮಾಧಿ ಶಿಲೆಗಳನ್ನು ಜೊತೆ ಮಾಡಿದ. ಅನಂತರದ ಕಾಲಗಳಲ್ಲಿ ನಾಲ್ಕು ಮತ್ತು ಮೂರನೇ ಶತಮಾನ (ಕ್ರಿ.ಪೂ.) ಗಳಿಗೆ ಸಂಬಂಧಿಸಿದ ಬಹಳ ಸಮಾಧೀ ತುಂಡುಗಳನ್ನು ಅವನು ಪಡೆದ. ನಿಜವಾಗಿಯೂ ಅವು ಫಿಲಿಪ್ ಮತ್ತು ಅಲೆಕ್ಸಾಂಡರರ ಕಾಲದ ಮೆಸಿಡೋನಿಯಾದ ಉಚ್ಛ್ರಾಯಾ ವಸ್ಥೆಯನ್ನು ಬಳಸಿದ್ದ ಕಬ್ಬಿಣ ಯುಗದ ಸಮಾಧೀ ನಿವೇಶನಗಳಿಗೂ ಇತ್ತೀಚಿನವು. ಸಮಾಧಿಗಳು ಕೊಳ್ಳೆಹೊಡೆಯಲ್ಪಟ್ಟಿದ್ದುವು; ಆದರೂ ಗುಡ್ಡದಂತಿರುವ ಭೂಗೆಡ್ಡೆಯ ಅಂತರಾಳದಲ್ಲಿ ಒಂದು ಗೋರಿ ಅಡಗಿರಬಹುದೇ?

ನಿರ್ದಿಷ್ಟವಾದ ಸುಳಿವು : ಈ ಶಕ್ಯತೆಯನ್ನು ಪ್ರಾಮಾಣಿಕವಾಗಿ ಆಕ್ರಮಿಸಿ ತೋರಿಸಲು ಅಪ್ರಸ್ತುತ ಭೂ ಸಂಶೋಧನೆಗಳು, ಬರವಣಿಗೆ ಮತ್ತು ಭಾಷಣಗಳಲ್ಲಿ ನಿರತನಾಗಿದ್ದ ಆ್ಯಂಡ್ರೋನಿಕಾಸನಿಗೆ ಇನ್ನೆರಡು ದಶಮಾನಗಳೇ ಮೀರಿಹೋದುವು. ತನ್ಮಧ್ಯೆ ಓರ್ವ ಬ್ರಿಟಿಷ್ ವಿದ್ವಾಂಸ ಐತಿಹಾಸಿಕ ದಾಖಲೆಯ ವಿವರಣೆಗಳ ಆಧಾರದಿಂದ ವರ್ಜೀನಾವೇ ಪ್ರಾಚೀನ ಅಗ್ಯಾ ಎಂದು ನಿರ್ಧಾರಾತ್ಮಕವಾಗಿ ಪತ್ತೆಹಚ್ಚಿದ. ಕೊನೆ ಗೊಮ್ಮೆ ಆ್ಯಂಡ್ರೋನಿಕಾಸ್ ವರ್ಜೀನಾದ ಭೂಗೆಡ್ಡೆಗಳನ್ನು ಬಿಗಿಯಾಗಿ ಸಂಶೋಧಿಸಲು ಹೊರಟಾಗ ಅವನು ನೋಡಲು ತವಕಿಸಿದುದು ಬೇರಾವ ಗೋರಿಯನ್ನಲ್ಲ; ಅರಸೊತ್ತಿಗೆಯ ಗೋರಿಯನ್ನು.

೧೯೭೭ರಲ್ಲಿ ಅವನು ಲಘು ಭೂಭೇದಕ ಯಂತ್ರದ ಮೂಲಕ ಆ ಭೂಗೆಡ್ಡೆಯನ್ನು ಭೂಮಿಗೆ ಸಮತಲವಾಗಿ ಮತ್ತು ಇನ್ನೂ ಆಳಕ್ಕೆ ಕತ್ತರಿಸತೊಡಗಿದ. ಆ ತಂಡವು ೩೫ ದಿನಗಳಲ್ಲಿ ೧೮,೦೦೦ ಘನ ಅಡಿಗಳಷ್ಟು ನೆಲವನ್ನು ಭೇದಿಸಿತು. ಆಗ ಆ್ಯಂಡ್ರೋನಿಕಾಸನು ನಿರಾಸೆಹೊಂದಿ ಭೂಶೋಧನೆ ಮುಗಿಯಿತೆಂದು ಘೋಷಿಸಬೇಕೆಂದಿರುವಷ್ಟರಲ್ಲಿ ಆಳವಾಗುತ್ತಿದ್ದ ಗುಳಿಯ ತಳದಲ್ಲಿ ನೇರಬದಿಗಳಿಂದ ಕೂಡಿದ ಶಿಲೆಯು ಗೋಚರಿಸಿತು. ಆ ಕೂಡಲೇ ಅವನು ಮೆಸಿಡೋನಿಯಾ ಅರಸೊತ್ತಿಗೆಯ ಆಟೋಟದ ತೈಲಚಿತ್ರ—ಸಿಂಹಬೇಟೆಯ ನಿಶಾನೆಯಿಂದಂಕಿತವಾದ ಗೋರಿಯ ಎತ್ತರವಾದ ಮುಂಭಾಗವನ್ನು ನೋಡುತ್ತಿದ್ದ. ಗೋರಿಯ ಕದಗಳು ಎಂದೂ ತೆರೆಯಲ್ಪಟ್ಟಿರಲಿಲ್ಲ.

೧೯೭೭ನೇ ಇಸವಿ, ನವೆಂಬರ್ ೮ನೇ ದಿನದಂದು ಆ್ಯಂಡ್ರೋನಿಕಾಸ್ ಗೋರಿಯನ್ನು ಪ್ರವೇಶಿಸಿದನು. ಆಗ ೫೮ ವರ್ಷ ಪ್ರಾಯಸ್ಥವಾಗಿದ್ದ ಉತ್ಸಾಹೀ ಪ್ರಾಕ್ತನ ಶಾಸ್ತ್ರಜ್ಞನು ಗೋರಿಯ ಮುಚ್ಚಿಗೆಯ ಶಿಲೆಯನ್ನು ಸನ್ನೆಯಿಂದ ಸರಿಸಿ ಹೆಚ್ಚುಕಡಿಮೆ ಕಳ್ಳನಂತೆಯೇ ಏಣಿಯಮೂಲಕ ಒಳಗಿಳಿದ. ಟಾರ್ಚಿನ ಪ್ರಕಾಶದಲ್ಲಿ ಅವನು ಒಳಗೆ ಕಂಡ ದೃಶ್ಯವು ಅದ್ಭುತವಾಗಿತ್ತು: ಅದೊಂದು ಚೌಕಾಕಾರದ ಕೊಠಡಿಯಾಗಿದ್ದು ಅದರ ಅಮೃತಶಿಲೆಯ ದ್ವಾರಗಳು ಮುಚ್ಚಲ್ಪಟ್ಟಿದುವು; ಅಖಂಡವಾಗಿದ್ದ ಶಿಲಾನಿರ್ಮಿತ ಶವಸಂಪುಟ ಮತ್ತು ಎಲ್ಲೆಲ್ಲೂ ಹರಡಿದ್ದ ನಿಧಿ, ಧೂಳಿನಿಂದ ಆವರಿಸಲ್ಪಟ್ಟಿದ್ದು ಹೊಳೆಯುತ್ತಿದ್ದುವು. ಆ್ಯಂಡ್ರೋನಿಕಾಸ್ ತನ್ನ ಕಂಗಳನ್ನು ನಂಬಲಾರದಾದ ಮತ್ತು ಹಾಗೆಯೇ ಸ್ತಂಭೀಭೂತನಾದ.

ನಂಬಲಸಾಧ್ಯವಾದ ಸಂಪತ್ತು : ನಂತರದ ದಿನಗಳಲ್ಲಿ ಆ್ಯಂಡ್ರೋನಿಕಾಸ್ ಮತ್ತು ಅವನ ತಂಡ ದಾಖಲೆಗಳ ನಿರ್ಮಾಣ, ಫೋಟೋಗ್ರಫಿ ಪರಿಶೋಧನೆ ಮುಂತಾದ ಕೆಲಸಗಳನ್ನು ಗಂಭೀರವಾಗಿ ನಿರ್ವಹಿಸಿದರು. ಶಿಲ್ಪಕಲಾನೈಪುಣ್ಯ, ವಿಪುಲವಾದ ಚಿನ್ನ ಬೆಳ್ಳಿ ಮತ್ತು ದಂತದ ಸ್ಮಶಾನಸಾಮಗ್ರಿಗಳು ಅದೊಂದು ಲೂಟಿಯಾಗದಿರುವ ಅರಸೊತ್ತಿಗೆಯ ಗೋರಿ ಎಂಬುದನ್ನು ದೃಢಪಡಿಸಿದುವು. ಕಂಚಿನ ಆಯುಧಗಳು ಮತ್ತು ಕವಚಗಳು ಒಬ್ಬ ವೀರ ಸಾಮ್ರಾಟನದಾಗಿದ್ದುವು.

ತಂಡದವರು ಶ್ವೇತ ಅಮೃತಶಿಲೆಯ ಶವಸಂಪುಟವನ್ನು ತೆರೆದಾಗ ಆಶ್ಚರ್ಯದಿಂದ ನಿಬ್ಬೆರಗಾದರು. ಒಳಗಡೆ ದೇದೀಪ್ಯಮಾನವಾದೊಂದು ಚಿನ್ನದ ಕರಡಿಗೆಯಿತ್ತು. ಅದರ ಮುಚ್ಚಳ ಸೂರ್ಯರಶ್ಮಿಗೆ ಸಮವಾದ ಚಿಹ್ನೆಯಿಂದ ಅಲಂಕೃತವಾಗಿತ್ತು. ಆ ಚಿಹ್ನೆ ಮೆಸಿಡೋನಿಯಾದ ಅರಸೊತ್ತಿಗೆಯ ನಿಶಾನೆ. ಝ್ಯೂಸ (ಗ್ರೀಕ್ ದೇವತೆ)ನ ಪವಿತ್ರ ವೃಕ್ಷಗಳಾಗಿ ಧಾರ್ಮಿಕ ನಿಶಾನೆಯನ್ನು ಪ್ರತಿನಿಧೀಕರಿಸುವ ಚಿನ್ನದಂಥ ಓಕ್ ಮತ್ತು ಸಿಂಧೂರ ಎಲೆಗಳ ನಾಜೂಕಾದ ನಾರುಗಳೊಂದಿಗೆ ದಹನಕ್ರಿಯೆಗೆ ಒಳಪಟ್ಟ ಎಲುಬುಗಳು ಆ ಕರಡಿಗೆಯಲ್ಲಿದ್ದುವು. ಚಿನ್ನದಗಟ್ಟಿಯಿಂದ ರಚಿತವಾದ ಕರಡಿಗೆ ಮತ್ತು ಅದರೊಳಗಿನ ಪರಿಕರಗಳ ಒಟ್ಟುತೂಕ ಹೆಚ್ಚುಕಡಿಮೆ ೧೧ ಕಿಲೋಗಳು. ಆದರೆ ಇದು ಯಾರ ಗೋರಿ ಇದ್ದಿರಬಹುದು?

ಗಡಿಗೆ ಮತ್ತು ಅದರ ಕುಸುರುಕೆಲಸ ಸುಳಿವು ಒದಗಿಸಿದುವು. ಗೋರಿ ಖಡ್ಡಾಯವಾಗಿ ಕ್ರಿ.ಪೂ. ನಾಲ್ಕನೆಯ ಶತಮಾನದ ಅರು ಮತ್ತು ಒಂಭತ್ತರ ನಡುವಿನ ದಶಮಾನ

ಗಳಲ್ಲಿ ಹೂಳಲ್ಪಟ್ಟಿರಬೇಕು. ಮೆಸಿಡೋನಿಯಾದಲ್ಲಿ ಆ ಅವಧಿಯಲ್ಲಿ ಹೂಳಲ್ಪಟ್ಟ ಏಕ ಮಾತ್ರ ಸಾಮ್ರಾಟ ಒಬ್ಬನೇ ಒಬ್ಬ—ಎರಡನೆಯ ಫಿಲಿಪ್.

ಆದರೆ ಇಂದೊಂದು ವ್ಯವಕಲನವಷ್ಟೆ; ಸಾಕ್ಷ್ಯವಲ್ಲ. ಆ ಗೋರಿ ಫಿಲಿಪ್‌ನದೇ ಎಂದು ನಿರ್ದಿಷ್ಟವಾಗಿ ಹೇಳುವ ಉಲ್ಲೇಖವಿರಲಿಲ್ಲ. ನಂತರ ಧೂಳಿನ ಆಳದಲ್ಲಿ ಎರಡೂವರೆ ಸೆಂಟಿಮಿಟರ್ ಎತ್ತರದ ಐದು ಪುಟ್ಟ ದಂತದ ತಲೆಗಳು ಆ್ಯಂಡ್ರೋನಿಕಾಸ್‌ಗೆ ಲಭಿಸಿ ದುವು. ಅವುಗಳಲ್ಲಿ ಮೂರು ಗಂಡು ಶಿಲ್ಪಗಳೂ ಮತ್ತು ಎರಡು ಹೆಣ್ಣು ಶಿಲ್ಪಗಳೂ ಆಗಿದ್ದುವು. ಅವುಗಳಲ್ಲಿ ಎರಡನ್ನು ಒಂದು ಫಿಲಿಪ್ ಮತ್ತೊಂದು ಅಲೆಕ್ಸಾಂಡರ ಎಂದ ವನ್ನು ನಿರ್ಧಾರಾತ್ಮಕವಾಗಿ ಗುರುತಿಸಿದ. ಉಳಿದ ಮೂರರಲ್ಲಿ ಒಂದು ಒಲಿಂಪಿಯಾ ಳೆಂದೂ ಮತ್ತೆರಡು ಫಿಲಿಪ್‌ನ ತಂದೆತಾಯಿಗಳೆಂದೂ ಅವನು ಭಾವಿಸಿದ. ಅಲೆಕ್ಸಾಂಡರ್ ಈಜಿಪ್ಟ್‌ನಲ್ಲಿ ಹೂಳಲ್ಪಟ್ಟಿದ್ದ. ಅಂತೆಯೇ ಆ ಗೋರಿ ಫಿಲಿಪ್‌ನದೇ ಆಗಿರಬೇಕೆಂದು ಆ್ಯಂಡ್ರೋನಿಕಾಸ್ ತರ್ಕಿಸಿದ.

ತಾನು ಪ್ರೊಫೆಸರ್ ಆಗಿದ್ದ ಸಲೋನಿಕಾ ವಿಶ್ವವಿದ್ಯಾಲಯದಲ್ಲಿ ಆ್ಯಂಡ್ರೋನಿಕಾಸ್ ವಿದ್ಯುತ್‌ಸಂಚಾರಪ್ರಾಯವಾದ ಹೇಳಿಕೆಯಿತ್ತ: "ಈವರೆಗೆ ಲಭ್ಯವಾದ ಪ್ರಾಕ್ತನ ಸಾಕ್ಷ್ಯದ ಆಧಾರದಿಂದ ಇದು ಎರಡನೆಯ ಫಿಲಿಪ್‌ನ ಗೋರಿ ಎಂದು ಹೇಳಲು ನಾನು ಬಾಧ್ಯನಾಗಿದ್ದೇನೆಂದು ನಾನು ನಂಬಿದ್ದೇನೆ."

ತಾನು ಎರಡನೆಯ ಫಿಲಿಪ್‌ನ ಗೋರಿಯನ್ನು ಕಂಡುಹಿಡಿದಿದ್ದೇನೆಂದು ಆ್ಯಂಡ್ರೋನಿಕಾಸನಿಗೆ ಖಾತ್ರಿಯಾದಾಗ್ಯೂ ಅವನಿಗೆ ನಿರ್ಣಯಾತ್ಮಕವಾದ ಪುರಾವೆಯ ಕೊರತೆಯಿತ್ತು. ಸಹ ಪ್ರಾಕ್ತನಶಾಸ್ತ್ರಜ್ಞರು ಅವನ ಜಯದ ಹಕ್ಕುಬಾಧ್ಯತೆಯನ್ನು ತರಾಟೆಗೆ ತೆಗೆದುಕೊಂಡರು. ಗೋರಿ ರಾಜಕುಟುಂಬದ್ದಾಗಿರಲಿಕ್ಕಿಲ್ಲವೆಂದು ಕೆಲವರು ವಾದಿಸಿದರು. ಗೋರಿಯು ಹೊರ ಅವರಣದ ರೂಪರೇಷೆ ಕ್ರಿ ಪೂ. ೩೩೬ಕ್ಕೂ ಈಚಿನ ದಾಗಿ ತೋರುತ್ತದೆಂದು ಇತರರು ಹೇಳಿದರು. ಗೋರಿಯಲ್ಲಿ ಸಮಾಧಿಸ್ಥರಾದವರು ಬೇರೆ ಯವರು, ಅಂದರೆ, ಬಹುಶಃ ಅಲೆಕ್ಸಾಂಡರನ ತರುವಾಯ ಪಟ್ಟಕ್ಕೆ ಬಂದ ಬಹಳ ದುರ್ಬಲವಾದ, ನೆರಳುಪ್ರಾಯದಂತಿದ್ದ ಮತ್ತು ಪರಾಕ್ರಮಿಯಾಗಿರದ ವ್ಯಕ್ತಿ—ಮೂರನೆಯ ಫಿಲಿಪ್‌ನಿರಬಹುದೆಂದು ಸೂಚಿಸಿದರು. ಗೋರಿಯ ಗುಣ ಮತ್ತು ರೂಪ ರೇಷೆಯ ಬಗೆಗಿನ ಆಕ್ಷೇಪಗಳಿಗೆ ಉತ್ತರವಿತ್ತು ಆ್ಯಂಡ್ರೋನಿಕಾಸ್ ಅಗೆಯುವುದನ್ನು ಮುಂದರಿಸಿದ. ೧೯೮೦ರಲ್ಲಿ ಅವನು ಫಿಲಿಪ್ ವಧಿಸಲ್ಪಟ್ಟಿದ್ದ ಥಿಯೇಟರನ್ನು ಮುಗುಚಿ ಹಾಕಿದ. ಆದರೂ ಕೂಡ ಸ್ವರ್ಣಸಂಪುಟನಲ್ಲಿ ದೊರೆತ ಎಲುಬುಗಳಿಗೆ ಲೇಬಲ್ ಸಿಗಬೇಕಾಯ್ತು. ಆ್ಯಂಡ್ರೋನಿಕಾಸ್‌ನಿಗೆ ಬೇಕಾಗಿದ್ದ ಪುರಾವೆ ವರ್ಜಿನಾದಿಂದ ಅತಿ ದೂರದ ಒಂದು ಅನಿರೀಕ್ಷಿತ ಮೂಲದಿಂದ ಉದಿಸಿ ಬರಬೇಕಾಯ್ತು.

೧೯೭೦ರಲ್ಲಿ ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದ ಮೆಡಿಕಲ್ ಇಲಸ್ಟ್ರೇಶನ್ ಇಲಾಖೆಯ ಸಹಾಯಕ ನಿರ್ದೇಶಕನಾದ ರಿಚರ್ಡ್‌ನೀವೆ ಎಂಬ ಆಂಗ್ಲೇಯನು ಈಜಿಪ್ಟ್‌ನ ಮೂರು ಮಣ್ಣುಗಳನ್ನು ಅವುಗಳ ಪೂರ್ವಾಕಾರಕ್ಕೆ ತರುವ ಪ್ರಯೋಗಾತ್ಮಕ ಕಾರ್ಯ ನಿರ್ವಹಿಸಿದನು. ಅವುಗಳ ಮುಖಗಳಲ್ಲಿ ಜೀವಕಳೆ ತುಂಬಿಸಬಹುದೆಂಬುದನ್ನು ಬರೀ ಎಲುಬುಗೂಡಾದ ತಲೆಬುರುಡೆಯನ್ನು ಅದು ಜೀವಂತ ವ್ಯಕ್ತಿಯು ಬಹಿರಾಕಾರ

ಎಂಬಂತೆ ಬಿಂಬಿಸಿ ಪ್ರದರ್ಶಿಸುವುದಕ್ಕೆ ಅವನು ಅಂಟಿನ ಗಿಲಾವ್ (plaster cast) ಮತ್ತು ಪ್ರತಿಕೃತಿ (modells) ಗಳ ರಚನೆಗೆ ಬೇಕಾದ ಜೇಡಿಮಣ್ಣಿನ ಉಪಯೋಗವನ್ನು ಬಳಸಿದ. ತಲೆಬುರುಡೆಗೆ ಮಾಂಸ ಮತ್ತು ಮಜ್ಜೆಯನ್ನು ಸೇರಿಸಿ ಮುಖಾಕೃತಿಗಳನ್ನು ಕಟ್ಟಲು ಶಕ್ತನಾಗಿದ್ದ ಅವನು.

ಗುರುತಿಸಲು ಅಸಾಧ್ಯವಾದ ದೇಹಗಳಿಗೆ ಮುಖಗಳನ್ನು ಪುನರ್‌ನಿರ್ಮಿಸಲು ಪೊಲೀಸರು ನೀವೆಯ ಸಹಾಯವನ್ನರಸತೊಡಗಿದರು. ಅನೇಕ ತಾತ್ಪೂರ್ತಿಕ ಕಪಾಲಗಳಿಂದ ಅವನು ಪುನರ್‌ನಿರ್ಮಿಸಿದ ಮುಖಗಳು ನಾಪತೆಯಾದ ಜನರ ಪಡಿಯಚ್ಚು (photographs) ಗಳೊಂದಿಗೆ ಹೋಲಿಸಿದಾಗ ನಂಬಲರ್ಹವಾದ ಸಾಕ್ಷ್ಯಗಳಾದುವು.

ಮ್ಯಾಂಚೆಸ್ಟರ್‌ನಲ್ಲಿ ಜ್ಹೋನ್‌ಪ್ರಾಗ್ ಎಂಬ ಪ್ರಾಕ್ತನ ಶಾಸ್ತ್ರಜ್ಞನೂ ಗೆಳೆಯನೂ ಆದವನೊಂದಿಗೆ ಮಾತನಾಡುತ್ತ "ಕೆಲವು ಗ್ರೀಕ್ ತಲೆಬುರುಡೆಗಳ ಮೇಲೆ ಪ್ರಯೋಗ ನಡೆಸುವುದಕ್ಕೆ ನನ್ನ ಅಡಿಯಿಲ್ಲ" ಎಂದು ನೀವೆ ನಿವೇದಿಸಿಕೊಂಡ. ಏಥೆನ್ಸ್‌ನಲ್ಲಿ ಏರ್ಪಟ್ಟ ಪ್ರಾಕ್ತನ ಶಾಸ್ತ್ರಜ್ಞರ ಒಂದು ಕೂಟದಲ್ಲಿ ಪ್ರಾಗನು ಆ ಆ್ಯಂಡ್ರೋನಿಕಾಸನೊಂದಿಗೆ ನೀತಿಯ ವಿಚಾರ ಹೇಳಿದಾಗ, ಆ ಆ್ಯಂಡ್ರೋನಿಕಾಸ್ ಎರಡನೆಯ ಫಿಲಿಪ್‌ನದೆಂದು ತಾನು ನಂಬಿಕೊಂಡು ಬಂದಿದ್ದ ತಲೆಬುರುಡೆಯ ಕಳೇಬರವನ್ನು ಒಪ್ಪಿಸಿದ.

೧೯೮೧ ರಲ್ಲಿ ನೀವೆ ಸಲೋನಿಕಾಕ್ಕೆ ಹಾರಿದ. ಅಲ್ಲಿ ಪ್ರಾಕ್ತನ ವಸ್ತುಸಂಗ್ರಹಾಲಯದಲ್ಲಿ ಗೋರಿಯಿಂದ ಲಭ್ಯವಾದ ಎಲುಬುಗಳು ಉಪಸ್ಥಿತವಿದ್ದುವು. ಸರಿಪಡಿಸಲು ಅಸಾಧ್ಯವಾದ ಪ್ರಾಚೀನ ಕುರುಹಿನ ತುಣಿಕು ಒಂದನ್ನು ತಾನು ಹೊಂದುತ್ತಿದ್ದೇನೆಂಬ ನಿರಂತರವಾದ ಅರಿವಿನೊಂದಿಗೆ ಅವನು ಸಹನಾವೇತನಾಗಿ ಅದುವರೆಗೆ ಉಳಿದುಕೊಂಡು ಬಂದಿದ್ದ ಕಪಾಲದ ಎಲುಬುಚೂರುಗಳ ಅಂಟಿನಗಿಲಾವ್‌ಗಳನ್ನು ಪಡೆದುಕೊಂಡನು.

ಮುಖದ ಪುನರ್ ನಿರ್ಮಾಣ : ಮ್ಯಾಂಚೆಸ್ಟರ್‌ಗೆ ಹಿಂದಿರುಗಿ ಚೂರುಪಾರುಗಳನ್ನು ಒಟ್ಟುಸೇರಿಸಲು ಪ್ರಯತ್ನಿಸುತ್ತಿದ್ದಾಗ ನೀವೆಗೆ ವಿಶೇಷವಾಗಿ ತಲೆಬುರುಡೆಯ ಬಲಕಣ್ಣಿನ ದಿಸೆಯಲ್ಲಿ ಏನೋ ಚ್ಯುತಿ ಅಥವಾ ವಿದ್ರೂಪ ಕಂಡುಬಂತು. ಬ್ರಿಟನ್‌ನಲ್ಲಿ ಇನ್ನಾರಿಗೂ ಮಿಗಿಲಾಗಿ ಗ್ರಿಕ್ ದಹನಕ್ರಿಯೆಗಳ ಬಗ್ಗೆ ಅರಿತಿದ್ದ ದೇಹಶಾಸ್ತ್ರ ವಿಭಾಗದ ಡಾ॥ ಜೊನಾಥನ್ ಮಸ್ಗ್ರೇವ್ ಬಳಿ ಅವನು ಈ ಬಗ್ಗೆ ವಿಚಾರಿಸಿದ. ದಹನಕ್ರಿಯೆಯು ನೂರಕ್ಕೆ ಹತ್ತುಪಾಲಿನಷ್ಟು ಎಲುಬು ಕುಗ್ಗುವಂತೆ ಮಾಡುವುದಾದರೂ ಕೂಡ ಅದರ ಎಲ್ಲಾ ವಿದ್ರೂಪದ ಬಗೆಗೆ ಬೆಳಕುಚೆಲ್ಲದೆಂದು ಮಸ್ಗ್ರೇವ್ ವಿವರಿಸಿದ. ತಾನು ತಲೆಬುರುಡೆಯನ್ನು ಸರಿಯಾಗಿ ಜೋಡಿಸಿರ ವೆನೋ ಎಂದು ಇಬ್ಬರು ಪ್ಲಾಸ್ಟಿಕ್ ಶಸ್ತ್ರತಜ್ಞರನ್ನು ಸಹ ಕರೆಸಿ ಪರೀಕ್ಷಿಸಿದ. ಅವನು ಸರಿಯಾಗಿ ಜೋಡಿಸಿದ್ದ. ವಿದ್ರೂಪಕ್ಕೆ ಅವರು ಹೀಗೆ ವಿವರಣೆ ನೀಡಿದರು: ತಲೆಬುರುಡೆಯ ಮೂಲಿಕ ತನ್ನ ಬಲಗಣ್ಣಿನ ಸುತ್ತಧಕ್ಕೆ ಅನುಭವಿಸಿದ್ದ. ಮೇಲಿಂದ ಬಂದು ಎರಗುವ ಅಸ್ತ್ರದಿಂದ ಘಾಯ ಸಂಭವಿಸಿರಬಹುದು.

ನೀವೆ ಈ ಬಗ್ಗೆ ಪ್ರಾಕ್ತನ ಶಾಸ್ತ್ರಜ್ಞ ಪ್ರಾಗನಿಗೆ ಹೇಳಿದ. ಆ ಪ್ರಕಾರ ಪ್ರಾಗನು ಪುರಾತನ ಪಠ್ಯಪುಸ್ತಕ (ಕ್ರಿ. ಪೂ. ೧ ನೆಯ ಶತಮಾನದಲ್ಲಿ ಬರೆಯಲಾದ)ಗಳಲ್ಲಿ

ತಪಾಸಣೆ ಮಾಡಿ ಅವುಗಳಲ್ಲಿಯ ಒಂದು ದಾಖಲೆಯ ಮೂಲಕ "ಎರಡನೆಯ ಫಿಲಿಪ್ ಕ್ರಿ. ಪೂ. ೩೫೪ ರಲ್ಲಿ ಮೆಥೋನ್‌ನನ್ನು ವಶಪಡಿಸುತ್ತಿದ್ದಾಗ ಒಂದು ಬಾಣದ ಕ್ಷತಿಯಿಂದ ಅವನ ಬಲದ ಕಣ್ಣು ಕಿತ್ತು ಹೊರಗೆ ಬಂತು" ಎಂದು ದೃಢಪಡಿಸಿದ.

ನೀವೆ ತಲೆಬುರುಡೆಗೆ ರೂಪಕೊಡುವ ಕೆಲಸವನ್ನು ಮುಂದುವರಿಸಿದ. ಆ ಕೂಡಲೇ ಪ್ರಥಮವಾಗಿ ಪ್ಲಾಸ್ಟರ್‌ನಲ್ಲಿ, ಬಳಿಕ ಮೇಣನಿರ್ಮಿತ ರೂಪದಲ್ಲಿ ಸಹಜ ಚರ್ಮದ ಬಣ್ಣ ಮತ್ತು ಮುಖದ ರೋಮಗಳನ್ನು ಹೊತ್ತ ಒಕ್ಕಣ್ಣಿನ ಸಾಮ್ರಾಟನು ಪ್ರಪಂಚದ ಮೇಲೆ ಕಣ್ಣು ಹಾಯಿಸತೊಡಗಿದ. ಪುನರ್ ನಿರ್ಮಿಸಲ್ಪಟ್ಟ ಮೋರೆಗೂ ನಮಗೆ ತಿಳಿದಿರುವ ಮೂರನೆಯ ಫಿಲಿಪ್‌ನ ಮೋರೆಗೂ ಹೋಲಿಕೆ ಇರಲಿಲ್ಲ. ಹೇಗೂ ಎರಡನೆಯ ಫಿಲಿಪ್‌ನದೆಂದು ನಂಬಲಾಗಿದ್ದ ತೈಲ ಚಿತ್ರಗಳು ಮತ್ತು ಶಿಲ್ಪಗಳಿಗೆ ಅದು ಹೋಲಿತು.

೧೯೮೩ ರಲ್ಲಿ ಏಥೆನ್ಸ್‌ನಲ್ಲಿ ಸೇರಿದ ಅಂತರರಾಷ್ಟ್ರೀಯ ಪ್ರಾಕ್ತನ ಶಾಸ್ತ್ರಜ್ಞರ ಸಮ್ಮೇಳನಕ್ಕೆ ಪ್ರಾಗ್ ಮತ್ತು ನೀವೆ ಈ ಪುನರ್ರೂಪಧಾರಿಯಾದ ಮುಖದ ಭಾವ ಚಿತ್ರಗಳನ್ನು ಒಯ್ದರು. ಆ್ಯಂಡ್ರೋನಿಕಾಸ್ ಎರಡನೆಯ ಫಿಲಿಪ್‌ನ ಸಮಾಧಿಯನ್ನು ಪತ್ತೆಹಚ್ಚಿರುವುದು ಅಸಾಧ್ಯವೆಂದು ಇಟಲಿಯ ಪ್ರಾಕ್ತನ ಶಾಸ್ತ್ರಜ್ಞನೋರ್ವ ವಾದಿಸಿದ. ಅನಂತರ ಆ್ಯಂಡ್ರೋನಿಕಾಸ್ ಮುಂದೆ ಬಂದು ಹೇಳಿದ ; ಸಮಾಧಿ ಎರಡನೆಯ ಫಿಲಿಪ್‌ನದೆಂದು ಶ್ರುತಪಡಿಸಲು ನಾನು ಅಂತಿಮ ಸಾಕ್ಷ್ಯ ಸಂಗ್ರಹಿಸಿದ್ದೇನೆ."

ಅವನು ಪ್ರಾಗ್ ಮತ್ತು ನೀವೆಯರನ್ನು ಪರಿಚಯಿಸಿದ. ಅವರು ಪುನರ್ ನಿರ್ಮಾಣಕ್ಕೆ ಒಳಪಟ್ಟ ತಲೆಯ ಒಂದೊಂದೇ ಭಾಗವನ್ನು ತೋರಿಸುತ್ತಾ ತಮ್ಮ ವರದಿ ಮಂಡಿಸಿದರು.

ಪ್ರಾಕ್ತನಶಾಸ್ತ್ರದ ಇತಿಹಾಸದಲ್ಲಿ ಇಂಥ ಇನ್ನೂ ಕೆಲವು ನಾಟಕೀಯ ಸನ್ನಿವೇಶಗಳು ನಡೆದಿರಬಹುದು. ಆದರೆ ಇಂಥದ್ದೊಂದು ದೈವಾನುಭೂತಿ ಈ ಮೊದಲೆಂದೂ ಆಗಿಲ್ಲ. ಹಳೆಯ ಎಲುಬುಗಳಿಗೆ ಮುಖಚರ್ಯೆಯನ್ನು ಹೊಂದಿಸಿ ನಡೆಸುವ ಪ್ರಾಕ್ತನ ಶಾಸ್ತ್ರೀಯವಾದಂಥ ಪತ್ತೇದಾರೀ ಕೆಲಸ!

ಮನೋಲಿಸ್ ಆ್ಯಂಡ್ರೋನಿಕಾಸ್ ಸಲೋನಿಕಾ ವಿಶ್ವವಿದ್ಯಾಲಯಕ್ಕೆ ರಾಜೀನಾಮೆ ಸಲ್ಲಿಸಿದ್ದಾನೆ ಮತ್ತು ತಾನು ಪತ್ತೆಹಚ್ಚಿದ ವಿಷಯಗಳ ಬಗ್ಗೆ ಪೂರ್ಣಾವಧಿಯಲ್ಲಿ ಕಾರ್ಯನಿರತನಾಗಿರಲು (ಈಗಲೂ ಆ ಕೆಲಸದಲ್ಲೇ) ವರ್ಜೀನಾದಲ್ಲಿದ್ದಾನೆ. "ನಾನು ನನ್ನೆಲ್ಲಾ ಸಾಕ್ಷ್ಯಗಳನ್ನೂ, ರಿಚರ್ಡ್ ನೀವೆ ಕಟ್ಟಿದ ಶಿರಸ್ಸನ್ನೂ ಕೊಟ್ಟಿರುವಾಗ ಅನುಮಾನಿಗಳೊಂದಿಗೆ ನನಗೆ ಮಾತಿಲ್ಲ" ಎಂದು ಅವನು ಹೇಳಿ "ಹಾಗೆ ಬೇಕೆಂದಾದರೆ ಅವರು ಕೊಂಕು ನುಡಿಗಳನ್ನಾಡುತ್ತಿರಲಿ" ಎಂದು ಸಂತೋಷದಿಂದ ನಗೆಯಾಡುತ್ತಾನೆ. "ನನ್ನನ್ನು ಒಂದೇ ಒಂದು ಸಂಗತಿ ಬಾಧಿಸುತ್ತದೆ. ಅದೇನೆಂದರೆ ಕೊಳ್ಳೆಹೊಡೆದಿರಲಾರದ ಇನ್ನೊಂದೇ ಸಮಾಧಿಯ ಸ್ವರ್ಣಸಂಪುಟದಿಂದ ಒಕ್ಕಣ್ಣಿನ ದೊರೆಯ ಎಲುಬುಗಳನ್ನು ಹೊರ ತೆಗೆಯುವರೆ? ಹಾಗಾದರೆ ಮಾತ್ರ ನನಗೆ ಸಮಸ್ಯೆ ಎದುರಾಗುತ್ತದೆ" ಎಂದೂ ಅವನು ಹೇಳುತ್ತಾನೆ.

ಅನು : ಡಾ॥ ನೀಲಮ್ಮ ಮುತ್ತಣ್ಣ

ಆಪತ್ಕಾಲದಲ್ಲಿ ಅಪೂರ್ವ ಸಹಾಯ ಒದಗಿದ ಒಂದು ಪ್ರಸಂಗ

ಎಸ್. ರಾಮರಾವ್

ಡಿಸೆಂಬರ್ ೨೯, ೧೯೫೭, ಭಾನುವಾರ ರಾತ್ರಿ. ಅಮೆರಿಕದ ಫ್ಲಾರಿಡ ಸಂಸ್ಥಾನದ ಮಿಯಾಮಿಯ ಹೆರಾಲ್ಡ್ ಎಂಬ ಪ್ರಭಾವಿತ ದಿನಪತ್ರಿಕೆಯ ಸಂಪಾದಕೀಯ ಕಚೇರಿಯಲ್ಲಿ ಸಂಪಾದಕ ಟಿಮೊತಿ ಸಲ್ಲಿವಾನನ ಮೇಜಿನ ಫೋನುಗಳಲ್ಲಿ ಗಂಟೆ ಬಾರಿಸಲು ಪ್ರಾರಂಭಿಸಿತು. ಫೋನನ್ನು ಎತ್ತಿ ಸಲ್ಲಿವಾನ್ ತಾನು ಇಂಥವನೆಂದು ತಿಳಿಸಿದಾಗ ಆ ಕೊನೆಯಿಂದ ಒಬ್ಬ ಸ್ತ್ರೀ ವ್ಯಕ್ತಿ ಬಳಲಿದ ಧ್ವನಿಯಿಂದ ಮಾತನಾಡುವುದು ಕೇಳಿಸಿತು: "ನನ್ನ ಯಜಮಾನರಿಗೆ ರಕ್ತಸ್ರಾವದಿಂದ ಮಾರಕಸ್ಥಿತಿ ಉಂಟಾಗಿದೆ; ದಯಮಾಡಿ ಸಹಾಯ ಮಾಡಬಲ್ಲಿರಾ" ಎಂದು. ಸಹಾಯ ಸಂಪಾದಕಿ ಮ್ಯಾಗ್ಗಿ ವೈಲ್ಸ್‌ಗೆ ಅವಳೂ ಕೇಳಿಸಿಕೊಳ್ಳುವಂತೆ ಸೂಚಿಸಿದ ಸಲ್ಲಿವಾನ್ "ನಿಮ್ಮ ಯಜಮಾನರ ಸ್ಥಿತಿಯ ಬಗ್ಗೆ ಇನ್ನಷ್ಟು ಮಾಹಿತಿ ಕೊಡಿ" ಎಂದು ಕೇಳಿದ. ಬಳಲಿದ ಧ್ವನಿಯಿಂದಲೇ ಆಕೆ "ನನ್ನ ಯಜಮಾನರು ಬಿಸ್ಕೇಯನ್ ಆಸ್ಪತ್ರೆಯಲ್ಲಿದ್ದಾರೆ; ಅವರ ರಕ್ತ ತುಂಬಿಕೆಗಾಗಿ ಯುಕ್ತ ಪಂಗಡದ ರಕ್ತ ದೊರೆಯದೇ ಹೋಗಿರುವುದರಿಂದ ಅವರು ಬೆಳಗಾಗುವುದರೊಳಗಾಗಿ ಮೃತರಾಗುವುದು ಖಂಡಿತ ಎಂದು ಆಸ್ಪತ್ರೆಯ ಡಾಕ್ಟರು ಹೇಳಿದ್ದಾರೆ; ಏನು ಮಾಡುವುದಕ್ಕೂ ತೋರದೆ ನಿಮಗೆ ಫೋನ್ ಮಾಡಿದೆ" ಎಂದಳು. ಅತ್ತ ಮ್ಯಾಗ್ಗಿ ಆಸ್ಪತ್ರೆಗೆ ಬೇರೆ ಫೋನಿನಲ್ಲಿ ಮಾತನಾಡಿ ವಿಚಾರಿಸುತ್ತಿರುವಾಗ ಇತ್ತ ಸಲ್ಲಿವಾನ್ "ನಿಮ್ಮ ಯಜಮಾನರ ಹೆಸರು ಏನು? ನಿಮ್ಮ ಬಗ್ಗೆ ಎಲ್ಲ ವಿಷಯಗಳನ್ನೂ ತಪಶೀಲಾಗಿ ದಯವಿಟ್ಟು ತಿಳಿಸಿ" ಎಂದು ಹೇಳಿದ. ಅವರ ಹೆಸರು ರೂಡಿ ಕೊವರಿಕ್; ನಾವು ಮಿಚಿಗನ್ ಸಂಸ್ಥಾನದ

೧೯೫೮ರ ಫೆಬ್ರುವರಿ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಟಿಮೊತಿ ಸಲ್ಲಿವಾನ್ ಅವರು ಬರೆದ "ಸ್ಟ್ರೇಂಜರ್ಸ್ ಇನ್ ನೀಡ್" ಲೇಖನದ ಭಾವಾನುವಾದ.

ಡಿಯರ್‌ಬಾರ್ನ್ ಪಟ್ಟಣದವರು ; ಪ್ರವಾಸಕ್ಕೆಂದು ಇತ್ತ ಬಂದೆವು ; ಇದ್ದಕ್ಕೆ ಇದ್ದಹಾಗೆ ಈ ಗಂಡಾಂತರ ಎರಗಿತು" ಎಂದು ಆಕೆ ಅಳುತ್ತಲೇ ಹೇಳಿದಳು.

"ಚಿಕಿತ್ಸಿಸುತ್ತಿರುವ ಡಾಕ್ಟರ ಹೆಸರೇನು ?"

"ಇಬ್ಬರು ಡಾಕ್ಟರುಗಳು ಚಿಕಿತ್ಸಿಸುತ್ತಿದ್ದಾರೆ; ಡಾ|| ಮೆಡೋಸ್ ಒಬ್ಬರು : ಡಾ|| ಡೇವಿಡ್‌ಸನ್ ಇನ್ನೊಬ್ಬರು"

ಮ್ಯಾಗ್ಗಿ ಇದನ್ನು ಕೇಳಿಸಿಕೊಂಡು ಡಾ|| ಮೆಡೋಸಿಗೆ ಫೋನ್ ಮಾಡಿದಾಗ ರೂಡಿಕೊವರಿಕ್ಕಿಗೆ ತುರ್ತಾಗಿ ರಕ್ತಪೂರೈಕೆ ಆಗಬೇಕಾಗಿರುವುದು ನಿಜ ಎಂದು ತಿಳಿದು ಬಂತು. ಸಲ್ಲಿವಾನನೇ ನೆ ರವಾಗಿ ಡಾ|| ಮೆಡೋಸಿನೊಡನೆ ಮಾತನಾಡಿದಾಗ ಆತ ಹೇಳಿದರು "ಕೊವರಿಕ್ಕಿಗೆ AB ; RH ನೆಗೆಟಿವ್ ಪಂಗಡದ ರಕ್ತ ಅಗತ್ಯ ; ಅಂಥ ರಕ್ತ ಆಸ್ಪತ್ರೆಯ ರಕ್ತ ಸಂಗ್ರಹಾಲಯದಲ್ಲಿ ಇಲ್ಲ ; ಆದ್ದರಿಂದ ಕೊವರಿಕ್ ಬದುಕುಳಿಯುವುದು ತೀರ ಅನುಮಾನ" ಎಂದು.

ಸಲ್ಲಿವಾನನಿಗೆ ಏನು ಮಾಡಲೂ ತೋರಲಿಲ್ಲ. ಜನಾಭಿಪ್ರಾಯದಂತೆ ಮಿಯಾಮಿ ಹೆರಾಲ್ಡಿನಂಥ ಘನವಾದ ಪತ್ರಿಕೆಯ ಸಂಪಾದಕನಾಗಿದ್ದ ತಾನು ಏನು ಮಾಡಲೂ ಸಮರ್ಥ. ಮನೆಯಿಂದ ಕಚೇರಿಗೆ ನಡೆದು ಬರುತ್ತಿರುವಾಗ ತಾನೂ ಇನ್ನೆಲ್ಲರಂತೆಯೇ ಜೀವನದ ಹೋರಾಟದಲ್ಲಿ ಮುಗ್ಗರಿಸುತ್ತಿರುವವನೇ.ಆದರೆ ಕಚೇರಿಗೆ ಬಂದು ಸಂಪಾದಕನ ಕುರ್ಚಿಯಲ್ಲಿ ಕುಳಿತುಕೊಂಡೊಡನೆಯೇ ತನಗೆ ತಿಳಿಯದುದು ಯಾವುದೂ ಇಲ್ಲ. ತಾನು ಮಾಡಲಾರದುದು ಏನೂ ಇಲ್ಲ. ಈ ಭಾವನೆ ಅವನ ಆತ್ಮಾಭಿಮಾನಕ್ಕೂ ಪೂರಕ. ಹೀಗಿದ್ದೂ ಈ ಗಳಿಗೆಯಲ್ಲಿ ಏನು ಮಾಡುವುದಕ್ಕೂ ದಿಕ್ಕುತೋರದಂತಾಗಿ ಎಷ್ಟು ನಿಸ್ಸಹಾಯಕ ಎಂದು ಮನ ನೊಂದಿತು.

ಹಾಗೆಯೇ ಅತ್ತಿತ್ತ ನೋಡುತ್ತ ಆಲೋಚಿಸುತ್ತಿರುವಾಗ ಪತ್ರಿಕೆಯ ಕಚೇರಿಯ ರೇಡಿಯೋ ಕೊಠಡಿಯಲ್ಲಿಯ ಗಡಿಯಾರ ಕಾಣಿಸಿತು. ರಾತ್ರಿ ೮.೫೩. ೯ ಗಂಟೆಗೆ ಭಾನುವಾರ ರಾತ್ರಿಯ ಮಾಮೂಲು ರಾಷ್ಟ್ರೀಯ ಕಾರ್ಯಕ್ರಮ ಮಿಯಾಮಿಯ ರೇಡಿಯೋ ಕೇಂದ್ರದಿಂದ ಪ್ರಸಾರವಾಗಬೇಕು. ಸಲ್ಲಿವಾನನಿಗೆ ಚಟ್ಟನೆ ಏನೋ ಹೊಳೆದು ರೇಡಿಯೋ ಕೇಂದ್ರಕ್ಕೆ ಫೋನು ಮಾಡಿದ. ಪ್ರಸಾರ ಮಾಡಲಿರುವ ವಾಲ್ಟರ್ ವಿಂಚೆಲ್ಲನೊಡನೆ ತಾನು ತುರ್ತಾಗಿ ಮಾತನಾಡಬೇಕೆಂದು ತಿಳಿಸಿದ. ಪ್ರಸಾರಸಮಯ ಇಷ್ಟು ಹತ್ತಿರ ಇರುವಾಗ ವಿಂಚೆಲ್ಲನೊಡನೆ ಯಾರೇ ಆದರೂ ಮಾತನಾಡುವುದಕ್ಕೆ ಆಗುವುದಿಲ್ಲ ಎಂದು ಜವಾಬು ಬಂತು. ಬಹುಶಃ ಸಲ್ಲಿವಾನ್ ರೇಗಿ ಕೂಗಾಡಿರಬೇಕು. ಮರುಕ್ಷಣದಲ್ಲಿ ಮನಸ್ಸನ್ನು ಹಿಡಿತಕ್ಕೆ ತಂದುಕೊಂಡು "ವಿಂಚೆಲ್ ಕೂಡಲೇ ರೇಡಿಯೋವಿನಲ್ಲಿ ಪ್ರಕಟಿಸಬೇಕಾದ ಒಂದು ವಿಷಯವಿದೆ; ಇದು ಒಬ್ಬ ವ್ಯಕ್ತಿಯ ಸಾವು ಬದುಕಿನ ಪ್ರಶ್ನೆ; ಇದನ್ನು ವಿಂಚೆಲ್ಲಿಗೆ ತಿಳಿಸುವಷ್ಟಾದರೂ ಸಹಕಾರ ಮಾಡಿ" ಎಂದು ಕೇಳಿದ. ಆ ಕಡೆಯಿಂದ ವಿಂಚೆಲ್ಲನ ಸಹಾಯಕ ಪಾಲ್ ಹೆಫ್ಲೆಲ್‌ನ ಧ್ವನಿ ಕೇಳಿಬಂತು. ವಿಷಯ ವೇನೆಂದು ಆತ ವಿಚಾರಿಸಿದ. ಮಾಮೂಲು ಪ್ರಸಾರಕ್ಕೆ ಮುನ್ನ ಪ್ರಕಟಿಸಬೇಕಾದ ತುರ್ತು ವಿಷಯದಲ್ಲಿ ಸಲ್ಲಿವಾನ್ ಓದಿ ಹೇಳಿದ ಪ್ರಕಟನೆಯನ್ನು ಬರೆದುಕೊಂಡು ವಿಂಚೆಲ್ಲಿಗೆ ಅದನ್ನು ತಲಪಿಸುವುದಾಗಿ ಭರವಸೆ ಕೊಟ್ಟು ಹೆಫ್ಲೆಲ್ ಫೋನನ್ನು ತಳಕ್ಕೆ ಇಟ್ಟ.

ಕೊವರಿಕ್ಕಿನ ಹೆಂಡತಿಯೊಡನೆ ಪುನಃ ಮಾತನಾಡಿ ಧೈರ್ಯ ಹೇಳಬೇಕೆಂದು ಸಲ್ಲಿವಾನ್ ಅವಳಿಗೆ ಫೋನ್ ಮಾಡಿದ. ಆಕೆ ಇನ್ನೂ ಅಳುತ್ತಲೇ ಇದ್ದು ಸಮಾಧಾನಕ್ಕೆ ಬರುವಂತಿರಲಿಲ್ಲ. ಮರುಗಳಿಗೆ ಯಾವಾಗಲೋ ಗಂಡ ಸತ್ತುಹೋಗುವ ಸಂಭವವಿರುವ ಹೆಣ್ಣು ವ್ಯಕ್ತಿಗೆ ಯಾರು ಏನು ಸಮಾಧಾನ ಹೇಳಬಹುದು ?

ಪತ್ರಿಕೆಯ ಕಚೇರಿಯಲ್ಲಿ ಈ ಹೊತ್ತಿನಲ್ಲಿ ಮಾಮೂಲಾಗಿ ಗಡಿಬಿಡಿ ಗುಜುಗುಜು ಮಾತು, ಪರದಾಟ ಇರಬೇಕು. ಇಂದು ನಿಶ್ಶಬ್ದ.ರೇಡಿಯೋ ಕೊಠಡಿಯ ಗಡಿಯಾರದ ಮುಳ್ಳು ಸೆಕೆಂಡು ಸೆಕೆಂಡಿಗೂ ಮುಂದಕ್ಕೆ ಸಾಗುತ್ತಲೇ ಇದೆ.

ಹಠಾತ್ತಾಗಿ ಸಲ್ಲಿವಾನಿನ ಮೇಜಿನ ಫೋನುಗಳು ಒಮ್ಮೆಯೇ ಗಂಟೆ ಬಾರಿಸ ತೊಡಗಿದವು. ಆ ಗೊಜಿಬಿಜಿಯಲ್ಲಿ ಏನೊಂದೂ ತಿಳಿಯುವಂತಿರಲಿಲ್ಲ. ಪತ್ರಿಕೆಯ ಟೆಲಿ ಫೋನ್ ಎಕ್ಸ್‌ಛೇಂಜ್ ಅಧಿಕಾರಿ ಕೇಟಿ ಗೊಂದಲವನ್ನು ಬಿಡಿಸಿ ಮಿಯಾಮಿಯ ಪೋಲೀಸ್ ಮುಖ್ಯಕಚೇರಿಯ ಡೇನ್‌ಲೆವಿಸ್ ಸಲ್ಲಿವಾನನೊಡನೆ ಮಾತನಾಡಲು ಅವಕಾಶ ಮಾಡಿಕೊಟ್ಟಳು. "ತಪಶೀಲುಗಳನ್ನು ತಿಳಿಸಿ ಎಂದು ಎಲ್ಲೆಲ್ಲಿಂದಲೋ ಫೋನು ಗಳು ಮೇಲಿಂದ ಮೇಲೆ ಬರುತ್ತಿವೆ : ನೀವು ಏನು ಮಾಡಿಬಿಟ್ಟಿರುವಿರಿ" ಎಂದು ಲೆವಿಸ್ ಸಲ್ಲಿವಾನನ್ನು ಕೇಳಿದ.

"ಯಾವ ವಿಷಯ ?"

"ಅದೇ ವಿಂಚೆಲ್ ಈಗತಾನೇ ಬಿತ್ತರಿಸಿದ ಪ್ರಕಟನೆ ; ರಕ್ತಪೂರೈಕೆಗಾಗಿ ಕಾತುರ ದಿಂದ ಕಾಯುತ್ತಿರುವ ಜನರ ವಿಷಯ."

ಸಲ್ಲಿವಾನ್ ಮ್ಯಾಗ್ಗಿಯ ಕಡೆ ನೋಡಿದ. ಮ್ಯಾಗ್ಗಿಯ ಮೇಜಿನ ಫೋನಿಗೂ ಬಿಡುವೇ ಇಲ್ಲ. ಎಲ್ಲೆಡೆಗಳಿಂದಲೂ ಬಿಸ್ಕೇಯನ್ ಆಸ್ಪತ್ರೆಗೆ ಫೋನು ಮಾಡಿ ಕನೆಕ್ಷನ್ ಸಿಕ್ಕದೆ ಹತಾಶರಾದ ಜನ ಹೆರಾಲ್ಡ್ ಕಚೇರಿಗೇ ಫೋನು ಮಾಡಹತ್ತಿದ್ದರು. ಇತ್ತ ಡೇನ್‌ಲೆವಿಸ್ಸಿಗೂ ಫೋನುಗಳ ಸುರಿಮಳೆ. ಅಮೆರಿಕದ ಆಗ್ನೇಯ ಸಂಸ್ಥಾನಗಳಿರಲಿ. ದೂರ ಉತ್ತರದ ವಾಷಿಂಗ್‌ಟನ್ ನ್ಯೂಯಾರ್ಕ್ ಮುಂತಾದ ಸಂಸ್ಥಾನಗಳಿಂದಲೂ ಜನ ವಿಚಾರಿಸುವವರೆ;

ವಿಂಚೆಲ್ ತನ್ನ ೯ ಗಂಟೆಯ ಪ್ರಸಾರವನ್ನು ಪ್ರಾರಂಭಿಸಿದ್ದು ಸಲ್ಲಿವಾನ್ ಕೊಟ್ಟ ಪ್ರಕಟನೆಯಿಂದಲೇ. "ರೂಡಿಕೊವರಿಕ್—೩೫ ವರ್ಷ ಮಿಚಿಗನ್ನಿನ ಡಿಯರ್ ಬೋರ್ನ್ ನಿವಾಸಿ—ಪ್ರಸಕ್ತ ಪ್ರವಾಸಿ—ನಿನ್ನೆ ರಾತ್ರಿ ತಾನೇ ಮಿಯಾಮಿಗೆ ಆಗಮಿಸಿದ —ಅವನಿಗೆ ಅಗಾಧವಾಗಿ ಆಂತರಿಕ ರಕ್ತಸ್ರಾವವಾಗಿದ್ದು ರಕ್ತಪೂರೈಕೆಗಾಗಿ AB,RH ನೆಗೆಟಿವ್ ಪಂಗಡದ ರಕ್ತ ಸಿಕ್ಕಿತೇ ಎಂದು ಸಂಬಂಧಪಟ್ಟವರು ತವಕಿಸುತ್ತಿದ್ದಾರೆ—ಆಸ್ಪತ್ರೆ ಯಲ್ಲಿ ಸುತ್ತಮುತ್ತಲಿನ ರಕ್ತಸಂಗ್ರಹಾಲಯಗಳಲ್ಲಿ ಈ ಪಂಗಡದ ರಕ್ತ ಇಲ್ಲ—ಹೆಚ್ಚಿನ ವಿವರಗಳಿಗೆ ಬಿಸ್ಕೇಯನ್ ಆಸ್ಪತ್ರೆಯ ಡಾ॥ ಮೆಡೋಸರನ್ನು ವಿಚಾರಿಸಿ—ಸಹಿ ಟಿಮೋತಿ ಸಲ್ಲಿವಾನ್, ಮಿಯಾಮಿ ಹೆರಾಲ್ಡ್ ಸಂಪಾದಕ."

ವಿಂಚೆಲ್ ಈ ಪ್ರಕಟನೆಯನ್ನು ಎರಡು ಬಾರಿ ಪ್ರಸಾರ ಮಾಡಿದ್ದ. ಮುಖ್ಯವಾಗಿ ಫ್ಲಾರಿಡ ಸಂಸ್ಥಾನದ ಜನ ಇದನ್ನು ಗಮನಿಸಬೇಕು. ಎಂದೇ ಹೇಳಿದ್ದ. ಆದರೆ ಸಂಯುಕ್ತ ಸಂಸ್ಥಾನಗಳ ಆದ್ಯಂತ, ಡೆಟ್ರಾಯ್ಟ್, ಚಿಕಾಗೋ, ಸಾನ್‌ಫ್ರಾನ್‌ಸಿಸ್‌ಕೊ, ಇಂಥ

ಕಡೆಗಳಿಂದಲೂ ಪ್ರತಿಕ್ರಿಯೆಗಳು ಕಂಡುಬಂದವು. ಜಾರ್ಜಿಯ ಸಂಸ್ಥಾನದ ಸಾವನ್ನನಗರದಿಂದ ಇಬ್ಬರು ರಕ್ತದಾನ ಮಾಡಲು ಆ ಸಮಯದಲ್ಲಿ ಮಿಯಾಮಿಗೆ ಹೊರಟಿದ್ದ ಏರೋಪ್ಲೇನಿನಲ್ಲಿ ಹತ್ತಿ ಬರುತ್ತಿದ್ದರು. ಅಟ್ಲಾಂಟದಿಂದ ನಾಲ್ಕು ಜನ, ದಕ್ಷಿಣ ಕೆರೋಲಿನದ ಚಾರಲ್ಸ್‌ಟನ್ನಿನಿಂದ ಮೂವರು, ಹೀಗೆಯೇ ಪ್ಲೇನ್ ಮೂಲಕ ಮಿಯಾಮಿಗೆ ಪ್ರಯಾಣ ಮಾಡುತ್ತಿದ್ದರು. ನ್ಯೂಯಾರ್ಕಿನ ಈಸ್ಟರ್ನ್ ಏರ್‌ಲೈನ್ಸ್ ಕಂಪೆನಿಯವರು ಮಿಯಾಮಿಗೆ ಹೊರಟಿದ್ದ ಪ್ಲೇನನ್ನು ರಕ್ತದಾನಿಗಳ ಆಗಮನಕ್ಕಾಗಿ ಕೊಂಚ ಕಾಲ ತಡೆಹಿಡಿದಿದ್ದರು.

ರಾತ್ರಿ ೧೦ ಗಂಟೆಯ ಹೊತ್ತಿಗೆ ಆಸ್ಪತ್ರೆಗೆ ೨೫೦ ಫೋನ್ ಕರೆಗಳು—ಮುಕ್ಕಾಲು ವಾಸಿ ದೂರದ ನಗರಗಳಿಂದ—ಬಂದಿದ್ದವು. ರಕ್ತದಾನ ಮಾಡಲು ಆಸಕ್ತರಾದ ಜನ ಆಸ್ಪತ್ರೆಯ ಹಜಾರದಲ್ಲಿ ಗುಂಪುಗೂಡಿಕೊಂಡು ಓಡಾಡುತ್ತಿದ್ದರು. ಎಷ್ಟೋ ದಾನಿಗಳನ್ನು ಪೋಲೀಸ್ ವ್ಯಾನುಗಳು ಒಯ್ದು ತರುತ್ತಿದ್ದವು. ಸಂಚಾರ ಹತೋಟಿ ತಪ್ಪಿ ಕಾರುಗಳು ರಸ್ತೆಯಲ್ಲೆ ನಿಲ್ಲಬೇಕಾಯಿತು. ಅಲ್ಲಿಯೇ ಕಾರಿಗೆ ಬೀಗ ಹಾಕಿ ಆಸ್ಪತ್ರೆಗೆ ಕಾಲ್ನಡಿಗೆಯಲ್ಲೆ ಆತುರಾತುರವಾಗಿ ಎಷ್ಟೋ ಜನ ಬಂದರು.

ಅಮೆರಿಕದ ಕೇಂದ್ರ ಪ್ರಸಾರಾಧಿಕಾರಿಗಳು ವಿಂಚೆಲ್ ೧೧ ಗಂಟೆಗೆ ಪುನಃ ರೇಡಿಯೋವಿನಲ್ಲಿ ಮಾತನಾಡಿ ತನ್ನ ೯ ಗಂಟೆಯ ಪ್ರಕಟನೆಯ ಫಲವಾದ ಪ್ರತಿಕ್ರಿಯೆಯನ್ನು ಬಿತ್ತರಿಸುವಂತೆ ಹೇಳಿದ್ದರು. ಆ ರೀತಿ ೧೧ ಗಂಟೆಗೆ ವಿಂಚೆಲ್ ಪ್ರಸಾರ ಮಾಡಿದ್ದು ಇದು : ಇಂಥ ಅಸಾಧಾರಣ ಭ್ರಾತೃಪ್ರೇಮದ ಮಾತು ಒತ್ತಟ್ಟಿಗಿರಲಿ; ಆಕಸ್ಮಿಕಕ್ಕೆ ಈಡಾದ ವ್ಯಕ್ತಿಗೆ ತತ್‌ಕ್ಷಣ ಸಹಾಯ ನೀಡಲು ಹೊಮ್ಮಿದ ಸಿದ್ಧಮನಸ್ಕತೆ ಕೂಡ ಇಷ್ಟುಮಟ್ಟಿಗೆ ಇರುವುದನ್ನು ನಾನು ಇದುವರೆಗೂ ಅರಿತಿರಲಿಲ್ಲ. ಹಠಾತ್ತಾಗಿ ತುರ್ತು ಸಹಾಯ ಅಗತ್ಯವೆನ್ನಿಸಿದ ವ್ಯಕ್ತಿ ಬಿಳಿಬಣ್ಣದವನೇ, ಕಪ್ಪೇ, ಕಂದುಬಣ್ಣದ ಅಥವಾ ಹಳದಿಬಣ್ಣದ ವ್ಯಕ್ತಿಯೇ ಎಂದು ಯಾರೊಬ್ಬರೂ ಕೇಳಿ ತಿಳಿದುಕೊಳ್ಳುವುದಕ್ಕೆಂದು ತಡಮಾಡಲಿಲ್ಲ. ವ್ಯಕ್ತಿ ಯಹೂದ್ಯನೇ, ಪ್ರಾಟೆಸ್ಟಂಟೇ, ರೋಮನ್ ಕ್ಯಾಥೊಲಿಕ್ಕೇ ಇಲ್ಲವೇ ನಿರೀಶ್ವರವಾದಿಯೇ ಎಂದು ವಿಚಾರಿಸಲು ಯಾರೂ ನಿಲ್ಲಲಿಲ್ಲ. ಯಾರು ಹೇಳಿದ್ದೂ ಇಷ್ಟೆ—ನನ್ನ ರಕ್ತ ಅಗತ್ಯವಿರುವ ರಕ್ತಸಂಗಡದ್ದೇ, ನಾನು ಸಹಾಯಾರ್ಥಿಯಾಗಿ ಬಂದಿದ್ದೇನೆ'—ಎಂದು.

ಅಮೆರಿಕದ ಆದ್ಯಂತ ಜನ ವಿಂಚೆಲ್ಲಿನ ಈ ೧೧ ಗಂಟೆಯ ಪ್ರಸಾರವನ್ನು ಕೇಳಿದರು—ಶ್ರೀಮತಿ ಕೊವರಿಕ್ ಹೊರತು. ಕಾರಣ ಅವಳು ಕುರ್ಚಿ ಅಂಚಿನಲ್ಲಿ ಕುಳಿತು ಗಂಡ ಮಲಗಿದ್ದ ಹಾಸಿಗೆಯ ತಲೆದಿಂಬಿನ ಮೇಲೆ ತನ್ನ ತಲೆಯನ್ನು ಊರಿಕೊಂಡು ಗಂಡನ ಮುಖವನ್ನೇ ನೋಡುತ್ತ ಇದ್ದಳು. ಜ್ಞಾನತಪ್ಪಿಹೋಗಿದ್ದು ಅಲ್ಪ ಸಮಯದಲ್ಲೆ ಮೃತಿ ಹೊಂದಬೇಕಾಗಿದ್ದ ಆತ ಈಗ ಎಚ್ಚೆತ್ತಿದ್ದ. ಅವನ ಸ್ಥಿತಿಯೂ ಸ್ವಲ್ಪ ಉತ್ತಮಗೊಂಡಿತ್ತು. ಅದೇ ಕೊಠಡಿಯಲ್ಲಿ ಇನ್ನೊಂದು ಹಾಸಿಗೆಯ ಮೇಲೆ ನಾಥನ್ ಡ್ಯಾಷ್ ಎಂಬ ಬೃಹದ್ದೇಹಿ ವಿಶ್ರಾಂತಿಸುತ್ತಿದ್ದ. ಅವನು ನ್ಯೂಯಾರ್ಕಿನ ನಿವಾಸಿ. ಪ್ರವಾಸಕ್ಕೆಂದು ಮಿಯಾಮಿಗೆ ಆ ತರುಣದಲ್ಲೆ ಬಂದಿದ್ದ. ಬಿಸ್ಕೇಯನ್ ಆಸ್ಪತ್ರೆಯ ಹತ್ತಿರ ಕಾರನ್ನು ಡ್ರೈವ್ ಮಾಡಿಕೊಂಡು ಹೋಗುತ್ತಿದ್ದಾಗ ಕಾರಿನ ರೇಡಿಯೋವಿನಲ್ಲಿ

ವಿಂಚೆಲ್ಲಿನ ೯ ಗಂಟೆಯ ಪ್ರಕಟನೆ ಕೇಳಿಸಿತು. ಅಂಗಿಯ ಜೇಬಿನಲ್ಲಿದ್ದ ಕಡತಗಳನ್ನು ಹೊರಕ್ಕೆ ತೆಗೆದ. ಸೈನ್ಯಕ್ಕೆ ಸೇರಿಕೊಂಡಾಗ ತನ್ನ ರಕ್ತ ಪಂಗಡವನ್ನು ಗುರುತು ಹಾಕಿಟ್ಟಿದ್ದ ದಾಖಲೆ ಇತ್ತು. ನೋಡಿದಾಗ ತಾನು ಪ್ರಕಟನೆ ತಿಳಿಸಿದ ರಕ್ತ ಪಂಗಡದವನೇ ಎಂದು ಗೊತ್ತಾಯಿತು. ಕೂಡಲೆ, ತೀರ ಮೂರು ನಿಮಿಷಗಳಲ್ಲಿ, ಅವನು ಆಸ್ಪತ್ರೆಗೆ ಬಂದಿಳಿದ. AB, RH ನೆಗೆಟಿವ್ ರಕ್ತ ಅಗತ್ಯವಾಗಿರುವ ವ್ಯಕ್ತಿ ಎಲ್ಲಿ? ರಕ್ತದಾನ ಮಾಡಲು ಇಗೋ ಬಂದಿದ್ದೇನೆ ಎಂದು ತಿಳಿಸಿದ. ಹಲಮಿನಿಟುಗಳಲ್ಲೆ ಅವನನ್ನು ಕೊವರಿಕ್ಕಿನ ಮಗ್ಗುಲಲ್ಲೆ ಮಲಗಿಸಿ ಅವನ ರಕ್ತನಾಳದಿಂದ ರಕ್ತ ನೇರವಾಗಿ ಕೊವರಿಕ್ಕಿನ ರಕ್ತನಾಳಕ್ಕೆ ಹಾಯುವಂತೆ ಡಾಕ್ಟರುಗಳು ಏರ್ಪಡಿಸಿದರು.

ಆಸ್ಪತ್ರೆಯ ಹಜಾರದಲ್ಲಿ ನೆರೆದಿದ್ದ, ನೆರೆಯುತ್ತಿದ್ದ ರಕ್ತದಾನಿಗಳಿಗೆ ಈ ವಿಷಯವನ್ನು ಆಸ್ಪತ್ರೆಯ ಅಧಿಕಾರಿಗಳು ಸಕಾಲದಲ್ಲಿ ತಿಳಿಸಿದರು. ಕೂಡಲೇ ಎಷ್ಟು ಹರ್ಷೋದ್ಗಾರ! ಆದರೆ ತಾವು ಧಾವಿಸಿ ಬಂದಿದ್ದು ಸಾರ್ಥಕವಾಗಲಿಲ್ಲ ಎಂಬ ನೈರಾಶ್ಯ ಅವರ ಮನಸ್ಸಿಗೆ ಹತ್ತದಂತೆ ಆಸ್ಪತ್ರೆಯ ಅಧಿಕಾರಿಗಳು ಉಚಿತರೀತಿಯಲ್ಲಿ ಅವರನ್ನು ನಡೆಸಿಕೊಂಡರು. "ಯಾರೂ ಅನ್ಯಥಾ ಭಾವಿಸಬಾರದು. ಬಂದಂತೂ ಬಂದಿದ್ದೀರಿ. ಕೊವರಿಕ್ಕಿಗಲ್ಲದಿದ್ದರೂ ಅವನಂಥದೇ ಅಗತ್ಯವಿದ್ದ ಬೇರೆಯವರಿಗಾದರೂ ನಿಮ್ಮ ರಕ್ತದಾನದಿಂದ ಸಹಾಯವಾಗುವುದೆಂಬುದನ್ನು ನೀವೆಲ್ಲರೂ ಅರಿಯಬಹುದಾದದ್ದೇ. ಆದ್ದರಿಂದ ರಕ್ತದಾನ ಮಾಡಿಯೇ ಹೋಗಿ. ನೀವು ದಾನಮಾಡುವ ರಕ್ತವನ್ನು ರಕ್ತಸಂಗ್ರಹಾಲಯದಲ್ಲಿಟ್ಟಿದ್ದು ಕೃತಜ್ಞತಾಭಾವದಿಂದ ಬಳಸುತ್ತೇವೆ" ಎಂದು ಹೇಳಿದರು. ನೆರೆದಿದ್ದ ಜನ ಅಷ್ಟೂ ಅಲ್ಲದಿದ್ದರೂ ಬಹುಮಂದಿ ರಕ್ತದಾನ ಮಾಡಿಯೇ ವಾಪಸಾದರು.

ಹಲವು ವಾರಗಳ ನಂತರ ಗೆಲುಮುಖದ ವ್ಯಕ್ತಿಯೊಬ್ಬ ಸಲ್ಲಿವಾನನ ಕಚೇರಿಗೆ ಬಂದ. ಸಲ್ಲಿವಾನನಿಗೆ ಹೇಳಿದ "ನಾನೇ ರೂಡಿ ಕೊವರಿಕ" ಕೊಂಚಹೊತ್ತು ಇಬ್ಬರೂ ಮೌನವಾಗಿ ಒಬ್ಬರನ್ನು ಒಬ್ಬರು ನೋಡಿಯೇ ನೋಡಿದರು. ಅನಂತರ ಇಬ್ಬರೂ ಕೈಕುಲುಕಿದರು. ಆಡಬಹುದಾದ ಮಾತನ್ನೆಲ್ಲ ಆಡಿ ತೃಪ್ತಿಪಟ್ಟರು.

ಶೀಲ ಮನುಷ್ಯನ ಬಂಡವಾಳ ಹೇಗೋ ಹಾಗೆಯೇ ಅದು ಆತನ ಅಚ್ಚಳಿಯದ ಸ್ಮಾರಕ.

ಗಾಂಧೀಜಿ

ಶ್ರೀಸಾಮಾನ್ಯ ಉವಾಚ—ಸಂಜೆಗಣ್ಣಿನ ಹಿನ್ನೋಟ

ಪ್ರೊ|| ಎ. ಎನ್. ಮೂರ್ತಿರಾವ್

ಮುಂದುವರಿದುದು

'ಎಂದುಕು ಪೆದ್ದುಲಿ ಏಲಿಬುದ್ಧಿ' ಅಥವಾ 'ಏತಾವುನರಾ ನಿಲಕಡ ನೀಕು'—ಇವೆಲ್ಲ ಅರ್ಥವಿಲ್ಲದ ಅಕ್ಷರಗಳು, nonsense syllables. ನನಗೆ ಸಂಗೀತಬೇಕು, ಆದರೆ ಅದರ ಸ್ವಾರಸ್ಯ ಅಷ್ಟಾಗಿ ತಿಳಿಯದು. ರಾಗಗಳನ್ನು ಗುರುತಿಸುವುದಂತಿರಲಿ, ಅವುಗಳ ಹೆಸರು ಕೂಡ ತಿಳಿಯದು. ಗಾಯಕರು ಪಿಟೀಲು ವಿದ್ವಾಂಸನಿಗೆ ಬಿಟ್ಟುಕೊಟ್ಟ ಕಾಲವೆಲ್ಲ ವ್ಯರ್ಥ ಎನ್ನಿಸುತ್ತಿತ್ತು. ದಾಸರ ಪದಗಳಲ್ಲಿ ಪರಿಚಿತವಾದ ಅಂಶವೊಂದಿತ್ತು, ಆದ್ದರಿಂದ ಅವುಗಳಿಗಾಗಿ ಕಾಯುತ್ತಿದ್ದೆ.

ಕಾವೇರಿ ನನಗೆ ಒಂದೆರಡು ದೇವರನಾಮುಗಳನ್ನು ಹೇಳಿ ಕೊಟ್ಟಿದ್ದರಷ್ಟೆ. ಸಂಗೀತ ವಿದ್ವಾಂಸರಿಂದಲೇ ನಾನು ಮೊಟ್ಟ ಮೊದಲು ಕೇಳಿದ ದೇವರನಾಮುವೆಂದರೆ: ಬಿ. ರಾಚಪ್ಪನವರು ಹಾಡಿದ 'ಎಲ್ಲಿರುವೆ ತಂದೆ ಬಾರೊ, ಮಾರುತಿ' ಅದು ನನಗೆ ಬಹಳ ಇಂಪಾಗಿತ್ತು. ಆ ಮೇಲೆ ಚಿಕ್ಕರಾಮರಾಯರಿಂದ ಕೇಳಿದ ಕಾಂಭೋಜಿರಾಗದ 'ಈ ಪರಿಯ ಸೊಬಗಾವ ದೇವರಲಿ ಕಾಣೆ', ಬಿಡಾರಂ ಕೃಷ್ಣಪ್ಪನವರಿಂದ ಕೇಳಿದ ಧನ್ಯಾಸಿ ರಾಗದ 'ಕರುಣಾಕರ ನೀನೆಂಬುವದ್ಯಾಕೋ' ಮೋಹನರಾಗದ 'ಬಿಡೆ ನಿನ್ನ ಪಾದವ ಬಿಂಕವಿದೇಕೊ'—ಇವೆಲ್ಲ ನನ್ನ ಸಂಗೀತದ ಹುಚ್ಚನ್ನು ಕೆರಳಿಸು ವುದರಲ್ಲಿ ಮುಖ್ಯಪಾತ್ರ ವಹಿಸಿದವು.

ಕೆಲವು ದೇವರನಾಮುಗಳನ್ನು ಒಬ್ಬೊಬ್ಬರೂ ಬೇರೆ ಬೇರೆ ರಾಗಗಳಲ್ಲಿ ಹಾಡುತ್ತಿದ್ದುದರಿಂದ ನನ್ನಂಥವರಿಗೆ ಮುಜಗರವಾಗು ತ್ತಿತ್ತು. 'ಅಂಜಿಕಿನ್ಯಾತಕಯ್ಯ' (ಕಲ್ಯಾಣಿ), 'ಎಲ್ಲಿರುವೆ ತಂದೆ' (ಬೇಹಾಗ್), 'ಕರುಣಾಕರ ನೀ' (ಧನ್ಯಾಸಿ)—ಇಂಥ ಕೆಲವು ಹಾಡುಗಳಿಗೂ ರಾಗಕ್ಕೂ ಹೇಗೋ ಏರ್ಪಟ್ಟಿದ್ದ ನಂಟಸ್ತನ ದೃಢವಾಗಿಯೇ ಇತ್ತು. 'ಈ ಪರಿಯ ಸೊಬಗಾವ ದೇವರಲಿ

ಕಾಣೆ'ಯನ್ನು ಕಾಂಭೋಜಿಯಲ್ಲಿ ಹಾಡುತ್ತಿದ್ದದ್ದೇ ಹೆಚ್ಚು, ಆದರೆ ಅದನ್ನು ಕಲ್ಯಾಣಿಯಲ್ಲಿ ಹಾಡಿದ್ದನ್ನೂ ಕೇಳಿದ್ದೇನೆ. 'ತಲ್ಲಣಿಸದಿರು ಕಂಡ್ಯ ತಾಳು ಮನವೆ'ಯನ್ನು ಕಾಂಭೋಜಿ, ಕಲ್ಯಾಣಿ, ಹಿಂದೋಳ್ ಈ ಮೂರು ರಾಗಗಳಲ್ಲೂ ಹಾಡಿದ್ದನ್ನು ಕೇಳಿದ್ದೇನೆ. ರಾಗಮಾಲಿಕೆ ಹಾಡಬೇಕೆಂದೇ ಹೊರಟಾಗ ಒಂದೊಂದು ನುಡಿಗೂ ಬೇರೆ ಬೇರೆ ರಾಗವನ್ನು ಬಳಸುವುದೇನೋ ಸರಿಯೆ. ಉಳಿದಂತೆ ಈ ಹಾಡಿಗೆ ಈ ರಾಗ ಎಂದು ಗೊತ್ತುವಳಿಯಿಲ್ಲದಿದ್ದರೆ ವಿದ್ವಾಂಸರಲ್ಲದವರಲ್ಲಿ ರಾಗಜ್ಞಾನ ಬೆಳೆಯುವುದು ಕಷ್ಟವಾಗುತ್ತದೆ. 'ಕಂಗಳಿದ್ಯಾತಕೋ', 'ಏನು ಧನ್ಯಳೋ ಲಕುಮಿ' ಎಂಬ ಹಾಡುಗಳನ್ನು ನಾಲ್ಕಾರು ಸಾರಿ ತೋಡಿ ರಾಗದಲ್ಲೇ ಹಾಡಿದ್ದನ್ನು ಕೇಳಿದ ಮೇಲೆ ನನಗೆ ಆ ರಾಗವನ್ನು ಗುರುತಿಸುವುದು ಸಾಧ್ಯವಾಯಿತು. ಒಬ್ಬೊಬ್ಬರೂ ಬೇರೆ ಬೇರೆ ರಾಗಗಳನ್ನು ಬಳಸಿದ್ದರೆ ಯಾವುದೊಂದು ರಾಗದ ಸಂಚಾರವೂ ಸುಲಭವಾಗಿ ಪತ್ತೆಯಾಗುತ್ತಿರಲಿಲ್ಲ.

ಅಲ್ಪಸ್ವಲ್ಪ ರಾಗಜ್ಞಾನ ಬರಲಾರಂಭಿಸಿದ ಮೇಲೆ ನನಗೆ 'ಅರ್ಥ'ದ ಊರುಗೋಲು ಅಷ್ಟೇನೂ ಬೇಕೆನ್ನಿಸಲಿಲ್ಲ. ಏಳೆಂಟು ತಿಂಗಳು ಕಳೆಯುವುದರೊಳಗೆ ತೆಲುಗು ಸಂಸ್ಕೃತ ಕೃತಿಗಳು, ರಾಗಾಲಾಪನೆ, ವಾದ್ಯಸಂಗೀತ, ಇವೆಲ್ಲ ರುಚಿಸತೊಡಗಿದವು. ಅರ್ಥವಾಗುವ ದಾಸರ ಪದಗಳು ಬರದಿದ್ದರೂ ಕಛೇರಿ ಕೇಳಿ ಆನಂದಿಸುವುದು ಸಾಧ್ಯವಾಯಿತು. ಆದರೆ ಗಾನಸೃಷ್ಟಿಯಲ್ಲಿ, ಆ ಸೃಷ್ಟಿಯ ಆಸ್ವಾದನೆಯಲ್ಲಿ, ಅರ್ಥದ ಸ್ಥಾನವೇನು ಎಂಬ ಪ್ರಶ್ನೆಯ ಕಡೆಗೆ ನನ್ನ ಗಮನ ಹರಿದದ್ದು ಎಷ್ಟೋ ವರ್ಷಗಳು ಕಳೆದ ಮೇಲೆ. ನಾನು ಸುಮಾರು ಏಳು ದಶಕಗಳ ಕಾಲ ಸಂಗೀತವನ್ನು ಆಗಾಗ ಕೇಳುತ್ತಬಂದಿದ್ದೇನೆ: ಕೇಳಿರುವ ರಚನೆಗಳಲ್ಲಿ ಮುಕ್ಕಾಲು ಮೂರುವೀಸಪಾಲು ತೆಲುಗಿನಲ್ಲೋ ಸಂಸ್ಕೃತದಲ್ಲೋ ರಚಿಸಿದ ಕೃತಿಗಳು; ಉಳಿದವು ದಾಸರ ಪದಗಳು, ಕೆಲವು ತಮಿಳಿನ ರಚನೆಗಳು, ಕೆಲವು ಜಾವಳಿಗಳು. ಸಂಸ್ಕೃತ ಕೃತಿಗಳೇನೋ ಬೇಗಲೇ ಅರ್ಥವಾಗಲಾರಂಭಿಸಿದವು. ಮುಖಾರಿ ರಾಗದ 'ಎಂತನಿ ನೇ ವರ್ಣಿಂತುನು ಶಬರೀ ಭಾಗ್ಯ', ಧನ್ಯಾಸಿಯ 'ಸಂಗೀತ ಜ್ಞಾನಮು' ಮತ್ತು 'ಧ್ಯಾನಮೇ ವರಮೈನ ಸ್ನಾನಮು'—ಇಂಥ ಕೆಲವು ತೆಲುಗು ಕೃತಿಗಳು—ಅಲ್ಲಷ್ಟು ಇಲ್ಲಷ್ಟು ಪದಗಳು ಹೊರತು—ತಕ್ಕ ಮಟ್ಟಿಗೆ ಅರ್ಥವಾಗುತ್ತಿದ್ದವು. ಆದರೆ ಅವು ವಿನಾಯಿತಿಗಳು; ಎಷ್ಟೋ ಕೃತಿಗಳು ಅರ್ಥವಾಗುತ್ತಿರಲಿಲ್ಲ. ಈ ಸಂಧರ್ಭದಲ್ಲಿ ಪ್ರಸಕ್ತವಾದ ಅಂಶವೆಂದರೆ: ಅವನ್ನು ಅರ್ಥಮಾಡಿಕೊಳ್ಳುವ ಕುತೂಹಲವೇ ನನಗಿರಲಿಲ್ಲ; ಅರ್ಥಮಾಡಿಕೊಳ್ಳುವ ಅವಶ್ಯಕತೆ ಕಾಣಲಿಲ್ಲ. ನನ್ನಂತೆಯೇ ನೂರಾರು ಜನ ಅರ್ಥದ ಗೊಡವೆಗೇ ಹೋಗದೆ ಸಂಗೀತವನ್ನು ಸವಿಯುತ್ತಿದ್ದಾರೆಂದು ಬಲ್ಲೆ. ಕೆಲವು ವೇಳೆ ನನ್ನ ಸ್ನೇಹಿತರನ್ನು 'ಇದರ ಅರ್ಥವೇನು' ಎಂದು ಕೇಳಿದ್ದೇನೆ. ಅವರು 'ಗೊತ್ತಿಲ್ಲ' ಎಂದು ತಲೆ ಅಲ್ಲಾಡಿಸಿ ಆ ಪ್ರಶ್ನೆಯನ್ನು ಸ್ವಲ್ಪವೂ ಮನಸ್ಸಿಗೆ ಹಚ್ಚಿಕೊಳ್ಳದೆ ಮತ್ತೆ ಸಂಗೀತದಲ್ಲಿ ಮುಳುಗಿದ್ದಾರೆ. ನನ್ನಂತೆಯೇ ಅವರಿಗೂ ಅರ್ಥದ ಹಂಗೇನೂ ಇಲ್ಲ ಎಂಬುದು ಸ್ಪಷ್ಟ. ಅರ್ಥಮಾಡಿಕೊಂಡರೆ ಒಳ್ಳೆಯದು ಎಂಬುದನ್ನು ನಾನು ಅಲ್ಲಗಳೆಯುತ್ತಿಲ್ಲ. ಸಂಗೀತಾಸ್ವಾದನೆಗೆ ಅದು ಅಷ್ಟೇನೂ ಮುಖ್ಯವಲ್ಲ ಎಂದು ಮಾತ್ರ ನನ್ನವಾದ. ಈ ವಿಷಯ ಬೇರೆ ಕಡೆ ಹೆಚ್ಚಿನ ಚರ್ಚೆಗೆ ಬರಲಿದೆ.

೮. ವೆಸ್ಲಿಯನ್ ಹೈಸ್ಕೂಲಿನ ವಾತಾವರಣ

ವೆಸ್ಲಿಯನ್ ಹೈಸ್ಕೂಲಿನಲ್ಲಿ ನನ್ನ ಮೇಲೆ ಪ್ರಭಾವ ಬೀರಿದ ಗುರುಗಳನ್ನು ಬೇರೊಂದು ಕಡೆ ಸ್ಮರಿಸಿದ್ದೇನೆ[1]. ಅಷ್ಟಾಗಿ ಪ್ರಭಾವ ಬೀರದಿದ್ದರೂ ನನ್ನನ್ನು ವಿಶ್ವಾಸ ದಿಂದ ಕಾಣುತ್ತಿದ್ದ ಮತ್ತೊಬ್ಬ ಗುರುಗಳ ಸ್ವಭಾವ ವೈಚಿತ್ರ್ಯದಿಂದಾಗಿ ಅವರ ನೆನಪು ಆಗಿಂದಾಗ ಬರುತ್ತಿರುತ್ತದೆ. ಅವರು ಕ್ರೈಸ್ತರು ; ಭಾರತೀಯರೇ ಆದರೂ ಅವರ ಹೆಸರು ಭಾರತೀಯವಲ್ಲ; ಭಾರತೀಯ ಕ್ರೈಸ್ತನಾಮಗಳ ಬೆರಕೆಯೂ (ವಿಲಿಯಂ ನಾಗಮುತ್ತು ಎಂದ ಹಾಗೆ) ಅಲ್ಲ—ಅಪ್ಪಟ ಪಾಶ್ಚಾತ್ಯ ಹೆಸರು. ಅದು 'ಸ್ಮಿತ್' ಅಲ್ಲವಾದ್ದರಿಂದ ನಾನು ಇಲ್ಲಿ ಅದನ್ನು ಬಳಸಿಕೊಳ್ಳುತ್ತೇನೆ. ಅವರು ತಮ್ಮ ಹೆಸರು ಹೇಳಿಕೊಳ್ಳುತ್ತಿದ್ದದ್ದು ಅಪರೂಪ; ಯಾವಾಗಲೂ 'ವಿ. ಎಸ್.' ಎಂದು ಕರೆದುಕೊಳ್ಳುತ್ತಿದ್ದರು. ನಮ್ಮ ಸ್ಕೂಲಿನವರು, ಇತರ ಮಿಷನ್ ಸ್ಕೂಲಿನವರು, ಎಲ್ಲ ಸೇರಿದಂತೆ ಆ ಕಾಲದ ಭಾರತೀಯ —ಕ್ರೈಸ್ತ ಉಪಾಧ್ಯಾಯರಲ್ಲಿ ನಾಲ್ಕೈದು ಜನರ ಮುಖಚಹರೆ ನನ್ನ ಮನಸ್ಸಿನಲ್ಲಿ ಉಳಿದಿದೆ. ಅವರು ಮೇಷ್ಟರಾಗಿರುವುದರ ಜೊತೆಗೆ ಬಹುಶಃ ಮತಬೋಧಕರೂ ಆಗಿದ್ದರು, ಅವರೆಲ್ಲರ ಮುಖದಲ್ಲೂ ಒಂದು ಬಗೆಯ ಹೇಳಿ ಮಾಡಿಸಿದ, ಪ್ರಯತ್ನ ಪೂರ್ವಕವಾಗಿ ತಯಾರಿಸಿ ತಂದ, ಸಜ್ಜನಿಕೆಯ ಅಥವಾ ಸಾತ್ವಿಕತೆಯ ಅವಲೇಪ ಕಾಣುತ್ತಿತ್ತು. ಅದನ್ನು ಬಣ್ಣಿಸುವುದು ಕಷ್ಟ. ನಾಟಕವೊಂದರಲ್ಲಿ ಸರ್ವದಾ ದಯಾರ್ದ್ರ ಹೃದಯನಾದ, ಎಂದೂ ಕೋಪಗೊಳ್ಳದ, ಎಂದೂ ಚೆಲ್ಲುನಗೆ ನಗದ, ಮದ ಮತ್ಸರ ಗಳಿಗೆ ಎಡೆಗೊಡದ ಪಾತ್ರನಿದ್ದಾನೆ ಎಂದಿಟ್ಟುಕೊಳ್ಳೋಣ. ರಂಗಸ್ಥಳದ ಮೇಲೆ ಆ ಪಾರ್ಟು ಮಾಡುವವನು ಯಾವ ಮುಖಮುದ್ರೆಯನ್ನು ತಂದುಕೊಳ್ಳುತ್ತಾನೋ ಅದು, ನಾನು ಅವರ ಮುಖದಲ್ಲಿ ಕಂಡದ್ದು. ಯಾವ ಸಂದರ್ಭದಲ್ಲೂ ಬದಲಾಗದ ಆ ಮುಖಮುದ್ರೆಯನ್ನು ಮತಬೋಧಕರನೇಕರಲ್ಲಿ ಕಂಡಿದ್ದೇನೆ. ಅವರೆಲ್ಲ ಒಳ್ಳೆಯ ಜನರೇ. ಆ ಮುದ್ರೆಯಲ್ಲಿ ಕಪಟದ ಅಂಶವೇನೂ ಇರಬೇಕಾದ್ದಿಲ್ಲ. ಆದರೆ ಅದರಲ್ಲಿದ್ದ ಸಹಜತೆ ನಾಟಕಕ್ಕೆ ಸಹಜವಾದದ್ದು. ಪರಮತದವರನ್ನು ಒಲಿಸಿಕೊಳ್ಳುವುದಕ್ಕೆ ಅಂಥ ಮುಖಮುದ್ರೆಯಿದ್ದರೆ ಒಳ್ಳೆಯದು ಎಂದು ಅವರಿಗೆ ಅದನ್ನು ಅಭ್ಯಾಸಮಾಡಿಸಿದ್ದರೋ ಏನೋ. ಸಜ್ಜನಿಕೆಯೇ ವೃತ್ತಿಯಾಗುಳ್ಳವರ ಮುಖಮುದ್ರೆ, ಅದು—a book of professional benevolence, ಅದರಲ್ಲಿದ್ದ ಏಕಮಾತ್ರ ದೋಷ: ಅದರ ಅಚಲತೆ.

ನನ್ನ ಗುರುಗಳಾಗಿದ್ದ ಡಿ. ದೇವಪುತ್ರ ಮತ್ತು ವೀಯಸ್ (V.S.), ಇಬ್ಬರ ಮುಖದಲ್ಲೂ ಈ ಮುದ್ರೆಗೆ ಬದಲಾಗಿ ಸಂದರ್ಭಕ್ಕೆ ತಕ್ಕಂತೆ ಬದಲಾಗುವ ಚಂಚಲ ಮಾನವತೆಯಿತ್ತೆಂಬುದನ್ನು ಸಂತೋಷದಿಂದ ನೆನೆಯುತ್ತೇನೆ. ವೀಯಸ್ಸರ ಮುಖದಲ್ಲಿ ವಿಶ್ವಾಸ, ಹಾಸ್ಯ, ಕುಚೇಷ್ಟೆ, ಅಸಮಾಧಾನ—ಇವೆಲ್ಲಕ್ಕೂ ಎಡೆಯಿತ್ತು. ಅವರು ತಕ್ಕಮಟ್ಟಿಗೆ ಎತ್ತರದ ಆಳು. ಬಣ್ಣ ಕಪ್ಪಿಗೂ ಶ್ಯಾಮಲತೆಗೂ ನಡುವಿನದು ; ಕಪ್ಪಿನ ಕಡೆಗೇ ಹೆಚ್ಚು ಒಲಿದದ್ದು. ನಾನು ಕಂಡಾಗ ಅವರಿಗೆ ಐವತ್ತಕ್ಕಿಂತ ಹೆಚ್ಚೇ ವಯಸ್ಸಾ

---

1 ಚಿತ್ರಗಳು ಪತ್ರಗಳು : ೧, ೨, ೩ನೇ ಚಿತ್ರಗಳು.

ಗಿದ್ದಿರಬೇಕು. ತಲೆಗೂದಲೂ ಗಿರಲುವಿನಾಸೆಯೂ ಅರ್ಧ ನರೆದಿದ್ದವು. ಅವರ ಆರ್ಥಿಕ ಸ್ಥಿತಿ ಉತ್ತಮವಾಗಿದ್ದಿರಲಾರದು. ಎಂದೂ ಅವರು ಬಿಳಿಬಾಳುವ ವುಲನ್ ಸೂಟು ಹಾಕಿಕೊಂಡದ್ದನ್ನು ಕಾಣೆ. ಅವರಲ್ಲಿ ಬಡತನದಿಂದಾಗಿ ಸ್ವಲ್ಪ ಕೀಳರಿಮೆಯೂ ನೆಲಸಿದ್ದಿರಬಹುದು. ಅದು ಆತ್ಮಪ್ರಶಂಸೆಯ ಮೂಲಕ ಹೊರಬರುತ್ತಿತ್ತು. ಅವರ ಮಗ—ಚಾರ್ಲಿ ಎಂದು ಕರೆಯೋಣ—ನನ್ನ ಸಹಪಾಠಿ ಮತ್ತು ಸ್ನೇಹಿತ.

ವೀಯಸ್ ಬಹಳ ಒಳ್ಳೆಯ ಮನುಷ್ಯರು. ಹುಡುಗರನ್ನು ಕಂಡರೆ ಬಹಳ ವಿಶ್ವಾಸ. ಕ್ಲಾಸಿನಲ್ಲಿ ಪಾಠ ಹೇಳುವಾಗ ಕೆಲವರು ತಂದುಕೊಳ್ಳುವ ಶ್ರೀಮದ್ಗಾಂಭೀರ್ಯ ಅವರಲ್ಲಿ ಏನೇನೂ ಇರಲಿಲ್ಲ. ತಮ್ಮ ಶಿಷ್ಯರಿಗೆ ಏನಾದರೂ ಅಡ್ಡ ಹೆಸರಿಟ್ಟು ಅವರನ್ನು ಗೇಲಿಮಾಡಿ ನಕ್ಕು, ಅವರನ್ನೂ ನಗಿಸಿ ಉಲ್ಲಾಸದಿಂದ ಇರುತ್ತಿದ್ದರು. ನನ್ನ ಸ್ನೇಹಿತ ವೆಂಕಟಕೃಷ್ಣಯ್ಯ ಎಂಬವನು ನಂಜನಗೂಡಿನ ಬಿ. ವಿ. ಪಂಡಿತರ ಬಂಧು; ಪಂಡಿತರ ಸದ್ವೈದ್ಯಶಾಲೆಯ ಔಷಧಿಗಳನ್ನು ಮಾರಿ ಬಂದ ಲಾಭದಲ್ಲಿ ಜೀವನ ನಡೆಸುತ್ತಿದ್ದ. ವೀಯಸ್ಸರು ಅವನಿಗೆ ವೈದ್ಯನಾಗಪ್ಪ ಎಂದು ಹೆಸರಿಟ್ಟರು. (ವೈದ್ಯನಂತೂ ಸರಿಯೆ, 'ನಾಗಪ್ಪ' ಎಲ್ಲಿಂದ ಬಂತೋ ಕಾಣೆ!) ಅವನಿಗೆ ಆ ಹೆಸರು ಶಾಶ್ವತವಾಗಿ ನಿಂತುಹೋಯಿತು. ಅವನನ್ನು ನಾನು ಈಗಲೂ 'ವೈದ್ಯ' ಎಂದೇ ನೆನೆಯುತ್ತೇನೆ. ನನ್ನ ಇನ್ನೊಬ್ಬ ಸ್ನೇಹಿತ ಎಂ. ವಿ. ಗೋವಿಂದಸ್ವಾಮಿಯನ್ನು ಅವನ ತಾಯಿ ತಲೆಬಾಚಿ ಜಡೆಹೆಣೆದು ಅಲಂಕಾರ ಮಾಡಿ ಸ್ಕೂಲಿಗೆ ಕಳಿಸುತ್ತಿದ್ದರು. ಅವನಿಗೆ ವೀಯಸ್ಸರು 'ಪುಟ್ಟಸಾಮಿ' ಎಂದು ಹೆಸರಿಟ್ಟರು. ನಾನು ಎತ್ತರದ ಆಳಲ್ಲವಾದ್ದರಿಂದ 'ಷಾರ್ಟಿ' (shorty) ಆಗಬೇಕಾಯಿತು. ವೀಯಸ್ಸರು ತಮ್ಮ ಮಿತಿಯಲ್ಲಿ ಚೆನ್ನಾಗಿ ಪಾಠ ಹೇಳುತ್ತಿದ್ದರು; ಹುಡುಗರನ್ನು ವಿಶ್ವಾಸದಿಂದ ಕಾಣುತ್ತಿದ್ದರು. ಅದರಿಂದಾಗಿ ಅವರ ಹಾಸ್ಯಕುಚೋದ್ಯಗಳು ಯಾರಿಗೂ ಅಪ್ರಿಯವೆನ್ನಿಸಲಿಲ್ಲ. ಅವರು ಹುಡುಗರನ್ನು ಸಂಬೋಧಿಸುವಾಗ my son, sorry, my child ಇತ್ಯಾದಿ ಪ್ರೀತಿಯನ್ನು ಸೂಚಿಸುವ ಪದಗಳನ್ನು ಬಳಸುವುದುಂಟು. ಕೋಪ ಬಂದಾಗ sonny ಆಗಿದ್ದವನು that johnny ಆಗುವುದೂ ಉಂಟು.

ವೀಯಸ್ಸರು ನಮಗೆ ಇಂಗ್ಲಿಷನ್ನೂ ಬೈಬಲ್ಲನ್ನೂ ಬೋಧಿಸುತ್ತಿದ್ದರು. ಅವರ ಸಾಹಿತ್ಯಾಭಿರುಚಿ ಹೇಳಿಕೊಳ್ಳುವಂಥದೇನಲ್ಲ. ಎಂದೂ ಅವರು ದೊಡ್ಡ ಲೇಖಕನೊಬ್ಬನ ಹೆಸರು ಹೇಳಿದ ನೆನಪಿಲ್ಲ. ಆದರೆ ಪದ್ಯಗಳಿಗೆ ಚೆನ್ನಾಗಿ ಅರ್ಥ ಹೇಳುತ್ತಿದ್ದರು; ವ್ಯಾಕರಣ ದೃಷ್ಟಿಯಿಂದ ಅವುಗಳಲ್ಲಿ ಏನಾದರೂ ವೈಶಿಷ್ಟ್ಯವಿದ್ದರೆ ಅದನ್ನು ಮನಮುಟ್ಟುವಂತೆ ವಿವರಿಸಿ ಹೇಳುತ್ತಿದ್ದರು. ತಮ್ಮ ವ್ಯಾಕರಣ ಜ್ಞಾನದ ವಿಷಯದಲ್ಲಿ ಅವರಿಗೆ ಬಹಳ ಹೆಮ್ಮೆ; ಅದರಲ್ಲೂ ಅವರಿಗೆ ಅತ್ಯಂತ ಪ್ರಿಯವಾದದ್ದು parsing—ಪದಗಳ ವಾಚಕ, ಲಿಂಗ, ವಚನ, ವಿಭಕ್ತಿ ಇತ್ಯಾದಿಗಳನ್ನು ಹೇಳುವುದು. Here is my challenge "Show me the great scholar who can parse these words: 'me' in 'as for me', or 'bye' in good-bye.*

*ವಾಸ್ತವವಾಗಿ 'good-bye' ಎಂಬ ಪದ 'God be with you' ಎಂಬ ಪದಕೆಯ ಸಂಕ್ಷಿಪ್ತ ರೂಪ.

you won't find any. So whom do you consult? ('ಆ್ಯಸ್ ಫಾರ್ ಮಿ' ಯಲ್ಲಿ 'ಮಿ'; 'ಗುಡ್‌ಬೈ' ಯಲ್ಲಿ 'ಬೈ'—ಈ ಪದಗಳನ್ನು ಪಾರ್ಸ್ ಮಾಡೋ ರುಸ್ತುಂ ಪಂಡಿತ ಯಾರಿದ್ದಾನೆ, ತೋರಿಸು. ತೆಗೋ ನನ್ನ ಸವಾಲು. ಅಂದ ಮೇಲೆ ನೀವು ಯಾರನ್ನು ಕೇಳಬೇಕು?"—ಅವರು ಹೀಗೆ ಸವಾಲು ಹಾಕಿದಾಗ ನಾವೆಲ್ಲ ('ಯಾರನ್ನು ಕೇಳಬೇಕು' ಅನ್ನುವ ಪ್ರಶ್ನೆಗೆ ಉತ್ತರವಾಗಿ) 'ವಿ. ಎಸ್.' ಅಂತ ಕೂಗಿದರೆ ಅವರಿಗೆ ಪರಮಾನಂದ!

ಅವರ ವೈಚಿತ್ರ್ಯಗಳಲ್ಲಿ ಮುಖ್ಯವಾದದ್ದೆಂದರೆ, ತಾವು ಐಶ್ವರ್ಯವಂತರು, ದೊಡ್ಡ ವಂಶದವರು, ಎಂದು ತೋರಿಸಿಕೊಳ್ಳುವ ಆಸೆ. ಅದಕ್ಕಿಂತಲೂ ಹೆಚ್ಚಾಗಿ ತಾವು ಆಂಗ್ಲರು (ಭಾರತೀಯರಲ್ಲ) ಎಂದು ಹೇಳಿಕೊಳ್ಳುವ ಆಸೆ. ಆಂಗ್ಲರ ಉಚ್ಚಾರಣೆಯನ್ನು (ತಾವು ಯಾವುದನ್ನು ಆಂಗ್ಲ ಉಚ್ಚಾರಣೆ ಎಂದು ಭಾವಿಸಿದ್ದರೋ ಅದನ್ನು) ಅನುಕರಿಸಲು ವಿಶ್ವಪ್ರಯತ್ನ ಮಾಡುತ್ತಿದ್ದರು. 'ರಾಮಣ್ಣ' ಅವರ ಬಾಯಲ್ಲಿ (ಅದರ ಉಚ್ಚಾರಣೆ ಪರಿಚಿತವಾದದ್ದೇ ಆದರೂ) 'ರಾಮುನ್ನ' ಆಗುತ್ತಿತ್ತು. ತಾವು ಆಂಗ್ಲರೆಂದು ನೇರವಾಗಿ ಹೇಳಿಕೊಳ್ಳಲಾಗುವುದಿಲ್ಲ, ಅದು ವಿಚಿತ್ರವಾಗಿ ಕಾಣುತ್ತದೆ. ಆದ್ದರಿಂದ ಯಾವುದೋ ಮಾತು ತೆಗೆದು ಅದರ ನಡುವೆ ಈ ಸೂಚನೆಯನ್ನು ನುಗ್ಗಿಸುತ್ತಿದ್ದರು. ವರ್ಷಾಂತ್ಯದ ಪರೀಕ್ಷೆಯಲ್ಲಿ ನನಗೆ ಇಂಗ್ಲಿಷ್‌ನಲ್ಲೂ ಸ್ಕ್ರಿಪ್ಚರ್(ಬೈಬಲ್)ನಲ್ಲೂ ಪ್ರಥಮಸ್ಥಾನ ದೊರಕಿ ಬಹುಮಾನ ಬಂತು. (ಇದನ್ನು ತಂದಿರುವುದು ಜಂಬ ಕೊಚ್ಚುವುದಕ್ಕಲ್ಲ ಬೇರೆ ಕಾರಣಕ್ಕಾಗಿ ಎಂದು ಮುಂದೆ ಸ್ಪಷ್ಟವಾಗುತ್ತದೆ. ಆದರೂ ಕ್ಷಮೆ ಬೇಡುತ್ತೇನೆ.) ಅವರ ಮಗ ಚಾರ್ಲಿ ಎರಡನೆಯವನಾಗಿಯೋ ಮೂರನೆಯವನಾಗಿಯೋ ಬಂದ. ವೀಯಸ್ ಕ್ಲಾಸಿನಲ್ಲಿ ಇದನ್ನು ಹೇಳುತ್ತ ತಮ್ಮ ಮಗನನ್ನು ತರಾಟೆಗೆ ತೆಗೆದುಕೊಳ್ಳುವಂತೆ ಮಾತಾಡಿದರು. ಮೊದಲು ನನ್ನನ್ನು ಹೊಗಳಿದರು: "You have done well, sonny. Very well indeed. But you, my son, that you should allow this child to beat you in English and the Bible! you, an English child, and a Christian!" [ನೀನು ಪರೀಕ್ಷೆಯಲ್ಲಿ] ಚೆನ್ನಾಗಿ ಮಾಡಿದ್ದೀಯೆ, ಮಗು. ಬಹಳ ಚೆನ್ನಾಗಿ ಮಾಡಿದ್ದೀಯೆ. ಆದರೆ [ತಮ್ಮ ಮಗನಿಗೆ] ನೀನು, ಈ ಹುಡುಗನಿಂದ ಇಂಗ್ಲಿಷ್‌ನಲ್ಲೂ ಬೈಬಲ್‌ನಲ್ಲೂ ಸೋಲು ತಿನ್ನುವುದುಂಟೆ! ನೀನು—ಇಂಗ್ಲಿಷ್ ಹುಡುಗನಾಗಿದ್ದುಕೊಂಡು, ಕ್ರಿಶ್ಚಿಯನ್ನಾಗಿದ್ದುಕೊಂಡು, ಅವನಿಗೆ ಸೋಲಬಹುದೆ!) ಈ ಮಾತನ್ನು ಕೇಳಿದರೆ ನಗು ಬರುವುದು ಸ್ವಾಭಾವಿಕ. ಆದರೆ—ಅವೆರಡು (ಇಂಗ್ಲಿಷ್, ಬೈಬಲ್) ಪಠ್ಯ ವಿಷಯಗಳಲ್ಲೂ ಉತ್ತರ ಪತ್ರಿಕೆಗಳಿಗೆ ಬೆಲೆ ಕಟ್ಟಿದವರು ವೀಯಸ್ಸರೇ; ತಮ್ಮ ಮಗನಿಗೆ ನನಗಿಂತ ಕಡಿಮೆ ನಂಬರು ಕೊಟ್ಟವರು ಅವರೇ! ಇದನ್ನು ನೆನೆದರೆ ನಗುವಿಗೆ ಬದಲಾಗಿ ಗೌರವ ಉಕ್ಕುತ್ತದೆ. ಪರಮ ಪ್ರಾಮಾಣಿಕರು, ವೀಯಸ್!

ಇನ್ನೊಂದು ದಿನ ಯಾವುದೋ ಸಂದರ್ಭದಲ್ಲಿ (ಬಹುಶಃ ಸಂದರ್ಭವನ್ನು ತಾವೇ ಸೃಷ್ಟಿಸಿಕೊಂಡು) "You know, when dad drove up the gravel path I would rush to meet him half way. Of course,

Sonny, you wouldn't remember dad. You were a baby when he passed away....[1]" ಎಂದು ಕಥೆ ಹೇಳಿದರು. "ನಾವು ಗ್ರಾವಲ್ ರಸ್ತೆಯೂ ದೊಡ್ಡ ಕಾಂಪೌಂಡೂ ಇದ್ದ ದೊಡ್ಡ ಮನೆಯಲ್ಲಿದ್ದೆವು. ನಮ್ಮ ತಂದೆ ಕೋಚ್ ಇಟ್ಟಿದ್ದರು" ಎಂಬುದನ್ನು ಹೇಗಾದರೂ ನಮ್ಮ ಕಿವಿಯ ಮೇಲೆ ಹಾಕಬೇಕು—ಇದನ್ನೆಲ್ಲ ಅವರು ಕ್ಲಾಸಿನಲ್ಲೇ ಹೇಳುವುದುಂಟು. ಅವರ ತಂದೆ ಐಶ್ವರ್ಯವಂತರೋ ಅಲ್ಲವೋ ನಾವು ಕಾಣೆವು. ಐಶ್ವರ್ಯವಂತರಾಗಿದ್ದಿದ್ದರೂ ಪಾಠ, ಆ ಸಂಪತ್ತೆಲ್ಲ ವೀಯಸ್ಸರ ಕಾಲಕ್ಕೆ ಕರಗಿಹೋಗಿತ್ತು. ಚಾರ್ಲಿಯನ್ನು ಅವರು 'ಇಂಗ್ಲಿಷ್ ಚೈಲ್ಡ್' ಎಂದು ಕರೆದಾಗ ಅವನ ಕಪ್ಪು ಬಣ್ಣ ನಮ್ಮ ಕಣ್ಣಿಗೆ ಮತ್ತಷ್ಟು ಕಪ್ಪಾಗಿ ಕಾಣುವುದು! ಹಾಗೆ ಮಾತಾಡುವುದು ಹಾಸ್ಯಾಸ್ಪದವಾಗುತ್ತದೆ ಎಂಬುದು ನಮ್ಮಂಥ ಹುಡುಗರಿಗೇ ತಿಳಿಯುತ್ತಿತ್ತು. ವೀಯಸ್ಸರಿಗೇಕೆ ತಿಳಿಯಲಿಲ್ಲ? ಒಂದು ಕಡೆ ಕೀಳರಿಮೆ, ಮತ್ತೊಂದು ಕಡೆ ಆಂಗ್ಲರ ಪರವಾದಪ್ರತಿಷ್ಠಾಪೂಜಕತೆ—ಇವೆರಡೂ ವಿಚಾರಶಕ್ತಿಯನ್ನು ಹಿಂದೂಡಿ ಅವರನ್ನು ಕುಣಿಸುತ್ತಿದ್ದವೇನೊ!

ಈ ಮನೋವೃತ್ತಿಗೆ ಸಾಧಾರಣವಾಗಿ ತಿರಸ್ಕಾರ ಸಲ್ಲುತ್ತದೆ. ಆದರೆ ನಾನೂ ನನ್ನ ಸಹಪಾಠಿಗಳೂ ವೀಯಸ್ಸರನ್ನು ಮೆಚ್ಚಿಕೊಂಡವರು. ಅಲ್ಲದೆ ಅವರು ತಮ್ಮನ್ನು 'ಇಂಗ್ಲಿಷ್' ಎಂದು ಕರೆದುಕೊಂಡರೇ ಹೊರತು ಭಾರತವನ್ನು ಕುರಿತು ಎಂದೂ ಸಣ್ಣ ಮಾತಾಡಲಿಲ್ಲ. 'ಸ್ನಾಬರಿ' (ಪ್ರತಿಷ್ಠಾಪೂಜಕ ಮನೋಧರ್ಮ) ವಿನಾ, ಅವರು ಗೌರವಾರ್ಹರು. ಮೇಲೆ ಉದಾಹರಿಸಿರುವಂಥ ಅವರ ಹಾಸ್ಯಾಸ್ಪದ ಮಾತುಗಳನ್ನು ನಾವು ಎತ್ತಿ ಆಡಿಕೊಂಡದ್ದುಂಟು—ಆದರೆ ಸಹಾನುಭೂತಿಯುಳ್ಳ ನಗೆಯಿಂದ, ಸ್ವಲ್ಪ ವಿಷಾದದಿಂದ ಎಂದರೂ ತಡೆಯುತ್ತದೆ.

ಅವರ ಮಗ ಚಾರ್ಲಿ ನನ್ನನ್ನೂ ಗೋವಿಂದಸ್ವಾಮಿಯನ್ನೂ ಒಂದೆರಡು ಸಾರಿ ತಮ್ಮ ಮನೆಗೆ ಕರೆದುಕೊಂಡು ಹೋಗಿದ್ದ. ಅವರು ದೊಡ್ಡಪೇಟೆಯ (ಇಂದಿನ ಅಶೋಕ ರೋಡಿನ) ಉತ್ತರದ ಕೊನೆಯಲ್ಲಿ ಸೆಂಟ್ ಫಿಲೊಮೀನ ಚರ್ಚಿನ ಎದುರು ಸಾಲಿನಲ್ಲಿ ಮಹಡಿಯ ಮೇಲಿನ ಸಣ್ಣ ಮನೆಯಲ್ಲಿ ವಾಸವಾಗಿದ್ದರು. ವೀಯಸ್ ನಮ್ಮನ್ನು ಬಹಳ ಆದರದಿಂದ ಮಾತಾಡಿಸಿ ಬಿಸ್ಕತ್ತು ಟೀಗಳನ್ನು ಕೊಟ್ಟದ್ದು ನೆನಪಿದೆ. ನ್ಯಾಯವಾಗಿ ನಮ್ಮ ಕುಲಗುರುಗಳಾದ ಶೃಂಗೇರಿ ಸ್ವಾಮಿಗಳು ನನಗೆ ಆಗಲೇ ಬಹಿಷ್ಕಾರ ಹಾಕಬೇಕಾಗಿತ್ತು. ೧೫-೧೬ ವರ್ಷದ ಬ್ರಾಹ್ಮಣ ಹುಡುಗರು ಕಿರಿಸ್ತಾನರ ಮನೆಯಲ್ಲಿ ತಿಂಡಿ ತಿಂದು ಟೀ ಕುಡಿದರೆ ಅವರಿಗೆ ಕ್ಷಮೆಯುಂಟೆ!

ನಾನು ಕಾಲೇಜಿನಲ್ಲಿ ಲೆಕ್ಚರರ್ ಆಗಿ ಒಂದೆರಡು ವರ್ಷಗಳಾಗಿದ್ದವು ಎಂದು ನೆನಪು—ಆಗ ವೀಯಸ್ ತಮ್ಮ ಮಗನಿಗೆ ಸಂಬಂಧಪಟ್ಟ ಯಾವುದೋ ರಿಕಾರ್ಡನ್ನು (ವಯಸ್ಸಿನ ದಾಖಲೆ?) ತೆಗೆದುಕೊಂಡು ಹೋಗುವುದಕ್ಕಾಗಿ ಕಾಲೇಜಿಗೆ ಬಂದರು. ತನ್ನನ್ನು ಗುರುತಿಸಿಯೇ ಗುರುತಿಸುತ್ತಾರೆ ಎಂದುಕೊಂಡು ನಾನು ಅವರ ಬಳಿಗೆ ಹೋಗಿ

---

[1] "ತಂದೆ ಗ್ರಾವಲ್ ರಸ್ತೆಯಲ್ಲಿ (ಕೋಚ್‌ನಲ್ಲಿ) ಬಂದಾಗ ನಾನು ಓಡಿಹೋಗಿ ಅರ್ಧದಾರಿಯಲ್ಲೇ ಅವರನ್ನು ಸಂಧಿಸುತ್ತಿದ್ದೆ. (ಮಗನಿಗೆ) ನಿನಗೆ ನನ್ನ ತಂದೆಯ ನೆನಪಿಲ್ಲ, ಮಗು. ಅವರು ತೀರಿಕೊಂಡಾಗ ನೀನಿನ್ನೂ ಎಳೆಯ ಮಗು."

ನಮಸ್ಕಾರ ಹೇಳಿದೆ. ಅವರಿಗೆ ನನ್ನ ನೆನಪಿರಲಿಲ್ಲ. ನಾನು ಪ್ರವರವನ್ನೆಲ್ಲ ಹೇಳಿಕೊಂಡ ಮೇಲೆ "ಆಹಾ, ಹೌದು, ಹೌದು" ಎಂದರಾದರೂ ಬಹುಶಃ ಆಗಲೂ ಅವರಿಗೆ ನೆನಪಾಗಲಿಲ್ಲ. ತಮ್ಮ ಮಗ ಸೈನ್ಯಕ್ಕೆ ಸೇರಿದ್ದನೆಂದೂ ಒಳ್ಳೆಯ ಕೆಲಸವಿತ್ತೆಂದೂ (ನನ್ನ ಪ್ರಶ್ನೆಗೆ ಉತ್ತರವಾಗಿ) ಹೇಳಿದರು. ಅವರನ್ನು ಕಾಲೇಜಿನ ಆಫೀಸ್ ಮ್ಯಾನೇಜರ್ ಸೇತೂರಾಯರಲ್ಲಿಗೆ ಕರೆದುಕೊಂಡುಹೋಗಿ ಪರಿಚಯ ಮಾಡಿಸಿ ಅವರಿಗೆ ಬೇಕಾಗಿದ್ದ ರಿಕಾರ್ಡನ್ನು ಕೊಡಿಸಿದೆ. ಅವರು ಹೊರಡುವುದಕ್ಕೆ ಮುಂಚೆ "Please remember me to Charlie, Sir.[1] Good-bye" ಎಂದು ಹೇಳುತ್ತಿದ್ದಾಗ ನನಗೆ ಅವರ "bye in good-bye" ನೆನಪಿಗೆ ಬಂತು. ಮುಗುಳುನಗೆಯನ್ನು ತಡೆಯುವುದು ಸಾಧ್ಯವಾಗಲಿಲ್ಲ. ನಗುತ್ತಲೇ "I haven't yet learnt how to parse bye in good-bye. I must come to you some day"[2] ಎಂದೆ. ಅವರು ಗಟ್ಟಿಯಾಗಿ ನಕ್ಕು ಬೆನ್ನ ಮೇಲೊಂದು ವಿಶ್ವಾಸದ ಪೆಟ್ಟುಕೊಟ್ಟು, "You remember that? Naughty, naughty"[3] ಎಂದು ನಕ್ಕು ಹೊರಟು ಹೋದರು. ಅವರ ಮುಖದಲ್ಲೂ ಮಾತಿನಲ್ಲೂ ಮೊದಲಿನ ಗೆಲುವು ಇನ್ನೂ ಕಾಣುತ್ತಿತ್ತು.

ಅವರು ಲಕ್ಷಣವಾದ ಸರ್ಜ್‌ಸೂಟ್ ಹಾಕಿಕೊಂಡಿದ್ದದ್ದನ್ನೂ ಗಮನಿಸಿದೆ. ಮಕ್ಕಳು ಅವರನ್ನು ವೃದ್ಧಾಪ್ಯದಲ್ಲಿ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ ಎಂದುಕೊಂಡು ಸಂತೋಷಪಟ್ಟೆ.

ಮೀಯಸ್‌ರಲ್ಲಿದ್ದ ಸ್ನಾಬರಿ (ಪ್ರತಿಷ್ಠಾಪೂಜಕ ಮನೋವೃತ್ತಿ, ಸ್ನಾಬರಿ ಅಡಕವಾದ ಪದವಾದ್ದರಿಂದ ಅದನ್ನೇ ಬಳಸುತ್ತೇನೆ) ಅವರಿಗೆ ವಿಶಿಷ್ಟವಾದದ್ದು. ವೆಸ್ಲಿಯನ್ ಹೈಸ್ಕೂಲಿನ ವಾತಾವರಣದಲ್ಲಿ ವ್ಯಾಪಿಸಿದ್ದದ್ದಲ್ಲ. ೧೯೪೦ರಲ್ಲಿ ಮಿಷನರಿಗಳು ನಡೆಸುತ್ತಿದ್ದ ಸ್ಕೂಲೊಂದಕ್ಕೆ ಯಾವುದೋ ಉತ್ಸವದ ಸಂದರ್ಭದಲ್ಲಿ ಹೋದದ್ದು ನೆನಪಿದೆ. ಅವತ್ತು ಮಕ್ಕಳು ವೇದಿಕೆಯ ಮೇಲೆ ಬಂದು "For we are little Englishmen" ಎಂಬ ಪದಗಳನ್ನುಳ್ಳ ಪದ್ಯವನ್ನು ಹಾಡಿದರು; ಕೇಳಿ ನನಗೆ ಬಹಳ ಬೇಸರವಾಯಿತು. ಆ ಸ್ಕೂಲಿನಲ್ಲಿದ್ದ ಮಿಷನರಿಗಳೆಲ್ಲ ಕರಿಯ ದೊರೆಗಳು. ನಮ್ಮ ವೆಸ್ಲಿಯನ್ ಸ್ಕೂಲಿನಲ್ಲಾದರೋ ಪ್ರಿನ್ಸಿಪಲ್ (ಆ ಕಾಲದಲ್ಲಿ) ಆಂಗ್ಲರು; ಆಳರಸರ ಕುಲದವರು. ಆದರೂ ಅಲ್ಲಿ ಆಂಗ್ಲಪರವಾದ ಸ್ನಾಬರಿ ಏನೇನೂ ಇರಲಿಲ್ಲವೆಂಬುದನ್ನು ಸಂತೋಷದಿಂದ ನೆನೆಯುತ್ತೇನೆ. ಸ್ಕೂಲನ್ನು ನಡೆಸುತ್ತಿದ್ದವರು ಮಿಷನ್ನಿನವರು. ಆ ಮಿಷನ್ನಿನ ಕೆಲಸಗಳಲ್ಲಿ ಕ್ರೈಸ್ತೇತರರನ್ನು ಕ್ರೈಸ್ತರಾಗಿಸುವುದೇ ಬಹುಶಃ ಮುಖ್ಯ ಕೆಲಸ. ಮಿಷನ್ನಿನ ಕೆಲಸಗಾರರಲ್ಲಿ ನಮ್ಮ ಅಧ್ಯಾಪಕರನ್ನು ಬಿಟ್ಟು ಉಳಿದವರು ತಮ್ಮ ಮತಕ್ಕೆ ಜನರನ್ನು ಆಕರ್ಷಿಸುವ ಕೆಲಸವನ್ನು ಮಾಡುತ್ತಲೂ ಇದ್ದರೇನೊ. ಸ್ಕೂಲಿನಲ್ಲಿ ಕ್ರೈಸ್ತರ ಪವಿತ್ರಗ್ರಂಥವಾದ ಬೈಬಲ್ಲನ್ನು ಕಡ್ಡಾಯವಾಗಿ ಬೋಧಿಸುತ್ತಿದ್ದದ್ದು ನಿಜ;

---

1 ಚಾರ್ಲಿಗೆ ನನ್ನ ನೆನಪು ಕೊಡಿ

2 ನಾನಿನ್ನೂ (ಗುಡ್‌ಬೈಯಲ್ಲಿನ ಬೈ ಪಾರ್ಸ್ ಮಾಡುವುದನ್ನು ಕಲಿತಿಲ್ಲ. ನಿಮ್ಮಲ್ಲಿಗೆ ಒಂದು ದಿನ ಬರಬೇಕು)

3 ಅದು ನೆನಪಿದೆಯೆ? ತುಂಟತನ! ತುಂಟತನ!

ಪ್ರತಿದಿನ ೧೧ ಘಂಟೆಗೆ ವಿದ್ಯಾರ್ಥಿಗಳೆಲ್ಲ ಹಾಲಿನಲ್ಲಿ ಸೇರಿ ಕ್ರೈಸ್ತ ಸ್ತೋತ್ರವನ್ನು—ಅದರಲ್ಲಿ 'ಇದು ಕ್ರೈಸ್ತರಿಗೆ ಸರಿ, ಇತರರಿಗೆ ತಕ್ಕದ್ದಲ್ಲ' ಎನ್ನಿಸುವಂಥದೇನೂ ಇಲ್ಲ—ಕೇಳಬೇಕಾಗಿತ್ತು, ಅದೂ ನಿಜ. ಆದರೆ ಭಾರತವನ್ನಾಗಲಿ ಭಾರತದ ಮತಗಳನ್ನಾಗಲಿ ಹಳಿಯುವ ಮಾತನ್ನು ಎಂದೂ ಅಲ್ಲಿ ಕೇಳಿದ ನೆನಪಿಲ್ಲ. ಇತರ ಸ್ಕೂಲುಗಳಲ್ಲಿ ಹುಡುಗರಿಗೆ ದೊರೆಯದಿದ್ದ ಮರ್ಯಾದೆ ನಮಗೆ ದೊರೆತದ್ದೂ ಉಂಟು. ನಾವು ಎಂಟ್ರೆನ್ಸ್ ಕ್ಲಾಸಿನಲ್ಲಿದ್ದಾಗ ಪ್ರಿನ್ಸಿಪಲ್ ಬೂಟ್‌ರವರು ನಮಗೇನಾದರೂ ನೋಟೀಸು ಕಳಿಸಬೇಕಾಗಿ ಬಂದಾಗ "To the gentlemen of the Entrance class" ಎಂದೇ ನಮ್ಮನ್ನು ನಿರ್ದೇಶಿಸುತ್ತಿದ್ದರು. ಎಂಟ್ರೆನ್ಸ್ ಮುಗಿದ ಮೇಲೆ ನಾವೆಲ್ಲ ಕಾಲೇಜಿಗೆ ಸೇರುವವರಷ್ಟೆ—ಆ ವರ್ಷ ಕ್ಲಾಸುಗಳು ಮುಗಿದು ಪರೀಕ್ಷೆಗೆ ಸಿದ್ಧವಾಗಲು ರಜ ಕೊಟ್ಟಾಗ ಬೂಟ್ ನಮ್ಮನ್ನೆಲ್ಲ—ನಾವಿದ್ದವರು ೧೮ ಜನ ಮಾತ್ರ—ತಮ್ಮ ಮನೆಗೇ ಕರೆದು ತಿಂಡಿ ಕಾಫಿಗಳನ್ನು ಕೊಟ್ಟು (ನಮಗೋಸ್ಕರ ಸಸ್ಯಾಹಾರ ಮಾಡಿಸಿದ್ದರು ಅಥವಾ ತರಿಸಿದ್ದರು) ಉಪಚರಿಸಿ ಆದರದ ಮಾತುಗಳನ್ನಾಡಿದರು. ಅವರ ಪತ್ನಿ ಪಿಯಾನೋ ನುಡಿಸಿ ಒಂದೆರಡು ಹಾಡು ಹೇಳಿದರು. ನಮಗೆಲ್ಲ "ಹಿರಿಯ ಬಂಧುವೊಬ್ಬರ ಮನೆಯಲ್ಲಿದ್ದೇವೆ" ಎಂಬ ಭಾವನೆ ಬಂತು.

ನಾನು ಮಿಷನರಿಗಳ ಹೊಗಳು ಭಟ್ಟನಾಗಿ ಮಾತಾಡುತ್ತಿಲ್ಲ. ಅವರು—ಅಂದರೆ ಮಿಷನ್ನಿನವರು ನನ್ನ ಗುರುಗಳಲ್ಲ—ಸ್ಕೂಲಿನ ಹೊರಗೆ ಜನರನ್ನು ತಮ್ಮ ಮತಕ್ಕೆ ಸೆಳೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದರೆಂಬುದು ನಿಜ. ಅದನ್ನು ನಾನು ಬಲ್ಲೆ. ಮತಾಂತರಗೊಳಿಸಲು ಮಾಡುವ ಪ್ರಚಾರ ನನಗೆ ಅಪ್ರಿಯ; ಆದ್ದರಿಂದ ಮಿಷನರಿಗಳ ವಿಷಯದಲ್ಲಿ ಏನೇನೂ ಸಹಾನುಭೂತಿಯಿಲ್ಲ. ಆದ್ದರಿಂದಲೇ ಅವರಿಗೆ ಅನ್ಯಾಯವಾಗದಂತೆ ಎಚ್ಚರಿಕೆ ವಹಿಸಬೇಕು; ಅವರ ಸ್ಕೂಲಿನ ವಿಷಯದಲ್ಲಿ ಹೇಳಬಹುದಾದ ಒಳ್ಳೆಯ ಮಾತನ್ನು ಹೇಳಲೇ ಬೇಕು ಎನ್ನಿಸುತ್ತಿದೆ.

ಸ್ಕೂಲಿನ ಅಧಿಕಾರಿಗಳ ಪ್ರೇರಣೆಯೇನೂ ಇಲ್ಲದೆ ವಿದ್ಯಾರ್ಥಿಗಳಲ್ಲೇ ಆಂಗ್ಲರ ಪರವಾದ ಮನೋಧರ್ಮ ಕಂಡುಬಂದ ಸಂದರ್ಭವೊಂದು ನೆನಪಿಗೆ ಬರುತ್ತಿದೆ. ಆಗ ನಾನು ೪ನೇ ಅಥವಾ ೫ನೇ ಫಾರಂನಲ್ಲಿದ್ದೆನೇನೊ. ನಮ್ಮ ಕ್ಲಾಸಿನ 'ಮಾನಿಟರ್' ಆಗಿದ್ದವನು ನಾಲ್ಕೈದು ಜನ ಚೇಲರನ್ನು ಕಟ್ಟಿಕೊಂಡು 'ದರ್ಬಾರ್ ಡೇ' ಆಚರಿಸಬೇಕೆಂದು ನಿಶ್ಚಯಿಸಿದ. ಅವನ ಹೆಸರು ಚೆನ್ನಾಗಿ ನೆನಪಿದೆಯಾದರೂ ಅದನ್ನು ಇಲ್ಲಿ ಕಾಣಿಸುವುದು ಉಚಿತವಲ್ಲ. ಡೆಮಾಕ್ರೆಸಿಯ ಕಾಲವಾಗಿದ್ದಿದ್ದರೆ ಅವನು ಎಲ್ಲ ಮಂತ್ರಿಗಳ ಜನ್ಮದಿನವನ್ನೂ ಆಚರಿಸಿ, ಚುನಾವಣೆ ಕಾಲದಲ್ಲಿ ಟಿಕೆಟ್ ಪಡೆದು ಮುನಿಸಿಪಾಲಿಟಿ, ಜಿಲ್ಲಾ ಬೋರ್ಡು, ಪಾರ್ಟಿ, ಕ್ಯಾಬಿನೆಟ್ (ಎಳೆಗರುಂ ಎತ್ತಾಗದೇ ಲೋಕದೊಳ್ !) ಎಲ್ಲ ಕಡೆಗಳಲ್ಲೂ 'ಸೇವೆ' ಸಲ್ಲಿಸಿ ಕೋಟೀಶ್ವರನಾಗುತ್ತಿದ್ದ. ಪಾಪ, ಅವನು ತನ್ನ ಜೀನಿಯಸ್‌ಗೆ ತಕ್ಕ ಕಾಲದಲ್ಲಿ ಹುಟ್ಟಲಿಲ್ಲ. ದರ್ಬಾರ್ ಡೇ ಆಚರಣೆಯಿಂದಲೇ ತೃಪ್ತಿ ಪಡೆಯಬೇಕಾಯಿತು.

ಬ್ರಿಟಿಷರು ತಮ್ಮ ಪ್ರತಿಷ್ಠೆಯನ್ನೂ ದರ್ಪವನ್ನೂ ವೈಭವವನ್ನೂ ಪ್ರದರ್ಶಿಸಿ ಭಾರತೀಯರಲ್ಲಿ 'ಮುಡಗಿದ ಹಾರು' ಬುದ್ಧಿಯನ್ನು ಬೆಳಸಲೆಂದು ಡೆಲ್ಲಿಯಲ್ಲಿ ಭವ್ಯವಾ

ದೊಂದು ದರ್ಬಾರು ನಡೆಸಿದ್ದರು. ಅದಕ್ಕೆ ನಮ್ಮ ದೇಶದ ರಾಜಮಹಾರಾಜರುಗಳೆಲ್ಲರನ್ನೂ ಕರೆಸಿದ್ದರು. ಅದರ ವರ್ಧಂತಿಯನ್ನೇ ನಮ್ಮ ಮಾನಿಟರ್ ಆಚರಿಸಹೊರಟದ್ದು. ಅಂಥ ಆಚರಣೆ ನಮ್ಮ ದಾಸ್ಯದ ಸಂಕೋಲೆಗಳನ್ನು ಹೆಮ್ಮೆಯಿಂದ ಪ್ರದರ್ಶಿಸಿದಂತಾಗುತ್ತದೆ ಎಂಬುದು ನಮ್ಮಲ್ಲಿ ಯಾರಿಗೂ ಹೊಳೆಯಲಿಲ್ಲ. ಆ ದಿನ 'ದಿ ಮರ್ಚೆಂಟ್ ಆಫ್ ವೆನಿಸ್' ನಾಟಕದ ಒಂದು ದೃಶ್ಯವನ್ನು ಪ್ರದರ್ಶಿಸಿದರು. ಅದರಲ್ಲಿ ನನಗೂ ಒಂದು ಪಾತ್ರ ವಹಿಸಿಕೊಟ್ಟಿದ್ದರು. ನಾನು ಅದನ್ನು ಒಪ್ಪದಿದ್ದದ್ದಕ್ಕೆ ಕಾರಣ ಸಭಾಕಂಪವೇ ಹೊರತು 'ಈ ಹಬ್ಬವನ್ನು ಆಚರಿಸುವುದು ನಾಚಿಕೆಗೇಡು' ಎಂಬ ಭಾವನೆಯಲ್ಲ. ನನ್ನ ಯೋಚನೆಯಾಗಲಿ ಇತರರ ಯೋಚನೆಯಾಗಲಿ ಆ ದಿಕ್ಕಿನಲ್ಲಿ ಹರಿಯಲೇ ಇಲ್ಲ. ನಾವು ನಿಜವಾಗಿ ದೇಶದ್ರೋಹಿಗಳಲ್ಲ. ಅಂದಿನ ವಾತಾವರಣ ಹಾಗಿತ್ತು. ಬ್ರಿಟಿಷರ ಆಳ್ವಿಕೆ ಭಾರತಕ್ಕೆ ಸಹಜಸ್ಥಿತಿ, ಅವರು ನಮ್ಮ ಯೋಗಕ್ಷೇಮವನ್ನು ವಹಿಸಿಕೊಂಡದ್ದು ನಮ್ಮ ಪುಣ್ಯ ಎಂದು ಎಲ್ಲರೂ ಒಪ್ಪಿಕೊಂಡಂತಿತ್ತು. ಬ್ರಿಟಿಷರ ಆಳ್ವಿಕೆಯಿಂದಾದ ಪ್ರಯೋಜನಗಳನ್ನು ಕುರಿತ ಪಾಠಗಳನ್ನು ಪಠ್ಯಪುಸ್ತಕಗಳಲ್ಲಿ ಸೇರಿಸುವುದು ಸಾಮಾನ್ಯ. ರಾಜಮಹಾರಾಜರುಗಳೇ ಬ್ರಿಟಿಷರ ಸಾಮಂತರಾಗಿರುವುದರಲ್ಲಿ ಹೆಮ್ಮೆಪಟ್ಟು ಅವರು ಕೊಟ್ಟ. ಬಿರುದುಗಳನ್ನು ಮೆರಸುತ್ತಿದ್ದರು, ಕೊಡದಿದ್ದ ಬಿರುದುಗಳಿಗಾಗಿ ಲಂಚಕೊಟ್ಟು ಅಂಗಲಾಚುತ್ತಿದ್ದರು. ಇನ್ನು ನಮ್ಮಂಥ ಹುಡುಗರ ಮಾತೇನು! ಮಾನಿಟರು ನಡಸಿದ ಉತ್ಸವದಲ್ಲಿ ಸಂತೋಷದಿಂದ ಸಹಕರಿಸಿದೆವು. ಆವನು ಸ್ಕೂಲು ಬಿಟ್ಟ ಮೇಲೆ ತನ್ನ ಉಪಸರ್ಪಣೆಯನ್ನು ಮುಂದುವರಿಸಿದನೋ ಇಲ್ಲವೊ, ಅವನಿಗೆ ಶಾಕಾಯ ಲಪಣಾಯ ಏನಾದರೂ ಸಿಕ್ಕಿತೋ ಇಲ್ಲವೋ—ನನಗೆ ತಿಳಿಯದು.

ಬ್ರಿಟಿಷರ ಆಳ್ವಿಕೆ ಸಹಜಸ್ಥಿತಿಯೆಂದು ನಾವು ಒಪ್ಪಿಕೊಂಡಿದ್ದೆವು ಎನ್ನುವುದು ವಾಸ್ತವವಾಗಿ ನಿಷ್ಕೃಷ್ಟವಾದ ಮಾತಲ್ಲ. ಹಾಗೆ ಒಪ್ಪಿಕೊಂಡಿದ್ದದ್ದು ನಮ್ಮ ಮನಸ್ಸಿನ ಮೇಲ್ಪದರ ಮಾತ್ರ. ವ್ಯಾಪಾರಕ್ಕಾಗಿ ಇಲ್ಲಿಗೆ ಬಂದ ಈ ಪರದೇಶಿ ಬಿಳಿಯರು ಈಗ ನಮ್ಮ ದೇಶದಲ್ಲೇ ಸಿಂಹಾಸನಸ್ಥರಾಗಿದ್ದಾರಲ್ಲ, ನಮಗೆ ಮೂಗುದಾರ ಹಾಕಿ ಎಳೆಯುತ್ತಿದ್ದಾರಲ್ಲ, ನಾವು ಕೋಲೆ ಬಸವನಂತೆ ಅವರು ಹೇಳಿದ್ದಕ್ಕೆಲ್ಲ ಹೂಗುಟ್ಟುತ್ತಿದ್ದೇವಲ್ಲ—ಈ ಅಸಮಾಧಾನ ಮನಸ್ಸಿನ ಅಂತರಾಳದಲ್ಲಿದ್ದಿರಬೇಕು. ನಮ್ಮಂಥ ಹುಡುಗರಲ್ಲೂ ಅದು ಆಗಾಗ ಮೇಲಕ್ಕೆ ಪುಟಿದು ಬರುತ್ತಿತ್ತು. ನನ್ನ ಗುರುಗಳಾಗಿದ್ದ ಎನ್. ದೇಶಿಕಾಚಾರ್ಯರು ಈ ಭಾವನೆ ಜ್ವಲಿಸುವಂತೆ ಶಿದಿ ಒತ್ತಿ ಗಾಳಿ ಹಾಕುತ್ತಿದ್ದರೆಂಬುದನ್ನು ಬೇರೊಂದು ಕಡೆ ಕಾಣಿಸಿದ್ದೇನೆ.* ಕೀಳರಿಮೆ ಆತ್ಮಪ್ರಶಂಸೆಯಾಗಿ ಹೊರಹೊಮ್ಮುತ್ತದೆ. ನಾವು ಈ ತೊನ್ನು ಬಡಕರಿಗಿಂತ (ಇದು ದೇಶಿಕಾಚಾರ್ಯರು ಒಂದು ದಿನ ಬಳಸಿದ ಮಾತು) ಏನು ಕಡಮೆ? ರಾಜಕೀಯ ಪ್ರಪಂಚದಲ್ಲಿ ನಾವು ಅವರ ಆಶ್ರಿತರಾಗಿರಬಹುದು. ಆದರೇನು ಆ ಪ್ರಪಂಚ ನಶ್ವರ, ಕೇವಲ ಐಹಿಕ ಜೀವನವನ್ನು ಕುರಿತದ್ದು. ಶಾಶ್ವತವಾದ ಆಧ್ಯಾತ್ಮ ಪ್ರಪಂಚದಲ್ಲಿ ಅವರು ನಮಗಿಂತ ಕೀಳು—ಈ ಬಗೆಯ ವಾದ ನಮ್ಮ ಆತ್ಮಗೌರವವನ್ನು ಉಳಿಸಿಕೊಳ್ಳುವುದಕ್ಕೆ ಅತ್ಯವಶ್ಯಕ. ಈ

* ಚಿತ್ರಗಳು ಪತ್ರಗಳು—೨

ಭಾವನೆ ನಮ್ಮ ಡಿಬೇಟಿಂಗ್ ಸೊಸೈಟಿಯಲ್ಲಿ ಬೇಕಾದಷ್ಟು ಹಾರಾಡುತ್ತಿತ್ತು. ಕ್ಲಾಸಿನಲ್ಲಿ ಆಧ್ಯಾತ್ಮ ವಿಷಯಗಳು ಚರ್ಚೆಗೆ ಬರುವಂತಿಲ್ಲವಲ್ಲ! ಆದರೂ ಒಂದು ಸಂದರ್ಭದಲ್ಲಿ ಅದು ಸ್ವಲ್ಪ ಗೊಂದಲ ಎಬ್ಬಿಸಿದ ಪ್ರಸಂಗ ನೆನಪಿಗೆ ಬರುತ್ತಿದೆ.

ಬೈಬಲ್ ಪಾಠ ಹೇಳುವಾಗ ಅಧ್ಯಾಪಕರೊಬ್ಬರು (ಡಿ. ದೇವಪುತ್ರ?) ನಮ್ಮ ಮತದ ವಿಷಯವಾಗಿ ಏನೋ ತಿರಸ್ಕಾರದ ಮಾತಾಡಿದರು ಎಂದು ವಿದ್ಯಾರ್ಥಿಗಳು ಭಾವಿಸಿದರು. ಅದು ತಪ್ಪು ಭಾವನೆ ಇದ್ದಿರಬಹುದು, ಬಹುಶಃ ನಮ್ಮಲ್ಲಿ ಚಾಲತಿಯಲ್ಲಿರುವ ಬಹು ದೇವತೆಗಳ ಪೂಜೆಯನ್ನು ಕುರಿತು—ವಸ್ತುಸ್ಥಿತಿಯನ್ನು ನಿರೂಪಿಸುವ ರೀತಿಯಲ್ಲಿ—ಅವರು ಏನೋ ಹೇಳಿದರು. ಅದು ಹುಡುಗರನ್ನೆಲ್ಲ ರೊಚ್ಚಿಗೆಬ್ಬಿಸಿತು. ಬಿಸಿಬಿಸಿಯಾದ ಬಿರುಸುಮಾತುಗಳು ನಡೆದವು. ಕೊನೆಗೆ ದೇವಪುತ್ರರು "ನಿಮ್ಮ ಮತಕ್ಕೆ ಅವಮಾನಮಾಡಬೇಕೆಂಬ ಉದ್ದೇಶ ನನ್ನಲ್ಲಿ ಲೇಶವೂ ಇರಲಿಲ್ಲ" ಎಂದು ಸಾರಿಸಾರಿ ಹೇಳಿದ ಮೇಲೆ ನಾವೆಲ್ಲ ಸುಮ್ಮನಾದೆವು.

ಅವತ್ತಿನ ಗಲಭೆಯಲ್ಲಿ ಮುಖ್ಯ ಪಾತ್ರ ವಹಿಸಿದವರು ನನ್ನ ಸಹಪಾಠಿಗಳಾಗಿದ್ದ ವೆಂಕೂಬಾಳಾಜಿರಾಯರು. ಅವರು ಜಗಳಗಂಟರೇನಲ್ಲ; ಆದರೆ ಸಂಪ್ರದಾಯಸ್ಥ ಮನೆತನಕ್ಕೆ ಸಹಜವಾದ ದೈವಶ್ರದ್ಧೆ ಧರ್ಮಶ್ರದ್ಧೆಗಳನ್ನುಳ್ಳವರು; ಬಲ್ಲವರಿಂದ ಕೇಳಿ, ಬಹುಶಃ ತಾವು ಓದಿ ಮತದ ವಿಷಯ ಸ್ವಲ್ಪ ತಿಳಿದುಕೊಂಡಿದ್ದಿರಬೇಕು. ನಮ್ಮ ಡಿಬೇಟಿಂಗ್ ಸೊಸೈಟಿಯಲ್ಲಿ ಅವರು ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಚರ್ಚೆಗಾಗಿ ಅವರೇ ಸೂಚಿಸಿದ ಎರಡು ಠರಾವುಗಳು ನೆನಪಿನಲ್ಲಿ ನಿಂತಿವೆ. ಒಂದು: ಈ ಸಭೆಯ ಅಭಿಪ್ರಾಯದಲ್ಲಿ ಪ್ರಾಚೀನ ಭಾರತ ಆಧುನಿಕ ಭಾರತಕ್ಕಿಂತ ಉತ್ತಮವಾಗಿತ್ತು." ಕಾರ್ಯದರ್ಶಿಯಾಗಿದ್ದ ನಾನು ಈ ಠರಾವನ್ನು ಮೆಚ್ಚಿಕೊಂಡು ಅದರ ಚರ್ಚೆಯ ದಿನ 'ಸ್ಪೀಕರ್' ಆಗಿರಲು ಬಿ. ಎಂ. ಶ್ರೀಕಂಠಯ್ಯನವರನ್ನು ಬೇಡಿಕೊಳ್ಳಲು ಹೋಗಿದ್ದೆ. ಅದರ ಪ್ರಸ್ತಾಪ ಬೇರೊಂದುಕಡೆ ಬಂದಿದೆ.* ವೆಂಕೂಬಾಳಾಜಿರಾಯರ ಮತ್ತು ನನ್ನ ಅಭಿಪ್ರಾಯದಲ್ಲಿ ಪ್ರಾಚೀನ ಭಾರತ ಎಲ್ಲ ಕಾಲದ ಎಲ್ಲ ದೇಶಗಳಿಗಿಂತ—ಇಂದಿನ ಭಾರತಕ್ಕಿಂತ ಮಾತ್ರವಲ್ಲ—ಉತ್ತಮ. ಅದು ಚರ್ಚೆಗೆ ಬರತಕ್ಕ ವಿಷಯವೇ ಅಲ್ಲ, ನ್ಯಾಯವಾಗಿ ನೋಡಿದರೆ; ಸ್ವತಸ್ಸಿದ್ಧವಾದ ಮಾತು!

ಚರ್ಚೆಯ ದಿನ ನಾವಿಬ್ಬರೂ ಠರಾವಿನ ಪರವಾಗಿ ಮಾತಾಡಿದೆವು. ರಾಯರ ಭಾಷಣದ ಮುಂದೆ ನನ್ನದು ತೀರ ನಿಸ್ತೇಜ ಎನ್ನಿಸಿತು. ಅವರದ್ದು ಉಜ್ವಲವಾದ ರೆಟರಿಕಲ್ (rhetorical) ಶೈಲಿ; ಕೈ ಬೀಸಿ ಎದುರಾಳಿಯ ಮುಖಕ್ಕೊಂದು ಮುಷ್ಟಿಪೆಟ್ಟು ಕೊಟ್ಟು ಅವನನ್ನು 'ಸತ್ತನ್, ಮತ್ತೆ ಪುಟ್ಟನ್' ಎನ್ನುವ ಸ್ಥಿತಿಗೆ ತರಬೇಕು—ಅಂಥ ಜೋರಿನ ಶೈಲಿ. ಅವರು ವಿವೇಕಾನಂದರಂಥ ಪ್ರಸಿದ್ಧ ಲೇಖಕರ ಮಾತನ್ನು ಉದಾಹರಿಸಿ ತಮ್ಮ ಮಾತಿಗೆ 'ಮಂತ್ರಬಲ' ವನ್ನೂ ಕೊಟ್ಟರು. ಸ್ವಲ್ಪ ಕಾಲದ ಹಿಂದೆ ಹರಬಿಲಾಸ್ ಶಾರದಾ ಎಂಬವರು 'ಹಿಂದೂ ಸುಪೀರಿಯಾರಿಟಿ' (Hindu Superiority) ಎಂಬ ಪುಸ್ತಕವನ್ನು ಪ್ರಕಟಿಸಿದ್ದರು. ವೆಂಕೂಬಾಳಾಜಿರಾಯರು ಅದರಿಂದ ಅನೇಕ ವಾಕ್ಯಗಳನ್ನು ಉದಾಹರಿಸಿದರು. ಠರಾವು ಪ್ರಚಂಡ

---

* ಚಿತ್ರಗಳು ಪತ್ರಗಳು—೭

ಬಹುಮತದಿಂದ ಪಾಸಾಯಿತು. "ನಾವು ನಾಗರಿಕತೆಯ ಶಿಖರದಲ್ಲಿ ಝಂಡಾ ಹಾಕಿಕೊಂಡು ಮೆರೆಯುತ್ತಿದ್ದ ಕಾಲದಲ್ಲಿ, ವೇದ ಉಪನಿಷತ್ತುಗಳನ್ನು ರಚಿಸಿ ಮುಗಿಸಿದ್ದ ಕಾಲದಲ್ಲಿ, ಈ ಬ್ರಿಟಿಷರು ಕಾಡುಕಪಿಗಳಾಗಿ ಮರದ ಕೊಂಬೆಯ ಮೇಲೆ ಕುಳಿತು 'ಚುಟರ್ ಚುಪರ್' ಎನ್ನುತ್ತಿದ್ದರು" ಎಂದು ನಾವು ಕೆಲವು ವೇಳೆ ಹೇಳುವುದುಂಟಷ್ಟೆ. ಅಂಥ ಮಾತು ಅಂದಿನ ವಾತಾವರಣದ ಸಾರಾಂಶ ಎನ್ನಬಹುದು! ಆ ಕಾಡುಕಪಿಗಳ ಸಂತಾನ ನಮ್ಮ ಮೇಲೆ ಹೊರಿಸಿದ ನೊಗ ಅಂಥ ಮಾತುಗಳಿಂದಾಗಿ ಸಹ್ಯವಾಯಿತು. ನಮ್ಮ ಮನಸ್ಸಿನ ಅಂತರಾಳದಲ್ಲಿ ಕುದಿಯುತ್ತಿದ್ದ ಸೋಲಿನ ಮನೋಭಾವಕ್ಕೆ ಅಂಥ ವೇದನಾಂತಕವೊಂದು ಬೇಕಾಗಿತ್ತು!

ವೆಂಕೂಬಾಳಾಜಿರಾಯರ ಸೂಚಿಸಿದ ಎರಡನೆಯ ಠರಾವು: 'ಸಿರಿವಂತಿಕೆಗಿಂತ ಬಡತನ ಉತ್ತಮ' (Poverty is better than wealth). ಅದರ ಚರ್ಚೆಗೆ ಸ್ಪೀಕರ್ ಆಗಿರಲು ಅಡ್ವೊಕೇಟ್ ಎ. ರಾಮಣ್ಣನವರನ್ನು ಕರೆತಂದೆವು. ಅವರನ್ನು 'ಭಿಕ್ಷಾನ್ನದ ರಾಮಣ್ಣ' ಎಂದೂ ಕರೆಯುತ್ತಿದ್ದುದುಂಟು. ಅವರ ಬಂಧುಗಳೊಬ್ಬರು ಮೈಸೂರಿನ ಮುನಿಸಿಪಲ್ ಕೌನ್ಸಿಲರಾಗಿದ್ದರು. ಅವರು ವಿಸಿಟಿಂಗ್ ಕಾರ್ಡಿನಲ್ಲಿ (ಭೇಟಿ ಚೀಟಿಯಲ್ಲಿ) ತಮ್ಮ ಹೆಸರಿನ ಮುಂದೆ ಕಾಣಿಸಿದ್ದ ಮೊದಲಕ್ಷರಗಳು (initials) ಹೀಗಿದ್ದುವಂತೆ: 'ಅ. ರಾ. ಬ. ಮು. ಕೌ. ಇಂಥವರು'—ಅ (ಅಡ್ವೊಕೇಟ್); ರಾ (ರಾಮಣ್ಣನವರ); ಬ (ಬಂಧು); ಮು (ಮುನಿಸಿಪಲ್); ಕೌ (ಕೌನ್ಸಿಲರ್)! ಇದು ನಾನು ಸ್ವತಃ ಕಂಡದ್ದಲ್ಲ. ಕಟ್ಟು ಕಥೆಯಲ್ಲ, ಸತ್ಯ, ಎಂದು ಜನ ಹೇಳಿದ್ದನ್ನು ಕೇಳಿದೆ. ರಾಮಣ್ಣನವರ ಪ್ರಸಿದ್ಧಿ ಯಾವ ಮಟ್ಟದ್ದು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅವರನ್ನು ಕರೆತಂದದ್ದು ನಮಗೆ ಹೆಮ್ಮೆಯ ವಿಷಯ.

ರಾಮಣ್ಣನವರ ವಾಗ್ಝರಿಯಿಂದಾಗಿ ನಾವೆಲ್ಲ ದಂಗುಬಡಿದು ಬಿದ್ದೆವು. ಅವರ ವಾದದ ಸಾರಾಂಶವನ್ನು ಹೀಗೆ ಸಂಗ್ರಹಿಸಬಹುದು:

೧. 'ಬಡತನವೇ ಪ್ರಗತಿಗೆ ಮೂಲ. ಸಿರಿವಂತಿಕೆ ಬಲು ಕೆಟ್ಟದ್ದು.'

೨. 'ನಾನು ಮೊದಲು ಬಡವನಾಗಿದ್ದದ್ದರಿಂದಲೇ ಸಿರಿವಂತನಾದೆ. ಆದ್ದರಿಂದ ಬಡತನ ಒಳ್ಳೆಯದು.'

ಅವರ ತರ್ಕ ಸ್ವಲ್ಪ ಪವನ ತಪ್ಪಿತು. (ಒಳ್ಳೆಯದಾದ) ಬಡತನ ನಮ್ಮನ್ನು (ಕೆಟ್ಟದಾದ) ಸಿರಿವಂತಿಕೆಗೆ ಒಯ್ಯುತ್ತದೆ! ಒಳ್ಳೆಯ ಸ್ಥಿತಿಯಿಂದ ಕೆಟ್ಟಸ್ಥಿತಿಗೆ ಒಯ್ಯುವುದಾದರೆ ಬಡತನ ಕೆಟ್ಟದ್ದೇ ಆಗಬೇಕಲ್ಲ! ಅವರ ವಾದದಲ್ಲಿದ್ದ ವಿರೋಧಾಭಾಸ ಅವರಿಗಾಗಲಿ ನಮಗಾಗಲಿ ಹೊಳೆಯಲೇ ಇಲ್ಲ. ನಾವೆಲ್ಲ ಚಪ್ಪಾಳೆ ತಟ್ಟಿದ್ದೂ ತಟ್ಟಿದ್ದೇ ಠರಾವು ಪಾಸಾದದ್ದು ಬಹುಮತದಿಂದಲ್ಲ, ಒಮ್ಮತದಿಂದ—ಮುಖ್ಯ ವಿರೋಧಕ ಮತ್ತು ಅವನ ಸಹಾಯಕ ವಿನಾ. ಚರ್ಚಿಲ್ ಒಮ್ಮೆ ಗಾಂಧಿಯವರನ್ನು 'professional povertician' (ಬಡತನವೇ ವೃತ್ತಿಯಾಗುಳ್ಳವನು) ಎಂದು ಕರೆದ. ಆ ಮಾತು ಗಾಂಧಿಯ ವಿಷಯದಲ್ಲಿ ಉಚಿತವಲ್ಲ. ಆದರೆ ನಮ್ಮ ಸಭೆಯಲ್ಲಿದ್ದವರೆಲ್ಲರ ವಿಷಯದಲ್ಲೂ ಉಚಿತ ಎನ್ನುವಂತಿತ್ತು. ನಮ್ಮ ರಾಜಕೀಯ ದಾಸ್ಯವನ್ನು ಸಹ್ಯವಾಗಿಸುವುದಕ್ಕೆ ಹೇಗೆ ಪುರಾತನ ಭಾರತದ ಹಿರಿಮೆಯ ಕಲ್ಪನೆ ಅವಶ್ಯಕವಾಗಿತ್ತೋ ಹಾಗೇ ನಮಗಿದ್ದ

ಬಡತನವನ್ನು ಸಹ್ಯವಾಗಿಸುವುದಕ್ಕೆ ಅಂದಿನ ವಾದ ಅವಶ್ಯಕವಾಗಿತ್ತು. ಅದೂ ವೇದನಾಂತಕವೇ. ಬಡತನ ಎನ್ನುವುದು ದೊಡ್ಡ ಸಾಮಾಜಿಕ ಅಪರಾಧ; ಪಂಚ ಮಹಾಪಾತಕಗಳಲ್ಲಿ ಮುಖ್ಯವಾದದ್ದು; ಅದೇ ಇತರ ಅಪರಾಧಗಳ ಉಗಮಸ್ಥಾನ ವಾಗಬಹುದು, ಆಗಿಯೇ ಇದೆ. ಇವೆಲ್ಲ ನನಗೆ ಹೊಳೆದದ್ದು ಕೆಲವು ವರ್ಷಗಳು ಕಳೆದ ಮೇಲೆ.

ನಮ್ಮ ತರಗತಿಯಲ್ಲಿ ವೆಂಕೋಬಾಚಾರ್ಯರು ಎಬ್ಬಿಸಿದ ಬಿರುಗಾಳಿಯೂ ಡಿಬೇಟಿಂಗ್ ಸೊಸೈಟಿಯ ಚರ್ಚಾವಿಷಯಗಳೂ ಆಗಿನ ವಾತಾವರಣದಲ್ಲಿದ್ದ ಒಂದು ವಿಶೇಷಾಂಶಕ್ಕೆ ಸಾಕ್ಷಿ: ರಾಜಕೀಯ ದಾಸ್ಯ ಇಹ ಜೀವನಕ್ಕೆ ಮಾತ್ರ ಸಂಬಂಧಪಟ್ಟದ್ದು (ಅಥವಾ ನಾವು ಹಾಗೆ ಭಾವಿಸಿದ್ದೆವು!) ಮತದ ವಿಷಯ ಪರಕ್ಕೆ ಸಂಬಂಧಪಟ್ಟದ್ದು (ಅಥವಾ ನಾವು ಹಾಗೆ ಭಾವಿಸಿದ್ದೆವು!) ನಾವು ಇಹಲೋಕದ ಅನಿಷ್ಟವನ್ನು ಹೇಗೋ ಸಹಿಸಿಕೊಂಡೆವು; ಮತಧರ್ಮವನ್ನು ಕುರಿತಂತೆ ಸಣ್ಣ ಮಾತು ಬಂದೊಡನೆ ಉರಿದೆದ್ದೆವು. ಇಹಕ್ಕಿಂತ ಪರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟೆವು. ಇದು ಭಾರತೀಯರ ವಿಶಿಷ್ಟಗುಣ ಎಂದು ನಾನು ಸ್ವಲ್ಪಕಾಲ ಭಾವಿಸಿದ್ದೆ. ವಾಸ್ತವವಾಗಿ ಅದು ಇತರ ದೇಶಗಳ, ಇತರ ಮತಗಳಿಗೆ ಸೇರಿದ ಜನರಲ್ಲೂ ಕಾಣಬರುತ್ತದೆ. ಮತಕ್ಕಾಗಿ ಹೋರಾಡಿದ್ದನ್ನು ನಾನು ಹಳಿಯುತ್ತಿಲ್ಲ. "ನಾವು ಯಾವುದನ್ನು ದೊಡ್ಡ ಮೌಲ್ಯ, ಪೂಜ್ಯ, ಶ್ರೇಷ್ಠ ಎಂದು ನಂಬಿದ್ದೇವೆಯೋ ಅದಕ್ಕಾಗಿ ಹೋರಾಡುವ ಪ್ರವೃತ್ತಿ ನಮ್ಮಲ್ಲಿ ಇರಬೇಕಾದದ್ದೇ; ಅದು ಆತ್ಮಗೌರವದ ಲಕ್ಷಣ" ಎಂದು ವಾದಿಸುವುದು ಸಾಧ್ಯ. ಆದರೆ "ಇದು ಇಹಕ್ಕೆ ಅದು ಪರಕ್ಕೆ ಸಂಬಂಧಿಸಿದ್ದು; ಇದು ಇಹದ ಕಂಪಾರ್ಟ್‌ಮೆಂಟು, ಅದು ಪರದ, ಕಂಪಾರ್ಟ್‌ಮೆಂಟು" ಎಂದು ಗೆರೆ ಕುಯ್ದು ಹಾಗೆ ಬೇರ್ಪಡಿಸುವುದು ಸರಿಯೆ, ಸಮಾಜಕ್ಕೆ ಕ್ಷೇಮಕರವೆ ಎಂಬುದು ಪರಿಶೀಲಿಸಬೇಕಾದ ಪ್ರಶ್ನೆ. 'ಮತ ಧರ್ಮಕ್ಕಾಗಿ ಹೋರಾಡಬೇಕು' ಎಂಬ ಘೋಷಣೆಯ ವ್ಯಾಪ್ತಿಯೆಷ್ಟು, ಅದರಿಂದ ಸಮಾಜದ ಮೇಲೆ ಆಗಬಹುದಾದ ಪರಿಣಾಮಗಳೇನು ಎಂಬುದೂ ವಿಚಾರಾರ್ಹವಾದ ವಿಷಯ. ಅದು ಬೇರೊಂದು ಕಡೆ ಪರಿಶೀಲನೆಗೆ ಬರಲಿದೆ. ನಾನು ಮತಧರ್ಮಕ್ಕೆ ಅಷ್ಟೊಂದು ಪ್ರಾಮುಖ್ಯ ಕೊಡಲಾರೆ ಎಂದು ಮಾತ್ರ ಇಲ್ಲಿ ಸೂಚಿಸುತ್ತೇನೆ.

ರಾಜಕೀಯ ದಾಸ್ಯವನ್ನು ಎದುರಿಸುವುದಕ್ಕೆ ಬೇಕಾದ ಜನಜಾಗ್ರತಿ ಆಗ ಇನ್ನೂ ಬಂದಿರಲಿಲ್ಲ. ಬ್ರಿಟಿಷರ ಆಳ್ವಿಕೆಯೇ ಮುಂದುವರಿದರೆ ನಾವು ಎಷ್ಟು ನಿರ್ವೀರ್ಯರಾಗು ತ್ತೇವೆ ಎಂಬುದರ ಅರಿವು ಸಾವಕಾಶವಾಗಿ ಬಂತು. ಅಲ್ಲದೆ, ಬ್ರಿಟಿಷರದ್ದು ಬಹುಮಟ್ಟಿಗೆ 'ಪೋಲೀಸ್‌ರಾಜ್ಯ' ಆದರೂ ಅದರಿಂದ ನಮಗೆ ಬಹಳ ಪ್ರಯೋಜನವೂ ಆಯಿತೆಂಬು ದನ್ನು ಅಲ್ಲಗಳೆಯುವಂತಿಲ್ಲ. ಅವರು ತಮ್ಮ ಅಧಿಕಾರದ ಭದ್ರತೆಯ ದೃಷ್ಟಿಯಿಂದ ಒಬ್ಬರನ್ನು ಮತ್ತೊಬ್ಬರ ಮೇಲೆ ಎತ್ತಿಕಟ್ಟಿದರು; ತಾವು ದೇವಲೋಕದ ಜನ ಎಂಬಂತೆ ನಡೆದುಕೊಂಡರು; ಭಾರತದ ಹೊನ್ನನ್ನು ಇಂಗ್ಲೆಂಡಿಗೆ ಹರಿಸಿದರು—ಇವೆಲ್ಲ ನಿಜ. ಆದರೆ ಅವರಲ್ಲಿ ಕೆಲವರಾದರೂ ಭಾರತಕ್ಕೆ ಒಳ್ಳೆಯದಾಗಲೆಂಬ ಉದ್ದೇಶದಿಂದ ಕೆಲಸಮಾಡಿದರು.

ಮುಂದುವರಿಯುವುದು

ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ, ಮೈಸೂರು

ರಾಷ್ಟ್ರದಲ್ಲೇ ಸ್ಥಾಪಿತವಾದ ಪ್ರಥಮ ವಿಶ್ವಸ್ಥ ಮಂಡಳಿ—1903

ಭರತಭೂಮಿಯ ಮೈಸೂರು ನಗರವನ್ನು ಗಂಧದ ಗುಡಿ, ವೀಣೆಯ ಬೆಡಗು, ಸೌಂದರ್ಯದ ಸಂಸ್ಕೃತಿಯ ಸುಂದರ ನಗರವೆಂದು ಹಾಡಿ ಹೊಗಳಿದ್ದಾರೆ ನಮ್ಮ ಕವಿಗಳು ಮತ್ತು ಅಸಂಖ್ಯಾತ ಪ್ರವಾಸಿಗರು.

ಈ ಹೊಗಳಿಕೆಯನ್ನು ಉಳಿಸಿ ಬೆಳೆಸಿಕೊಂಡು ಬರುವುದು ವಿಶ್ವಸ್ಥ ಮಂಡಳಿಗೆ ಗೌರವ ವಲ್ಲವೇ? ಅದಕ್ಕಾಗಿಯೇ ಮಂಡಳಿಯ ಬೃಹತ್ ಯೋಜನೆಗಳು ಈಗ ಜಾರಿ ಯಲ್ಲಿವೆ.

ಕನಿಷ್ಠ 5 ವರ್ಷ ಮೈಸೂರಿನಲ್ಲಿ ವಾಸ ಮಾಡುತ್ತಿದ್ದು, ವಸತಿ, ನಿವೇಶನ ಇಲ್ಲದವರಿಗೆ:

೧) ಸ್ವಂತ ಮನೆ ಹೊಂದುವ ಯೋಜನೆ. ೨) ಬ್ಯಾಂಕುಗಳ ಧನಸಹಾಯದಿಂದ ಮನೆ ಕಟ್ಟಿಕೊಡುವ ಯೋಜನೆ. ೩) "ಆಶಾ ಮಂದಿರ" ವಸತಿ ಯೋಜನೆ.

೧೯೮೭ ಅಂತರರಾಷ್ಟ್ರೀಯ ವಸತಿ ವರ್ಷವಾಗಿದ್ದು, ವಸತಿ ರಹಿತರಾಗಿರುವವರಿಗೆ ವಸತಿ ಸೌಲಭ್ಯ ಒದಗಿಸಲು "ಆಶಾ ಮಂದಿರ" ಬೃಹತ್ ಸಮೂಹ ವಸತಿ ಯೋಜನೆ ಯನ್ನು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯು ರೂಪಿಸಿದೆ. ಇದಕ್ಕಾಗಿ ದಟ್ಟಗಳ್ಳಿ, ಶ್ರೀರಾಂಪುರ, ಬೋಗಾದಿ, ಸಾತಗಳ್ಳಿ, ದೇವನೂರು, ಕ್ಯಾತಮಾರನಹಳ್ಳಿಯಲ್ಲಿ ಜಮೀನುಗಳನ್ನು ಈಗಾಗಲೇ ಸ್ವಾಧೀನಪಡಿಸಿಕೊಂಡು ಬಡಾವಣೆ ನಿರ್ಮಾಣ ಕೈಗೊಳ್ಳಲಾಗಿದೆ.

ಇವೇ ಅಲ್ಲದೇ ಮೈಸೂರು ನಗರದ ಸೌಂದರ್ಯವನ್ನು ಕಾಪಾಡುವ ಸಲುವಾಗಿ ವಿಶ್ವಸ್ಥ ಮಂಡಳಿಯು ಈ ಕೆಳಗಿನಂತೆ ಕಾರ್ಯಕ್ರಮಗಳನ್ನು ರೂಪಿಸಿದೆ.

೧) ನಿವೇಶನ: ವಸತಿಗಳಿಗಾಗಿ ನಗರದ ಸುತ್ತಮುತ್ತಲೂ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿದೆ. ೨) ನಗರದ ಮುಖ್ಯ ರಸ್ತೆಗಳನ್ನು ನೇರಗೊಳಿಸುವುದು ಮತ್ತು ವಿಸ್ತಾರಗೊಳಿಸುವುದು. ೩) ಉದ್ಯಾನವನಗಳ ನಿರ್ಮಾಣ, ಶಾಲೆ, ಕ್ರೀಡೆ ಮತ್ತು ಕಲೆಗಾಗಿ ಎಲ್ಲಾ ಬಡಾವಣೆಗಳಲ್ಲಿ ಸ್ಥಳ ಕಾದಿರಿಸುವುದು. ೪) ವಾಣಿಜ್ಯ ಸಂಕೀರ್ಣ ನಿರ್ಮಿಸುವುದು. ೫) ನಗರದ ಬೃಹತ್ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ೩ ಕೋಟಿ ರೂಪಾಯಿ ವೆಚ್ಚದಲ್ಲಿ ಬೃಹತ್ ಜಲಸಂಗ್ರಹಾಗಾರ ಹಾಗೂ ಕೊಳವೆಗಳಿಗೆ ಸರ್ಕಾರದ ಅಂಗೀಕಾರವನ್ನು ಪಡೆದಿದೆ.

ಇದೇ ಅಲ್ಲದೇ ಇನ್ನೂ ಹಲವಾರು ಯೋಜನೆಗಳನ್ನು ವಿಶ್ವಸ್ಥ ಮಂಡಳಿಯು ರೂಪಿಸಿದೆ.

(ಡಿ. ಮಾದೇಗೌಡ)
ಅಧ್ಯಕ್ಷರು
ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ, ಮೈಸೂರು

ಮಾತಿಗಿಂತ, ಕೃತಿ ಮೇಲು;

ಕನ್ನಡ ರಾಜ್ಯೋತ್ಸವ ದಿನ; ಕನ್ನಡ ಮಾತನಾಡುವ ಜನರೆಲ್ಲ ಒಂದುಗೂಡಿ, ಒಂದೇ ಆಡಳಿತಕ್ಕೆ ಒಳಪಟ್ಟ ಅಪೂರ್ವ ದಿನ. ಈ ಮಂಗಳ ದಿನದ ಮೂವತ್ತೊಂದನೆಯ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದೇವೆ. ಈ ಮೂರು ದಶಕಗಳಲ್ಲಿ ಕನ್ನಡ ನಾಡು, ಕನ್ನಡ ನುಡಿ, ಸಂಸ್ಕೃತಿ, ಸಾಹಿತ್ಯ, ಕಲೆಗಳ ಸಂವರ್ಧನೆಗಾಗಿ ಸರ್ಕಾರ ಅವಿರತವಾಗಿ ಶ್ರಮಿಸಿದೆ. ಕನ್ನಡ ಜನತೆಯ ಕ್ಷೇಮಕ್ಕಾಗಿ ಹಲವು ಹತ್ತು ಬಗೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸುತ್ತಿದೆ. ಈ ಎಲ್ಲಾ ಕಾರ್ಯಗಳ ಸಿಂಹಾವಲೋಕನಕ್ಕೆ ರಾಜ್ಯೋತ್ಸವ ದಿನ; ಪ್ರಶಸ್ತ ದಿನ.

ಈ ಎಲ್ಲ ಸಾಧನೆಗಳಿಗೆ ಜನತೆಯೇ ಕಾರಣ ಎಂಬುದು ಸರ್ಕಾರದ ದೃಢವಾದ ನಂಬಿಕೆ. ಜನತೆಯ ಕಲ್ಯಾಣದ ಬಗ್ಗೆ ಕಳಕಳಿಯುಳ್ಳ ಕರ್ನಾಟಕ ಸರ್ಕಾರ ಈ ಆನಂದದ ಸಂದರ್ಭದಲ್ಲಿ ಎಲ್ಲ ಕನ್ನಡಿಗರಿಗೂ ತನ್ನ ಶುಭಾಶಯಗಳನ್ನು ಕೋರುತ್ತದೆ. ಒಟ್ಟು ಸಮಾಜದ ಅಗತ್ಯಗಳಿಗೆ ಸಂಬಂಧಿಸಿದಂತೆ ಧೋರಣೆಗಳನ್ನು ರೂಪಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಬದ್ಧವಾಗಿದೆ ಎಂಬ ಅಂಶವನ್ನು ಪುನರ್‌ದೃಢೀಕರಿಸುತ್ತದೆ.

ಜನತೆಗೆ ಅಧಿಕಾರ: ಜಿಲ್ಲಾ ಪರಿಷತ್ತುಗಳನ್ನು ರಚಿಸುವುದರ ಮೂಲಕ ಮಹಾತ್ಮ ಗಾಂಧೀಜಿಯವರ ಕನಸು ನನಸಾಗಿದೆ. "ಜನತೆಯ ಕೈಗೆ ಅಧಿಕಾರ"—ಇದು ಈಗ ಕಾರ್ಯರೂಪಕ್ಕೆ ಬಂದಿದೆ. ಮತ ಚಲಾಯಿಸಲು ವಯೋಮಿತಿಯನ್ನು ಇಳಿಸುವುದು ಮಹಿಳೆಯರಿಗೆ ಮತ್ತು ಪರಿಶಿಷ್ಟ ಜಾತಿ-ಜನಾಂಗದವರಿಗೆ ಮೀಸಲಾತಿ ಮುಂತಾದ ಅನೇಕ ಚುನಾವಣಾ ಸುಧಾರಣೆಗಳು, ಆಡಳಿತ ವಿಕೇಂದ್ರಿಕರಣದ ಆಶಯವನ್ನು ನಿಜವಾಗಿ ಅರ್ಥಪೂರ್ಣವಾಗಿಸಿ ಪ್ರಜಾಪ್ರಭುತ್ವ ತತ್ವವನ್ನು ಸಾರ್ಥಕಗೊಳಿಸಿದೆ.

ಸ್ಥಳೀಯ ಸಂಸ್ಥೆಗಳ ಚುನಾವಣೆ, ಪ್ರಜಾಪ್ರಭುತ್ವ ಪದ್ಧತಿಯನ್ನು ಪುನರ್ ಚೈತನ್ಯಗೊಳಿಸಿದೆ. 'ಲೋಕಾಯುಕ್ತ ರಚನೆ' ಸಾರ್ವಜನಿಕ ಬದುಕಿನಲ್ಲಿ ಪ್ರಾಮಾಣಿಕತೆಯನ್ನು ತರುವ ದಿಶೆಯಲ್ಲಿ ಒಂದು ವಿನೂತನ ಪ್ರಯತ್ನ. ಆಡಳಿತದ ಎಲ್ಲಾ ಹಂತಗಳಲ್ಲೂ ಕನ್ನಡ ಬಳಕೆಯಿಂದ ಆಡಳಿತವನ್ನು ಜನರ ಸಮೀಪಕ್ಕೆ ತರಲಾಗಿದೆ. ಕಲೆ ಸಂಸ್ಕೃತಿ ಮತ್ತು ಕ್ರೀಡಾ ಕ್ಷೇತ್ರಗಳಲ್ಲಿ ಆಗಿರುವ ಪ್ರಗತಿ ಕಣ್ಣಿಗೆ ಕಾಣುವಂಥದು.

ಭೀಕರ ಬರಗಾಲ: ಕಳೆದ ಐದು ವರ್ಷಗಳಿಂದ ರಾಜ್ಯದಲ್ಲಿ ಹಿಂದೆಂದೂ ಕಂಡರಿಯುವ ಭೀಕರ ಬರಗಾಲ. ಬರಪೀಡಿತರಿಗೆ ಸಕಾಲಿಕ ನೆರವು ನೀಡಲು ಸರ್ಕಾರ ಲಭ್ಯವಿರುವ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಬಳಸಿದೆ. ಬರಪರಿಹಾರ ಕಾರ್ಯಗಳು ಸಮಸ್ಯೆಯನ್ನು ಪರಿಹರಿಸುವುದರ ಜೊತೆಗೆ ಶಾಶ್ವತ ಸಾರ್ವಜನಿಕ ಆಸ್ತಿ ನಿರ್ಮಾಣಕ್ಕೂ ನೆರವಾಗಿದೆ. ಇಂಥ ವಿಷಮ ಪರಿಸ್ಥಿತಿಯಲ್ಲೂ ಸರ್ಕಾರ ಪ್ರಗತಿಪರ ಕಾರ್ಯಕ್ರಮಗಳನ್ನು ಕಡೆಗಣಿಸಿಲ್ಲ.

ನೀರಿಗಾಗಿ ಶೋಧ: 1983 ಮತ್ತು 1987ರ ಅವಧಿಯಲ್ಲಿ 1104 ಹಳ್ಳಿಗಳಿಗೆ ನಲ್ಲಿಗಳ ಮೂಲಕ ನೀರನ್ನು ಒದಗಿಸಲಾಗಿದೆ ಮತ್ತು 47391 ಕೊಳವೆ ಬಾವಿಗಳನ್ನು ತೋಡಲಾಗಿದೆ.

ಕರ್ನಾಟಕ ಸರ್ಕಾರದ ಸಾಧನೆ

ಹಸಿರು ಕಾರ್ಡು ಯೋಜನೆ: ಬಡವರು ಆಹಾರ ಧಾನ್ಯ ಮತ್ತು ಬಟ್ಟೆಗಳನ್ನು ರಿಯಾಯಿತಿ ದರಗಳಲ್ಲಿ ಕೊಳ್ಳಲು, 'ಹಸಿರು ಕಾರ್ಡು' ಒಂದು ವರದಾನ. 30 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಇದರ ಪ್ರಯೋಜನ.

ಅಗತ್ಯವುಳ್ಳವರಿಗೆ ನೆರವು: ಆಸರೆಯಿಲ್ಲದ ಅನಾಥ ವಿಧವೆಯವರಿಗೆ 'ವಿಧವಾ ಮಾಸಾಶನ', 3,64,000 ಫಲಾನುಭವಿಗಳಿಗೆ ತಿಂಗಳಿಗೆ 50 ರೂ. ಗಳ ಮಾಸಿಕ ನೆರವು; ಕೃಷಿ ಕಾರ್ಮಿಕ ಗರ್ಭಿಣಿ ಸ್ತ್ರೀಯರಿಗೆ 3 ತಿಂಗಳ ಅವಧಿಗೆ, ಮಾಸಿಕ 100 ರೂ.ಗಳ ಹೆರಿಗೆ ಭತ್ಯೆ. ಬಡವರು ಕಡಿಮೆ ಖರ್ಚಿನಲ್ಲಿ ಮದುವೆ ಮಾಡಲು ಅನುಕೂಲವಾಗುವ 'ತಾಳೀಭಾಗ್ಯ' ಯೋಜನೆಯಿಂದ ಸಾವಿರಾರು ಬಡ ಕುಟುಂಬ ಗಳಿಗೆ ಸಾಲದ ಹೊರೆಯಿಂದ ಬಿಡುಗಡೆ.

ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರ: ಬಡವರ ಮಕ್ಕಳಿಗೆ ಶಿಕ್ಷಣ ಸೌಲಭ್ಯ ವಿಸ್ತರಣೆಯ ದಿಸೆಯಲ್ಲಿ ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರ ವಿತರಣೆ ಕ್ರಾಂತಿಕಾರೀ ಹೆಜ್ಜೆ. ಇದರಿಂದ ರಾಜ್ಯದ 70 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಮತ್ತು 165 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಉಚಿತ ಪಠ್ಯಪುಸ್ತಕ ಲಭ್ಯ.

ಒಣ ಬೇಸಾಯಾಭಿವೃದ್ಧಿ: ಮಳೆಯನ್ನು ಆಧರಿಸಿದ ರಾಜ್ಯದ ಸುಮಾರು ಶೇಕಡಾ 80 ರಷ್ಟು ರೈತರಿಗೆ ನೆರವಾಗುವುದು, ಈ ಯೋಜನೆಯ ಉದ್ದೇಶ. ನೀರಿನ ಸಂಪರ್ಕ ಬಳಕೆಯ ವ್ಯವಸ್ಥೆ, ಕಡಿಮೆ ವೆಚ್ಚ, ಅಧಿಕ ಉತ್ಪಾದನೆ, ಕೃಷಿ ಮತ್ತು ಪಶು ಸಂಗೋಪನೆಗಳ ಪೂರಕ ಬೆಳವಣಿಗೆ. ಇವು ಈ ಯೋಜನೆಯ ವ್ಯಾಪ್ತಿಗೆ ಬರುವ ಪ್ರಮುಖ ಅಂಶಗಳು, ಈ ಯೋಜನೆಯಡಿಯಲ್ಲಿ 1,11,549 ಹೆಕ್ಟೇರ್ ಕೃಷಿ ಭೂಮಿ ಮತ್ತು 11,396 ಹೆಕ್ಟೇರ್‌ಗಳಷ್ಟು ಕೃಷಿಗೆ ಯೋಗ್ಯವಲ್ಲದ ಭೂ ಪ್ರದೇಶ ವನ್ನು ಅಭಿವೃದ್ಧಿಗೊಳಿಸಲಾಗಿದೆ.

ಸಾಮಾಜಿಕ ಅರಣ್ಯ: 1983 ರಿಂದ ಕಾರ್ಯಗತವಾಗುತ್ತಿರುವ ಸಾಮಾಜಿಕ ಅರಣ್ಯ ಯೋಜನೆಯಿಂದ 23,757 ಹೆಕ್ಟೇರ್‌ನಷ್ಟು ಭೂ ಪ್ರದೇಶ ಹಸಿರಾಗಿದೆ. ಗಿಡ ನೆಟ್ಟು ಬೆಳೆಸುವ ಆಸಕ್ತಿಯುಳ್ಳ ಜನರಿಗೆ ಸಸಿ ಮತ್ತು ಸಲಹೆಯನ್ನು ಉಚಿತವಾಗಿ ಒದಗಿಸ ಲಾಗುತ್ತಿದೆ. ಈವರೆಗೆ 3300 ಲಕ್ಷ ಸಸಿಗಳನ್ನು ನೆಡಲಾಗಿದೆ.

ಕೈಗಾರಿಕಾ ಕ್ಷೇತ್ರದ ಒಂದು ಮಹತ್ತರ ಸಾಧನೆಯೆಂದರೆ ಕೈಗಾರಿಕೆಗಳ ವಿಕೇಂದ್ರೀಕರಣ —ಪರಿಣಾಮವಾಗಿ ರಾಜ್ಯದಾದ್ಯಂತ ಕೈಗಾರಿಕೆಗಳು ವಿಕಾಸವಾಗಲು ಮುಕ್ತ ವಾತಾ ವರಣ.

ಕರ್ನಾಟಕದಲ್ಲಿ ಈಗ ಹೊಸ ಮತ್ತು ಕ್ರಾಂತಿಕಾರೀ ಕಾರ್ಯಕ್ರಮಗಳು. ಜನತೆಯ ಬದುಕಿನ ಗುಣಮಟ್ಟವನ್ನು ಸುಧಾರಿಸುವುದೇ ಈ ಎಲ್ಲ ಕಾರ್ಯಕ್ರಮಗಳ ಗುರಿ. ಈ ಐತಿಹಾಸಿಕ ದಿನದಂದು ಜನತೆಯ ಸೇವೆಗೆ ಸರಕಾರ ಸದಾ ಕಂಕಣಬದ್ಧ ಎಂಬು ದನ್ನು ಮತ್ತೊಮ್ಮೆ ದೃಢಪಡಿಸುತ್ತದೆ.

ಕರ್ನಾಟಕ ವಾರ್ತೆ

ಶುಚಿ, ರುಚಿಯಾದ ಊಟ ತಿಂಡಿತಿನಿಸುಗಳಿಗೆ
ಹಾಗೂ
ವಸತಿ ಸೌಕರ್ಯಗಳಿಗೆ

ಭೇಟಿ ಕೊಡಿ

ಮಧು ನಿವಾಸ್

ಗಾಂಧಿ ಸ್ಕ್ವೇರ್, ಮೈಸೂರು–570 001

ಫೋನ್ : 23363 ; 31876 ; 24480

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

1. ಡಾ|| ಆರ್. ರಾಮಚಂದ್ರ, ಅಧ್ಯಾಪಕರು
ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

2. ಪ್ರೊ|| ಪೋಲಂಕಿ ರಾಮಮೂರ್ತಿ
ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು
ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

3. ಸುಧಾಕರ, ಅಧ್ಯಾಪಕ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

4. ಡಾ|| ಕೆ. ಸಿ. ಬೆಳ್ಳಿಯಪ್ಪ, ಅಧ್ಯಾಪಕ
ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

5. ಜಿ. ಟಿ. ನಾರಾಯಣರಾವ್
"ಅತ್ರಿ", ನಂ. 8, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ,
ಮೈಸೂರು–೫೭೦ ೦೦೯

6. ಪ್ರೊ|| ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨

7. ಡಾ|| ಹೆಚ್. ತಿಪ್ಪೇರುದ್ರಸ್ವಾಮಿ
223, 12ನೇ ಮುಖ್ಯ ರಸ್ತೆ, ಸರಸ್ವತೀಪುರಂ, ಮೈಸೂರು–೫೭೦ ೦೦೯

8. ವೆಂ. ವನಜಾಕ್ಷಮ್ಮ, ಪ್ರೋಗ್ರಾಂ ಅಸೋಸಿಯೇಟ್
ರಾಜ್ಯ ಸಂಪನ್ಮೂಲ ಕೇಂದ್ರ, 464, ಎ ಮತ್ತು ಬಿ ಬ್ಲಾಕ್
ಕುವೆಂಪುನಗರ, ಮೈಸೂರು–೫೭೦ ೦೨೩

9. ಎಸ್. ಎನ್. ಲಕ್ಷ್ಮೀಪತಿ
87, 4ನೇ ಕ್ರಾಸ್, 5ನೇ ಬಿ ಮೈನ್, ಆರ್. ಪಿ. ಸಿ. ಬಡಾವಣೆ,
ವಿಜಯನಗರ, ಬೆಂಗಳೂರು–೫೬೦ ೦೪೦

ಸರ್ವಶ್ರೀಗಳಾದ

10. ಲಕ್ಷ್ಮೀನಾರಾಯಣ ಅರೋರಾ, ಅಧ್ಯಾಪಕ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

11. ಡಾ॥ ನೀಲಮ್ಮ ಮುತ್ತಣ್ಣ
ಸೋಮವಾರಪೇಟೆ ರಸ್ತೆ, ಕುಶಾಲನಗರ, ಕೊಡಗು–೫೭೧ ೨೩೪

12. ಎಸ್. ರಾಮರಾವ್
1188, ಬಾಲಕೃಷ್ಣರಾವ್ ರಸ್ತೆ, ಚಾಮರಾಜಪುರಂ,
ಮೈಸೂರು–೫೭೦ ೦೦೪

13. ಪ್ರೊ॥ ಎ. ಎನ್. ಮೂರ್ತಿರಾವ್
185, ಎಚ್. ಎ. ಎಲ್. ಲೇ ಔಟ್, 2ನೇ ಹಂತ, ಸಂಜಯನಗರ
ಬೆಂಗಳೂರು–೫೬೦ ೦೨೪



ಪ್ರೊ॥ ಸ. ಸ. ಮಾಳವಾಡ